ಅನನ್ಯ

ಹಂಪ. ನಾಗರಾಜಯ್ಯ



ಆಕರ ಗ್ರಂಥಮಾಲೆ

ಅನನ್ಯ

ಸಂಸ್ಕೃತಿ -ಸಾಹಿತ್ಯ ಸಂಬಂಧೀ ಲೇಖನಗಳು

ಹಂಪ. ನಾಗರಾಜಯ್ಯ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಚಾಮರಾಜಪೇಟೆ, ಬೆಂಗಳೂರು

ANANYA

A Collection of Cultural & Literary Articles

Writer

Prof. Hampa. Nagarajaiah

Formerly Professor of Kannada

Bangalore University, Bangalore - 560 056

Publisher

Administrative officer

Kannada Pustaka Pradhikara

(Kannada Book Authority)

Pampamahakavi Road

Chamarajpet, Bangalore - 560 018

Coverpage Design : Manjunath

First Print : 2003

Pages : viii + 240

Price : Rs. 150/-

ISBN 81-7713-127-3

LAKSHMI MUDRANALAYA

Chamarajpet, Bangalore - 18

Phone : 6613123, 6618752

*

ಅಕ್ಷರಸೂರ್ಯನಿಗೆ ನಮನ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರವು ನಾಡಿನ ಎಲ್ಲ ಬಗೆಯ ಜ್ಞಾನ ಸಂಪತ್ತನ್ನು ಉಳಿಸಿ-ಬೆಳೆಸುವ ತುಂಬು ಹಂಬಲವನ್ನು ಹೊತ್ತಿದೆ. ಇದು ಒಂದು ಬಗೆಯಲ್ಲಿ ಲೇಖಕ, ಪ್ರಕಾಶಕ, ಓದುಗ ಈ ಮೂವರ ಜತೆ ಸುಸಂಬದ್ಧವಾದ ಅಂತರ್‌ಜಾಲವನ್ನು ಪೋಷಿಸುವ ಸಾಂಸ್ಕೃತಿಕ ಚೈತನ್ಯದ ಸಂಸ್ಥೆಯಾಗಿದೆ. ನಮ್ಮ ನಾಡಿನ ಜ್ಞಾನ ಸಂಪತ್ತು ಅಕ್ಷಯವಾದುದು. ನಾವು ಬಗೆದಷ್ಟೂ ಮುಗಿಯದ ತವನಿಧಿ. ಈ ನಿಧಿಯ ರಕ್ಷಣೆ-ಪಾಲನೆ ಮತ್ತು ಪೋಷಣೆ ಎಂದೆಂದೂ ಬೇಕು. ಅಕ್ಷರನಿಧಿಯು ಎಂದೆಂದೂ ಅಳಿಯುವುದಿಲ್ಲ. ಈ ನಿಧಿಗೆ ಒಡೆಯರಾದವರು ನಮ್ಮ ಓದುಗರು. ಪಾರಂಪರಿಕ ಜ್ಞಾನಕ್ಕೂ ಆಧುನಿಕ ಕಾಲದ ಜ್ಞಾನಕ್ಕೂ ಓದುಗರೇ ವಾರಸುದಾರರು. ಈ ವಾರಸುದಾರರಿಗೆ ನಿಧಿಯ ಮೌಲ್ಯವನ್ನೂ, ಮಹತ್ವವನ್ನೂ ತೆರೆದು ತೋರಿಸುವುದು ಪುಸ್ತಕ ಪ್ರಾಧಿಕಾರದ ಕರ್ತವ್ಯಗಳಲ್ಲಿ ಒಂದೆಂದು ತಿಳಿದಿದ್ದೇನೆ. ನಮ್ಮ ಕರ್ತವ್ಯವನ್ನು ನಾವು ಮಾಡುವುದು ಬೇಡವೇ? ಈ ಕರ್ತವ್ಯಕ್ಕೆ ಹಲವು ದಾರಿಗಳಿವೆ. ಕೇವಲ ಪ್ರಕಟಣೆ ಮಾತ್ರ ನಮ್ಮ ಏಕೋದ್ದೇಶವಲ್ಲ. ಪ್ರಕಟಣೆಯ ಜೊತೆಗೆ ಅಕ್ಷರ ಸಂಸ್ಕೃತಿ ದೀಪಗಳನ್ನು ಕತ್ತಲೆಯ ಮೂಲೆಮುಡುಕುಗಳಲ್ಲಿ ಇಡುವುದು ನಮ್ಮ ಕರ್ತವ್ಯದ ಭಾಗವೇ ಆಗಿದೆ. ಪ್ರತಿಯೊಂದು ತಾಲ್ಲೂಕುಗಳನ್ನು ಇಂಥ ದೀಪಗಳಿಂದ ಬೆಳಗಿಸಬೇಕಾಗಿದೆ. ನಗರ, ಪಟ್ಟಣ ಪ್ರದೇಶಗಳು ಅಕ್ಷರ ಬೆಳಕಿನಿಂದ ಬೆಳಗಿವೆ. ಆದರೆ, ದೂರದೂರದ ಕತ್ತಲೆಯ ಜಾಗಗಳೂ ಅಜ್ಞಾತವಲಯಗಳೂ ಬೆಳಗುವುದು ಪ್ರಜಾಪ್ರಭುತ್ವದ ಕಾಲದಲ್ಲಿ ಅತಿಮುಖ್ಯವಲ್ಲವೆ? ಈಗ ನಮ್ಮೆಲ್ಲರ ಕಣ್ಣು ಮತ್ತು ಮನಸ್ಸು ಗ್ರಾಮ-ಗ್ರಾಮಾಂತರಗಳಿಗೂ ತಾಲ್ಲೂಕು- ತಾಲ್ಲೂಕಾಂತರಗಳ ಕಡೆಗೂ ಚಾಚಬೇಕಾಗಿದೆ. ಅಲ್ಲಿರುವ ಸಹಸ್ರಾರು ಜ್ಞಾನದಾಹಿಗಳ ಮನಸ್ಸನ್ನು ಅರಳಿಸುವ, ಅಕ್ಷರಲೋಕಕ್ಕೆ ಕರೆದೊಯ್ಯುವ ಕೆಲಸ ಮಾಡಬೇಕಾಗಿದೆ. ಇದಕ್ಕಾಗಿ ಪುಸ್ತಕ ಪ್ರಕಟಣೆಯ ಜತೆಗೆ, ಪುಸ್ತಕ ಮೇಳ, ಪುಸ್ತಕ ಜಾತ್ರೆ ಆಗುವುದು ಅಗತ್ಯ. ಇದು ನೆರವೇರಿದಾಗ 'ಕನ್ನಡ ಪುಸ್ತಕ ಪ್ರಾಧಿಕಾರ' ಎಂಬ ಮಾತಿಗೆ ಬೆಲೆ ಬರುತ್ತದೆ; ಅದಕ್ಕೊಂದು ಸಾಂಸ್ಕೃತಿಕ ಮೌಲ್ಯ ಪ್ರಾಪ್ತವಾಗುತ್ತದೆಂಬ ನಂಬುಗೆ ನನ್ನದು!

ಜ್ಞಾನದ ಹಂಬಲ ಪ್ರತಿಯೊಬ್ಬರಿಗೂ ಉಂಟು! ಈ ಜ್ಞಾನವು ಹಲವು ರೂಪಗಳಲ್ಲಿ ತೋರುತ್ತದೆ. 'ಜ್ಞಾನದ ಬಲದಿಂದ ಅಜ್ಞಾನದ ಕೇಡು' ಎಂದು ಬಸವಣ್ಣನವರು ಹೇಳಿದ್ದುಂಟು! ಇದು ಆಧುನಿಕ ಜ್ಞಾನಕ್ಕೂ ಅವಲಂಬಿಸುತ್ತದೆ. ಇಪ್ಪತ್ತನೆಯ ಶತಮಾನ ಕಳೆದು ಹೊಸ ಸಹಸ್ರಮಾನದಲ್ಲಿ ಹಲವು ಬಗೆಯ ತೊಡಕುಗಳಲ್ಲಿ ಮತ್ತು ಸಂಕಟಗಳಲ್ಲಿ ನಾವಿದ್ದೇವೆ. ಒಂದು ಕಡೆ ಇಪ್ಪತ್ತನೆಯ ಶತಮಾನ ಸಾಹಿತ್ಯಕವಾಗಿ ಸಮೃದ್ಧವಾದ ಕಾಲವೇನೋ ನಿಜ. ಮೂಲಜ್ಞಾನದ ಬೇರುಗಳು ಹೊರಹೊಮ್ಮಿ ಹಲವು ಬಗೆಯ ವೈವಿಧ್ಯಗಳಿಂದ ವಿರಾಜಮಾನದ ಕಾಲವೂ ಆಗಿದೆ! ಸಾಹಿತ್ಯಕವಾಗಿ ಎಷ್ಟು ಸಮೃದ್ಧವೋ ಸಾಂಸ್ಕೃತಿಕವಾಗಿಯೂ ಅಷ್ಟೇ ಬಗೆಯ ವಾಗ್ವಾದ ಮತ್ತು ಸಂವಾದಗಳಿಂದ ಕೂಡಿದ ಕಾಲ! ಅನೇಕ ತಳವರ್ಗದ ಜನಸ್ಥಾನಗಳು ಮೊದಲಬಾರಿಗೆ ಅಕ್ಷರಸೂರ್ಯನಿಗೆ ನಮಸ್ಕರಿಸಿದ್ದುಂಟಷ್ಟೆ. ಜ್ಞಾನಾರ್ಜನೆ ಎಂಬುದು ಒಂದು ಶೈಕ್ಷಣಿಕ ಶಿಸ್ತಾಗಿದೆ. ಆದರೆ, ಇದು ಸಮಾಜದ ಅವಿರತ ಹಾಗೂ ಸದಾಕಾಲವೂ ಹಂಬಲಿಸುವ ಆಶಯ ಆಗಬೇಕು. ಈ ಆಶಯ, ಹಂಬಲ ಹಲವು ಬಗೆಯ ಸಂಕೇತಗಳಲ್ಲೊ, ರೂಪಕಗಳಲ್ಲೊ ಕಾಣಿಸುತ್ತದೆ. ಪಾರಂಪರಿಕ ಜ್ಞಾನ ಮತ್ತು ಆಧುನಿಕ ಜ್ಞಾನ ಇವೆರಡು ಬೇರುಗಳನ್ನು ಕಸಿ ಹಾಕುವ ಅಗತ್ಯ ನಮ್ಮ ಮುಂದಿದೆ. ಪಾರಂಪರಿಕ ಜ್ಞಾನವು ಕೇವಲ ಸಾಹಿತ್ಯಕ ಸಮೃದ್ಧತೆಯ ಕಡೆಗೆ ಮಾತ್ರ ಬೊಟ್ಟು ಮಾಡಿ ತೋರಿಸುತ್ತಿದೆಯೆಂದು ನಾವು ತಿಳಿಯುವಂತಿಲ್ಲ. ಸಮಾಜ-ಸಮುದಾಯಗಳಿಗೆ ಬೇಕಾದ ಹಲವು ಬಗೆಯ ಜ್ಞಾನದ ಕೌಶಲ್ಯಗಳು ನಮ್ಮಲ್ಲಿ ಹಿಂದೆ ಇದ್ದುವು. ೧೮೨೦ರಲ್ಲಿ ಅತ್ಯುತ್ತಮ ತಾಂತ್ರಿಕ ಜ್ಞಾನ ನಮ್ಮಲ್ಲಿದ್ದುದನ್ನು ಹೇಗೋ ಈಗ ಉಳಿದುಕೊಂಡಿರುವ ವಿಲಿಯಂ ಆ್ಯಡಂ ವರದಿಗಳು ತಿಳಿಸುತ್ತವೆ. ಆದರೆ ನಾವಿಂದು ಈ ಬಗೆಯ ಸ್ಮೃತಿಗಳಿಂದ ಹೊರಗುಳಿದಿದ್ದೇವೆ. ನಮ್ಮ ನಮ್ಮ ಸಂಸ್ಕೃತಿ ಸಮುದಾಯಗಳು ಪಡೆದಿರುವ ಜ್ಞಾನ ಕೌಶಲ್ಯ, ಜ್ಞಾನ ಸಂಪತ್ತನ್ನು - ಈ ಕಾಲದ ಅಗತ್ಯಗಳಿಗೆ ತಕ್ಕಂತೆ ಮರುಜೋಡಣೆ ಮಾಡುವ ಅಗತ್ಯವಿದೆ. ಇಲ್ಲದೆ ಹೋದರೆ, ಕಳೆದುಹೋದ ಕಾಲವು ನಿರ್ವಾತವಾಗಿತ್ತೆಂದೊ, ಬರುವ ಕಾಲ ಈ ನಿರ್ವಾತವನ್ನು ತುಂಬುವ ಹಂಬಲವನ್ನು ಹೊತ್ತಿರುವುದೆಂದೊ ತಿಳಿಯುವ ಕ್ಲೈಬ್ಯದಲ್ಲಿ ನಾವು ಮುಳುಗಬೇಕಾಗುತ್ತದೆ! ಈ ಅಜ್ಞಾನದಿಂದ ನಾವು ಎಚ್ಚರಗೊಳ್ಳಬೇಕಾಗಿದೆ. ಹೀಗೆ ಎಚ್ಚರಿಸುವ ಕಾರ್ಯವನ್ನು ನಾಡಿನ ಹಲವಾರು ಸಾಂಸ್ಕೃತಿಕ ಸಂಸ್ಥೆಗಳು ಮಾಡುತ್ತಿವೆ. ಆದರೆ, ಕನ್ನಡ ಪುಸ್ತಕ ಪ್ರಾಧಿಕಾರವು ತನ್ನದೇ ಆದ ಕೆಲವು ನಿರ್ದಿಷ್ಟ ಯೋಜನೆ ಮತ್ತು ಪ್ರಕಟಣ ನೀತಿಸಂಹಿತೆಯಿಂದ ಹೊಸ ಆಕಾರವನ್ನು ಪಡೆಯುವ ಹಂಬಲವನ್ನು ಹೊತ್ತಿದೆ.

ಈ ಹಿನ್ನೆಲೆಯಲ್ಲಿ ಹಲವು ಬಗೆಯ ಮಾಲೆಗಳನ್ನು ಹಿಂದಿನ ವರ್ಷಗಳಿಂದ ಕನ್ನಡ ಪುಸ್ತಕ ಪ್ರಾಧಿಕಾರವು ನಡೆಸಿಕೊಂಡು ಬರುತ್ತಿದೆ. ಹೊಸ ಹೊಸ ಮಾಲೆಗಳು ಈಗೀಗ ಅಸ್ತಿತ್ವಕ್ಕೆ ಬರುತ್ತಿವೆ. ಈ ಬಗೆಯ ಮಾಲೆಗಳಲ್ಲಿ ಆಕರ ಗ್ರಂಥಮಾಲೆಯೂ ಒಂದು. ಇದು ಹೊಸ ಓದು, ಹೊಸ ನುಡಿಗಟ್ಟು, ಹೊಸ ಸಂವೇದನೆಗಳಿಗೂ ಸಹಸ್ರಮಾನದ ಉದಯಕ್ಕೂ ಹೊಸ ನೆಲೆಗಳನ್ನು ಕಲ್ಪಿಸಿಕೊಡುತ್ತದೆಂದು ಪುಸ್ತಕ ಪ್ರಾಧಿಕಾರವು ತಿಳಿಯುತ್ತದೆ!

ಪ್ರೊ. ಹಂಪ. ನಾಗರಾಜಯ್ಯ ಅವರು ಕನ್ನಡ ಪುಸ್ತಕ ಪ್ರಾಧಿಕಾರಕ್ಕಾಗಿ ಸಿದ್ಧ ಪಡಿಸಿಕೊಟ್ಟ 'ಅನನ್ಯ' ಗ್ರಂಥವು ಹೆಸರಿಗೆ ತಕ್ಕುದಾಗಿದೆ. ಹಂಪನಾ ಎಂದೇ ಖ್ಯಾತನಾಮರಾದ ಪ್ರೊ. ಹಂಪ. ನಾಗರಾಜಯ್ಯ ಅವರು ಪ್ರಾಚೀನ ಸಾಹಿತ್ಯ ಮತ್ತು ವಿಶೇಷವಾಗಿ ಜೈನ ಸಾಹಿತ್ಯ-ಸಂಸ್ಕೃತಿ ಕ್ಷೇತ್ರಗಳಲ್ಲಿ ವಿಶೇಷವಾದ ಪರಿಶ್ರಮವುಳ್ಳವರೆಂಬುದು ಈಗಾಗಲೇ ಎಲ್ಲರಿಗೂ ತಿಳಿದಿರುವ ಸಂಗತಿ. ಜೈನಸಾಹಿತ್ಯ ಮತ್ತು ಸಂಸ್ಕೃತಿ ಕುರಿತು ಇಂಗ್ಲಿಷಿನಲ್ಲಿ ಬರೆದ ಬರಹ ಹಾಗೂ ಪ್ರಕಟಗೊಂಡಿರುವ ಪುಸ್ತಕಗಳು; ಕನ್ನಡದಲ್ಲಿ ಸಿದ್ಧಪಡಿಸಿ ಹಲವಾರು ಸಂಘ-ಸಂಸ್ಥೆಗಳ ಮೂಲಕ ಪ್ರಕಟಿಸಿರುವ ಬರೆಹ ಹಾಗೂ ಗ್ರಂಥಗಳು ಅವರ ವಿದ್ವತ್ತನ್ನೂ ಜೈನ ಸಾಹಿತ್ಯ ಸಂಸ್ಕೃತಿ ಕ್ಷೇತ್ರಗಳಲ್ಲಿ ಸಾಧಿಸಿರುವ ಪರಿಣತಿಯನ್ನೂ ತಿಳಿಸುತ್ತವೆ. ಜೈನ ಸಾಹಿತ್ಯ-ಸಂಸ್ಕೃತಿ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವವರು ಈಗೀಗ ವಿರಳವಾಗುತ್ತಿದ್ದಾರೆ. ಈ ಕ್ಷೇತ್ರವು ಒಂದು ಕಡೆ ವಿದ್ವತ್ತನ್ನೂ ಮತ್ತೊಂದು ಕಡೆ ಬಹುಭಾಷಾವ್ಯಾಸಂಗವನ್ನೂ ಅಪೇಕ್ಷಿಸುತ್ತದೆ. ಪ್ರಾಕೃತ-ಸಂಸ್ಕೃತ ಭಾಷೆಗಳಲ್ಲಿ ಜೈನಸಾಹಿತ್ಯದ ತಲೆಬೇರುಗಳು ಅಡಗಿಕೂತಿವೆ. ಆದರೆ, ನವೋದಯ ಕಾಲದ ಜೈನ ವಿದ್ವಾಂಸರು ಮಾಡಿದ ಕೆಲಸಗಳನ್ನು ನೆನೆದರೆ-ಈಗಿನ ಕಾಲದಲ್ಲಿ ಅದು ಸೊರಗಿಹೋಗುತ್ತಿರುವುದು ವಿಷಾದನೀಯವೇ ಸರಿ. ಕನ್ನಡ ಸಂಸ್ಕೃತಿ ಮತ್ತು ಜೈನ ಸಾಹಿತ್ಯದ ಪಾರಸ್ಪರಿಕ ಬೆಲೆಗಳನ್ನು, ಮೌಲ್ಯಗಳನ್ನು ತಿಳಿಯುವ ಅಗತ್ಯವಿದೆಯಷ್ಟೆ. ಆ ಅಗತ್ಯಕ್ಕೆ ತಕ್ಕ ಶ್ರಮ ಇಂದು ನಮಗೆ ಕಾಣುತ್ತಿಲ್ಲ.

'ಅನನ್ಯ' ಗ್ರಂಥವು ಸಾಹಿತ್ಯ-ಸಂಸ್ಕೃತಿಗೆ ಸಂಬಂಧಿಸಿದ ಲೇಖನಗಳನ್ನು ಒಳಗೊಂಡಿದೆ. ಆಧುನಿಕ ಸಾಹಿತ್ಯವನ್ನು ಕುರಿತು ಮೂರು ಲೇಖನಗಳನ್ನು ಹೊರತುಪಡಿಸಿದರೆ ಉಳಿದೆಲ್ಲವೂ ಜೈನಸಮಾಜ ಮತ್ತು ಸಂಸ್ಕೃತಿಗೆ ಸೇರಿದ ಬರೆಹಗಳೇ ಆಗಿವೆ. ಈ ಬರೆಹಗಳು ಭೂತಕಾಲದ ವಿವರಗಳಲ್ಲಿ ಮಾತ್ರ ಮುಳುಗುವುದಿಲ್ಲ, ಅವುಗಳಲ್ಲಿ ವರ್ತಮಾನದ ವಿವರಗಳೂ ಸಂಗತಿಗಳೂ ಉಂಟು. ಕಾವ್ಯ, ಬಸದಿ, ಜೈನಾಲಯ, ಶಾಸನ, ಚರಿತ್ರೆ, ಮುಂತಾದುವು ಹಂಪನಾ ಅವರ ಬರೆಹಕ್ಕೆ ಆಹಾರವನ್ನು ಒದಗಿಸಿವೆ. ಇವೆಲ್ಲವೂ ಅವರಿಗೆ ಪ್ರಿಯವಾದ ವಿಷಯಗಳೇ ಆಗಿವೆ. ಇಲ್ಲಿಯ ಬರೆಹಗಳು ಹೊಸ ಬೆಳಕನ್ನು, ಹೊಸ ಶೋಧವನ್ನು ತಿಳಿಸಿಕೊಡುತ್ತವೆ. ಅವು ಕೇವಲ ಅಧ್ಯಯನದ ವಸ್ತುಗಳೇ? ಅಲ್ಲವೆಂಬುದೇ ಇತ್ಯರ್ಥ. ಇವು ಜೀವಂತ ಜೈನ ಸಮಾಜದೊಂದಿಗೆ ಆಕೃತಿಯನ್ನು ಪಡೆಯಲು ಯತ್ನಿಸುತ್ತವೆ. ಜನ್ನನ ಕಾವ್ಯ ಕುರಿತ ಒಟ್ಟಾರೆ ಮಾತುಗಳು ಕನ್ನಡ ಕಾವ್ಯಗಳ ಅಧ್ಯಯನಕ್ಕೆ ಹೊಸಮಾರ್ಗದ ಪ್ರವೇಶವನ್ನು ತೆರೆಯುತ್ತವೆ. ಬಸದಿಗಳ ಭೌತಿಕ ವಿವರಗಳನ್ನು ಮಾತ್ರ ಹೇಳದೆ, ಅವು ಸಾಂಸ್ಕೃತಿಕ ತವನಿಧಿಗಳಾಗಿರುವ ಬಗೆಯನ್ನೂ ಸಾಂಸ್ಕೃತಿಕ ತವನಿಧಿ ಎಂಬ ತತ್ತ್ವವನ್ನೂ ಸಾರುತ್ತವೆ. ಜೈನ ಸಮಾಜ ಮತ್ತು ಮತಾಂತರ ಎಂಬ ಲೇಖನವು 'ಮತಾಂತರ' ಎಂಬ ಆಧುನಿಕ ಪರಿಭಾಷೆಯನ್ನು ವ್ಯಾಖ್ಯಾನಿಸುತ್ತಲೇ ಜೈನ ಸಮಾಜ ಮತಾಂತರವನ್ನು ಒಪ್ಪಿರುವ ಬಗೆಯನ್ನು ತಿಳಿಸಿಕೊಡುತ್ತದೆ. ಇದು ಹಿಂದೂ ಮತಾಂತರ ಎಂಬ ಮಾತಿಗೆ ಹೊಸ ಪುರಾವೆಗಳನ್ನು ಒದಗಿಸಬಲ್ಲುದು. ಕಲ್ಲಿನಲ್ಲಿ ಕೆತ್ತಿರುವ ಶಾಸನಗಳು ಜೀವಂತ ಸಮಾಜದ

ಸ್ಮೃತಿಗಳು. ಈ ಪ್ರಾಚೀನ ನೆನಪುಗಳು ಶಾಸನಗಳ ಮೂಲಕ ಅರಳಿವೆ. ಬಾಬಾನಗರ ಶಾಸನದ ಅನನ್ಯತೆ ಹುಡುಕುವಾಗ ಈ ಅಂಶ ಪ್ರಕಟಗೊಂಡಿದೆ.

ಅನನ್ಯ ಎಂಬ ಮಾತು ಇಲ್ಲಿಯ ಎಲ್ಲ ಲೇಖನಗಳಿಗೆ ಅನ್ವಯಿಸುತ್ತದೆ. ಅನ್ಯವಲ್ಲದ್ದು ಅನನ್ಯ. ಅದು ಬೆಡಗು, ಬಣ್ಣ, ಭಾಷೆ, ಎಲ್ಲ ವಿಚಾರಗಳಲ್ಲೂ ಬೇರೆಯದೇ. ಅನನ್ಯವು ಒಂದು ಸಮಾಜ-ಸಂಸ್ಕೃತಿಯ ತಾಯಿಬೇರು. ಅದು ತನ್ನ ಅಸ್ಮಿತೆಯನ್ನು ಉಳಿಸಿಕೊಂಡೇ ಕಾಲಕಾಲದ ಪ್ರವಾಹದಲ್ಲಿ ನುಗ್ಗುತ್ತದೆ. 'ಅನನ್ಯ' ಆಗುವುದೇ ಒಂದು ದೊಡ್ಡ ಸಮಾಜದ, ಒಂದು ದೊಡ್ಡ ಸಂಸ್ಕೃತಿಯ, ಒಂದು ದೊಡ್ಡ ಭಾಷೆಯ ಮುಖ್ಯಗುರಿ. ಹಿರಿಯ ವಿದ್ವಾಂಸರಾದ ಪ್ರೊ. ಹಂಪನಾ ಅವರು ಈ ಲೇಖನಗಳ ಮೂಲಕ ಅನನ್ಯರಾಗಿದ್ದಾರೆ. ಇವರು ಹಳತು - ಹೊಸತು; ಕಾವ್ಯ-ಶಾಸ್ತ್ರ; ಪ್ರಾಚೀನ-ಅರ್ವಾಚೀನ; ಸಂಪ್ರದಾಯ- ಆಧುನಿಕತೆ-ಹೀಗೆ ಹಲವು ಮುಖಗಳಲ್ಲಿ ತಮ್ಮ ತಿಳಿವಳಿಕೆಯನ್ನು ಮಸೆದುಕೊಂಡವರು. ಪ್ರೊ. ಹಂಪನಾ ಅವರ ಹಿರಿಮೆ ಇರುವುದು ಇಂಥ ಕಡೆಗಳಲ್ಲೇ. ಹಳತನ್ನು ನೋಡಬಲ್ಲರು. ಅದರಂತೆ ಹೊಸತನ್ನು ಕಾಣಬಲ್ಲರು. ಪೂರ್ವವು ಎಷ್ಟು ದೃಷ್ಟವೋ, ಪಶ್ಚಿಮವೂ ಅಷ್ಟೇ ದೃಷ್ಟ. ಅನನ್ಯವು ದೃಷ್ಟಿ-ಸೃಷ್ಟಿಗಳ ಅವಿರತ ಭೇದವನ್ನು ನಿರಾಕರಿಸುತ್ತದೆ. ಪ್ರೊ. ಹಂಪನಾ ಅವರು ತಮ್ಮ ಬರೆಹದಲ್ಲಿ ತೋರಿಸುವ ಶಾಸ್ತ್ರ ಲಾಲಿತ್ಯ, ಶಾಸ್ತ್ರ ಪಾಂಡಿತ್ಯ, ಅಪರೂಪದ್ದು. ಇದು ಎಲ್ಲರಿಗೂ ದಕ್ಕುವಂಥದ್ದಲ್ಲ. ಪ್ರೊ. ಡಿ. ಎಲ್. ಎನ್. ಅವರಂಥ ಹಿರಿಯ ಪಂಡಿತ ಶ್ರೇಷ್ಠರ ಶಿಷ್ಯರಾಗಿದ್ದು ಅವರ ಸೂಕ್ಷ್ಮ ಪಾಂಡಿತ್ಯವನ್ನು, ರಸಿಕ ಹೃದಯವನ್ನು ತಮ್ಮ ಬರೆಹಕ್ಕೆ ಧಾತುವಾಗಿ ಪ್ರೊ. ಹಂಪನಾ ಬಳಸಿಕೊಂಡಿರುವುದು ನನ್ನ ಮಾತಿಗೆ ಸಾಕ್ಷಿ!

ಇಲ್ಲಿಯ ಲೇಖನಗಳು ನಮಗೆ ಹೊಸ ಮಾರ್ಗಗಳನ್ನು ಹಾಕಿಕೊಡುತ್ತವೆ, ಹೊಸ ವಿಶ್ಲೇಷಣೆಗೆ ದಾರಿತೋರಿಸಿಕೊಡುತ್ತವೆ. ಹಳೆಯ ಸ್ಮೃತಿಗಳ ಜತೆ ವರ್ತಮಾನದ ಸ್ಮೃತಿಗಳೂ ಸೇರಬೇಕಾಗಿದೆಯಷ್ಟೆ. ಪ್ರೊ. ಹಂಪನಾ ಅವರ 'ಅನನ್ಯ'ವು ಈ ದಿಕ್ಕಿನಲ್ಲಿ ನಮಗೆ ಹೊಸ ಹೊಸ 'ಮಾರ್ಗ'ಗಳನ್ನು ತೆರೆಯಲು ಅನುವು ಮಾಡಿಕೊಡುತ್ತದೆಂಬ ನಂಬುಗೆ ನನ್ನದು! ಕನ್ನಡ ಸಂಸ್ಕೃತಿಪ್ರೇಮಿಗಳು ಈ ಗ್ರಂಥವನ್ನು ಮನವಾರೆ ಬರಮಾಡಿಕೊಳ್ಳಬೇಕೆಂದು ನಾನು ಬೇಡುತ್ತೇನೆ. ಈ ಪುಸ್ತಕವು ಅಂದವಾಗಿ ಮುದ್ರಿತಗೊಂಡಿದೆ. ಇದಕ್ಕೆ ಕಾರಣರಾದ ಮುದ್ರಣ ಮಿತ್ರರನ್ನು ನೆನೆಯುತ್ತೇನೆ. ಪ್ರಕಟಣೆಗೆ ಸಮ್ಮತಿ ನೀಡಿದ ಪ್ರಾಧಿಕಾರದ ಸದಸ್ಯ ಮಿತ್ರರಿಗೆ, ಮುಖಪುಟ ವಿನ್ಯಾಸಕರಿಗೆ, ಈ ಪುಸ್ತಕವನ್ನು ನಿಮ್ಮ ಕೈಯಲ್ಲಿಡಲು ಒಪ್ಪಿಗೆ ನೀಡಿದ ಹಿರಿಯ ವಿದ್ವಾಂಸರಾದ ಪ್ರೊ. ಹಂಪನಾ ಅವರಿಗೆ ಪ್ರಾಧಿಕಾರದ ಪರವಾಗಿ ಕೃತಜ್ಞತೆ ಗಳನ್ನು ಸಲ್ಲಿಸುತ್ತೇನೆ.

ನಾನು ಅನ್ಯನಲ್ಲ

ಕಳೆದ ನಲವತ್ತು ವರ್ಷಗಳ ಅಧ್ಯಾಪನ, ಅದರ ಹಿಂಚುಮುಂಚಿನ ಅಧ್ಯಯನ ಕರುಣಿಸಿದ ತಿಳಿವಳಿಕೆಯ ಬೆಳಕಿನಲ್ಲಿ ಅರಸುತ್ತ ನಡೆಯುತ್ತಲೇ ಇದ್ದೇನೆ, ಈ ನಾಡನ್ನು ಇಷ್ಟು ಗಟ್ಟಿಯಾಗಿ ನಿಲ್ಲಿಸಿರುವ ಬೇರುಗಳನ್ನು. ಈ ಹುಡುಕಾಟ ನನ್ನನ್ನು ಎಲ್ಲೆಲ್ಲಿಗೊ ಮುಟ್ಟಿಸುತ್ತ ಕಣ್ಣಮುಚ್ಚಾಲೆ ಆಡುವುದುಂಟು! ನಿಜದ ದನಿ ಕೇಳಿಸಿತೆಂಬಷ್ಟರಲ್ಲಿ ಮೌನ ಆವರಿಸಿ, ಬೆಳಕಿನ ಕಿರಣ ಬಿತ್ತೆಂಬಷ್ಟರಲ್ಲಿ ಕತ್ತಲೆ ತುಂಬಿ ಸತಾಯಿಸುವ ಈ ನೆಲದ ಮರೆಯ ನಿಧಾನದ ದಾಹ ಹಾಗೂ ಮೋಹ ನನ್ನನ್ನು ತಬ್ಬಿ-ತಬ್ಬಿಬ್ಬಾಗಿಸುತ್ತಿದೆ. ಇನ್ನೇನು ಬೇರು ಸಿಕ್ಕಿತೆಂದು ಹಿಡಿದು ನೋಡಿದರೆ ಅದು ಒಣಗಿ ಅಣಕಿಸಿದ ಪ್ರಸಂಗಗಳಿವೆ; ನಿರಾಶೆಗೊಳ್ಳದೆ ಅದರ ಪದರಗಳನ್ನು ಸುಲಿದಾಗ ಒಳಗೆ ಪಸಿಮೆ ಪಳೆಯುಳಿಕೆಯಾಗಿ ಪಿಸುನುಡಿದು ರೆಪ್ಪೆ ಬಡಿದ ಪುಳಕಾನುಭವದಲ್ಲಿ ಈ ಪುರಾತನ ಬೇರಿಗೆ ನಾನು ಅನ್ಯನಲ್ಲ ಎಂಬ ಬಾಂಧವ್ಯದ ಬೆರಗು!

ಇಂಥ ಅನ್ವೇಷಕ ಬುದ್ಧಿಭಾವದ ಓಘದಲ್ಲಿ ಆಕಾರ ಕಂಡ ಕೆಲವು ಲೇಖನಗಳ ಒಂದು ಕಟ್ಟನ್ನು ತಮ್ಮ ಪ್ರೀತಿಯ ಬೊಗಸೆಯಲ್ಲಿ ಮೊಗೆದು ತೆಗೆದು ಮುದ್ರಿಸುತ್ತಿರುವವರು ಅಜಾತ ಶತ್ರು, ವಿದ್ವಾಂಸ-ವಿಮರ್ಶಕ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್. ಅವರ ಅಕ್ಕರೆಗೆ ಇತರ ಲೇಖಕರಂತೆ ನಾನೂ ರಸಾರ್ದ್ರ! ಪರಿಚಯವಾದಂದಿನಿಂದ ಇಂದಿನ ತನಕ ಮಾಗುತ್ತ ಇನಿದಾಗುತ್ತಿರುವ ಮೈತ್ರಿಗೆ ನಾನು ಪ್ಲಾವಿತ! ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಿಗೆ, ಸದಸ್ಯರಿಗೆ ಋಣಿಯಾಗಿದ್ದೇನೆ.

೧೧.೩.೨೦೦೩ ಹಂಪನಾ

ಪರಿವಿಡಿ

೧

ಮೂರ್ತಿರಾಯರ ವಿಮರ್ಶೆಯ ಅನನ್ಯತೆ

ಪ್ರಸ್ತಾವನೆ

ಎ. ಎನ್. ಮೂರ್ತಿರಾಯರ ಎರಡು ಕೃತಿಗಳಲ್ಲಿ ಹರಳುಗಟ್ಟಿರುವ ವಿಮರ್ಶೆಯ ಅನನ್ಯತೆಯ ಸ್ವರೂಪವನ್ನು ಮೆಚ್ಚಿ ಬಿಚ್ಚಳಿಸುವುದು, ಧ್ಯಾನಿಸುವುದು ಈ ಲೇಖನದ ಉದ್ದೇಶ. **'ಪೂರ್ವಸೂರಿಗಳೊಡನೆ'** ಮತ್ತು **'ಮಹಾಭಾರತದಲ್ಲಿ ಕೇಡು ಎಂಬುದರ ಸಮಸ್ಯೆ'** - ಇವು ನಾನು ಆರಿಸಿಕೊಂಡಿರುವ ಎರಡು ಪುಸ್ತಕಗಳು.

೧.೧. 'ಪೂರ್ವ ಸೂರಿಗಳೊಡನೆ' ಪುಸ್ತಕ ಅಯ್ದು ಉಪನ್ಯಾಸಗಳ ಒಂದು ಕಟ್ಟು. ಇವುಗಳಲ್ಲಿ ಮೊದಲ ನಾಲ್ಕು ಸೀತಾ ಪರಿತ್ಯಾಗಕ್ಕೆ ಸಂಬಂಧಿಸಿವೆ. ಅಯ್ದನೆಯ ಹಾಗೂ ಕಡೆಯ ಉಪನ್ಯಾಸ, 'ಮೇಘ ದೂತದಲ್ಲಿ ಕಾವ್ಯ ಪ್ರತಿಮೆ' ಎಂಬುದು, ವಾಲ್ಮೀಕಿ, ಕಾಳಿದಾಸ ಮತ್ತು ಭವಭೂತಿ-ಇವರು ಪೂರ್ವಸೂರಿಗಳು, ಸಂಸ್ಕೃತದಲ್ಲಿ ತಮ್ಮ ಕೃತಿರತ್ನಗಳನ್ನು ರಚಿಸಿರುವ ಮಹಾಕವಿಗಳು 'ಮಹಾಭಾರತದಲ್ಲಿ ಕೇಡು ಎಂಬುದರ ಸಮಸ್ಯೆ' ಪುಸ್ತಕವು ಮೊದಲ ಇಂಗ್ಲಿಷಿನಲ್ಲಿ ಮಾಡಿದ ಭಾಷಣದ ಕನ್ನಡ ರೂಪ.

೧.೨. ಮೂರ್ತಿರಾಯರು ಇವನ್ನು ಉಪನ್ಯಾಸ- ಭಾಷಣ ಎಂದು ಕರೆದಿದ್ದಾರೆ. ಈ ಉಪನ್ಯಾಸಗಳಲ್ಲಿರುವುದು ಪ್ರಾಯೋಗಿಕ ವಿಮರ್ಶೆಗೆ ಹತ್ತಿರವಾಗಿ ನಿಲ್ಲುವ ಸಾಹಿತ್ಯ ಸಂವಾದ. ಲೇಖಕರು ಶ್ರೇಷ್ಠ ಸಾಹಿತ್ಯ ಕೃತಿಗಳ ಸತತಾಭ್ಯಾಸದತ್ತವಾದ ಬುದ್ಧಿ ಭಾವಗಳಿಂದ ಉದ್ದೀಪನಗೊಂಡವರು. ಭಾರತೀಯ ಕಾವ್ಯ ಮೀಮಾಂಸೆಯ ಲಾಕ್ಷಣಿಕ ಪ್ರಣೀತ ಮಾನದಂಡದೊಂದಿಗೆ ಪಶ್ಚಿಮದ ಕಾವ್ಯಾಭ್ಯಾಸ ಕರುಣಿಸಿದ ತಿಳಿವಳಿಕೆಯ ಬೆಳಕಿನಲ್ಲಿ ಕಾವ್ಯಗಳನ್ನು ಹಿಡಿದು ನೋಡುವ ಕಣ್ಣುಳ್ಳವರು, ಭಾರತೀಯ ಲಕ್ಷಣಶಾಸ್ತ್ರಕಾರರು ಸಹೃದಯನ ಯಾವ ನಿರ್ವಚನದಿಂದ ಗುರುತಿಸಿರುವರೊ ಆ ಗುಣಗಳ್ಳುರು.

೧.೩. ಮೂರ್ತಿರಾಯರು ಆದರ್ಶಪ್ರಾಯರಾದ ಸಹೃದಯರು : ಯೇಷಾಂ ಕಾವ್ಯಾನುಶೀಲನ ವಶಾತ್ ವಿಶದೀ ಭೂತೇ ಮನೋಮುಕುರೇ ವರ್ಣನೀಯ ತನ್ಮಯೀ ಭವನ ಯೋಗ್ಯತಾ ತೇ ಹೃದಯ ಸಂವಾದ ಭಾಜಃ ಸಹೃದಯಾಃ; ಕಾವ್ಯಗಳನ್ನು ಪರಿಶೀಲಿಸಿ ಮನಸ್ಸೆಂಬ ಕನ್ನಡಿ ಅಮಲಿನವಾಗಿರುವುದರಿಂದ ವರ್ಣಿತ ವಿಷಯದಲ್ಲಿ ತನ್ಮಯಗೊಳ್ಳುವ ಯೋಗ್ಯತೆ ಯಾರಿಗೆ ಇದೆಯೊ ಅವರೇ ಸಹೃದಯರು - ಎಂದು ಅಭಿನವಗುಪ್ತಾಚಾರ್ಯನು ಧ್ವನ್ಯಾಲೋಕ ಲೋಚನದಲ್ಲಿ ನಿರೂಪಿಸಿರುವ ಲಕ್ಷಣಕ್ಕೆ ಮೂರ್ತಿರಾಯರು ಲಕ್ಷ್ಯವಾಗಿದ್ದಾರೆ.

೧.೪. ಜತೆಗೆ ಮೂರ್ತಿರಾಯರು ಸಹೃದಯ ಹಂತಕ್ಕೆ ವಿರಮಿಸದೆ ಇನ್ನೂ ಮಿಗಿಲಾದ ಅರ್ಹತೆ ಗಳಿಸಿ ಒಳ್ಳೆಯ ನಿಶಿತಮತಿಯನ್ನೂ ಹೊಂದಿದ್ದಾರೆ. ಸಂಸ್ಕೃತದ ವಿದ್ವತ್ತಿನೊಂದಿಗೆ ಸಂಸ್ಕೃತಿಯ ಸೂಕ್ಷ್ಮಗಳನ್ನೂ ಅರಿತಿದ್ದಾರೆ. ಹಲವು ಭಾರತೀಯ ಪರಂಪರೆಗಳ, ಸಾಂಸ್ಕೃತಿಕ ವಿನ್ಯಾಸಗಳ ಹಿನ್ನೆಲೆಗಳಲ್ಲಿ ಮತ್ತು ಹೊಸ ಯುಗಮಾನದ ದೃಷ್ಟಿಕೋನಗಳ ವಿಶಾಲ ಭಿತ್ತಿಯಲ್ಲಿ ತಮ್ಮ ಅಭಿಪ್ರಾಯಗಳನ್ನು ಮಂಡಿಸುತ್ತಾರೆ. ಕಾಲಕಾಲಕ್ಕೆ ಮಹತ್ವದ ಕೃತಿಗಳನ್ನು ಮರು ಪರಿಶೀಲಿಸಿ 'ಪುನರ್ ಮೌಲ್ಯ' ಮಾಡಬೇಕೆಂಬ ಮಾತು ಅವರಿಗೆ ತಿಳಿದಿದೆ. ಕವಿ ಯಾರು, ಎತ್ತ, ಎಷ್ಟು ಎತ್ತರದವನು ಎಂಬಿತ್ಯಾದಿಗಿಂತಲೂ ಕೃತಿಯ ಪಾತ್ರ, ವರ್ಣನೆಗಳಲ್ಲಿರುವ ಔಚಿತ್ಯ-ಅನೌಚಿತ್ಯ ಅವರಿಗೆ ಮುಖ್ಯ ಮಾನದಂಡ. ಪಾತ್ರ ರಚನೆಯಲ್ಲೂ ಇಡೀ ಕಾವ್ಯ ನಿರ್ವಹಣೆಯಲ್ಲೂ ಇರಬೇಕಾದ ಐಕ್ಯ ಮತ್ತು ಸುಸಂಬದ್ಧತೆಯನ್ನು ಸಾಧಿಸುವ ಕಾವ್ಯ ಪ್ರಕ್ರಿಯೆ ಈಡೇರಿರುವುದನ್ನು ಆರೋಗ್ಯಕರ ನೆಲೆಯಲ್ಲಿ ನಿಂತು ನೋಡುವ ನಿರ್ಲಿಪ್ತ, ನಿರ್ಮಮಕಾರ ದೃಷ್ಟಿ ಇಂಥ ಪ್ರಯತ್ನಕ್ಕೆ ಬೇಕಾಗುವ ಭೂಮಿಕೆ. ಪ್ರಾಚೀನ, ಅರ್ವಾಚೀನ ಶ್ವಾಸಕೋಶದ ಮೂರ್ತಿರಾಯರು, ಹೊಸ ಕಾಲದ ಹೊಸ ತಿಳಿವಳಿಕೆಯ ಬೆಳಕಲ್ಲಿ ಹಿಂದಿನದನ್ನು ಬಿಡಿಯಾಗಿಯೂ ಹಿಡಿಯಾಗಿಯೂ ನೋಡುತ್ತಾರೆ. ಪಾಂಡಿತ್ಯದ ಭಾರವಿರದ ಹಾಗೆ ಲವಲವಿಕೆಯಿಂದ ನೋಡುವುದು, ಪೂರ್ವಗ್ರಹಿಕೆ ಮಡಿವಂತಿಕೆಗಳಿರದೆ ಯಥಾವತ್ತಾಗಿ ಗ್ರಹಿಸುವುದು ಅವರಿಗೆ ವಶವಾಗಿರುವ ಕಲೆ.

೧.೫. ಮುಂದಿನ ಪುಟಗಳಲ್ಲಿ ಮೂರ್ತಿರಾಯರು, ಮೇಲೆ ಹೆಸರಿಸಿದ ಎರಡು ಪುಸ್ತಕಗಳಲ್ಲಿ, ವಿಶಾಲವಾದ ಅಧ್ಯಯನವನ್ನು ಹೇಗೆ ಸೃಜನಾತ್ಮಕವಾಗಿ ಬಳಸಿದ್ದಾರೆಂಬುದನ್ನು ತೋರಿಸಿದೆ. ಚರ್ಚೆಯನ್ನು ಗಹನರೀತಿಯಲ್ಲಿ ಬೆಳೆಸುತ್ತ, ಸುಸಂಗತವಾಗಿ ವ್ಯಾಖ್ಯಾನಿಸುತ್ತ, ಮೂಲಕೃತಿಯ, ಪಾತ್ರಗಳ, ಘಟನೆಗಳ ತಿರುಳನ್ನು ಹಿಡಿದು ಹಿಂಡಿ ತೋರಿಸುವುದರ ಜತೆಗೆ ಆರಿಸಿಕೊಂಡ ಪ್ರಸಂಗ ಚೆಲ್ಲುವ ಬೆಳಕುಗಳನ್ನು ಮುಕ್ತವಾಗಿ ಬಿಂಬಿಸುವುದನ್ನು ಇಲ್ಲಿ ಗುರುತಿಸಲಾಗಿದೆ.

೨.೦. ಪರಿಶೀಲನೆ : ವಾಲ್ಮೀಕಿಯಲ್ಲಿ

೨.೧. ಕವಿಚಕ್ರವರ್ತಿ ವಾಲ್ಮೀಕಿಯ ಅದ್ಭುತ ಪ್ರತಿಭೆಯಿಂದಾಗಿ ಮೂಡಿ ಮೈ ತಳೆದ ಪರಮಾದರ್ಶದ ದೇವತಾಪುರುಷ ರಾಮ. ಪೂಜನೀಯನಾದ ಸಂಕೀರ್ಣ ರಾಮನು ಭಾರತೀಯರ ಹೃದಯದಲ್ಲಿ ಕುಳಿತಿದ್ದಾನೆ. ಇಂತಹ ರಾಮನು ಸೀತೆಯನ್ನು ತ್ಯಜಿಸಿದ್ದು ಅಥವಾ ವಾಲ್ಮೀಕಿ ಕವಿ ರಾಮನಿಂದ ಈ ಕೆಲಸ ಮಾಡಿಸಿದ್ದು ಸರಿಯೆ ಎಂಬ ಪ್ರಶ್ನೆ ಸ್ವಾಭಾವಿಕವಾಗಿ ಎದುರಾಗುತ್ತದೆ. ಸೀತೆಯ ಪರವಾಗಿ, ರಾಮನ ಪರವಾಗಿ, ವಾಲ್ಮೀಕಿಯ ಪರವಾಗಿ ಸಮರ್ಥನೆಯೂ ವ್ಯಕ್ತಪಟ್ಟಿದೆ.

ಮೂರ್ತಿರಾಯರು ಸೀತಾ ಪರಿತ್ಯಾಗವನ್ನು ಎಲ್ಲ ಮಗ್ಗಲುಗಳಿಂದ ಮರುಪರಿಶೀಲಿಸಿದ್ದಾರೆ, ತಮ್ಮ ವಾದವನ್ನು ಮುನ್ನಡಸುವ ನೆಲಗಟ್ಟನ್ನು ಗಟ್ಟಿಗೊಳಿಸಿದ್ದಾರೆ: ವಾಲ್ಮೀಕಿಯ ಕಾವ್ಯದಲ್ಲಿ ಒಂದೇ ಒಂದು ತಪ್ಪಿಲ್ಲ, ಅನುಚಿತವಾದ ಅಪ್ರಯೋಜಕವಾದ ಒಂದೇ ಒಂದು ಪದವಿಲ್ಲ ಎಂಬ ಉತ್ಪ್ರೇಕ್ಷೆಯನ್ನು ಬಿಟ್ಟು, ಆದರೆ ಅಂಥ ಕವಿ ಚಕ್ರವರ್ತಿಗೆ ಸಲ್ಲಬೇಕಾದ ವಿನಯಗೌರವಗಳನ್ನು ಬಿಡದೆ, ವಿಮರ್ಶೆಯನ್ನು ನಡೆಸಬೇಕು (ಪುಟ. ೧೩)

೨.೨. ಸೀತಾ ಪರಿತ್ಯಾಗದ ಕಥೆ ಬರುವುದು ರಾಮಾಯಣದ ಉತ್ತರ ಕಾಂಡದಲ್ಲಿ ಮತ್ತು ಯುದ್ಧ ಕಾಂಡದಲ್ಲಿ. ಈ ಕಥಾ ಪ್ರಸಂಗವನ್ನು ವಿಮರ್ಶಿಸುವ ಮೊದಲು ಮೂರ್ತಿರಾಯರು ತಮ್ಮ ದೃಷ್ಟಿಕೋನವನ್ನು, ಧೋರಣೆಯ ಧಾಟಿ, ದಿಕ್ಕು, ಸ್ವರೂಪವನ್ನು ಸ್ಪಷ್ಟ ಪಡಿಸಿದ್ದಾರೆ. ರಾಮ ಸೀತೆಯನ್ನು ನಿಂದಿಸಿದ, ಆಕೆ ಅಗ್ನಿ ಹೊಕ್ಕ ಕಥೆಯಿರುವ ಯುದ್ಧ ಕಾಂಡದ ಆರು ಸರ್ಗಗಳನ್ನು ಪರಿಶೀಲನೆಗೆ ಮೊದಲು ಆರಿಸಿಕೊಂಡಿದ್ದಾರೆ.

೨.೩. ವಿಭೀಷಣನಿಗೆ ಪಟ್ಟ ಕಟ್ಟಿದ ಮೇಲೆ ರಾಮ ಹನುಮಂತನನ್ನು ಕರೆದು "ನೀನು ರಾವಣನ ಮನೆಗೆ ಹೋಗಿ ಸೀತೆಗೆ ವಿಜಯವಾರ್ತೆಯನ್ನು ತಿಳಿಸಿ, ಅಭಿನಂದಿಸಿ ಹೀಗೆ ಹೇಳು 'ಸುಗ್ರೀವ ಲಕ್ಷ್ಮಣರೊಡನೆ ನಾನು ಕ್ಷೇಮವಾಗಿದ್ದೇನೆ. ರಾವಣ ನನ್ನಿಂದ ಹತನಾದ". ರಾಮನ ಈ ಸಪ್ಪೆ ಮಾತುಗಳನ್ನು ಮೂರ್ತಿರಾಯರು ಸುತರಾಂ ಒಪ್ಪುವುದಿಲ್ಲ. ಹನ್ನೆರಡು ತಿಂಗಳು ತಡೆಯಲಾಗದ ನೋವಿನಲ್ಲಿ ನೊಂದು ಬೆಂದಿರುವ ಹೆಂಡತಿಯನ್ನು ತಾನೇ ಹೋಗಿ ಮಾತನಾಡಿಸದೆ ಹೀಗೆ ಹೇಳಿ ಕಳಿಸಿದರೆ ಆಕೆ ಅದಕ್ಕೆ ಏನು ತಾನೆ ತಿಳಿಸಬಲ್ಲಳು. ತಾನು ಚೆನ್ನು ಎಂದು ಸಹ ಹೇಳುವಂತಿಲ್ಲ, ರಾಮನೇನೂ ಅವಳು ಹದುಳವೆ ಎಂದು ಕೇಳಿಲ್ಲ.

೨.೩.೧. ರಾಮನಿಗಿಂತ ಹನುಮಂತನೇ ಮೇಲು. ಸೀತೆಗೆ ಈಗ ಅನುಕಂಪದ ಮಾತು ಬೇಕೆಂದು ಅವನ ದೂರದೃಷ್ಟಿಗೆ ತೋರಿತು, ರಾಮ ಹೇಳಿದ ಮಾತನ್ನು ತುಸು ಇಲ್ಲಿಂದ ಬೆಳೆಸಿ ಹೇಳಿದ. "ರಾಮನೇ ಸೀತೆಯ ಹತ್ತಿರ ಕುಳಿತು ಮೈದಡವಿ ಸಮಾಧಾನ ಹೇಳಿದಂತಿದೆ, ಹನುಮಂತ ಅವನಿಂದ (ರಾಮನಿಂದ) ಆಡಿಸಿರುವ ಮಾತು! ರಾಮ ಅಂಥ ಪ್ರೇಮಾನುಕಂಪ ರಹಿತವಾದ ಸಂದೇಶವನ್ನು ಕಳಿಸಿದ್ದು ತಪ್ಪು ಎಂದು ಹನುಮಂತನಿಗೆ ತೋರಿದೆ. ಅವನು (ಹನುಮಂತ) ಸೀತೆಯೆದುರಿಗೆ ತನ್ನ ಒಡೆಯನನ್ನು ಕಾದುಕೊಂಡ. ಸೀತೆಗೂ ದುಃಖವಾಗದಂತೆ ನೋಡಿಕೊಂಡ. ಅರ್ಥಜ್ಞನಾದ ಹನುಮಂತ ಮತ್ತೆ ರಾಮನನ್ನು ಕಂಡಾಗ ಹೇಳುತ್ತಾನೆ, 'ಯಾರಿಗೋಸ್ಕರ ಈ ಉದ್ಯಮ (ಯುದ್ಧ) ಆರಂಭವಾಯಿತೋ, ಅದಕ್ಕೆ ಸಂಬಂಧಪಟ್ಟ ಕೆಲಸಗಳಿಗೆಲ್ಲ ಯಾರು ಫಲಸ್ವರೂಪಳೋ ಆ ಶೋಕ ಸಂತಪ್ತಳಾದ ಮೈಥಿಲೀ ದೇವಿಯನ್ನು ನೀನು ನೋಡಬೇಕು'. ವಿನಯ **ಪೂರ್ವಕ**ವಾಗಿಯೇ ಆಡಿದ ಈ ಮಾತಿನ ಹಿಂದೆ 'ಸೀತೆಯ ವಿಷಯದಲ್ಲಿ ಈತ ಸರಿಯಾಗಿ ನಡೆದುಕೊಂಡಿಲ್ಲ' ಎಂಬ ಭಾವನೆಯಿದೆ - ಈ ಮಾತನ್ನು ಅವನು ಹೇಳುವ ಆವಶ್ಯಕತೆಯೇ ಇರಲಿಲ್ಲ" (ಪು. ೧೬)

೨.೩.೨. ಹನುಮಂತನ ಮಾತು ರಾಮನ ಮನಸ್ಸಿಗೆ ತಾಕಿತು, ಕಣ್ಣಿನಲ್ಲಿ ನೀರಾಡಿತು. ನೀಳವಾದ ಬಿಸಿಯುಸಿರಿಟ್ಟು, 'ಸೀತೆ ಮಂಗಳ ಸ್ನಾನ ಮಾಡಿ, ಅಂಗರಾಗ ಬಳಿದು, ಒಡವೆ

ತೊಡಲಿ, ಆಮೇಲೆ ಕರೆತನ್ನಿ' ಎಂದು ವಿಭೀಷಣನಿಗೆ ಹೇಳಿದ. ಸೀತೆ ಅದರಂತೆ ಮಿಂದುಟ್ಟು ನಮ್ರಳಾಗಿ ಬಂದು ಪಕ್ಕದಲ್ಲಿ ನಿಂತಳು. ರಾಕ್ಷಸನ ಮನೆಯಲ್ಲಿ ಬಹುಕಾಲ ಇದ್ದ ಸೀತೆ ಬಂದಳೆಂದೊಡನೆ ಹರ್ಷ ದೈನ್ಯ ರೋಷಗಳುಂಟಾದುವು. ನೆರೆದಿದ್ದ ವಾನರರು, ರಾಕ್ಷಸರು, ಮತ್ತಿತರರು ಇರುವಾಗ ಹುಬ್ಬು ಗಂಟಿಕ್ಕಿ ಮಡದಿಯತ್ತ ಓರೆ ನೋಟದಿಂದ ನೋಡುತ್ತ ಕಟುನುಡಿ ಆಡಿದ:

'ನನ್ನ ಗೆಳೆಯರ ಶೌರ್ಯದಿಂದಾಗಿ ಈ ಯುದ್ಧದ ಪರಿಶ್ರಮವನ್ನು ಮುಗಿಸಿದ್ದು ನಿನಗಾಗಿ ಅಲ್ಲ. ನನ್ನ ಚರಿತ್ರೆಯನ್ನು ಕಾಪಾಡಿಕೊಳ್ಳುವುದಕ್ಕಾಗಿ, ಪ್ರಖ್ಯಾತವಾದ ನನ್ನ ವಂಶಕ್ಕೆ ಬಂದ ಅಪವಾದ ಕಳಂಕಗಳನ್ನು ತೊಡೆಯುವುದಕ್ಕಾಗಿ. ಇದನ್ನು ತಿಳಿದುಕೊ. ನಿನ್ನ ಚರಿತ್ರೆಯ ವಿಷಯದಲ್ಲಿ ಸಂದೇಹ ಬಂದಿದೆ. ನೀನು ನನ್ನೆದುರು ನಿಂತಿರುವುದು ನೇತ್ರರೋಗ ಬಂದಿರುವವನೆದುರಿಗೆ ದೀಪ ಇಟ್ಟರೆ ಹೇಗೊ ಹಾಗೆ ಅಹಿತವಾಗಿದೆ. ಇಗೋ ಹತ್ತು ದಿಕ್ಕುಗಳಿವೆ, ನಿನಗೆ ಇಷ್ಟವಿದ್ದಂತೆ ಎಲ್ಲಿಗೆ ಬೇಕಾದರೂ ಹೋಗು. ನಿನ್ನಿಂದ ನನಗೆ ಆಗಬೇಕಾದ್ದು ಏನೂ ಇಲ್ಲ. ಸತ್ಕುಲ ಪ್ರಸೂತನೂ ತೇಜಸ್ವಿಯೂ ಆದ ಯಾವ ಗಂಡಸು ತಾನೇ ಮತ್ತೊಬ್ಬನ ಮನೆಯಲ್ಲಿದ್ದ ಹೆಂಗಸನ್ನು ಪ್ರೀತಿಯಿಂದ ಸ್ವೀಕರಿಸಿಯಾನು! ರಾವಣ ನಿನ್ನನ್ನು ತನ್ನ ದುಷ್ಟ ಕಣ್ಣುಗಳಿಂದ ನೋಡಿದ್ದಾನೆ, ನೀನು ಅವನ ತೊಡೆಯಿಂದ ಜಾರಿ ಬಿದ್ದವಳು. ನಿನಗೆ ಹೇಗೆ ಸುಖವೆಂದು ತೋರಿದರೆ ಹಾಗೆ - ಲಕ್ಷ್ಮಣನಲ್ಲೋ ಭರತನಲ್ಲೋ ಮನಸ್ಸು ಮಾಡು. ಅವರಲ್ಲದಿದ್ದರೆ ಸುಗ್ರೀವನಲ್ಲಿ ಅಥವಾ ವಿಭೀಷಣನಲ್ಲಿ ಮನಸ್ಸಿಡು-ನಿನಗೆ ಹೇಗೆ ಸುಖವೆಂದು ತೋರಿದರೆ ಹಾಗೆ"

೨.೪. ಇದುವರೆಗಿನ ರಾಮನಲ್ಲಿರದ, ಈಗ ಒಮ್ಮೆಲೇ ಚಿಮ್ಮುತ್ತಿರುವ ಈಗಿನ ರಾಮನ ಸಂಶಯಗ್ರಸ್ತ ವರ್ತನೆಯನ್ನು ಮನೋ ವಿಶ್ಲೇಷಣಾತ್ಮಕವಾಗಿ ಮನಗಾಣಿಸಲೆತ್ನಿಸಿದ್ದಾರೆ, ಮೇಲಿನ ಮಾತುಗಳನ್ನು ವಿಮರ್ಶಿಸುವಾಗ. ಆಕ್ಷೇಪಗಳ ಸುರಿಮಳೆಯಿಂದ ಪೂರ್ವ ಪಕ್ಷವನ್ನು ಮೊದಲು ನಿರ್ಮಿಸಿ ರಾಮನನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ, ಪ್ರತಿಯೊಂದು ನುಡಿಯನ್ನೂ ಸುಲಿದು ನೋಡುತ್ತಾರೆ. ರಾಮನ ವರ್ತನೆಯನ್ನು ಹಲವು ಆಯಾಮಗಳಿಂದ, ನಾನಾ ಪಾತಳಿಯ ಓರೆಯಲ್ಲಿ ನಿಂತು ವಿಶ್ಲೇಷಿಸುತ್ತಾರೆ. ಅಪ್ರಾಕೃತನೆನಿಸಿದ ರಾಮನು ಪ್ರಾಕೃತನ ಮಟ್ಟಕ್ಕಿಳಿದುದನ್ನು ತರ್ಕಬದ್ಧವಾಗಿ ಮನಗಾಣಿಸುತ್ತಾರೆ. ತನ್ನ ಗಂಡನಿಂದ ಸೀತೆ ನಿರೀಕ್ಷಿಸಿದ್ದ ಸ್ವಾಗತ ಇದಲ್ಲ. ಆಕೆ ಜನ ಸಂದಣಿಯೆ ದುರು-ನಿಂತವಳಲ್ಲ. ಈಗ, ಮೂವರ ಹೊರತು, ಇಡೀ ಸಭೆ ಅಪರಿಚಿತ. ಅಂಥ ಸಭೆಯಲ್ಲಿ ಅದೂ ಅಪರಾಧಿ ಸ್ಥಾನದಲ್ಲಿ ಸೀತೆಯನ್ನು ನಿಲ್ಲಿಸಿ ಹೇಳಬಾರದ ಬಿರುನುಡಿಗಳಲ್ಲಿ ಮುಳುಗಿಸಿದ್ದಾನೆ.

೨.೪.೧. "ಸೀತೆಯನ್ನು ತಾನೊಬ್ಬನೇ ನೋಡಿ ಮಾತಾಡಿಸಲು ಅವನಿಗೆ ಇಷ್ಟವಿಲ್ಲವೆಂಬುದು ಸ್ಪಷ್ಟ. ಸೀತಾ ತಿರಸ್ಕರಣ ಇವರೆಲ್ಲರೆದುರಿಗೂ ನಡೆಯಲಿ ಎಂಬ ಕ್ರೌರ್ಯಲೋಲುಪತೆ ಕೂಡ ತಾತ್ಕಾಲಿಕವಾಗಿ ಅವನಲ್ಲಿ ಮನೆ ಮಾಡಿಕೊಂಡಿತ್ತು.... ನಿಜವಾಗಿ ನೋಡಿದರೆ ಸೀತೆ ನಿರಪರಾಧಿಯೆ, ಸಚ್ಚರಿತ್ರಳೆ ಎಂಬ ವಿಷಯದಲ್ಲಿ ಅವನಿಗೆ ಸಂದೇಹ ಬಂದಿತ್ತು. ಅವನ 'ಅಹಂ' ಮತ್ತು ಅದರಿಂದ ಹುಟ್ಟಿದ ಮತ್ಸರ, ವಿಚಾರಶಕ್ತಿಗಿಂತಲೂ ಪ್ರೇಮಕ್ಕಿಂತಲೂ ಬಲವಾದವು. ಅಂತೂ ಆಗ ಅವನ ಮನಸ್ಸು ಇದ್ದ ಸ್ಥಿತಿ ಪ್ರಶಂಸಾರ್ಹವಲ್ಲ... ಸೀತೆಯ ವಿಷಯದಲ್ಲಿ ಒಂದು ಆದರದ ಮಾತಿಲ್ಲ,

ಸ್ವಾಗತದ ಮನೋಭಾವವಿಲ್ಲ. ಎಲ್ಲ ತನ್ನ ಪೌರುಷದ, ಸಾಹಸದ, ವಿಜಯದ ಅಗ್ಗಳಿಕೆಯ ಮಾತು. ಒಟ್ಟಿನಲ್ಲಿ ಆತ್ಮ ಪ್ರಶಂಸೆಯೆ ಹೆಚ್ಚಾಯಿತು. ಸೀತೆಯ ಕಣ್ಣಿನಲ್ಲಿ ನೀರು ತುಂಬಿ ಬಂದದ್ದನ್ನು ಕಂಡು ರಾಮನ ಕೋಪ, ಉರಿಯುತ್ತಿರುವ ಬೆಂಕಿಯ ಮೇಲೆ ಹೇರಳವಾಗಿ ತುಪ್ಪ ಸುರಿದರೆ ಹೇಗೋ ಹಾಗೆ, ಜ್ವಲಿಸಿತು... ನಿಜವಾಗಿಯೂ ರಾಮನ ಕಣ್ಣಿಗೆ ಬೇನೆ ಬಂದಿದೆ. ಅವನ ದೃಷ್ಟಿ ದುರ್ದೃಷ್ಟಿಯಾಗಿದೆ. ಸೀತೆಯೆಂಬ ನಿರ್ಮಲಜ್ಯೋತಿಯನ್ನು ಅವನು ನೋಡಲಾರ... ಸೀತೆಯನ್ನು ಕತ್ತೆತ್ತಿ ನೋಡದಿದ್ದವನು ಲಕ್ಷ್ಮಣ. ಈಗ ರಾಮ ಹೇಳುತ್ತಿದ್ದಾನೆ, 'ಬೇಕಾದರೆ ಲಕ್ಷ್ಮಣನಲ್ಲಿ ಮನಸ್ಸು ಮಾಡು' ಎಂದು! ಸೀತೆಯ ಮೇಲಿನ ರೋಷದಲ್ಲಿ ಲಕ್ಷ್ಮಣಾದಿಗಳಿಗೂ ಅನ್ಯಾಯ ಮಾಡುತ್ತಿದ್ದಾನೆ." (ಪು. ೧೮-೨೨)

೨.೪.೨. ಸಂಘರ್ಷದ ಮುಖಾಮುಖಿಯಲ್ಲಿ ಪಾತ್ರಗಳು ನಡೆದುಕೊಂಡ ಬಗೆಯನ್ನೂ ಕವಿಯ ತೀರ್ಮಾನವನ್ನೂ ಪ್ರಶ್ನಿಸುತ್ತ, ಕೆಲವು ಮೂಲಭೂತ ಸಂದೇಹ ಪ್ರತಿಕ್ರಿಯೆಗಳನ್ನು ಎತ್ತುವಾಗ ಮೂರ್ತಿರಾಯರು ಅತ್ಯುಕ್ತಿ, ಅನುಕ್ತಿಗಳಿಂದ ಮೂಲವನ್ನು ವಿಕೃತಗೊಳಿಸುವುದಿಲ್ಲ. ಜೀವನ ಪ್ರೀತಿಯ ನಿಜವಾದ ಹಂಬಲ ತನ್ನ ತೇವವನ್ನು ಒಣಗಿಸದೆ ಒದ್ದೆಯಾಗಿರುವಂತೆ ಎಚ್ಚರ ವಹಿಸಿರುವುದು ಅವರ ವಿಮರ್ಶೆಯ ಗುಣಾತ್ಮಕ ಅಂಶ.

೨.೪.೩. "ಈ ಖಂಡನೆ ವಾಲ್ಮೀಕಿಯ ಕಲೆಯನ್ನು ಕುರಿತದ್ದಲ್ಲ, ರಾಮ ಎಂಬ ವ್ಯಕ್ತಿಯನ್ನು ಕುರಿತದ್ದು. ರಾಮನ ವರ್ತನೆ ಖಂಡನೀಯ ಎಂದ ಮಾತ್ರಕ್ಕೆ ವಾಲ್ಮೀಕಿಯ ಕಲೆ ಕೆಟ್ಟಿತು ಎನ್ನುವಂತಿಲ್ಲವಷ್ಟೆ ..... (ವಾಲ್ಮೀಕಿ) ಸೀತಾ ಪ್ರತ್ಯಾದೇಶ ನ್ಯಾಯವೆಂದು ಸೂಚಿಸುತ್ತಿಲ್ಲ, ಅವನ ಸಹಾನುಭೂತಿ ಅವಳ ಕಡೆಗೇ ಇದೆ. ಅವನು ರಾಮನಲ್ಲಿರುವ ಮಾನವೀಯತೆಯನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾನೆ, ಅಷ್ಟೆ... ವಾಲ್ಮೀಕಿ ಇಂಥ ಮಾನವನ ಮನಸ್ಸನ್ನು ಒಳಹೊಕ್ಕು ನೋಡಿದ್ದಾನೆ, ಮನಮುಟ್ಟುವಂತೆ ಚಿತ್ರಿಸಿದ್ದಾನೆ... ಇನ್ನೊಬ್ಬನ ಮನೆಯಲ್ಲಿದ್ದ ಹೆಂಡತಿಯನ್ನು ಕಣ್ಣು ಮುಚ್ಚಿಕೊಂಡು ಸ್ವೀಕರಿಸುವ ಗಂಡಲ್ಲ ಇದು! ಎಂಬುದು ಎಲ್ಲರಿಗೂ ತಿಳಿಯಬೇಕಷ್ಟೆ.... ಹೆಂಡತಿಯ ವಿಷಯದಲ್ಲಿ ಸಂಶಯಗ್ರಸ್ತನಾದ ಸಾಮಾನ್ಯ ಮಾನವನಲ್ಲಿ ಈ ಬಗೆಯ ವರ್ತನೆ ಸ್ವಾಭಾವಿಕ; ಅಂಥವನ ಮನೋವೃತ್ತಿಯನ್ನು ವಾಲ್ಮೀಕಿ ಚೆನ್ನಾಗಿಯೇ ಚಿತ್ರಿಸಿದ್ದಾನೆ" (೨೩-೨೮)

೨.೫. 'ಅಹಂ' ಎಂಬ ಭಾವದ ಸುಳಿಗೆ ಸಿಕ್ಕ ಬುದ್ಧಿ ವಿವೇಕವನ್ನು ಗಾಳಿಗೆ ತೂರಿ ಒರಟು ನುಡಿಗಳಿಂದ ಹೇಗೆ ವರ್ತಿಸುತ್ತದೆಂಬುದು ಇಲ್ಲಿರುವ ಧ್ವನಿ. ಅಷ್ಟು ಕಾಲ ಕಾಪಾಡಿದ್ದ ಸಂಯಮದ ಕಟ್ಟೆ ಒಮ್ಮೆಲೇ ಒಡೆದು ಬೀಳುತ್ತದೆ. ಸುಹೃದ್ಗಣಾವೃತ ಜನಸಂಸದದಲ್ಲಿ, ವಾನರ-ರಾಕ್ಷಸರ ಎದುರಿನಲ್ಲಿ ಸೀತೆಯನ್ನು 'ಎತ್ತ ಬೇಕಾದರೂ ಹೋಗು, ಯಾರಲ್ಲಿ ಬೇಕಾದರೂ ಮನಸ್ಸಿಡು, ನಿನ್ನಲ್ಲಿ ನನಗೆ ಅಕ್ಕರಿಲ್ಲ' ಎಂಬಿತ್ಯಾದಿ ಮಾತುಗಳನ್ನು ಕೇಳಿ ಅವಾಕ್ಕಾಗುತ್ತೇವೆ. ಇದಕ್ಕೆ ಕಾರಣಗಳನ್ನು ಕೊಡಬಹುದು: "ಕೇವಲ ಆದರ್ಶವನ್ನೇ ಚಿತ್ರಿಸಹೊರಟರೆ ಬರಿಯ ಬಿಳಿಯ ಬಣ್ಣವೊಂದರಿಂದಲೇ ಚಿತ್ರ ಬರೆಯಲು ಹೊರಟಂತಾಗುತ್ತದೆ. ರಾಮ ದ್ವಂದ್ವಗಳನ್ನು ಮೀರಿದವನಲ್ಲ. ಅವನಿಗೆ ಸುಖದುಃಖಗಳುಂಟು, ಕೋಪ ತಾಪಗಳುಂಟು. ಆದರ್ಶ ಸಾಧನೆಯಲ್ಲಿ ಶ್ರದ್ಧಾಳುವಾದರೂ ಅವನು ವಾಸ್ತವ ಜೀವನವನ್ನು ದಿಟ್ಟಿಸಿ ನೋಡಬಲ್ಲ" (೨೯). "ಮಹಾತಪಸ್ವಿನಿ ಅಹಲ್ಯೆಯೂ ಹಿಂದೆ ಅಪರಾಧ ಮಾಡಿದ್ದಳು!

ಮಹಾ ತಪಸ್ವಿಗೌತಮನೂ ಆಗ ಕೋಪಿಸಿಕೊಂಡು ಅವಳಿಗೆ ಶಾಪಕೊಟ್ಟ. ರಾಮ ಕಾಲು ಮುಟ್ಟಿ ಆಕೆಗೆ ನಮಸ್ಕಾರ ಮಾಡಿದ್ದ. ಅದು ದೊಡ್ಡತನ. ಆದರೆ ತನ್ನ ಸ್ವಂತ ಹೆಂಡತಿಯ ಮಾತು ಬಂದಾಗ ದೊಡ್ಡತನ ಅಷ್ಟು ಸುಲಭವಲ್ಲ" (೩೧).

೨.೬. ರಾಮ ಸಂದೇಹ ಪಟ್ಟಿದ್ದು ಸ್ವಾಭಾವಿಕ ಎಂದು ಸುಮ್ಮನಾಗಲು ಮನಸ್ಸು ಒಪ್ಪುವುದಿಲ್ಲ. ವಾಲ್ಮೀಕಿ ಕಾವ್ಯಾರಂಭದಿಂದ ಓದುಗರಿಗೆ ಪರಿಚಯಿಸಿರುವ ರಾಮನಿಗೂ ಈ ರಾಮನಿಗೂ ತಾಳೆ ಹಾಕಿದರೆ. ಮನಸ್ಸು ತಳಮಳಿಸುತ್ತದೆ. ಸೀತೆಯನ್ನು ಬಿಟ್ಟುಬಿಡಬೇಕೆನಿಸಿದರೆ ಎಲ್ಲರೆದುರಲ್ಲಿ ಅವಮಾನಿಸದೆ, ಮಾತುಗಳ ಬೆಂಕಿ ಸುರಿಯದೆ, ಬಿಡಬಹುದಿತ್ತು. ತೀರ ಸಾಮಾನ್ಯರು ರೋಷ ಉಕ್ಕಿದಾಗ ಬಡಬಡಿಸುವರು. ರಾಮ ಬುದ್ಧಿ ಪೂರ್ವಕ ಒರಟಾಗಿದ್ದಾನೆ. ಸೀತೆಯ ವರ್ತನೆಯ ವೈದೃಶ್ಯದಲ್ಲಿ ಇದು ಇನ್ನಷ್ಟು ಒಡೆದು ಕಾಣುತ್ತದೆ.

೨.೬.೧. ರಾಮನ "ಪ್ರಾಕೃತತೆ ಎದ್ದು ಕಾಣುವಂತೆ ವಾಲ್ಮೀಕಿ ಸೀತೆಗೆ ಈ ಸಂದರ್ಭದಲ್ಲಿ ಅನುಪಮವಾದ ಸಂಯಮವನ್ನೂ ಗಾಂಭೀರ್ಯವನ್ನೂ ಕೊಟ್ಟಿದ್ದಾನೆ.. ಸೀತೆ ಅಪರಾಧಿಯೆ ಅಲ್ಲವೆ ಎಂಬುದು ರಾಮನ ಮನಸ್ಸಿನಲ್ಲಿ ಅನಿಶ್ಚಿತವಾದ ವಿಷಯ. ಆದರೆ ರಾಮ ಅಪರಾಧಿ ಎಂಬ ವಿಷಯದಲ್ಲಿ ಸೀತೆಗಾಗಲಿ, ಅವನ ಮಾತನ್ನು ಕೇಳಿದ ಇತರರಿಗಾಗಲಿ ಯಾವ ಸಂಶಯವೂ ಇದ್ದಿರಲಾರದು. ಆದರೂ ಸೀತೆ ಈ ಅಪರಾಧಿ ರಾಮನ ವಿಷಯದಲ್ಲಿ 'ವಾಕ್ಶಲ್ಯ' ಎನ್ನಬಹುದಾದ ಒಂದೇ ಒಂದು ಮಾತನ್ನೂ ಆಡಲಿಲ್ಲ" (೩೨)

೨.೬.೩. ಪರಿಭಾವನ ಯೋಗ್ಯವೂ ಸಂಸ್ಕಾರದತ್ತವೂ ಪ್ರಾಮಾಣಿಕವೂ ಆದ ಪಾರದರ್ಶಕ ನುಡಿಗಳು ಸೀತೆಯ ಎದೆಯಾಳದಿಂದ ಮೂಡಿದುವು : 'ಇದೇನು ಹೀಗೆ ಕರ್ಣ ಕಠೋರವಾದ, ಯೋಗ್ಯವಲ್ಲದ ಕ್ರೂರವಾದ ಮಾತುಗಳನ್ನಾಡುತ್ತಿದ್ದೀಯೆ! ಇವು ಅಸಂಸ್ಕೃತನಾದವನು ಅಸಂಸ್ಕೃತಳಿಗೆ ಹೇಳಬಹುದಾದ ಮಾತು. ನೀನು ತಿಳಿದುಕೊಂಡಿರುವಂಥವಳಲ್ಲ ನಾನು. ನನ್ನ ಶುದ್ಧ ಚರಿತ್ರೆಯ ಮೇಲಿನ ಆಣೆ, ನನ್ನಲ್ಲಿ ನಂಬಿಕೆಯಿಡು. ನಿಜವಾಗಿ ನೀನು ನನ್ನನ್ನು ಪರೀಕ್ಷಿಸಿ ನೋಡಿದರೆ ನಿನ್ನ ಶಂಕೆಯನ್ನು ಬಿಡಬೇಕು.... ನಾವಿಬ್ಬರೂ ಒಟ್ಟಿಗೆ ಬೆಳೆದವರು, ಸಂಪರ್ಕವುಳ್ಳವರು. ಇಷ್ಟಾದರೂ ನೀನು ನನ್ನನ್ನು ಅರಿತುಕೊಳ್ಳದಿದ್ದರೆ ನಾನು ಎಂದೆಂದಿಗೂ ಸತ್ತವಳೆ ಸರಿ..'

೨.೭. ಸೀತೆಯ ಮಾತುಗಳನ್ನು ಮೂರ್ತಿರಾಯರು ಹೀಗೆ ಅರ್ಥೈಸುತ್ತಾರೆ: "ಈ ಮಾತುಗಳು ಹದ ಮೀರಿದುವಲ್ಲ. ಅವುಗಳಲ್ಲಿ ರಾಮನ ಪ್ರಶಂಸೆ ಕೂಡ ಅಡಗಿದೆ. ಈ ಬಗೆಯ ಮಾತು ನಿನ್ನಂಥ ಉನ್ನತ ವ್ಯಕ್ತಿಗೆ ಸದೃಶವಲ್ಲ - ಇದು ಸೀತೆಯ ಮಾತಿನಲ್ಲಿರುವ ಭಾವನೆ. ಇರಿಯುವ ಮೊನೆಯಿಲ್ಲದೆ ವಿಚಾರ ಶಕ್ತಿಯನ್ನು ಎಚ್ಚರಿಸುವಂಥ ವಾದ ಅವಳದ್ದು. ರಾಮ ಅದಕ್ಕೆ ಕೊಡಬಹುದಾದ ಉತ್ತರ ಏನೂ ಇಲ್ಲ" (೩೪).

೨.೮. ವಾಲ್ಮೀಕಿ ಮಹಾಕವಿಯೆಂಬುದನ್ನು ಮೂರ್ತಿರಾಯರು ಆಗಾಗ ನೆನೆಯುತ್ತಾರೆ, ನೆನಪಿಸುತ್ತಾರೆ. ಹಾಗೆಂದು ವಾಲ್ಮೀಕಿಗೆ ಶರಣಾಗತರಾಗಿಲ್ಲ! ವಾಲ್ಮೀಕಿಯ ಸೃಷ್ಟಿ ಶಕ್ತಿಯ ಇತಿಮಿತಿಗಳನ್ನು ಚರ್ಚಿಸುತ್ತಾರೆ, ಊಹೆ ಮಾಡುತ್ತಾರೆ, ಪೂರ್ವಾಪರಗಳನ್ನು ತೂಗಿ ನೋಡುತ್ತಾರೆ.

ಸೀತೆಯನ್ನು ಜನಸಂದಣಿಯೆದುರು ನಿಲ್ಲಿಸದಿರಬಹುದಿತ್ತು, ರಾಮ ಆಡುವ ಅತಿ ಬಿರುನುಡಿಗಳನ್ನು ಬಿಟ್ಟು ಬಿಡಬಹುದಿತ್ತು, ತಿದ್ದಿ ನಯಗೊಳಿಸಬಹುದಿತ್ತು ಎನ್ನುತ್ತಾರೆ. ರಾಮನಲ್ಲಿ ಸಂಶಯ, ಹೊಟ್ಟೆಯಕಿಚ್ಚು ಕೂಡ ಅಡಗಿತ್ತೆಂಬುದನ್ನು ವಾಲ್ಮೀಕಿಯು ಉಚಿತವಾದೆಡೆಗಳಲ್ಲಿ ಸೇರಿಸಬಹುದಿತ್ತು, ಮತ್ತು ಹಾಗೆ ಮಾಡುತ್ತ ಬಂದಿದ್ದರೆ ಈಗಿನ ರಾಮನ ವರ್ತನೆ ಅಸಹಜವೆನಿಸುತ್ತಿರಲಿಲ್ಲ-ಎಂದು ಅಭಿಪ್ರಾಯ ಪಡುತ್ತಾರೆ.

೨.೯. ಈ ಹಂತದಲ್ಲಿ ನಿರೂಪಣೆ ಹೊರಳು ದಾರಿಯಲ್ಲಿ ಮುಂದುವರಿದು ದಿವ್ಯ ತಿರುವು ಪಡೆಯುತ್ತದೆ. ಸೀತೆಯ ಪಾತ್ರದಲ್ಲಿ ಬಿರುಕುಗಳೇ ಇಲ್ಲವೆ ಎಂಬ ದಿಕ್ಕಿನಲ್ಲಿ ಆಲೋಚಿಸುತ್ತಾರೆ. ಅರಣ್ಯಕಾಂಡದಲ್ಲಿ, ಸೀತೆ ಲಕ್ಷ್ಮಣನನ್ನು, ರಾಮನ ನೆರವಿಗೆ ಹೋಗದಿದ್ದಾಗ, 'ನನ್ನ ಮೇಲಿನ ಆಸೆಯಿಂದಾಗಿ ನೀನು ರಾಮನ ಸಹಾಯಕ್ಕೆ ಹೋಗಲೊಲ್ಲೆ' ಎಂದು ಆಪಾದಿಸಿ ಎದೆ ಬಡಿದುಕೊಂಡು ಅತ್ತದ್ದು ಅನಾಗರಿಕವಾಗಿದೆ. ಆದರೆ ಅಂತಹ ಕಪ್ಪು ತಪ್ಪುಗಳು ಆಕೆಯಲ್ಲಿ ಇನ್ನಿಲ್ಲ. ವಾಸ್ತವವಾಗಿ ಇದುಕೂಡ ಜನಪದರಲ್ಲಿ ವೀರಗಾಥೆಯ ತುಣುಕು ತನಗೆ ಸಿಕ್ಕ ವೀರಕಥಾ ವಸ್ತುವನ್ನು ವೀರ ಕಾವ್ಯವಾಗಿಸುವ ಪ್ರಕ್ರಿಯೆಯಲ್ಲಿ, ಬೃಹತ್ಕಾವ್ಯವಾಗಿಸುವ ಸೃಜನ ಶಕ್ತಿಯಲ್ಲಿ, ವಾಲ್ಮೀಕಿಯ ಅರಿವಿಲ್ಲದೆ ಉಳಿದ ದೋಷಗಳಿವು. ಈ ಕುಂದು ಬರುವುದು ರಾಮಾಯಣದ ಕೊನೆಯ ಕಾಂಡದ ಕಡೆಯಲ್ಲಿ. ಇದಕ್ಕೆ ಮೂರ್ತಿರಾಯರ ವಿವರಣೆ: "ಮತ್ತೆ ಹಿಂದಕ್ಕೂ ಮುಂದಕ್ಕೂ ಗಮನವನ್ನು ತಿರುಗಿಸಿ ತಿದ್ದುವ, ಸೇರಿಸುವ ಬದಲಾಯಿಸುವ ಕೆಲಸವನ್ನು ಮಾಡಬೇಕೆಂದರೆ ಬೇಸರ ಬಂದಿರಬೇಕು, ಬರದಿದ್ದರೆ ಆಶ್ಚರ್ಯ!... ಕಾವ್ಯ ಮುಗಿಯುತ್ತ ಬಂದಂತೆಲ್ಲ ವಾಲ್ಮೀಕಿಗೆ ಬಹಳ ಆಯಾಸವಾಗಿರಬೇಕು" ಎನ್ನುತ್ತಾರೆ (೩೭-೩೮); "ಈ ಮೇಲೆ ಹೇಳಿರುವುದೆಲ್ಲ ಊಹೆ, ಅದಕ್ಕೆ ಸಾಕ್ಷ್ಯ ದೊರೆಯುವುದಿಲ್ಲ, ಆದರೆ ನಂಬಲಸಾಧ್ಯ ಎನ್ನುವಂಥ ಊಹೆಯಲ್ಲ" ಎಂದೂ ಷರಾ ಬರೆಯುತ್ತಾರೆ!

೩.೦ ಪರಿಶೀಲನೆ : ಉತ್ತರ ಕಾಂಡದಲ್ಲಿ

೩.೧. ಉತ್ತರ ಕಾಂಡ ಒಂದು ಬೇರೆ ಕಾವ್ಯ, ಕಥಾ ಗುಚ್ಛ, ಸೀತಾ ಪ್ರತ್ಯಾದೇಶದ ಕಥಾನಕ ಆವರ್ತನಗೊಂಡಿದೆಯಾದರೂ ಕವಿಯ ಪರಿಕಲ್ಪನೆಯಲ್ಲಿ ವ್ಯತ್ಯಾಸಗಳಿವೆ. ಸೀತೆಯ ಕಥೆ ಇಲ್ಲಿ ಆನಂದೋತ್ಸಾಹದಲ್ಲಿ ಆರಂಭವಾಗುತ್ತದೆ. ಪಟ್ಟಾಭಿಷೇಕ ಮುಗಿದು ಸೀತೆ ಮಗುವಿನ ತಾಯಿ ಆಗುವ ಸಂಭ್ರಮದಲ್ಲಿ ಕಥೆ ಅನಾವರಣಗೊಳ್ಳುತ್ತದೆ. ತಂದೆಯಾಗುವ ಹುರುಪು ಹೆಚ್ಚಾದ ರಾಮ ಮಡದಿಯ ಬಸುರಿಬಯಕೆಗಳನ್ನು ಕೇಳಿದ್ದಾನೆ. ಗಂಗಾತೀರದ ಪುಣ್ಯಾಶ್ರಮಗಳನ್ನು ನೋಡುವ ಆಸೆ ಆಕೆಯದು. 'ನಾಳೆಯೇ ಹೋಗುವೆಯಂತೆ ಹಾಯಾಗಿರು' ಎಂದು ರಾಮ ತಿಳಿಸುತ್ತಾನೆ. ಬಯಕೆ ಬರಲಿರುವುದರ ಕಣ್ ಸನ್ನೆ ಆಗುತ್ತದೆ, ವಿಧಿ ಹೂಡಿದ ಭ್ರಾಂತಿಯ ಸಂಚಿನಿಂದ; ಇದು ಸಾಫೋಕ್ಲಿಸ್ ಐರನಿ.

೩.೧.೧. ಒಡ್ಡೋಲಗದವರೊಂದಿಗೆ ಗೆಲುವಿನಿಂದ ಇನ್ನೂ ರಾಮ ಸಲ್ಲಾಪಿಸುತ್ತಿರುವಾಗಲೇ ಅವನ ಹೊಂಗನಸು ನೀರಗುಳ್ಳೆಯಾಗುತ್ತದೆ. ತನ್ನನ್ನು ಕುರಿತು ಜನ ಏನೇನು ಮಾತು ಆಡುತ್ತಿದ್ದಾರೆಂದು ತಿಳಿಯಲು ಹೋಗಿದ್ದ ಗೂಢಚಾರ ಭದ್ರನು ರಾಮನ ಮಡಿಲಿಗೆ ನಿಗಿನಿಗಿ ಕೆಂಡ ಉಗುಳುತ್ತಾನೆ: 'ರಾಮ ರಾವಣನನ್ನು ಕೊಂದು ಸೀತೆಯನ್ನು ಮತ್ತೆ ಪಡೆದ, ಸರಿ. ಆದರೆ ಆ ಸೀತೆಯನ್ನು ರಾವಣ

ತನ್ನ ತೊಡೆಯ ಮೇಲಕೇರಿಸಿಕೊಂಡು ಅಪಹರಿಸಿದ್ದನಲ್ಲವೆ? ತನಗೆ ಸಹಜವಾಗಿ ಬರಬೇಕಿದ್ದ ರೋಷವನ್ನು ಬದಿಗಿಟ್ಟು ರಾಮ ಅವಳನ್ನು ಮನೆಗೆ ಹೇಗೆ ಕರೆತಂದ? ಅವಳಿಂದ ಅವನು ಏನು ಸುಖವನ್ನು ಪಡೆದಾನು! ನಾಳೆ ನಮ್ಮ ಹೆಂಡತಿಯರಲ್ಲೂ ಇಂಥಾದ್ದನ್ನು ಸಹಿಸುವಂತಾಗುತ್ತದೆ. ರಾಜ ಮಾಡಿದ್ದನ್ನು ಪ್ರಜೆಗಳು ಅನುಸರಿಸುತ್ತಾರೆ', ಇದನ್ನು ಕೇಳಿದವನೆ ರಾಮ ಮತ್ತೆ ಸೀತಾ ಪರಿತ್ಯಾಗ ಕೃತನಿಶ್ಚಯನಾದ.

೩.೧.೨. "ರಾಮನಿಗೆ ಈ ವದಂತಿಯನ್ನು ನಂಬಲಿಷ್ಟವಿಲ್ಲ. ಅಲ್ಲಿದ್ದ ಸುಹೃಜ್ಜನರನ್ನು 'ಜನ ನನ್ನನ್ನು ಕುರಿತು ಹೀಗೆ ಆಡಿಕೊಳ್ಳುತ್ತಿದ್ದಾರೆಯೆ?' ಎಂದು ಕೇಳಿದ. ಅವರು 'ಏವಮೇತತ್, ನ ಸಂಶಯಃ' ಎಂದರು. ಭದ್ರನೊಬ್ಬನ ಮಾತಿನ ಆಧಾರದ ಮೇಲಲ್ಲ, ರಾಮ ತನ್ನ ನಿಶ್ಚಯಕ್ಕೆ ಬಂದದ್ದು - ಇದನ್ನು ನಾವು ಗಮನಿಸಬೇಕು" (೪೩)

೩.೨. ಒಡನೆಯೇ ರಾಮ ತಮ್ಮಂದಿರನ್ನು ಕರೆಸಿದ. ಸೀತೆಯನ್ನು ಮತ್ತೆ ತೊರೆಯಬೇಕೆಂಬ ನಿಲುಮೆಗೆ ಬಂದೊಡನೆ ಲೋಕ ಬರಿದಾಯಿತು. ಮುಳುಗುವ ನೇಸರಿನಂತೆ ಕಳಾಹೀನನಾದ. ರಾಮನು ತನ್ನ ಹಾಗೂ ಸೀತೆಯ ವಂಶ, ಸೀತಾಪಹರಣ, ರಾವಣವಧೆ, ಸೀತೆ ಅಗ್ನಿಪ್ರವೇಶದಿಂದ ಶುದ್ಧಳೆಂದು ದೇವತೆಗಳಿಂದಲೂ ಶ್ಲಾಘ್ಯಳಾದದ್ದು-ತಿಳಿಸುತ್ತಾನೆ. 'ಅಪಕೀರ್ತಿ ನಿಂದ್ಯ, ಕೀರ್ತಿ ಪೂಜನೀಯ. ಅಪವಾದ ಭಯದಿಂದ ನನ್ನ ಪ್ರಾಣವನ್ನೇ ಬಿಟ್ಟೇನು, ನಿಮ್ಮನ್ನಾದರೂ ಬಿಟ್ಟೇನು, ಇನ್ನು ಸೀತೆಯ ಮಾತೇನು' ಎಂದು ತಮ್ಮಂದಿರಿಗೆ ಹೇಳುತ್ತಾನೆ. ವಾಲ್ಮೀಕಿಯ ಆಶ್ರಮದ ಬಳಿ, ಜನರಿಲ್ಲದ ಕಡೆ ಸೀತೆಯನ್ನು ಬಿಟ್ಟು ಬರಲು ಲಕ್ಷ್ಮಣನಿಗೆ ಅಪ್ಪಣೆ ಮಾಡುತ್ತಾನೆ.

೩.೨.೧. ಈ ಸಂದರ್ಭದ ಸೂಕ್ಷ್ಮಗಳನ್ನು, ವೈದೃಶ್ಯಗಳ ಹಿನ್ನೆಲೆಯಲ್ಲಿ, ಮೂರ್ತಿರಾಯರು ಬೇರೂರಿಸುತ್ತಾರೆ: "ಇಲ್ಲಿಯ ರಾಮ ಯುದ್ಧಕಾಂಡದ ರಾಮನಂತಿಲ್ಲ. ಆ ಹಿಂದಿನ ರಾಮ ಸೀತೆಯ ಮೇಲೆ ವಾಗ್ಬಾಣಗಳನ್ನು ಬಿಡುವವರೆಗೆ ತನ್ನ ಮನಸ್ಸಿನಲ್ಲಿದ್ದುದನ್ನು ಯಾರೊಡನೆಯೂ ಹೇಳಿಕೊಳ್ಳದೆ ಸೆಟೆದು ನಿಂತು ನಿಷ್ಠುರ ಮುಖ ಮುದ್ರೆಯಿಂದ ಮಾತ್ರ ತನ್ನ ಮನೋಮುದ್ರೆ ಸೂಚಿಸಿದ್ದ. ಇಲ್ಲಿಯ ರಾಮ ಮನಸ್ಸಿನಲ್ಲಿರುವುದನ್ನು ಬಚ್ಚಿಡುವುದಿಲ್ಲ. ಜನಾಪವಾದ ಅವನ ಮೇಲೆ ವಜ್ರಾಘಾತದಂತೆ ಅಪ್ಪಳಿಸಿದೆ. ಅದನ್ನು ಕೇಳಿದ ಮೇಲೆ ಅವನು ಮಾಡಬೇಕಾಗಿದ್ದ ನಿಶ್ಚಯವನ್ನೂ ಮಾಡಿಕೊಂಡ... ಎಲ್ಲ ಮಾನವರಂತೆ ಅವನೂ ಸಹಾನುಭೂತಿಯನ್ನು ಬೇಡುತ್ತಿದ್ದಾನೆ. ಹಿಂದಿನ ರಾಮನಿಗೆ ಬೇಕಾಗಿದ್ದದ್ದು ತನ್ನ ಅಹಮಿಕೆಯ ತೃಪ್ತಿ. ಹಿಂದಿನ ರಾಮ ಎದುರಿಸಬೇಕಾಗಿದ್ದದ್ದು ಅವನ ಹೃದಯಾಂತರ್ಗತವಾದ ಕ್ರೋಧ ಮಾತ್ಸರ್ಯಗಳು. ಅವನ್ನು ಎದುರಿಸಲಾರದೆ ಅವನು ಸೋತ. ಇಲ್ಲಿಯ ರಾಮನಿಗೆ ಅಂಥ ಸಮಸ್ಯೆಯೇನೂ ಇಲ್ಲ. ಅವನಲ್ಲಿ ಮಾತ್ಸರ್ಯವಿಲ್ಲ. ಅವನಿಗೆ ಇತರರ ಆಶ್ವಾಸನೆ ಬೇಕಿಲ್ಲ. ಸೀತೆ ಶುದ್ಧೆ, ಯಶಸ್ವಿನಿ ಎಂಬುದನ್ನು ಅಂತರಾತ್ಮ ಬಲ್ಲುದು. ಅವನು ಎದುರಿಸಬೇಕಾಗಿ ಬಂದ ಸಮಸ್ಯೆ ರಾಜ್ಯ ಹಿತಕ್ಕೆ ಸಂಬಂಧ ಪಟ್ಟದ್ದು.. ಇಲ್ಲಿ ಅಹಂಕಾರದ ಮಾತೇನೂ ಇಲ್ಲ. ಸೀತಾ ಪರಿತ್ಯಾಗ ನಡೆಯುವುದು ಕೇವಲ ಕರ್ತವ್ಯ ಪಾಲನೆಗಾಗಿ... ಆದ್ದರಿಂದ ಅವನಿಗೆ ನಮ್ಮ ಅನುಕಂಪ ಸಲ್ಲುತ್ತದೆ". (೪೫)

೩.೨.೨. ಉತ್ತರ ಕಾಂಡದಲ್ಲಿ ಹಿಂದಿನ 'ರಾಮಪಟ'ದಲ್ಲಿರುವ ಕೊರೆಯನ್ನು ಇಲ್ಲವಾಗಿಸುವ

ಪ್ರಯತ್ನವಿದೆ. ಮುಖ್ಯವಾಗಿ, ಇಲ್ಲಿಯ ರಾಮ ಬಡಾಯಿಕೊಚ್ಚಿಕೊಳ್ಳುವುದಿಲ್ಲ ಮತ್ತು ಸೀತೆಯ ವಿಚಾರದಲ್ಲಿ ಸಂಶಯವಿಲ್ಲ. ಅದೆಲ್ಲ ಸರಿ, "ಆದರೂ ಇಲ್ಲಿ ದೋಷಗಳು ಉಳಿದುಕೊಂಡಿವೆ, ಸೀತೆಯನ್ನು 'ವಿಜನೇ ದೇಶೇ' ಬಿಟ್ಟು ಬಾ ಎಂದು ಅಪ್ಪಣೆ ಮಾಡಿದ್ದರ ಕಾರಣ ಅರ್ಥವಾಗುವುದಿಲ್ಲ... ರಾಮನಿಗೆ, ಜನ ಇರುವ ಕಡೆ ಬಿಟ್ಟರೆ ಚರ್ಚೆಗೆ ಅವಕಾಶವಾಗುತ್ತದೆ ಎಂಬ ಶಂಕೆ ಇದ್ದಿರಬಹುದು. ಇದಕ್ಕಿಂತ ಸ್ವಲ್ಪ ಹೆಚ್ಚು ಗಮನವನ್ನು ಸೆಳೆಯುವುದೆಂದರೆ, 'ನನ್ನ ಪ್ರಾಣವನ್ನಾದರೂ ಬಿಟ್ಟೇನು, ನಿಮ್ಮನ್ನಾಧರೂ ಬಿಟ್ಟೇನು, ಇನ್ನು ಸೀತೆಯ ಮಾತೇನು!'. ಇಲ್ಲಿ ರಾಮನ ಪ್ರಾಣಕ್ಕಿಂತ ತಮ್ಮಂದಿರು ಹೆಚ್ಚಾದರು-ನ್ಯಾಯ, ರಾಮ ಹಾಗೆ ಹೇಳಬೇಕಾದದ್ದೇ. ಆದರೆ ಸೀತೆ ಅವರೆಲ್ಲರಿಗಿಂತ ಕಡಿಮೆ ಮಾತ್ರವಲ್ಲ, ಗಣನೆಗೇ ಬಾರದವಳೆ! ಇವರು ಹೆಚ್ಚು, ಅವರು ಕಡಿಮೆ ಎಂಬ ಭಾವನೆಯೇ ಬರದಂತೆ ಮಾಡಬಹುದಿತ್ತು". (೪೭)

೩.೩.೧. ಲಕ್ಷ್ಮಣನಿಗೆ ರಾಮ 'ಸೀತೆ ನನ್ನಲ್ಲಿ ಹೇಳಿದ್ದಳು, ಗಂಗಾ ತೀರದ ಬಳಿಯ ಆಶ್ರಮಗಳನ್ನು ನೋಡಬೇಕೆಂದು. ಅವಳ ಬಯಕೆ ನೆರವೇರಲಿ' ಎಂದು ಹೇಳಿದ. ಗರ್ಭಿಣಿಯ ಬಯಕೆಯನ್ನು ರಾಮ ಹೀಗೆ ಉಪಯೋಗಿಸಿದ್ದು "ಮೆರುಗು ತಳೆದ ಕ್ರೌರ್ಯ' ವೆಂದು ಮೂರ್ತಿರಾಯರ ಅಂಬೋಣ (೪೭). ಆದರೆ ಮರುಕ್ಷಣ, ಸೂಕ್ಷ್ಮ ಪರಿಶೀಲನೆಯಿಂದ ಈ ಆಕ್ಷೇಪಣೆ ತಪ್ಪೆನಿಸಿದೆ! ಏಕೆಂದರೆ, ಲಕ್ಷ್ಮಣನಿಗೆ ಹೀಗೆ ಅಪ್ಪಣೆ ಕೊಟ್ಟಾಗ ರಾಮ ಶೋಕಸಂಲಗ್ನ ಹೃದಯನಾಗಿ ನಿಟ್ಟುಸಿರು ಬಿಟ್ಟ ಎಂಬ ಮಾತಿದೆ: "ಅಂದ ಮೇಲೆ ಅವನ ಮಾತಿನಲ್ಲಿರುವುದು ಕ್ರೌರ್ಯವಾಗಲಿ ವಂಚನೆಯಾಗಲಿ ಅಲ್ಲ; ಇದೇನು ವಿಧಿಯ ಐರನೀ! ಸೀತೆಯ ಬಯಕೆ ಹೀಗೆ ತೀರಬೇಕಾಯಿತೆ ಎಂಬ ಭಾವನೆ". (೪೮)

೩.೩.೨. ಹೀಗೊಂದು ಜನಾಪವಾದ ಬಂದಿರುವುದನ್ನು ರಾಮ ನೇರವಾಗಿ ಸೀತೆಗೆ ಹೇಳಬಹುದಿತ್ತಲ್ಲವೆ ಎಂದೆನಿಸಲೂಬಹುದು: "ಡಾ. ಡಿ. ವಿ. ಗುಂಡಪ್ಪನವರೊಡನೆ ಈ ವಿಷಯವನ್ನು ಚರ್ಚಿಸುತ್ತಿದ್ದಾಗ ಅವರು ಮೇಲಿನ ಆಕ್ಷೇಪಣೆಗೆ ಈ ಉತ್ತರ ಕೊಟ್ಟರು: 'ಸೀತೆ ಎದುರಿಗಿಲ್ಲದಾಗ ಹೇಗೋ ರಾಮ ತನ್ನ ಮನಸ್ಸನ್ನು ಕಠಿನ ಮಾಡಿಕೊಳ್ಳಬಲ್ಲ. ಆದರೆ ಸೀತೆಯನ್ನು ನೋಡ ಹೋಗಿದ್ದರೆ ಅವನ ಮನಸ್ಸು ಕರಗಿ ಹೋಗುತ್ತಿತ್ತು. ತನ್ನ ನಿಶ್ಚಯದಿಂದ ಕದಲಿಯೇನೋ ಎಂದು ಅವನು ಹೆದರಿದ್ದರಿಂದ ಅವಳೊಡನೆ ಮಾತನಾಡಲಿಲ್ಲ'. ಇದು ಒಟ್ಟಿನಲ್ಲಿ ಒಪ್ಪಬಹುದಾದ ಉತ್ತರ... ರಾಮನಿಗೆ ಆ ಯೋಚನೆ ಬಂದಿದ್ದರೆ ಅವನು ಲಕ್ಷ್ಮಣನಿಗಾದರೂ ಹೇಳಬಹುದಾಗಿತ್ತು :'ನಾನು ಅವಳನ್ನು ನೋಡಲಾರೆ, ನೀನೇ ತಿಳಿಸು' ಎಂದು. (೪೮-೪೯)

೩.೩.೩. ಇಲ್ಲಿನ ಸಂವಾದಕ್ಕೆ ಬೇರೆ ಅನ್ನಿಸಿಕೆಯನ್ನೂ ಪೋಣಿಸಬಹುದು. ಉತ್ತರ ಕಾಂಡಕಾರನಿಗೆ ಸೂಚ್ಯವಾಗಿ ಪ್ರತಿಪಾದಿಸುವ ಕಾವ್ಯಕಲೆಯಿದೆ. ಎಲ್ಲವನ್ನೂ ವಾಚ್ಯವಾಗಿಸದೆ ಓದುಗರ ಗ್ರಹಿಕೆಗೂ ಕೊಂಚ ಗ್ರಾಸ ಇರಲೆಂಬ ಕಾವ್ಯ ಪ್ರಜ್ಞೆಯಿದೆ. ಸೀತೆ ಒಮ್ಮೆಲೇ ಈ ಆಘಾತ, ರಾಮನ ಬಾಯಿಂದ ಬಂದಾಗ, ಸಹಿಸದೆ ಹೋದಾಳು ಅಥವಾ ಗರ್ಭಪಾತವಾಗಲೂಬಹುದು ಎಂಬ ಭೀತಿಯಿದೆ.

೩.೪.೧. ಮುಂದಿನ ಕಥೆ ಲವಕುಶರನ್ನು ಕಾವ್ಯಾಲಾಪ ಪ್ರಾಜ್ಞರನ್ನಾಗಿಸಿದ, ಹೊಗಳಿಕೆಗೂ ನಿಲುಕದ ಹೈಮಾಚಲೋನ್ನತ ಧವಳಿಮೆಯ ವ್ಯಕ್ತಿತ್ವದ ವಾಲ್ಮೀಕಿಯಿಂದಾಗಿ ಸುಖಾಂತ ಕಾಣುತ್ತದೆ.

ವಾಲ್ಮೀಕಿಯ ರುಂದ್ರ ಗಾಂಭೀರ್ಯದಂತೆಯೇ ರಾಮನ ಉದಾತ್ತತೆಯೂ ಬೆಳಗಿದೆ. ಸೀತೆ ಶಪಥ ಮಾಡುವುದಕ್ಕಿಂತ ಮುಂಚೆಯೇ ರಾಮ ಮಾತಾಡಿ ಆಕೆ ಪರಿಶುದ್ಧೆಯೆಂದು ನಂಬಿರುವುದಾಗಿ ಸಾರುತ್ತಾನೆ, ಅವಳನ್ನು ತೊರೆದುದಕ್ಕೆ ಮನ್ನಿಸಬೇಕೆನ್ನುತ್ತಾನೆ. ಆದರೂ, ತಾನು ಅಕಳಂಕಳೆಂದು ಇನ್ನೊಮ್ಮೆ ಶಪಥ ಮಾಡಬೇಕಾಯಿತೆಂಬುದು ಸೀತೆಯ ಮನಸ್ಸಿನ ತುಮುಲ. ಆಕೆಯ ಹೃದಯದ ಅಳಲನ್ನು ಅರಿತಂತೆ, ತೋರುವ ತಾರ್ಕಿಕ ವಾಕ್ಸರಣಿಯನ್ನು ಮೂರ್ತಿರಾಯರು ಮುಂದಿಟ್ಟಿದ್ದಾರೆ ಪುಟ ೫೫-೫೬ರಲ್ಲಿ (ಪುಟಗಳ ವಿಸ್ತಾರ ಭಯದಿಂದ ಅದನ್ನಿಲ್ಲಿ ಉದಾಹರಿಸಿಲ್ಲ). ಸ್ತ್ರೀವಾದಿ ವಿಮರ್ಶೆಯ ನೆಲೆಯಲ್ಲಿ ಈ ವಾಕ್ಸರಣಿ ಮೌಲಿಕವಾಗಿ ಹೊಳಲುಗೊಡುತ್ತದೆ.

೩.೫.೧. ರಾಮನಲ್ಲದೆ ಬೇರೊಬ್ಬನನ್ನು ಅರಿಯೆನೆಂಬ ಮಾತು ದಿಟವಾದರೆ ಮಾಧವೀ ದೇವಿ ತೋಳು ತೆರೆದು ಆಸರೆಯಾಗಲೆಂದು ರೋಸಿದ ಮನಸ್ಸಿನಿಂದ ಸೀತೆ ಶಪಥ ಮಾಡಿದಳು. ಮಗಳಿಗೆ ತಾಯಿ ಆಶ್ರಯ ಕೊಟ್ಟಳು, ನೆಲದ ಮಗಳು ನೆಲದಾಳ ಸೇರಿದಳು. ರಾಮ ಗೋಳಿಟ್ಟ, ಕಣ್ಣೀರ್ಗರೆದ, 'ಸೀತೆಯನ್ನು ಕಳಿಸು, ಇಲ್ಲದಿದ್ದರೆ ಕಾಡು ಬೆಟ್ಟಗಳೊಡನೆ ನಿನ್ನನ್ನು ನಾಶ ಮಾಡುತ್ತೇನೆ' ಎಂದು ರೇಗಿದ. ಈ ರೋದನಕ್ಕೆ, ರೇಗಾಟಕ್ಕೆ ಮೂರ್ತಿರಾಯರ ವ್ಯಾಖ್ಯಾನ ಮೆಲುಕುವಂತಿದೆ: "ಇದೆಲ್ಲ ಕಾವ್ಯವನ್ನೂ ರಾಮನನ್ನೂ ಕೆಳಮಟ್ಟಕ್ಕೆ ಇಳಿಸುವ ಉನ್ಮತ್ತ ಪ್ರಲಾಪ" (೫೮). ಇಷ್ಟಾಗಿಯೂ ಉತ್ತರ ಕಾಂಡದ ರಾಮ, ಯುದ್ಧಕಾಂಡದ ರಾಮನಿಗಿಂತ ಮೇಲಿದ್ದಾನೆ.

೩.೬. ಉತ್ತರ ಕಾಂಡವನ್ನು ಕುರಿತ ವಿಮರ್ಶೆಗೆ ಮುಗಿಸುವ ಹಂತದಲ್ಲಿ ಮೂರ್ತಿರಾಯರು ನ್ಯಾಯ ವಿತರಣೆ ಪ್ರಶ್ನೆ ಎತ್ತಿದ್ದಾರೆ, ಕವಿ ನ್ಯಾಯದ ಸಮಸ್ಯೆಗೆ ಸಾಕಾದಷ್ಟು ಗಮನ ಕೊಟ್ಟಿಲ್ಲವೆನ್ನುತ್ತಾರೆ: "ಜನರು ಏನೋ ಆಡಿಕೊಂಡರೆಂಬ ಒಂದೇ ಒಂದು ಕಾರಣಕ್ಕಾಗಿ ಸೀತೆಯನ್ನು ತ್ಯಜಿಸಿದ್ದು ಹೇಗೆ ನ್ಯಾಯವಾದೀತು? ಅವಳು ಪರಿಶುದ್ಧಳೆಂದು ರಾಮನಿಗೆ ಖಚಿತವಾಗಿ ಗೊತ್ತು. ನ್ಯಾಯ ವಿತರಣೆ ರಾಜನ ಕರ್ತವ್ಯ. ಸೀತೆಗೂ ಸಲ್ಲಬೇಡವೆ ಆ ನ್ಯಾಯ?.... ಅಪವಾದ ಭೀತಿ, ಕೀರ್ತಿಯ ಮೇಲಿನ ಆಸೆ, ಎಷ್ಟು ದೂರ ಹೋಗಬಹುದು? ತನ್ನ ಕೀರ್ತಿಗಾಗಿ ಇತರರಿಗೆ ಅನ್ಯಾಯ ಮಾಡುವುದನ್ನು ಸಮರ್ಥಿಸುವುದು ಹೇಗೆ?" (೫೯-೬೦)

೪.೦. ಪರಿಶೀಲನೆ : ಕಾಳಿದಾಸನಲ್ಲಿ

೪.೧. ಸೀತಾ ತಿರಸ್ಕರಣ ರಾಮನಿಗೆ ಶೋಭಿಸಲಿಲ್ಲವೆಂದೇ ವಾಲ್ಮೀಕಿಯ ಇಂಗಿತ. ಉತ್ತರ ಕಾಂಡದಲ್ಲಿ ರಾಮನ ಪರವಾದ ಮನೋಧರ್ಮ ಹೆಪ್ಪುಗಟ್ಟುತ್ತಿದೆಯೆಂಬುದು ನಿಜ. ಆದರೆ, ಯುದ್ಧಕಾಂಡ ಉತ್ತರ ಕಾಂಡಗಳಲ್ಲಿ ಸಹಾನುಭೂತಿ ಆತ್ಯಂತಿಕವಾಗಿ ಸೀತೆಯತ್ತ ಬೆರಳು ಮಾಡುತ್ತದೆ. ಕಾಳಿದಾಸನ ರಘುವಂಶದಲ್ಲಿ ರಾಮಾಯಣದ ಕಥೆ ಬಹಳ ಸಂಕ್ಷಿಪ್ತ ರೂಪದಲ್ಲಿದೆ. ವಾಲ್ಮೀಕಿ ಪ್ರಧಾನವಾಗಿ ಕವಿಯಾದರೂ ಯುದ್ಧ ಕಾಂಡ, ಉತ್ತರಕಾಂಡಗಳಲ್ಲಿ ಸೊಗಸಾದ ನಾಟಕ ಗುಣವಿದೆ. ಮಹಾಕವಿಯಾದ ಕಾಳಿದಾಸನು ಅದ್ವಿತೀಯ ನಾಟಕಕಾರ. ಸಹಜವಾಗಿಯೇ, ವಾಲ್ಮೀಕಿಯಲ್ಲಿ ಆನುಷಂಗಿಕವಾಗಿ ಹೊಮ್ಮಿದ ನಾಟಕಗುಣ ಕಾಳಿದಾಸನನ್ನು ಸೆಳೆದು ನಿಲ್ಲಿಸಬೇಕು. ಆದರೆ, ಆ ಪ್ರಸಂಗ ರುಚಿಸಿಲ್ಲ. ರಘುವಂಶದಲ್ಲಿ ಸೀತೆಯ ಅಗ್ನಿ ಪ್ರವೇಶದ ಕಥೆ 'ಜಾತವೇದೋ ವಿಶುದ್ಧಾಂ' ಎಂಬ ಒಂದು ಪದದಲ್ಲಿ ಮುಗಿಯುತ್ತದೆ! ಇದರಿಂದ ಕಾಳಿದಾಸ ಕಥೆಗೆ ಹ್ರಾಸ ತಂದನೆಂದು ತಿಳಿಯಬಾರದು. ಅವನು ವಾಲ್ಮೀಕಿಯಿಂದ ನೆರವು ಎರವು ಪಡೆದು ಇದನ್ನು ಬಳಸುವ, ಬೆಳೆಸುವ ಪರಿಯೇ ಬೇರೆ.

೪.೨ ರಾಮ ಸೀತೆಯರು ಲಂಕೆಯಿಂದ ಅಯೋಧ್ಯೆಗೆ ಪುಷ್ಪಕ ವಿಮಾನದಲ್ಲಿ ಬಂದುದನ್ನು ಸೊಗಸಾಗಿ ಹೇಳಿದ್ದಾನೆ. ಸೀತಾ ಪ್ರತ್ಯಾದೇಶದ ಕಹಿಯನ್ನು ಮರೆಸುವ ಪ್ರತ್ಯೌಷಧವನ್ನು ಕಲ್ಪಿಸಿದ್ದಾನೆ. "ವಿಮಾನಯಾನದ ವರ್ಣನೆಗೆ ವಾಲ್ಮೀಕಿ ಬಳಸಿಕೊಂಡ ದ್ರುತಗತಿಯ ಅನುಷ್ಟುಪ್ ಅನ್ನು ಬಿಟ್ಟು ಕಾಳಿದಾಸ ಆತುರವಿಲ್ಲದೆ ಎರಡೂ ಕಡೆಗಳಲ್ಲೂ ಕಾಣುವ ಸೊಬಗನ್ನು ಸವಿದು ಸಾವಧಾನವಾಗಿ ಸಾಗುವ ಇಂಪಾದ ಉಪಜಾತಿ ವೃತ್ತವನ್ನು ಉಪಯೋಗಿಸಿದ್ದಾನೆ. ಅದು ಯುದ್ಧಕಾಲದ ಬಾಹ್ಯ ತುಮುಲ, ಯುದ್ಧ ಮುಗಿದ ಮೇಲೆ ರಾಮಸೀತೆಯರ ಮನಸ್ಸಿನ ತುಮುಲ ಇದೆಲ್ಲವನ್ನೂ ಮರೆಸುವಂಥ ಗಾನ. ಅದರ ನಾದ ಮಾಧುರ್ಯಕ್ಕೆ ನೋವನ್ನು ಅಪಹರಿಸುವ ಗುಣವಿದೆ. ರಾಮನ ಮನಸ್ಸೂ ಪ್ರಸನ್ನವಾಗಿದೆ" (೬೩).

೪.೨.೧. ರಾಮನ ಇಂದ್ರಿಯಗಳೀಗ ಪ್ರಫುಲ್ಲವಾಗಿವೆ. ಮಡದಿಯೊಂದಿಗೆ ಸರಸವಾಗಿದ್ದಾನೆ. ಕಡಲತೀರದಿಂದ ಬೀಸಿದ ಗಾಳಿ ಕೇತಕೀ ಪುಷ್ಪರಾಗವನ್ನು ಸೀತೆಗೆ ಆಭರಣವಾಗಿಸುತ್ತಿದೆ. ವಿಮಾನದ ಕಿಟಕಿಯಿಂದ ಹೊರ ಚಾಚಿರುವ ಸೀತೆಯ ಕೈಗೆ ಮೇಘ ಮಿಂಚಿನ ಬಳೆ ತೊಡಿಸುತ್ತಿದೆ. ಗತಿಸಿದ ದಿನಗಳ ನೆನಪಿನ ಬುತ್ತಿಯಿಂದ ಸವಿ ಅಗುಳನ್ನು ಸೀತೆಯೊಂದಿಗೆ ರಾಮ ಹಂಚಿಕೊಳ್ಳುತ್ತಿದ್ದಾನೆ : 'ತಮ್ಮಿಬ್ಬರ ಮದುವೆಯ ದಿನ ಹೋಮ ಮಾಡುತ್ತಿದ್ದಾಗ ಹೋಮಾಗ್ನಿಯ ಹೊಗೆಯಿಂದ ಸೀತೆಯ ಕಣ್ಣು ಕೆಂಪಗಾಗಿ ಅವಳಿಗೆ ಅದೊಂದು ಹೊಸ ಬಗೆಯ ಸೌಂದರ್ಯವನ್ನು ಕೊಟ್ಟಿತ್ತು. ಜೊತೆಗೆ ಸಂದರ್ಭದ ಸವಿಬೇರೆ! ಅರಣ್ಯದಲ್ಲಿ ಹೊಸದಾಗಿ ಅರಳಿದ ಕಂದಲೀ ಪುಷ್ಪದ ವರ್ಣ ಸಂಪತ್ತು ರಾಮನಿಗೆ ಆ ವಿವಾಹ ಧೂಮಾರುಣ ಲೋಚನ ಶ್ರೀಯ ನೆನಪು ತಂದಿತು'. ರಾಮನ ಎದೆ ಒಲವಿನಿಂದ ತೇವಗೊಂಡಿರುವುದು ನಿಚ್ಚಳವಾಗುತ್ತದೆ. ನೆಲೆವೀಡು ಹತ್ತಿರವಾಗಿ ತಾಯ್ನಾಡಿನ, ಮನೆತನದ ಅಕ್ಕರೆ ಉಕ್ಕುತ್ತದೆ. ಚಿರಕಾಲ ಅಗಲಿದ್ದವರು ಮತ್ತೆ ಸೇರುತ್ತಾರೆ.

೪.೩. ಕಾಳಿದಾಸನ ಹೆಚ್ಚಳ ಎಲ್ಲೆಲ್ಲಿ ಹೊಳೆದಿದೆಯೊ ಅವನ್ನು ಗುರುತಿಸುವುದರೊಂದಿಗೆ ಮೂರ್ತಿರಾಯರು ಮಿತಿಯನ್ನೂ ತೋರಿಸುತ್ತಾರೆ. ರಾಮನ ಮಾರ್ದವ, ಉನ್ನತ ಭಾವನೆ, ಸೀತೆಯಲ್ಲಿರುವ ಪ್ರೇಮ- ಇವನ್ನು ಮನಗಾಣಿಸಿದ ಕಾಳಿದಾಸಕವಿ ಸೀತಾಪರಿತ್ಯಾಗವನ್ನು ಕುರಿತ ವರ್ಣನೆಯಲ್ಲಿ ರಾಮನ ಚಿತ್ರವನ್ನು ಇದೇ ಮಟ್ಟದಲ್ಲಿ ಕಾಪಾಡಿಲ್ಲ; "ಕಾಳಿದಾಸ ಈ ಕೆಲಸದಲ್ಲಿ ಯಶಸ್ವಿಯಾಗಲಿಲ್ಲ. ವಾಲ್ಮೀಕಿ, ಉತ್ತರ ಕಾಂಡಕಾರ, ಕಾಳಿದಾಸ - ಮೂವರಲ್ಲೂ ಈ ಅಸಮರ್ಪಕತೆ ಕಾಣುತ್ತದೆ. ಉತ್ತರಕಾಂಡಕಾರ ಉಳಿದಿಬ್ಬರಿಗಿಂತ ಸ್ವಲ್ಪ ಮೇಲು" (೬೬). ಹಲವು ಮನ ಮುಟ್ಟುವ ಚಿತ್ರಗಳನ್ನು ಕೊಟ್ಟ ಮೇಲೆ ಕಾಳಿದಾಸನ ಅದ್ಭುತ ಪ್ರತಿಭೆ ಓಂಕಾರದ ಶಂಖನಾದಕಿಂತ ಕಿಂಚಿದೂನ ಎಂಬಂತೆ ಇಳಿಮುಖವಾಗುವುದನ್ನು ಸೋದಾಹರಣ ವಿವರಿಸಲಾಗಿದೆ.

೪.೩.೧. "ಅಲ್ಲಿ ಒಂದು ಸಾರಿ ಎಡವಿದ ಕಾಳಿದಾಸ ಆಮೇಲೆ ಮತ್ತೆ ಮತ್ತೆ ಎಡವುತ್ತಾನೆ. ವಾಲ್ಮೀಕಿಯಲ್ಲಿರುವಂತೆ ಇಲ್ಲೂ ವಂಶದ ಮಾತು. ಉತ್ತರ ಕಾಂಡವನ್ನು ಅನುಸರಿಸಿದ ಕಾಳಿದಾಸ ಅಲ್ಲಿರುವ ಗುಣಗಳನ್ನು ಬಿಟ್ಟು ದೋಷಗಳನ್ನು ಹೆಚ್ಚಿಸಿಕೊಂಡಂತೆ ಕಾಣುತ್ತದೆ. ಉತ್ತರಕಾಂಡಕಾರ ಸೀತೆಯ ವಂಶವನ್ನು ಮರೆಯಲಿಲ್ಲ. ಕಾಳಿದಾಸ ಮರೆತ. ಅಲ್ಲದೆ ವಂಶಕ್ಕೆ ಕಳಂಕ ಬಂತಲ್ಲ ಎಂದುಕೊಂಡು ಅದನ್ನು ಸೀತೆಯ ತಲೆಗೆ ಕಟ್ಟಿ ಹೊರಡುವುದು ಯಾವನ್ಯಾಯ" (೬೮). ಸೀತೆಯ ಬಸುರಿ ಬಯಕೆಯ 'ನೆಪ ಮಾಡಿಕೊಂಡು' ವಾಲ್ಮೀಕಿಯ ಆಶ್ರಮದ ಬಳಿ ಬಿಟ್ಟುಬರಲು ರಾಮ

ಹೇಳಿದ್ದಕ್ಕೆ ವ್ಯಾಖ್ಯಾನ: "ಕಾಳಿದಾಸನಿಗೆ 'ತದ್ವ್ಯಪದೇಶನೇಯಾಂ' ಎಂಬ ಮಾತಿನ ಅನೌಚಿತ್ಯ ಹೊಳೆಯದಿದ್ದದ್ದು ಆಶ್ಚರ್ಯ!"(೬೯)

೪.೩.೨. ಕಾಡುಪಾಲಾದ ಸೀತೆ ಲಕ್ಷ್ಮಣನ ಮೂಲಕ ಹೇಳಿ ಕಳಿಸುವ ಉತ್ತರವನ್ನು ಪ್ರಸ್ತಾಪಿಸಿ, "ಸೀತೆಯ ಮಾತು ಉತ್ತರ ಕಾಂಡದಲ್ಲಿರುವುದಕ್ಕಿಂತ ಇಲ್ಲಿ ಎಷ್ಟೋ ಪಾಲು ಉತ್ತಮವಾಗಿದೆ; ವ್ಯರ್ಥಾಲಾಪ ಎನ್ನಬಹುದಾದ ಒಂದೇ ಒಂದು ಪದ ಇಲ್ಲಿಲ್ಲ. ಗಾಂಭೀರ್ಯಕ್ಕೂ ಸಂಯಮಕ್ಕೊಳಪಟ್ಟ ಭಾವೋದ್ವೇಗಕ್ಕೂ ಇದು ಮಾದರಿ.. ಅವಳು ಅತ್ತದ್ದು ಲಕ್ಷ್ಮಣ ದೃಷ್ಟಿ ಪಥದಿಂದ ದೂರವಾದ ಮೇಲೆ! (೭೦-೭೧) ವಾಲ್ಮೀಕಿ ಸೀತೆಯನ್ನು ಸಮಾಧಾನ ಪಡಿಸಿದ್ದಲ್ಲದೆ ಕಾರಣವಿಲ್ಲದ ದೋಷಕ್ಕೆ ಎಡೆಗೊಟ್ಟ ರಾಮನ ಮೇಲೆ ಕೋಪ ತೋರಿದರು : "ರಾಮನ ಇದೊಂದು ದೋಷ ಎಲ್ಲ ಸದ್ಗುಣಗಳನ್ನು ಮರೆಸುತ್ತದೆ ಎಂದು ವಾಲ್ಮೀಕಿಯ ಅಭಿಪ್ರಾಯ. ರಾಮನನ್ನು ಖಂಡಿಸಿರುವುದು ಸೀತೆಯ ಸಮಾಧಾನಕ್ಕಾಗಿ ಎಂದು ಮಲ್ಲಿನಾಥ ತನ್ನ ವ್ಯಾಖ್ಯಾನದಲ್ಲಿ ಸೂಚಿಸಿದ್ದಾನೆ. ಆದರೆ ಅದು ವಾಸ್ತವವಾಗಿ ವಾಲ್ಮೀಕಿಯ ಅಭಿಪ್ರಾಯವೂ ಹೌದು ಎಂದು ನಾವು ನಂಬಬಹುದು (೭೧) ಎಂಬ ವಿಮರ್ಶೆಯಲ್ಲಿ ಸೂಕ್ಷ್ಮಗ್ರಾಹಿತ್ವದೊಂದಿಗೆ ವ್ಯಾಪಕ ಅಧ್ಯಯನದ ಸುಳಿವೂ ಸಿಗುತ್ತದೆ.

೪.೪. ಮೂರ್ತಿರಾಯರು ಒಂದು ಸಂದರ್ಭವನ್ನು ಬಿಡಿಸಿ ನೋಡುವಾಗ, ಆಗಾಗ, ಸದೃಶ ಸಂದರ್ಭಗಳನ್ನು ಸ್ಮರಿಸುತ್ತಾರೆ, ತಾಳೆ ನೋಡುತ್ತಾರೆ. ಮೇಲು ಸೋಲುಗಳನ್ನು ಮಂಡಿಸುತ್ತಾರೆ: "ಉತ್ತರಕಾಂಡಕಾರ ರಾಮನಿಗೆ ಅದಷ್ಟು ಪುಣ್ಯವನ್ನಾದರೂ ಕೊಟ್ಟ. ಕಾಳಿದಾಸ ಅದನ್ನೇಕೆ ಕಸಿದುಕೊಂಡನೋ!... ಇಲ್ಲೂ ಕಾಳಿದಾಸ ಉತ್ತರ ಕಾಂಡವನ್ನು ಅನುಸರಿಸಿದ್ದರೆ ಚೆನ್ನಾಗಿತ್ತು... ಆದರೆ ಮುಂದಿನ ಎರಡು ಶ್ಲೋಕಗಳಲ್ಲಿ ಕಾಳಿದಾಸ ಉತ್ತರ ಕಾಂಡಕಾರನನ್ನು ಮೀರಿಸಿದ್ದಾನೆ... ಕೊನೆಯ ಘಳಿಗೆಯಲ್ಲಿ ಸೀತೆಯ ದೃಷ್ಟಿ ಗಂಡನಲ್ಲೇ ನೆಟ್ಟಿತು. ಆ ದೃಷ್ಟಿಯಲ್ಲಿ ಅದೆಷ್ಟು ಭಾವಗಳ ನೂಕುನುಗ್ಗಲಿತ್ತೋ! ಪ್ರೇಮವಂತೂ ಇದ್ದೇ ಇರಬೇಕು. 'ನಿನ್ನಂಥವನು ಹೀಗೆ ಮಾಡಬಹುದೆ' ಎಂಬ ಭಾವವೂ ಇದ್ದಿರಬೇಕು, 'ಮತ್ತೆ ನನಗೆ ರಾಮನ ಸಾಮೀಪ್ಯವಿಲ್ಲ, ಇದೇ ಕೊನೆಯ ದರ್ಶನ, ನೀನು ಕೊಟ್ಟ ಸಂಕಟವನ್ನು ಸಾಧ್ಯವಾದಷ್ಟು ತಡೆದೆ, ಇನ್ನು ಸಹಿಸಲಾರೆ. ಇವೆಲ್ಲ ಭಾವಗಳ ತುಮುಲ, ಆ ದೃಷ್ಟಿ. ಈ ಕಲ್ಪನೆ ಉತ್ತರಕಾಂಡಕಾರನಿಗೆ ಹೊಳೆದಿರಲಿಲ್ಲ... ಆದರೂ ಅವನ ನಿರೂಪಣೆ ಉತ್ತರಕಾಂಡದ ಜೊತೆಗೆ ನಿಲ್ಲಲಾರದು... ಸೀತಾ ಪರಿತ್ಯಾಗ ಪ್ರಸಂಗದಲ್ಲಿ ಅವನು ಉತ್ತರಕಾಂಡಕಾರನೊಡನೆ ಸ್ಪರ್ಧೆ ಹೂಡಿದ, ಜಯಿಸಿದನೆಂದು ಹೇಳಲಾಗುವುದಿಲ್ಲ" (೭೨-೭೪) : ಇದು ಪೂರ್ವಗ್ರಹಗಳಿರದ ತಟಸ್ಥ ಭೂಮಿಕೆಯ ವಿಮರ್ಶೆ.

೫.೦. ಪರಿಶೀಲನೆ : ಭವಭೂತಿಯಲ್ಲಿ

೫.೧. ವಾಲ್ಮೀಕಿ ರಾಮಾಯಣ, ಉತ್ತರ ಕಾಂಡ, ಕಾಳಿದಾಸನ ರಘುವಂಶ - ಇವು ನಾಟಕಗಳಲ್ಲದಿದ್ದರೂ ನಾಟಕದ ಗುಣಗಳನ್ನು ಪಡೆದಿರುವ ಶ್ರೇಷ್ಠ ಕಾವ್ಯಗಳು. ಭವಭೂತಿಯ ಉತ್ತರ ರಾಮಚರಿತವು ನಾಟಕ, ಮಾತ್ರವಲ್ಲ, ಭವಭೂತಿಯ ವಿಶಿಷ್ಟವೂ ಇರುವ ನಾಟಕ. ಸೀತಾ ಪರಿತ್ಯಾಗದ ಪ್ರಸಂಗ "ಪೂರ್ಣ ವಿಕಾಸಗೊಂಡು ಪರಿಮಳಿಸಿರುವುದು ವಾಲ್ಮೀಕಿಯಲ್ಲಲ್ಲ,

ಕಾಳಿದಾಸನಲ್ಲೂ ಅಲ್ಲ, ಭವಭೂತಿಯ ಉತ್ತರ ರಾಮಚರಿತದಲ್ಲಿ" (೭೫) ಎಂಬುದನ್ನು ದೃಷ್ಟಾಂತ ಸಹಿತ ಸ್ಥಾಪಿಸಿದ್ದಾರೆ.

೫.೨.೩. ರಾಮಸೀತೆಯರು ಲಂಕೆಯಿಂದ ಹೊರಟು ನಂದಿಗ್ರಾಮದ ಬಳಿ, ಜನಸಂದಣಿಯೆದುರು ತಾಯಿ ತಮ್ಮಂದಿರ ಜತೆ ಸೇರುವ ಪುನರಾಗಮನ ಸಮಾಗಮವನ್ನು ವಾಲ್ಮೀಕಿ ಸಂದರ್ಭೋಚಿತವಾಗಿಯೇ ವರ್ಣಿಸಿದ್ದರೂ, "ವಾಲ್ಮೀಕಿ ಚಿತ್ರಿಸಿರುವ ಈ ದೃಶ್ಯದಲ್ಲಿ ವೈಭವವಿದೆ, ಸಂಭ್ರಮವಿದೆ, ಭಕ್ತಿಯಿದೆ ಎಂದು ಒಪ್ಪಬಹುದಾದರೂ ಮಾನವೀಯತೆ ಕಡಿಮೆ, ಆತ್ಮೀಯತೆ ಕಡಿಮೆ" (೭೬) ಎನ್ನುತ್ತಾರೆ.

೫.೨.೧. ಭವಭೂತಿಯಲ್ಲಿ ನಾಟಕದ ಅಂಕದ ಪರದೆ ಮೇಲೇಳುವ ವೇಳೆಗಾಗಲೇನೆ ಪಟ್ಟಾಭಿಷೇಕದ ಸಡಗರ ಮುಗಿದಿದೆ. ರಾಮನನ್ನು ಚಿಕ್ಕಂದಿನಿಂದ ಬಲ್ಲ ವೃದ್ಧ ಕಂಚುಕಿಯೊಂದಿಗೆ ಸರಳವಾಗಿ ಬೆರೆತು ಮಾತಾಡುವುದರೊಂದಿಗೆ ನಾಟಕ ಅನಾವರಣಗೊಳ್ಳುತ್ತದೆ. ಭವಭೂತಿ ರಾಜಸತ್ತೆಗಿಂತ, ಯಶಶ್ರೀಗಿಂತ, ದಾಂಪತ್ಯ ಜೀವನಶ್ರೀಗೆ ಮನ್ನಣೆಯೆತ್ತಿದ್ದಾನೆ. ಸಹಜವಾಗಿಯೇ ಕುಟುಂಬದ ಮಾಧುರ್ಯ ಆವೃತಗೊಂಡಿದೆ. ಋಷ್ಯಶೃಂಗ ಯಜ್ಞ ಕೈಗೊಂಡಿರುವ ಸನ್ನಿವೇಶವೊಂದನ್ನು ಭವಭೂತಿ ಕಲ್ಪಿಸಿದ್ದಾನೆ. ಗರ್ಭಿಣಿ ಸೀತೆಯನ್ನು ತಂದೆ ಜನಕ ಹರಸಿದ್ದಾನೆ. ವಸಿಷ್ಠನೂ ವೀರಪುತ್ರರ ತಾಯಿಯಾಗುವಂತೆ ಆಶೀರ್ವಾದ ಕಳಿಸಿದ್ದಾನೆ. ಇದರಲ್ಲಿಯೂ ಮೂರ್ತಿರಾಯರಿಗೆ ಅರೆಕೊರೆಗಳು ಕಾಣುತ್ತವೆ: ಸೀತೆ ವೀರಪುತ್ರರ ತಾಯಿಯಾದರೂ ಸೌಖ್ಯವನ್ನು ಕಾಣದಿರಬಹುದು, ಅದರಿಂದ ಆಶೀರ್ವಚನದಲ್ಲಿ 'ಸಕಲ ಸೌಭಾಗ್ಯವೂ ಲಭಿಸಲಿ' ಎಂಬ ಮಾತನ್ನೂ ಸೇರಿಸಿದ್ದರೆ ಚೆನ್ನಾಗಿತ್ತು, ಋಷಿಗಳ ಮಾತು ವ್ಯರ್ಥವಾಗುವುದಿಲ್ಲ. (೭೮-೭೯)

೫.೩. ಇಲ್ಲಿಯ ರಾಮನೂ ಲೋಕ ಪೂಜಿತನಾಗುವ ಅಭಿಲಾಷೆಯವನೆಂಬುದು ಸರಿ. ಆದರೆ ಈತ ಸೀತಾಪತಿ! ಲೋಕಾರಾಧನೆಗಾಗಿ ಸ್ವಲ್ಪವೂ ವ್ಯಥೆಯಿಲ್ಲದೆ ಸ್ನೇಹ, ದಯೆ, ಸೌಖ್ಯ-ಎಲ್ಲವನ್ನೂ ಬಿಟ್ಟೇನು, ಇನ್ನು ಜನಕಾತ್ಮಜೆಯ ಮಾತೇನು' ಎಂದು ಸೀತೆಗೆ ಕಡೆಯ ಸ್ಥಾನವನ್ನು ಉತ್ತರ ಕಾಂಡದಲ್ಲಿ ಕೊಟ್ಟಿದ್ದರೆ, ಭವಭೂತಿಯ ರಾಮ ಸೀತೆಗೆ ಮೊದಲ ಮಣೆ ಹಾಕಿ ಮನ್ನಣೆ ಕೊಟ್ಟಿದ್ದಾನೆ. ರಾಮಾಯಣದ ಕಥಾಚಿತ್ರಪಟವನ್ನು ಕಲ್ಪಿಸಿರುವುದೊಂದು ಇಲ್ಲಿನ ವಿಶೇಷ. ಅಗ್ನಿ ಶುದ್ಧಿಯ ಸಂದರ್ಭಕ್ಕೆ 'ಹುಟ್ಟಿನಿಂದಲೇ ಪರಿಶುದ್ಧಳಾದವಳಿಗೆ ಬೇರೆ ಶುದ್ಧಿಯೆಂದರೇನು!' ಎನ್ನುತ್ತಾನೆ. ಇಂಥ ಅನುರಣನ ಕೊಡುವ, ಅಂತರಾಳವನ್ನು ಮುಟ್ಟುವ, ಗಂಭೀರ ಭಾವ ಪ್ರಚೋದಿಸುವ ಮಾತುಗಳು ಮಾಲೆಯಾಗಿ ಬರುತ್ತವೆ. ಸೀತೆಗಾಗಿ, ಕುಲುಕದೆ ಸುಖಕರವಾಗಿ ಚಲಿಸುವ ರಥವನ್ನು ಸಿದ್ಧ ಮಾಡಲು ಈ ರಾಮ ಹೇಳುತ್ತಾನೆ: "ಸೀತೆ ಪೂರ್ಣ ಗರ್ಭಿಣಿ, ರಥದ ಚಲನೆಯಿಂದ ಅವಳಿಗೆ ಆಯಾಸವಾಗಬಾರದು, ಅವಳ ಪ್ರಯಾಣ ಹಿತವಾಗುವಂತೆ ಎಚ್ಚರಿಕೆ ವಹಿಸಬೇಕು ಎಂಬ ಯೋಚನೆ ಉತ್ತರಕಾಂಡಕಾರನ ರಾಮನಿಗಾಗಲಿ ಕಾಳಿದಾಸನ ರಾಮನಿಗಾಗಲಿ ಬರಲಿಲ್ಲ! ಅರಿಬ್ಬರಿಗಿಂತ ಚೆನ್ನಾಗಿ ಭವಭೂತಿ ರಾಮನ ಮನಸ್ಸನ್ನು ಒಳಹೊಕ್ಕು ನೋಡಿದ್ದಾನೆ" (೮೩)

೫.೪. ತನ್ನೆದೆಗೆ ಒರಗಿ ನಿದ್ದೆಯಲ್ಲಿರುವ ಸೀತೆಯನ್ನು ಅಕ್ಷಿ ತುಂಬಿ ನೋಡುತ್ತ ಆಡುವ

ರಾಮನ ಮಾತುಗಳು ಪರಿಭಾವ್ಯವಾಗಿವೆ : ಇವಳು ನನ್ನ ಮನೆಯ ಲಕ್ಷ್ಮಿ, ನನ್ನ ಕಣ್ಣಿಗೆ ಅಮೃತ ಲೇಪ, ಇವಳನ್ನು ಮುಟ್ಟುವುದು ಚಂದನರಸದಂತೆ ಹಿತ. ಇವಳ ತೋಳು ತಂಪಾದ ಮುತ್ತಿನ ಸರ. ಪ್ರಿಯವಲ್ಲದ್ದು ಏನು ತಾನೆ ಇದೆ ಇವಳಲ್ಲಿ, ಇವಳ ಅಗಲಿಕೆ ತಾಳಲಾಗದ್ದು ಎಂಬುದೊಂದನ್ನು ಮರೆತರೆ! ನಲಿವು ನೋವುಗಳಲ್ಲಿ ಅದ್ವೈತ. ಬದುಕಿನ ಎಲ್ಲ ಪರಿಸ್ಥಿತಿಗಳಲ್ಲೂ ಅನುಕೂಲವಾಗಿ ಅನುಸರಿಸತಕ್ಕದ್ದು. ಹೃದಯಕ್ಕೆ ನೆಮ್ಮದಿ ಕೊಡುವಂಥಾದ್ದು. ಮುಪ್ಪಿನಲ್ಲೂ ಸವಿ ಇಳಿಯದಂಥಾದ್ದು. ಕಾಲ ಪರಿದಂತೆಲ್ಲ ಇಬ್ಬರ ನಡುವೆ ಇದ್ದ ತಡೆಗಳು ಇಲ್ಲವಾಗಿ ಮಾಗಿ ಪ್ರೇಮ ಸಾರವಾಗಿ ಪರಿಣಮಿಸುವುದು. ಇಂಥ ಅಪೂರ್ವ ದಾಂಪತ್ಯ ಯಾರಿಗೆ, ಹೇಗೆ ಲಭಿಸುತ್ತದೆಯೋ! ಅದನ್ನು ಪಡೆದವನು ಧನ್ಯ! ಭವಭೂತಿಯ ಈ ಚಿತ್ರಣ ದೀರ್ಘದಾಂಪತ್ಯದ ಸಖೀಗೀತ! ಇದಕ್ಕೆ ಮೂರ್ತಿರಾಯರ ಪ್ರತಿಕ್ರಿಯೆ ಚಿಂತನೀಯ: "ದಾಂಪತ್ಯ ಪ್ರೇಮ ಪರಾಕಾಷ್ಠೆಯನ್ನು ಇದಕ್ಕಿಂತ ಸುಂದರವಾಗಿಯೂ ಅರ್ಥಪೂರ್ಣವಾಗಿಯೂ ಬಣ್ಣಿಸಿದ್ದನ್ನು ನಾನು ಇನ್ನೆಲ್ಲೂ ಕಂಡಿಲ್ಲ... ಎರಡು ಹೃದಯಗಳು ಬೆರೆಯುವುದೆಂದರೆ ಒಂದು ದಿನದ ಕೆಲಸವಲ್ಲ! ದೀರ್ಘಕಾಲ ಸಹಜೀವನ ನಡೆಸಿದ್ದರಿಂದಾಗಿ ಇಬ್ಬರ ನಡುವೆ ಇರುವ ತೆರೆಗಳೆಲ್ಲ ಕಳಚಿ ಬಿದ್ದ ಮೇಲೆ ಆ ಪ್ರೇಮ ಪರಿಣತವಾಗುತ್ತದೆ" (೮೫). ನಿಡುಬಾಳಿನ ಗುಟ್ಟನ್ನು ನೂರರ ಸರದಾರ ಮೂರ್ತಿರಾಯರಲ್ಲದೆ ಬೇರೆ ಯಾರು ಹೇಳಬೇಕು?

೫.೫. ಭವಭೂತಿ ಸರ್ವಸ್ವಾತಂತ್ರ್ಯ ವಹಿಸಿ ಸಂಯೋಜಿಸಿರುವ ನಾಟಕ ವ್ಯವಸ್ಥೆಯಲ್ಲಿ ಪೊಳ್ಳು ಅಪಲಾಪಗಳಿಗೆ ಎಡೆಯಿಲ್ಲ. ವಾಲ್ಮೀಕಿ, ಕಾಳಿದಾಸರ ನಿರೂಪಣೆ ಕುರಿತು ಎತ್ತಬಹುದಾದ ಆಕ್ಷೇಪಣೆಗಳಿಗೆಲ್ಲ ಭವಭೂತಿ ಉತ್ತರವನ್ನು ಒದಗಿಸಿದ್ದಾನೆ. ರಾಮನ ಘನತೆಯನ್ನು ಬಿಂಬಿಸುವುದರಲ್ಲೂ ಕಾವ್ಯಗುಣದಲ್ಲೂ ಎರಡನೆಯದಿಲ್ಲವೆಂಬಂಥ ಒಂದನೆಯ ಅಂಕ, ಭವಭೂತಿಯ ಪ್ರತಿಭೆಯ ಪುತ್ಥಳಿ. ಅದರ ಮುಂದಿನ ಅಂಕಗಳಲ್ಲಿರುವುದು, ಸೀತಾಪರಿತ್ಯಾಗವಾಗಿ ಹನ್ನೆರಡು ವರ್ಷಗಳಾದ ಮೇಲಿನ ಕಥೆ. ಸೀತೆಯನ್ನು ನೆನೆದು ಮೂರ್ಛೆ ಹೋದ ರಾಮನಿಗೆ, ಗಂಗೆಯ ವರದಿಂದ ಇತರರ ಕಣ್ಣಿಗೆ ಕಾಣದಿರುವ ಶಕ್ತಿ ಪಡೆದ ಸೀತೆ ತನ್ನ ಸ್ಪರ್ಶದಿಂದ ಚೈತನ್ಯ ಬರಿಸುತ್ತಾಳೆ; 'ಇದೇನು ಸೀತೆಯ ಸ್ಪರ್ಶದ ಭಾಗ್ಯ ನನಗೆ ಬಂತೆ' ಎನ್ನುತ್ತಾನೆ ಈ ರಾಮ!: "ಬಹುಶಃ ಈ ದೃಶ್ಯದಲ್ಲಿ ಭವಭೂತಿ ಭಾಸನಿಂದ ಪ್ರಭಾವಿತನಾಗಿದ್ದಾನೆ. ಸ್ವಪ್ನವಾಸವದತ್ತೆಯ ಸ್ವಪ್ನ ದೃಶ್ಯದಲ್ಲಿ ವಾಸವದತ್ತೆ ಹತ್ತಿರ ಇರುವುದು ವತ್ಸರಾಜನಿಗೆ ತಿಳಿಯದಷ್ಟೆ... ಎರಡು ನಾಟಕಗಳಲ್ಲೂ ಈ ಕಲ್ಪನೆಗಳ ಉದ್ದೇಶ ಒಂದೇ: ಗಂಡನಿಗೆ ನನ್ನ ಮೇಲಿದ್ದ ಪ್ರೇಮ ಈಗಲೂ ಹಿಂದಿನಂತೆಯೇ ಇದೆ ಎಂಬ ವಿಶ್ವಾಸವನ್ನು ಹೆಂಡತಿಯಲ್ಲಿ ಮೂಡಿಸಬೇಕು. ಈ ಗಂಡಂದಿರ ಪ್ರೇಮದ ವಿಷಯದಲ್ಲಿ ಹೆಂಡತಿಯರು ಶಂಕೆ ಪಡುವುದಕ್ಕೆ ಕಾರಣವಿದೆ. ಅವರು ಬೇಕಾದಷ್ಟು ಪ್ರೇಮಾಲಾಪ ಮಾಡಬಹುದು, ಅದನ್ನು ನಂಬುವುದು ಹೇಗೆ?" (೯೫)

೫.೬. ಇಲ್ಲಿಂದ ಮುಂದೆ ಭವಭೂತಿ ಮಾನವ ಹೃದಯದ ವಿಚಿತ್ರ ವ್ಯಾಪಾರವನ್ನು ಸೂಕ್ಷ್ಮವಾಗಿ ಗ್ರಹಿಸಿ ವಿಶ್ಲೇಷಿಸುವ ಕ್ರಮ ಶಕ್ತಿಯನ್ನು ನಿದರ್ಶನಗಳನ್ನಿತ್ತು ನಿಲ್ಲಿಸಲಾಗಿದೆ. ರಾಮ ಅಶ್ವಮೇಧವನ್ನು ಆಚರಿಸಲಿರುವುದು ತಿಳಿದು ಸೀತೆ ವಿಚಲಿತಳಾಗುವಳು: ಅಶ್ವಮೇಧವನ್ನು ಸಹಧರ್ಮಿಣಿಯಿಲ್ಲದೆ ಆಚರಿಸುವ ಹಾಗಿಲ್ಲ. ಸೀತೆಗೆ ತನ್ನ ಸುವರ್ಣ ಪ್ರತಿಮೆಯನ್ನು ಮಾಡಿಸಿಟ್ಟಿರುವುದು

ತಿಳಿದಾಗ ಆತಂಕ ಆವಿಯಾಗುತ್ತದೆ, ಆನಂದ ಆವರಿಸುತ್ತದೆ: "ಈ ಅಂಕವನ್ನು ಭವಭೂತಿ ಬಹಳ ಎಚ್ಚರಿಕೆಯಿಂದ ಬರೆದಿದ್ದಾನೆ... ರಾಮ ಒಂದೇ ಒಂದು ಸಲವಾದರೂ ಜನತೆಯನ್ನು ದೂರಿಲ್ಲ; ಪೌರಜನರನ್ನು 'ಹೇ ಭಗವಂತಃ' ಎಂದು ಸಂಬೋಧಿಸಿ ಹೇಳುತ್ತಾನೆ. ರಾಮ ಏನೇ ಮಾಡಿರಲಿ, ಅದಕ್ಕೆ ಕಾರಣ ನನ್ನ ವಿಷಯದಲ್ಲಿ ಸಂಶಯವಲ್ಲ, ಪ್ರೇಮದ ಅಭಾವವಲ್ಲ ಎಂಬ ದೃಢವಾದ ನಂಬಿಕೆ ಸೀತೆಗೆ ಬರಬೇಕು. ಉತ್ತರಕಾಂಡದಲ್ಲೂ ರಘುವಂಶದಲ್ಲೂ ಅವಳಿಗೆ ಅಂಥ ನಂಬಿಕೆ ಬರಲಿಲ್ಲ. ಹಿಂದಿನ ಕವಿಗಳಿಬ್ಬರೂ ಮಾಡಿದ ತಪ್ಪನ್ನು ಭವಭೂತಿ ಸರಿಪಡಿಸಿದ್ದಾನೆ... ಉತ್ತರ ರಾಮಚರಿತೆಯ ರಾಮನಿಗೆ ನಮ್ಮಿಂದ ಸಲ್ಲುವುದು ಕನಿಕರವೇ ಹೊರತು ಕೋಪವಲ್ಲ" (೯೯-೧೦೩).

೫.೭. ಇದರ ಫಲಶ್ರುತಿ ಪರಿಣಾಮಕಾರಿಯಾದದ್ದು: "ರಾಮ ಸೀತೆಯರ ಯೌವನದಲ್ಲಿ ೧೪ ವರ್ಷ ವನವಾಸದಲ್ಲೂ ವಿರಹದಲ್ಲೂ ರಾಕ್ಷಸ ಸಂಹಾರದಲ್ಲೂ ಕಳೆಯಿತು. ಮತ್ತೆ ೧೨ ವರ್ಷ ಅದಕ್ಕಿಂತ ಕಷ್ಟಕರವಾದ ಸಂಕಟದಲ್ಲಿ ಕಳೆಯಿತು. ಈ ಅವಧಿಯನ್ನು ಯಾವ ಕರುಣಾರ್ದ್ರ ಚಿತ್ತದ ವಿಧಿ ತುಂಬಿಕೊಟ್ಟೀತು!... ರಾಮಸೀತೆಯರ ಸಂಕಟದ ಕತೆ ಯಾವ ಉತ್ಪ್ರೇಕ್ಷೆಯೂ ಇಲ್ಲದೆ ಕೋಟ್ಯಂತರ ಜನರ ಸಂಕಟವನ್ನು ಶಮನ ಮಾಡಿದೆ, ಅವರಿಗೆ ನೆಮ್ಮದಿ ಕೊಟ್ಟಿದೆ, ಅದಕ್ಕಿಂತಲೂ ಹೆಚ್ಚಾಗಿ ಮನಃ ಪ್ರಸಾದ ಕೊಟ್ಟಿದೆ. ನಮ್ಮ ಜೀವನವಾಹಿನಿ ಹರಿಯಬೇಕಾದದ್ದು ಹುಚ್ಚು ಹೊಳೆಯಂತೆ ವೇಗದಿಂದಲ್ಲ, ಆರ್ಭಟದಿಂದಲ್ಲ. ವಾಲ್ಮೀಕಿಯ ಮಾತನ್ನೇ ಉಪಯೋಗಿಸಬಹುದಾದರೆ, ಅದು ನಮ್ಮ ಪುಣ್ಯ ನದಿಗಳಂತೆ 'ಪ್ರಸನ್ನ ಸಲಿಲಾ ಶಿವಾ' ಆಗಿ ಹರಿಯಬೇಕು. ಇದು ರಾಮಾಯಣದ ಕಥೆಯಿಂದ ನಮಗಾಗುವ ಪ್ರಯೋಜನ... ಈ ಸೀತಾರಾಮರು ಎಲ್ಲಿಯುವರೋ, ದೇವರೋ ಮಾನವರೋ, ಇದ್ದರೋ ಇಲ್ಲವೋ-ಅಂತೂ ಅವರು ಬಂದು ಹೃದಯದಲ್ಲಿ ನೆಲಸಿ ನಮ್ಮ ಆತ್ಮೋದ್ಧಾರಕ್ಕೆ ಕಾರಣರಾಗಿದ್ದಾರೆ". (೧೦೮-೦೯)

೬.೬.೦. ಪರಿಶೀಲನೆ : ಮೇಘದೂತದಲ್ಲಿ ಕಾವ್ಯ ಪ್ರತಿಮೆ

೬.೧. ಕಾಳಿದಾಸನ ಎರಡು ಕೃತಿಗಳ ವಿಮರ್ಶೆ ಇಲ್ಲಿ ಸೇರ್ಪಡೆಯಾಗಿದೆ: ಒಂದು, ರಘುವಂಶ, ಇನ್ನೊಂದು ಮೇಘದೂತ. ಒಂದು ಮಹಾಕಾವ್ಯ, ಇನ್ನೊಂದು ಮಹತ್ಕಾವ್ಯ. ಮೇಘದೂತದಲ್ಲಿ ಬರುವ ಪ್ರತಿಮೆಗಳ ಸ್ವರೂಪ ಮತ್ತು ಯಶಸ್ವಿತೆಯನ್ನು ಸಂಗ್ರಹವಾಗಿ ಪ್ರಾಯೋಗಿಕ ವಿಮರ್ಶೆ ಮಾದರಿಯಲ್ಲಿ ವಿವೇಚಿಸಲಾಗಿದೆ.

೬.೨. ಮೇಘದೂತದ ಪ್ರತಿಮೆಗಳಲ್ಲಿ "ಸಮಯರೂಪಕಗಳ ನೆರವು ಪಡೆದು ತಿನಿಕಿ ತಿನಿಕಿ ಹೊಂದದಿರುವ ಅಂಶಗಳನ್ನು ಹೊಂದಿಸಿ, ಒಂದು ಜಿಗ್‌ಸಾ ಒಗಟೆಯನ್ನು ಬಿಡಿಸಿ" (೧೧೯) ಚಮತ್ಕಾರದಲ್ಲಿ ಮುಗಿಯುವಂಥವೂ ಇವೆಯೆಂಬುದನ್ನು ಮೊದಲು ತೋರಿಸುತ್ತಾರೆ.

೬.೨.೧. ಆಮೇಲೆ ಅದಕ್ಕಿಂತ ಆಕರ್ಷಕವಾದ, ಕಾವ್ಯೋಚಿತ ಹೊಳಪಿರುವ ಪ್ರತಿಮೆಗಳನ್ನು ಚರ್ಚಿಸುತ್ತಾರೆ: "ಆದರೂ ಇದನ್ನು ಉತ್ತಮದರ್ಜೆಯ ಕವಿತೆಯೆನ್ನಲಾಗುವುದಿಲ್ಲ. ಇದರಲ್ಲಿ ಕ್ಲೀಷೆಯ ಕಳಂಕವಿದೆ, ಇಲ್ಲಿರುವ ಚಿತ್ರಗಳು ಒಂದಾನೊಂದು ಕಾಲದಲ್ಲಿ ಹೊಚ್ಚ ಹೊಸ ಕಳೆಯಿಂದ ಮೆರೆದಿದ್ದಿರಬೇಕು, ಈಗ ಬಳಕೆಯಿಂದ ಮಾಸಲಾಗಿವೆ. ಕಾಳಿದಾಸ ಯಾರ ಟಂಕಸಾಲೆಯಲ್ಲೋ

ಮುದ್ರಿತವಾದ, ಸ್ವಲ್ಪ ಸವೆದೂ ಇರುವ ನಾಣ್ಯವನ್ನು ಬಳಸಿ ಅಷ್ಟರಲ್ಲೇ ತೃಪ್ತನಾಗಿದ್ದಾನೆ. ತಾನೇ. ನಾಣ್ಯವನ್ನು ಎರಕಹೊಯ್ದು ರೂಪಿಸಿಲ್ಲ... ದೊಡ್ಡ ಕವಿಯಾದವನೊಬ್ಬ ಸೋಮಾರಿತನಕ್ಕೆ ತುತ್ತಾಗಿದ್ದಾಗ ಬರೆದ ಕವನಗಳು ಎನ್ನಿಸುತ್ತದೆ". (೧೨೧-೨೨)

೬.೩. ಮತ್ತೆ ಮುಂದುವರಿದ ಹಂತದಲ್ಲಿ ಇನ್ನೂ ಉತ್ತಮವಾದ, "ತಂತಿಯನ್ನು ಮಿಡಿದಾಗ ಆ ನಾದದ ಹಿಂದೆ ಅನುರಣನ ಹೊರಡುವಂತೆ ಕಾಳಿದಾಸನ ಚಿತ್ರದಿಂದ ಅನುಚಿತ್ರ ಹೊರಡು"ವ ಪ್ರತಿಮೆಯನ್ನು ಗುರುತಿಸಲಾಗಿದೆ.(೧೨೩)

೬.೪. ಕಡೆಯ ಘಟ್ಟದಲ್ಲಿ "ಇನ್ನೂ ಹೆಚ್ಚು ರಸ ಸಂಪತ್ತುಳ್ಳ, ಅರ್ಥದ ದೃಷ್ಟಿಯಿಂದಲೂ ಪ್ರತಿಮಾ ಸೃಷ್ಟಿ ವಿಧಾನದ ದೃಷ್ಟಿಯಿಂದಲೂ ಹೆಚ್ಚು ಆಸಕ್ತಿಯನ್ನು ಕೆರಳಿಸುವ ಸಂಕೀರ್ಣ ಪ್ರತಿಮೆಯನ್ನು" (೧೨೪) ವಿಶ್ಲೇಷಿಸುತ್ತಾರೆ. ಗೌರಿಯ ಹುಬ್ಬು ಗಂಟಿಕ್ಕಿದ ಮುಖವನ್ನು ನೋಡಿ, ಹಾಸ್ಯ ಮಾಡಿ, ನೊರೆ ನಗುವನ್ನು ನಗುತ್ತ ಚಂದ್ರಕಿರಣ ಸ್ಪರ್ಶದಿಂದಾಗಿ ಹೊಳೆಯುವ ಅಲೆಗೈಗಳಿಂದ ಶಿವನ ಜುಟ್ಟನ್ನು ಜಗ್ಗಿಸಿದವಳು, ಆ ಗಂಗೆ - ಎಂದು ಯಕ್ಷನು ಮೇಘಕ್ಕೆ ಹೇಳುವ ಪರಿಚಯದ ಮಾತುಗಳ ಸೊಗಸು ಸ್ವಾರಸ್ಯಗಳನ್ನು ವಿವರಿಸುತ್ತಾರೆ: "ಕಾಳಿದಾಸನ ಇತರ ಕಾವ್ಯಗಳಲ್ಲೂ ನಾಟಕಗಳಲ್ಲೂ ಶಿವನ ಪ್ರಸ್ತಾಪ ಬರುತ್ತದೆಯಷ್ಟೆ. ಅವುಗಳ ಆಧಾರದ ಮೇಲೆ ಅವನಿಗೆ ಶಿವನ ವಿಷಯದಲ್ಲಿ ಅಪರಿಮಿತವಾದ ಭಕ್ತಿಯಿತ್ತು ಎಂದು ಧಾರಾಳವಾಗಿ ಹೇಳಬಹುದು. ಶಿವ ಅವನಿಗೆ ಇಷ್ಟ ದೈವ, ವಿಶ್ವದಲ್ಲಿ ಅತ್ಯುನ್ನತವಾದದ್ದರ, ಭವ್ಯವಾದದ್ದರ ಪ್ರತೀಕ. ಮುಖ್ಯವಾಗಿ ಶಿವ ಕಾಮನನ್ನು ಸುಟ್ಟವನು! ಇಷ್ಟಾದರೂ ಕವಿ ಅವನನ್ನು, ಈ ಸಂದರ್ಭದ ಮಟ್ಟಿಗೆ ಇಳಿಸಿ ಗಂಗೆಯನ್ನು ಏರಿಸಿದ್ದಾನೆ. ಶಿವ ಪಾರ್ವತಿಯರು ವಾಕ್ಕು ಮತ್ತು ಅರ್ಥ ಇವೆರಡರಂತೆ ಅಭಿನ್ನವಾದವರು. ಆದರೆ ಕಾಳಿದಾಸ ಪ್ರತಿಭೆಯ ಆಜ್ಞೆಗೆ ಮಣಿದು ಆ ಅಭಿನ್ನತೆಯನ್ನು ಒಡೆದದ್ದರಿಂದಾಗಿ ಚಿತ್ರ ಮತ್ತಷ್ಟು ಕಂಗೊಳಿಸುತ್ತದೆ. ದೈವಿಕವಾದದ್ದಕ್ಕೂ ಮಾನವಿಕವಾದದ್ದಕ್ಕೂ ಇರುವ ಅಂತರ ಕಡಮೆಯಾಗಿ ಆ ದಿವ್ಯದಂಪತಿಗಳು ನಮಗೆ ಹತ್ತಿರವಾಗುತ್ತಾರೆ". (೧೨೬-೨೭)

೬.೫. ಮೇಘದೂತದಲ್ಲಿ ಕಾವ್ಯ ಪ್ರತಿಮೆಗಳ ಆಯಾಮಗಳನ್ನು ತಿಳಿಸಿ ಭರತ ವಾಕ್ಯ ಬರೆಯುತ್ತಾರೆ: "ಮನಶ್ಶಾಸ್ತ್ರ ಎಷ್ಟೇ ಮುಂದುವರಿದಿದ್ದರೂ ಅಜಾಗ್ರತ ಮನಸ್ಸಿನ ಕ್ರಿಯೆಯನ್ನು ವಿಶ್ಲೇಷಿಸಿ, ವರ್ಗೀಕರಿಸಿ, ಅದರ ವಿವರಗಳನ್ನು ಮಂದಟ್ಟು ಮಾಡಿಕೊಡಲಾರದು; ಆಂದೋಲನದ ಪುನಃ ಸೃಷ್ಟಿಯನ್ನಂತೂ ಮಾಡಲೇ ಆರದು. ಕವಿಯ ಅಂತರ್ದೃಷ್ಟಿ ಮನಶ್ಶಾಸ್ತ್ರಕಾರ ತಯಾರು ಮಾಡಬಹುದಾದ ಸಾಧನಗಳಿಗಿಂತಲೂ ಶಕ್ತಿಯುತವಾದದ್ದು. ಆದ್ದರಿಂದ ಮಾನವ ಹೃದಯದ ಪರಿಚಯಬೇಕು ಎನ್ನುವವರಿಗೆ ಕಾವ್ಯಾಧ್ಯಯನ ಯಶಸ್ವಿಯಾಗಿ ನೆರವು ಕೊಡಬಲ್ಲದು". (೧೩೦)

೭.೦. ಪರಿಶೀಲನೆ : ಮಹಾಭಾರತದಲ್ಲಿ ಕೇಡು ಎಂಬುದರ ಸಮಸ್ಯೆ

೭.೧.೨. ಈ ಚಿಕ್ಕ ಪುಸ್ತಿಕೆ ಎತ್ತುವ ಸಮಸ್ಯೆಗಳು ಮೌಲಿಕವಾಗಿವೆ, ಪ್ರಸ್ತುತವಾಗಿವೆ. 'ಪೂರ್ವಸೂರಿಗಳೊಡನೆ' ಪುಸ್ತಕದಲ್ಲಿ ರಾಮಾಯಣ ಕೇಂದ್ರಿತ ಘಟನೆಯೊಂದರ ಸುತ್ತ ಹರಿಯಬಿಟ್ಟ ಚಿಂತನ ತರಂಗಗಳಿವೆ. ಇಲ್ಲಿ ಮಹಾಭಾರತದ ಘಟನೆಗಳಲ್ಲಿ ತಳಕು ಹಾಕಿಕೊಂಡಿರುವ ಕೇಡನ್ನು

ಕುರಿತ ಪರಿಭಾವನೆಯಿದೆ. ಹೀಗಾಗಿ ಇವೆರಡೂ ಕೃತಿಗಳಲ್ಲಿ ಹೊಳಲು ಗೊಡುವ ವಿಚಾರಧಾರೆ ಭಾರತೀಯ ಪರಂಪರೆಯ ಸಾರ ಸರ್ವಸ್ವವಾದ ಎರಡು ಮಹತ್ಕೃತಿಗಳ ಜೀವನಾಡಿಯನ್ನು ಹಿಡಿದಿದೆ, ಕವಿ ಹೃದಯಕ್ಕೆ ಹತ್ತಿರ ನಿಂತು ಮಾತಾಡಿದೆ.

೭.೨. "ಮಹಾಭಾರತದ ಪಾತ್ರಗಳಲ್ಲಿ ಹೆಚ್ಚು ಕಡಮೆ ಎಲ್ಲರೂ ಒಂದಲ್ಲ ಒಂದು ಸಾರಿ, ಒಂದಲ್ಲ ಒಂದು ಸಂದರ್ಭದಲ್ಲಿ ಕೇಡಿಗತನಕ್ಕೆ ಇಳಿಯುತ್ತಾರೆ, ವಿದುರನೊಬ್ಬ ಈ ಮಾತಿಗೆ ವಿನಾಯಿತಿ. ಈ ಲೇಖನದಲ್ಲಿ ಮಾಡಿರುವ ಪ್ರಯತ್ನ, ಕೇಡು ಅವರನ್ನು ಬಳಸಿಕೊಳ್ಳುವ ರೀತಿ" (೭) ಕುರಿತ ವಿವೇಚನೆ.

೭.೩. ಕುರುಕುಲದ ಇತಿಹಾಸದುದ್ದಕ್ಕೂ ಕೇಡು ಮಾಡಿರುವ, ಆಡಿರುವ ಪರಿಣಾಮ ಪ್ರಸಂಗಗಳನ್ನು, ಲೈಂಗಿಕ ಲಂಪಟತ್ವ, ಸ್ವಾರ್ಥ, ಹೃದಯ ಶೂನ್ಯತೆ ಬೆರೆತಿರುವುದೂ ಸೇರಿ, ಸೂಚಿಸಿದ್ದಾರೆ. ಪರಾಶರ, ಮತ್ಸ್ಯಗಂಧಿ, ಮಗನ ಜವ್ವನ ಕಸಿಯುವ ಯಯಾತಿ, ಮಗನ ಒಲವಿನ ಬಾಳನ್ನೂ ಸಿಂಹಾಸನವನ್ನೂ ಕಿತ್ತುಕೊಂಡ ಶಂತನು, ಇವರೆಲ್ಲರ ದೌರ್ಬಲ್ಯಗಳನ್ನು ಚರ್ಚಿಸುತ್ತಾರೆ.

೭.೪. ಮಹಾಭಾರತದಲ್ಲಿ ಭೀಷ್ಮನಿಗಿಂತ ಉನ್ನತರು ಇನ್ನಿಲ್ಲ. ಹೀಗಿದ್ದೂ ಭೀಷ್ಮನ ಮೇಲೆ, ಅವನ ಅರಿವಿಲ್ಲದೆಯೇ ಕುರುವಂಶದ ನಾಶದ ಜವಾಬ್ದಾರಿಯೂ ಒರಗಿ, ಕೇಡಿನ ಅಧಿದೇವತೆ ತನ್ನಕೈ ಬೆರಳುಗಳನ್ನು ಹೆಣೆದುಕೊಂಡು ಮೆಲುನಗೆ ನಗುವಂತಾಯಿತು: "ಕಲ್ಪವೃಕ್ಷದಿಂದ ಕಂಟಕವನ್ನು ಪಡೆದಂತಾಯಿತು, ಭೀಷ್ಮನ ತ್ಯಾಗದ ಕಥೆ" (೧೨).

೭.೫.೧. "ದುಶ್ಯಾಸನ ದ್ರೌಪದಿಯ ಸೀರೆಯನ್ನು ಎಳೆಯುತ್ತಿದ್ದಾಗ ಭೀಷ್ಮ ಧರ್ಮ ಸೂಕ್ಷ್ಮದ ಮಾತಾಡುತ್ತಿದ್ದನೇ ಹೊರತು ಅವನನ್ನು ತಡೆಯಲಿಲ್ಲವೇಕೆ?.... ಧರ್ಮ ಸೂಕ್ಷ್ಮವನ್ನು ಕುರಿತಂತೆ ಚಾಪೆಯ ಕೆಳಗೋ ರಂಗೋಲಿಯ ಕೆಳಗೋ ನುಸಿಯುವ ಚಮತ್ಕಾರ ಪ್ರದರ್ಶನವಲ್ಲ, ಆ ಸಂದರ್ಭಕ್ಕೆ ಉಚಿತವಾದ ಪ್ರತಿಕ್ರಿಯೆ : ಸೀರೆ ಸೆಳೆಯುತ್ತಿದ್ದ ದುಶ್ಶ್ಯಾಸನನನ್ನು ಹೊಡೆದುರುಳಿಸುವುದು" (೧೨ ೧೪).

೭.೫.೨. ಯುದ್ಧದ ಘೋಷಣೆಯಾದ ಮೇಲೂ ಭೀಷ್ಮನ ನಡೆವಳಿಕೆ ಪ್ರಶ್ನಾತೀತವೇನಲ್ಲ: "ಒಂದು ವೇಳೆ ಭೀಷ್ಮನಿಗೆ ಪಾಂಡವ ಪಕ್ಷಕ್ಕೆ ಸೇರುವುದು ಉಚಿತವಲ್ಲ ಎಂದು ತೋರಿದ್ದರೆ, ಅವನು ಯಾವ ಪಕ್ಷಕ್ಕೂ ಸೇರದೆ ತಟಸ್ಥವಾಗಿರಬಹುದಾಗಿತ್ತು. ಭೀಷ್ಮನಿಗೆ ಕೌರವನ ಅನ್ನದ ಋಣವಿತ್ತು ಎಂದು ವಾದಿಸುವಂತಿಲ್ಲ, ಆ ಅನ್ನ ಭೀಷ್ಮನದೇ, ಅವನು ಕೌರವರಿಗೆ ದಾನ ಮಾಡಿದ ಅನ್ನ" (೧೪೧೫) ಎಂದು ಬರೆದಾದ ಮೇಲೆ ಅಡಿ ಟಿಪ್ಪಣಿಯನ್ನೂ ಪೋಣಿಸಿದ್ದಾರೆ!

೭.೫.೩. ಸರಿಯೋ ತಪ್ಪೋ, ಕೌರವ ಸೈನ್ಯದ ನಾಯಕನಾದ ಮೇಲೆ ಭೀಷ್ಮನು ಪಕ್ಷದ ಹಿತಕ್ಕೆ ಧಕ್ಕೆ ತಂದದ್ದೇಕೆ? : "ತನ್ನನ್ನು ಕೊಲ್ಲುವುದಕ್ಕೆ ದಾರಿ ಯಾವುದು ಎಂಬುದನ್ನು ಕುರಿತಂತೆ ಪಾಂಡವರಿಗೆ ತಿಳಿವಳಿಕೆ ಕೊಟ್ಟದ್ದು ಕೌರವ ಪಕ್ಷಕ್ಕೆ... ದ್ರೋಹ ಬಗೆದಂತಾಯಿತು!" (೧೫). ಹೀಗೆ ಮಾಡುವುದರಲ್ಲಿ ವ್ಯಾಸರ ಉದ್ದೇಶವೇನು? "ಮಾನವನೊಬ್ಬ, ಅವನು ಎಷ್ಟೇ ಉನ್ನತನಾಗಲಿ, ಹೆಚ್ಚಿನ ಜವಾಬ್ದಾರಿಯೇನನ್ನೂ ವಹಿಸದೆ ದೀರ್ಘಕಾಲ ಬದುಕಿದ್ದರೆ ಅವನ ಧರ್ಮಪ್ರಜ್ಞೆಯು ಮಸಕಾಗುತ್ತದೆ, ಸತ್ವಹೀನವಾಗುತ್ತದೆ ಎಂಬುದನ್ನು ಮನಗಾಣಿಸುವುದೆ?" (೧೬)

೭.೬. ದ್ರೋಣನ ಪಾತ್ರದಲ್ಲಿ "ಮಹೋನ್ನತ ಎನ್ನಬಹುದಾದ ಗುಣಗಳೇನೂ ಇಲ್ಲ. ದ್ರೋಣ-ದ್ರುಪದರ ಪರಸ್ಪರ ನಡೆವಳಿಕೆ ಅವರಿಗೆ ಕೀರ್ತಿ ತರುವಂಥದೇನೂ ಅಲ್ಲ!... ಏಕಲವ್ಯನ ಪ್ರಸಂಗವೂ ದ್ರೋಣನ ಕೀರ್ತಿಯನ್ನು ಹೆಚ್ಚಿಸುವಂಥದಲ್ಲ... ನನ್ನನ್ನು ಕೊಲ್ಲಬೇಕಾದರೆ ಇದೇದಾರಿ ಎಂದು ಪಾಂಡವರಿಗೆ ಹೇಳಿಕೊಟ್ಟದ್ದೇಕೆ? ಹಾಗೆ ಮಾಡಿದ್ದರಿಂದ ಅವನು ತನ್ನ ಒಡೆಯ ದುರ್ಯೋಧನನಿಗೆ ದ್ರೋಹ ಬಗೆದಂತಾಯಿತು" (೧೬-೧೭)

೭.೭. "ಮಹಾಭಾರತದಲ್ಲಿ ನಿಜವಾಗಿ ಕೇಡಿಗತನಕ್ಕೆ ಶರಣು ಹೊಡೆದವರೆಂದರೆ, ದುರ್ಯೋಧನನನ್ನೇ ಮುಖ್ಯವಾಗಿ ಒಳಗೊಂಡ ದುಷ್ಟ ಚತುಷ್ಟಯ-ಶಕುನಿ, ದುರ್ಯೋಧನ, ದುಶ್ಶಾಸನ ಮತ್ತು ಕರ್ಣ. ಪಾಂಡವರಿಗೆ ವಿರೋಧವಾಗಿ ಎಲ್ಲ ಕೃತ್ರಿಮವನ್ನೂ ನಡೆಸಿದ ಕೇಡಿಗ, ಪರಮತಂತ್ರಿ ಶಕುನಿ" (೧೭). ಈ ನಾಲ್ವರ ಕೇಡಿಗತನವನ್ನು ಒಂದೊಂದಾಗಿ ಹೆರೆದು, ಹೆಕ್ಕಿ ಚರ್ಚಿಸಿದ್ದಾರೆ. ಕರ್ಣನ ವಿಷಯದಲ್ಲಿ ಮನಸ್ಸು ಮೃದುಗೊಳ್ಳುವುದಾದರೂ ಅವನಲ್ಲಿ ಕೂಡ ಕೇಡು ಬೇರೂರಿತ್ತು.

೭.೭.೧. ಮಗನಲ್ಲಿ ತುಂಬ ಅಕ್ಕರೆಯುಳ್ಳ ಧೃತರಾಷ್ಟ್ರನಲ್ಲಿಯೂ ಒಳಿತಿಗಿಂತ ಕೇಡು ಮೇಲುಗೈ ಪಡೆದಿದೆ. ಗಾಂಧಾರಿ ಮಾತ್ರ ಅಪರೂಪವಾದ ಪರಿಣತ ಸಂಸ್ಕೃತಿಯುಳ್ಳಾಕೆಯೆಂದು ಪರಿಗಣಿಸಿದ್ದಾರೆ. ಯುದ್ಧ ಸನ್ನದ್ಧನಾಗಿ ಬಂದ ಮಗನಿಗೆ ಆಕೆ 'ಗೆದ್ದು ಬಾ ಮಗನೆ' ಎನ್ನಲಿಲ್ಲ, 'ಎಲ್ಲಿ ಧರ್ಮವಿದೆಯೊ ಅಲ್ಲಿ ಗೆಲುವಿರಲಿ' ಎಂದಳು. ಅದು ತುಂಬ "ಎತ್ತರದಲ್ಲಿ ನಿಂತು ಆಡಿದ ಮಾತು" (೨೦)

೭.೭.೨. ಕೇಡಿಗತನ ಪಾಂಡವರಲ್ಲೂ ಕಡಮೆಯಿಲ್ಲ,ಅವರೂ ಧರ್ಮದಿಂದ ಜಾರಿ ಬಿದ್ದವರೆ: "ಕರ್ಣ ತನ್ನ ರಥದ ಚಕ್ರವನ್ನು ಕೆಸರಿನಿಂದ ಮೇಲೆ ಎತ್ತುವುದರಲ್ಲಿ ತೊಡಗಿದ್ದಾಗ ಅರ್ಜುನ ಅವನನ್ನು ಕೊಂದದ್ದು, ಭೀಮ ದುರ್ಯೋಧನನ ತೊಡೆಗೆ ಗದೆಯಿಂದ ಹೊಡೆದು ಅವನನ್ನು ಕೊಂದದ್ದು, ಧರ್ಮರಾಜ ಕೂಡ ಒಂದು ಸಂದರ್ಭದಲ್ಲಿ ಆಡಿದ ಮಾತು, ಸತ್ಯದ ಮುಖವಾಡ ಹಾಕಿಕೊಂಡು ಬಂದ ಅಸತ್ಯ" (೨೧)

೭.೭.೩. ಕೇಡಿನಿಂದ ದಟ್ಟವಾಗಿರುವ ಮಹಾಭಾರತದಲ್ಲಿ ಒಳಿತು ಇದ್ದೇ ಇದೆ; "ಮಹಾಭಾರತದಲ್ಲಿ ಒಳಿತುಕೇಡುಗಳು ಚಿತ್ರಿತವಾಗಿರುವ ರೀತಿ ಮನಸ್ಸಿಗೆ ಸಂತೋಷ ತರುವಂಥದಲ್ಲ" (೨೧)

೭.೮. "ಒಳಿತು, ಕೇಡು ಇವೆರಡೂ ನಮ್ಮೆದುರಿಗಿವೆ, ಒಂದನ್ನೊಂದು ಎದುರಿಸಿ ಕಾಡಲು ಸಿದ್ಧವಾಗಿವೆ.... ಈ ಭಯಂಕರ ಮುಖಾಮುಖಿ ಕೊನೆಗಾಣುವುದು ಹೇಗೆ? ಮಹಾಭಾರತ ಈ ವಿಷಯದಲ್ಲಿ ನಮಗೆ ತಿಳಿವಳಿಕೆಯನ್ನೊ ಆಶ್ವಾಸನೆಯನ್ನೊ ಕೊಡುತ್ತದೆಯೆ? ಕೊಡುತ್ತದೆ. ಭಗವದ್ಗೀತೆಯಲ್ಲಿ ಆ ಆಶ್ವಾಸನೆಯಿದೆ" (೨೪) ಎಂದು ಹೇಳಿ ಅಲ್ಲಿಗೆ ಪೂರ್ಣ ವಿರಾಮಹಾಕುವುದಿಲ್ಲ. ಭಗವದ್ಗೀತೆಯನ್ನು ಹೇಳಿದ ಕೃಷ್ಣನ ಇತಿಮಿತಿಗಳನ್ನು ಜರಡಿ ಹಿಡಿಯುತ್ತಾರೆ. ಸಾಧುಗಳನ್ನು ಕಾಪಾಡುವುದಕ್ಕೆ, ಕೇಡಿಗರನ್ನು ನಾಶ ಮಾಡುವುದಕ್ಕೆ, ಧರ್ಮ ನಿಲ್ಲಿಸುವುದಕ್ಕೆ ಮತ್ತೆ ಮತ್ತೆ ಹುಟ್ಟುತ್ತೇನೆಂದು ಹೇಳಿದ ಮಾತನ್ನು ಕೃಷ್ಣ ಉಳಿಸಿದ್ದಾನೆಯೆ? ಎಂದು ಪರಾಮರ್ಶಿಸತೊಡಗುತ್ತಾರೆ. ಯುದ್ಧದಲ್ಲಿ ದುಷ್ಟರೂ ಶಿಷ್ಟರೂ ಒಟ್ಟೊಟ್ಟಿಗೆ ಸತ್ತಾಗ ಕೃಷ್ಣ ಎಚ್ಚರಿಕೆ ವಹಿಸಲಿಲ್ಲವೆಂದು ಧ್ವನಿಸುತ್ತಾರೆ.

೭.೮.೧. ಕುಡಿತದ ಮತ್ತಿನಿಂದ ಒಳಜಗಳವಾಗಿ ವೃಷ್ಣಿಕುಲ ತನ್ನನ್ನು ತಾನೇ ನಾಶ ಮಾಡಿಕೊಂಡಿತು. ಬೇಡನ ಬಾಣಕ್ಕೆ ಕೃಷ್ಣ ಪ್ರಾಣ ಒಪ್ಪಿಸಿದ.

೭.೮.೨. ಕೇಡಿನ ಹಾವಳಿ ಅಲ್ಲಿಗೆ ನಿಲ್ಲಲಿಲ್ಲ. ಹೆಂಗಸರು ಮಕ್ಕಳನ್ನು ಲೇಸಿನ ದಡಕ್ಕೆ ಸವ್ಯಸಾಚಿ ಅರ್ಜುನನಿಂದ ಮುಟ್ಟಿಸಲಾಗಲಿಲ್ಲ. ಡಕಾಯಿತರು ಹೆಂಗಸರನ್ನು ಎಳೆದೊಯ್ದರು. ದುಷ್ಟರ ನಾಶ ಆಗಲಿಲ್ಲ, ಸಾಧು ಸಂರಕ್ಷಣೆ ಸಾಧ್ಯವಾಗಲಿಲ್ಲ, ಧರ್ಮ ಸಂಸ್ಥಾಪನೆಯೂ ಆಗಲಿಲ್ಲ: "ದ್ವಾಪರ ಯುಗದಲ್ಲಿ ಧರ್ಮ ಸಂಸ್ಥಾಪನೆ ಎಲ್ಲಾದರೂ ನಡೆದಿದ್ದರೆ, ಅದು ನಮಗೆ ತಿಳಿಯದ ವಿಷಯ. ಕಲಿಯುಗದಲ್ಲಿಯೂ ಧರ್ಮದ ಧ್ವಜ ಮೆರೆಯುತ್ತಿರುವುದೇನೂ ಕಾಣುತ್ತಿಲ್ಲ!"-ಎನ್ನುತ್ತಾರೆ ಮೂರ್ತಿರಾಯರು (೨)

೭.೯. "ಮಹಾಭಾರತವನ್ನು ಓದಿ ಮುಗಿಸಿ ಪುಸ್ತಕವನ್ನು ಕೆಳಗಿಟ್ಟೆವು ಎಂದಿಟ್ಟು ಕೊಳ್ಳೋಣ. ಆಗ ನಮ್ಮ ಮನಸ್ಸಿನಲ್ಲಿರುವ ಭಾವನೆಯೇನು? ಮಹಾಭಾರತದ ಅದ್ಭುತ ಕಥೆ ನಮ್ಮ ಮೇಲೆ ಬೀರಿದ ಪ್ರಭಾವವೇನು? ಮಹಾಭಾರತದ ರಸವು 'ಶಾಂತರಸ' ಎಂದು ವಿದ್ವಾಂಸರು ಹೇಳುತ್ತಾರೆ. ಹೌದೆ?.... ಮಹಾಭಾರತದಲ್ಲಿ ಅಮಿತವಾದ ವಿಚಾರ ಸಾಮಗ್ರಿಯಿದೆ. ನಮಗೆ ನೆಮ್ಮದಿ ಕೊಡಲೆಂದು ಅದು ಯಾವುದನ್ನೂ ತೇಲಿಸಿ ಬಿಡುವುದಿಲ್ಲ. ನಮ್ಮ ಸಂತೋಷಕ್ಕಾಗಿ ಬದುಕನ್ನು, ಅದರಲ್ಲಿಲ್ಲದ, ಮನೋಹರ ಬಣ್ಣಗಳನ್ನು ಕೊಟ್ಟು ಚಿತ್ರಿಸುವುದಿಲ್ಲ. ಅದಕ್ಕೆ ಸಹಜವಾದ ರೂಪದಲ್ಲೇ ಚಿತ್ರಿಸುತ್ತದೆ" (೩೩-೩೪)

ಮೂರ್ತಿರಾಯರ ವಿಮರ್ಶೆಯ ಅನನ್ಯತೆ

೮.೦.೧. ಮೇಲ್ಕಂಡ ಎರಡು ಪುಸ್ತಕಗಳ ಜೀವಸ್ವರ ಮಾನವೀಯ ನೆಲೆಯ ಗ್ರಹಿಕೆಯದು. ಜತೆಗೆ ಅದು ಶೋಧನ ಪ್ರವೃತ್ತಿಯಿಂದ ಉದ್ದೀಪನವಾಗಿರುವ ಕಾರಣದಿಂದಾಗಿ ವಿಜ್ಞಾನಿಯ ಭೂಮಿಕೆಯದು. ರಾಮಾಯಣ-ಭಾರತ ಪಾತ್ರ-ಘಟನೆಗಳ ಆ ಮುಖವನ್ನು, ಇನ್ನೊಂದು ಮಗ್ಗಲನ್ನು ಹೊಳೆಯಿಸುವ ಇಂಥ ಬರವಣಿಗೆಯ ಹಾಯಿಯಲ್ಲಿ ನಮ್ಮ ಚಿಂತನೆಗಳನ್ನು ತೇಲಿ ಬಿಡುವುದು ಬೆಳಗಿನ ಹಿತಕ್ಕೆ ಮೈಯೊಡ್ಡಿದಂತೆ ಪ್ರಫುಲ್ಲವಾಗುತ್ತದೆ.

೮.೨. ಹೊಸ ತಲೆಮಾರಿನ ಜನಾಂಗದ ಪ್ರತಿನಿಧಿಯಾಗಿ, ಹಳೆಯ ತಲೆಮೊರೆಯ ತಲೆಮಣಿಯೊಬ್ಬರು ಈ ಸಂವಾದ ಬೆಳೆಸಿರುವುದು ಅರ್ಥಗರ್ಭಿತವಾಗಿದೆ. ಸನಾತನ ಪರಿಸರದ ಬುದ್ಧಿ ಭಾವಗಳು ತಳೆಯಬಹುದಾದ ಪೂರ್ವಗ್ರಹಿಕೆಗಳಾಗಲಿ, ಅತಿಭಾವುಕತೆಯಾಗಲಿ ಇಲ್ಲಿಲ್ಲ. ನಮ್ಮ ಪರಂಪರೆಯಲ್ಲಿ ತಳಕುಹಾಕಿರುವ ಮಿತಿಗಳನ್ನು ನಾವೇ ಪ್ರಶ್ನೆ ಮಾಡಬಹುದೆ ಎಂಬ ಹುಸಿ ನಂಬಿಕೆಯಿಲ್ಲ. ಇಂಗ್ಲಿಷ್ ಸಾಹಿತ್ಯದ ಓದಿನಿಂದ ದತ್ತವಾದ ಮಾನಸಿಕ ಹದವೂ ಬೆರೆತ ಲೇಖಕರ ಚಿಂತನಶೀಲ ಸಾಮರ್ಥ್ಯಕ್ಕೆ ಮುಪ್ಪಿನ ತುಕ್ಕು ಹಿಡಿದಿಲ್ಲ. ಇಲ್ಲಿನ ವೈಚಾರಿಕ ಪ್ರಖರತೆ ಅಕೃತಕವಾಗಿ ಬೆಳಗಿದೆ. ಗಿಡದಿಂದ ಮೊಗ್ಗು ಹುಟ್ಟಿ ತೆಳುಗಾಳಿಗೆ ಅರಳಿ ಮಗಮಗಿಸುವ ಹಾಗೆ ಈ ವಿಮರ್ಶೆಯಲ್ಲಿ ಸಹಬತೆ ಲಾಸ್ಯವಾಡಿದೆ. ಎರಡೂ ಪುಸ್ತಕಗಳ ತನಿಯಾದ ಚಿಂತನ ಧಾರೆಯಲ್ಲಿ ಮಿಂದವರನ್ನು ಬೆರಗು ತಬ್ಬುತ್ತದೆ. ನನ್ನ ಈ ಹೇಳಿಕೆಯನ್ನು ಪುಷ್ಟಿಕರಿಸುವ ಪ್ಯಾರಾಗಳು ಮುಂದಿನವು.

೮.೩. ಸೃಜನ ಶೀಲ ನೆಲೆಯ ಕಾವ್ಯ ಪ್ರಕ್ರಿಯೆಯ ಎಳೆಗಳನ್ನು ಸಾಮಾಜಿಕ ಸ್ತರಕ್ಕೆ ಜಗ್ಗಿ ಬಿಡಿಸಿ ನೋಡುವಾಗ ಬರವಣಿಗೆ ಜಾಳು ಜಾಳಾಗದಂತೆ ನಿರ್ವಹಿಸಿರುವುದು ಒಂದು ಸಾಧನೆ. ಸಂಸ್ಕೃತ ಮೂಲವಾದ ಕಾವ್ಯ ಶರೀರವನ್ನು ಕನ್ನಡ ಭಾಷಾ ಕೇಂದ್ರಿತ ವಿಮರ್ಶೆಯ ಬಂಧದಲ್ಲಿ, ಒಳನೋಟಗಳ ಕೋಲ್ಮಿಂಚನ್ನು ಉದ್ದಕ್ಕೂ ಬೆಳಗಿಸುವ ಚರ್ಚೆಯನ್ನು ಸಂವಹನ ತೊಡಕುಗಳಿಲ್ಲದ ಹಾಗೆ ಮುನ್ನಡಸಲಾಗಿದೆ. ವಿಮರ್ಶೆಯ ಸಾಧ್ಯತೆಗಳನ್ನು ಮೈಗೂಡಿಸಿಕೊಂಡಿರುವ ಈ ಪ್ರಯೋಗ ಮಾರ್ಗಕಾವ್ಯಗಳನ್ನು ದೇಸೀ ನೆಲೆಯಿಂದ ನೋಡುವ ಕ್ರಮಕ್ಕೂ ಉಪಕ್ರಮವಾಗಬಹುದೆಂಬುದು ನನ್ನ ಗ್ರಹಿಕೆ.

೮.೪. ಬೌದ್ಧಿಕ ತೀವ್ರತೆ ಪ್ರಖರವಾಗಿರುವ ಕ್ಷಣಗಳಲ್ಲೂ ವಾದದ ಭರಾಟೆಯಲ್ಲಿ ಮೂಲ ಕವಿಯ ನಿರೂಪಣೆಯ ಆಶಯವನ್ನು ಲಾಘವವಾಗಿಸಿಲ್ಲ. ಆಯಾ ಕವಿಗಳ ಪರವಾಗಿ ಸಿಗುವ ವಾದವನ್ನೂ ಮಂಡಿಸುತ್ತಾರೆ, ತಮ್ಮ ತಕರಾರನ್ನೂ ಮುಂದಿಡುತ್ತಾರೆ. ಈ ನಿರ್ಬಿಡೆಯ ನಿರ್ವಚನದಲ್ಲಿ ಒಂದು ವಾದಕ್ಕೆ ಇರುವ ಇತರರ ಪರವಾದ ದೃಷ್ಟಿ ಕೋನವನ್ನು ಅರಿತು ತರ್ಕವನ್ನು ಬೆಳೆಸುವ ನ್ಯಾಯಸಮ್ಮತ ವಾದವೈಖರಿಯಲ್ಲಿ ಸ್ವಪಕ್ಷ ಮಂಡನೆಯ ಆತುರ ಆಗ್ರಹಗಳಿಲ್ಲ. ಹೋಲಿಕೆ ವ್ಯತ್ಯಾಸಗಳಿಗಾಗಿ ಯಥೋಚಿತ ಚಿಂತನಧಾರೆಯನ್ನು ಉದಾಹರಿಸುತ್ತಾರೆ. ಅಭಿವ್ಯಕ್ತಿಯ ಹ್ರಾಸವೊ ವಿಸ್ಮೃತಿಯೊ ಮತ್ತೊಂದೂ ಕವಿದು, ವಸ್ತು ನಿರ್ವಹಣೆಯ ಹೊರ ಚಾಚುಗಳಲ್ಲಿ ಅಕಸ್ಮಾತ್ ಉಂಟಾಗಿರುವ ಐಬನ್ನು ಮೂರ್ತಿರಾಯರ ವಿಮರ್ಶನ ಪ್ರಜ್ಞೆಯ ಗರುಡಗಣ್ಣು ಕಾಣುತ್ತದೆ.

೮.೫. ತಲಸ್ಪರ್ಶಿಯಾದ ರಾಮಾಯಣದ ಸಾಕಲ್ಯ ಜ್ಞಾನ, ಮಾಹಿತಿಗಳ ದಟ್ಟತನ ಈ ವಿಮರ್ಶೆಗೆ ವಿಶೇಷ ಪ್ರತಿಭೆಯನ್ನು ತಂದುಕೊಟ್ಟಿದೆ. ಓದುಗ ಹೊಸ ನೋಟದ ಕಳಕಳಿಯ ಓದಿಗೆ ತನ್ನನ್ನು ತೆರೆದುಕೊಳ್ಳುವ ಹಾಗೆ ಹದಗೊಳಿಸುವ ಆಪ್ತತೆಯಿದೆ. ಮೂರ್ತಿರಾಯರಿಗೆ ರಾಮಾಯಣದ ಮೇಲೆ ಪ್ರಭುತ್ವವಿದ್ದು ಅವಲೀಲೆಯಿಂದ ಸಂವಾದಿ ಸಂದರ್ಭಗಳನ್ನು ತಂದು ನಿಲ್ಲಿಸಿ ಪೊಂಚಾವಣೆಯಿಂದ ಒಟ್ಟೊಟ್ಟಿಗೆ ತೂಗಿ ನೋಡುತ್ತಾರೆ. ಮಾಸ್ತಿಯವರ 'ಆದಿಕವಿ ವಾಲ್ಮೀಕಿ'ಯನ್ನೂ ರೈಟ್ ಆನರಬಲ್ ಶ್ರೀನಿವಾಸ ಶಾಸ್ತ್ರಿಯವರ ರಾಮಾಯಣ ಕುರಿತ ಉಪನ್ಯಾಸಗಳನ್ನೂ ಇದನ್ನು ಓದುತ್ತ ನೆನೆಯುತ್ತೇವೆ. ರಾಮಾಯಣದಲ್ಲಿ ಕೇಂದ್ರ ಪ್ರಜ್ಞೆಯಾದ ಸೀತಾಪರಿತ್ಯಾಗವನ್ನು ಕುರಿತ ಗಾಢ ವಿಮರ್ಶಾತ್ಮಕ ಧ್ಯಾನ ಕೆನೆಕಟ್ಟಿದ್ದು, ಇದು ಸುಂದರ ಯಶಸ್ವೀ ಭಾವಗೀತೆಯಂತೆ ಹೃದ್ಯವಾಗುತ್ತದೆ.

೮.೬. ಸೀತಾಪರಿತ್ಯಾಗ ಪ್ರಸಂಗ ಇರುವ ಕನ್ನಡ ಕಾವ್ಯಗಳನ್ನು, ಕನ್ನಡ ಮಹಾಭಾರತ ಕಾವ್ಯಗಳಲ್ಲಿ ಕೇಡು ಹೇಗೆ ಪ್ರತಿಪಾದಿತವಾಗಿದೆ ಎಂಬುದನ್ನು ಮರೆತುಕೂಡ ಮೂರ್ತಿರಾಯರು ಪ್ರಸ್ತಾಪಿಸಿಲ್ಲ. ಅವರ ಉಪನ್ಯಾಸಗಳ ಕಕ್ಷೆಗೆ ಇದು ಒಳಪಟ್ಟಿಲ್ಲವೆಂಬುದು ದಿಟವಾದರೂ ಕನ್ನಡ ಕವಿಗಳು ಕೂಡ ಈ ವಸ್ತುವನ್ನು ಧ್ಯಾನಿಸಿದ್ದಾರೆ. ಆದರೆ ಅದು ಬೇರೆ ಉಪನ್ಯಾಸವಾಗಬಹುದು-ಎಂಬ ಸೂಚನೆ ಅನುಚಿತವಾಗುತ್ತಿರಲಿಲ್ಲ. ಮೂರ್ತಿರಾಯರ ಕೃತಿಗಳನ್ನು ಮಾರ್ಗದರ್ಶಿಯಾಗಿ ಸ್ವೀಕರಿಸಿ, ಇಲ್ಲಿನ ವಿಮರ್ಶೆಯ ಸೂತ್ರಗಳನ್ನು ಅನ್ವಯಿಸಿ ಕನ್ನಡ ಕಾವ್ಯಗಳಲ್ಲಿ ಸಮಾನವಸ್ತು ನಿರ್ವಹಣೆಯನ್ನು ಗುರುತಿಸುವುದು ಮೂರ್ತಿರಾಯರಿಗೆ ತೋರಿಸುವ ಗೌರವದ ಒಂದು ವಿಧಾನ.

೮.೭. ಮಹಾಕಾವ್ಯಗಳ ಘಟನೆಗಳನ್ನು ಸಾಂಸ್ಕೃತಿಕ ಘಟಕವಾಗಿ ಚರ್ಚೆ ಮಾಡಿರುವ ಈ ಕೃತಿಗಳು, ಪುಟ ಪ್ರಮಾಣದಲ್ಲಿ ಚಿಕ್ಕವಾದರೂ, ಮಹತ್ವಾಕಾಂಕ್ಷೆಯ ಫಲಿತ. ವಿಮರ್ಶೆಯ ತತ್ವ ಶಾಸ್ತ್ರೀಯತೆಯ ಜತೆ ಜತೆಗೇ ಕೈ ಹಿಡಿದು ಸಪ್ತಪದಿ ಹಾಕಿರುವ ಸೃಜನಶೀಲತೆ ಈ ಕೃತಿಗಳ ಮುಖ್ಯ ಸೆಳೆತ. ಹಿಂದಿನ ವಿದ್ವಾಂಸರು, ವಿಮರ್ಶಕರು ತುಳಿಯದಿರುವ ಹಾದಿಯಲ್ಲಿ ದಿಟ್ಟ ದಟ್ಟ ಹೆಜ್ಜೆ ಹಾಕಿ ಯಶಸ್ವಿಯಾಗಿ ಗುರಿ ಮುಟ್ಟಿರುವ ಈ ಎರಡು ಕೃತಿಗಳು ಸಮಕಾಲೀನ ವಿಮರ್ಶೆಯ, ವಿದ್ವತ್ತಿನ ಕ್ಷೇತ್ರಕ್ಕೆ ಮೌಲಿಕ ಕೊಡುಗೆ. ಎಸ್. ವಿ. ರಂಗಣ್ಣನವರ **'ಪ್ರಶಂಸೆ ಸಾಕೊ, ಪರೀಕ್ಷೆ ಬೇಕೊ'**-ಎಂಬುದನ್ನೂ ಇಂಥ ಓದಿನ ಇನ್ನೊಂದು ಮುಖವಾಗಿಟ್ಟು ಅಭ್ಯಾಸ ಮಾಡುವುದು ವಿಮರ್ಶನ ಪ್ರಜ್ಞೆಯನ್ನು ಮೊನಚುಗೊಳಿಸುತ್ತದೆ.

೨

ಭಾವ : ಸೋಪಜ್ಞತೆ

“ಭಾವ ಎಂಬ ಈ ಪುಸ್ತಕದಲ್ಲಿ ನನ್ನ ಜೀವನವನ್ನು ಕುರಿತು ನನ್ನ ಭಾವವೇನೆಂಬುದನ್ನು ಬರೆದಿಡಲು ಯೋಚನೆ ಮಾಡಿದ್ದೇನೆ. ಲೋಕದಲ್ಲಿ ಹಿರಿಯ ಸ್ಥಾನಗಳಲ್ಲಿ ಹುಟ್ಟಿ, ವಿಸ್ತಾರವಾದ ಕಾರ್ಯರಂಗಗಳಲ್ಲಿ ಕೆಲಸ ಮಾಡಿ, ಮಹನೀಯ ಗುಣಗಳನ್ನು ಪ್ರಕಟಿಸಿ, ಬಹು ಜನರಿಂದ ಮನ್ನಣೆ ಪಡೆದವರು ಆತ್ಮ ಚರಿತೆಗಳನ್ನು ಬರೆಯುವುದುಂಟು. ನನ್ನ ಬಾಳುವೆ ಅಂಥವಲ್ಲ. ಎಂದ ಮೇಲೆ ಇಂಥ ಬಾಳುವೆಯನ್ನು ಕುರಿತು ಏನನ್ನಾದರೂ ಹೇಳಬೇಕಾದ ಕಾರಣ ಏನಿರಬಹುದೆಂದು ಯಾರಿಗಾದರೂ ತೋರಬೇಕು. ಈ ಮಾತನ್ನು ಇನ್ನು ಯಾರೇ ಆದರೂ ಒಪ್ಪತಕ್ಕದ್ದೆ. ಆದರೆ ಲೋಕದ ದೃಷ್ಟಿಯಿಂದ ಹಿರಿಯದಾದ ಜೀವನವನ್ನು ಕುರಿತು ಲೋಕ ಮೆಚ್ಚುವುದಕ್ಕಾಗಿ ಬರೆಯುವ ಆತ್ಮ ಚರಿತೆ ಒಂದು ರೀತಿ. ಇನ್ನೊಂದು ರೀತಿಯ ಆತ್ಮಚರಿತೆಗಳಲ್ಲಿ ಯಾವ ಒಂದು ಜೀವನದ ವಿಷಯವಾಗಿ ಆಗಲಿ ಅನುಭವವನ್ನು ಬರೆದಿಡುವುದುಂಟು. ಹತ್ತು ಜನದ ದೃಷ್ಟಿಯಿಂದ ಒಂದು ಬದುಕು ದೊಡ್ಡದಲ್ಲದೆ ಹೋಗಬಹುದು. ಲೋಕ ಅದರ ಅನುಭವವನ್ನು ಅದು ದೊಡ್ಡದೆಂಬ ಕಾರಣದಿಂದ ನೋಡಲಾಗದಿರಬಹುದು. ಹೀಗಿದ್ದರೂ ಅದು ಈ ಅನುಭವದ ಸ್ವರೂಪವೇನೆಂದು ತಿಳಿಯುವುದೂ ನೋಡುವುದೂ ಒಂದು ದೃಷ್ಟಿಯಿಂದ ಒಳ್ಳೆಯದು. ದೊಡ್ಡವರ ಸಂಖ್ಯೆ ಕಡಿಮೆ. ಅವರ ಕಷ್ಟ ಸುಖವನ್ನು ಅವರು ನೋಡಿಕೊಳ್ಳಬಲ್ಲರು; ತಿಳಿದುಕೊಳ್ಳಬಲ್ಲರು. ಸಾಮಾನ್ಯರ ಸಂಖ್ಯೆ ಬಹು ದೊಡ್ಡದು. ಅವರ ಕಷ್ಟ ಸುಖವನ್ನು ಪ್ರಪಂಚ ನೋಡಿಕೊಳ್ಳಬೇಕಾಗುತ್ತದೆ. ಅಬ್ರಹಾಂ ಲಿಂಕನ್ನನು ಒಂದು ಸಲ ಹೇಳಿದ ಮಾತು ಇಲ್ಲಿ ಪ್ರಕೃತವಾಗುತ್ತದೆ. ಒಂದು ಸಭೆಯಲ್ಲಿ ಅವನನ್ನು ಕಂಡ ವೃದ್ಧೆಯೊಬ್ಬಳು, ‘ಇವನು ಎಂಥ ಸಾಮಾನ್ಯನಂತೆ ಕಾಣುತ್ತಾನೆ’ ಎಂದಳಂತೆ, ಈ ಮಾತು ಅಬ್ರಹಾಮನ ಕಿವಿಗೆ ಬಿತ್ತು. ಅವನು, ‘ಹೌದು ತಾಯಿ, ನಾನು ಬಹು ಸಾಮಾನ್ಯನು. ಆದರೆ ದೇವರಿಗೆ ಇಂಥ ವ್ಯಕ್ತಿಯೆಂದರೆ ಬಹಳ ಇಷ್ಟವೆಂದು ಕಾಣುತ್ತದೆ. ಅವನು ಲೋಕದ ತುಂಬ ಇಂತವರನ್ನೇ ಮಾಡಿದ್ದಾನೆ,’ ಎಂದು ಹೇಳಿದನಂತೆ, ಈ

ಸಾಮಾನ್ಯ ವ್ಯಕ್ತಿತ್ವದ ಸಾಮಾನ್ಯ ಅನುಭವವೇನು ಎನ್ನುವುದನ್ನು ತಿಳಿದೇ ಸಮಾಜ ಬಹುಜನಕ್ಕೆ ಯಾವುದು ಒಳ್ಳೆಯದೆಂಬುದನ್ನು ಗ್ರಹಿಸಬಹುದು, ಪ್ರಯೋಗಿಸಬಹುದು. ನಡೆಸಬಹುದು, ಈ ಕಾರಣದಿಂದ ಮಹನೀಯವಲ್ಲದಿದ್ದರೂ, ಇಂಥ ಒಂದು ಬಾಳುವೆಯ ಅನುಭವವನ್ನು ಲೋಕ ಅರಿಯುವುದು ಅವಶ್ಯಕ.

ಇಂಥ ಬಾಳುವೆಗಾದರೂ ತನ್ನ ಅನುಭವವನ್ನು ಮೆಲುಕು ಹಾಕುವುದರಲ್ಲಿ ಒಂದು ಪ್ರಯೋಜನವೂ ಸಂತೋಷವೂ ಉಂಟು. ಎಷ್ಟು ಸಣ್ಣ ಬದುಕಾದರೂ ಅವರ ದೃಷ್ಟಿಯಿಂದ ಅದು ಬಹು ಮುಖ್ಯ. ಅದು ದೊಡ್ಡದಲ್ಲದಿರಬಹುದು; ನೆರೆಯ ಬದುಕು ದೊಡ್ಡದಿರಬಹುದು. ಆದರೂ ಆ ದೊಡ್ಡ ಬದುಕಿನ ಅನುಭವಕ್ಕಿಂತ ಈ ಸಣ್ಣ ಬದುಕಿಗೆ ತನ್ನ ಅನುಭವ ದೊಡ್ಡದಾಗಿರುತ್ತದೆ ದೊಡ್ಡದಲ್ಲದಿದ್ದರೂ.ಮುಖ್ಯವಾಗಿರುತ್ತದೆ. ನಿಜವಾಗಿ ನೋಡಿದರೆ, ಎಷ್ಟು ಸಣ್ಣದಾದರೂ ಈ ಬದುಕು ಲೋಕದ ಬದುಕಿನಲ್ಲಿ ಒಂದು ಅಂಗ. ವಿಶ್ವದ ಜೀವನ ತನ್ನನ್ನು ತಾನು ನೋಡಿಕೊಳ್ಳುವುದಕ್ಕೆ ಈ ಕೋಟ್ಯಂತರ ಜೀವನದಲ್ಲಿ ಆಕಾರಗೊಂಡಿದೆ. ಅದರಲ್ಲಿ ಈ ಒಂದೊಂದು ಕಣವೂ ಒಂದು ಕೇಂದ್ರ. ಸೃಷ್ಟಿಯೆಲ್ಲಾ ಒಂದು, ಈ ಒಂದು ಬದುಕೇ ಒಂದು. ನಾನಿದ್ದರೆ ಮೂರು ಲೋಕವುಂಟು ಎಂಬ ಮಾತಿಗೆ ಇದೇ ಸಾಧುವಾದ ಅರ್ಥ. ನಾನಿಲ್ಲದೆ ಏನಿದ್ದರೇನು, ಎಷ್ಟಿದ್ದರೇನು? ಈ ಕಾರಣದಿಂದ ನಾನು ಎಂಬುದರ ವಿಷಯದಲ್ಲಿ ಒಂದೊಂದು ಜೀವಕ್ಕೆ ಮಮತೆ ಹೇಗೋ ಹಾಗೆ ಅಭಿಮಾನವೂ ಇರುತ್ತದೆ. ಅದನ್ನು ಕುರಿತು ವಿಚಾರ ಮಾಡುವುದರಲ್ಲಿ ಮನುಷ್ಯನಿಗೆ ಸುಖವುಂಟು. ಹಸುಳೆ ತನ್ನ ಪಾಡಿಗೆ ತಾನು ಕುಳಿತು ತನ್ನ ಕಾಲಿನ ಬೆರಳುಗಳನ್ನು ಹಿಡಿದುಕೊಂಡು ಪರೀಕ್ಷಿಸುವಂತೆ ಮನುಷ್ಯನಿಗೆ ತನ್ನ ಜೀವನದ ವಿಷಯವನ್ನು ತಾನು ವಿಚಾರಿಸಿ ನೋಡುವುದು ಒಂದು ರೀತಿ ಕೇಳಿ ಅಥವಾ ವಿನೋದ ವ್ಯವಹಾರ. ಇಂಥ ಪರೀಕ್ಷೆಯಿಂದ ಪ್ರಯೋಜನ ಕೂಡ ಉಂಟು. ಎಲ್ಲ ಜೀವನದಲ್ಲೂ ತಪ್ಪುಗಳಾಗಿರುತ್ತವೆ. ಎಲ್ಲ ಜೀವನದಲ್ಲೂ ಅದನ್ನು ಕಾಯುವ ಶಕ್ತಿಯ ಒಂದು ಕರುಣೆ ಅಲ್ಲಲ್ಲಿ ಕಂಡಿರುತ್ತದೆ. ಎಲ್ಲ ಜೀವನವೂ ಮುಂದಕ್ಕೆ ಯಾವ ದಾರಿಯನ್ನು ಹಿಡಿಯುವುದೆಂದು ಯೋಚನೆ ಮಾಡಬೇಕಾಗಿರುತ್ತದೆ. ಈ ಸಂತೋಷ ಈ ಪ್ರಯೋಜನವನ್ನು ಪಡೆಯಬೇಕೆಂದು ಪ್ರಯತ್ನ ಪಡುವುದು ಎಷ್ಟು ಸಣ್ಣ ಜೀವನಕ್ಕಾದರೂ ಒಳ್ಳೆಯದೇ. ಎಲ್ಲ ಜೀವನವೂ ಈ ರೀತಿಯ ಪರಿಶೀಲನೆಯನ್ನು ಬರೆದಿಡಬೇಕಾದದ್ದಿಲ್ಲ. ಕೆಲವರು ಬರೆದಿಡುವುದು ಎಲ್ಲರ ಪರವಾಗಿ ಬರೆದಂತೆ ಆಗಬಹುದು. ಜೀವನ ಎಷ್ಟು ಮಟ್ಟಿಗೆ ಸಾಮಾನ್ಯ ರೀತಿಯದಾದರೆ ಅಷ್ಟು ಮಟ್ಟಿಗೆ ಅದು ಈ ರೀತಿಯ ಪ್ರಾತಿನಿಧ್ಯವನ್ನು ಸಾಧಿಸುತ್ತದೆ. ನಾನು ಪರಿಶೀಲಿಸುವ ಜೀವನ ಈ ರೀತಿಯಾಗಿ ಬಹು ಜನದ ಜೀವನದ ಪ್ರತಿನಿಧಿ ಎಂದು ನನ್ನ ನಂಬಿಕೆ. (ಭಾವ ೧, ಪುಟ ೧-೩)

ಮಾಸ್ತಿಯವರು ಈ ಮಾತುಗಳನ್ನು ಅವರ ಆತ್ಮಕಥೆಗೆ ಪ್ರಾಸ್ತವಿಕವೆಂದು ಬರೆದಿದ್ದಾರೆ. ಅವರು ಹೊಸಗನ್ನಡದ ಬೆಳವಣಿಗೆಯಲ್ಲಿ ಮೊದಲಿಂದ ಬಹುವಾಗಿ ಪಾಲುಗೊಂಡವರು. ಕಳೆದ ಅರ್ಧ ಶತಮಾನದ ಕನ್ನಡ ಸಾಹಿತ್ಯದಲ್ಲಿ ಅವರ ಬರೆಹವಿಲ್ಲದ ವರ್ಷವಿಲ್ಲ. ಕಥೆಗಾರರಾಗಿ, ಕವಿಯಾಗಿ, ವಿಮರ್ಶಕರಾಗಿ, ನಾಟಕಕಾರರಾಗಿ, ಕಾದಂಬರಿಕಾರರಾಗಿ, ಪತ್ರಿಕಾಕರ್ತರಾಗಿ-ಹೀಗೆ ಒಂದಲ್ಲ ಒಂದು ಬಗೆಯಲ್ಲಿ ಉದ್ದಕ್ಕೂ ಅಯ್ವತ್ತು ವರ್ಷಗಳಿಂದ ಅವರ ಲೇಖನಿ ಅವಿಶ್ರಾಂತವಾಗಿ

ಹೊಸಗನ್ನಡದ ಗಡಿಯನ್ನು ಹಿಗ್ಗಿಸುತ್ತಾ ನಡೆದಿದೆ. ಇವುಗಳಲ್ಲಿ ಒಂದೊಂದು ಕ್ಷೇತ್ರದಲ್ಲೂ ಅವರ ಕಾಣಿಕೆ, ಕೃಷಿ ಹಿರಿದು. ಆದರೆ ಇವೆಲ್ಲ ಒಂದು ತೂಕವಾದರೆ, ಅವರ ಆತ್ಮಕಥೆಯೇ ಒಂದು ತೂಕ ವೆಂದು ತಿಳಿಯಬೇಕಾಗುತ್ತದೆ.

ಮಾಸ್ತಿಯವರು ಗಟ್ಟಿಯಾದ ದೊಡ್ಡ ಬದುಕು. ಎಂಬತ್ತು ವರ್ಷಗಳ ತುಂಬು ಜೀವನ ನಡಸಿದ್ದಾರೆ. ಅವರ ಈ ನಿಡುಬಾಳು ಹೊರನೋಟಕ್ಕೆ ಒಮ್ಮೊಗನಾಗಿ ನೇರ ಗುರಿಯತ್ತ ಸಾಗಿದಂತೆ ತೋರಿದರೂ ಒಳನೋಟಕ್ಕೆ ಹಾಗಿಲ್ಲ. ಅದು ತನ್ನ ಸುತ್ತಮುತ್ತಲ ಹತ್ತೂ ಜನರ ಬಾಳಿಗೆ ಚನ್ನಾಗಿಸಿ ಹೊರಟದ್ದಲ್ಲ. ತಾನು ನಡೆದಾಡುವ ನೆಲದ ನಿಸರ್ಗದ ಚೆಲುವಿಗೆ ಕುರುಡಾಗಿಲ್ಲ. ಹಲವು ಮೊಗನಾಗಿ ಹರಹಿನಿಂದ ಹರಿದಿದೆ. ಆ ಬಾಳಿನಲ್ಲಿ ವೈವಿಧ್ಯವಿದೆ, ವ್ಯಾಪಕತೆಯಿದೆ. ಅವರ ಬಾಳಿನ ನಿರೂಪಣೆಯೆಂದರೆ ಸಹಜವಾಗಿಯೇ ಕುತೂಹಲದ ಗಣಿಯೆಂದು ಅರಿಯಬಹುದು.

'ಭಾವ' ಅವರ ನಿಡುಬಾಳಿನ ಚರಿತೆ. ಅದು ಮೂರು ಸಂಪುಟಗಳ ಹಿರಿಯ ಹೊತ್ತಗೆ. ಮೂರೂ ಸಂಪುಟಗಳು ಸೇರಿದರೆ ಭಾವದ ಒಟ್ಟು ಪುಟಗಳು ೧೩೫೭ (೪೫೭+೪೦೦+೫೦೦). ಅವರಿಗೇ ಈ ಗಾತ್ರ ಗಾಬರಿಯುಂಟು ಮಾಡಿರಬೇಕು : 'ಉದ್ದ ಹೆಚ್ಚು. ಆದರೆ ಇದು ನನ್ನ ಜೀವನವನ್ನು ಕುರಿತ ನನ್ನ ಭಾವ. ಈ ಭಾವ ಸ್ವಭಾವವನ್ನು ಅವಲಂಬಿಸುತ್ತದೆ.' ಅವರು ಜೀವನ ಚರಿತೆಯನ್ನು ಬರೆದುದು ಕೂಡ ಹಲವು ಗೆಳೆಯರ ಒತ್ತಾಸೆ ಸೂಚನೆಗಳಿಗೆ ಕಟ್ಟು ಬಿದ್ದು. ಅವರ ಬದುಕು ಒಂದು ಜೀವನ ಚರಿತೆಗೆ ವಸ್ತು ಆಗಬಲ್ಲುದೊ ಇಲ್ಲವೊ ಎಂಬ ಅನುಮಾನ ಅವರಿಗೆ. ಆದರೆ ಅವರ ಜೀವನ ಕುರಿತ ಅನೇಕ ಭಾವಗಳಿವೆ. ಅವನ್ನು ಕುರಿತು ಬೇಕಾದರೆ ಬರೆಯಬಹುದೆನ್ನಿಸಿತ್ತು. ಅದರಿಂದಾಗಿ ಈ ಹೊತ್ತಗೆಗೆ ಭಾವ ಎಂಬ ಒಪ್ಪವಾದ ಹೆಸರು. ಜೊತೆಗೆ ಈ ವಿಷಯದ ಬರಹಕ್ಕೆ ತೊಡಗಿದಂದು ಭಾವ ಸಂವತ್ಸರ ಬೇರೆ ನಡೆಯುತ್ತಿತ್ತು. ಭಾವ ಎಂಬ ಹೆಸರು ಮತ್ತೂ ಅನ್ವರ್ಥಕವಾಗಿ ಹೊಂದಿಕೊಂಡಿತು. 'ಭಾವ'ದ ಬರವಣಿಗೆ ಮುಗಿಯಬೇಕಾದರೆ ಸಾಕಷ್ಟು ಸಮಯ ತೆಗೆದುಕೊಂಡಿತು.

ಈ ಲೇಖನದ ಆರಂಭದಲ್ಲೇ ಉದಾಹರಿಸಿರುವ ಮಾತುಗಳು ಮನನೀಯವಾಗಿರುವುದಲ್ಲದೆ ಜೀವನ ಚರಿತೆಯ ಉದ್ದೇಶ ಪ್ರಯೋಜನಾದಿಗಳನ್ನು ನಿರುಕಾಗಿ ತಿಳಿಸುತ್ತವೆ. ಯಾವ ಮನುಷ್ಯನೂ ತನ್ನ ಬಗೆಗೆ ನಿರವಿಸುವಾಗ ಬುದ್ಧಿವಂತನಾಗಿ ಉಳಿಯಲಾರ ಎಂದು ಹೇಳಿದ್ದಾರೆ. ಮಮತೆ ವಿವೇಕವನ್ನು ಕೆಡಿಸುತ್ತದೆಂಬುದನ್ನು ತಿಳಿಸಿದ್ದಾರೆ. ಆದರೆ ಅವರು ಹೆಬ್ಬೊತ್ತಗೆ ಬರೆವಾಗ ಈ ಮಾತನ್ನು ನೆನೆಪಿನಲ್ಲಿಟ್ಟುಕೊಂಡೇ ಎಚ್ಚರದಿಂದ ರಚಿಸಿದ್ದಾರೆ. ಹೀಗಿದ್ದೂ ಮಾತೊ ವಿಷಯವೊ ಎಳೆ ತಪ್ಪಿದೆಯೆಂದು ತಿಳಿದು ಹೀಗೆ ಹೇಳಿದ್ದಾರೆ : ' ಈ ಪುಸ್ತಕದಲ್ಲಿ ಮಾತೋ ವಿಷಯವೋ ಹೀಗೆ ತಪ್ಪಿತು ಎಂಬಲ್ಲಿ ಓದುವವರು ಕ್ಷಮೆ ತಾಳಬೇಕೆಂದು ನಾನು ವಿನಯದಿಂದ ಬೇಡುತ್ತೇನೆ. ಇವು ಯಾವುದರಿಂದಲೇ ಆಗಲಿ ಬೇಸರ ಆದ ಹೊತ್ತಿನಲ್ಲಿ ಸೋದರ ಜೀವಿಗಳು, ಇದು ಎದುರಲ್ಲಿರುವ ಒಬ್ಬ ವ್ಯಕ್ತಿಯ ಜೀವನ ಎಂದು ಭಾವಿಸದೆ, ಕಲ್ಪನೆಯ ಒಬ್ಬ ವ್ಯಕ್ತಿಯ ಒಂದು ಕತೆಯೆಂದು ಓದುವುದಾಗಲಿ, ಆಸಕ್ತಿಗೆ ಅನುಚಿತ ಎಂದು ಕಾಣಬಹುದಾದ ಸಂಗತಿ ಈ ಅನಾಸಕ್ತಿಗೆ ಬರಿಯ ಕತೆ ಎಂಬ ಕಾರಣದಿಂದ ಕ್ಷಮ್ಯವಾಗಿ ಕಂಡೀತು. ಮುಖ್ಯವಾಗಿ ಆತ್ಮಸ್ತುತಿಯ ಅಹಂಕಾರದ ಛಾಯೆ ಕಾಣುವ ಭಾಗಗಳಲ್ಲಿ ಪುಸ್ತಕ ಈ ತೆರನ ಸಹನೆಯನ್ನು ಕಡ್ಡಾಯವಾಗಿ ಬಯಸುತ್ತದೆ.'

ಅವರ ಬದುಕನ್ನು ಕುರಿತು ಅವರ ಭಾವವನ್ನು ತಿಳಿಸುವ 'ಭಾವ'ದ ಮೂರು ತೆನೆಗಳಲ್ಲಿ ಮೊದಲನೆಯದು ಓದು ಮುಗಿದು ಮೈಸೂರು ಸಂಸ್ಥಾನದ ಅಧಿಕಾರಿ ವರ್ಗದಲ್ಲಿ ಒಂದು ಸ್ಥಾನ ದೊರೆತವರೆಗಿನ ಚರಿತವನ್ನು ಬಿತ್ತರಿಸುತ್ತದೆ. ಎರಡನೆಯದು ಹದಿನೆಂಟು ವರ್ಷ ಅಧಿಕಾರಿಯಾಗಿ ಕೆಲಸ ಮಾಡಿದ್ದು, ಸರಕಾರ ಆ ಮುನ್ನ ಅವರು ಕಾಣದಿದ್ದ ಆಕೌಂಟ್ಸ್ ಇಲಾಖೆಯ ಮುಖ್ಯ ಅಧಿಕಾರಿಯಾಗಿ ನೇಮಿಸಿದ್ದು ಮೊದಲಾದ ಅಧಿಕಾರಕ್ಕೆ ಸಂಬಂಧಿಸಿದ ಚರಿತೆ ಹೇಳುತ್ತದೆ. ಮೂರನೆಯ ತೆನೆಯಲ್ಲಿ ಎರಡು ಎಸಳುಗಳಿವೆ. ಅಕೌಂಟ್ಸ್ ಅಧಿಕಾರಿಯಾಗಿ ನೇಮನ ಪಡೆದುದಿನಿಂದ ಮೊದಲಾಗಿ ಮಂತ್ರಿ ಸ್ಥಾನ ದೊರೆಯಲಿಲ್ಲವೆಂಬ ಕಾರಣದಿಂದ ಅವರಾಗಿ ಅಧಿಕಾರದಿಂದ ನಿವೃತ್ತಿ ಪಡೆದಲ್ಲಿಗೆ ಮೊದಲ ಎಸಳು ತಿಳಿಸುತ್ತದೆ. ಎರಡನೆಯ ಎಸಳು ಬಿಡುಗಡೆ ಪಡೆದಂದಿನಿಂದ ಈಚಿನ ಬಿಡುವಿನ ಬದುಕನ್ನು ಬಣ್ಣಿಸುತ್ತದೆ.

ಭಾವದ ಮೂರೂ ತೆನೆಗಳು ಸೇರಿ, ಅವರು ಮೊದಲಲ್ಲಿ ನೆನೆದುದಕ್ಕಿಂತ ಲಂಬವಾದ ಒಂದು ಚರಿತೆಯಾಗಿ ಬೆಳೆದೂ ಕೆಲವು ವಿವರಗಳು ಕೈಬಿಟ್ಟು ಹೋಗಿವೆ. ಅವರ ಬದುಕಿನ ಎಲ್ಲ ಅನುಭವವೂ ಅಡಕವಾಗಿಲ್ಲ: 'ಜೀವನದ ಒಂದು ನಿಕಟ ಭಾಗ ಎನ್ನಲು ಬಾರದ ಹಲವು ಸಂಗತಿಯನ್ನು ಇದರಲ್ಲಿ ತರದೆ ಬಿಟ್ಟಿದೆ. ಹಾಗೆಯೇ ನನಗೆ ಇಷ್ಟರಾದ, ಪರಿಚಿತರಾದ ಹಲವು ಮಹನೀಯರ ವ್ಯಕ್ತಿಚಿತ್ರಗಳನ್ನೂ ಕೊಡದೆ ಉಳಿಸಿದೆ.' ಇದರಂತೆ ಅವರು ಬರೆಹಗಾರರಾಗಿ ತಳೆದ ಅನುಭವ, ಪಡೆದ ಪ್ರಭಾವ ಕುರಿತ ಪ್ರಸ್ತಾಪ ಇದರಲ್ಲಿ ಕಡಿಮೆ. ಬರೆಹಗಾರನ ಬದುಕನ್ನು ಇದರಲ್ಲಿ ಬೇಕೆಂದೇ ಮೊಟಕುಗೊಳಿಸಿದ್ದಾರೆ. ಆ ವಿಷಯ ಕುರಿತು ಈ ಮುನ್ನ ಹೊರಬಂದಿರುವ ಪ್ರಸಂಗದ ಎರಡು ತೆನೆಗಳಲ್ಲಿ ಹೇಳಿದ್ದಾಗಿದೆ.

ಭಾವದ ಮೂರೂ ಭಾಗಗಳು ಒಟ್ಟಂದದಿಂದ ಕಂಗೊಳಿಸುತ್ತವೆ, ಅಷ್ಟು ಅಚ್ಚು ಕಟ್ಟಾದ ಹೊಂದಾಣಿಕೆಯ ನೆಯ್ಗೆಯಿದೆ. ಒಂದೊಂದೇ ತೆನೆಯನ್ನು ತನಿತನಿಯಾಗಿ ಓದಿದಾಗಲೂ ಅದರ ಚೆಲುವು ಸ್ವಾರಸ್ಯ ಇದ್ದದ್ದೇ. ಆದರೂ ಮೊದಲ ತೆನೆಯಲ್ಲಿ ಮಾಸ್ತಿಯಲ್ಲಿ ಮೊದಲಿಟ್ಟ ಈ ಜೀವ ಹೇಗೆ ಬೆಳೆಯಿತೆಂಬ, ಅದರ ವಿಕಾಸದ ಸಮಗ್ರ ಚಿತ್ರವನ್ನು ನೋಡುವ ತವಕ ಮೂಡುತ್ತದೆ. ಮೂರನೆಯ ತೆನೆಯ ಕಡೆಯ ಪುಟದ ತನಕ ಈ ಕುತೂಹಲ ತಣ್ಣಗಾಗುವುದಿಲ್ಲ. ಬತ್ತದ ಈ ಆಸಕ್ತಿಯ ನಿರೂಪಣೆಯ ಯಶಸ್ಸಿನ ಗುಟ್ಟು ಮಾಸ್ತಿಯವರ ಕತೆಗಾರಿಕೆ ಕಲೆ. ಅವರ ಆ ಕತೆಗಾರನ ಕೈಚಳಕ ಹೊತ್ತಗೆಯ ಮೊದಲಿಂದ ತುದಿ ತನಕ ಹಾಸುಹೊಕ್ಕಾಗಿದೆ. ಎಲ್ಲಿ ಯಾವ ಪುಟ ತೆರೆದರೆ ಅಲ್ಲಿ ಈ ಕಲೆ ಕಾಣುತ್ತದೆಯಾದರೂ ಒಂದು ಉದಾಹರಣೆ ನೋಡಬಹುದು: 'ಅವರಿಗೆ ಒಬ್ಬ ಮಗ. ಅವನ ಹೆಸರು ವೆಂಕಟಕೃಷ್ಣಯ್ಯ ಎಂದು. ಪ್ರಾಯ ಬಂದಾಗ ಹುಡುಗನಿಗೆ ಮದುವೆ ಆಯಿತು. ಅವನ ಹೆಂಡತಿ ಸಮೀಪದ ಒಬ್ಬ ಹೆಣ್ಣು ಮಗಳು. ಇವರಿಗೆ ಇಬ್ಬರು ಮಕ್ಕಳು, ತಾಯ ಆಳ್ವಿಕೆಯಲ್ಲಿ ಮಗನು ಬೆಳೆಯುತ್ತಿರಲಾಗಿ ಸೊಸೆಯಾದವಳಿಗೆ ವಿಶೇಷ ಸ್ವಾತಂತ್ರ್ಯವಿರಲಿಲ್ಲ. ಒಂದು ಸಲ..." (ಭಾವ-೧, ಪುಟಗಳು ೭-೮) ಅವರ ಯಾವುದೇ ಕತೆ ಕಾದಂಬರಿ ಓದಿದಂತೆ ಭಾವವನ್ನೂ ಅಷ್ಟೇ ಗೆಲುವಾಗಿ ಓದಬಹುದು.

ಹುಟ್ಟಿ ಬೆಳೆದ, ಓದು ಬರೆಹ ಕಲಿತ, ಊರು ಕೇರಿಗಳ, ಸಾಕಿ ಸಲಹಿದ ನಂಟರಿಷ್ಟರ,

ಒಡನಾಡಿ ಒಡನೋದಿಗಳ, ಕಲಿಸಿದ ಹಿರಿ ಕಿರಿಯ ಗುರುಗಳ, ಬೇರೆ ಬೇರೆ ಅಧಿಕಾರಗಳಲ್ಲಿದ್ದುದರ, ಆ ಅವಧಿಯಲ್ಲಿ ಅಧಿಕಾರ ನಿಮಿತ್ತ ಸಂಚರಿಸಿದ ಸ್ಥಳಗಳ ಹೆಸರು ವಿವರ ಪರಿಚಯ ಮಾಡಿಕೊಡುತ್ತಾರೆ. ಅರವತ್ತು ವರ್ಷದ ಹಿಂದಿನ ಹಳೆಯ ಗೆಳೆಯರೊಡನೆ ಕಳೆದ ದಿನಗಳನ್ನು ನೆನಪಿಸುತ್ತಾರೆ. ಅವರ ಜಿಗುಟಾದ ನೆನಪಿನ ಕಸುವು ಕಂಡು ಅಚ್ಚರಿ ಮೆಚ್ಚುಗೆ ಒಡನೊಡನೆ ಮೂಡುತ್ತವೆ. ಯಾವ ಸಣ್ಣ ಸಂಗತಿಯನ್ನೂ ಮರೆಯರು, ಬಿಡರು, ಉಪನಯನ ಉಪಾಕರ್ಮದಿಂದ ಹಿಡಿದು ಇತರ ನೂರಾರು ಅನುಭವ ಅನ್ನಿಸಿಕೆಗಳನ್ನು ಬಣ್ಣಿಸಿದ್ದಾರೆ. ಅವುಗಳೆಲ್ಲದರ ವಿಶ್ಲೇಷಣೆ ಈ ಪರಿಮಿತ ಸಮೀಕ್ಷೆಯಲ್ಲಿ ಸಾಧ್ಯವಿಲ್ಲ. ಒಂದು ಸ್ಥೂಲ ಹಕ್ಕಿ ನೋಟಕ್ಕೆ ದಕ್ಕಿದ ಕೆಲವು ಸನ್ನಿವೇಶ ಪ್ರಸಂಗಗಳನ್ನಷ್ಟೇ ಬಿಡಿಸಿ ನೋಡಿದೆ.

ಭಾವದಲ್ಲಿ ಎಲ್ಲಕ್ಕೂ ಮೊದಲು ಎದ್ದು ಕಾಣುವುದೆಂದರೆ ದೈವದ ಮಾತು. ಈ ಹೆಬ್ಬೊತ್ತಗೆಯಲ್ಲಿ ನನ್ನ ಸ್ಥೂಲ ವಿಹಂಗಮ ನೋಟಕ್ಕೆ ಸುಮಾರು ಇನ್ನೂರು ಕಡೆ ದೈವದ ಪ್ರಸ್ತಾಪವಿದೆ. ಮೊದಲ ತೆನೆಯ ಮುನ್ನುಡಿಯ ಕಡೆಯಲ್ಲೇ ಈ ನುಡಿಗಳಿವೆ : 'ಬಾಳ ಕಷ್ಟದಿಂದ ಕುಸಿದು ಭೂಗತವೇ ಆಗುವ ಹೊತ್ತಿನಲ್ಲಿ ಚೇತನವನ್ನು ಯಾವುದೋ ಶಕ್ತಿ, ಯಾವುದೋ ಕರುಣೆ ಹಿಡಿದುಕೊಳ್ಳುತ್ತದೆ, ಎತ್ತಿ ನಿಲ್ಲಿಸುತ್ತದೆ. ನಿಂತೆ ಎಂದು ಹೇಳಿಕೊಳ್ಳುವಲ್ಲಿ ಚೇತನ ಆ ನಿಂತದ್ದು ತನ್ನ ವ್ಯಾಪಾರ ಎನ್ನುತ್ತಿರುವಂತೆ ಕಾಣುತ್ತದೆ. ಇದು ಕಾಣುವ ಪಾಡು ಅಷ್ಟೆ. ಸ್ವಲ್ಪ ಯೋಚಿಸಿದರೆ ಚೇತನ ಇದನ್ನು ತಿಳಿಯಬಲ್ಲದು. ನನ್ನ ಚೇತನಕ್ಕೆ ದೈವ ಈ ತಿಳಿವನ್ನು ಅನುಗ್ರಹಿಸಿದೆ. ನನ್ನ ಬಾಳಿನಲ್ಲಿ ತಪ್ಪೇನಾಗಿದೆ ಅದಕ್ಕೆಲ್ಲ ನನ್ನ ಸ್ವಭಾವ ಕಾರಣ; ಒಳಿತೇನಾಗಿದೆ ಅದೆಲ್ಲದರ ಕಾರಣ ದೈವ ಕೃಪೆ'. ಇಲ್ಲಿ ಅನೇಕರಿಗೆ ಕಟರೆಯಾಗುವಷ್ಟು ಅತಿಯೆಂಬಂತೆ, ಬೇಸರ ಬರುವಷ್ಟು ದೈವದ ಮಾತು ಬಂದಿದೆಯೆಂದು ತೋರಬಹುದು, ಅಂತಹವರಿಗೆ ಮೇಲಿನ ಮಾತು ಉತ್ತರ ಕೊಟ್ಟೀತು. ಇದೂ ಸಮಾಧಾನ ನೀಡದಿದ್ದಲ್ಲಿ ಭಾವದ ಮೂರನೆಯ ತೆನೆಯ ಮುಗಿತಾಯದ ಮೂರು ಪುಟಗಳನ್ನು ನೋಡಬೇಕು.

ಮುಖ್ಯವಾಗಿ ಈ ಸಾಲುಗಳನ್ನು ಅವಲೋಕಿಸಬೇಕು : 'ಬರಬರುತ್ತಾ ನನ್ನ ಮನಸ್ಸಿಗೆ ನನ್ನ ಒಂದೊಂದು ಉಸಿರೂ ನನಗೆ ದೈವದ ಅನುಗ್ರಹದಿಂದ ಬರುತ್ತಿದೆ, ನನ್ನ ಒಂದೊಂದು ಎಣಿಕೆಯೂ ಅದೇ ಮೂಲದಿಂದ ಬರುತ್ತಿದೆ, ಮಾತೆಲ್ಲ ಬರುವುದು ಅಲ್ಲಿಂದಲೇ, ಎಲ್ಲ ಕ್ರಿಯೆಯ ಪ್ರೇರಣೆ ಅಲ್ಲಿಂದಲೇ ಬರುತ್ತಿದೆ ಎನ್ನುವುದು ಮನದಟ್ಟಾಯಿತು.... ಇಂಥ ಹೊತ್ತಿನಲ್ಲಿ ಎಂದಲ್ಲ, ಎಲ್ಲಿ ತೋಚಿದರೆ ಅಲ್ಲಿ, ಮನಸ್ಸಿನಲ್ಲಿ ದೈವವನ್ನು ಕುರಿತು ನಂಬಿಕೆಯನ್ನು ಕೊಡು, ಭಕ್ತಿಯನ್ನು ಕೊಡು, ಧೈರ್ಯ ಕೊಡು, ಶಕ್ತಿ ಕೊಡು, ಸೇವೆ ಮಾಡಿಸಿಕೋ, ಉದ್ಧಾರ ಮಾಡು ಎಂದು ಬೇಡುವುದನ್ನೇ ವಾಡಿಕೆ ಮಾಡಿಕೊಂಡೆನು..... ಎಚ್ಚರದ ಹೊತ್ತಿನಲ್ಲಿ, ಸಾಧ್ಯವಾದಷ್ಟು ವೇಳೆ, ಈ ಕ್ಷಣದ ಬಾಳುವೆ ಏನಿದೆ ಇದು ನಿನ್ನ ಕೃಪೆ ಎಂದು ಮತ್ತೆ ಮತ್ತೆ ಹೇಳಿಕೊಳ್ಳುತ್ತಿದ್ದೇನೆ.'

ಈ ವಿಚಾರಕ್ಕೆ ಸೇರಿದಂತೆ ಒಂದು ಸಾಮತಿ ಕೊಟ್ಟಿದ್ದಾರೆ : 'ನಾನು ನಮ್ಮ ನಾಯಿ 'ದಾಸ'ನನ್ನು ಸರಪಳಿಯಲ್ಲಿ ಹಿಡಿದು ನಡೆದು ಹೋದದ್ದುಂಟು. ಅದು ತೀರ ಅವಿವೇಕಕ್ಕೆ ಹೋದರೆ ನಾನು ಅದನ್ನು ತಡೆದು ಸೆಳೆಯುತ್ತೇನೆ. ಇಲ್ಲವಾದರೆ ಸರಪಳಿ ಇರುವಷ್ಟು ದೂರ ಅದು ಸ್ವತಂತ್ರ, ಅದರ ರುಚಿಯನ್ನನುಸರಿಸಿ ನಡೆದುಕೊಳ್ಳಬಹುದು. ದೇವರಿಗೆ ನನ್ನ ಜೀವ, ನನಗೆ ನಮ್ಮ ನಾಯ ಜೀವ

ಹೇಗೆ, ಹಾಗೆ ಸೇರಿದೆ. ಅವನು ನನ್ನನ್ನು ನೋಡಿಕೊಳ್ಳುವುದು ಹಾಗೆಯೇ ಎಂದು ತೋರುತ್ತಿದ್ದೆ. ನಾನು ನನ್ನ ದೈವ ಹಿಡಿದಿರುವ ಸರಪಳಿಯ ಸ್ವಾತಂತ್ರ್ಯದಲ್ಲಿ ಬಾಳುತ್ತಿರುವುದು ಹಾಗೆಯೇ.'

ಅವರಿಗೆ ದೈವದ ಅನುಗ್ರಹದಿಂದ ಎಷ್ಟೋ ಕಹಿ, ನೋವು ತಪ್ಪಿದೆಯೆಂಬ ಭಾವ ಬೇರೂರಿದೆ. ಕಾನಕಾನಹಳ್ಳಿಯ ಕಂದಕದಲ್ಲಿ ನಡೆದ ದಿನಗಳಲ್ಲಿ, ಹಾವುಗಳಿರುವ ತಾಣವಾಗಿದ್ದು, ಒಂದು ದಿನವೂ ಒಂದು ಹಾವೂ ಅವರಿಗೆ ಕಾಣಲಿಲ್ಲ. ಯಾವುದೋ ಕರುಣೆ ಕಾಪಾಡುತ್ತಿರುವ ಹೊತ್ತಿನಲ್ಲಿ ಕೇಡು ತಾನಾಗಿಯೇ ದೂರ ನಿಲ್ಲುತ್ತದೆನ್ನುತ್ತಾರೆ. ಅದರಂತೆ ಅದೇ ಊರಿನಲ್ಲಿ ಒಮ್ಮೆ ಹೊಳೆ ತುಂಬಿ ಹರಿವಾಗ ಹುಡುಗರ ಹುರಿದುಂಬಿಸುವಿಕೆಗೆ ಪಕ್ಕಾಗಿ ನೀರಿಗಿಳಿದು ಈಜತೊಡಗಿದರು. ಪ್ರವಾಹದಲ್ಲಿ ಸಿಕ್ಕಿಬಿದ್ದರು. ಆದರೆ ದೈವ ತಾನಾಗಿ ಕಾಪಾಡಿದ್ದರಿಂದ, ಘಟ್ಟದ ಮೆಟ್ಟಲಿನ ಕೊನೆಯ ಕಲ್ಲನ್ನು ಹಿಡಿದುಕೊಂಡು. ಏರಿ ಮೇಲಕ್ಕೆ ಬಂದರು. ಇದೇ ರೀತಿ-ಇನ್ನೊಮ್ಮೆ ಸಿವಿಲ್ ಸರ್ವೀಸು ಪರೀಕ್ಷೆಗೆ ಕೊನೆಯ ಪತ್ರಿಕೆಗೆ ಉತ್ತರ ಬರೆಯಲು ಹೋಗದೆ ನಿಂತಾಗ ಆತ್ಮೀಯರೊಬ್ಬರು ಬಂದು ಗದರಿಸಿ ಕಳಿಸಿದರು. ಧೈರ್ಯ ಕುಸಿದು ಬಿದ್ದಿದ್ದ ಆ ಹೊತ್ತಿನಲ್ಲಿ, ದೈವ ಸ್ಪಷ್ಟವಾಗಿ ಕೈಯಾಡಿಸಿದ ಸಂದರ್ಭಗಳಲ್ಲಿ ಇದೂ ಒಂದೆಂಬಂತೆ ಅವರಿಗೆ ಮತ್ತೆ ಧೈರ್ಯ ಬರುವಂತೆ ಮುಂದಿನ ಬಾಳು ನೇರ ಆಗುವಂತೆ ಗೆಳೆಯರು ಮಾಡಿದರು.

ನಿಷ್ಕಾರಣ ದೇವ ವ್ಯಾಪಾರ ನಡೆದುದೆಂದು ನಿದರ್ಶನಕ್ಕೆ ಲೋವರ್ ಸೆಕೆಂಡರೀ ಪರೀಕ್ಷೆ ದಿವಸ ಮರೆತು, ಮೈಸೂರು ದೊಡ್ಡ ಮಾರುಕಟ್ಟೆಯ ಗಡಿಯಾರ ನೋಡುತ್ತಾ ಥಟ್ಟನೆ ನೆನಪಾಗಿ ಓಡಿ ಅರ್ಧಗಂಟೆ ಕಳೆಯುವ ಮುನ್ನ ಪರೀಕ್ಷೆ ಕೋಣೆ ಪ್ರವೇಶಿಸಿದ್ದನ್ನು ಹೇಳಿದ್ದಾರೆ. ಮತ್ತೊಮ್ಮೆ ಒಂದು ಹಳ್ಳಿಯಲ್ಲಿ ಜಲಶಂಕೆ ತೀರಿಸಿಕೊಂಡು ಬರಲು ಇರುಳಲ್ಲಿ ಬಯಲಿಗೆ ಹೋದರು. ತುಂಬ ದೂರ ಹೊರಟಾಗ ಬಂಧುವೊಬ್ಬರು ಕತ್ತಲಲ್ಲಿ ತುಂಬ ದೂರ ಹೋಗುವುದು ಬೇಡ, ಅಲ್ಲೇ ಕೂತುಕೋ ಎಂದರು. ಅಲ್ಲೇ ಕುಳಿತರು. ಬೆಳಿಗ್ಗೆ ಕೆರೆ ಕಡೆ ಹೊರಟರು. ಆಗ ನೋಡುತ್ತಾರೆ, ರಾತ್ರಿ ಇನ್ನೆರಡು ಹೆಜ್ಜೆ ಮುಂದೆ ಹೋಗಿದ್ದರೆ ಇಪ್ಪತ್ತು ಅಡಿ ಆಳದ ಕೆಸರಿರುವ ಹಾಳು ಬಾವಿಯಿತ್ತು! ಭಾವ ೨ ರಲ್ಲಿ ದೇವರನ್ನು ಕುರಿತ ನಿಲುವು, ರಾಮಾಯಣ ಪಾರಾಯಣ, ಅಗಡಿ ಸಾಧುಗಳು, ತಿರುಪತಿ ಯಾತ್ರೆ, ಶಿವ ವಿಷ್ಣು ಬೇರೆ ಅಲ್ಲ- ಮುಂತಾದ ಭಾಗಗಳು ಸಾರುತ್ತವೆ.

ಹುರುಪುಕೊಟ್ಟ ಹಿರಿಯರನ್ನೂ, ಅಕ್ಕರೆ ತೋರಿದ ಜನರನ್ನೂ ಎದೆದುಂಬಿ ನೆನೆಯುತ್ತಾರೆ. ತಮ್ಮನ್ನು ಚೆನ್ನಾಗಿ ಕಂಡ ಅತ್ತೆ ಮಾವಂದಿರನ್ನು ಕುರಿತು ಒಂದು ಕಡೆ ಹೀಗೆ ಬರೆಯುತ್ತಾರೆ : 'ಇದನ್ನು ನೆನೆದರೆ ನನಗೆ ಆ ಗಂಡ ಎಷ್ಟು ಹಿರಿಯ ಸ್ವಭಾವದ ಮನುಷ್ಯ, ಅವರ ಈ ಹೆಂಡತಿ ಅಷ್ಟೇ ಹಿರಿಯ ಸ್ವಭಾವದ ಸ್ತ್ರೀ ಎನ್ನಿಸುತ್ತದೆ. ನಾನೀಗ ವಯಸ್ಸಾದ ಮನುಷ್ಯ. ಅವರ ದಿನ ಮುಗಿದು ಅವರಿಬ್ಬರೂ ದೇವರ ಸನ್ನಿಧಿ ಸೇರಿದ್ದಾರೆ. ನನ್ನ ನಮನದಿಂದ ಅವರಿಗೆ ಆಗಬೇಕಾದದ್ದು ಏನೂ ಇಲ್ಲ. ಆದರೂ ಇಲ್ಲಿ ಆ ಕೃತಜ್ಞತೆಯ ನಮನವನ್ನು ನನ್ನ ತೃಪ್ತಿಗಾಗಿ ಒಪ್ಪಿಸುತ್ತೇನೆ. ವಾತ್ಸಲ್ಯ ಮೂರ್ತಿ ಆ ಮಾವ, ತ್ಯಾಗರೂಪಿಣಿ ಆ ಅತ್ತೆ. ನನ್ನ ಮನಸ್ಸಿಗೆ ಲೋಕವನ್ನು ಕಾಯುತ್ತ ದೈವ ಒಂದಿದೆ ಎನ್ನುವುದಕ್ಕೆ ಪ್ರಮಾಣವಾಗಿ ನೆನಪಾಗಿ ಉಳಿದಿದ್ದಾರೆ. ಆ ಮಾವನಿಗೆ ನಮೋ! ಆ ಅತ್ತೆಗೆ ನಮೋ!'

ಮಾಸ್ತಿಯವರು ಎಳೆಯಂದಿನಿಂದ ಬಹಳ ಸೂಕ್ಷ್ಮ. ಒಳ್ಳೆಯದನ್ನು ಮಾಡುವುದಕ್ಕೆ ಹೋಗಿ ತಪ್ಪು ಮಾಡಿದ ಎಂದು, ಕಿರಿಯಂದು ಶಾಲೆಯಲ್ಲಿ, ದಂಡನೆಗೆ ಗುರಿಯಾದ ಸಂದರ್ಭದ ನೆನಪು ಅವರ ಎದೆಯಾಳದಲ್ಲಿ ಇಂದಿಗೂ ಅಚ್ಚಳಿಯದೆ ನಿಂತಿದೆ. ಭಾವದಲ್ಲಿ ಇಂತಹ ಎಷ್ಟೋ ಸಂಗತಿಗಳು ಸೇರಿವೆ. ಅವುಗಳಲ್ಲಿ ಕೆಲವು ಸಂಗತಿಗಳು ಕೇವಲ ಅಕ್ಷರಲ್ಲೇ ನಿಲ್ಲುವುದಿಲ್ಲ. ಅವು ಬರೆದವರ ಬದುಕಿನ ರೀತಿ ನೀತಿಗಳನ್ನೂ ಬಿಂಬಿಸುತ್ತವೆ. ಒಂದು ನಿದರ್ಶನ. ಅವರ ಒಡನೋದಿಯೊಬ್ಬ, ಅವನು ಬಡವ ಅಹುದು, ಮುಖ್ಯಾಧಿಕಾರಿಗಳನ್ನು ಕಾಡಿ ಬೇಡಿ ಕಡುಬಡವನೆಂದು ಅರಿಕೆ ಮಾಡಿ, ಉಚಿತ ವಿದ್ಯಾಭ್ಯಾಸ ಸೌಲಭ್ಯಗಿಟ್ಟಿಸಿಕೊಂಡ. 'ನನಗೆ ನಾನೂ ಇವನಂತೆ ಮಾಡಿದ್ದರೆ ಫ್ರೀಷಿಪ್ ಸಿಕ್ಕುತ್ತಿತ್ತೋ ಏನೋ ಎಂದು ತೋಚಿತು.' ನಾನು ಸಾಹೇಬರನ್ನು ಹಾಗೆ ಕಾಡಲಿಲ್ಲ, ಅಷ್ಟೇ ಅಲ್ಲ, ಅಷ್ಟು ಹಠ ಮಾಡಿ ಅವರನ್ನು ಬೇಡುವ ಸ್ವಭಾವದವನೂ ಆಗಿರಲಿಲ್ಲ. ನಮ್ಮಲ್ಲಿ ಒಬ್ಬೊಬ್ಬನೂ ನಿರ್ಮಾಣವಾಗಿರುವ ರೀತಿ ಒಂದಿದೆ. ನನ್ನ ರೀತಿಯಿದು, ಕೊಡುವವರು ಕೊಟ್ಟರೆ ಸಮ; ಕೊಡಲಿಲ್ಲ ಅವರಿಷ್ಟ. ಅಂದೂ ಅಷ್ಟೆ, ಎಂದೂ ಅಷ್ಟೆ. ನ್ಯಾಯವಾಗಿ ತಿಳಿಸಬೇಕಾದಷ್ಟನ್ನು ತಿಳಿಸಿ, ಕೊಟ್ಟರೆ ತೆಗೆದುಕೊಳ್ಳುವುದು, ಇಲ್ಲವೆಂದರೆ ಸುಮ್ಮನಾಗುವುದು; ಇದು ನನ್ನ ಮನೋಧರ್ಮ'.

ತಿಳಿಯಾದ ಕನ್ನಡ ಮಾತುಗಳು ಹೊತ್ತಗೆಯ ಮೂರು ತೆನೆಗಳುದ್ದಕ್ಕೂ ಕೋದುಕೊಂಡಿವೆ : ಮುಮ್ಮೊದಲು, ಕಾಳುಕಡಿ, ಚಟ್ಟೇಕಾರ, ಮನೆಕೆಟ್ಟು, ಪಡಿ, ಮುದಿಕೊರಡು, ಪಿಳ್ಳೆ, ಮಶಿ ಕುಡಿಕೆ, ಎಲೆಪೆಂಡೆ, ಬೊಂಕು, ಮೋಡು, ನಾಕಾಲಿ, ನಿರಕು, ಸಿಂಪಿ (ದರ್ಜಿ), ತಕ್ಕಾಳಿ ಹಣ್ಣು, ತಪ್ಪಲೆರೊಟ್ಟಿ ಮುಂತಾದುವು ನೂರಾರಿವೆ. ಅನ್ಯ ದೇಶ್ಯ ಶಬ್ದಗಳೂ ಅನೇಕ ಸೇರಿವೆ : ಪೋಲೀಸ್, ಜವಾನ, ದಫೇದಾರ, ಸೇಕದಾರ, ಸುಲ್ತಾನ, ದಿವಾನ, ಪೆರಿಯಾತ್ (ದೊಡ್ಡಮನೆ), ಇನಾಮತಿ, ತುಪಾಕಿ, ಸವಾರಿ, ಪಾಟಿ, ದತ್ತು, ಸಮನ್ಸ್, ಅನ್ಯಾಕಾರಿ, ಲಗಾಮು, ತಿರುಮಂಗ್ಯೆ, ನೇಮನ, ಮುನ್‌ಸೀಫ್, ಬದಲಿ, ಪ್ಲೇಗು, ದೌತಿ, ರೊಕ್ಕ, ಲ್ಯಾಂಪ್, ಚಿಮ್ನಿ, ಅಟ್ಲಾಸು, ಟೈಂಪೀಸು, ಮೋಜಣಿದಾರ ಇತ್ಯಾದಿ. ಇವುಗಳಲ್ಲಿ ಅರಬ್ಬಿ, ಪಾರಸಿ, ದಖ್ಖನಿ ಮತ್ತು ಇಂಗ್ಲಿಷ್ ಶಬ್ದಗಳಿವೆ. ಶಬ್ದ ಶಾಸ್ತ್ರಾಧ್ಯಯನ ದೃಷ್ಟಿಯಿಂದ ಇವು ಸ್ವಾರಸ್ಯವಾದ ಶಬ್ದಗಳು. ಕುದುರೆ ಸವಾರಿ ಕಲಿತದ್ದು, ಜಮಾಬಂದಿ ಮಾಡಿದ್ದು, ಚಿರತೆಯ ಬೇಟೆಗೆ, ಸಾಹೇಬರ ಜೊತೆ ಹೋಗಿದ್ದು, ಟಿ. ಚೌಡಯ್ಯನವರ ಮೊತ್ತಮೊದಲ ಸಂಗೀತ ಕಚೇರಿ, ನಾಲ್ಕೈದು ಸಲ ಕಾಯಿಲೆ ಮಲಗಿದ್ದು, ಬಾಬಾಬುಡನ್, ಜಗಳಗಂಟ ಪ್ಲಾಂಟರ್ ಮೊದಲಾದ ಸ್ವಾರಸ್ಯಗಳನ್ನು ಇಲ್ಲಿಯೇ ಹೆಸರಿಸಬಹುದು.

ಹೊತ್ತಗೆಯ ಹಿರಿಮೆ ಸಾರುವ ಹಲವಾರು ಸಂಗತಿ ಪ್ರಸಂಗಗಳಲ್ಲಿ ಹಳ್ಳಿಯ ಹಳೆಯ ಬಾಳಿನ ಚಿತ್ರಣ ಒಂದು ಈಗೀಗ ಕಡಮೆಯಾಗುತ್ತಾ ಕ್ರಮೇಣ ಕಣ್ಮರೆಯಾಗತೊಡಗಿರುವ ಗ್ರಾಮ ಜೀವನದ ಚಿತ್ರಗಳು ಹಲವೆಡೆ ಅರಳಿ ನಿಂತು ಲೇಖಕರ ನಿಕಟ ಪರಿಚಯವನ್ನು ತೋರುತ್ತವೆ. ಹಳ್ಳಿಯ ಆಟ (ಉಪ್ಪರಪಟ್ಟೆ)-ಪಾಟ ವಿನೋದಗಳನ್ನು, ಹಳ್ಳಿಯ ಹಬ್ಬ ಹರಿದಿನಗಳನ್ನೂ, ಹಳ್ಳಿಯ ಹಿರಿಯ ಕಿರಿಯರ ಬಾಳಿನ ರೀತಿ ನೀತಿಗಳನ್ನು ನಿರವಿಸುತ್ತಾರೆ. ವರ್ಷದಲ್ಲಿ ಊರ ಕೆರೆ ಕೋಡಿ ಹರಿದ ದಿನ ನಡೆಯುತ್ತಿದ್ದ ಗಂಗಮ್ಮನ ಪೂಜೆ, ಮಳೆ ಬರಲಿ ಎಂದು ಬೇಡಿ, ಬಂದಾಗ ಉಬ್ಬಿನಿಂದ ಒಕ್ಕಲ ಮಕ್ಕಳು ಹೊಲಗಳ ಮೇಲೆ ಬೂದಿ ಚೆಲ್ಲಿ ಬಯಲಿನಲ್ಲಿ ಪಾನಕ ಚರುಪು ಹಂಚುವುದು,

ಮಹಾನವಮಿಹಬ್ಬ, ಕಾಮನಹಬ್ಬ, ಮೊದಲಾದುವು ಇಲ್ಲಿವೆ. ಇವಲ್ಲದೆ, ನಾನು ಕೂಡ ನಮ್ಮ ಹಳ್ಳಿಯಲ್ಲಿ ಎಳೆಯಂದು ಕಂಡು ಸುಖಿಸಿದ, ಒಂದು ಮಾರಮ್ಮನ ಹಬ್ಬವನ್ನು ಭಾವದ ಮೊದಲ ತೆನೆಯಲ್ಲಿ ಕಣ್ಣಿಗೆ ಕಟ್ಟಿದ್ದಾರೆ.

'ಸಮೃದ್ಧಿಯ ಭಾವವನ್ನು ಮೂಡಿಸುತ್ತಿದ್ದ ಇನ್ನೊಂದು ಸಂದರ್ಭ ಊರ ಮಾರಿಯ ಹಬ್ಬದದಿನ ಒಕ್ಕಲು ಮನೆತನಗಳ ಸುಮಂಗಲೀ ಹೆಣ್ಣು ಮಕ್ಕಳುಗಳು ಮನೆ ಮನೆಯಿಂದ ತಲೆಯ ಮೇಲೆ ದೊಡ್ಡ ದೊಡ್ಡ ತಟ್ಟೆಗಳಲ್ಲಿ ಹಿಡಿಯುವಷ್ಟು ತಂಬಿಟ್ಟಿನ ಅಚ್ಚುಗಳನ್ನು ಇಟ್ಟುಕೊಂಡು ಬೀದಿಯಲ್ಲಿ ಸೇರಿ ಹಾಡುಗಳನ್ನು ಹಾಡಿಕೊಂಡು ಮೆರವಣಿಗೆ ನಡೆದು ಮಾರಮ್ಮನ ಗುಡಿಯ ಬಳಿಗೆ ನಡೆಯುತ್ತಿದ್ದದ್ದು. ಹಬ್ಬಕ್ಕಾಗಿ ಮಿಂದು ಹೊಸಬಟ್ಟೆಯನ್ನುಟ್ಟು ಶೃಂಗಾರ ಮಾಡಿಕೊಂಡು ಚೆನ್ನಾಗಿ ಬೆಳಗಿದ ತಟ್ಟೆಗಳಲ್ಲಿ ಬೇರೆ ಬೇರೆ ಗಾತ್ರದ ಅಚ್ಚಿನತಂಬಿಟ್ಟು, ಒಂದೊಂದರಲ್ಲೂ ಒಂದು ಹಣತೆ ಎಂಬಂತೆ ಇಷ್ಟು ತುಪ್ಪ ಅದರಲ್ಲಿ ಉರಿಯುತ್ತಿರುವ ಬತ್ತಿ ಇದನ್ನು ಹೊತ್ತ ಹೆಣ್ಣು ಮಕ್ಕಳು ಸಾಲಾಗಿ ಹೋಗುತ್ತಿರುವುದೂ, ಈ ತಂಬಿಟ್ಟಿನ ಅಚ್ಚು, ಅದರ ಬಣ್ಣ ಇದೂ, ಈಗ ನನ್ನ ಕಣ್ಣಿಗೆ ಪ್ರತ್ಯಕ್ಷ ಎಂಬಂತೆ ಇವೆ, ತಂಬಿಟ್ಟು ಹೊಸಬೆಲ್ಲದ ಬಣ್ಣವಾಗಿ ಇರುತ್ತಿತ್ತು. ಅದರ ಅಚ್ಚು ಈಗ ಪೇಟೆಯಲ್ಲಿ ಸಿಕ್ಕುವ ಬೆಲ್ಲದ ಅಚ್ಚಿನಂತೆ ಇರುತ್ತಿತ್ತು. ಮೂವತ್ತು ತಲೆಯ ಮೇಲಿನ ಮುನ್ನೂರು ದೀಪಸಾಲಿಗೆ ಬೀದಿಯಲ್ಲಿ ಮೆರವಣಿಗೆ ಹೋಗುತ್ತಿದ್ದದ್ದು ಬಹು ಸುಂದರವಾದ ದೃಶ್ಯ ಆಗಿತ್ತು.'

ಭಾವದಲ್ಲಿ ಹತ್ತಾರು ಕಡೆ ಪ್ರಕೃತಿಯ ಭಾವಚಿತ್ರಗಳೇ ಸಿಗುತ್ತವೆ. ಚಿತ್ರಗಾರನಂತೆ ಕಣ್ಣೆದುರಿನದನ್ನು ಹಿಡಿದು ತೋರಿಸಿರುವುದಕ್ಕೆ ಶೀರ್ಯದ ಬಂಗಲೆಯಲ್ಲಿ ಉದಯ-ಬೆಳದಿಂಗಳ ರಾತ್ರಿ, ಚಿಕ್ಕಂದಿನಲ್ಲಿ ಆರಂಭದ ವ್ಯಾಸಂಗ ಆದ ಶಿವಾರಪಟ್ಟಣದ ಊರ ಮುಂದಿನ ಬಯಲ ಚೆಲುವು, ಜ್ಯೋತಿರ್ಲಿಂಗ ದರ್ಶನಾವಸರದ ರೈಲು ಪ್ರಯಾಣದ ಕಾಲದಲ್ಲಿ ಸಮುದ್ರದ ಸೊಗಸು, ಅಧಿಕಾರಾವಧಿಯ ಪ್ರಯಾಣ-ಪ್ರವಾಸಗಳಲ್ಲಿ ಕಂಡುಂಡ ನೆಲದ ಸಿರಿ-ಓದುಗರಿಗೂ ಹರ್ಷದ ನೆನಪು. ಬಾಳೆಹೊನ್ನೂರಿನಿಂದ ಚಿಕ್ಕಮಗಳೂರಿಗೆ ಒಮ್ಮೆ ಬೈಸಿಕಲ್ಲು ಹತ್ತಿ ಹೊರಟಾಗ ಆದ ಅನುಭವವಿದು : 'ಮಾರ್ಗ ಬೆಟ್ಟದ ಸಾಲಿನ ಭುಜದಲ್ಲಿ ಏರಿ ಇಳಿದು ಬಾಗಿ ಬಳುಕಿ ಹರಿಯುವುದು. ದಟ್ಟವಾದ ಕಾಡಿನ ಮಧ್ಯೆ ಬೆಟ್ಟದ ಪಕ್ಕದಲ್ಲಿ ಹಾಯುವ ಈ ಮಾರ್ಗ ಕಣ್ಣಿಗೆ ಬಹು ಚನ್ನಾಗಿರುತ್ತದೆ. ಇತ್ತಲೊ ಅತ್ತಲೋ ಇರುವ ಬೆಟ್ಟದ ಕೋಡು, ಅದನ್ನು ಹೊದೆದಿರುವ ಹಚ್ಚ ಹಸುರು, ಎದುರುಗಡೆಗಿರುವ ತಪ್ಪಲು, ಅದರ ಮಡಿಲಲ್ಲಿ ತುಂಬಿರುವ ನಿಬಿಡವನ, ಇಲ್ಲಿ ಮೇಲಿಂದ ಹರಿದು ಬರುತ್ತಿರುವ ನೀರು, ಇಲ್ಲಿ ತಗ್ಗಿನಲ್ಲಿ ಹರಿಯುತ್ತಿರುವ ಸರಳು, ಒಂದು ಕಾಫಿ ತೋಟ, ಒಂದು ಬಂಗಲೆ, ಒಂದು ಮನೆ, ಒಂದು ಗುಡಿಸಲು. ಮಧ್ಯೆ ಸಂಗಮೇಶ್ವರ ಮೈಲಿಮನೆಯಂಥ, ಮಲೆನಾಡಿಗೆ ದೊಡ್ಡದೇ ಆದ ಊರು. ಇಂಥ ನೆಲದಲ್ಲಿ ಸೈಕಲ್ ಸವಾರಿ ಒಂದು ಹರ್ಷದ ವ್ಯಾಪಾರ'. ಈ ನೆಲ ಹೇಗೆ ನರುಗಂಪಿನ **ಉಗ್ರಾಣವೆಂ**ಬ ಕವಿ ಸಹಜ ಬಣ್ಣನೆ ಭಾವದ ಮೂರನೆಯ ತೆನೆಯಲ್ಲಿ ಪುಟ ೨೦೬ರಲ್ಲಿ ಬರುತ್ತದೆ.

ನೆನಪು ಕಹಿಯಲ್ಲ ನಿಜ. ಆದರೆ ಎಲ್ಲ ನೆನಪೂ ಸಿಹಿಯಲ್ಲ. ಭಾವದ ಮೊದಲ ತೆನೆಯಲ್ಲಿ ಬಡವನ ಬವಣೆ ಪಟ್ಟದ್ದಿದೆ. ವಾರಾನ್ನದ ಹುಡಗನಾಗಿ 'ಅನ್ನದಾತ ಸುಖೀಭವ' ಎಂದು ಹಾರೈಸಿ

ಬೆಳೆದ ಮಾತಿದೆ. ತಾವೇ ಅಡಿಗೆ ಮಾಡಿಕೊಂಡುದೂ ಉಂಟು. ಅವರ ಒಟ್ಟು ಬಾಳಿನ ನಡೆದು ಬಂದ ದಾರಿಯ ಅವಲೋಕನದಲ್ಲಿ ವಿಶಿಷ್ಟ ಸ್ಮರಣೆಗಳೂ, ಸಾವು ನೋವಿನ ದಾರುಣ ಅನುಭವಗಳೂ ಕಂಡುಬರುತ್ತವೆ. ಒಮ್ಮೆ ಅವರ ತಾತನವರೊಂದಿಗೆ ಆಲೆಮನೆಗೆ ಹೋಗಿ ಕಬ್ಬಿನಹಾಲು ಕುಡಿದು ಬಿಸಿಬೆಲ್ಲ ತರುವಾಗ ದಾರಿಯಲ್ಲೇ ಈ ಹುಡುಗ ತಿಂದು ಮುಗಿಸಿದ್ದ! ಮುಪ್ಪಿನ ತಾತನಿಗೆ ನಿರಾಶೆ ಆಯಿತು! ಈ ಮೊಮ್ಮಗನಿಂದ ಆ ತಾತನಿಗೆ ನಿರಾಶೆಯಾಯಿತಲ್ಲಾ ಎಂಬ ಕೊರಗು ನಿಂತಿತು. ಈಗಲೂ ಹೊಸ ಬೆಲ್ಲದ ದಿನಗಳಲ್ಲಿ ಈ ವಿಷಯ ನೆನಪಿಗೆ ಬರುವುದು. ಹಾಗೆಯೇ ಮಳವಳ್ಳಿಯಲ್ಲಾದ ಕಹಿ ನೆನಪು; ಹಾಲನ್ನು ಮಜ್ಜಿಗೆ ಎಂದು ತಿಳಿದು 'ನನಗೆ ಹಾಕಿ' ಎಂದರು, ಚಿಕ್ಕಮಾವ ಒಂದು ಕೆಟ್ಟ ಮಾತೆಂದರು. ತಿಳಿಯದೆ ತಪ್ಪು ಮಾಡಿದ್ದರೂ ಗದರಿಕೆ ಅತಿಯಾಯಿತೆಂದು ತಲ್ಲಣಿಸಿದರು.

ಭಾವವನ್ನು ಓದಿದವರು ಯಾರೂ ಮರೆಯಲಾಗದ ನೆನಪುಗಳು ಕೆಲವಿವೆ. ಒಡನೋದಿ ಬಡ ಲಿಂಗಪ್ಪನ ಬಗೆಗಿನ ಮರುಕ, ಕರಿಬಸವಶಾಸ್ತ್ರಿಗಳ ಪಾಠದ ರೀತಿ, ವರದಾಚಾರ್ಯರ ಅಭಿನಯ, ಮದರಾಸಿನ ಬಾಳು, ಮಹಾರಾಜ ಕಾಲೇಜು, ಸೆಂಟ್ರಲ್ ಕಾಲೇಜು ವಿದ್ಯಾರ್ಥಿ ಜೀವನ ಹಾಗೂ ಅಲ್ಲಿ ಕಲಿಸಿದ ಗುರುಗಳು (ಅದರಲ್ಲಿಯೂ ಟೇಟ್ ಸಾಹೇಬರು), ಇಂಗ್ಲೀಷ್ ಉಪಾಧ್ಯಾಯರಾಗಿ ಸ್ವಲ್ಪ ಕಾಲ ಇದ್ದುದು. ಆಂಗ್ಲರ ಅವಿವೇಕ ದರ್ಪ ದಬ್ಬಾಳಿಕೆಯ ಧೂರ್ತತನ ಹಾಗೂ ಮದ ಸೊಕ್ಕಿನ ಕಠಿಣ ವರ್ತನೆ, ಅಭೇದಾನಂದರು, ಅನಿಬೆಸಂಟರು ನಾಯರವರು ಮಾಡಿದ ಸ್ವದೇಶಿ ಚಳುವಳಿಗೆ ಸ್ಫೂರ್ತಿ ಸಂದೇಶ ನೀಡಿದ ಧಾರ್ಮಿಕ ಬುನಾದಿಯ ಮೇಲೆ ನಿಂತ ಭಾಷಣಗಳು, ಜನ ಪದ ಸಾಹಿತ್ಯ ಪ್ರಸ್ತಾಪ-ಇವೆಲ್ಲ ಮನಸೆಳೆಯುತ್ತವೆ. ಅವರಿಗೆ ಇಸ್ಪೀಟು ಆಟದ ಮೋಹ. ಇಂದಿಗೂ ಗಾಂಧಿಬಜಾರಿನ ಕೊನೆಯ ಕ್ಲಬ್ಬಿನಲ್ಲಿ ನಿತ್ಯ ಸಾಯಂಕಾಲ ಹೋಗಿ ಒಂದೆರಡು ಗಂಟೆ ಆಡುವುದು ವಾಡಿಕೆ. ಆದರೆ ಓದುಗರಾಗಿದ್ದಾಗಲೂ ಈ ಚಟ ಇದ್ದು ಅದಕ್ಕೆ ಮುಗಿತಾಯ ಆಡಿದ ಪ್ರಸಂಗ ತಿಳಿಸಿದ್ದಾರೆ. ಕಲಿಯುವ ಕಾಲದಲ್ಲಿ ದಾರಿ ಗುರಿ ಎಲ್ಲ ಅದೇ ಆಗಿರಬೇಕೆಂಬ ಮಾತನ್ನು, ಓದುವ ಕಾಲದಲ್ಲಿ ಹಗಲೂ ರಾತ್ರಿ ಇಸ್ಪೀಟು ಆಡುವ ಹುಡುಗರು ಮರೆಯದೆ ಗಮನಿಸಬೇಕು.

ಮಾಸ್ತಿಯವರು ಋಜು ಸ್ವಭಾವದ ಸಾತ್ವಿಕರು. ಹಾಗೆಂದು ಸಪ್ಪೆಯಲ್ಲ. ಸಮಯ ಬಂದಾಗ ತಿರುಗಿ ಬೀಳುತ್ತಾರೆ. ಅಂತಹ ಆರೇಳು ಸಂಗತಿಗಳು ಭಾವದಲ್ಲಿವೆ. ಒಂದು ಉದಾಹರಣೆ; ಅವರು ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗಿನ ಘಟನೆ, ಕ್ರೈಸ್ತರ ಶಾಲೆ. ಪ್ರಾರ್ಥನೆ ಕ್ರೈಸ್ತ ಗುರುವನ್ನು ಕುರಿತದ್ದು. ಅದನ್ನೇ ಎಲ್ಲರೂ ಹೇಳಬೇಕೆಂದು ಒತ್ತಾಯ. ಹಿಂದೂ ವಿದ್ಯಾರ್ಥಿ ಉಪಾಧ್ಯಾಯರಿಗೆ ರುಚಿಸಲಿಲ್ಲ. ಇಷ್ಟವಿಲ್ಲವೆಂದು ಹೇಳಲಾರರು. ಅಲ್ಲದೆ ಮೇಲಿನ ಕ್ರೈಸ್ತ ಅಧಿಕಾರಿಗಳಿಗೆಲ್ಲಾ ಇದು ತಿಳಿದು ಎಲ್ಲರೂ ಹೇಳಬೇಕು, ತಪ್ಪದೆ ಭಾಗವಹಿಸಬೇಕೆಂಬ ಹಠ ತೋರಿದರು. ಇದರಿಂದ ಹಿಂದೂಗಳ ಮನಸ್ಸು ಮಲೆಯುತ್ತಿತ್ತು. ಹೀಗಿರುವಾಗ 'ಒಂದುದಿನ ನಮ್ಮ ತರಗತಿಯಲ್ಲಿ ಬಿಡುವಿನ ಹೊತ್ತಿನಲ್ಲಿ ನಮ್ಮ ಶಾಲೆಯ ಮಾತು ಪ್ರಸ್ತಾಪಕ್ಕೆ ಬಂದು ನಮ್ಮ ಜೊತೆಯ ಕ್ರೈಸ್ತ ಹುಡುಗ ಮಿಷನರಿಗಳನ್ನು ತುಂಬ ಹೊಗಳಿದ. ಅವನ ಮಾತು ಹೆಚ್ಚಾಯಿತು. ಅದಕ್ಕೆ ಪ್ರತಿಯಾಗಿ ನಾನು, ಅದೆಲ್ಲ ಸರಿ, but they have brought a nasty religion like Christianity in to our country' ಎಂದೆ.

ಹೊರಗಿಂದ ಬಂದು ಇವರು ನಮ್ಮ ಜನರನ್ನು ಕ್ರೈಸ್ತರನ್ನಾಗಿ ಜಾತಿ ಕೆಡಿಸುತ್ತಿದ್ದಾರೆ ಎಂದು ನನ್ನ ಅರ್ಥ. ಈ ಮಾತಿನ ಚುರುಕು ಬಿಸಿ ಸಂಬಂಧಪಟ್ಟವರಿಗೆ ತಟ್ಟಿತು.

ಮಾಸ್ತಿಯವರು ಅನೇಕ ವ್ಯಕ್ತಿಗಳನ್ನು, ಅವರು ಹಿರಿಯರಿರಬಹುದು ಕಿರಿಯರಿರಬಹುದು, ಚಿತ್ರಗಾರನಂತೆ ಬಿಡಿಸುತ್ತಾರೆ. ಕೆಲವರ ಬಗೆಗೆ ಅವರು ಹೇಳುವುದು ಒಂದೆರಡೇ ಮಾತು. ಆದರೆ ಅಷ್ಟೇ ಮಾತಿನಲ್ಲಿ ಆ ಮೂರ್ತಿ ಮೈದಾಳಿ ನಿಂತರುತ್ತದೆ: 'ಸಣ್ಣ ಸಂಗತಿ. ಆದರೆ ಜೀವನದಲ್ಲಿ ಇದು ಎಂಥ ದೊಡ್ಡ ಮಾತಾಗುತ್ತದೆ. ಹಿರಣ್ಯಾ ಗೌಡ ನನಗೆ ಇಂದಿಗೂ ಅವನ ಅಂದಿನ ಪ್ರೇಮದ ಕಾರಣದಿಂದ ತುಂಬ ಪ್ರಿಯನಾಗಿದ್ದಾನೆ. ೧೯೧೮ರ ಇನ್‌ಫ್ಲುಯೆನ್ಸಾ ಉಪದ್ರವದಲ್ಲಿ ಅವನು ತೀರಿಕೊಂಡನು. ಆ ವೇಳೆಗೆ ಗ್ರಾಮದಲ್ಲಿ ಪಟೇಲನಾಗಿ ಹಲವು ವರ್ಷ ಸೇವೆ ಸಲ್ಲಿಸಿ ದೊಡ್ಡ ಮನುಷ್ಯನೆಂದು ಆ ಸುತ್ತಿಗೆಲ್ಲ ಹೆಸರು ಗಳಿಸಿದ್ದನು. ತುಂಬ ಒಳ್ಳೆಯ ಜೀವ. ದೇವರು ಅನುಗ್ರಹಿಸಿದ್ದರೆ ಊರಿಗೆ ಇನ್ನಷ್ಟು ಸೇವೆ ಸಲ್ಲಿಸಿ ಮತ್ತಷ್ಟು ಹೆಸರು ಗಳಿಸುತ್ತಿದ್ದನು... ನನಗೆ ಅವನು ಶಾಶ್ವತವಾದ ಒಂದು ಸ್ಮೃತಿಯಾಗಿ ನಿಂತಿದ್ದಾನೆ. ಭಯದಲ್ಲಿ ಧೈರ್ಯ ನೀಡುವ ಭಗವತ್ ಕೃಪೆಯ ಸಂಕೇತ ಆಗಿದ್ದಾನೆ.' ಅಕ್ಕಿ ಕೊಡುತ್ತಿದ್ದ ಸಂತೇಪೇಟೆಯ ಅಕ್ಕಿ ಅಂಗಡಿ ಮಲ್ಲಪ್ಪ ಎಂಬ ವರ್ತಕರನ್ನು ಕುರಿತು : 'ಮಲ್ಲಪ್ಪ ದುರ್ದೈವ ದಿಂದ ೧೯೧೮ರ ಇನ್ಫ್ಲುಯೆನ್ಸಾ ಸಾಂಕ್ರಾಮಿಕ ದಿನಗಳಲ್ಲಿ ತೀರಿಕೊಂಡರು. ಆಮೇಲೆ ಇವರ ಮೂರ್ತಿ ಕಣ್ಣಿಗೆ ಕಾಣಲಿಲ್ಲವಾದರೂ ಮನಸ್ಸಿನ ಮುಂದೆ, ಒಂದು ಕಾಲದಲ್ಲಿ ನಮಗೆ ತೋರಿದ ಆದರದ ಅಕ್ಕರೆಯ ಮೂರ್ತಿಯಾಗಿ, ಈಚೆಗೆ ಸಾವಿರ ಸಲ ನಿಂತಿದೆ' (ಆಂಜನೇಯ ಶೆಟ್ಟರು, ಟೀಟ್ ಸಾಹೇಬರು. ಗೆಳೆಯ ವೆಂಕಟರಂಗನ್. ಕೆ. ಹನುಮಂತಯ್ಯನವರು, ಕರ್ನಲ್ ದೇವರಾಜ ಅರಸ್, ಶ್ರೀಮತಿ ಸಾಕಮ್ಮನವರು, ಎ. ಸಿ. ನಿರ್ವಾಣೆಗೌಡ, ಅರಳಗುಪ್ಪೆ ಚಂದ್ರೇಗೌಡ -ಮೊದಲಾದವರು ಹೀಗೆ ನೆನಪಿನಲ್ಲಿ ನಿಲ್ಲುತ್ತಾರೆ.)

ಹರಹಿನ ಬದುಕಿನ ಆಳದಿಂದ ಎಷ್ಟೋ ಮಾತುಗಳು ಆಣಿ ಮುತ್ತುಗಳಂತೆ ಮೂಡಿಬಂದಿವೆ : ತಪ್ಪು ತಿಳಿವಳಿಕೆ ಮನುಷ್ಯನನ್ನು ದುರ್ಬಲ ಪ್ರಾಣಿಯನ್ನಾಗಿ ಮಾಡುತ್ತದೆ,' 'ಮನುಷ್ಯನ ಬಾಳಿನ ಅತ್ಯುನ್ನತ ಸಂಪತ್ತು ಐಶ್ವರ್ಯವಲ್ಲ, ಅಧಿಕಾರವಲ್ಲ. ಜೊತೆಯ ಜನರ ಪ್ರೇಮ; 'ಸಿವಿಲ್ ಸರ್ವೀಸ್ ಆಂಗ್ಲ ಪ್ರಭುತ್ವದ ಬಲರಟ್ಟೆ, ಬಲಮುಷ್ಟಿ, ಅದರ ಶಕ್ತಿ ಹೆಚ್ಚು, ಅದರ ಅಹಂಕಾರವೂ ಅಷ್ಟೇ ಹೆಚ್ಚು. 'ಕಾಸುಳ್ಳವರು ಅದನ್ನು ಇಟ್ಟುಕೊಂಡು ಪಡೆಯುವ ಸುಖಕ್ಕಿಂತ ಕೊಟ್ಟು ಪಡೆಯಬಹುದಾದ ಸುಖ ದೊಡ್ಡದು,' 'ಬಲಾತ್ಕಾರದಿಂದ ಉತ್ಸವ ನಡೆಸಿದರೆ ಅದು ಸರಿಯಾಗಿ ನಡೆದ ಉತ್ಸವ ಅಲ್ಲ. ಎರಡು ಪಕ್ಷದವರೂ ಒಪ್ಪಿ ನಡೆಸುವುದೇ ಸರಿಯಾದ ಉತ್ಸವ,' 'ದೇವರ ಪೂಜೆಗೆ ಮೈ ಶುದ್ಧಿ ಮಾಡಿಕೊಳ್ಳುತ್ತೇವೆ. ಮನಸ್ಸು ಶುದ್ಧಿಯಾಗಿರಬೇಡವೆ?' 'ವ್ಯಥೆ ಪಡುವುದು ಸರಿಯಲ್ಲ, ಸರಿ. ಆದರೆ ವ್ಯಥೆ ತಪ್ಪಿದ್ದಲ್ಲ,' 'ಹೊರಗಿನಷ್ಟೇ ದಿಟವಾಗಿ ಒಳಗೂ ಒಂದಿದೆ.'.

ಮಾಸ್ತಿಯವರ ಕನ್ನಡ ಪ್ರೇಮ ಇಂದು ನಿನ್ನೆಯದಲ್ಲ. ಮಗುವಿನಿಂದಲ್ಲದಿದ್ದರೂ ೧೯೨೨ರಿಂದ ಬೆಳೆದು ಬಂದಿದೆ. ಅದಕ್ಕೆ ಎರಡು ಬಲವಾದ ಕಾರಣಗಳು ಇಂತಿವೆ. ಒಂದು ಸಲ ಹಳ್ಳಿಯಲ್ಲಿ ಜಮಾಬಂದಿ ವೇಳೆ ಒಬ್ಬ ಒಕ್ಕಲಮಗ ಮಾಡಿದ್ದ ಅದೇನೋ ಸಂಗತಿ ತಪ್ಪು ಎನ್ನುವ ಮಾತಿಗೆ ಅವನನ್ನು ಕುರಿತು 'ಏನಪ್ಪಾ, ಇದು ಮಾಡಬಾರದು ಎಂತ ನಿನಗೆ ತಿಳಿಯಲಿಲ್ಲವೇ?' ಎಂದರು.

ಅವನು 'ಇಲ್ಲ, ಸ್ವಾಮಿ, ಎಂದನು, ನಾನು ಯಾಕಯ್ಯಾ, ರೂಲ್ಸ್ ಇದೆಯಲ್ಲ, ಇದನ್ನು ತಿಳಕೊಳ್ಳಬೇಡವೇ?' ಎಂದರು. ಅವನು 'ನಿಮ್ಮ ರೂಲ್ಸು ಗೀಲ್ಸು, ಎಲ್ಲಾ ಇಂಗ್ಲೀಷ್‌ನಲ್ಲಿದೆ ಸ್ವಾಮಿ; ನಾನೇನು ತಿಳ್ಕೊಳ್ಳೋದು?' ಎಂದನು. ಸಂಗತಿ ಸಣ್ಣದು. ಮನಸ್ಸಿಗೆ ಹೊಸತಾದುದೂ ಅಲ್ಲ. ಆದರೆ ಆ ಕ್ಷಣ ಅವನ ಮಾತು ನನ್ನ ಮೇಲೆ ಪ್ರಚಂಡ ಪರಿಣಾಮ ಮಾಡಿತು. ನಾನು ಹೌದಲ್ಲಾ, ನಾನು ಸರ್ಕಾರ ಎಂತ ಮಾಡುವ ಎಲ್ಲ ಕೆಲಸವನ್ನೂ ಇಂಗ್ಲೀಷಿನಲ್ಲಿ ಮಾಡಿದರೆ ನಮ್ಮ ಜನಕ್ಕೆ ಹೇಗೆ ತಿಳಿಯಬೇಕು? ಇಂಥ ಗ್ರಾಮದ ಇಂಥ ಜನ ಬೆವರು ಸುರಿಸಿ ಬೆನ್ನು ಮುರಿಯ ದುಡಿದು ಗಳಿಸಿದ ಆರು ಕಾಸಿನಲ್ಲಿ ಮೂರು ಕಾಸನ್ನು ಸರ್ಕಾರಕ್ಕೆ ಕೊಟ್ಟು ನಮಗೆಲ್ಲ ಸಂಬಳ ಕೊಡಿಸಿ ಸುಖವಾಗಿ ನೋಡಿಕೊಳ್ಳುತ್ತಾರೆ. ನಾವು ಹೆಸರಿಗೆ ಜನತೆಯ ಸೇವಕರು. ದಿಟದಲ್ಲಿ ಸ್ವೇಚ್ಛಾವರ್ತಿ ಚಂಡ ಪ್ರಭುಗಳು. ಇವರಿಗೆ ದಂಡ ಹಾಕಿದ್ದೇವೆ ಎಂದು ನಾವು ಬರೆಯುವ ಆಜ್ಞೆ ಕೂಡ ಇಂಗ್ಲೀಷಿನಲ್ಲಿರುತ್ತದೆ? ಈ ಮಾತು, ಈ ಚಿಂತನೆ ಅವರನ್ನು ಕನ್ನಡದ ಕಿಂಕರರನ್ನಾಗಿಸಿತು. ಇದೇ ಭಾವವನ್ನು ಮುಂದೆ ಒಬ್ಬ ಹರಿಜನ ತರುಣ, ಗ್ರಾಮದ ತೋಟಿಯಾಗಿದ್ದವನು ಬಲಪಡಿಸಿದನು. ಆ ತೋಟ ಎಂಡಾರ್ಸ್‌ಮೆಂಟ್ ಎಂಬುದು ತಿಳಿಯದೆ ಮುಂಡೇರಾಸ್ ಎಂದು ತದ್ಭವ ಮಾಡಿಕೊಂಡಿದ್ದ. ಆಗ 'ಆಡಳಿತದ ನಾವು ನಮ್ಮ ಅಪ್ಪಣೆಗಳನ್ನು ನಮ್ಮ ಜನರಿಗೆ ಅವರಿಗೆ ತಿಳಿಯದ ಭಾಷೆಯಲ್ಲಿ ತಿಳಿಸುತ್ತಿರುವುದು ಬಹು ಅವಿವೇಚನೆಯ ವರ್ತನೆ' ಎನ್ನಿಸಿತು. 'ಕನ್ನಡ ಮಾತೆ ನನ್ನ ಹೆತ್ತತಾಯಂತೆ ಒಂದು ದಿಟವಾದ ದೈವ ಆದಳು.'

ತಮ್ಮ ರಾಜನಿಷ್ಠೆಯನ್ನು ಭಾವದ ಎರಡನೆಯ ತೆನೆಯಲ್ಲಿ ತೋರಿದ್ದಾರೆ. : 'ಪ್ರಭುಗಳ ವಿಷಯಕ್ಕೆ ನನ್ನ ಮನಸ್ಸು ಎಂದಿನಿಂದಲೂ ಏಕ ರೀತಿ ವರ್ತಿಸಿದೆ, ನನಗೆ ಮೈಸೂರು ಲೋಕಮಾತೆ ನನ್ನ ಮಾತೆಯಾಗಿರುವ ಭೂಪ್ರದೇಶ. ಅದರ ಪ್ರಭು ಈ ಪ್ರದೇಶದ ಸೇವೆಗೆಂದು ಜನ್ಮ ತಳೆದ ಉನ್ನತ ಮಾನವ. ಈ ಪ್ರಭು ಮೂರ್ಧಾಭಿಷಿಕ್ತ ರಾಜರು. ನಮ್ಮ ಧರ್ಮದಲ್ಲಿ ಹೀಗೆ ಅಭಿಷಿಕ್ತರಾದ ಪುರುಷರಲ್ಲಿ ದೈವದ ಒಂದು ಅಂಶ ಮನೆ ಮಾಡಿರುತ್ತದೆ ಎಂದು ನಂಬಿಕೆ. ನಮ್ಮ ಧರ್ಮದ ಈ ನಂಬಿಕೆಯನ್ನು ನನ್ನ ಬುದ್ಧಿ ಒಪ್ಪಿದೆ. ಪ್ರಭುಗಳು ಸ್ವತಃ ನನಗೆ ಒಂದು ಮರ್ಯಾದೆಯನ್ನು ದಯ ಪಾಲಿಸಿದ ಒಡೆಯರು ಸಹ.' ಪಟ್ಟಾಭಿಷೇಕದ ಉತ್ಸವದಲ್ಲಿ ಕೊಟ್ಟ ಜರಿ ಶಾಲನ್ನು ದಿನದ ಪಾರಾಯಣದ ಹೊತ್ತಿನಲ್ಲಿ ಇಂದಿಗೂ ಹಾಕಿಕೊಂಡು ಪ್ರಭುವಿಗೆ ಶುಭವಾಗಲೆಂದು ಬಯಸುವರು. ರಾಜಪದವಿ ತಪ್ಪಿದ್ದಕ್ಕಾಗಿ ಪರಿತಪಿಸಿದ್ದಾರೆ. ಇದು ಹೊಸ ಪೀಳಿಗೆಯವರಿಗೆ ಹಿಡಿಸದಿರಬಹುದಾದರೂ ಅದು ಅವರ ಭಾವವೆಂಬುದನ್ನು ಮರೆಯಬಾರದು.

ಭಾವದಲ್ಲಿ ಹಲವು ಮೊಗಗಳ ಕಾಣ್ಕೆಯಿದೆ. ಈ ಆತ್ಮಚರಿತೆಯಲ್ಲಿ ಒಬ್ಬ ಆದರ್ಶ ಪುತ್ರನನ್ನು, ಉತ್ತಮ ವಿದ್ಯಾರ್ಥಿಯನ್ನು, ಆದರ್ಶ ಪತಿಯನ್ನು, ನಿಷ್ಪಕ್ಷ ಪಾತ ದಕ್ಷ ಅಧಿಕಾರಿಯನ್ನು, ಆದರ್ಶ ಪಿತನನ್ನು, ಒಬ್ಬ ಸತ್ಯಪ್ರಿಯ ವ್ಯಕ್ತಿಯ ಸರಳ ಜೀವನವನ್ನು ಕಾಣುತ್ತೇವೆ. ಹೀಗೆಂದು ಈ ಭಾವದಲ್ಲಿ ಬಿರುಕುಗಳೇ ಇಲ್ಲವೆಂದಲ್ಲ. ಒಂದು ನೋಟಕ್ಕೆ ಇಲ್ಲಿ ಒಬ್ಬ ಅಧಿಕಾರಿಯ ಬದುಕಿದೆಯೇ ಹೊರತು ಹಿರಿಯ ಬರಹಗಾರನ ಬಾಳಿನ ವಿವರವಿದೆಂದು ಎನ್ನಿಸದಲ್ಲಾ ಎಂಬ ಉದ್ಗಾರ ಬರಬಹುದು. ಇದಕ್ಕೆ ಉತ್ತರ ಈ ಲೇಖನದಲ್ಲಿ ಹೇಳಿದೆ. ಪ್ರಬುದ್ಧ ಕರ್ನಾಟಕ ಮತ್ತು ಹಿಂದೂ ಪತ್ರಿಕೆಗಳ

ವಿಚಾರದಲ್ಲಿ ಅವು ತಮಗೆ ಆಗದ, ಪ್ರಚಾರ ಕೊಡದ ಪತ್ರಿಕೆಗಳೆಂದು ಅವರು ಆಡಿರುವ ಮಾತುಗಳನ್ನು ಒಪ್ಪುವುದು ಕಷ್ಟವಾಗಬಹುದು. ಮಂತ್ರಿ ಪದವಿ ತಪ್ಪಿದುದಕ್ಕಾಗಿ ತೋರುವ ತಳಮಳ ಅಧಿಕಾರ ಮೋಹದ ಪರಿಣಾಮವೆಂದು ತೋರಬಹುದು. ಕೆಲವು ದೂರುಗಳು ತೀರ ಸಣ್ಣವೆಂದು ಕಾಣಬಹುದು. ಅಲ್ಲಲ್ಲಿನ ಕೆಲವು ಹೇಳಿಕೆಗಳು ಕಣ್ಣು ಕಟ್ಟಿದ ಕುದುರೆಯಂತೆ ಒಂದೇ ನಿಟ್ಟಿನ ಆಲೋಚನೆಯ ಫಲವೆಂದು ಅನ್ನಿಸಬಹುದು. ಈ ಬಗೆಯ ಭಿನ್ನಾಭಿಪ್ರಾಯಗಳನ್ನು ಕುರಿತು ಚರ್ಚಿಸಲು ಇದು ಎಡೆಯಲ್ಲ. ಇದರಂತೆ ಎಡತೋಳು ಇಲ್ಲವೆ, ಬಲ ತೋಳುಗಳ ನಡುಕ, ದರ್ಶನ ಆಗುವುದು, ನಿದ್ರೆಯಲ್ಲಿ ವಿಚಿತ್ರ ಕನಸು ಬೀಳುವುದು, ವಿಚಿತ್ರ ಅನುಭವ ಆಗುವುದು ಓದುಗರಿಗೆ ವಿಚಿತ್ರವಾಗೇ ತೋರಬಹುದು.

ಇಲ್ಲಿ ಕೆಲವು ಕಡೆ ಬರುವ ಇಂಗ್ಲಿಷ್ ಸಂಭಾಷಣೆ ಅತಿಯಾಯಿತೆನ್ನಿಸಬಹುದು. ಕೆಲವರಿಗೆ ಅದು ಅನವಶ್ಯಕವೆನ್ನಿಸಲೂಬಹುದು. ಇಂಗ್ಲಿಷ್ ಬಾರದ ಕನ್ನಡಿಗರಿಗೆ ಅದರಿಂದ ಯಾವ ಪ್ರಯೋಜನವೂ ಇಲ್ಲ : ಇಂಗ್ಲಿಷಿನಲ್ಲೇ ಅವರು ಹಿಂದೆ ಈ ಸಂಭಾಷಣೆ ನಡೆಸಿದ್ದಿರಬಹುದು, ಅದನ್ನು ಹಾಗೆಂದು ತಿಳಿಸಿ, ಕನ್ನಡದಲ್ಲೇ ಅದರ ತಿರುಳನ್ನು ತಿಳಿಸಬಹುದಿತ್ತು-ಎಂದೆಲ್ಲಾ ಅನ್ನಿಸಬಹುದು. ಇಂಥ ಆಕ್ಷೇಪಗಳಿಗೆ ಈ ಲೇಖನದಲ್ಲಿ ಹಿಂದೆ ಒಂದು ಉದಾಹರಣೆ ಕೊಟ್ಟಿರುವುದನ್ನು ಮತ್ತೆ ಎಲ್ಲಿ ತಿಳಿಸಬಹುದು : 'ಇದು ನನ್ನ ಜೀವನವನ್ನು ಕುರಿತ ನನ್ನ ಭಾವ. ಈ ಭಾವ ಸ್ವಭಾವವನ್ನು ಅವಲಂಬಿಸುತ್ತದೆ.' ಅಲ್ಲದೆ ಮಾತೂ ವಿಷಯವೂ ಎಳೆ ತಪ್ಪಿದ ಕಡೆ ಕ್ಷಮೆ ಇರಬೇಕೆಂದು ವಿನಯದಿಂದ ಬೇಡಿದ್ದಾರೆ.

"ನನ್ನ ಜೀವನ ಒಟ್ಟಿನಲ್ಲಿ ಸುಖವುಂಡ, ಜಯಕಂಡ ಜೀವನ ಎನ್ನಬಹುದು.... ಮಾಸ್ತಿಯಲ್ಲಿ ಹುಟ್ಟಿದ ಈ ಮಗು ಈ ದಿನ ನಾನು ಈಗ ಇರುವ ಸ್ಥಿತಿಯಲ್ಲಿರುವುದು ದೈವಾನುಗ್ರಹ ಎನ್ನುವುದು ಯಾರೇ ಆದರೂ ಒಪ್ಪಬಹುದಾದ ಮಾತು.. ಸದ್ಯದಲ್ಲಿ ನನ್ನ ದೇಹಸ್ಥಿತಿ ಚೆನ್ನಾಗಿದೆ. ದೇಹದ ಶಕ್ತಿಗಳು ಪರಿಮಾಣದಲ್ಲಿ ಕಡಮೆ ಆಗಿವೆ ಹೊರತಾಗಿ ಯಾವುದೂ ನಷ್ಟ ಆಗಿಲ್ಲ. ಮನಸ್ಸು ಬುದ್ಧಿ ಎಂದಿನಂತಿವೆ. ಹೊರಗೆ ಹೋಗಿ ದುಡಿಯುವ ಪ್ರವೃತ್ತಿ ಕಡಮೆಯಾಗಿದೆ. ಇರುವ ಕಡೆ ಮಿತವಾಗಿ ಒಂದಿಷ್ಟು ದುಡಿಯಬಹುದು. ದೈವ ಅನುಗ್ರಹಿಸಿದರೆ, ಈ ಮುನ್ನ ಆರಂಭಿಸಿ ಅರ್ಧಮರ್ಧ ಆಗಿ ನಿಲ್ಲಿಸಿರುವ ಹತ್ತಾರು ಸಣ್ಣ ಪುಟ್ಟ, ಕೆಲವೊಂದು ತಕ್ಕಷ್ಟು ದೊಡ್ಡ, ಬರಹ ನಡೆಯಬೇಕು. ಇದು ನಡೆಯುವುದು ಬಿಡುವುದು ದೈವ ಚಿತ್ತ."

ಅವರು ತಮ್ಮ ನಿಡುಬಾಳಿನುದ್ದಗಲಕ್ಕೂ ನೆಮ್ಮಿ ನಂಬಿ ನಡೆದ ದೈವ, ನೂರು ವರುಷ ಹದುಳದಿಂದ ಬಾಳಿ, ಬರೆಯಬೇಕೆಂದು ಅಂದುಕೊಂಡಿರುವುದನ್ನೆಲ್ಲಾ ಬರೆದು ಮುಗಿಸುವಂತೆ ಇಂಬಾಗಿ ನಿಂತು ಹರಸಲಿ-ಇದು ಭಾವ ಓದಿ ಮುಗಿಸಿದ ಎಲ್ಲ ಓದುಗನ ಹಾರೈಕೆ.

೩

ಕೆ. ಜಿ. ಕುಂದಣಗಾರ : ಅಪರೂಪದ ಅಪರಂಜಿ

ದೊಡ್ಡವ್ಯಕ್ತಿಯಾಗಲು ಸಣ್ಣದಾರಿ ಕಾಲುದಾರಿ ಒಳದಾರಿ ಅಡ್ಡದಾರಿ ಯಾವೂವೂ ಇಲ್ಲ. ದೊಡ್ಡವರಾಗಲು ಇರುವುದು ಒಂದೇ ಹೆದ್ದಾರಿ - ನಿರಂತರ ದುಡಿಮೆ, ದಣಿವರಿಯದ ಉದಾತ್ತ ಕಾಯಕ, ಸೋಲರಿಯದ ಶ್ರದ್ಧಾನ್ವಿತ ಸಾಹಸ, ಪ್ರಾಮಾಣಿಕ ಪ್ರಯತ್ನಗಳ ಋಜುಮಾರ್ಗ, ಉನ್ನತ ಆದರ್ಶ. ಇಂಥ ರಾಜಪಥವನ್ನು ಆರಿಸಿಕೊಂಡು ಯಶಸ್ಸಿನ ಗುರಿಮುಟ್ಟಿದ ಅಪರೂಪದವರು ಪ್ರೊ. ಕೆ. ಜಿ. ಕುಂದಣಗಾರರು.

ಕಲ್ಲಪ್ಪ ಗಿರಿಮಲ್ಲಪ್ಪ (ಕಾಳಪ್ಪ ಗುರಪ್ಪ) ಕುಂದಣಗಾರರು ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕು ಕೌಜಲಗಿ ಹಳ್ಳಿಯಲ್ಲಿ ಹುಟ್ಟಿದವರು (೧೪-೮-೧೮೯೫: ೨೨-೮-೧೯೬೫). ಬಡತನದ ಕವಚ ತೊಟ್ಟು, ಕಷ್ಟಗಳ ಕುಂಡಲ ಧರಿಸಿ, ವಿಶ್ವಕರ್ಮ [ಪತ್ತಾರ, ಬಡಿಗೇರ, ಅಕ್ಕಸಾಲಿ, ಪಂಚಾಳ, ಕುಂದಣಗಾರ, ಕಂಬಾರ, ಸ್ವರ್ಣಕಾರ, ಆಚಾರ್ರು] ಕುಟುಂಬದಲ್ಲಿ ದಾರುಣತರ ಬಾಲ್ಯ ಕಳೆದರು. ಪತ್ತಾರ ಮನೆತನಗಳು ಉಪಜೀವನ ಸಾಗಿಸುವ ರೀತಿಯನ್ನು ದೇವರೇ ಬಲ್ಲ. ಕುಂದಣಗಾರರು ಹುಟ್ಟಿದ ಕೌಜಲಗಿಯಲ್ಲಿಯಾಗಲಿ, ನೆರೆಹೊರೆಯ ಹಳ್ಳಿಗಳಲ್ಲಾಗಲಿ, ಹಗಲಲ್ಲಿ ದೀಪ ಮಶಾಲು ಹಚ್ಚಿ ಹುಡುಕಿದರೂ ಬಂಗಾರ ಕಾಣುವುದು ಅಪರೂಪ. ಊರಲ್ಲಿ ಎಂದೋ ಒಮ್ಮೆ ಯಾರೋ ಒಬ್ಬರು ಒಂದು ಉಂಗುರವನ್ನೋ ಬೆಂಡೋಲೆಯನ್ನೋ ಮಾಡಿಸುವುದಿದ್ದರೆ, ಮೊದಲು ಕಾಳು ಕಡಿಕೊಟ್ಟು ಪತ್ತಾರನ ಹೊಟ್ಟೆಗೆ ಹಿಟ್ಟು ಪೂರೈಸಬೇಕು. ಆ ಮುಂದೆ ತಮ್ಮ ಆಭರಣ ಕಾಣಬೇಕು. ಕುಂದಣಗಾರರ ಮನೆತನ ಇಂತಹ ಕಡು ಬಡತನದ ಒಂದು ಕುಟುಂಬ. ಬಡತನ ಆ ಸಂಸಾರಕ್ಕೆ ಹಾಸಲಿತ್ತು, ಹೊದೆಯಲಿತ್ತು. ಬಂದ ನೆಂಟರಿಷ್ಟರಿಗೂ ಹಂಚಲಿತ್ತು. ಮೂರು ವರುಷ ತುಂಬುವುದರೊಳಗೆ ತಾಯಿ

ತಂದೆಯನ್ನು ಕಳೆದುಕೊಂಡ ತರುವಲಿ ಕಲ್ಲಪ್ಪನ ಕೊರಳಿಗೆ ದುಃಖಗಳ ಹಾರ, ಹೆಗಲಿಗೆ ಹೊಣೆಗಳ ಹೊರೆ ಎಲ್ಲಿ ಹೋದರೂ ನೆರಳಾಗಿ ಹಿಂಬಾಲಿಸಿತು. ಬೆರಣೆಯನ್ನು ಆಯುವುದರಲ್ಲಿ ಆಯುಷ್ಯ ಕಳೆಯಿತು, ಅಟ್ಟುಂಬ ದಿನಗಳು ಬರಲೇ ಇಲ್ಲ. ನರಳಾಟವೇ ನಿತ್ಯ ಉಸಿರಾಗಿ ಹಣ್ಣಾದರು, ಅನಾರೋಗ್ಯದ ಚಳಿಗಾಳಿಮಳೆಗೆ ಮುದುಡಿ ಮುರುಟಿದರು.

ಸತ್ವವಿರುವ ಮನುಷ್ಯ ಮಹಾನುಭಾವನಾಗಲು ಸಾಧ್ಯವಿರುವುದು ಪ್ರತಿಕೂಲದ ಸವಾಲುಗಳನ್ನು ಸ್ವೀಕರಿಸಿ ಪಾರಾಗಿ ಬರುವ ಪ್ರಕ್ರಿಯೆಯಲ್ಲಿ. ಸ್ವಾಭಿಮಾನದ ಆತ್ಮಪ್ರತ್ಯಯವನ್ನು ಉಳಿಸಿಕೊಂಡು ಧೃತಿಗೆಡದೆ ನಿಂತ ಕುಂದಣಗಾರರಲ್ಲಿ ಸ್ಥಿತ ಪ್ರಜ್ಞತ್ವ, ಸಹನೆ, ಸಂಯಮ ಅನಿವಾರ್ಯವಾಗಿ ಮೈಗೂಡಿತ್ತು. ಅನ್ನರೇಖೆ ಇರದಿದ್ದರೂ ಆರೋಗ್ಯ ಭಾಗ್ಯ ಕಡಮೆಯಾದರೂ ತಕ್ಕಮಟ್ಟಿಗೆ ಆಯುಷ್ಯ ರೇಖೆಯಿತ್ತು. ಹಣದ ದಾರಿದ್ರ್ಯವಿದ್ದರೂ ಗುಣ ಸಮೃದ್ಧಿಯ ಐಸಿರಿಯಿತ್ತು. ಅವರು ಬಾಳಿದ ಋಷಿ ಜೀವನ ಸದೃಶವಾದ ಮಾನ ಮರ್ಯಾದೆಯ ಸಭ್ಯಗೃಹಸ್ಥಿಕೆಯನ್ನು ಬೆಳಗಿದ ನಿದರ್ಶನಗಳು ಬೋಧಕವಾಗಿದೆ.

ಕೌಜಲಗಿಯಲ್ಲಿ ಪ್ರಾಥಮಿಕ ಓದು ಮುಗಿಯಿತು. ಅಲ್ಲಿಂದ ಬೆಳಗಾವಿಗೆ ಬಂದು ಸರಕಾರಿ ಸರ್ದಾರ ಪ್ರೌಢ ಶಾಲೆಯಲ್ಲಿ ಕಲಿತರು. ಕಲ್ಲಪ್ಪನಿಗೆ ಕೂಲಿ ನಾಲಿ ಮಾಡಿಯಾದರೂ ಕಲಿಯುವ ಉಮೇದು; ಓದುತ್ತ ಸಂಪಾದನೆ, ಸಂಪಾದಿಸುತ್ತ ಓದು. ಕಲ್ಲಪ್ಪ ಕಲಿತಪ್ಪ ಆಗಲು ಒಂದು ದಾರಿ ತೆರೆಯಿತು. ಕಲ್ಲಪ್ಪನ ಆ ಅಕ್ಷರ ದುಂಡು, ಬಾಯಿ ಲೆಕ್ಕದಲ್ಲಿ ಚುರುಕು. ಅದನ್ನು ನೋಡಿ ದೊಡ್ಡ ಸರಾಫ ಶಂಕರಪ್ಪ ಮೇಲುಗಿರಿಯವರು ತಮ್ಮ ದುಖಾನಿನಲ್ಲಿ ಲೆಕ್ಕಪತ್ರಗಳನ್ನು ಸರಿಯಾಗಿಡುವ ಉಸ್ತುವಾರಿಕೆ ಕೆಲಸ ಕೊಟ್ಟರು. ತಿಂಗಳಿಗೆ ನಾಲ್ಕು ರೂಪಾಯಿ ಪಗಾರ! ಕಲ್ಲಪ್ಪನ ಕಲಿಕೆಗೆ ಅನುಕೂಲವಾಯಿತು. ಧಾರವಾಡಕ್ಕೆ ಬಂದು, ಅಂದಿನ ವಿಕ್ಟೋರಿಯಾ ಹೈಸ್ಕೂಲ್ (ಇಂದಿನ ವಿದ್ಯಾರಣ್ಯ ಹೈಸ್ಕೂಲ್) ಮೂಲಕ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಗೆ ಕುಳಿತು ಉತ್ತಮ ಶ್ರೇಣಿ ಪಡೆದರು.

ಮುಂದುವರಿದ ಓದಿಗೆ ಮತ್ತೆ ಗಂಡಾಂತರ ಎದುರಾಯಿತು. ಈಗಿರುವ ಇಡೀ ಧಾರವಾಡ, ಬೆಳಗಾವಿ, ವಿಜಾಪುರ, ಗುಲ್ಬರ್ಗ, ಬೀದರ ಜಿಲ್ಲೆಗಳ ವ್ಯಾಪಕ ಪ್ರದೇಶದಲ್ಲಿ ಅಂದು ಎಲ್ಲಿಯೂ ಉಚ್ಚ ಶಿಕ್ಷಣ ಸಂಸ್ಥೆಗಳು ಇರಲಿಲ್ಲ. ಮುಂಬಯಿ ಕರ್ನಾಟಕವೆನಿಸಿದ ಈ ಭಾಗದವರು ಇಂಟರ್ ಮೀಡಿಯೆಟ್ (ಈಗಿನ ಪ್ರಿಯೂನಿವರ್ಸಿಟಿ) ಮತ್ತು ಅದಕ್ಕೂ ಹೆಚ್ಚಿನ ಕಲಿಕೆಗೆ ಪುಣೆಗೊ ಮುಂಬಯಿಗೊ ಹೋಗಬೇಕಿತ್ತು. ಐನೂರು ಕಿಮೀ ದೂರದ ಪುಣೆಯ ಫರ್ಗುಸನ್ ಕಾಲೇಜು ಸೇರಿ ಕುಂದಣಗಾರರು ೧೯೧೩ರಲ್ಲಿ ಇಂಟರ್ ಪರೀಕ್ಷೆ ಮುಗಿಸಿದರು. ಹೆಚ್ಚಿನ ಶಿಕ್ಷಣಕ್ಕೆ ಅಲ್ಪವಿರಾಮಬಿತ್ತು, ಅದಕ್ಕೆ ಬೇಕಾದ ಕಾಸು ಕೂಡಿಸಬೇಕಾಗಿತ್ತು. ಮೂರು ವರ್ಷ ಮೀನ ಮೇಷ ಎಣಿಸುತ್ತ ಕಾಲಹರಣ ಮಾಡಿದ ಮೇಲೆ ಅಹನ್ಯಹನಿಗೊಂದು ನಿಲುಗಡೆ ದಡ ಸಿಕ್ಕಿತು. ೧೯೧೬ರಲ್ಲಿ ಕೊಲ್ಲಾಪುರ ರಾಜಾರಾಮ ಹೈಸ್ಕೂಲಿನಲ್ಲಿ ಶಿಕ್ಷಕರಾದರು. ಅಲ್ಲಿಂದ ೧೯೧೮ರಲ್ಲಿ ಗೋಕಾಕದ ಮುನಿಸಿಪಲ್ ಪ್ರೌಢಶಾಲೆಯಲ್ಲಿ ಅಧ್ಯಾಪಕರಾದರು. ಹೀಗೆ ದುಡಿಯುತ್ತಿರುವಾಗಲೇ ಬಿ. ಎ. ಪರೀಕ್ಷೆಗೆ ಟರ್ಮು ತುಂಬುತ್ತ, ಖಾಸಗಿಯಾಗಿ ಕಲಿಯುತ್ತ ೧೯೧೯ರಲ್ಲಿ ಪದವೀಧರರಾದರು.

ಕುಂದಣಗಾರರಿಗೆ ಕನ್ನಡದ ಕಡಲನ್ನು ಕುಡಿಯುವ ಬಾಯಾರಿಕೆ. ಅವರ ಅರಿವಿನ ದಾಹ ಗರಿಕೆಹುಲ್ಲಿನ ಹನಿಗಳಿಂದ ನಿಲ್ಲಲಿಲ್ಲ. ಅಗತ್ಯವೇ ಅನ್ವೇಷಣೆಯ ತಾಯಿಬೇರು. ಗೋಕಾಕದಲ್ಲಿ

ವಾಸ್ತವ್ಯ ಮಾಡಿದ್ದರೂ ಮೇಲಿಂದ ಮೇಲೆ ಧಾರವಾಡ ಮತ್ತು ಬೆಳಗಾವಿಗೆ ದಾರಿ ಸವೆಸುತ್ತ ಜ್ಞಾನ ತೃಷ್ಣೆಯನ್ನು ನಿವಾರಿಸಲು ಪ್ರಯತ್ನಿಸಿದರು. ಬಿಡದ ಛಲ, ಉಡದ ಪಟ್ಟು.ಕಡೆಗೂ ೧೯೨೫ರಲ್ಲಿ ಕುಂದಣಗಾರರು ತಮ್ಮ ಮೂವತ್ತನೆಯ ವಯಸ್ಸಿನಲ್ಲಿ ಮುಂಬಯಿ ವಿಶ್ವವಿದ್ಯಾಲಯದಿಂದ ಕನ್ನಡ ಎಂ. ಎ. ಸ್ನಾತಕೋತ್ತರ ಪದವೀಧರರಾದರು. ಅದೇ ವರ್ಷ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ನೇಮಕಗೊಂಡರು. ಆಗ ನಡೆದ ಕೆಲವು ಸಂಚುಗಳಿಂದ ಕುಂದಣಗಾರರಿಗೆ ಧಾರವಾಡ ಕಾಲೇಜಿನ ಕೆಲಸ ತಪ್ಪಿ, ಅದನ್ನು ಅವರಿಗಿಂತ ಕಡಮೆ ಅರ್ಹತೆಯವರಿಗೆ ಕೊಡಲಾಯಿತು.

ಧಾರವಾಡಕ್ಕೆ ತಪ್ಪಿದ ಭಾಗ್ಯ ಕೊಲ್ಲಾಪುರಕ್ಕೆ ದಕ್ಕಿತು. ಕೊಲ್ಲಾಪುರ ಸಂಸ್ಥಾನದ ದಿವಾಣರಾದ ರಾವಬಹಾದ್ದೂರ ಅಣ್ಣಾಸಾಹೇಬ ಬಾಬಾಜಿ ಲಠ್ಠೆ (೧೮೭೮-೧೯೫೦) ಅವರು ಕೊಲ್ಲಾಪುರದ ರಾಜಾರಾಮ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿ ನೇರವಾದ ನೇಮಕಾತಿ ಆಜ್ಞೆ ಕೊಡಿಸಿ ಜ್ಞಾನವೃಕ್ಷವನ್ನು ನೀರೆರೆದು ನಿಲ್ಲಿಸಿದರು. ರಾಜಾರಾಮ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕ ಹುದ್ದೆ ಇರಲಿಲ್ಲ. ಇದನ್ನು ಅರಿತು ದಿವಾಣರಾದ ಅಣ್ಣಾಸಾಹೇಬ ಲಠ್ಠೆಯವರು ತಮ್ಮ ಅಧಿಕಾರ ಬಳಸಿ ೧೯೨೯ರಲ್ಲಿ ಕನ್ನಡ ಪ್ರಾಧ್ಯಾಪಕ ಹುದ್ದೆಯನ್ನು ಸೃಷ್ಟಿಸಿ ಕುಂದಣಗಾರರನ್ನು ನೇಮಿಸಿದರು. ಅಲ್ಲಿಂದ ೧೯೪೪ರ ವರೆಗೆ ಕೊಲ್ಲಾಪುರ ಅವರ ಕರ್ಮಭೂಮಿಯಾಯಿತಲ್ಲದೆ ಅದನ್ನು ಕನ್ನಡದ ತಪೋಭೂಮಿಯಾಗಿಸಿದರು, ಮರಾಠಿಯ ಮಣ್ಣಿನಲ್ಲಿ ಕನ್ನಡದ ವ್ಯವಸಾಯ ಮಾಡಿದರು. ಕನ್ನಡ ಮರಾಠಿಗರನ್ನು ಕೂಡಿಸುವ ಹೊನ್ನ ಕೊಂಡಿಯಾಗಿ, ಕರ್ನಾಟಕದ ಶ್ರೇಷ್ಠ ರಾಯಭಾರಿಯಾಗಿ ಅವರು ಮಿಂಚಿದರು.

ಬ್ರಿಟಿಷರು ಭಾರತವನ್ನು ಆಳುತ್ತಿದ್ದ ಆ ದಿನಗಳಲ್ಲಿ ಶೈಕ್ಷಣಿಕ ವಲಯದ ಹಲವು ಜ್ಞಾನ ಶಾಖೆಗಳು ಪುನರುಜ್ಜೀವಿತವಾದುವು. ಪಶ್ಚಿಮದ ಎರಕದಲ್ಲಿ, ಜರ್ಮನಿಯ ವಿದ್ವಾಂಸರ ಮಾದರಿಯಲ್ಲಿ ಪ್ರಾಚೀನ ಕನ್ನಡ ಸಾಹಿತ್ಯದ ಅಧ್ಯಯನ ಮೊದಲಾಯಿತು. ಅಪ್ರಕಟಿತ ಹಳೆಗನ್ನಡ ಕಾವ್ಯಗಳನ್ನು ಗ್ರಂಥಸಂಪಾದನೆಯ ಶಾಸ್ತ್ರ ನಿಯಮದ ಚೌಕಟ್ಟಿನಲ್ಲಿ ಸಂಪಾದಿಸಿ ಪೀಠಿಕೆ, ಪದಕೋಶ, ಅನುಬಂಧ ಪರಿಕರ ಸಹಿತ ಪ್ರಕಟಿಸುವ ಪದ್ಧತಿಯೊಂದು ಪ್ರಾರಂಭವಾಯಿತು, ರಾಜಮಾರ್ಗ ತೆರೆಯಿತು. ಈ ಕೆಲಸದಲ್ಲಿ ದೇಶೀಯ ಸೂರಿಗಳು ಹಿಂದೆ ಬೀಳಲಿಲ್ಲ. ಮೈಸೂರು, ಮದರಾಸು, ಮುಂಬಯಿ ಕನ್ನಡ ಪ್ರದೇಶಗಳ ಹಿಡಿಮಂದಿ ಬಲ್ಲಿದರು ಪಾಂಡಿತ್ಯದ ಪರಿಶ್ರಮಕ್ಕೆ ತೊಡಗಿದರು. ಉತ್ತರ ಕರ್ನಾಟಕದ ಸಂಶೋಧಕ ಸೂರಿವರೇಣ್ಯರಲ್ಲಿ ಆ. ನೇ ಉಪಾಧ್ಯಾಯ, ಶಿ. ಶಿ. ಬಸವನಾಳ, ಫ.ಗು. ಹಳಕಟ್ಟಿ ಮತ್ತು ಕೆ. ಜಿ. ಕುಂದಣಗಾರ-ಮೊದಲ ಮನ್ನಣೆ ಪಡೆದವರು. ಆಳವಾದ ವಿದ್ವತ್ತನ್ನು ಬಯಸುವ ಪಂಪನ ಆದಿಪುರಾಣ, ಹಸ್ತಿಮಲ್ಲಿಷೇಣ ಆಚಾರ್ಯಕೃತ ಪೂರ್ವಪುರಾಣ, ನೇಮಿಚಂದ್ರನ ಲೀಲಾವತಿ ಪ್ರಬಂಧ ಮುಂತಾದ ಪ್ರಾಚೀನ ಕಾವ್ಯಗಳನ್ನು ಹೊರತಂದರು. ಪ್ರಾಚೀನ ಮಾತೃಕೆಗಳಿಂದ ಶುದ್ಧ ಕವಿಪಾಠವನ್ನು ನಿರ್ಧರಿಸುವುದಕ್ಕೆ ಬೇಕಾದ ಬುದ್ಧಿಯ ಬಲ, ಕಾವ್ಯಾನು ಶೀಲನ ವಶದಿಂದ ಪ್ರಾಪ್ತವಾದ ಸಂಸ್ಕಾರ ಅವರಲ್ಲಿತ್ತು. ಸಂಶೋಧನ ಪ್ರವೃತ್ತಿಯನ್ನು ಗಂಭೀರವಾಗಿ ಮೈಗೂಡಿಸಿಕೊಂಡವರಿಗೆ ನಿವೃತ್ತಿ ಎಂಬುದಿಲ್ಲ. ಉಸಿರು ಇರುವವರೆಗೆ ಕಸುವು ಇರುವತನಕ ಹಗಲಿರುಳು ದುಡಿದವರು ಕೆ.ಜಿ. ಕುಂದಣಗಾರರು.

ಕುಂದಣಗಾರರ ಬಗ್ಗೆ ಬರೆಯುವಾಗ ಮೊತ್ತ ಮೊದಲು ನೆನಪಾಗುವುದು ಅವಿರತವಾದ ಶ್ರಮ, ಸ್ಥಿತಪ್ರಜ್ಞತ್ವ ಮತ್ತು ಸಾರ್ಥಕ ಜೀವನಯಾನ. ಬಹುಜ್ಞಾನ ಶಾಖೆಗೆ ಸೇರಿದ ಹಲವು ವಿಷಯಗಳನ್ನೊಳಗೊಂಡ ಅವರ ಬರೆಹದ ಹರಹು ಹುಬ್ಬೇರಿಸಿ ನೋಡಬೇಕಾದ್ದು. ವಿಸ್ತಾರ, ವೈಭವ, ವೈವಿಧ್ಯ, ವಿದ್ವತ್ತು ಅವರ ಬರೆಹವನ್ನು ಬೆಳಗಿದೆ. ಗ್ರಂಥ ಸಂಪಾದನೆಯಲ್ಲದೆ ಛಂದಸ್ಸು, ಶಾಸನಶಾಸ್ತ್ರ, ವಾಸ್ತು - ಶಿಲ್ಪ, ನಿಘಂಟು, ಹಸ್ತಪ್ರತಿಶಾಸ್ತ್ರ, ಕವಿ-ಕಾವ್ಯ-ಕಾಲ ಕುರಿತ ಇತಿವೃತ್ತ ಜಿಜ್ಞಾಸೆ, ಇತಿಹಾಸ, ಸಾಹಿತ್ಯ ಚರಿತ್ರೆ, ನಾಣ್ಯಶಾಸ್ತ್ರ, ಸಂಗೀತ-ನೃತ್ಯ-ಶಿಲ್ಪ ಕಲೆಗಳ ಜಿಜ್ಞಾಸೆ, ಸಂಸ್ಕೃತ-ಕನ್ನಡ-ಪ್ರಾಕೃತ-ಪಾಳಿ ಭಾಷೆಗಳ ಹಿನ್ನೆಲೆಯಿಂದ ಶಬ್ದಾರ್ಥ ಚರ್ಚೆ, ಜೈನ ಮತ್ತು ವೀರಶೈವ ಧರ್ಮಜ್ಞಾನ ಪ್ರಸರಣ, ಜನಪದ ಅಧ್ಯಯನ, ಸಾಂಸ್ಕೃತಿಕ ವಿವೇಚನೆ - ಹೀಗೆ ಅವರ ಅಧ್ಯಯನ ಹಲವು ಜ್ಞಾನಶಾಖೆಗಳಿಗೆ ದಾಂಗುಡಿಯಿಟ್ಟಿದೆ. ಈ ಎಲ್ಲ ಬಗೆಯ ಬರವಣಿಗೆಯಲ್ಲಿ ಪಾರದರ್ಶಕವಾಗುವುದು ಪ್ರಾಮಾಣಿಕತೆ ಮತ್ತು ಸಂಪೂರ್ಣ ತೊಡಗುವಿಕೆ.

ಪುರಾತತ್ವ ಶೋಧನ ವಿಧಾನದಲ್ಲಿ ಆಸಕ್ತಿ ವಹಿಸಿ ಸಂಶೋಧನೆ ಕೈಗೊಂಡ ಕನ್ನಡ ವಿದ್ವಾಂಸರಲ್ಲಿ ಕೆ. ಜಿ. ಕುಂದಣಗಾರರು ಮೊತ್ತ ಮೊದಲನೆಯ ಪ್ರಾಕ್ತನ ಶಾಸ್ತ್ರಜ್ಞರು. ಕೊಲ್ಲಾಪುರದಲ್ಲಿ ಮಹಾಲಕ್ಷ್ಮೀ ದಿಬ್ಬದ ಪ್ರದೇಶದಲ್ಲಿ ಉತ್ಖನನ ಕೈಗೊಂಡರು. ಆ ಪುರಾತತ್ವ ಶೋಧನ ಸಾರವನ್ನು 'ಮಹಾಲಕ್ಷ್ಮೀ ಟೆಂಪಲ್' ಎಂಬ ಇಂಗ್ಲಿಷ್ ಗ್ರಂಥದಲ್ಲಿ ತಿಳಿಸಿದ್ದಾರೆ. ಪ್ರಾಕ್ತನ ಶಾಸ್ತ್ರದಂತೆ ಶಾಸನಶಾಸ್ತ್ರ, ಛಂದಸ್ ಶಾಸ್ತ್ರವೆಂಬ ಜ್ಞಾತಿ ಶಿಸ್ತುಗಳಲ್ಲಿಯೂ ಸಮದಂಡಿಯಾದ ಪ್ರಗಲ್ಭ ಪಾಂಡಿತ್ಯ. ಈ ಮೂರೂ ಪೂರಕ ಕ್ಷೇತ್ರಗಳಲ್ಲಿ ಕೆಸರ್ಗಲ್ಲು ಕಲಸಿಟ್ಟು ಗುದ್ದಲಿ ಪೂಜೆ ಮಾಡಿದ ಆದ್ಯರೆನಿಸಿದರು. ದೇವಾಲಯಗಳಿಗೆ ಶಾಸನಗಳ ಅನ್ವೇಷಕರಾಗಿ ಹೋಗುತ್ತಿದ್ದರು. ಬೆಳಗಾವಿಜಿಲ್ಲೆಯ ಹಲವು ದೇವಾಲಯಗಳ ಶಿಲಾಶಾಸನಗಳನ್ನು ಪತ್ತೆ ಹಚ್ಚಿದರು. ಕೊಲ್ಲಾಪುರದಲ್ಲಿ ಇದ್ದಾಗಲೂ ಆದರ ಸುತ್ತಲಿನ ಶಾಸನಗಳನ್ನು ಕುರಿತು, ಆ. ನೇ. ಉಪಾಧ್ಯೆಯವರ ಸಲಹೆಯಂತೆ, ಸೂಕ್ತ ಟಿಪ್ಪಣಿಗಳ ಸಹಿತ ಇಂಗ್ಲಿಷಿನಲ್ಲಿ *Inscriptions from Northern Karnataka and Kolhapur* ಎಂಬ ಗ್ರಂಥವನ್ನು ಪ್ರಕಟಿಸಿದರು. ಎಚ್. ಹೆರಾಸರು ಕುಂದಣಗಾರರನ್ನು ಕುರಿತು "ಶಾಸನಶಾಸ್ತ್ರ ಮತ್ತು ಪ್ರಾಕ್ತನ ಶಾಸ್ತ್ರ ಕ್ಷೇತ್ರಗಳಲ್ಲಿ ಇಂಥ ಪ್ರಾವೀಣ್ಯ ಪಡೆದಿರುವ ಸಂಶೋಧಕ ಕುಂದಣಗಾರರನ್ನು ಶಿಕ್ಷಕರನ್ನಾಗಿ ಹೊಂದಿರುವ ಕಾಲೇಜನ್ನು ಅಭಿನಂದಿಸಬೇಕು. ಪ್ರೊ. ಕುಂದಣಗಾರರ ಭಾರತದ ಮತ್ತು ವಿದೇಶದ ಶಾಸನ ತಜ್ಞರ ಸಾಲಲ್ಲಿ ನಿಲ್ಲುತ್ತಾರೆ"- ಎಂದು ಮುಂತಾಗಿ ಶ್ಲಾಘಿಸಿದ್ದಾರೆ. ಈ ಸಾಕಲ್ಯಜ್ಞಾನ ಅವರಿಗೆ ಗುರುಗಳಿಂದ ಬರಲಿಲ್ಲ. ಸ್ವಾಧ್ಯಾಯದಿಂದ ಸಂಪಾದಿಸಿದ್ದರು. ಸ್ವಂತ ಪರಿಶ್ರಮದಿಂದ ಸ್ವಯಮಾಚಾರ್ಯರಾದರು.

ಅವರ ಪಾಂಡಿತ್ಯಕ್ಕೆ ಬಲ್ಲಿದರು ಮಂಡೆಬಾಗಿ ಮಣಿದರು. 'ಟೈಮ್ಸ್ ಆಫ್ ಇಂಡಿಯ', ಮತ್ತು 'ಇಲ್ಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯ' - ಪತ್ರಿಕೆಗಳಲ್ಲಿ ಕುಂದಣಗಾರರ ಸಂಶೋಧನೆಯ ಫಲಿತಗಳು ವರದಿಯಾದುವು. ಕೊಲ್ಲಾಪುರ ಬದಿಯ ಪಂಚಗಂಗಾ ನದಿಯ ತೀರದಲ್ಲಿ ಬ್ರಹ್ಮಪುರಿಯ ಉತ್ಖನನವನ್ನು, ಸರಕಾರದ ಹಣ ಸಹಾಯವಿಲ್ಲದೆ ಸ್ವಂತ ಪರಿಶ್ರಮದಿಂದ ಯಶಸ್ವಿಯಾಗಿ ಗುರಿಮುಟ್ಟಿದ್ದು ಕಂಡು ಪ್ರಶಂಸೆಯ ಹೇಳಿಕೆಗಳು ಹೊರಟವು. ವಿಖ್ಯಾತ ಪ್ರಾಚ್ಯವಸ್ತು ಸಂಶೋಧಕ

ಮಾರ್ಟಿಮರ್ ವೀಲರ್ ಖುದ್ದಾಗಿ ಬಂದು, ಕುಂದಣಗಾರರನ್ನು ಅಭಿನಂದಿಸಿ, 'ಇದು ಅದ್ಭುತ, ಆಶ್ಚರ್ಯ ಹುಟ್ಟಿಸುವಂತಹುದು' ಎಂದು ಕೊಂಡಾಡಿದರು. ಮೊರೇಸರ 'ಕದಂಬ ಕುಲ' ಗ್ರಂಥ ಪ್ರಸಿದ್ಧಿ ಪಡಿದಿದೆ; ಕದಂಬ ವಂಶದ ಸಾಧನೆಗಳನ್ನು ಪರಿಚಯಿಸುವ ಈ ಮೌಲಿಕ ಕೃತಿಯನ್ನು ಬರೆಯುವಾಗ ಮೊರೇಸರು ಕುಂದಣಗಾರರಲ್ಲಿ ಚರ್ಚಿಸಿ ಸೂಚನೆಗಳನ್ನು ಪಡೆದರೆಂಬುದು ಕುಂದಣಗಾರರು ಹೊಂದಿದ್ದ ಇತಿಹಾಸಜ್ಞಾನ ಮತ್ತು ಪ್ರಭುತ್ವಕ್ಕೆ ಜ್ವಲಂತ ಸಾಕ್ಷಿ.

ತಮ್ಮ ಸ್ವಾಧ್ಯಾಯ ಕಾಲದಲ್ಲಿ ಮಿರ್ಜಿ ಅಣ್ಣಾರಾಯರು, ಸಂಸ್ಕೃತ-ಪ್ರಾಕೃತ ಜ್ಞಾನಕ್ಕೆ ಆ. ನೇ. ಉಪಾಧ್ಯೆಯವರನ್ನೂ ಹಳೆಗನ್ನಡ ಸಾಹಿತ್ಯ ಲಾಭಕ್ಕೆ ಕುಂದಣಗಾರನ್ನೂ ಸಂಪರ್ಕಿಸುತ್ತಿದ್ದರು. ಸೇಡಬಾಳದಿಂದ ಕೊಲ್ಲಾಪುರಕ್ಕೆ ಹೋಗಿ ತಿಂಗಳಲ್ಲಿ ನಾಲ್ಕಾರು ದಿನ ಬಿಡಾರ ಹೂಡುತ್ತಿದ್ದರು. ಉಪಾಧ್ಯೆ, ಕುಂದಣಗಾರ, ಅಣ್ಣಾರಾಯ ಮೂವರು ಮಧ್ಯಮ ತನುಗಾತ್ರರು, ಕದಳೀ ಗರ್ಭ ಶ್ಯಾಮರು, ಶಾರದೆಯ ವರಪುತ್ರರು. ಉಪಾಧ್ಯೆ ವಿದ್ವತ್ತಿಗೆ ತವನಿಧಿ. ಕುಂದಣಗಾರರು ಬತ್ತದ ಅರಿವಿನ ತೊರೆ. ಅಣ್ಣಾರಾಯರು ಇವರಿಬ್ಬರ ಮಾನಸಪುತ್ರರಾಗಿ ವರ್ಧಿಷ್ಣು. ಉಪಾಧ್ಯೆ ಮತ್ತು ಕುಂದಣಗಾರರು ಮುಚ್ಚುಕೋಟು ತೊಟ್ಟು, ಕಚ್ಚೆ ಪಂಚೆ ಉಟ್ಟು, ತಲೆಗೆ ಕರಿಯ ಟೊಪ್ಪಿಗೆಯಿಟ್ಟು, ಕೈಯಲ್ಲಿ ಕೊಡೆ ಹಿಡಿದು ಕೊಲ್ಲಾಪುರದಲ್ಲಿ ಗಾಳಿ ಸವಾರಿ ಹೊರಡುವುದು; ಅವರಿಬ್ಬರ ಜತೆಗೆ ಬಿಳಿಯ ಗಾಂಧಿ ಟೋಪಿ, ಜುಬ್ಬ, ಕಚ್ಚೆ ಹಾಕಿದ ಮಿರ್ಜಿಯವರೂ ಉಪನದಿಯಾಗಿ ಸೇರುವುದು. ಈ ಮೂವರ ಜೋಡಿಯನ್ನು ನೋಡುವವರಿಗೆ ಸಾಹಿತ್ಯಕ್ಕೆ ಕೈ ಕಾಲು ಮೂಡಿ ನಡೆದಾಡುತ್ತಿರುವ ಅನುಭವ.

ಶ್ರವಣಬೆಳಗೊಳದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಆಯ್ಕೆಯಾದಾಗ ಉಪಾಧ್ಯೆಯವರು ವ್ಯಕ್ತಪಡಿಸಿದ ಮರುಕ್ಷಣದ ಪ್ರತಿಕ್ರಿಯೆ 'ಈಗ ಮಿತ್ರರಾದ ಪ್ರೊ. ಕುಂದಣಗಾರ್ರು ಇರಬೇಕಿತ್ರಿ, ಸ್ಕಾಲರ್ ಅಂದ್ರ ಅವರ ನೋಡ್ರಿ.' ಕನ್ನಡ ಸಾಹಿತ್ಯ ಸಂಬಂಧವಾದ ಸಂಶಯಗಳ ನಿವಾರಣೆಗೆ ಉಪಾಧ್ಯೆಗೆ ಕುಂದಣಗಾರರ ಸಹಾಯ ಸಿದ್ಧವಾಗಿತ್ತು. ಸ್ವಯಂ ಉಪಾಧ್ಯೆಯವರೇ ಅದನ್ನು ಒಪ್ಪಿಕೊಂಡಿದ್ದಾರೆ : "ಕುಂದಣಗಾರರ ಉಪಕಾರ ನನ್ ಮೇಲೆ ಭಾಳ ಐತ್ರಿ. ಅವರ ಮಾರ್ಗದರ್ಶನ ಇರದಿದ್ರ ನನ್ಗೆ ತುಂಬಾ ತ್ರಾಸ ಆಗಲಿಕ್ ಇತ್ರಿ. ಅದೇನೊ, ನನ್ ಸದೈವ ಅನ್ರಿ, ಕುಂದಣಗಾರ್ರ ಸ್ನೇಹ ಪ್ರಾಪ್ತಿ ಲಭಿಸ್ತಿ. ಅವರ ಕೊಲ್ಹಾಪುರ ಬಿಟ್ಟ ಬೆಳಗಾವೀಗ್ ಹೋದ್ರಿ, ಅದರ ದಸೀಂದ ನಂಗ ತ್ರಾಸ ಆಯ್ತಿರಿ". ಉಪಾಧ್ಯೆ ಹಾಗೂ ಕೆ. ಜಿ. ಕುಂದಣಗಾರರು ಸೇರಿ ಸಹ ಸಂಪಾದಕರಾಗಿ **ಚಿನ್ಮಯ ಚಿಂತಾಮಣಿ**, ಮತ್ತು **ಜ್ಞಾನ ಭಾಸ್ಕರ ಚರಿತೆ** - ಎಂಬ ಎರಡು ಕಿರು ಕಾವ್ಯಗಳನ್ನು ಸಂಪಾದಿಸಿದ್ದಾರೆ. ಅವರಿಬ್ಬರೂ ಒಟ್ಟಿಗೆ ಇಪ್ಪತ್ತು ವರ್ಷ ಕೊಲ್ಲಾಪುರದಲ್ಲಿ ಕನ್ನಡ ವಿದ್ವತ್ತಿನ ಅಧ್ವರ್ಯುಗಳಾಗಿ, ಸಂಜೀವನ ಕರ್ನಾಟಕ ಪರಂಪರೆಯ ವಾರಸುದಾರರಾಗಿ, ಸಂಸ್ಕೃತಿಯ ರಾಯಭಾರಿಗಳಾಗಿ ತಾವು ಕಲಿತ ಕಲ್ಪಿಯನ್ನು ಧಾರೆಯೆರೆದರು. ಪುದುವಾಳುತ್ತ ಕನ್ನಡದಂತೆ ಇಂಗ್ಲಿಷಿನಲ್ಲೂ ಬರೆದರು. ಅದರಿಂದ ಕನ್ನಡೇತರರೂ ಕನ್ನಡ ರತ್ನ ಭಂಡಾರದ ಸಿರಿ ಸಂಪದವನ್ನು ತಿಳಿದರು. ಹೊರನಾಡಿನಲ್ಲಿದ್ದ ಈ ಇಬ್ಬರು ವಿದ್ವಾಂಸರೂ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಕೊಲ್ಲಾಪುರದಲ್ಲಿ ಕನ್ನಡ ಚಟುವಟಿಕೆಗಳಲ್ಲಿ ಹಮ್ಮಿಕೊಳ್ಳಲು ಹುರುಪು ತುಂಬಿದ ಹಿರಿಯರಾದ ಕುಂದಣಗಾರರ ಮೇಲಾಳಿಕೆಯಲ್ಲಿ 'ಕರ್ನಾಟಕ ಸಂಘ' ಹುಟ್ಟಿತು. ಅದರ ವತಿಯಿಂದ **'ಹರಿಹರದೇವ'** ಎಂಬ ಅಪರೂಪ ಪುಸ್ತಕವೂ ಅಚ್ಚಾಯಿತು. ಪ್ರೊ. ಸ. ಸ. ಮಾಳವಾಡರು ಅಂದಿನ ದಿನಗಳನ್ನು ದಾಖಲಿಸಿದ್ದಾರೆ: "ಕನ್ನಡ ಸಾಹಿತ್ಯ ಸಂಸ್ಕೃತಿಗಳ ವ್ಯಾಸಂಗಕ್ಕೆ ಉಪಯುಕ್ತವಾಗುವ ದೊಡ್ಡಗಾತ್ರದ ಪುಸ್ತಕ ಭಂಡಾರವು ಆಗಲೇ ರಾಜಾರಾಮ ಕಾಲೇಜಿನಲ್ಲಿತ್ತು. ಪುರಾತನ ಸಂಶೋಧನೆಗಳಿಗೆ, ಕನ್ನಡ ಶಿಲಾಶಾಸನಗಳ ಅಭ್ಯಾಸಕ್ಕೆ ಬೇಕಾಗುವ ಸಾಮಗ್ರಿಯೂ ಅಲ್ಲಿತ್ತು. ಇದನ್ನೆಲ್ಲ ಕಟ್ಟಿ ಬೆಳಸಿದರು ಪ್ರೊ. ಕುಂದಣಗಾರರು. ಮಹಾರಾಷ್ಟ್ರದ ಒಂದು ದೇಶೀ ಸಂಸ್ಥಾನದಲ್ಲಿ ನಾಲ್ವತ್ತು ವರ್ಷಗಳ ಹಿಂದೆ ಪರಿಸ್ಥಿತಿಯಲ್ಲಿ ಇಂತಹ ಕಾರ್ಯವನ್ನು ಸಾಧಿಸಿದ ಪ್ರೊ. ಕುಂದಣಗಾರರ ನಿಷ್ಠೆ, ಕುಶಲತೆಗಳು ಪ್ರಶಂಸನೀಯ. ಅವರ ಸವಿಯಾದ, ಗೌರವಾನ್ವಿತವಾದ ವ್ಯಕ್ತಿತ್ವದಿಂದ ಅದು ಸಾಧ್ಯವಾಯಿತು. ರಾಜಾರಾಮ ಕಾಲೇಜಿನ ಆಗಿನ ಪ್ರಾಧ್ಯಾಪಕರು, ಕೊಲ್ಹಾಪುರದ ಪ್ರತಿಷ್ಠಿತ ವ್ಯಕ್ತಿಗಳು ಅವರನ್ನು ವಾತ್ಸಲ್ಯದಿಂದ 'ಅಣ್ಣಾ' ಎಂದು ಸಂಬೋಧಿಸುತ್ತಿದ್ದರು. ಪ್ರಾಚೀನ ಕರ್ನಾಟಕದಲ್ಲಿ 'ಅಣ್ಣ' ಎಂಬ ಸಂಬೋಧನೆಯನ್ನು ಪಡೆದವ ಹತ್ತನೆಯ ಶತಮಾನದ ಚಾವುಂಡರಾಯ. ಆದ್ದರಿಂದ ಪ್ರೊ. ಕುಂದಣಗಾರರನ್ನು ಇಪ್ಪತ್ತನೆಯ ಶತಮಾನದ ಚಾವುಂಡರಾಯನೆಂದು ಹೇಳಬೇಕಾಗುತ್ತದೆ. ಸಾಹಿತ್ಯ, ಸಂಸ್ಕೃತಿ, ಧರ್ಮಗಳನ್ನು ಕುರಿತು ನಿಷ್ಠೆಯಲ್ಲಿ, ವಿದ್ಯಾದಾನದ ಬಗೆಗೆ ತೋರುವ ಔದಾರ್ಯದಲ್ಲಿ, ಉನ್ನತವಾದ ಕಾರ್ಯದ ಸಾಧನಗಳನ್ನು ನಾಡಿನ ಹಿತಕ್ಕಾಗಿ ಬಳಸುವಲ್ಲಿ ಈ ಆಧುನಿಕ ಚಾವುಂಡರಾಯ ಗೈದ ಸಾಧನೆಗಳನ್ನು ಕರ್ನಾಟಕವು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ".

ಕೊಲ್ಲಾಪುರದಲ್ಲಿ ಪ್ರಾಚ್ಯವಸ್ತು ವಿಭಾಗವನ್ನು ಹುಟ್ಟುಹಾಕಿ ಕಟ್ಟಿ ಬೆಳಸಿದ ಪ್ರೊ. ಕುಂದಣಗಾರರು. ಧಾರವಾಡದ ಕನ್ನಡ ಸಂಶೋಧನಾ ಸಂಸ್ಥೆಯ ಸಂಸ್ಥಾಪನೆಗೂ ತುಂಬ ಶ್ರಮಿಸಿದರು. ಆದರೆ ನಿರಂತರ ಹದಿನೈದು ವರ್ಷಗಳ ಸ್ವಂತ ಖರ್ಚಿನ ಕಾಯಕದಿಂದ ಕೊಲ್ಲಾಪುರದಲ್ಲಿ ರೂಪಿಸಿದ ಪ್ರಾಚ್ಯವಸ್ತು ಸಂಗ್ರಹಾಲಯ ಅತಿಮಹತ್ವದ ಏಕವ್ಯಕ್ತಿಯ ದೊಡ್ಡ ಸಾಧನೆಯೆಂದು ಪ್ರೊ. ಮ.ಗು. ಬಿರಾದಾರ ಬರೆದಿರುವುದರಲ್ಲಿ ಅತಿಶಯೋಕ್ತಿಯಿಲ್ಲ: "ಈ ಪ್ರಾಚ್ಯವಸ್ತು ಸಂಗ್ರಹಾಲಯದ ಪ್ರತಿವಸ್ತುವಿನ ಮೇಲೂ ಪ್ರೊ. ಕುಂದಣಗಾರರ ಬೆರಳಿನ ಗುರುತುಗಳಿವೆ. ಆಗಿನ ಕಾಲದಲ್ಲಿ ಲಕ್ಷಗಟ್ಟಲೆ ಹಣ ಖರ್ಚು ಮಾಡಿದರೂ ಆಗದ ಆ ವಸ್ತು ಸಂಗ್ರಹಾಲಯ ಈ ಬಡ ಪ್ರಾಧ್ಯಾಪಕನೊಬ್ಬನ ಬೆವರು ಸಹಿತ ಪರಿಶ್ರಮದ ಫಲ ಎಂಬುದನ್ನು ಎಷ್ಟು ಜನ ನೆನಪಿಟ್ಟಿದ್ದಾರೊ! ಅವರ ಗಳಿಕೆಯ ಅರ್ಧಕ್ಕೂ ಹೆಚ್ಚು ಹಣ ಈ ಸಂಶೋಧನಾ ಕಾರ್ಯಕ್ಕಾದರೆ, ಕಾಲು ಭಾಗ ಕನ್ನಡ ವಿದ್ಯಾರ್ಥಿಗಳ ಕಲ್ಯಾಣಕ್ಕೆ! ಉಳಿದದ್ದರಲ್ಲಿ ಹರಕು ಹಾಸಿಗೆಯ, ಚಟ್ನಿ ರೊಟ್ಟಿಯ ಸಂಸಾರ ಸಾಗುತ್ತಿತ್ತು.".

ಕರ್ನಾಟಕದಲ್ಲಿ ನಾಣ್ಯಶಾಸ್ತ್ರದ ಅಧ್ಯಯನಕ್ಕೆ ತಕ್ಕ ಬುನಾದಿಯನ್ನು ಹಾಕಿ ಉದ್ಘಾಟಿಸಿದ ಪ್ರಥಮಿಗರು ಕುಂದಣಗಾರರು. ಕೊಲ್ಹಾಪುರದೊಳಗಿನ ಪ್ರಾಚೀನ ಕಾಲದ ನಾಣ್ಯಗಳು, ಆಂಧ್ರದ ನಾಣ್ಯಗಳು, ಪ್ರಾಚೀನ ಕನ್ನಡ ನಾಡಿನ ನಾಣ್ಯ ಪದ್ಧತಿ-ಮುಂತಾದುವು ತೀರ ಅಪರೂಪದ ಬರೆಹಗಳು. ಈ ನಾಣ್ಯಗಳ ಆಧಾರದಿಂದ, ಕ್ರಿ.ಶ. ಎರಡನೆಯ ಶತಮಾನದಲ್ಲಿ ಕರ್ನಾಟಕವು ಬೌದ್ಧ ಧರ್ಮದ ಬೀಡಾಗಿದ್ದಿತು-ಎಂಬ ತೀರ್ಮಾನವನ್ನು ನೀಡಿದ ಮೊಟ್ಟ ಮೊದಲ ಸಂಶೋಧಕರು ಕುಂದಣಗಾರರು. ವಿದ್ವತ್ತಿನ ಅಂಜನ ಹಚ್ಚಿದ ಅವರ ಕಣ್ಣುಗಳಿಗೆ ನೆಲದ ಮರೆಯ ನಿಧಾನ ನಿಚ್ಚಳವಾಗಿ ಕಾಣುತ್ತಿತ್ತು.

ಭಾರತ ಮತ್ತು ರೋಮ್ ನಡುವೆ ಇದ್ದ ಬಾಂಧವ್ಯದ ಸ್ವರೂಪದ ಮೇಲೆ ಬೆಳಕು ಬೀರಿದ, 'ರೋಮನ್ ಸಮುದ್ರ ದೇವತೆಯ' ಹಿತ್ತಾಳೆಯ ಅಪರೂಪದ ಮೂರ್ತಿಯನ್ನು, ತಮ್ಮ ಉತ್ಖನನದಿಂದ ಹೊರತೆಗೆದ ಕೀರ್ತಿಯೂ ಅವರಿಗೆ ದೊರೆಯಿತು. ಜನಪದ ಸಾಹಿತ್ಯದ ಅಧ್ಯಯನ ಮತ್ತು ಆಸಕ್ತಿ ಇನ್ನೂ ವಿಶ್ವವಿದ್ಯಾಲಯಗಳ ಗದ್ದುಗೆ ಏರಿರದ ಆ ಕಾಲದಲ್ಲಿ, ಪಿಎಚ್.ಡಿ ಪದವಿಗಾಗಿ 'ಕನ್ನಡ ಜನಪದ ಗೀತೆಗಳು' ಎಂಬ ವಿಷಯವನ್ನು ಗದ್ದಗಿಮಠ ಅವರಿಗೆ ಕೊಟ್ಟು ಮಾರ್ಗದರ್ಶನ ಮಾಡಿದ ಶ್ರೇಯವೂ ಕುಂದಣಗಾರರಿಗೆ ಸಂದಿತು; ಕನ್ನಡದ ಪ್ರಪ್ರಥಮ ಪಿ ಎಚ್. ಡಿ. ಮಹಾಪ್ರಬಂಧ ಇದೇ ಎಂಬುದು ಇನ್ನೊಂದು ಹೆಚ್ಚಳ. ಡಿ. ಎಸ್. ಕರ್ಕಿ ಅವರ 'ಕನ್ನಡ ಛಂದೋ ವಿಕಾಸ' ಮಹಾಪ್ರಬಂಧವೂ ಕುಂದಣಗಾರರ ಮಾರ್ಗದರ್ಶನದಲ್ಲಿ ಸಿದ್ಧವಾದದ್ದು.

ಕುಂದಣಗಾರರಿಗೆ ಜೈನ ಸಾಹಿತ್ಯ ಮತ್ತು ವೀರಶೈವ ಸಾಹಿತ್ಯ ಕರತಲಾಮಲಕವಾಗಿತ್ತು. ಈ ಎರಡೂ ಧರ್ಮಗಳ ಸಾರ, ವೈಶಿಷ್ಟ್ಯ, ಸ್ವೋಪಜ್ಞತೆ ಗುರುತಿಸಿದ್ದರು. **ಜಿನವಿಜಯ** ಮತ್ತು **ವಾಗ್ಭೂಷಣ** ಎಂಬ ಎರಡು ಆದರ್ಶ ಪತ್ರಿಕೆಗಳ ಸಂಪಾದಕರೂ ಆಗಿದ್ದ ಕುಂದಣಗಾರರು ಅಪ್ರಕಟಿತ ಓಲೆಗರಿ ಹಸ್ತಪ್ರತಿಗಳನ್ನು ಆಳವಾಗಿ ಓದಿ ತಲಸ್ಪರ್ಶಿಯಾದ ಪಾಂಡಿತ್ಯವನ್ನು ಗಳಿಸಿದ್ದರು. ಸಂಸ್ಕೃತ, ಪ್ರಾಕೃತ ಸಾಹಿತ್ಯದ ಕವಿ ಮತ್ತು ಕಾವ್ಯಗಳ ಮಹತ್ವ, ಕನ್ನಡದ ಸಂದರ್ಭದಲ್ಲಿ ಎಷ್ಟು ಮುಖ್ಯ ಎಂಬುದನ್ನು ಎತ್ತಿ ಹೇಳಿದ್ದಾರೆ. ಪಂಪ, ನಾಗಚಂದ್ರ, ಜನ್ನ, ನೇಮಿಚಂದ್ರ, ರತ್ನಾಕರವರ್ಣಿ, ಮಂಗರಸ ಮುಂತಾದ ಕವಿಗಳ ಕಾವ್ಯ ಸೂಕ್ಷ್ಮಗಳಿಗೆ ಸ್ಪಂದಿಸುವ ಮೌಲಿಕವಾದ ಬರವಣಿಗೆ ಮಾಡಿದ್ದಾರೆ. ಅವರ ಸಮಕಾಲೀನ ಸಾಹಿತ್ಯ ಸಂದರ್ಭದಲ್ಲಿ ಅಪೂರ್ವ ಮತ್ತು ಶ್ಲಾಘನೀಯವೆನಿಸುವ ವಿಮರ್ಶಾತ್ಮಕ ಲೇಖನಗಳನ್ನು ಬರೆದಿದ್ದಾರೆ. ಈ ಬಗೆಯ ಬರೆಹಗಳಲ್ಲಿ ಮಾಗಿದ ಅಭಿರುಚಿಯೊಂದಿಗೆ ಆಯಾ ಹಳೆಗನ್ನಡ ಕಾವ್ಯಗಳ ಶ್ರೇಷ್ಠ ಭಾಗವನ್ನು, ಮುಖ್ಯ ಕಾಣ್ಕೆಯನ್ನು ಕಾಣುವ ಆಧುನಿಕ ದೃಷ್ಟಿಕೋನವೊಂದು ಕ್ರಿಯಾಶೀಲವಾಗಿರುವುದನ್ನು ಮನಗಾಣಬಹುದು. ರತ್ನಾಕರನ ಭರತೇಶ ವೈಭವ ಕಾವ್ಯದ ಭಿನ್ನ ಪಾತಳಿಗಳನ್ನು ವಿವೇಚಿಸುತ್ತ ಪತಿತ್ವ, ಭ್ರಾತೃತ್ವದ ಬಾಂಧವ್ಯ ಭಾವ ಪ್ರಕಟಗೊಂಡು ಕೆನೆಕಟ್ಟಿರುವ ಪರಿಯನ್ನೂ ನೃತ್ಯ ನಿರೂಪಣೆಯಲ್ಲಿ ಹೆಣೆದುಕೊಂಡಿರುವ ನಟ್ಟುವರ ಮಾಹಿತಿಯನ್ನೂ ಬಯಲುಗೊಳಿಸಿದ್ದಾರೆ.

ಮಾಘಣಂದಿ ಮತ್ತು ಆಚಣ್ಣ, ಆದಿಪಂಪನೂ ಸಮುದಾಯದ ಮಾಘಣಂದಿಯೂ, ಪಂಪನು ಜಿನಸೇನಾಚಾರ್ಯರನ್ನು ಅನುಸರಿಸಿದ್ದಾರೆ-ಎಂಬಿತ್ಯಾದಿ ಲೇಖನಗಳಲ್ಲಿ ಕುಂದಣಗಾರರು ತಳೆದಿದ್ದ ತೌಲನಿಕ ಪ್ರಜ್ಞೆಯ ಹೊಳಹುಗಳು ಹರಳುಗೊಂಡಿವೆ. ಸಮುದಾಯದ ಮಾಘಣಂದಿಯು 'ಶಾಸ್ತ್ರ ಸಾರ ಸಮುಚ್ಚಯ' ಎಂಬ ಕೃತಿಯಲ್ಲಿ ಸಂಸ್ಕೃತ ವೃತ್ತಗಳಿಗೆ ಕನ್ನಡ ವೃತ್ತಿಯನ್ನು ಬರೆದಿದ್ದಾನೆ. ಮಾಘಣಂದಿಯು ಉದಾಹರಿಸಿರುವ ಪದ್ಯಗಳಲ್ಲಿ ಪಂಪನ ಆದಿಪುರಾಣ ಮತ್ತು ಆಚಣ್ಣ ಕವಿಯ ವರ್ಧಮಾನ ಪುರಾಣದಿಂದ ಆರಿಸಿದ ಪದ್ಯಗಳೂ ಸೇರಿರುವ ಸಂಗತಿಯನ್ನು ಸಂಶೋಧಿಸಿದ ಹಿರಿಮೆ ಕುಂದಣಗಾರರದು. ಸೋಮದೇವಕವಿಯ ಸಂಸ್ಕೃತ 'ನೀತಿವಾಕ್ಯಾಮೃತ' ಕೃತಿಯಿಂದ ಆರಿಸಿದ ಕನ್ನಡ ಪದಗಳು, ಕುರುವಂಶದ ಬಗೆಗೆ ಜೈನ ವಿಚಾರ, ಗೊಮ್ಮಟ ಶಬ್ದದ ವ್ಯುತ್ಪತ್ತಿ - ಮುಂತಾದ ರಚನೆಗಳು ಕುಂದಣಗಾರರ ಆಸಕ್ತಿಯ ವ್ಯಾಪಕತೆಗೆ ಸಾಕ್ಷಿಯಾಗಿದೆ.

ಜೈನ ಕಾವ್ಯಗಳಿಗೆ ಕುಂದಣಗಾರರು ಹೇಗೆ ಪ್ರತಿಕ್ರಿಯಿಸಿದರೆಂಬುದನ್ನು ಮನಗಾಣಲು ವಿವಿಧ ಕಾಲಮಾನದಲ್ಲಿ ಬರೆದ ಈ ಬಗೆಯ ಬಿಡಿ ಬರೆಹಗಳ ಜತೆಗೆ ಅವರು ಸಂಪಾದಿಸಿದ ಜೈನ ಕಾವ್ಯಗಳನ್ನು ಅವುಗಳಿಗೆ ಸೇರಿಸಿರುವ ಪ್ರಸ್ತಾವನೆಯನ್ನೂ ಓದಬೇಕು. ಅವರು ಎಂ. ಎ. ತರಗತಿಗೆ ಕಲಿಯುತ್ತಿದ್ದಾಗ ಈ ಪರಿಶ್ರಮ ನಡೆದಿತ್ತು. ದ್ರವಸ್ಥಿತಿಯಲ್ಲಿದ್ದ ಜೈನ ಸಾಹಿತ್ಯದ ಆಸಕ್ತಿ ಘನಸ್ಥಿತಿ ತಲುಪಿದ್ದು ಕೊಲ್ಲಾಪುರದಲ್ಲಿ ಸಿಕ್ಕ ಉಪಾಧ್ಯೆಯವರ ಒಡನಾಟದಿಂದ. ಎರಡು ದಶಕಗಳ ದೀರ್ಘಕಾಲಿಕ ಸ್ನೇಹ ಸಾಹಚರ್ಯದಿಂದ ಜೈನ ಧರ್ಮದ ಮತ್ತು ಸಾಹಿತ್ಯದ ಅರಿವು ಪಡೆದು ಹಿಡಿತವನ್ನು ಸಂಪಾದಿಸಿದರು. ಜತೆಗೆ ಚಂದ್ರಕಾಂತ ನಿಂಗರಾಜ ಪಾಟೀಲ ತಿಗಡೊಳ್ಳಿ ಮತ್ತು ಅಣ್ಣಪ್ಪ ಪಡೆಪ್ಪ ಚೌಗುಲೆ ಬೆಳಗಾವಿ - ಇವರ ಸಂಪರ್ಕದಿಂದ ಈ ತಿಳಿವಳಿಕೆ ಮತ್ತೂ ಮೊನಚುಗೊಂಡಿತು. ತತ್ಫಲವಾಗಿ ಜೈನ ಶಾಸ್ತ್ರಗ್ರಂಥ ಹಾಗೂ ಕಾವ್ಯಗಳ ವಿಷಯದಲ್ಲಿ ಅಧಿಕೃತ ವಕ್ತಾರನಾಗುವ ಶಕ್ತಿಯೂ ಪ್ರಭುತ್ವವೂ ದೊರೆಯಿತು. ಸೃಜನಶೀಲ ಸಾಹಿತಿಯೂ ಆಗಿದ್ದ ಕುಂದಣಗಾರರು 'ಸರಸ್ವತಿ' ಎಂಬ ಕಾದಂಬರಿಯನ್ನೂ ಹಾಸ್ಯಪೂರಿತ ಪ್ರಬಂಧಗಳನ್ನೂ ಅಕ್ಕಮಹಾದೇವಿಯನ್ನು ಕುರಿತು ಜೀವನ ಚರಿತೆಯನ್ನೂ ರಚಿಸಿದ್ದಾರೆ. ಸಂಸ್ಕೃತದಿಂದ ರತ್ನಾವಳೀ ಮತ್ತು ನಾಗಾನಂದ ಎಂಬ ನಾಟಕಗಳನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ.

ಕೊಲ್ಲಾಪುರದಿಂದ ನಿವೃತ್ತಿಯ ಅನಂತರ ಬೆಳಗಾವಿಯ ರಾಣಿ ಪಾರ್ವತೀದೇವಿ ಕಾಲೇಜಿನಲ್ಲಿ (ಆರ್.ಪಿ.ಡಿ.) ೧೯೪೮ರಿಂದ ೧೯೬೫ರ ವರೆಗೆ ಪ್ರಾಧ್ಯಾಪಕರಾಗಿದ್ದ ಕುಂದಣಗಾರರು ಶಿಕ್ಷಣ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆ ಅವಿಸ್ಮರಣೀಯ. ಸ್ವಯಂ ಜ್ಞಾನಭಂಡಾರವಾಗಿದ್ದರಿಂದ ಅವರು ಶಿಷ್ಯರ ಪಾಲಿಗೆ ಕಲ್ಪವೃಕ್ಷ-ಕಾಮಧೇನು ಆಗಿದ್ದರೆಂದು ಅವರಲ್ಲಿ ಕಲಿತ ಹಲವು ಹಿರಿಯರು ಮುಕ್ತ ಕಂಠರಾಗಿ ನುಡಿದಿದ್ದಾರೆ. ಕನ್ನಡದಲ್ಲಿ ಉನ್ನತ ಶಿಕ್ಷಣಕ್ಕಾಗಿ ಕೊಲ್ಲಾಪುರಕ್ಕೆ ಬರುತ್ತಿದ್ದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅವರ ಮನೆಯೇ ಯಾತ್ರಾ ಸ್ಥಳ, ಕಾಶಿ. ಬೆಳಗಿನ ಜಾವದಲ್ಲಿ ತಾವೇ ಖುದ್ದಾಗಿ ನಿಂತು ವಿದ್ಯಾರ್ಥಿಗಳನ್ನು ಏಳಿಸುತ್ತಿದ್ದರು, ಯೋಗಕ್ಷೇಮ ವಿಚಾರಿಸುತ್ತಿದ್ದರು. ಉಚಿತ ಊಟ ಉಪಚಾರ ವಸತಿ ಸೌಕರ್ಯ ಅವರ ಮನೆಯಲ್ಲಿ ವಿದ್ಯಾರ್ಥಿಗಳಿಗೆ ಮೀಸಲು. ಆಹಾರ, ಫೀಸು ಕಟ್ಟಲು ಹಣ, ಬಟ್ಟೆ ಬರೆ, ಪುಸ್ತಕಗಳು-ಎಲ್ಲ ಪುಕ್ಕಟೆಯಾಗಿ ಹಂಚುತ್ತಿದ್ದರು. ಕನ್ನಡ ಕಲಿಯಲು ಬಂದ ಛಾತ್ರರಿಗೆ ಕುಂದಣಗಾರರು ಪ್ರಾಧ್ಯಾಪಕರೂ ಪಾಲಕರೂ ಪೋಷಕರೂ ಗೆಳೆಯರೂ ತತ್ವಜ್ಞಾನಿಯೂ ಮಾರ್ಗದರ್ಶಕರೂ ಆಗಿದ್ದರು. ಕುಂದಣಗಾರರು ಗುರು, ಅವರ ಮನೆ ಗುರುಕುಲ, ಗ್ರಂಥಾಲಯ, ಮತ್ತು ಕನ್ನಡ ಜಾಗೃತಿಯ ಕಮ್ಮಟ.

"ಕುಂದಣಗಾರರು ವಾತ್ಸಲ್ಯದ ಸಾಕಾರ ಮೂರ್ತಿ. ವಿದ್ಯಾರ್ಥಿಗಳೆಲ್ಲರೂ ಅವರಿಗೆ ಮನೆಯ ಮಕ್ಕಳಂತೆ. ಬಡವಿದ್ಯಾರ್ಥಿಗಳಿಗೆ ಎಲ್ಲ ದೃಷ್ಟಿಯಿಂದಲೂ ತಮ್ಮ ಶಕ್ತ್ಯಾನುಸಾರ ಸಹಾಯ ಮಾಡುತ್ತಿದ್ದರು. ಅಂತೆಯೇ ಸಹಸ್ರಾರು ವಿದ್ಯಾರ್ಥಿಗಳು ಪದವೀಧರರಾಗಿ ಜೀವನದ ನಾನಾ ಕ್ಷೇತ್ರಗಳಲ್ಲಿ ಮುಂದೆ ಬಂದು ಕಾರ್ಯ ಮಾಡುತ್ತಿರುವರು. ಇವರ ಹೆಸರು ಹೇಳಿ ಅವರು ಮನೆಗೆ ದೀಪ ಮುಡಿಸುತ್ತಿರುವರು. ಇಷ್ಟು ಅಪಾರವಾಗಿದೆ ಅವರ ವಾತ್ಸಲ್ಯ ಭಾವನೆ, ನಾಡು ನುಡಿಗಳ ಪ್ರೇಮ" (ಆರ್. ಸಿ. ಹಿರೇಮಠ, 'ಕುಂದಣ'ದ ಸಂಪಾದಕೀಯ). ಭಾರತದ ರಾಷ್ಟ್ರಪತಿಯಿಂದ

ಹಿಡಿದು, ವಿಶ್ವ ವಿದ್ಯಾಲಯದ ಕುಲಪತಿಗಳು, ಕಾಲೇಜುಗಳ ಪ್ರಾಂಶುಪಾಲರು, ಪ್ರಾಧ್ಯಾಪಕರು - ಹೀಗೆ ಒಂದು ದೊಡ್ಡ ಪಾಳಿಯೇ ಇದೆ ಕುಂದಣಗಾರರ ಶಿಷ್ಯ ಸಮುದಾಯದ ಪ್ರಭಾವಳಿಯನ್ನು ಬೆಳಗಿಸಲು. ಈ ನಾಡಿನ ಉದ್ದಗಲಗಳಲ್ಲಿ ಹೆಸರುಗಳಿಸಿದ ಕುಂದಣಗಾರರ ವಿದ್ಯಾರ್ಥಿ ಮಹೋದಯರಲ್ಲಿ ಕೆಲವರು : ಇಂಚಲ ಎಸ್. ಡಿ, ಕರ್ಕಿ ಡಿ. ಎಸ್, ಕುಲಕರ್ಣಿ ವ್ಹಿ. ಜಿ., ಗದ್ದಗಿಮಠ ಬಿ. ಎಸ್, ಜತ್ತಿ ಬಿ. ಡಿ., ಜಾಧವ ಆರ್. ಬಿ (ರಾಮಜಾಧವ), ಪಾಟೀಲ ಕೆ. ಎಚ್, ರ್‍ಯಾಂಗಲರ್ ಡಿ. ಸಿ. ಪಾವಟೆ, ಬಿರಾದಾರ ಎಂ.ಜಿ. ಭಾಗೋಜಿ ಪಿ. ಕೆ,, ಭೂಸನೂರ ಮಠ ಎಸ್. ಎಸ್, ಮಾಳವಾಡ ಸ.ಸ, ಮುಗಳಿ ರಂ.ಶ್ರೀ, ಲಗಳಿ ಎಚ್. ಕೆ, ವೆಂಕಟೇಶ ಸಾಂಗಲಿ, ಶಂಕರರಾವ ಜಿ. ಬಿ, ಶಹಪೇಟಿ ಎಸ್. ಬಿ, ಸದಾನಂದ ನಾಯಕ, ಸಾಸನೂರ ಎ.ಟಿ, ಸಾಸನೂರ ಬಿ.ಟಿ, ಸಾಸನೂರ ಎಚ್. ಟಿ, ಸುಂಕಾಪುರ ಎಂ.ಎಸ್, ಹಿರೇಮಠ ಆರ್. ಸಿ, ಹಿರೇಮಲ್ಲೂರ ಈಶ್ವರನ್ ಮುಂತಾದವರು.

ಕುಂದಣಗಾರರಿಗೆ ಶಿಷ್ಯ ವಾತ್ಸಲ್ಯ, ಪುಸ್ತಕ ಪ್ರೀತಿ ಇವು ಎರಡು ಶ್ವಾಸಕೋಶಗಳು. ಸಾಲಮಾಡಿ ಪುಸ್ತಕ ಕೊಳ್ಳುತ್ತಿದ್ದರು. ಅವರ ವೈಯಕ್ತಿಕ ಪುಸ್ತಕ ಭಂಡಾರ ಬಹಳ ದೊಡ್ಡದಿದ್ದು ಅದು ವಿದ್ಯಾರ್ಥಿಗಳಿಗೆ ಮುಕ್ತವಾಗಿತ್ತು. ಅವರಿಗೆ ಕುಳಿತುಕೊಳ್ಳಲು ಒಳ್ಳೆಯ ಕುರ್ಚಿ ಇರದಿದ್ದರೂ ಪುಸ್ತಕಗಳಿಗೆ ಮಾತ್ರ ಸಾಗುವಾನಿಯ ದೊಡ್ಡ ಕಪಾಟುಗಳನ್ನು ಮಾಡಿಸಿದ್ದರು. ಪುಸ್ತಕಗಳ ಮಹತ್ವವನ್ನು ಶಿಷ್ಯರಿಗೆ ತಿಳಿಸಿದ್ದಲ್ಲದೆ ಪುಸ್ತಕವನ್ನು ವಿದ್ಯಾರ್ಥಿಗಳಿಗೆ ತಾವೇ ಖುದ್ದಾಗಿ ಒಯ್ದು ಮುಟ್ಟಿಸುತ್ತಿದ್ದುದು ಅವರ ಘನ ವ್ಯಕ್ತಿತ್ವದ ಒಂದು ಮುಖ. ಎರಡು ಉದಾಹರಣೆಯಿಂದ ಈ ಅಂಶವನ್ನು ಸಾಬೀತು ಪಡಿಸಬಹುದು:

೧. "ಜಾತಿ-ಮತ-ಪಂಥ-ಪ್ರದೇಶಗಳ ತಾರತಮ್ಯವಿಲ್ಲದೆ ಇಡೀ ವಿದ್ಯಾರ್ಥಿ ಜಾತಿಯನ್ನೇ ತಮ್ಮ ಮನೆಯ ಮಕ್ಕಳಾಗಿಸಿಕೊಂಡು ಅವರ ಉತ್ಕರ್ಷಕ್ಕೆ, ಹರ್ಷಕ್ಕೆ ಕಾರಣರಾದ ಮಹಾನ್ ಪ್ರಾಧ್ಯಾಪಕ, ಆಚಾರ್ಯರ ಆಚಾರ್ಯ ಈ ಪ್ರೊ. ಕುಂದಣಗಾರ! ವಿದ್ಯಾರ್ಥಿಗಳ ಮೇಲಿನ ಪ್ರೀತಿಯ ಪ್ರತೀಕವಾಗಿ, ನನ್ನೊಂದಿಗೆ ನಡೆದ ಘಟನೆಯೊಂದನ್ನು ಉಲ್ಲೇಖಿಸುವುದು ಅವಶ್ಯವೆನಿಸಿದೆ. ನನ್ನ ಪಿಎಚ್. ಡಿ. ಅಧ್ಯಯನಕ್ಕೆ ಆಕರ ಗ್ರಂಥವಾಗಿ ಜಿನಸೇನಾಚಾರ್ಯರ ಪೂರ್ವಪುರಾಣ ಬೇಕಾಯ್ತು. ಅದು ಬೆಳಗಾಂವದಿಂದ ನಾಲ್ಕು ಮೈಲು ದೂರದ ಒಂದು ಜೈನ ಮಠದಲ್ಲಿದ್ದುದನ್ನು ನನಗೆ ತಿಳಿಸಿದರು. ಅಲ್ಲದೆ ಮುಂಜಾನೆ ಬೇಗಬನ್ನಿ, ಸ್ವಾಮಿಗಳಿಗೊಂದು ಪತ್ರ ಕೊಡುವೆ ತರುವಿರಂತೆ- ಎಂದೂ ಹೇಳಿದರು. ನಾನು ಅವರ ಆದೇಶದಂತೆ ಮುಂಜಾನೆ ಮನೆಗೆ ಹೋದಾಗ ಅವರಿರಲಿಲ್ಲ. ನಸುಕಿನಲ್ಲೇ ಹೋದವರು ಇನ್ನೂ ಬಂದಿಲ್ಲವೆಂದು ತಾಯಿಯವರು ಹೇಳಿದರು. ನಾನು ವಿಚಾರಿಸುತ್ತ ಟಿಳಕವಾಡಿಯ ಬಸ್ ನಿಲುಗಡೆಯ ಸ್ಥಳಕ್ಕೆ ಬಂದೆ. ಹದಿನೈದು ಇಪ್ಪತ್ತು ನಿಮಿಷ ಕಾದಿರಬೇಕು. ಆಗ ಹೆಗಲ ಮೇಲೊಂದು ದೊಡ್ಡ ಗಂಟು ಹೊತ್ತುಕೊಂಡು ಗುರುಗಳು ಬಸ್ಸಿನಿಂದಿಳಿದರು. ಏನು ತಂದಿದ್ದಾರೊ ಎಂದು ಒತ್ತಾಯದಿಂದ ಅದನ್ನು ತೆಗೆದುಕೊಂಡೆ. '.... ನೀವು ಹೋದರೆ ಅವರು ಕೊಡಲಿಕ್ಕಿಲ್ಲ... ಎಂದು ನಾನೇ ನಸುಕಿನಲ್ಲಿ ಎದ್ದು ವಾಕಿಂಗ್ ಹೋದೆ...' ಮುಂತಾಗಿ ಹೇಳುತ್ತಿರುವಾಗ ಆ ಗಂಟಿನಲ್ಲಿದ್ದುದು ತೆಕ್ಕೆಗೆ ಸಿಕ್ಕದ ಗಾತ್ರದ ಗ್ರಂಥ **ಪೂರ್ವಪುರಾಣ**ವೆಂಬ ಅರಿವಾಯ್ತು! ಗುರುವಿನ

ಈ ಕಾರ್ಯಕ್ಕೂ, ಆ ಗಾತ್ರದ ಕೃತಿಗೂ ಏನೂ ವ್ಯತ್ಯಾಸ ಕಾಣಲಿಲ್ಲ" (ಮ.ಗು. ಬಿರಾದಾರ : ಪ್ರೊ. ಕೆ. ಜಿ. ಕುಂದಣಗಾರರ ಬದುಕು ಮತ್ತು ಬರಹ : ೧೯೯೫ : ೨೪-೨೫)

೨. ಅವರ ಸಾತ್ವಿಕ, ಸರಳ, ಉದಾರ, ವಿನಮ್ರ ಜೀವನದ ಪ್ರಬಲವಾದ ಪ್ರಭಾವ ಇಂದಿಗೂ ನನ್ನೊಳಗೆ ಗುನುಗುಣಿಸುತ್ತ ನಿನಾದ ಮಾಡುತ್ತಿದೆ. ಅವರಂಥವರು ಅವರು. ಯಾವಾಗಲೂ ಮೊಗದಲ್ಲಿ ನಗೆ, ಮಾತಿನಲ್ಲಿ ಜೇನು, ಕೈಯಲ್ಲಿ ಉಪಕಾರ, ಕಾಲೇಜಿನ ಕೆಲಸ ಮುಗಿಸಿಕೊಂಡು ಮನೆಗೆ ಬರುವಾಗ ನನಗೆ ಉಪಯುಕ್ತವಾಗುವ ನಾಲ್ಕೆಂಟು ದೊಡ್ಡ ದೊಡ್ಡ ಪುಸ್ತಕಗಳನ್ನು ಹೊತ್ತುಕೊಂಡು ನಮ್ಮ ಹಾಸ್ಟೇಲಿಗೆ ಬಂದು, ಆ ಗ್ರಂಥಗಳಲ್ಲಿ ನಾನು ಓದಬೇಕಾದ ವಿಷಯಗಳನ್ನೆಲ್ಲ ಗುರುತುಹಾಕಿಕೊಟ್ಟು ತಮ್ಮ ಮನೆಗೆ ಹೋಗುತ್ತಿದ್ದರು. ಬಹುಮಟ್ಟಿಗೆ ನನಗೆ ಕೊಟ್ಟ ಗ್ರಂಥಗಳನ್ನು ತಿರುಗಿ ವಾಚನಾಲಯಕ್ಕೆ ಮುಟ್ಟಿಸುವವರೂ ಅವರೆ! ಅಭ್ಯಾಸದಲ್ಲಿ ಮುಳುಗಿದಂತಿದ್ದ ನನ್ನ ಹೊತ್ತು ವಾಚನಾಲಯದ ದಂದುಗದಲ್ಲಿ ವ್ಯರ್ಥವಾಗಿ ಕಳೆದುಹೋಗಬಾರದೆಂಬುದೆ ಗುರುಗಳಾದ ಕುಂದಣಗಾರರ ಉತ್ಕಟ ಉತ್ಸಾಹ ಭಾವ" (ಸಂ. ಶಿ. ಭೂಸನೂರಮಠ: 'ಕುಂದಣದ ಬೆಳೆ' (ಸಂ) ಪ್ರಕಾಶ ಕೋಟಿನ ತೋಟ : ೧೯೯೫: ೨೨-೨೩)

ವಿದ್ಯಾರ್ಥಿಗಳೇ ತಮ್ಮ ಪ್ರಥಮದೈವವೆಂದು ನಂಬಿ ನಡೆದ ಕುಂದಣಗಾರರು ಎಂಥ ಪರಿಸ್ಥಿತಿಯಲ್ಲಿಯೂ ರಜೆ ಹಾಕಿದವರಲ್ಲ, ತರಗತಿ ತಪ್ಪಿಸಿದವರಲ್ಲ. ಪೂರ್ವಸಿದ್ಧತೆ ಇರದೆ ತರಗತಿಗೆ ಬಂದವರಲ್ಲ. ಅಧ್ಯಯನ, ಅಧ್ಯಾಪನ, ಸಂಶೋಧನ-ಇವುಗಳಲ್ಲಿ ಆನಂದ ಪಡೆದರು, ಬಿಡುಗಡೆ ಕಂಡರು. 'ಬಹು ಜನಪ್ರಿಯ' ಎಂಬ ಮಾತು ಹಾಗಿರಲಿ, 'ತುಸು ಜನಪ್ರಿಯ' ಕೂಡ ಆಗಿರಲಿಲ್ಲ. ಸಾರ್ವಜನಿಕ ಸಭೆ ಸಮಾರಂಭದ ವೇದಿಕೆಗಳು ಅವರಿಗೆ ದೂರ. ಹೀಗಾಗಿ ಅವರ ಬೌದ್ಧಿಕ ಎತ್ತರಗಳ ಪರಿಚಯ ವ್ಯಾಪಕವಾಗಿ ಹಬ್ಬಲಿಲ್ಲ. ಅಲ್ಲದೆ ಅವರ ಸಂಶೋಧನೆ ಪ್ರಬಂಧಗಳ ಅಲಭ್ಯತೆಯೂ ಕಾರಣವಾಗಿ, ಅವರ ಹುಡುಕಾಟದ ಹೊನ್ನಗೆರೆಗಳನ್ನು ಗುರುತಿಸಲು ಸಾಧ್ಯವಾದದ್ದು ತಡವಾಗಿ. ಕರ್ನಾಟಕದ ವಿದ್ವತ್ತಿನ ಬಾಂದಳದ ಈ ಬೆಳ್ಳಿ ನಕ್ಷತ್ರ ಜಂಗಮ ವಿಶ್ವಕೋಶವೆಂದು ತಿಳಿದದ್ದು ಕೆಲವು ಶಿಷ್ಯರಿಗೆ ಮಾತ್ರ. ಕೀರ್ತಿಗಳಿಸಬಹುದು. ಪ್ರಾಮಾಣಿಕರೆಂದು, ಸಚ್ಚಾರಿತ್ರ್ಯ ಶುಭ್ರರೆಂದು ಹೆಸರು ಗಳಿಸುವುದು ಅಪರೂಪ. ಕುಂದಣಗಾರರಲ್ಲಿ ಸಣ್ಣ ತನಗಳು ಇರಲಿಲ್ಲ. ಅಕಳಂಕವಾದ ಪಾರದರ್ಶಕ ಸನ್ನಡತೆಯಿಂದ, ತಲಸ್ಪರ್ಶಿಯಾದ ತುಂಬು ಪಾಂಡಿತ್ಯದಿಂದ, ಬಿಂಕ ಬಿಗುಮಾನಗಳಿರದ ಸರಳಜೀವನದಿಂದ ಅಪರೂಪದವರೆನಿಸಿದರು.

ತಮ್ಮ ಜನ್ಮ ಸ್ಥಳವಾದ ಕೌಜಲಗಿಯಲ್ಲಿ ಮಾದರಿ ಶಿಕ್ಷಣ ಸಂಸ್ಥೆಯು ನಡಸುತ್ತಿದ್ದ ಶಾಲೆಯು ಹಣಕಾಸಿನ ತೊಂದರೆಯಿಂದಾಗಿ ಮುಚ್ಚುವಂತಹ ಪರಿಸ್ಥಿತಿ ಎದುರಾಯಿತು. ಪ್ರೊ. ಕುಂದಣಗಾರರ ಕರುಳು ಕಿತ್ತು ಬಂದಂತಾಯಿತು. ಕೈಯಲ್ಲಿ ಕಾಸಿಲ್ಲ. ಕೂಡಲೆ ಕೌಜಲಗಿಯಲ್ಲಿದ್ದ ಮನೆಯನ್ನು ಮಾರಿ ಬಂದ ಮೂರು ಸಾವಿರ ರೂಪಾಯಿಗಳನ್ನು ೧೯೩೩ರಲ್ಲಿ ನೀಡಿ ಹಳ್ಳಿಯ ಏಕೈಕ ಶಾಲೆಯನ್ನು ಉಳಿಸಿದರು! ಬೇಡುವವ ಬಡವನಲ್ಲದೆ ನೀಡುವವ ಬಡವನೆ ಎಂಬಂತೆ ಅವರ ಹೃದಯ ಶ್ರೀಮಂತಿಕೆ, ಜನಪರ ಕಾಳಜಿ, ಜೀವಪರ ಮಿಡಿತ ಪ್ರಕಟವಾಯಿತು.

ಕುಂದಣಗಾರರು ಕೊಂಡಾಟಗಳಿಗೆ ಬಾಯಿ ಬಿಡಲಿಲ್ಲ, ತೆಗಳಿಕೆಗೆ ಮೊಗ ಮುರುಕಿಸಲಿಲ್ಲ. ಹಿಡಿದ ಕೆಲಸಗಳನ್ನು ಶ್ರದ್ಧೆಯಿಂದ ತುದಿ ಮುಟ್ಟಿಸಿದರು. ಆತ್ಮವಂಚನೆಯಿಲ್ಲದ ಬದುಕನ್ನು ಬಾಳಿದರು. ಇತಿಹಾಸ ಎನ್ನುವಂಥ ಜೀವನವನ್ನು ನಡಸಿ ಕರ್ನಾಟಕ ಸಂಸ್ಕೃತಿಯ ಇತಿಹಾಸ ಬರೆದರು. ಜೇಡವು ತನ್ನ ಒಡಲಿನಿಂದ ಬರುವ ಎಳೆಗಳಿಂದಲೇ ತನ್ನ ಬಲೆ ನೇಯುವಂತೆ ಕುಂದಣಗಾರರು ತಮಗೆ ತಾವೆ ಓಜರಾದರು. ವಿದ್ವತ್ತಿನ ಎತ್ತರಗಳನ್ನು ಏರುತ್ತ ತಮ್ಮ ತರುವಾಯದ ತಲೆಮಾರಿನವರಿಗೆ ಶೃಂಗಗಳನ್ನು ಏರುವ ದಾರಿ ತೋರಿದರು, ಸ್ವಯಂ ತಾವೇ ದೊಡ್ಡ ಶೃಂಗವಾದರು.

ಬೆಳಗಾಗ ನಾನೆದ್ದು ಯಾರಾರ ನೆನೆಯಲಿ
ಎದ್ದೊಂದು ಗಳಿಗೇಲಿ ಕಲ್ಲಪ್ಪ ಗಿರಿಯಪ್ಪ
ಕುಂದಣಗಾರರ ನೆನೆದೇನ ಎದೆ ತುಂಬಿ।।

ಜೀವನ ಪಥ

೧೪.೮.೧೮೯೫	ಬೆಳಗಾವಿ ಜಿಲ್ಲೆ, ಗೋಕಾಕ ತಾಲೂಕ ಕೌಜಲಗಿ ಹಳ್ಳಿಯಲ್ಲಿ ಹುಟ್ಟಿದ್ದು. ತಂದೆ ಗಿರಿಯಪ್ಪ (ಗುರಪ್ಪ) ಮೊದಲ ಹೆಸರು : ಕಾಳಪ್ಪ ಗುರಪ್ಪ ಕುಂದಣಗಾರ ತರುವಾಯದ ಹೆಸರು (ಶಾಲಾದಾಖಲಾತಿ) : ಕಲ್ಲಪ್ಪ ಗಿರಿಯಪ್ಪ (ಗಿರಿಮಲ್ಲಪ್ಪ) ಕುಂದಣಗಾರ : ರೂಢಿಯ ಹೆಸರು : ಕೆ. ಜಿ. ಕುಂದಣಗಾರ
೧೯೦೯	ಮೆಟ್ರಿಕ್ಯುಲೇಶನ್ - ವಿಕ್ಟೋರಿಯಾ ಹೈಸ್ಕೂಲ್ (ಅನಂತರ ಇದರ ಹೆಸರು-ವಿದ್ಯಾರಣ್ಯ ಕಾಂಪೋಜಿಟ್ ಜೂನಿಯರ್ ಕಾಲೇಜು), ಧಾರವಾಡ
೧೯೧೩	ಇಂಟರ್ ಮೀಡಿಯೆಟ್, ಪುಣೆ.
೧೯೧೪	ಚಿ. ಸೌ. ಕಮಲಾದೇವಿಯೊಂದಿಗೆ ಮದುವೆ
೧೯೧೬-೧೮	ಉಪಾಧ್ಯಾಯರು; ರಾಜಾರಾಮ ಹೈಸ್ಕೂಲು, ಕೊಲ್ಲಾಪುರ
೧೯೧೮-೨೫	ಶಿಕ್ಷಕ ವೃತ್ತಿ; ಮುನಿಸಿಪಲ್ ಹೈಸ್ಕೂಲು, ಗೋಕಾಕ
೧೯೧೯	ಬಿ. ಎ. ಪದವಿ : ಮುಖ್ಯ ವಿಷಯ, ರಸಾಯನ ಶಾಸ್ತ್ರ
೧೯೨೫	ಎಂ. ಎ. (ಕನ್ನಡ) : ೩೦ನೆಯ ವಯಸ್ಸಿನಲ್ಲಿ ಸ್ನಾತಕೋತ್ತರ ಪದವಿ
೧೯೨೫-೨೬	ಕನ್ನಡ ಪ್ರಾಧ್ಯಾಪಕರು; ಕರ್ನಾಟಕ ಕಾಲೇಜು, ಧಾರವಾಡ
೧೯೨೬-೨೯	ಅಧ್ಯಾಪಕರು; ರಾಜಾರಾಮ ಹೈಸ್ಕೂಲು, ಕೊಲ್ಲಾಪುರ (ಮಹಾರಾಷ್ಟ್ರ)
೧೯೨೯-೫೮	ಕನ್ನಡ ಪ್ರಾಧ್ಯಾಪಕರು, ರಾಜಾರಾಮಕಾಲೇಜು, ಕೊಲ್ಲಾಪುರ
೧೯೩೬	ಹರಿಹರದೇವ - ಪ್ರಶಸ್ತಿ ಗ್ರಂಥ ಪ್ರಕಟಣೆ, ಕೊಲ್ಲಾಪುರದಿಂದ
೧೯೫೧	ಅಧ್ಯಕ್ಷರು, ಸಾಹಿತ್ಯ ಗೋಷ್ಠಿ, ಕನ್ನಡ ಸಾಹಿತ್ಯ ಸಮ್ಮೇಳನ, ಹೈದರಾಬಾದು
೧೯೫೬	ಅಧ್ಯಕ್ಷರು, ದ್ರಾವಿಡ-ಕನ್ನಡ ವಿಭಾಗ ಗೋಷ್ಠಿ, ಅಖಿಲ ಭಾರತ ಪ್ರಾಚ್ಯ ಸಮ್ಮೇಳನ, ಮುಂಬಯಿ
೧೯೫೮-೬೫	ಗೌರವ ಪ್ರಾಧ್ಯಾಪಕರು, ಆರ್. ಪಿ. ಡಿ. ಕಾಲೇಜು, ಬೆಳಗಾವಿ

೧೯೬೧ (ಡಿಸೆಂಬರ್ ೨೭, ೨೮, ೨೯) ಅಧ್ಯಕ್ಷರು, ೪೩ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಗದಗ

೧೯೬೧ **'ಕುಂದಣ'** - ಸಂಭಾವನ ಗ್ರಂಥ ಸಮರ್ಪಣೆ.

೨೨-೮-೧೯೬೫ ಬೆಳಗಾವಿಯಲ್ಲಿ ನಿಧನ

ಸಾಹಿತ್ಯ ಪಥ

ಆದಿಪುರಾಣಂ, (ಸಂ) ೧೯೫೩

ಇಂದ್ರಿಯ ವಿಜ್ಞಾನವೂ ಆರೋಗ್ಯ ಶಾಸ್ತ್ರವೂ, (ದ್ವಿತೀಯ ಮುದ್ರಣ) ಪಠ್ಯ ಪುಸ್ತಕ ಮಾಲೆ

ಗದ್ಯಮಾಲೆ (ಸಂ) ಬೆಟಗೇರಿ ಕೃಷ್ಣಶರ್ಮ ಜತೆ, ಪಠ್ಯ ಪುಸ್ತಕಮಾಲೆ

ಕುಮುದೇಂದು ರಾಮಾಯಣ (ಸಂ) ೧೯೩೬ (ಪೂರ್ವಭಾಗ, ಸಂಧಿ ೧ ರಿಂದ ೮)

ಚಿನ್ಮಯ ಚಿಂತಾಮಣಿ (ಸಂ) ಆ. ನೇ. ಉಪಾಧ್ಯೆ ಜತೆ,

ಜಿನವಿಜಯ ಗ್ರಂಥಮಾಲೆ, ಬೆಳಗಾವಿ, ೧೯೩೦

ಜಿನವಿಜಯ ಪತ್ರಿಕೆ ಸಂಪಾದಕರು

ಜ್ಞಾನಭಾಸ್ಕರ ಚರಿತೆ, (ಸಂ) ಆ.ನೇ. ಉಪಾಧ್ಯೆ ಜತೆ, ೧೯೩೧

ತೋರಣ (ಸಂ) ಪಠ್ಯಪುಸ್ತಕ ಮಾಲೆ ಗ್ರಂಥ, ಡಿ. ಎಸ್. ಕರ್ಕಿ ಮತ್ತು ಎಸ್. ಡಿ. ಇಂಚಲ ಜತೆ

ನಿಂಬ ಸಾಮಂತ ಚರಿತೆ (ಸಂ) ಅಪ್ರಕಟಿತ ಹಸ್ತ ಪ್ರತಿ

ಪೂರ್ವ ಪುರಾಣ (ಸಂ) ೧೯೪೨

ಭರತೇಶ ವೈಭವ, ಕೆಲವು ಪದ್ಯಗಳನ್ನು ಮರಾಠಿಗೆ ಅನುವಾದಿಸಿದ್ದು

ಮಹಾದೇವಿಯಕ್ಕ (ಜೀವನ ಚರಿತ್ರೆ) ೧೯೩೮

ರಟ್ಟರ ಕಾವ್ಯ ಗುಚ್ಛವು (ಸಂ) ೧೯೨೭

ರತ್ನಾವಳಿ-ನಾಗಾನಂದ ನಾಟಕಗಳು (ಅನುವಾದ)

ಲೀಲಾವತಿ ಪ್ರಬಂಧಂ (ಸಂ) ೧೯೪೬ (೯-೧೦ನೆಯ ಆಶ್ವಾಸ)

ವಾಗ್ಭೂಷಣ ಪತ್ರಿಕೆಯ ಸಂಪಾದಕರು

ಸರಸ್ವತಿ (ಕಾದಂಬರಿ) ೧೯೩೦, ಬೆಳಗಾವಿಯ ಜಿನವಿಜಯ ಗ್ರಂಥಮಾಲೆ

ಸೂರಿಸಿಂಹ ಮಹಾರಾಜ (ಮರಾಠಿಯಿಂದ ಅನುವಾದ).

ಹರಿಹರದೇವ (ಸಂ) ೧೯೩೭ ಕೊಲ್ಹಾಪುರ; ದ್ವಿ. ಮು. ೧೯೭೯ ಬೆಂಗಳೂರು

ಇಂಗ್ಲಿಷ್ ಗ್ರಂಥಗಳು:

Some Notes on Shri Mahalakshmi Temple, Kolhapur 1929

Inscriptions in Northern Karnataka and the Kolhapur State, 1939.

೪

'ದುರ್ಗಾಸ್ತಮಾನ' : ಒಂದು ಸಮೀಕ್ಷೆ

ಚಾರಿತ್ರಿಕ ಕಾದಂಬರಿ ಎನಿಸಿಕೊಂಡ ಕೃತಿ ಗತಿಸಿದ ಘಟನಾವಳಿಗಳ ಇಲ್ಲವೆ ನಿರ್ದಿಷ್ಟ ಕಾಲ ಗರ್ಭದ ಬದುಕಿನ ಕಲಾತ್ಮಕ ಕೇಂದ್ರೀಕರಣ ಎಂಬ ಭಾವನೆ ಮೂಡಿಸುತ್ತದೆ. ಇಂಥ ಕಾದಂಬರಿ ನಿರ್ದಿಷ್ಟ ವ್ಯಕ್ತಿಗೆ ಸಂಬಂಧಿಸಿದಂತೆ ಘಟನಾವಳಿಗಳನ್ನು ಒಳಗೊಂಡಿದ್ದು ಆತನ ಸುತ್ತ ನಾಟಕೀಯವಾದ ಇಲ್ಲವೆ ಕಲಾತ್ಮಕ ಮೆರುಗಿನ ಸುಂದರ ಚಿತ್ರಣ ಆವರಿಸಿರುತ್ತದೆ. ಈ ರೀತಿ ರೂಪುಗೊಂಡ ಕಾದಂಬರಿ ವಾಸ್ತವತೆಗೂ ಮಿಗಿಲಾದ ಸೊಬಗುಕೊಡಬಹುದು. ಅದರ ಜೊತೆಯಲ್ಲಿಯೇ ಅನೇಕ ರೀತಿಯ ವಿಸ್ಮಯಗಳನ್ನು ಹುಟ್ಟಿಸಬಹುದು ಅಥವಾ ಪಾತ್ರಗಳು ಅಂದಿನ ವರ್ತಮಾನದ ಚಿತ್ರಣದೊಂದಿಗೆ ಸೂಕ್ತರೀತಿಯಲ್ಲಿ ಮಿಳಿತವಾಗಿದ್ದು ಪಾತ್ರ ಮತ್ತು ಕಾಲ - ಈ ಎರಡರಲ್ಲಿ ಯಾವುದು ವಾಸ್ತವ ಎಂಬ ಅನುಮಾನಕ್ಕೆ ಆಸ್ಪದ ಕೊಡದಂಥ ಸಾಹಿತ್ಯದ ದೃಷ್ಟಿಕೋನವನ್ನು ಒಳಗೊಂಡಿರಬಹುದು. ಈ ಹಿನ್ನೆಲೆಯಲ್ಲಿ ರೂಪಪಡೆದ ಕಾದಂಬರಿಯನ್ನೇ ನಾವು ಸಾಹಿತ್ಯ ವಿಮರ್ಶೆಯಲ್ಲಿ 'ನೈಜ ಐತಿಹಾಸಿಕ' ಎಂದು ಕರೆದಿರುವುದು.

ಚಾರಿತ್ರಿಕ ಕಾದಂಬರಿಗಳ ರಚನೆಗೆ ತೊಡಗುವ ಕಾದಂಬರಿಕಾರ ತುಂಬ ಜವಾಬ್ದಾರಿಗಳನ್ನು ಹೊಂದಿರಬೇಕಾಗುತ್ತದೆ. ಆ ನಿಟ್ಟಿನಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಯಾವುದೇ ರೀತಿಯ ಆವೇಶ ಅಥವಾ ಉದ್ವೇಗಕ್ಕೆ ಒಳಗಾಗದಂತೆ ಚಾರಿತ್ರಿಕ ಸತ್ಯಗಳಿಗೆ ಕಲಾತ್ಮಕ ರೂಪವನ್ನು ಕೊಡಬೇಕಾಗುತ್ತದೆ. ಅಂಥ ಕಲಾತ್ಮಕತೆಯನ್ನು ಪಡೆಯಬೇಕಾದರೆ ಕಾದಂಬರಿಕಾರ ಸೃಜನಶೀಲತೆಯನ್ನು ಹೊಂದಿರಬೇಕು, ಜೊತೆಗೆ ಆಳವಾದ ಅನುಭವವನ್ನು ಪಡೆದಿರಬೇಕು. ವ್ಯಕ್ತಿ, ಸಮಾಜ, ಚರಿತ್ರೆ, ಧರ್ಮ, ಸಂಸ್ಕೃತಿ, ಸಾಹಿತ್ಯ - ಹೀಗೆ ಬದುಕಿನ ಎಲ್ಲ ಸ್ತರಗಳನ್ನು ಆಯಾಕಾಲದ - ಪರಿಸರ ವ್ಯಾಪ್ತಿಯಲ್ಲಿಟ್ಟು ಕಲಾತ್ಮಕ ಚೌಕಟ್ಟಿನಲ್ಲಿ ಅವನ್ನು ಅಭಿವ್ಯಕ್ತಿಗೊಳಿಸಬೇಕು. ಸೃಜನಶೀಲತೆ ಮತ್ತು ಚಾರಿತ್ರಕ ಪ್ರಜ್ಞೆ - ಇವೆರಡರ ಅರಿವು ಮತ್ತು ಅನುಭವ ಯಾರಿಗೆ ಆಳವಾಗಿರುತ್ತದೋ ಅಂಥವರು ಬರೆದ ಕೃತಿ, ನಾನು ಮೊದಲೇ ತಿಳಿಸಿದಂತೆ ಐತಿಹಾಸಿಕ ಸಂಗತಿಗಳಿಗೆ

ಹೆಚ್ಚು ಸಮೀಪವಾಗಿರುತ್ತದೆ. ಇಂಥ ಸಮತೋಲನವನ್ನು ಕಾಯ್ದುಕೊಂಡು ಬಂದ ಕೆಲವೇ ಮಂದಿ ಪ್ರತಿಭಾವಂತರಲ್ಲಿ ತರಾಸು ಗಣ್ಯರು.

ಕನ್ನಡದ ಶ್ರೇಷ್ಠ ಕಾದಂಬರಿಕಾರರಾದ ತರಾಸು ಕನ್ನಡಿಗರಲ್ಲಿ ವಾಚನಾಭಿರುಚಿಯನ್ನು ಹೆಚ್ಚಿಸಿದ ಅತ್ಯಂತ ಜನಪ್ರಿಯ ಸಾಹಿತಿ. ಕನ್ನಡದ ಪ್ರಗತಿಶೀಲ ಚಳುವಳಿಯ ಪ್ರಮುಖರಲ್ಲಿ ಒಬ್ಬರು. ಕರ್ನಾಟಕ ಏಕೀಕರಣದ ಚಳುವಳಿಯಲ್ಲಿ ಭಾಗವಹಿಸಿದ ಕನ್ನಡದ ಕಟ್ಟಾಳು. ಅನಕೃ ಅವರ ಬಲಭುಜವಾಗಿ ಶ್ರಮಿಸಿದವರು. ಹೊಸಗನ್ನಡ ಸಾಹಿತ್ಯದಲ್ಲಿ ಅನಕೃ ಮತ್ತು ತರಾಸು ಅಚ್ಚಳಿಯದೆ ಉಳಿಯುವ ಅವಳಿ ಹೆಸರುಗಳು. ಸಾರ್ವಜನಿಕ ರಂಗದ ವ್ಯಾಪಕ ಅನುಭವ ಗಳಿಸಿಕೊಂಡಿದ್ದ ತರಾಸು ೧೯೫೦ರಿಂದಲೇ ಕಾದಂಬರಿ ರಚನೆಗೆ ತೊಡಗಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಜೀವನದ ಅಂತಸ್ಸತ್ವವನ್ನು ಹೆಚ್ಚಿಸಿಕೊಂಡರು. ಬರಹವನ್ನೇ ಬದುಕನ್ನಾಗಿಸಿಕೊಂಡಿದ್ದ ತರಾಸು ಸಾಹಿತ್ಯವನ್ನೇ ಜೀವನಧರ್ಮವನ್ನಾಗಿ ಸ್ವೀಕರಿಸಿದರು. ಚಲನಚಿತ್ರ ಕ್ಷೇತ್ರದಲ್ಲೂ ಹೊಸ ಆಯಾಮವನ್ನು ತಂದುಕೊಟ್ಟ ತರಾಸು ಚಾರಿತ್ರಿಕ ಕಾದಂಬರಿಯ ಬರವಣಿಗೆಯಲ್ಲಿ ಎತ್ತಿದ ಕೈ. ಚಾರಿತ್ರಿಕ ಕಾದಂಬರಿಗಳನ್ನು ಬರೆಯುವಲ್ಲಿ ಅವರು ಸಾಕಷ್ಟು ಪೂರಕ ಸಾಮಗ್ರಿಯನ್ನು ಸಂಗ್ರಹಿಸುತ್ತಿದ್ದರು. ಈ ಬಗೆಯ ಅಧ್ಯಯನ ಶೀಲ ಪ್ರವೃತ್ತಿಯುಳ್ಳ ಸೃಜನಶೀಲ ಲೇಖಕರು ನಮ್ಮಲ್ಲಿ ಅಪರೂಪ. ಶಕ್ತಿಯುತ ರಮಣೀಯ ಶೈಲಿಯ ಮೂಲಕ ಓದುಗರನ್ನು ಮಂತ್ರ ಮುಗ್ಧರನ್ನಾಗಿಸುವಂಥ ಅತ್ಯುತ್ತಮವಾದ ಮತ್ತು ರೋಮಾಂಚಕ ಶೈಲಿಯ ಚಾರಿತ್ರಿಕ ಕಾದಂಬರಿಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ ಕೀರ್ತಿ ತರಾಸುರವರದು. ಚಿತ್ರದುರ್ಗದ ಪ್ರಾದೇಶಿಕ ವಿವರಗಳನ್ನು ಗುಡ್ಡಗಳನ್ನು ಪಾಳೆಲಗಳನ್ನು ಕಾದಂಬರಿ ಮಾಧ್ಯಮದ ಮೂಲಕ, ಗತಕಾಲದ ಚಿತ್ರಣವನ್ನು ಕಣ್ಣಿಗೆ ಕಟ್ಟುವಂತೆ ಅತ್ಯಂತ ಸಹಜವಾಗಿ ಕಲಾತ್ಮಕಗೊಳಿಸುವಲ್ಲಿ ತರಾಸು ಸಿದ್ಧಹಸ್ತರು. ಕಂಬನಿಯ ಕುಯಿಲು, ತಿರುಗುಬಾಣ, ರಕ್ತರಾತ್ರಿ, ವಿಜಯೋತ್ಸವ, ಹೊಸಹಗಲು, ಹಂಸಗೀತೆ - ಈ ಮಾಲೆಗೆ ಸೇರಿದ ಕಾದಂಬರಿಗಳಲ್ಲೆಲ್ಲ 'ದುರ್ಗಾಸ್ತಮಾನ' ಮುಕುಟ ಪ್ರಾಯವಾದ ಕೃತಿ. ಇದು ದುರ್ಗದ ರಕ್ಷಣೆಗೆ ನಿಂತ ವೀರರ ಶೌರ್ಯಸಾಹಸದ ಕಥೆಗೆ ಜೀವಕಳೆ ತುಂಬಿದ ಅಮರಕೃತಿ.

ಆರುನೂರ ತೊಂಬತ್ತೆಂಟು ಪುಟಗಳಷ್ಟು ವ್ಯಾಪಿಸಿರುವ ಈ ಕಾದಂಬರಿಯ ನಾಯಕ ಜನಮನದಲ್ಲಿ ಚಿರಸ್ಥಾಯಿಯಾಗಿರುವ ಮದಕರಿನಾಯಕ. ಚಿತ್ರದುರ್ಗವನ್ನು ಆಳಿದ ನಾಯಕ ವಂಶದಲ್ಲಿ ಚಿಕ್ಕಮದಕರಿನಾಯಕ ಕೊನೆಯ ರಾಜ. ಈ ವಂಶದಲ್ಲಿ ಎಷ್ಟೋ ಮದಕರಿನಾಯಕರು ರಾಜ್ಯಭಾರಮಾಡಿ ಅಸ್ತಂಗತರಾಗಿದ್ದರೂ ಚಿತ್ರದುರ್ಗದ ಜನಮನ ಹಂಬಲಿಸಿ ಕರೆಯುವುದು - ನೆನೆಯುವುದು ಈ ವಂಶದ ಕೊನೆಯ ಮದಕರಿನಾಯಕನನ್ನು. ಆತನ ಬದುಕು, ವ್ಯಕ್ತಿತ್ವ ಯುದ್ಧಸಾಹಸ - ಈ ಬಗೆಗೆ ಹರಡಿರುವ ಕತೆಗಳು ಈ ರೀತಿಯ ನೆನಪಿಗೆ ಕಾರಣವಾಗಿರಬಹುದು. "ಚಿತ್ರದುರ್ಗದ ಜನರಿಗೆ ಚಿತ್ರದುರ್ಗ ಎಂದರೆ ಒಂದು ಊರಲ್ಲ, ಕೋಟೆಯಲ್ಲ, ಬೆಟ್ಟವಲ್ಲ; ನಮ್ಮ ಕರುಳಿಗೆ ಹೊಂದಿಕೊಂಡು ಬೆಳೆದ ಜೀವಂತ ವಸ್ತು. ಮದಕರಿನಾಯಕನೆಂದರೂ ಅಷ್ಟೆ - ಇತಿಹಾಸದಲ್ಲಿ ಇದ್ದುಹೋದ ಒಬ್ಬ ಅರಸನಲ್ಲ, ತಮ್ಮ ಜೀವಂತ ಆಪ್ತನೆಂಬ ಆ ಭಾವನೆ ಹೇಗೊ ಹಾಗೆಯೇ 'ಚಿತ್ರದುರ್ಗ' 'ಮದಕರಿನಾಯಕ' ಎನ್ನುವುದು ಬೇರೆ ಬೇರೆಯಲ್ಲ ಒಂದೇ ಎಂಬ ಅವಿನಾಭಾವ; ದುರ್ಗ ಎಂದರೆ ಮದಕರಿ, ಮದಕರಿ ಎಂದರೆ ದುರ್ಗ. ನಾಯಕ ಜನಾಂಗಕ್ಕಷ್ಟೇ ಅಲ್ಲ - ದುರ್ಗದ ನೀರು ಕುಡಿದು ಆ ಮಣ್ಣಿನಲ್ಲಿ ಹುಟ್ಟಿದವರೆಲ್ಲರಿಗೂ ಆ ಬಗ್ಗೆ ಮಾತನಾಡುವಾಗ ಹೇಳುವುದು

'ನಮ್ಮ ಚಿತ್ರದುರ್ಗ', 'ನಮ್ಮ ಮದಕರಿನಾಯಕ'. ಆ ಎರಡರ ನಡುವಿನಕೊಂಡಿ 'ನಾವು' ಎಂಬ ಭಾವನೆ. ಎಲ್ಲ ಊರಿನ ಜನಕ್ಕೂ ತಮ್ಮ ಊರು, ತಮ್ಮ ಸ್ಥಳವನ್ನಾಳಿದ ದೊರೆಯ ಬಗೆಗೆ ಈ ಭಾವನೆ ಇರುತ್ತದೆಯೋ ಇಲ್ಲವೊ ನಾನರಿಯೆ. ಆದರೆ ಚಿತ್ರದುರ್ಗದ ಮಟ್ಟಿಗಂತು ಇದು ಎಲ್ಲರಿಗೂ ಅನ್ವಯಿಸುವ ಮಾತು". ಕಾದಂಬರಿಯ ಮುನ್ನುಡಿಯಲ್ಲಿ ಕಾದಂಬರಿಕಾರರು ಹೇಳಿರುವ ಈ ಮಾತುಗಳಲ್ಲಿರುವ ಮಣ್ಣಿನ ವಾಸನೆ, ನಾಡಪ್ರೇಮ ಈ ಕೃತಿಯುದ್ದಕ್ಕೂ ಹಸಿರಾಗಿಯೇ ಉಸಿರಾಡುತ್ತದೆ.

ಸಂತಾನವಿಲ್ಲದ ಕಸ್ತೂರಿರಂಗಪ್ಪನಾಯಕನ ಮರಣಾನಂತರ 'ಓಬವ್ವನಾಗತಿಯ ಕನಸಿನ ಪ್ರಕಾರ ದೂರದ ಸಂಬಂಧಿ ಹನ್ನೆರಡು ವರ್ಷದ ಬಾಲಕ ಮದಕರಿನಾಯಕನನ್ನು ದೊರೆಯನ್ನಾಗಿ ಮಾಡುತ್ತಾರೆ. ಆತನ ಮೆರವಣಿಗೆ, ಮದುವೆ ಮೊದಲಾದುವೆಲ್ಲ ಅರಮನೆಯ ಅಂತಸ್ತಿಗೆ ತಕ್ಕಂತೆ ನಡೆಯುತ್ತವೆ. ಈ ಸಂಗತಿಗಳನ್ನು ಕಾದಂಬರಿ ತುಂಬ ವೈಭವದಿಂದಲೇ ವರ್ಣಿಸುತ್ತದೆ. ಬ್ರಿಟಿಷರು ಮತ್ತು ಪೋರ್ಚುಗೀಸರು ಭಾರತೀಯ ರಾಜರುಗಳ ತಿಕ್ಕಾಟವನ್ನು ನೋಡಿ ಒಳಗೊಳಗೇ ಸಂತೋಷಿಸುತ್ತಿದ್ದ ಕಾಲ ಅದಾಗಿತ್ತು. ದಕ್ಷಿಣದ ಮರಾಠರು, ಹೈದರಾಬಾದು ನಿಜಾಮ, ಹೈದರಾಲಿ ಮೊದಲಾದ ಪ್ರಬಲರ ಎದುರು ನಮ್ಮ ನಾಡಿನ ಬಹುತೇಕ ಪಾಳೆಯಗಾರರು ನಿರಂತರವಾಗಿ ಹೋರಾಡಿ ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳಲು ಸತತ ಪ್ರಯತ್ನಮಾಡುತ್ತಿದ್ದ ಸಂಧಿಗ್ಧ ಪರಿಸ್ಥಿತಿಯಲ್ಲಿ, ಸಂಕ್ರಮಣ ಕಾಲದಲ್ಲಿ ಪಟ್ಟಕ್ಕೆ ಬಂದ ಮದಕರಿನಾಯಕನನ್ನು ಸಾಮಾನ್ಯ ಬಾಲಕನೆಂದು ತಾತ್ಸಾರತೋರಿ ದುರ್ಗದ ಮೇಲೆ ಅನೇಕ ಶತ್ರುಗಳ ಹದ್ದಿನಕಣ್ಣು ಬಿದ್ದಿತ್ತು.

ಇಂಥ ಸಂದರ್ಭದಲ್ಲಿ ಗಡಿಯ ಚರಾಯಿಯಲ್ಲಿ ಮೇಯುತ್ತಿದ್ದ ಹಸುಕರುಗಳನ್ನು ಕದ್ದ ರಾಯದುರ್ಗದ ಜನ "ದುರ್ಗಕ್ಕೀಗ ಗಂಡಸರ ದಿಕ್ಕಿಲ್ಲ. ಪಟ್ಟದ ಮೇಲೆ ಚೋಟುದ್ದ ಹುಡುಗ. ಆಡಳಿತ ಮಾಡೋಳು ಮುದುಕಿ ನಿಮ್ಮ ಕೈಲೇನಾದೀತು" ಎಂಬ ಮಾತುಗಳನ್ನಾಡಿದರು. "ನಮ್ಮ ಹಸು ಕದ್ದವರನ್ನು ಎಳೆದುತಂದು ನಮ್ಮ ಅರಮನೆಯ ಗೋದಲಿಯಲ್ಲಿ ಕಟ್ಟದಿದ್ದರೆ ನಾವು ಗಂಡುಗಲಿ ಮದಕರಿನಾಯಕರ ಮಡದಿಯಲ್ಲ" ಎಂದು ಓಬವ್ವನಾಗತಿ ಪ್ರತಿಜ್ಞೆಗೈದು ಅದರಂತೆ ಈಡೇರಿಸುತ್ತಾಳೆ. ವೃದ್ಧ 'ಓಬವ್ವನಾಗತಿಯ ರಣಸಾಹಸ ಚಿತ್ರದುರ್ಗದ ಯುವನಾಯಕರ ಕೀರ್ತಿ ಪತಾಕೆಯನ್ನು ಹಿಡಿದೆತ್ತಿ ಸಾರ್ಥಕಪಡಿಸಿಕೊಂಡ ಧೀರೋದಾತ್ತ ಚಿತ್ರಣವನ್ನು ಈ ಕಾದಂಬರಿ ವರ್ಣಿಸಿರುವ ರೀತಿ ಅಮೋಘವಾದುದು.

ಇಲ್ಲಿಂದ ಆರಂಭವಾಗುವ ಮದಕರಿ ನಾಯಕನ ಆವೇಶ - ಆಕ್ರೋಶ - ರಾಜಕೀಯ ಜಾಗೃತ ಪ್ರಜ್ಞೆ ವಿಶಾಲ ಹರವನ್ನು ಪಡೆಯುತ್ತ ಸದಾ ಸ್ಫೋಟಿಸುತ್ತಿರುತ್ತದೆ. 'ಓಬವ್ವನಾಗತಿ ಮದಕರಿನಾಯಕನಿಗೆ ಪ್ರತಿ ಹಂತದಲ್ಲೂ ದುರ್ಗದ ಒಳಿತಿಗಾಗಿ ಕೊಡುವ ಸೂಕ್ತ ಮಾರ್ಗದರ್ಶನ, ಧೈರ್ಯತುಂಬುವಿಕೆ, ಪ್ರೀತಿವಾತ್ಸಲ್ಯ ಇವೆಲ್ಲ ಅತನ ಸಮರ್ಥ ರಾಜಕಾರಣತ್ವಕ್ಕೆ ಭದ್ರ ಬುನಾದಿಯಾಗುತ್ತವೆ, ಆದರ್ಶವಾಗುತ್ತವೆ, ಹಿರಿಯರ ಮಾರ್ಗದರ್ಶನದಲ್ಲಿ ಹರಪನಹಳ್ಳಿ, ರಾಯದುರ್ಗ, ಸವಣೂರುಗಳನ್ನು ಯುದ್ಧದಲ್ಲಿ ಸೋಲಿಸಿ ಜಯಗಳಿಸಿಕೊಂಡು ಬಂದ ಮದಕರಿಯ ವಿಜಯದ ಸುದ್ದಿ ದುರ್ಗದ ದ್ರೋಹಿಗಳ ಕಿವಿಯನ್ನು ಹೊಕ್ಕು ಕಣ್ಣು ಕೆಂಪಗಾಯಿತು. ಕಾಲದಿಂದ ಕಾಲಕ್ಕೆ ಈ ವಿಜಯದ ಸುದ್ದಿ ವ್ಯಾಪಕವಾಗಿ ಹರಡಿ, ತನಗಿಂತ ಬಲಿಷ್ಠರಿಲ್ಲ ಎಂದು ಬೀಗುತ್ತಿದ್ದ

ಹೈದರಾಲಿಯ ಕಿವಿಗೂ ಬಿತ್ತು. ಆತ ಮೊದಲು ದುರ್ಗದ ಸ್ನೇಹವನ್ನು ಬಯಸಿದ. ಧಾರವಾಡ, ಬಂಕಾಪುರ, ಸವಣೂರುಗಳ ಯುದ್ಧ ಸಂದರ್ಭದಲ್ಲಿ ಹೈದರಾಲಿಯ ರಾಜ್ಯದಾಹ - ರಕ್ತದ ಹಸಿವು ಎಷ್ಟು ದಾರುಣ ಎಂಬುದನ್ನು ಮದಕರಿನಾಯಕ ಚನ್ನಾಗಿ ಅರಿತು ಅದಕ್ಕೆ ಸರಿಯಾದ ಪಾಠ ಕಲೆಸುತ್ತ ಬಂದ.

"ಹೈದರಾಲಿಯ ಬಿರುಗಾಳಿಯ ದಾಳಿಯನ್ನು ಎದುರಿಸಲಾಗದೆ ತಮ್ಮ ಸರ್ವಸ್ವವನ್ನು ಅರ್ಪಿಸಿ ತಮ್ಮ ಪ್ರಾಣರಕ್ಷಣೆ ಮಾಡಿಕೊಳ್ಳುತ್ತಿದ್ದ ಪಾಳೆಯಗಾರರಿದ್ದಾಗ ತಮ್ಮ ಅಪ್ರತಿಮ ಶೌರ್ಯ ಸಾಹಸಗಳಿಂದ ಜನತೆಯ ಅಭಿಮಾನ ಕೋಟೆಯ ರಕ್ಷಾ ಬಲದಿಂದ ಎಂದೂ ಸೋತು ಶರಣಾಗದೆ ಸುಮಾರು ಎರಡು ವರ್ಷಗಳ ಕಾಲ ಹೈದರಾಲಿಗೆ ಸವಾಲಾಗಿ ನಿಂತು ಸೆಣಸಿದ ಏಕೈಕ ಗಂಡು, ಪಾಳೆಯಗಾರ ಚಿತ್ರದುರ್ಗದ ಮದಕರಿ ನಾಯಕ" (ಪುಟ. ೧). ನಂತರ ಹೈದರಾಲಿಯ ಕುಟಿಲ ತಂತ್ರಗಳಿಂದ ಚಿತ್ರದುರ್ಗದ ಅಧಿಕಾರಿಗಳನೇಕರು ದುರ್ಗದ ನಾಯಕರ ಪಕ್ಷವನ್ನು ಬಿಟ್ಟು ಹೈದರಾಲಿಯ ಪರ ನಿಲ್ಲುತ್ತಾರೆ, ಅನ್ನ ಹಾಕಿದ ಮನೆಗೆ ಕನ್ನ ಹಾಕುತ್ತಾರೆ. ಚಿತ್ರದುರ್ಗದ ಕೋಟೆ ಅನಿವಾರ್ಯವಾಗಿ ಹೈದರಾಲಿಯ ವಶವಾಗಿ ತನ್ನ ಹೆಸರಿಗೆ ತಕ್ಕ ವೀರಮರಣವನ್ನು ಹೊಂದುತ್ತಾನೆ. ಇದು ಕಾದಂಬರಿಯ ಕೇಂದ್ರ ಪ್ರಜ್ಞೆ. ಈ ಹಿನ್ನೆಲೆಯಲ್ಲಿ ಕಾದಂಬರಿಗೆ ಇಟ್ಟಿರುವ 'ದುರ್ಗಾಸ್ತಮಾನ' ಎಂಬುದು ಅರ್ಥ ಗರ್ಭಿತವಾಗಿದೆ.

೫

ಜನ್ನನ ಅನನ್ಯತೆಯ ವಿನ್ಯಾಸ

ಜನ್ನಕವಿಯ ಸ್ರಷ್ಟಾರತೆ, ದ್ರಷ್ಟಾರತೆ ಮತ್ತು ವಕ್ತಾರತೆಯ ನಿರಿಗೆಗಳನ್ನು ಗುರುತಿಸುವುದು ನನ್ನ ಆಶಯ ಭಾಷಣದ ಉದ್ದೇಶ.

ಯಶೋಧರ ಚರಿತೆಯ ಕಥೆ ಭಾರತೀಯ ಕಥಾ ಸಾಹಿತ್ಯದಲ್ಲಿ ಚಿರಪರಿಚಿತವಾಗಿರುವಂತೆ ಚಿರನೂತನವೂ ಆಗಿದೆ. ಸಾವಿರಾರು ವರ್ಷಗಳ ಹಾಸು ಇರುವ ಈ ವಸ್ತು, ಆಗಾಗ ಮರು ಹುಟ್ಟಿನಿಂದ ಮತ್ತೂ ಮೊನಚುಗೊಳ್ಳುತ್ತ, ತನ್ನ ಪ್ರಸ್ತುತತೆಯನ್ನು ಹೆಚ್ಚಿಸಿಕೊಳ್ಳುತ್ತಿದೆ. ಜನಪದರ ವಾಗ್ರೂಢಿಯಲ್ಲಿ ಪ್ರಚಲಿತವಿದ್ದ ಕಥೆಯನ್ನು ಮೊದಲು ಶಿಷ್ಟಪದದ ಚೌಕಟ್ಟಿಗೆ ಇಳಿಸಿದ್ದು ಗುಣಾಢ್ಯನ ಪ್ರಾಕೃತ ಪ್ರತಿಭೆ. ಅಲ್ಲಿಂದ ದಾಂಗುಡಿಯಿಡುತ್ತ ಇದು ಸ್ವತಂತ್ರ ಕೃತಿಯಾಗಿ ಪಲ್ಲವಿಸಿದ್ದು ಸೋಮದೇವಸೂರಿಯ ಸಂಸ್ಕೃತ ಯಶಸ್ತಿಲಕ ಚಂಪೂವಿನಲ್ಲಿ (ಕ್ರಿ.ಶ. ೯೫೯-೬೦) ಮತ್ತು ಪುಷ್ಪದಂತ ಕವಿಯ ಪ್ರಾಕೃತ 'ಜಸಹರ ಚರಿಉ' ಕಾವ್ಯದಲ್ಲಿ (೯೬೮). ಅನಂತರ ಅದು ತನ್ನ ಸ್ಥಿರ ಶೀರ್ಷಿಕೆಯನ್ನು ಪಡೆದದ್ದು ವಾದಿರಾಜ ಸೂರಿಯ ಸಂಸ್ಕೃತ ಯಶೋಧರ ಚರಿತೆಯಲ್ಲಿ (೧೦೨೫). ಈ ಕಾವ್ಯ ತನ್ನ ಶಿಖರ ಸ್ಥಿತಿಯನ್ನು ಮುಟ್ಟಿದ್ದು ಜನ್ನನ ಕನ್ನಡ ಯಶೋಧರ ಚರಿತೆಯಲ್ಲಿ (೧೨೦೯). ತನಗಿಂತ ಮೊದಲು ಈ ಕಥೆಯನ್ನು ಹೇಳಿದ ಕವಿ-ಕೃತಿಗಳ ತಿಳಿವಳಿಕೆ ತನಗಿರುವುದನ್ನು ಜನ್ನ ಮರೆಮಾಚಿಲ್ಲ:

> ಕ್ಷಿತಿಯೊಳ್ ಸಂಸ್ಕೃತದಿಂ ಪ್ರಾ
> ಕೃತದಿಂ ಕನ್ನಡದಿನಾದ್ಯರಾರ್ ಈ ಕೃತಿಯಂ
> ಕೃತಿ ಮಾಡಿದರವರ್ಗಳ ಸ
> ನ್ಮತಿ ಕೈಗುಡುಗೆಮಗೆ ಸರಸಪದ ಪದ್ಧತಿಯೊಳ್॥

ತನಗಿಂತ ಹಿಂದೆ ಕನ್ನಡದಲ್ಲಿ ಈ ಕಥೆ ಬಂದಿದೆಯೆಂದು ಜನ್ನನು ನಿಚ್ಚಳವಾಗಿ ಹೇಳಿದ್ದಾನೆ. ಈತನಿಗಿಂತ ಮೊದಲು ಯಶೋಧರನ ಚರಿತೆಯನ್ನು ಆಧರಿಸಿ ಕನ್ನಡದಲ್ಲಿ ಯಾರು ಕಾವ್ಯ ರಚಿಸಿದ್ದರೆಂಬುದು ಅಜ್ಞಾತವಾಗಿದೆ. ಅಂತೂ ಹಿಂದಿನ,

ಸೃಷ್ಟಿ ಸಾಮರ್ಥ್ಯದ ಹೆಗಲೇರಿ ನಿಂತ ಜನ್ನ ಕವಿ ಯಶೋಧರ ಚರಿತೆಯನ್ನೇ ಏಕೆ ಆಯ್ಕೆ ಮಾಡಿದನೆಂಬುದು ಪರಿಭಾವನಯೋಗ್ಯ ವಿಚಾರ. ರನ್ನ (೯೯೩) ಮತ್ತು ನಾಗಚಂದ್ರ (೧೦೮೦) ಕವಿಗಳ ಹಾಗೆ ಜನ್ನನೂ ಶಾಸನ ಕವಿಯಾಗಿ ಲೇಖಣಿ ಹಿಡಿದವನು; ಮತ್ತು, ಪಂಪ-ರನ್ನ-ಶಾಂತಿನಾಥ ಕವಿಗಳಂತೆ ಕಲಿಯೂ ಕವಿಯೂ ಆಗಿ ಸವ್ಯಸಾಚಿ ಎಂದೆನಿಸಿದವನು: ನಿಂದಿರೆ ದಂಡಾಧೀಶಂ, ಕುಳ್ಳಿರೆ ಮಂತ್ರಿ, ತೊಡಂಕೆ ಕವಿ ಜನಾರ್ದನ ದೇವಂ - ಎಂದು ಸ್ವಪರಿಚಯವಿತ್ತಿದ್ದಾನೆ. ಜನ್ನನ ಸೃಜನ ಶಕ್ತಿಯನ್ನು ಸಮಕಾಲೀನ ರಾಜಸತ್ತೆ ಕೂಡ ಸರಿಯಾಗಿ ಗುರುತಿಸಿ ಕವಿಚಕ್ರವರ್ತಿ ಪ್ರಶಸ್ತಿಯನ್ನು ಕವಿಯ ಮುಡಿಗೇರಿಸಿತ್ತು

> ಕನ್ನರನಾದರದಿಂ ಕುಡೆ
> ಹೊನ್ನಂ ಮನಮೊಸೆದು ತೈಲಪಂ ಕುಡೆ ರನ್ನಂ
> ಮನ್ನಿಸಿ ಬಲ್ಲಾಳಂ ಕುಡೆ
> ಜನ್ನಂ ಕವಿಚಕ್ರವರ್ತಿವೆಸರಂ ಪಡೆದರ್॥

ಪೊನ್ನ, ರನ್ನ, ಜನ್ನ ಮತ್ತು ಈ ಪದ್ಯದಲ್ಲಿ ಹೇಳದಿರುವ ಬ್ರಹ್ಮಶಿವ - ನಾಲ್ವರು ಜೈನಕವಿಗಳು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಕವಿಚಕ್ರವರ್ತಿಯೆಂಬ ಚಕ್ರವರ್ತಿ ಪುರಸ್ಕಾರವನ್ನು ಪಡೆದ ಮಹತ್ವದ ಕವಿಗಳು.

ರವಿಕೀರ್ತಿಕವಿಯು ಬಾದಾಮಿ ಚಾಲುಕ್ಯರ ಪುಲಿಕೇಶಿ ರಾಜನಿಗೆ, ಆದಿಕವಿ ಪಂಪ ವೇಮುಲವಾಡ ಚಾಲುಕ್ಯರ ಇಮ್ಮಡಿ ಅರಿಕೇಸರಿಗೆ, ರನ್ನಕವಿ ಆಹವಮಲ್ಲ ಇಮ್ಮಡಿ ತೈಲಪ ಮತ್ತು ಅವನ ಮಗ ಸತ್ಯಾಶ್ರಯ ಇರಿವ ಬೆಡಂಗನಿಗೆ, ಪೊನ್ನಕವಿ ರಾಷ್ಟ್ರಕೂಟರ ಮುಮ್ಮಡಿ ಕೃಷ್ಣ (ಕನ್ನರ)ನಿಗೆ ಆತ್ಮೀಯರಾಗಿದ್ದರು. ಜನ್ನನು ಹೊಯ್ಸಳರ ಬಲ್ಲಾಳ ಚಕ್ರವರ್ತಿಗೆ ಹತ್ತಿರವಾಗಿದ್ದನು. ಆದರೆ ಪಂಪ ಪೊನ್ನ ರನ್ನರಂತೆ ಜನ್ನನು ತನ್ನ ಆಶ್ರಯದಾತನಾದ ರಾಜನನ್ನು ತಾನು ರಚಿಸಿದ ಕಾವ್ಯಗಳ ಕಥಾನಾಯಕನೊಂದಿಗೆ ಅಭೇದ ಕಲ್ಪಿಸಿ ಸಮೀಕರಿಸಿಲ್ಲವೆಂಬುದನ್ನು ವಿಶೇಷವಾಗಿ ಗಮನಿಸಬೇಕು. ಜನ್ನ ಆರಿಸಿಕೊಂಡ ಕಾವ್ಯ ವಸ್ತುವಿನ ಪ್ರಧಾನ ಪಾತ್ರಗಳೊಂದಿಗೆ ಆಶ್ರಯದಾತ ಪ್ರಭುವನ್ನು ತಗುಳ್ಚಿ ಹೇಳುವುದಕ್ಕೆ ಸಾಧ್ಯವಾಗದ ವಿಚಿತ್ರ ಪರಿಸ್ಥಿತಿಯಿದೆ.

ಜನ್ನನದು ವೈವಿಧ್ಯಮಯ ಜೀವನ. ದಂಡಾಧೀಶನಾಗಿ ಯುದ್ಧಗಳಲ್ಲಿ ಭಾಗವಹಿಸಿದ, ಸಚಿವನಾಗಿ ಆಡಳಿತವನ್ನು ನಿರ್ವಹಿಸಿದ, ಧಾರ್ಮಿಕನಾಗಿ ಬಸದಿಗಳನ್ನು ಕಟ್ಟಿಸಿದ, ಶಾಸನಕಾರನಾಗಿ ನಾಲ್ಕು ಮಹತ್ವದ ಶಾಸನಗಳನ್ನು ರಚಿಸಿದ, ಕವಿಯಾಗಿ ಮೂರು ಕಾವ್ಯಗಳನ್ನು ಬರೆದ. ಪಂಪನ ತಮ್ಮನೂ ತ್ರಿಭಾಷಾ ಕವಿಯೂ ಆದ ಜಿನವಲ್ಲಭನು ವೃಷಭಾಚಲದಲ್ಲಿ ತ್ರಿಭುವನತಿಲಕ ಬಸದಿಯನ್ನೂ, ನಾಗಚಂದ್ರನು ವಿಜಾಪುರದಲ್ಲಿ ಮಲ್ಲಿನಾಥ ಜಿನಾಲಯವನ್ನೂ ನಿರ್ಮಿಸಿದ್ದರು. ಜನ್ನನು ಕೊಲ್ಲಾಪುರ ಶಿಲಾಹಾರರ ಗಂಡರಾದಿತ್ಯ ರಾಜನ ಪನ್ನಾಲದುರ್ಗದಲ್ಲಿ ಅನಂತನಾಥ ಬಸದಿಯನ್ನು ಕಟ್ಟಿಸಿದ್ದಲ್ಲದೆ ದೋರಸಮುದ್ರದ ವಿಜಯ ಪಾರ್ಶ್ವನಾಥ ಬಸದಿಗೆ ಬಾಗಿಲು ಮಾಡಿಸಿದನು. ಈ ಬಹುಮುಖಿ ಕಾರ್ಯ ಸಾಧನೆಗಳಲ್ಲಿ ಜನ್ನನ ಸಿದ್ಧಿ ಕೆನೆ ಕಟ್ಟಿರುವುದು ಕಾವ್ಯ ರಚನೆಯಲ್ಲಿ. ಜನ್ನನ ಹಾಗೆಯೇ ಸೊಗಸಾದ ಶಾಸನ ಮತ್ತು ಕಾವ್ಯವನ್ನು ರಚಿಸಿರುವ ಮಧುರಕವಿ (೧೩೮೫) ತನ್ನ ಧರ್ಮನಾಥ

ಪುರಾಣದಲ್ಲಿ - 'ನೇಮಿ ಜನ್ನಮರಿರ್ವರೆ ಕರ್ಣಾಟಕ ಕೃತಿಗೆ ಸೀಮಾಪುರುಷರ್'- ಎಂದು ಹೇಳಿರುವುದರಲ್ಲಿ, ಪಂಪರನ್ನಾದಿಗಳನ್ನು ಕೈ ಬಿಟ್ಟಿದ್ದರೂ, ಔಚಿತ್ಯಪೂರ್ಣ ವಿಮರ್ಶೆಯೂ ಆಗಿದೆ. ನೇಮಿಚಂದ್ರನ ಅರ್ಧನೇಮಿ ಪುರಾಣವೂ ಜನ್ನನ ಯಶೋಧರ ಚರಿತೆ ಕಾವ್ಯವೂ ಉತ್ಕೃಷ್ಟವಾಗಿವೆ. ಮುಖ್ಯವಾಗಿ ಜನ್ನನ ಅನನ್ಯತೆಯ ನೆಲೆಗಳು ಯಾವುವೆಂಬುದನ್ನು ಗುರುತಿಸುವುದು ನನ್ನ ಪ್ರಯತ್ನ.

ಯಶೋಧರ ಚರಿತೆ ಚಾರಿತ್ರಿಕ ಧ್ವನಿತರಂಗಗಳನ್ನು ನಿನದಿಸುವ, ರಾಜಕೀಯ ದ್ರವಸ್ಥಿತಿಯನ್ನು ಬಿಂಬಿಸುವ ಮಹತ್ವದ ಕಾವ್ಯವೆಂಬುದನ್ನು ಸರಿಯಾಗಿ ಅರಿಯಲು ಜನ್ನನು ಜೀವಿಸಿದ್ದ ಕಾಲದ ತುಮುಲಗಳ ಪರಿಚಯವಿರಬೇಕು. ಹನ್ನೆರಡನೆಯ ಶತಮಾನದ ಉತ್ತರಾರ್ಧ, ಅದರಲ್ಲಿಯೂ ಕಟ್ಟಕಡೆಯ ಎರಡು ದಶಕಗಳು ಜೈನ ಸಮಾಜದ ಪಾಲಿಗೆ ಕರಾಳ ದಿನಗಳು. ಹನ್ನೊಂದನೆಯ ಶತಮಾನದ ಪೂರ್ವಾರ್ಧದಲ್ಲಿಯೂ ಚೋಳರ ಉಪಟಳದಿಂದ ಈಗಿನ ಉತ್ತರ ಕರ್ನಾಟಕ ಭಾಗದ ಜೈನ ಏಳಿಗೆಗೆ ಏಟುಗಳು ಬಿದ್ದುದುಂಟು. ಆಗ ನೂರಾರು ಬಸದಿಗಳು ಸುಟ್ಟು ಕರಿಕಾದುವು, ಧ್ವಂಸವಾದುವು, ಮುಕ್ಕಾದುವು. ಆದರೂ ಚಾಳುಕ್ಯ ಸಾಮ್ರಾಟರಾದ ತ್ರೈಲೋಕ್ಯಮಲ್ಲ ಮತ್ತು ಮಕ್ಕಳು ಜೈನ ಸಮುದಾಯದ ತಲ್ಲಣವನ್ನು ಹೋಗಲಾಡಿಸಿ ರಾಜಾಶ್ರಯದ ಕೊಡೆ ಹಿಡಿದರು.

ಆದರೆ ಇನ್ನೂ ಆರದೆ ಒಳಗೊಳಗೇ ಹೊಗೆಯಾಡುತ್ತಿದ್ದ ಜಾತಿಮಾತ್ಸರ್ಯ ಭಾವನೆಗೆ ಶೈವ ಸಂಪ್ರದಾಯದ ಕೆಲವು ಮತಾಂಧ ಮುಖಂಡರು ಜೀವತುಂಬಿ ನೆತ್ತರೋಕುಳಿಯಾಡಲು ಕರೆಕೊಟ್ಟರು. ಅದುವರೆಗೆ ಚತುಸ್ಸಮಯಿಗಳು ವೇದಿಕೆಗಳಿಂದ, ವಾದ ಪ್ರತಿವಾದಗಳಿಂದ ಸ್ವಮತಧರ್ಮದ ಮೇಲ್ಮೆಯನ್ನು ಸ್ಥಾಪಿಸಿ, ಪರಮತಧರ್ಮಗಳ ಖಂಡನೆ ಮಾಡುತ್ತಿದ್ದರು. ಈಗ ಅದು ವಾಗ್ವಾದಗಳಿಗೆ ನಿಲ್ಲದೆ ಬೀದಿಗಿಳಿದು ಮುಂಗೈ ಜೋರಿನಿಂದ ಸಶಸ್ತ್ರ ಪಡೆ ಸಹಿತ ಕಾಳೆಗಕ್ಕೆ ಹೊರಳಿತು. ಅಳಂದೆಯ ಏಕಾಂತದ ರಾಮಯ್ಯ (೧೧೬೦-೧೨೦೦) ಮತ್ತು ಅವರ ಸಮಕಾಲೀನ ಶೈವ ಮೇಲಾಳುಗಳಾದ ಮಹಾಮಂಡಲೇಶ್ವರ ವಿರುಪರಸ, ಆದಯ್ಯ ಮತ್ತು ಗೊಗ್ಗರಸ (ಗೊಗ್ಗಯ್ಯ) - ಇವರು ಜೈನ ಧರ್ಮ ಮತ್ತು ಜೈನ ಸಮಾಜದ ಮೇಲೆ ಏಕಾಏಕಿ ಆಯುಧ ಪಾಣಿಗಳಾಗಿ ದಾಳಿಗಿಳಿದರು. ಶ್ರಮಣರನ್ನು ಸದೆ ಬಡಿಯುವ ಶರಣರ ಈ ಸಮರ ತೀವ್ರ ಸ್ವರೂಪದಿಂದ ಕಾರ್ಯೋನ್ಮುಖವಾದದ್ದು ೨೫-೪-೧೧೮೪ರಿಂದ ಎಂದು ಪಗರಟಿಗೆ - ೩೦೦ರ ತಾಳಿಕೋಟೆಯ ಶಾಸನದಿಂದ ತಿಳಿದು ಬರುತ್ತದೆ:

ಜಿನಸಮಯವನ ದಹನ ದಾವಾನಳರುಂ
ಮುನಿದರ್ಗ್ಗೆ ಹಾಳಾಹಳರುಂ ವಿಧ್ವಂಸನ ಪ್ರವೀಣರುಂ
ಅನ್ಯಸಮಯಿಗಳ ಬೆನ್ನ ಬಾರನೆತ್ತುವರುಂ
ಸೆಣಸುವರ ನೆತ್ತರ ಮರುಳ್ಗಳಿಂ ಕುಡಿಸುವರುಂ
ಪರಸಮಯ ಘರಟ್ಟರುಂ ನಾಲಗೆಯ ಕೀಳ್ವರುಂ....

ಹೀಗೆ ಕೊಡಲಿ ಕುಡುಗೋಲು ಕತ್ತಿ ಕೊಂತ ಈಟಿಗಳನ್ನು ಹಿಡಿದು ಹೊರಟರು. ಜೈನಧರ್ಮವೆಂಬ ತೋಟವನ್ನು ಸುಡುವ ಕಾಡುಕಿಚ್ಚಾಗಿ, ವಿಧ್ವಂಸನ ಮಾಡುವುದರಲ್ಲಿ ನಿಪುಣರಾಗಿ ದಾಳಿಗಿಳಿದರು. ರಕ್ತವನ್ನು ಕಕ್ಕಿಸಿದರು. ನಾಲಗೆಗಳನ್ನು ಕಿತ್ತರು. ಚರ್ಮ ಸುಲಿದರು. ಅಲ್ಲಿಗೆ ನಿಲ್ಲಲಿಲ್ಲ

ಹಿಂಸೆಯ ರಭಸ. ಎಲ್ಲೆಲ್ಲಿ ಜೈನ ದೇವಾಲಯಗಳು ಇದ್ದುವೊ ಅವನ್ನು ಹೊಸೆದು ಮುಕ್ಕಿ ನೆಲ್ಲ ಸಮಗೊಳಿಸಿದರು:

ಪರಿಯಳಿಗೆ ಅಣಿಲೆವಾಡ ಉಣಕಲ್ಲು ಸಂಪಗಾವಿ
ಅಬ್ಬಲೂರು ಮಾರುಡಿಗೆ ಅಣಂಪೂರು ಕರಹಾಡ
ಕೆಂಬಾವಿ ಬಮ್ಮುಕೂರು ಬಸದಿಗಳಂ ಹೊಸೆದು ಮುಕ್ಕಿ

ಹಾಳುಗೆಡವಿದ್ದನ್ನು ಬಿಜಾಪುರ ಜಿಲ್ಲೆಯ ತಾಳಿಕೋಟೆಯ ವಿರುಪರಸನ ಶೈವಶಾಸನ ನಾಚಿಕೆಪಡದೆ ಅಕೃತ್ಯಗಳ ಪಟ್ಟಿ ಕೊಟ್ಟಿದೆ. ತಾಳಿಕೋಟೆಯಿಂದ ೨೫-೪-೧೧೮೪ರಂದು ಸಿಡಿದ ಮತದ್ವೇಷದ ದಳ್ಳುರಿ ತನ್ನ ಕೆನ್ನಾಲಗೆಯನ್ನು ಊರಿಂದ ಊರಿಗೆ ಚಾಚಿತು. ಏಳು ತಿಂಗಳು ಆರದೆ ಉರಿದ ಬೆಂಕಿ ೫-೧೧-೧೧೮೪ರ ವೇಳೆಗೆ ಅಣ್ಣಿಗೆರೆಯನ್ನು (ಅಣ್ಣೀಗೇರಿ-ಧಾರವಾಡ ನವಲಗುಂದ ತಾಲೂಕು) ತಲಪಿತು. ಅಲ್ಲಿಯ ನಾಯಕ ಗೊಗ್ಗರಸನು ಜೈನರನ್ನು ಬೆನ್ನಟ್ಟಿ ಬೇಟೆಯಾಡಿದ್ದನ್ನು ಅಣ್ಣಿಗೆರೆಯ ಶಾಸನ ವರ್ಣಿಸಿದೆ:

ಜಯಿನಮೃಗ ಬೇಣ್ಟೆಗಾರಂ
ಜಯಿನಾಗಮ ಧೂಮಕೇತು ಜಯಿನಕುಠಾರಂ
ಜಯಿನಫಣಿ ವಯಿನತೇಯಂ
ಜಯಿನಾನ್ತಕನೆನಿಸಿ ನೆಗಳ್ದನೀ ಗೊಗ್ಗರಸಂ॥

ಅಗ್ಗದ ಘಟಾಂತಿಕಿಯೆನಾ
ನುರ್ಗ್ಗಾಗಿರೆಯೊಡೆದು ಕಳೆದು ಜಿನನಂತಾಗಲೆ
ದುರ್ಗ್ಗತಿಯೊಳಿಕ್ಕಿ ಮೆಟ್ಟಿದ
ಗೊಗ್ಗರಸಾಗ್ರಣಿ ಕೊಮಾರ ಆಹವಧೀರಂ॥

ಈ ತೆರನಾಗಿ ಜೈನರೂ ಬಸದಿಗಳೂ ನಾಶವಾದದ್ದಲ್ಲದೆ ಅಳಿದುಳಿದ ನೂರಾರು ಜಿನಾಲಯಗಳು ಶಿವಾಲಯಗಳಾದವು. ಪ್ರಾಣತೆತ್ತವರ ಲೆಕ್ಕವಿಲ್ಲ. ಹೆದರಿದ ಲಕ್ಷಾಂತರ ಜೈನರು, ಬದುಕಲಿರುವ ಒಂದೇ ದಾರಿಯೆಂದು, ವೀರಶೈವರಾಗಿ ಮತಾಂತರಗೊಂಡರು. ಕೆಲವರು ಕೊಲ್ಲಾಪುರದತ್ತ ಪಲಾಯನ ಮಾಡಿ ಅಲ್ಲಿಯ ಶಿಲಾಹಾರರ ನೆರಳಲ್ಲಿ ಉಸಿರಾಡಿದರು. ಇತ್ತ ತೆಂಕಣದ ಕಡೆ ಹೊಯ್ಸಳ ಸಾಮ್ರಾಜ್ಯ ಜೈನರ ರಕ್ಷಾಮಣಿಯಾಗಿ ಅರಳಿತು. ಜನ್ನಕವಿ ಕೊಲ್ಲಾಪುರ ಶಿಲಾಹಾರರ ಗಂಡರಾದಿತ್ಯನ ಆಳ್ವಿಕೆಯ ಉತ್ತರವಲಯ ತೊರೆದು ಈ ಹೊಯ್ಸಳರ ತೆಂಕಣನಾಡಿಗೆ ಸರಿದು ಬಂದದ್ದು ಧಾರ್ಮಿಕವಾಗಿ ಇನ್ನೂ ಬೆಚ್ಚನೆಯ ಗೂಡು ಸೇರಿದಂತಾಯಿತು. ಇನ್ನೂ ಎಷ್ಟೋ ಕುಟುಂಬಗಳು ಹೀಗೆ ಗುಳೆ ಹೋಗಿದ್ದುವು.

ಈ ಚಾರಿತ್ರಿಕ ಹಿನ್ನೆಲೆಯಿಂದ ಜನ್ನಕವಿ ಕಂಡುಕೊಂಡ ಋತು ಸತ್ಯ, ನೀಡಿದ ಸಂದೇಶ ಮನನೀಯವಾಗಿದೆ. ಆತ ಸಂಘರ್ಷದ ಮುಂದುವರಿಕೆಯನ್ನು ಪ್ರತಿಪಾದಿಸದೆ ಅದಕ್ಕೆ ಇತಿಶ್ರೀ ಹಾಡಿದ್ದಾನೆ. ಹೋರಾಟದ, ಜೀವಹಾನಿಯ ಹಾದಿಯನ್ನು ತೊರೆದು ಹೊಂದಾಣಿಕೆಯ ಸಮನ್ವಯವನ್ನು ಸಾಧಿಸಿರುವುದು ಅನುಕರಣೀಯವಾಗಿದೆ. ಕವಿಯ ಆಶಯ ಹರಳುಗೊಂಡಿರುವ ಪದ್ಯವನ್ನು ಈ ಚಾರಿತ್ರಿಕ ಭಿತ್ತಿಯಿಂದ ಮೆಲಕು ಹಾಕಬೇಕು:

ಅಭಯರುಚಿಕುಮಾರಂ ಮಾರಿದತ್ತಂಗೆ ಹಿಂಸಾ
ರಭಸಮತಿಗೆ ಸಯ್ಪಂ ಪೇಳ್ದು ಧರ್ಮಕ್ಕೆ ತಂದೀ
ಶುಭ ಕಥನಮನತ್ಯಾನಂದದಿಂ ಕೇಳ್ವ ಭವ್ಯ
ಪ್ರಭು ಸಭೆಗೆಸೆದಿರ್ಕ್ಕುಂ ಮಂಗಳಂ ಶ್ರೀವಿಲಾಸಂ॥

ಮತೀಯ ಸಂಘರ್ಷದ ಜೀವ ಹಿಂಸೆ ತಾಂಡವವಾಡುತ್ತ ಉಸಿರು ಕಟ್ಟುವ ವಾತಾವರಣದಲ್ಲಿ ಹಿಂಸೆಯ ಮೃತ್ಯುವಿನಿಂದ ಅಹಿಂಸೆಯ ಅಮೃತತ್ವದತ್ತ ಹೆಜ್ಜೆ ಹಾಕುವ ಜೀವಪರ ಕಾವ್ಯ ಯಶೋಧರ ಚರಿತೆ. ಕಾಳಾಮುಖ, ಪಾಶುಪತ, ಲಕುಲೀಶರ ಆಕ್ರಮಣಕಾರಿ ಪ್ರವೃತ್ತಿಯ ಪ್ರತೀಕ ಮಾರಿದತ್ತ. ಅಹಿಂಸೆಯಿಂದಲೇ ಅಭೀತರಾಗುವ ಆತ್ಮಶಕ್ತಿಯ ಉತ್ಥಾನಪಾದ ಕಥಾನಕವಾಗಿಸಿ ಯಶೋಧರ ಚರಿತೆ ಕಾವ್ಯವನ್ನು ಚಾರಿತ್ರಿಕ ಧ್ವನಿಯುಕ್ತವಾಗಿ ಪುನರ್ ನಿರ್ಮಿಸಿರುವುದು ಜನ್ನನ ಸಂಯೋಜನೆ ಮತ್ತು ಸಾಧನೆ.

ಭೌಗೋಳಿಕವಾಗಿ ಭಾರತದ ಉದ್ದಗಲಗಳಲ್ಲಿ ವ್ಯಾಪಕವಾದ ಪ್ರಸಾರಾಧಿಕ್ಯವಿದ್ದ ಸಂಸ್ಕೃತ ಪ್ರಾಕೃತ ಭಾಷೆಗಳಲ್ಲಿ ಪ್ರಚುರವಾಗಿರುವ ಮಹತ್ವದ ಕಥಾನಕವೊಂದನ್ನು, ಆ ಭಾಷೆಗಳು ತಿಳಿಯದ ತನ್ನ ಕನ್ನಡ ಜನರಿಗೆ ಒದಗಿಸುವ ಜನಪರ ಕಾಳಜಿ, ತುಡಿತ ಕೂಡ ಜನ್ನನನ್ನು ಚಿರಸ್ಥಾಯಿಗೊಳಿಸಿದೆ. ಯಶೋಧರ ಚರಿತೆಯ ಕಥಾಶಿಲ್ಪವನ್ನು ಸ್ಥಾನಿಕ ಸಂವೇದನೆಗಳಿಗೆ ಎಟುಕಿಸಲು ಕನ್ನಡ ಭಾಷೆಯ ಬಂಧದಲ್ಲಿ ಕಡೆದು ಮೂಡಿಸುವ ಈ ಪ್ರಯತ್ನದಲ್ಲಿರುವುದು ಸಂಸ್ಕೃತ-ಪ್ರಾಕೃತಗಳಿಂದ ಕನ್ನಡಕ್ಕೆ ಭಾಷಾಂತರಿಸಿರುವದಷ್ಟೇ ಅಲ್ಲ. ಇದರಲ್ಲಿ ಹಳೆಯ ವಸ್ತು-ಕಥೆಯನ್ನು ಹೊಸ ಹುಟ್ಟು ಪಡೆಯುವಂತೆ ಕಡೆಯುವ ಸೃಷ್ಟಿಯ ಸವಾಲೂ ಇದೆ. ವ್ಯಾಪ್ತ ಕಥಾವಸ್ತುವನ್ನು ಆಪ್ತ ವಲಯಕ್ಕೆ ಇಳಿಸಿಕೊಳ್ಳುವಾಗ ಅದಕ್ಕೆ ಇನ್ನಷ್ಟು ಆಳ, ಹರಹು ತರುವ ಉದ್ದೇಶ ಜನ್ನ ಕವಿಗೆ ಇರುವುದರಿಂದ ಸಂಸ್ಕೃತ-ಪ್ರಾಕೃತ ಭಾಷಾ ಪ್ರಭಾವಗಳನ್ನು ಜೀರ್ಣಿಸಿಕೊಂಡು, ಕನ್ನಡದ ದೇಶೀಯ ಕಾಳಜಿಗಳಿಗೆ ಕಸಿ ಮಾಡಿ, ಹೊಸದೊಂದು ಅನುಸಂಧಾನವನ್ನು ಕಲ್ಪಿಸಿಕೊಂಡಿದ್ದಾನೆ.

ಸಾಹಿತ್ಯಕ ಅಭಿವ್ಯಕ್ತಿಗೆ ಕನ್ನಡ ಭಾಷೆಯ ಆಯ್ಕೆಯ ಮಹತ್ವವನ್ನೂ ಮನಗಾಣಬೇಕು. ಸಂಸ್ಕೃತ ಜಗತ್ತನ್ನೂ ಪ್ರಾಕೃತ ಕಾವ್ಯಲೋಕವನ್ನೂ ಕನ್ನಡಕ್ಕೆ ಜಗ್ಗಿ ಒಗ್ಗಿಸುವ ಕೆಲಸವನ್ನು ಶ್ರೀ ವಿಜಯ, ಆದಿಗುಣವರ್ಮ, ಪಂಪ, ಪೊನ್ನ, ರನ್ನಾದಿಗಳು ಮಾಡಿದ್ದನ್ನು ಜನ್ನ ಇನ್ನೂ ಮುಂದುವರಿಸಿದ್ದಾನೆ. ಪ್ರಾದೇಶಿಕ ಪ್ರತಿಭೆಗಳು ತಮ್ಮ ಮಹತ್ವದ ಕೃತಿಗಳನ್ನು ಸ್ಥಳೀಯ ಭಾಷೆಗಳಲ್ಲಿ ರಚಿಸಿದರೆ ಅವು ತಮ್ಮ ಪರಿಮಿತ ಪ್ರಾಂತೀಯ ಭಾಷಾವಲಯದ ಹೊರಗೆ ಪ್ರಯಾಣ ಮಾಡಲಾರವೆಂಬ ತಿಳಿವು ಇದ್ದೂ ಜೈನ ಕವಿಗಳು ಕನ್ನಡ ಭಾಷೆಯನ್ನೇ ಆಯ್ಕೆ ಮಾಡಿದ್ದು ಅಸಾಮಾನ್ಯ. ರಾಷ್ಟ್ರವ್ಯಾಪಿ ಭಾಷೆಯನ್ನು ಬಿಟ್ಟು ತಮ್ಮ ತಾಯಿನುಡಿಯನ್ನೇ ಎತ್ತರಿಸಿ ರಾಷ್ಟ್ರಭಾಷೆಯಾಗಿಸುವ ಈ ಸಾಹಿತ್ಯ ಸಾಹಸ ಶ್ಲಾಘನೀಯವಾದದ್ದು. ಸಂಸ್ಕೃತದ ಸಾರ್ವಭೌಮತ್ವವನ್ನು ಒಪ್ಪಿ, ಏಕಘಟಕ ಸ್ವರೂಪಕ್ಕೆ ತಲೆ ಬಾಗಿದರೂ ತಮ್ಮತನವನ್ನು ಉಳಿಸಿಕೊಂಡರು. ದೇಶೀಯ ಭಾಷಾ ಸಂಸ್ಕೃತಿ ಸ್ವಂತಿಕೆಯನ್ನು ಕಳೆದುಕೊಂಡು ತಬ್ಬಲಿಯಾಗಬಹುದಾದ ಆತಂಕವನ್ನು ಆರಂಭದ ಜೈನಕವಿಗಳು ನಿವಾರಿಸಿದ್ದು ಎಷ್ಟು ಮಹತ್ವದ್ದೆಂದು ಇದರಿಂದ ಪ್ರತೀತವಾಗುತ್ತದೆ. ಆಡಳಿತ ಪೋಷಿತ ಭಾಷೆಯು ಮಾತೃಭಾಷೆಗಿಂತ, ಪ್ರಾದೇಶಿಕ ಭಾಷೆಗಿಂತ ಬೇರೆಯಾಗಿದ್ದಾಗ ಸಾಹಿತ್ಯವಲಯದಲ್ಲಿ ದೇಶೀಯ ಹಕ್ಕುಗಳಿಗೆ ಗಂಡಾಂತರಗಳಿರುತ್ತವೆ. ಶ್ರೀವಿಜಯ, ಆದಿಗುಣವರ್ಮ, ಪಂಪಪೊನ್ನ ರನ್ನಾದಿಗಳ

ಪ್ರತಿಭೆಯ ವರ್ಚಸ್ಸಿನಿಂದ ಕನ್ನಡವೇ ಪ್ರಭುತ್ವ ಪ್ರೇರಿತ ಪ್ರತಿಷ್ಠಿತ ಭಾಷೆಯಾಗಿ ಬೆಳೆದದ್ದು ನಾಗಚಂದ್ರ, ನಯಸೇನ, ನೇಮಿಚಂದ್ರ, ಜನ್ನಾದಿಗಳಿಗೆ ಕವಿರಾಜಮಾರ್ಗದ ಹಾಸನ್ನು ಅಣಿಗೊಳಿಸಿಟ್ಟಂತಾಯಿತು. ಈ ಅನುಕೂಲದ ಉಪಯೋಗ ಪಡೆದ ಜನ್ನ ಕವಿಯು ಸೋಮದೇವ ಸೂರಿ, ಪುಷ್ಪದಂತ ಮತ್ತು ವಾದಿರಾಜ ಪ್ರಣೀತ ಸಂಸ್ಕೃತ-ಪ್ರಾಕೃತ ಭಾಷೆಗಳ ಕಥಾನಕವನ್ನು ಕನ್ನಡದ ಪ್ರಣಾಲಿಗೆ ಹರಿಸಿದ ಕವಿಭಗೀರಥನಾದ.

ಜನ್ನನ ಸೃಜನಶೀಲತೆ ಉಜ್ವಲವಾದುದು. ಯಶೋಧರ ಚರಿತೆಯ ಕಥಾನಕವನ್ನು ಕನ್ನಡಿಸಿ ಪ್ರಾದೇಶಿಕ ಪರಂಪರೆಯೊಂದಿಗೆ ಸಂವಾದವನ್ನು ಬೆಸೆದನೆಂಬುದರ ಜತೆಗೆ ಹೆಣೆದ ಬೇರೆ ಸಂಗತಿಗಳೂ ಇವೆ. ಅದರ ಆಚೆಗೂ ಚಾಚಿದ ಕವಿಯ ಪ್ರತಿಭೆ ಸಿದ್ಧ ವಸ್ತುವಿನ ಪುನರ್ ನಿರ್ಮಿತಿಯ ಶಿಲ್ಪಕ್ಕೆ ಪ್ರಾಣಧಾರಣೆ ಮಾಡಿದೆ. ಭಾಷೆ ಮತ್ತು ಸಂಸ್ಕೃತಿ ಅವಿಭಾಜ್ಯ ಘಟಕಗಳು. ಗೋಳದ ಸಾಂಸ್ಕೃತಿಕ ಚಲನಗಳು ಭಾಷೆಯ ಆಯ್ಕೆಯ ಮೂಲಕ ಪ್ರಕಟವಾಗುತ್ತವೆ. ಸಂಸ್ಕೃತಿಯ ಪುನಾರಚನೆಗೆ, ರಾಜಕೀಯ -ಧಾರ್ಮಿಕ ಮರು ವ್ಯಾಖ್ಯಾನಗಳಿಗೆ ನೆರವಾಗುವ ಹಲವಾರು ಸಂಗತಿಗಳನ್ನು ತಳಕು ಹಾಕಿರುವ ಜನ್ನನ ಸಂವಿಧಾನ ಚಾತುರ್ಯ ಬೆರಗು ತರುತ್ತದೆ. ದೇಶ ಕಾಲ ಪರಿಸರಗಳ ತ್ರಿಯಾಮದಲ್ಲಿ ಹಾಗೂ ಚರಿತ್ರೆಯ ಪರಿಪ್ರೇಕ್ಷ್ಯದಲ್ಲಿಟ್ಟು ಕಥಾವಸ್ತುವಿನ ಪದರ ಪಾತಳಿಗಳನ್ನು ಸುಲಿದು ನೋಡುವಾಗ ಜನ್ನಕವಿ ಹೊಮ್ಮಿಸಿರುವ ನಿಜದನಿಗಳನ್ನು ಆಲಿಸಬೇಕು. ಜೈನ ಶ್ರಾವಕ ಸಮುದಾಯದ ತಲ್ಲಣ ಹಳವಂಡಗಳ ಮುನಿಸು ಮುಲುಕುಗಳನ್ನು ಕಥಾ ವಿನ್ಯಾಸದ ಕಾವ್ಯರೇಖೆಗಳಲ್ಲಿ ಕೀಲಿಸುತ್ತ ಸಾಂಸ್ಕೃತಿಕ ಜವಾಬ್ದಾರಿಗಳಿಗೆ ಹೆಗಲು ಕೊಟ್ಟ ಕವಿ ಜನ್ನ. ಪಾರಂಪಾರಿಕವಾಗಿ ಹರಿದು ಬಂದ ಕಥಾ ವಸ್ತುವನ್ನು ಆಧುನೀಕರಿಸಿ, ತನ್ನ ಯುಗಕ್ಕೆ ಎಲ್ಲಂದದಲ್ಲಿ ಸಲ್ಲುವಂತೆ ಸಜ್ಜಾಗಿಸುವ ಸಾಂಸ್ಕೃತಿಕ-ಭಾಷಿಕ ಪ್ರಯತ್ನಗಳ ಮೌಲಿಕತೆಯನ್ನು ಮನಗಂಡಾಗ ಜನ್ನನ ಕಾವ್ಯ ನಿರ್ವಹಣೆಯಲ್ಲಿರುವ ಅನನ್ಯತೆಯ ನಿರಿಗೆಗಳು ನಿಚ್ಚಳವಾಗಿ ಕಾಣುತ್ತವೆ.

ಪಸಿದ ಕೃತಾಂತನ ಬಾಣಸುವೊಲಿರ್ದ ಮಾರಿಯ ಮನೆಯನ್ನು ವರ್ಣಿಸುವಾಗ ಜನ್ನನ ಸೃಷ್ಟಿ ಶಕ್ತಿ ವಿಜೃಂಭಿಸಿದೆಯಲ್ಲದೆ ಹಿಂಸೆಯ ಪ್ರಕಾಂಡ ತಾಂಡವ ರಿಂಗಣಕ್ಕೆ ರಂಗಸ್ಥಲ ಕಟ್ಟಿದೆ;

ಆ ದೇವಿಯ ಜಾತ್ರೆಗೆ ಮೊಳೆ
ವೋದೆಳವೆಱು ಸಿರದಗಾಳಮುರಿಯುಯ್ಯಲೆ ಕೈ
ವೋದಸುಕೆ ಕೋಕಿಲಧ್ವನಿ
ಮೂದಲೆಯುಲಿಯಾಗೆ ಬಂದುದಂದು ವಸಂತಂ॥

ಸಿಸಿರಮನೆ ಪಿಡಿದು ಪರಕೆಗೆ
ವಂಸತನಲರ್ವೋದ ಮಾವಿನಡಿ ಮಂಚಿಕೆಯೊಳ್
ಕುಸುರಿದಱಿದಡಗಿನಂತೆವೊ
ಲೆಸೆದುವು ತದ್ವನದೊಳುದಿರ್ದ ಮುತ್ತದ ಮುಗುಳ್ಗಳ್॥

ಮಾರಿ ಮಲಯಾನಿಳಂ ನವ
ನೀರಜವನಮೆಂಬ ಕೆಂಡದೊಳ್ ದಂಡನಮ
ಸ್ಕಾರದೆ ಬಂದಪನಿತ್ತವ
ಧಾರಿಪುದೆಂಬಂತಿರುಲಿದುವರಗಿಳಿ ಬನದೊಳ್॥

ಇವು ಭೀಕರ ಭೀಭತ್ಸ ನೆತ್ತರೋಕುಳಿಗೆ ತಕ್ಕ ವರ್ಣನೆಯ ಪದ್ಯಗಳಷ್ಟೇ ಅಲ್ಲ, ಜನ್ನಕವಿಯ ಚಿತ್ರಕಶಕ್ತಿಯನ್ನು ಸಾರುವ ಪದ್ಯಗಳೂ ಹೌದು. ಪ್ರಾಣಿ ಬಲಿಯ ಜತೆಗೆ ಸಿಡಿಯಾಡುವುದು, ಕೊಂಡಹಾಯುವುದು ಮುಂತಾದ ಜನಪದರ ಪದ್ಧತಿಗಳನ್ನು ಪೋಣಿಸಿ, ತಗುಳಿಸಿ ಸಾಂಸ್ಕೃತಿಕ ಪ್ರಾಮುಖ್ಯವನ್ನು ಕನ್ನಡ ಕಾವ್ಯಕ್ಕೆ ಕಸಿ ಮಾಡಿದ್ದಾನೆ. ಇದು ಜನ್ನನ ಸ್ವೋಪಜ್ಞ ಸೇರ್ಪಡೆ. ಸೋಮದೇವ ಸೂರಿಯ ಸಂಸ್ಕೃತ ಕಾವ್ಯದ ಪದ್ಯ ಪದ್ಯಗಳಲ್ಲಿ ಪುಟಿಯುವ ಇನ್ನಿತರ ಸಾಂಸ್ಕೃತಿಕ ಸಂಗತಿಗಳ ವಿವರಾಧಿಕ್ಯ ಇಲ್ಲಿಲ್ಲವೆಂಬುದೂ ನಿಜ. ಆದರೂ ಒಂದು ಮಿತಿಯಲ್ಲಿ ಉಚಿತವಾದಷ್ಟು ಪರಿಣಾಮಕಾರಿಯಾಗಿ ಹೆಣೆದುಕೊಂಡಿದೆ. ಜನ್ನ ಮನಸ್‌ಶಾಸ್ತ್ರ ನಿಪುಣನಾಗಿರುವುದರೊಂದಿಗೆ ಸಂಸ್ಕೃತಿಯ ಅಭ್ಯಾಸಕಾರರ ಪ್ರಯೋಗಶಾಲೆಯೂ ಆಗಿದ್ದಾನೆ. ಆತ ಸಾಂಸ್ಕೃತಿಕ ಜವಾಬ್ದಾರಿಗಳಿಗೆ ಹೆಗಲು ಕೊಟ್ಟ ಯುಗದ ಕವಿ. ಅರಮನೆಯ ರೀತಿ ರಿವಾಜುಗಳಲ್ಲಿ ಸ್ಥಾಯಿಗಿಂತ ಸಂಚಾರಿತ್ವಕ್ಕೆ ಮೇಲುಗೈ. ಆಹಾರ, ಆಚಾರ, ವಿಚಾರ, ಪೂಜೆ ಪುರಸ್ಕಾರಗಳಲ್ಲಿ ಅಂತರವೂ ಕಂದರವೂ ಕಾಣಿಸುವುದು ಸಹಜ. ಅಂತಃಪುರದ ರಾಣಿಯರು ಹಲವರು. ಅವರ ಜಾತಿ ಮತವಂಶಗಳೂ ಬೇರೆಯಾಗಿರುತ್ತವೆ. ಅಂತರ್ಜಾತೀಯ ವಿವಾಹ ಪ್ರಭುಸತ್ತೆಗೆ ಹೊಸದಲ್ಲ. ಹೊಯ್ಸಳ ರಾಜ್ಯದಲ್ಲಿ ಇದು ಪ್ರಭುಗಳಲ್ಲೂ ಪ್ರಜೆಗಳಲ್ಲೂ ವ್ಯಾಪಕವಾಗಿತ್ತು. 'ಯಶೋಧರ ಚರಿತೆ' ಕಾವ್ಯದಲ್ಲಿ ಯಶೋಧರನೂ ಅವನ ತಂದೆಯೂ ಜೈನ ಪರಂಪರೆಗೆ ಸೇರಿದವರು. ಆದರೆ ಆತನ ತಾಯಿ ಬಲಿಕೊಡುವ ಸಂಪ್ರದಾಯಕ್ಕೆ ಸೇರಿದವಳು.

"ಜೈನ ಲೇಖಕರ, ಪುರಾಣ ಕಥನಕಾರರ ತಾತ್ವಿಕ ಪರಿಕಲ್ಪನೆ ಎಷ್ಟು ನಿಚ್ಚಳ ಮತ್ತು ಕರಾರುವಾಕ್ಕಾಗಿ ಇದೆಯೆಂದರೆ, ಧಾರ್ಮಿಕತೆಯ ನಿಯಮಗಳನ್ನು ಮುರಿದವರು, ಅವರು ರಾಜ-ರಾಣಿಯರೇ ಆದರೂ, ಅದಕ್ಕೆ ತಕ್ಕ ದಂಡ ತರಲೇ ಬೇಕು, ಭವಾವಳಿಯ ಸುಳಿಗೆ ಬೀಳಲೇ ಬೇಕು. ವ್ಯಕ್ತಿಯ ಅಂತಸ್ತು ಅಧಿಕಾರಗಳಿಗಿಂತ ಧರ್ಮದೊಡ್ಡದು. ತಪ್ಪನ್ನು ಎಸಗಿದರೂ ಅದನ್ನು ತಿದ್ದಿಕೊಳ್ಳಲು ಅವಕಾಶಗಳ ಬಾಗಿಲು ತೆರೆದಿರುತ್ತದೆಂಬ ಋತುಸತ್ಯ ಸ್ಥಾಪಿತವಾಗುತ್ತದೆ (ನಾಗರಾಜಯ್ಯ, ಹಂಪ: ಜೈನ ಕಥಾಕೋಶ: ೧೯೯೭: ೭೪). ಭವಾವಳಿಯು ಸಾಂಪ್ರದಾಯಿಕ ಜೈನ ಕಾವ್ಯತಂತ್ರವಾಗಿ ಮುಗಿಯದೆ ಹೊಸ ನೆಲೆಗಳಿಗೆ ಕವಿಯ ಆಶಯಗಳನ್ನು ದಾಟಿಸುತ್ತದೆ. ಜನ್ಮ ಜನ್ಮಾಂತರದ ಪರಿಕಲ್ಪನೆ ಯಶೋಧರ ಚರಿತೆಯಲ್ಲಿ ತನ್ನ ಮರುಹುಟ್ಟನ್ನು ಪಡೆದಿದೆ. ಪ್ರಣಯಿಗಳೇ ಹಗೆಗಳಾದಾಗ, ಬಂಧುಗಳೇ ವೈರಿಗಳಾದಾಗ ಯಾವ ಹಂತಕ್ಕೆ, ಯಾವ ತುದಿಗೆ ಹೋಗಬಹುದೆಂಬುದರ ಪ್ರತೀಕವಾಗಿ ಯಶೋಧರನಿಂದ ಸಿಡಿದು ನಿಂತ ಅಮೃತಮತಿಯ ವರ್ತನೆಯಿದೆ.

ಈ ಪುಟ್ಟ ಕಾವ್ಯವನ್ನು ಹಿಂಡಿದಷ್ಟೂ ಅರ್ಥ ಹನಿಯುತ್ತದೆ. ಮಾತುಗಳಲ್ಲಿ ಹೇಳಲಾಗದ ತನ್ನ ಉಮ್ಮಳವನ್ನು ಮಗ ತಾಯಿಗೆ ಸಂಕೇತಗಳಲ್ಲಿ ತೋಡಿಕೊಳ್ಳುತ್ತಾನೆ. ಹಡೆದವ್ವ ಅದನ್ನು ಸರಿಯಾಗಿ ವಿಸಂಕೇತಿಸಿಕೊಳ್ಳದೆ ತಪ್ಪಾಗಿ ಅರ್ಥೈಸಿಕೊಳ್ಳುತ್ತಾಳೆ. ಇದು ಸಂವಹನಕ್ಕಿರುವ ಮಿತಿ ಹಾಗೂ ಅರಿವಿನ ಕೊರತೆಯನ್ನು ತಿಳಿಸುತ್ತದೆ. ಅಂತೂ ತಪ್ಪಿನ ಪರಿಣಾಮ ದುರಂತಗಳ ಸರಮಾಲೆ. ಕೈ ಹಿಡಿದ ಹೆಂಡತಿಯಿಂದಾದ ಆಘಾತದ ಜತೆಗೆ ಹೆತ್ತಬ್ಬೆ ಕೂಡ ಗಾಯದ ಮೇಲೆ ಬರೆ ಎಳೆದಂತಾಯಿತು. ಮನುಷ್ಯನಿಗೆ ಎಷ್ಟೇ ಅಧಿಕಾರ, ಅಂತಸ್ತು ಇದ್ದರೂ ಹೇಗೆ ಪರಿಸ್ಥಿತಿಯ ಒತ್ತಡಗಳಲ್ಲಿ ಅಸಹಾಯಕನಾಗಿ ಒದ್ದಾಡಬೇಕಾಗುತ್ತದೆಂಬುದನ್ನು ಈ ಪ್ರಸಂಗ ಸಮರ್ಥವಾಗಿ ಧ್ವನಿಸುತ್ತದೆ.

ಜನ್ನಕವಿ ವೈರುಧ್ಯಗಳ ಮುಖಾಮುಖಿಯಲ್ಲಿ ವಿಚಾರಗಳನ್ನು ಬೆಳಗಿಸುತ್ತಾನೆ: ಅಮೃತ ಮತಿ-ಅಷ್ಟಾವಂಕ, ಅಮೃತಮತಿ-ಯಶೋಧರ, ಅಮೃತಮತಿ-ಸುನಂದೆ, ಅಮೃತಮತಿ-ಚಂಡ ಶಾಸನ, ಅಷ್ಟಾವಂಕ-ಚಂಡಶಾಸನ, ಯಶೋಧರ-ಚಂಡಶಾಸನ ಮುಂತಾದ ಜೋಡಿಗಳಲ್ಲಿರುವ ಸಾದೃಶ್ಯ ವೈದೃಶ್ಯಗಳನ್ನು ವಿವೇಚಿಸುವುದನ್ನು ಕವಿ ಓದುಗರ ಪಾಲಿಗೆ ಬಿಟ್ಟಿದ್ದಾನೆ.

ಪಂಪನ ಹಾಗೆಯೇ ಜನ್ನ ಮತ್ತು ಬಂಧುವರ್ಮ ಕವಿಗಳು ಹಿತಮಿತ ಪ್ರಸನ್ನ ವಚನ ರಚನೆಗೆ ಮಣಿದ ಕವಿಗಳು. ಜನ್ನನ ಎರಡು ಕಾವ್ಯಗಳೂ, ಕೆಲವು ಅಂಶಗಳಲ್ಲಿ, ಎರಡು ತುದಿಗಳು. ಯಶೋಧರ ಚರಿತೆ ಕಾವ್ಯ ಕಿರಿದರಲ್ಲಿ ಹಿರಿದು ಹುರುಳನ್ನು ಸಾರುವ ಜಾಣ್ಮೆಯನ್ನು ತೋರಿದೆ. ಪ್ರಣಯ ಸಮಸ್ಯೆಯ ಆ ಮುಖ ಈ ಮುಖಗಳಲ್ಲಿ ಅಮೃತಮತಿ (+ಸುನಂದೆ) ಸ್ತ್ರೀಮುಖ, ಚಂಡಶಾಸನ (+ಯಶೋಧರ + ಅಷ್ಟಾವಂಕ) ಪುರುಷಮುಖ. ಸಂಕೀರ್ಣತರವಾದ ಪ್ರಣಯದ ಎರಡು ವಿರುದ್ಧ ಧ್ರುವಗಳನ್ನು ತೋರಿಸುವ ಹೊಣೆಗೆ ಜನ್ನ ಸ್ಪಂದಿಸಿದ್ದಾನೆ. ಅಮೃತಮತಿಯತ್ತ ಬೆರಳು ಮಾಡಿ,'ಇಡೀ ಸ್ತ್ರೀ ಸಮುದಾಯ ಹೀಗೇನೆ' ಎಂದು ಸಾಧಾರಣೀಕರಣಗೊಳಿಸುವ ತಪ್ಪು ತೀರ್ಮಾನಕ್ಕೆ ಕಡಿವಾಣ ಹಾಕುವ ಜವಾಬುದಾರಿ ಕರೆಗೆ ಓಗೊಟ್ಟು ಸುನಂದೆಯನ್ನು ನಿಲ್ಲಿಸಿದ್ದಾನೆ.

ಅನಂತನಾಥಪುರಾಣ ಜನ್ನನ ಸೃಷ್ಟಿ ಶಕ್ತಿಯ ಇನ್ನೊಂದು ತುದಿ. ಗುಣಭದ್ರಾಚಾರ್ಯರ ಉತ್ತರ ಪುರಾಣದಲ್ಲಿ ೮೫ ಶ್ಲೋಕಗಳ ಮಿತಿಯಲ್ಲಿ ಕೆನೆಕಟ್ಟಿ ನಿಂತ, ಚಾವುಂಡರಾಯಪುರಾಣದಲ್ಲಿ ಕೇವಲ ಇಪ್ಪತ್ತು ಸಾಲುಗಳಲ್ಲಿ ಮುಗಿದು ಹೋದ ಕಥಾವಸ್ತುವನ್ನು ೧೪ ಆಶ್ವಾಸಗಳ ವರೆಗೆ ಲಂಬಿಸಿರುವುದು ಜನ್ನನು ಹೇಗೆ ವಿಸ್ತರಿಸಬಲ್ಲನೆಂಬುದಕ್ಕೆ ಕನ್ನಡಿ ಹಿಡಿದಿರುವ ಕಾವ್ಯ ಅನಂತನಾಥ ಪುರಾಣ. ಇದು ವಾಚಾಳಿ ಜನ್ನನ ಚಂಪೂ ಕಾವ್ಯ. ಯೌವನದಲ್ಲಿ ಬರೆದ ಯಶೋಧರ ಚರಿತೆಯಲ್ಲಿ ತೋರಿದ ಸಂಯಮ ಮುಪ್ಪಿನಲ್ಲಿ ಬರೆದ ಅನಂತನಾಥ ಪುರಾಣದಲ್ಲಿಲ್ಲ; ಮುದುಕರಾದಾಗ ಕೆಲವರು ಹೆಚ್ಚು ಮಾತಾಡುತ್ತಾರೆಂಬುದಕ್ಕೆ ಇದೊಂದು ದೃಷ್ಟಾಂತ. ಇದರಲ್ಲಿರುವ ಚಾರಿತ್ರಿಕ ಅಂಶಗಳು ಸಾಂಸ್ಕೃತಿಕ ಮಹತ್ವದ ಸುಳಿವುಗಳು ಅಷ್ಟಾದಶ ವರ್ಣನೆಯ ಸೀಗೆಮೆಳೆಯಲ್ಲಿ ಸಿಕ್ಕಿಕೊಂಡಿವೆ.

ಅನಂತನಾಥಪುರಾಣದ ತಲಸ್ಪರ್ಶಿ ಅಧ್ಯಯನ ಇನ್ನೂ ಆಗಬೇಕಾಗಿದೆ. ಈ ದೀರ್ಘ ಚಂಪೂಕಾವ್ಯದ ಹೃದಯ ಚಂಡಶಾಸನ ಸುನಂದೆಯರ ಆಖ್ಯಾನ. ಇದು ಮರುಮದ್ಯದ ತಂಪುಜಾಗ, ಬರಡು ಹಯನಾಗಿ ಕೊರಡು ಕೊನರಿದ ಸಂಕೀರ್ಣ ಸಂದರ್ಭ, ಪ್ರಣಯ ವೈಚಿತ್ರ್ಯವನ್ನು ಪ್ರತಿಫಲಿಸುವ ಕಾವ್ಯದರ್ಪಣ. ಅಮೃತಮತಿ ಅಷ್ಟಾವಂಕನಿಗೆ ಸಮರ್ಪಿಸಿಕೊಂಡ ರೀತಿಗೂ ಚಂಡಶಾಸನನು ಸುನಂದೆಗೆ ಸೋತ ರೀತಿಗೂ ಸಾಮ್ಯದಂತೆ ವೈಷಮ್ಯವೂ ಇದೆ. ಇಬ್ಬರೂ ಜಾರಿದರು; ಇಳಿಜಾರಿನಲ್ಲಿ ವೇಗ ಹೆಚ್ಚು. ಇಬ್ಬರೂ ತಮ್ಮನ್ನು ಸಮರ್ಥಿಸಿಕೊಂಡಿದ್ದಾರೆ. ತಪ್ಪೊ ನೆಪ್ಪೊ ಒಲಿದದ್ದು ಆಗಿದೆ ಎಂದು ಅದರಲ್ಲೇ ಪೂರ್ಣ ನಿಷ್ಠೆ ತಳೆದಿದ್ದಾರೆ. ಒಲಿದ ತಾಣದಲ್ಲಿ ರೂಪಿನ ಕೋಟಲೆಯೇಕೆ ಎಂಬ ಕಾಮ ಸೂತ್ರಕ್ಕೆ ಅಮೃತಮತಿ ಶರಣಾದರೆ, ಮುಂದಿನ ಜನ್ಮದಲ್ಲಾದರೂ ಸುನಂದೆಯನ್ನು ಪಡೆಯುವ ನಿಧಾನ ಶಲ್ಯ ಚಂಡಶಾಸನದು.

ಕನ್ನಡದ ಮಹತ್ವದ ಕವಿಗಳಿಗೆ ಆಧುನೀಕರಣದ ತುಡಿತವಿತ್ತು. ತನ್ನನ್ನು ಆಧುನೀಕರಿಸಿಕೊಳ್ಳುತ್ತ ಆಯಾ ಯುಗಕ್ಕೆ ಸಲ್ಲುವಂತೆ ಸಜ್ಜಾಗುವ ಸಾಂಸ್ಕೃತಿಕ, ಭಾಷಿಕ ಪ್ರಯತ್ನಗಳು ಕರ್ನಾಟಕದ ಸಂದರ್ಭದಲ್ಲಿ ನಡೆದಿವೆ ಎಂಬುದಕ್ಕೆ ಜನ್ನನ ಕಾವ್ಯಗಳು ದಿವ್ಯ ಸಾಕ್ಷಿಯಾಗಿವೆ. ಈ ದಿಕ್ಕಿನ ಅಧ್ಯಯನ ಹೊಸನೆಲೆಗಳಿಗೆ ಕೊಂಡೊಯ್ಯಬಲ್ಲುದೆಂಬ ಗ್ರಹಿಕೆಯಿಂದ ಇಷ್ಟು ಹೊತ್ತು ಮಾತನಾಡಿದ್ದೇನೆ.

೬

ಜೈನಸಮಾಜ ಮತ್ತು ಮತಾಂತರ

ಜೈನ ಸಮಾಜವೂ ಸಮಗ್ರ ಭಾರತದ ಸಾಂಸ್ಕೃತಿಕ ನೆಯ್ಗೆಯ ಒಂದು ಅವಿಭಾಜ್ಯ ಅಂಗವಾಗಿಯೇ ಬೆಳೆದು ಬಂದಂತೆ ಸ್ಥೂಲ ನೋಟಕ್ಕೆ ತೋರುವುದು ದಿಟ. ಸೂಕ್ಷ್ಮವೂ ತೌಲನಿಕವೂ ಆದ ಒಳನೋಟಕ್ಕೆ ಜೈನತ್ವಕ್ಕಿರುವ ಸ್ವತಂತ್ರ ವ್ಯಕ್ತಿತ್ವದ ಸ್ವರೂಪ ಬಯಲಾಗುತ್ತದೆ.

ಈ ಸಂಪ್ರಬಂಧಕ್ಕೆ 'ಜೈನ ಸಮಾಜ ಮತ್ತು ಮತಾಂತರ' ಎಂಬ ಶೀರ್ಷಿಕೆ/ ಶಿರೋನಾಮೆ ಕೊಟ್ಟಿರುವುದರಿಂದ, ಅದರ ನಿರ್ವಚನದ ಚೌಕಟ್ಟಿಗೆ, ಜೈನ ಸಮಾಜವೂ ಒಂದು ಸಾಂಸ್ಥಿಕ ಸಂಘಟನೆಯೆಂಬ ಪರಿಕಲ್ಪನೆ ಪ್ರಣೀತವಾಗುತ್ತದೆ. ಜೈನ ಸಮುದಾಯವು ಒಂದು ಒಪ್ಪಿತ ಸಾಮಾಜಿಕ ಸಂಸ್ಥೆಯಾಗಿ ಸಾವಿರಾರು ವರ್ಷಗಳಿಂದ ಈ ದೇಶದಲ್ಲಿ ಜೀವಿಸುತ್ತಿದೆ. ಈ ದೀರ್ಘ ಕಾಲಘಟ್ಟದ ಚರಿತ್ರೆಯಲ್ಲಿ ಸಂಭವಿಸಿದ ಸ್ಥಿತ್ಯಂತರಗಳಲ್ಲಿ, ಮತಾಂತರ ಕುರಿತ ಪ್ರಕ್ರಿಯೆಗೆ, ಜೈನ ಸಮಾಜದ ಪ್ರತಿಕ್ರಿಯೆಯ ವಿಶ್ಲೇಷಣೆ ಈ ಶೀರ್ಷಿಕಾಂತರ್ಗತ ಆಶಯ. ಈ ನೆಲೆಯಿಂದ ವಿವರಿಸುವ ಮತ್ತು ಗ್ರಹಿಸುವ ಪ್ರಯತ್ನಗಳು ನಡೆಯತೊಡಗಿರುವುದು ಇತ್ತೀಚೆಗೆ. ಹೀಗಾಗಿ ಈ ಸಂಪ್ರಬಂಧದ ಬಹ್ವಂಶಗಳು ಮರುಮಂಡನೆಯಾಗದೆ ಇದೇ ಮೊದಲ ಸಲ ಇಲ್ಲಿ ಪ್ರಸ್ತಾಪಿತವಾಗುತ್ತಿವೆ.

ಒಟ್ಟು ಭಾರತೀಯ ಸಮಾಜದಿಂದ ಭಿನ್ನವಾದ ಒಂದು ಜೈನ ಸಮಾಜ ಇದೆಯೆ? ಹಾಗೆ ಇಲ್ಲವಾದರೆ 'ಜೈನ ಸಮಾಜ' ಎಂಬ ಪ್ರತ್ಯೇಕ ಪರಿಗಣನೆಯ ಅಗತ್ಯವಿರುವುದಿಲ್ಲ. ಭಿನ್ನವಾದ 'ಜೈನ ಸಮಾಜ' ಎನ್ನುವುದೊಂದಿದ್ದರೆ ಅದರ ಲಾಂಛನ ಲಕ್ಷಣಗಳ ಸ್ವರೂಪವೇನು ಎಂಬ ಪ್ರಶ್ನೆ ಪ್ರಸ್ತುತವಾದದ್ದೇ. ವಿಲಾಸ ಎ. ಸಂಗವೆ (೧೯೫೯) ಅವರ ಪುಸ್ತಕ, ಸಮಾಜಶಾಸ್ತ್ರದ ದೃಷ್ಟಿಯಿಂದ, ಈ ಸಂವಾದಕ್ಕೆ ಬೇಕಾದ ಉತ್ತರಗಳನ್ನು ಒದಗಿಸುತ್ತದೆ; ಆದರಿಂದ ವಿಸ್ತೃತ ಚರ್ಚೆ ಇಲ್ಲಿ ಅನಗತ್ಯ. ಸಿಖ್ ಸಮಾಜ, ಪರಿಶಿಷ್ಟ ಸಮಾಜ, ಕ್ರೈಸ್ತ ಸಮಾಜ, ಮುಸ್ಲಿಂ ಸಮಾಜ, ಮರಾಠ ಸಮಾಜ, ಹಿಂದೂ ಸಮಾಜ-ಇವುಗಳಂತೆಯೇ 'ಜೈನ ಸಮಾಜ' ಎಂಬುದೀಗ ಪ್ರಚಲಿತವಾಗಿದೆ.

ಯಾವುದೇ ಒಂದು ಮಾನವ ಸಮುದಾಯ 'ಒಂದು ಸಮಾಜ' ಎಂಬ ನಿರ್ದಿಷ್ಟ ನಿರ್ದೇಶನಕ್ಕೆ ಪಾತ್ರವಾಗಬೇಕಾದರೆ ಅದು ಕೆಲವು ಲಕ್ಷಣಗಳನ್ನು ಒಳಗೊಂಡಿರಬೇಕು;

೧. ಒಂದು ಸಮಾನ ಸಂಸ್ಕೃತಿ, ನಂಬಿಕೆ, ಆಚರಣೆ ಮತ್ತು ಸಮಾನ ಆಸಕ್ತಿಯನ್ನು ಉಳ್ಳವರಾಗಿರಬೇಕು.

೨. ಉಳಿದ ಮತ್ತು ಅದರ ನೆರೆಹೊರೆಯಲ್ಲಿರುವ ಸಮಾಜದವರಿಗಿಂತ ಈ ಸಂಸ್ಕೃತಿ ನಂಬಿಕೆ, ಆಚರಣೆ, ಆಸಕ್ತಿಗಳು ಭಿನ್ನತೆ ಹೊಂದಿರಬೇಕು.

೩. ಅದು ತನ್ನ ಸ್ವಂತಿಕೆ ಮತ್ತು ಪ್ರತ್ಯೇಕತೆಯ ವಿಚಾರದಲ್ಲಿ ಪ್ರಜ್ಞಾವಂತವಾಗಿರಬೇಕು.

೪. ಸಾಮಾಜಿಕ, ರಾಜಕೀಯ, ಆರ್ಥಿಕ ರಂಗಗಳಲ್ಲಿ ಆ ಸಮುದಾಯ ಪರಿಣಾಮಕಾರಿಯಾಗಿರಬೇಕು.

೫. ಅದು ತನ್ನ ಗುಂಪನ್ನು ಪುನರುತ್ಪಾದಿಸುವ ಚೈತನ್ಯ ಹೊಂದಿರಬೇಕು.

೬. ಅದಕ್ಕೇ ವಿಶಿಷ್ಟವಾದ ಸ್ವರೂಪದಿಂದ ಅದು ಉಳಿದ ಸಮಾಜದಿಂದ ಅನನ್ಯವೆನಿಸಿರಬೇಕು.

ಇಂಥ ಮಾನದಂಡಗಳಿಂದ 'ಜೈನ ಸಮಾಜ'ವೆಂಬ ಒಂದು ಪ್ರತ್ಯೇಕ ಸಮಾಜ ಘಟಕವು ಭಾರತದಲ್ಲಿ ಮೂರೂವರೆ ಸಾವಿರ ವರ್ಷಗಳಿಗೂ ಹಿಂದಿನಿಂದ ಜೀವಂತವಾಗಿದೆ. ಭಾರತದ ಜನಗಣತಿಯಲ್ಲೂ ಸಹ ಜೈನರು ತಮ್ಮನ್ನು ಹಿಂದೂಗಳೆಂದು ಅದರಡಿ ಸೇರಿಸದೆ, 'ಜೈನರು' ಎಂದು ನಮೂದಿಸಿ, ಪ್ರತ್ಯೇಕ ವ್ಯಕ್ತಿತ್ವದ ಗುರುತನ್ನು ಕಾಪಾಡುತ್ತಿದ್ದಾರೆ.

ಜೈನ-ಅಜೈನ ಸಮಾಜಗಳಲ್ಲಿ, ಮೇಲು ಮೇಲಿನ ತೇಲು ನೋಟಕ್ಕೆ ಇಂಥ ವೈದೃಶ್ಯಗಳು ಕಾಣದೆ, ಸಾದೃಶ್ಯಗಳೇ ಗೋಚರಿಸಬಹುದು. ಜೈನರು ಹಿಂದೂ ಹಬ್ಬಗಳನ್ನು ಆಚರಿಸುತ್ತಾರೆ. ಉಪವಾಸ ಆಚರಣೆ, ನೋಂಪಿ ಪೂಜಾ ವಿಧಾನ, ಬಳಸುವ ಪೂಜಾ ವಸ್ತುಗಳು ಮತ್ತು ಪೂಜೆಯ ಪರಿಭಾಷೆಯಲ್ಲಿ ಸಮಾನತೆಯಿದೆ. ಜೈನ ಭಟ್ಟಾರಕರೂ ಸ್ಥೂಲವಾಗಿ ಹಿಂದೂ ಮಠಾಧೀಶರು-ಜಗದ್ಗುರುಗಳು ರೀತಿಯಲ್ಲಿ ಇದ್ದಾರೆ. ಹಿಂದೂ ವರ್ಣ ವ್ಯವಸ್ಥೆ ಅಲ್ಲೂ ಇದೆ. ಹಿಂದುಗಳು ಹಿಂದೂ ಸನ್ಯಾಸಿಗಳಿಗೆ ತೋರುವಂತೆ ಜೈನ ಮುನಿಗಳಿಗೆ ಜೈನರು ಪೂಜ್ಯತೆ ತೋರುತ್ತಾರೆ. ಜೈನ ಬ್ರಾಹ್ಮಣರೆಂಬ ಒಳಪಂಗಡವೂ ಇದೆ. ಜೈನರೂ ಯಜ್ಞೋಪವೀತ (ಜನಿವಾರ) ಹಾಕುತ್ತಾರೆ; ಅದರ ಮೂರು ಎಳೆಗಳಿಗೆ ಬೇರೆ ವಿವರಣೆ ಕೊಡುತ್ತಾರೆ. ಜೈನರೂ ಶ್ರಾದ್ಧಾದಿ ಅಪರಕರ್ಮಗಳನ್ನು ಆಚರಿಸುತ್ತಾರೆ. ಇಂತಹ ಇನ್ನೂ ಕೆಲವು ಸಾಮ್ಯತೆ ಎದ್ದು ಕಾಣುತ್ತವೆ. ಆದರೆ ಇಂಥ ಸಾದೃಶ್ಯಗಳನ್ನು ಹಾಗೂ ಹಿಂದೂ ಪ್ರಭಾವವನ್ನು ಅವಲಂಬಿಸಿ ಜೈನ ಸಮಾಜವನ್ನು ಅರ್ಥೈಸುವುದಕ್ಕೆ ಆಗುವುದಿಲ್ಲ.

ಜೈನ ಜೀವನ ವಿಧಾನ, ಸಿದ್ಧಾಂತ ಮತ್ತು ಸಾಹಿತ್ಯಗಳಲ್ಲಿ ಅಂತರಗಳು ನಿಚ್ಚಳವಾಗಿವೆ. ಜೈನ ದೇವಾಲಯ, ಪೂಜೆ, ಜೈನಮುನಿ ಜೀವನಕ್ರಮ ವಿಶಿಷ್ಟವಾಗಿದೆ. Indeed, if we take the Jain society into account, there are grounds for arguing that the Jains are not just distinct in their religious organisations, but are actually better at being a community, better at organising themselves and bringing different sections of the communtiy together for common religious and cultural purposes [Michael Carrithers and Caroline Humphrey : 1991: 10-11]

ಜೈನಸಮಾಜದ ಒಂದು ವ್ಯಾಪ್ತವೂ ಆಪ್ತವೂ ಅಧಿಕೃತವೂ ಆದ ಚಿತ್ರಣ ಮೊಟ್ಟ ಮೊದಲನೆಯ ಬಾರಿಗೆ ಸಿಗುವುದು ಸಂಸ್ಕೃತ ಮಹಾಪುರಾಣದಲ್ಲಿ; ಅದರಲ್ಲಿಯೂ ಪೂರ್ವ ಪುರಾಣವಾದ ಆದಿಪುರಾಣದಲ್ಲಿ, ಇದು ಕ್ರಿ.ಶ. ಒಂಬತ್ತನೆಯ ಶತಮಾನದ ಮಧ್ಯಭಾಗದ ರಚನೆ. ಜಿನಸೇನಾಚಾರ್ಯರು ಜೈನಸಮಾಜದ ವಿಸ್ತಾರವಾದ ಸ್ವರೂಪವನ್ನು ಅದರ ಹಲವು ಮಗ್ಗಲುಗಳಿಂದ ನಿರೂಪಿಸಿದ್ದಾರೆ. ಕ್ರಿ.ಶ. ಎಂಟನೆಯ ಶತಮಾನದವರೆಗೆ ಜೈನರಲ್ಲಿದ್ದ ವಿವಾಹ ಪದ್ಧತಿಯ ನೆಲೆಬೆಲೆಗಳು ನಿರ್ಧಾರವಾಗಲು ಸಿಗುವ ಮಾಹಿತಿಗಳೆಲ್ಲ ಬಿಡಿಬಿಡಿಯಾಗಿವೆ. ಜೈನೇತರರೊಂದಿಗೆ ಜೈನರು ಅಂತರ್ಜಾತೀಯ ವಿವಾಹವಾಗುತ್ತಿದ್ದರೆಂಬುದು ನಿಜ. ಜೈನ ಆಗಮ ಸಾಹಿತ್ಯದಲ್ಲಿ ಅಂತರ್ಜಾತೀಯ ವಿವಾಹವನ್ನು ಪ್ರತಿಬಂಧಿಸಿಲ್ಲವೆಂಬುದು ಈ ತೀರ್ಮಾನವನ್ನು ಬೆಂಬಲಿಸುತ್ತದೆ (ಈ ಹೇಳಿಕೆಗೆ ಇರುವ ಒಂದು ಅಪವಾದವನ್ನು ಸಂಪ್ರಬಂಧದ ಕಟ್ಟಕಡೆಯಲ್ಲಿ ಚರ್ಚಿಸಲಾಗಿದೆ).

ಜಿನಸೇನರು ವಿವಾಹ ವಿಧಾನ ಕುರಿತು ಮಾಹಿತಿಯಿತ್ತಿದ್ದಾರೆ. ಪಂಚಪರಮೇಷ್ಠಿಗಳಲ್ಲಿ ಸಿದ್ಧರ ಮೂರ್ತಿಯಿಟ್ಟು ಅದರ ಮುಂದೆ ಪೂಜಾಚರಣೆಯೊಂದಿಗೆ ಮದುವೆಯ ಕ್ರಿಯೆಗಳು ಪ್ರಾರಂಭವಾಗಬೇಕೆಂದಿದ್ದಾರೆ. ಜೈನ ಸಮಾಜದಲ್ಲಿಯೇ ಪತಿ-ಪತ್ನಿಯರನ್ನು ಆರಿಸಿಕೊಳ್ಳಬೇಕೆಂಬ ಗ್ರಹಿಕೆ ಸೂಚಿಸಲ್ಪಟ್ಟಿದೆ. ನೂತನ ವಧೂವರರು ಮದುವೆಯಾದ ದಿನದಿಂದ ಏಳು ದಿನಗಳವರೆಗೆ ಬ್ರಹ್ಮಚರ್ಯವನ್ನು ಪಾಲಿಸಬೇಕು ಮತ್ತು ಆ ಸಪ್ತದಿನಗಳಲ್ಲಿ ಅವರು ಪವಿತ್ರ ಸ್ಥಳಗಳಿಗೆ ಹೋಗಿ ಬರುವುದು ಒಳ್ಳೆಯದೆಂದಿದ್ದಾರೆ. ಈ ರೀತಿ ಒಂದು ವಾರಾನಂತರ ಸ್ವಗೃಹ ಸೇರಿ ಸಂಸಾರವನ್ನು ಪ್ರಾರಂಭಿಸಬೇಕು (ಜಿನಸೇನಾಚಾರ್ಯ : ಆದಿಪುರಾಣ : ಪರ್ವ ೩೮. ಶ್ಲೋಕ ೧೨೭-೧೨೮)

ಜೈನ ಸಮಾಜದೊಳಗಡೆ ಬರುವ ಹಾಗೂ ಜೈನ ಸಮಾಜದಿಂದ ಹೊರಗೆ ಹೋಗುವ ಮತಾಂತರ ಪ್ರಕ್ರಿಯೆಯ ಕಾಳುಗಳನ್ನು ಮೂರುಸಾವಿರ ವರ್ಷದಷ್ಟು ಹಿಂದಿನಿಂದ ಕಾಣಬಹುದು. ೨೨ ಮತ್ತು ೨೩ನೆಯ ತೀರ್ಥಂಕರರಾದ ನೇಮಿನಾಥ ಮತ್ತು ಪಾರ್ಶ್ವನಾಥರು ಐತಿಹಾಸಿಕರೆಂದು ಚರಿತ್ರಕಾರರು ಒಪ್ಪಿದ್ದಾರೆ. ಇವರ ಕಾಲದಲ್ಲಿಯೇ ಮತಾಂತರ ನಡೆದಿದೆ. ಬುದ್ಧನ ತಾಯಿ ತಂದೆಯರು ಪಾರ್ಶ್ವನಾಥ ತೀರ್ಥಂಕರರ ಅನುಯಾಯಿಗಳಾಗಿದ್ದರು. ಬುದ್ಧನು ಪ್ರತ್ಯೇಕವಾದ ಮಹಾಧರ್ಮವೊಂದನ್ನು ಪ್ರಾರಂಭಿಸದನು. ಹೀಗಾಗಿ ಜೈನ ಮತದಿಂದ ಬುದ್ಧನ ಮನೆತನದವರು ಬೇರೆಯಾದದ್ದು ನಿಶ್ಚಯವಾಗುತ್ತದೆ. ಅನಂತರ ಬುದ್ಧ-ಮಹಾವೀರರ ಕಾಲಕ್ಕೆ ಬಂದರೆ ಆ ಯುಗದಲ್ಲಿ ಮತಾಂತರ ವ್ಯಾಪಕವಾಗಿದ್ದುದು ಕಂಡುಬರುತ್ತದೆ. ಪಾಲಿ, ಪ್ರಾಕೃತ ಮತ್ತು ಸಂಸ್ಕೃತದ ಪ್ರಾಚೀನ ಗ್ರಂಥಗಳಲ್ಲಿ ಉಲ್ಲೇಖವಾಗಿರುವಂತೆ, ಕ್ರಿ.ಪೂ. ಆರನೆಯ ಶತಮಾನದಲ್ಲಿ ಅನೇಕ ಅವೈದಿಕ ಮತಗಳು ಜೀವಂತವಾಗಿದ್ದುದನ್ನೂ ಹಲವು ಮಹಾಪುರುಷರು ಪ್ರಭಾವ ಬೀರಿದವರೆಂಬುದನ್ನೂ ಆಗಲೇ ಸೂಚಿಸಿದ್ದಾಗಿದೆ.

ಜೈನ ಸಮಾಜಕ್ಕೆ ಕ್ರಿ.ಪೂ. ಆರನೆಯ ಶತಮಾನದ ಉತ್ತರಾರ್ಧ ಮತ್ತು ಐದನೆಯ ಶತಮಾನದ ಪೂರ್ವಾರ್ಧದಿಂದ, ವೈಶ್ಯ (ವರ್ತಕ) ವರ್ಗವು ಒಟ್ಟೊಟ್ಟಿಗೆ ಬಂದು ಸೇರಿತು. ಹೀಗೆ ವಾಣಿಜ್ಯ ಸಮುದಾಯ ಜೈನ ತೆಕ್ಕೆಗೆ ಹೋಗಲು ಚಾರಿತ್ರಿಕ ಕಾರಣಗಳಿದ್ದುವು. ವೈದಿಕ ಜಾತಿ ವರ್ಣ ವ್ಯವಸ್ಥೆಯೊಳಗೆ ವ್ಯಾಪಾರಿಗಳಿಗೆ ದುಡಿಯುವುದಕ್ಕೆ, ಸಂಪಾದಿಸಿದುದನ್ನು ತಮಗಿಂತ ಮೇಲಿನವರಿಗೆ ಸೇವೆ ಮಾಡಿ

ಸಮರ್ಪಿಸುವುದಕ್ಕೆ ಅವಕಾಶವಿತ್ತು ಹೊರತು ತಾವೂ ಇತರ ಬ್ರಾಹ್ಮಣರಂತೆ ತಮ್ಮ ಇಷ್ಟಾನಿಷ್ಟಗಳಿಗೆ ಅನುಗುಣವಾಗಿ ವೃತ್ತಿಗೆರೆಯನ್ನು ದಾಟಿ ಸ್ವತಂತ್ರವಾಗಿ ಬಾಳಲು ಪರವಾನಿಗೆ ಇರಲಿಲ್ಲ. ಇಂಥ ಇಕ್ಕಟ್ಟುಗಳಲ್ಲಿ, ಅಸ್ಪೃಶ್ಯರು-ಶೂದ್ರರು ಚಡಪಡಿಸುತ್ತಿದ್ದ ಹಾಗೆಯೇ ವೈಶ್ಯರಿಗೂ ಹೊರಗೆ ಬರಲು ದಾರಿ ನಿರ್ಮಿಸಿಕೊಟ್ಟವರು ಬೌದ್ಧರು-ಜೈನರು. ಕ್ಷತ್ರಿಯರೇ ಮುಂದಾಳುಗಳಾಗಿ ನಿಂತು ಉದ್ಘಾಟಿಸಿಕೊಟ್ಟ ಹೊಸ ಧರ್ಮಗಳಿಗೆ, ಕ್ಷತ್ರಿಯರಿದ್ದ ಕಡೆ ನಾವು ಇರುತ್ತೇವೆಂಬ ಭಾವನೆಯಿಂದಲೂ ಇರಬಹುದು, ವೈಶ್ಯ ಶೂದ್ರ ಅಸ್ಪೃಶ್ಯರೂ ಸ್ತ್ರೀಯರೂ ನುಗ್ಗಿದರು. ವೈಶ್ಯರು ಉಳಿದವರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಜೈನ ಮತದಲ್ಲಿ ವಿಲೀನವಾದರು. ಅವರಿಗೆ ಜೈನ ಸಮಾಜದಲ್ಲಿ ದೊರೆತ ಸಂತೃಪ್ತಿ, ಪ್ರೋತ್ಸಾಹ, ಉನ್ನತ ಸ್ಥಾನಗಳ ವರ್ಚಸ್ಸುಗಳನ್ನು ಉಪಲಬ್ಧ ಆಕರಗಳು ಪುಷ್ಟೀಕರಿಸಿವೆ [Romila Thaper : A History of India : 1969 : 109-131] ಮೊದಲ ಸಲ ತಮ್ಮ ವೈಶ್ಯ ವರ್ಗಕ್ಕೆ ಅನಾಯಾಸವಾಗಿ ಸಿಕ್ಕ ಸ್ವಾತಂತ್ರ್ಯ ಮತ್ತು ಸಾಮಾಜಿಕ ಅಂತಸ್ತು ಕಂಡು ಪ್ರಸನ್ನಗೊಂಡ ಸಾರ್ಥಾಧಿಪತಿಗಳು, ಜೈನ ಸಮಾಜಕ್ಕೆ ಪೂರ್ಣ ಪ್ರಮಾಣದ ಆರ್ಥಿಕ ದೃಢತೆ ದಕ್ಕಲು ಮುಕ್ತ ಹಸ್ತರಾಗಿ ನೆರವಾದರು. ಈ ಸಂತೋಷ ಸೌಹಾರ್ದ, ಸಹಕಾರಗಳು ಪ್ರಾಕೃತ ಸಂಸ್ಕೃತ, ಕನ್ನಡ, ತಮಿಳು, ಗುಜರಾತಿ ಭಾಷೆಗಳ ಜೈನ ಗ್ರಂಥಗಳಲ್ಲಿ ಕೆನೆಕಟ್ಟಿದೆ. ರಾಜಾಸ್ತಾನಿ ಭಾಷೆಯಲ್ಲಿ ಸಿಗುವ ಒಂದೂವರೆ ಸಾವಿರ ವರ್ಷಗಳ ಅಖಂಡ ಜೈನ ವಾಙ್ಮಯದ ಕಥಾ ಸಾಹಿತ್ಯದುದ್ದಕ್ಕೂ ವೈಶ್ಯಕುಲದ ಕಥಾನಾಯಕ ನಾಯಕಿಯರು ಯಥೇಚ್ಛವಾಗಿ ಕಾಣುತ್ತಾರೆ.

ಮಹಾವೀರನಿಗೆ ಕೇವಲಜ್ಞಾನ ಪ್ರಾಪ್ತವಾದ ೬೬ ದಿನಗಳಾದ ಮೇಲೆ, ಅವರ ದಿವ್ಯಧ್ವನಿ ಹೊರಡುವ ಸಮವಸರಣ ಮಂಟಪಕ್ಕೆ ಇಂದ್ರಭೂತಿ ಗೌತಮನೆಂಬ ಬ್ರಾಹ್ಮಣನ ಪ್ರವೇಶವಾಗುತ್ತದೆ. ಈತ ವೇದವೇದಾಂಗ ಪಾರಂಗತನಾಗಿದ್ದು ತಾನು ಜ್ಞಾನ ಪಾರಮ್ಯವನ್ನು ಕಂಡವನೆಂಬ ಹೆಮ್ಮೆಯಿಂದಿದ್ದನು. ಈತನಲ್ಲಿಗೆ ಇಂದ್ರನು ಬಂದು ಜೈನ-ಸಿದ್ಧಾಂತ ಸಂಬಂಧವಾಗಿ ಪ್ರಶ್ನಿಸಿದನು. ಇಂದ್ರಭೂತಿಗೆ ಆ ಸ್ಯಾದ್ವಾದ ಸಿದ್ಧಾಂತವನ್ನು ಅರ್ಥೈಸಲಾಗದೆ ತಾನೇ ಮಹಾವೀರನಲ್ಲಿಗೆ ಬಂದನು. ಸಮವಸರಣದ ಹತ್ತಿರ ಬಂದಾಗ ಅಲ್ಲಿನ ಮಾನಸ್ತಂಭ ನೋಡಿದೊಡನೆ ಇಂದ್ರಭೂತಿಯ ಗರ್ವಭಂಗವಾಯಿತು. ಅಹಂಕಾರದ ನಿರಸನದೊಂದಿಗೆ ದಿವ್ಯಧ್ವನಿಯ ಅರ್ಥವೂ ಸಾಧ್ಯವಾಯಿತು. ಬ್ರಾಹ್ಮಣ ಇಂದ್ರಭೂತಿಯು ಮತಾಂತರಗೊಂಡು ಮಹಾವೀರರ ಪ್ರಥಮಗಣಧರನಾದನು. ಇಂದ್ರಭೂತಿಯ ಇಬ್ಬರು ತಮ್ಮಂದಿರು ಅಗ್ನಿಭೂತಿ ಮತ್ತು ವಾಯುಭೂತಿಯೂ ಸಹ, ಸಹೋದರನ ಮಾರ್ಗ ಹಿಡಿದು ಮತಾಂತರವಾದರು. ಇಂದ್ರಭೂತಿ, ಅಗ್ನಿಭೂತಿ, ವಾಯುಭೂತಿಯರೊಂದಿಗೆ ಇನ್ನೂ ಎಂಟು ಜನ ಬ್ರಾಹ್ಮಣರು ಸೇರಿ ಒಟ್ಟು ಹನ್ನೊಂದು ಜನ ಬ್ರಾಹ್ಮಣರು ಜೈನರಾಗಿ ಮಹಾವೀರರ ಪ್ರಮುಖ ಗಣಧರ ಶಿಷ್ಯರಾದರು. ಇವರು ಜಿನಧರ್ಮ ಪ್ರವರ್ತನಕ್ಕೆ ಕೇಂದ್ರ ಚಾಲಕರಾದರು. ತೀರ್ಥಂಕರರ ದಿವ್ಯಧ್ವನಿಯನ್ನಾಲಿಸಿ ಜೈನಾಗಮ ಪಾರಂಗತರಾದರು. ಇವರು ಸಮಸ್ತ ಜೈನಶಾಸ್ತ್ರ ಚಾರಿತ್ರ್ಯ ವಿಧಿಗಳನ್ನೂ ರಚಿಸಿದ ಆದ್ಯರಾದರು.ಇವರ ಪ್ರಭಾವದಿಂದ ಜೈನ ಪ್ರಭಾವವೂ ತೀಕ್ಷ್ಣತರವಾಗಿ ಹಬ್ಬಿತು. ಮಹಾವೀರರ ಧರ್ಮೋಪದೇಶ ಮಂಟಪದಲ್ಲಿ ೧೪ ಸಾವಿರ ಸನ್ಯಾಸಿಗಳೂ ೩೬ ಸಾವಿರ ಸನ್ಯಾಸಿನಿಯರೂ ೧,೫೯,೦೦೦ ಶ್ರಾವಕರೂ ೩,೧೮,೦೦೦ ಶ್ರಾವಕಿಯರೂ ಸೇರುತ್ತಿದ್ದರು. ಜೈನ ವಾಙ್ಮಯದ ಕಥಾ ಸಾಹಿತ್ಯದಲ್ಲಿ ಇಂದ್ರಭೂತಿ, ಅಗ್ನಿಭೂತಿ,

ವಾಯುಭೂತಿಯರು ಬ್ರಾಹ್ಮಣ ಮತದಿಂದ ಜೈನಮತಕ್ಕೆ ಮತಾಂತರಗೊಳ್ಳುವ ಪಾತ್ರಗಳ ವಸ್ತು ಅಂಥ ಆಶಯದ ಸಂಕೇತವಾದರು. ಜೈನ ಕಥೆ, ಕಾವ್ಯಗಳಲ್ಲಿ ರಾಜರು, ಮಂತ್ರಿಗಳು, ಸೇನಾನಿಗಳು, ವ್ಯಾಪಾರಿಗಳು ಜೈನ ಮುನಿಯ ಉಪದೇಶ ಕೇಳಿ ದೀಕ್ಷೆಯನ್ನು ಕೈಗೊಳ್ಳುವುದು ಮತಾಂತರದ ಮಾಹಿತಿಯಾಗಿದೆ.

ಜೈನಧರ್ಮ ಮೂಲಭೂತವಾಗಿ ಬ್ರಹ್ಮಸೃಷ್ಟಿಯನ್ನು ಒಪ್ಪುವುದಿಲ್ಲ. ಆಧ್ಯಾತ್ಮಿಕ, ಸಾಮಾಜಿಕ ಜಾತೀಯ ವ್ಯವಸ್ಥೆಯಲ್ಲಿ ಶ್ರೇಣೀಕೃತ ವರ್ಗೀಕರಣವನ್ನಾಗಲಿ, ಬ್ರಾಹ್ಮಣ ಶ್ರೇಷ್ಠತೆಯನ್ನಾಗಲಿ ಜೈನಧರ್ಮ ಮಾನ್ಯ ಮಾಡುವುದಿಲ್ಲ. ಜಿನಸೇನಾಚಾರ್ಯನು ಆದಿಪುರಾಣದಲ್ಲಿ ಹೇಳಿರುವುದನ್ನು ಉಲ್ಲೇಖಿಸಬಹುದು:

> ಮನುಷ್ಯ ಜಾತಿರ್ ಏಕೈವ ಜಾತಿನಾಮೋದಯೋದ್ಭವಾ
> ವೃತ್ತಿಭೇದಾಹಿತಾದ್ ಭೇದಾಚ್ಚಾತುರ್ವಿಧ್ಯಮ್ ಇಹಾಶ್ನುತೇ। (೩೭-೪೫)

ಇದನ್ನೇ ಪಂಪ ಮಹಾಕವಿ 'ಮನುಷ್ಯಜಾತಿ ತಾನೊಂದೆ ವಲಂ' ಎಂದು ಕನ್ನಡಿಸಿರುವುದು. ಇಡೀ ಮಾನವಕುಲ ಒಂದು ಮತ್ತು ಸಮಾನವೆಂದು ಸಾರಿದ ಜಿನಧರ್ಮ ಕಾಲಕ್ರಮೇಣ ಉಳಿದ ಧರ್ಮಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ಐತಿಹಾಸಿಕ ಜರೂರು ಒದಗಿತು. ಇಂಥ ಒಡಂಬಡಿಕೆಯೊಂದರ ಅನಿವಾರ್ಯವನ್ನು ಮೊದಲು ಮನಗಂಡವರು ಮಹಾಪುರಾಣದ ಜಿನಸೇನಾಚಾರ್ಯನೆಂದು ಹೇಳಿದ್ದಾಗಿದೆ. ಋಷಭ ತೀರ್ಥಂಕರನನ್ನೇ ಜೈನಬ್ರಹ್ಮನೆಂದು (ಆದಿ-ದೇವ, ಪ್ರಜಾಪತಿ) ಕಲ್ಪಿಸಿದರು: ಅವರಿಂದ ಜೈನವೇದಗಳನ್ನು ಹೇಳಿಸಿದರು. ಈ ಆದಿದೇವರಿಂದ ಕ್ಷತ್ರಿಯ, ವೈಶ್ಯ ಶೂದ್ರ ಎಂಬ ಜಾತಿ ವಿಂಗಡಿಸಿದರು (ಬ್ರಹ್ಮಶಿವ : ಸಮಯ ಪರೀಕ್ಷೆ : ೨-೧೪, ೧೫). ಜೈನ ಸಿದ್ಧಾಂತಕ್ಕೆ ಅವಿರೋಧವಾದ ರೀತಿಯಲ್ಲಿ ಆದಿದೇವರೇ ಸೃಷ್ಟಿಕರ್ತರು; ಅವರು ಲೋಕವನ್ನು ಸೃಷ್ಟಿಸಲಿಲ್ಲವಾದರೂ ಮಾನವ ಸಮುದಾಯದ ಸಮಾಜವನ್ನು ವ್ಯವಸ್ಥೆಗೊಳಿಸಿದರು-ಎಂದು ಪ್ರತಿಪಾದಿಸಿದರು. ಅಂದರೆ ಆದಿಮಾನವ ಸಮಾಜವು ಅನಾಯಕತ್ವದಿಂದ ಸ್ವೇಚ್ಛಾಚಾರಿಗಳಾದಾಗ ಆದಿದೇವನು ಶಸ್ತ್ರಧಾರಿಯಾಗಿ ನಿಂತು ಸುಸ್ಥಿರಗೊಳಿಸಿ ಕ್ಷತ್ರಿಯ ಜಾತಿಗೆ ಕಾರಣನಾದನು. ಜನರನ್ನು ವಿವಿಧ ವೃತ್ತಿಗಳಿಗೆ ಅಣಿಗೊಳಿಸಿದ ಹಂತದಲ್ಲಿ ವೈಶ್ಯರು, ಶೂದ್ರರು (ವೃತ್ತಿಪರರು) ಹುಟ್ಟಿದರು. ಈ ಸಮಾಜ ರಚನೆಯಾದ ಮೇಲೆ ಮುಂದೆ ಋಷಭನು ಕೇವಲಜ್ಞಾನಿಯಾದನು. ಆತನ ಮಗನಾದ ಭರತನು ಹೊಸದಾಗಿ ಪರೀಕ್ಷೆಗಳನ್ನು ನಡೆಸಿ ಪೂಜಾದಿಗಳಿಗಾಗಿ ಆಧ್ಯಾತ್ಮಿಕ ಜ್ಞಾನಿಗಳಾದ ದೇವ-ಬ್ರಾಹ್ಮಣರನ್ನು ಏರ್ಪಡಿಸಿದನು (ಜಿನಸೇನಾಚಾರ್ಯ : ಆದಿಪುರಾಣ : ಸಮಯಪರೀಕ್ಷೆ ೨-೨೮). ಜೈನ ಸಮಾಜದಲ್ಲಿ ಮುಂದೆ ಜೈನ ಬ್ರಾಹ್ಮಣವೆಂಬ ವರ್ಗವೊಂದು/ವರ್ಣವ್ಯವಸ್ಥೆಯೊಂದು ಉಂಟಾದದ್ದು ಈ ರೀತಿಯಾಗಿ. ಪ್ರಾಯಃ ಜೈನ ಧರ್ಮಕ್ಕೆ ಮತಾಂತರಗೊಂಡ ಪ್ರಾರಂಭದ ಬ್ರಾಹ್ಮಣರೇ ಜೈನ ಬ್ರಾಹ್ಮಣರೆನಿಸಿಕೊಂಡಿರಬೇಕು. ಅಂದರೆ ೮-೯ನೆಯ ಶತಮಾನದ ವೇಳೆಗೆ ಜೈನ ಸಮಾಜದಲ್ಲಿಯೇ ಜೈನ ಬ್ರಾಹ್ಮಣರು ಪ್ರತ್ಯೇಕವಾಗಿ ಪ್ರತಿಷ್ಠಿತರಾಗಿದ್ದರು. ಇದಕ್ಕೆ ಸಿಗುವ ಪ್ರಥಮ ಆಧಾರ ಜಿನಸೇನನ ಆದಿಪುರಾಣ. ಇದರಿಂದಾಗಿ ಸಮಾಜದೊಳಗೆ ಧಾರ್ಮಿಕ ಮತ್ತು ಇತರ ಪೂರಕ ಆಚರಣೆಗಳಿಗೆ ವೈದಿಕ ಬ್ರಾಹ್ಮಣರನ್ನು ಕರೆಯುವ ಪ್ರಮೇಯ ಬರಲಿಲ್ಲ.

ಕ್ರಿ.ಪೂ.ದ ಕಡೆಯ ಹಾಗೂ ಕ್ರಿ.ಶ. ದ ಆರಂಭದ ಶತಮಾನಗಳಲ್ಲಿ ನಡೆಯುತ್ತಿದ್ದ ವೈಯಕ್ತಿಕ

ಹಾಗೂ ಸಾಮುದಾಯಿಕ ಮತಪರಿವರ್ತನೆಗಳನ್ನೂ ತತ್ಸಂಬಂಧವಾದ ಸಂಘರ್ಷ-ಸವಾಲುಗಳನ್ನೂ ಜೈನ ಸಾಹಿತ್ಯ ಕಥಾಂತರ್ಗತ ವಸ್ತು-ಪಾತ್ರಗಳನ್ನಾಗಿ ಅಳವಡಿಸಿದ್ದಾರೆ : ಈ ಪ್ರಾಚೀನ ಸಾಹಿತ್ಯ ವಸ್ತುವನ್ನು ಸಾಮಾಜಿಕ ದೃಷ್ಟಿಕೋನದಿಂದ ವಿಶ್ಲೇಷಿಸಿದಾಗ ಅನೇಕ ಮಾಹಿತಿಗಳು ಹೊರಬೀಳುತ್ತವೆ. ಹೊಸದಾಗಿ ಜೈನಮತಕ್ಕೆ ಸೇರಿದ ಬ್ರಾಹ್ಮಣರನ್ನು, ಹಾಗೆ ಸೇರದಿದ್ದ ಇತರ ಬ್ರಾಹ್ಮಣರು, ಎಷ್ಟು ಅಸಡ್ಡೆ ಮತ್ತು ಕೋಪ ತಾಪಗಳಿಂದ ಕಾಣುತ್ತಿದ್ದರೆಂಬುದಕ್ಕೆ ದೃಷ್ಟಾಂತಗಳು ಪ್ರಾಚೀನ ಉತ್ತರಾಧ್ಯಯನದಲ್ಲಿಯೇ ಸಿಗುತ್ತದೆ. (XXV ಯಜ್ಞೀಯ). ಜಯಘೋಷನನ್ನು ಇದೇ ಕಾರಣಕ್ಕಾಗಿ ತುಚ್ಛವಾಗಿ ಕಂಡರು (ಅದೇ : ೫೨ರಿಂದ ೨೮) : ಇದು ಕ್ರಿ.ಪೂ. ಕಾಲಕ್ಕೆ ಸೇರಿದ ಘಟನೆ. ಕ್ರಿ.ಶ. ಒಂಬತ್ತನೆಯ ಶತಮಾನದಲ್ಲಿ ಜೈನತ್ವಕ್ಕೆ ಸರಿದ ತಮ್ಮ ಕೋಮಿನವರನ್ನು ಬ್ರಾಹ್ಮಣರು ಹೇಗೆ ಚುಡಾಯಿಸಿ, ವಿಡಂಬಿಸಿ, ಅಪಮಾನಿಸುತ್ತಿದ್ದರೆಂಬುದಕ್ಕೆ ಜಿನಸೇನಾಚಾರ್ಯರ ಆದಿಪುರಾಣ (ಪೂರ್ವಪುರಾಣ) ದಲ್ಲಿಯೇ ಉದಾಹರಣೆಗಳು ಸಿಗುತ್ತವೆ. ಒಂದು ನಿದರ್ಶನ:

"ಆಮೇಲೆ ಒಬ್ಬಾನೊಬ್ಬ ಮಿಥ್ಯಾದೃಷ್ಟಿ ಬ್ರಾಹ್ಮಣನು ಜಾತಿಮತದ ಆವೇಶದಿಂದ ಈ ಜೈನ ಬ್ರಾಹ್ಮಣನನ್ನು 'ನೀನು ಈ ದಿವಸವೇ ದೇವತ್ವ ಹೊಂದಿದೆಯೋ? ನೀನು ಇಂಥವನ ಮಗನಲ್ಲವೆ? ನಿನ್ನ ಹೆಂಡತಿ ಇಂಥವನ ಮಗಳಲ್ಲವೇ? ಯಾವ ಕಾರಣದಿಂದ ನಮ್ಮಂಥವರನ್ನು ಸತ್ಕರಿಸದೆ ಹೀಗೆ ಮೂಗನ್ನು ಮೇಲೆ ಮಾಡಿದವನಾಗಿ ಹೋಗುತ್ತಿ? ಜಾತಿಯು ಮೊದಲಿನದೇ. ಕುಲವೂ ಮೊದಲಿನದೇ. ನೀನು ಮೊದಲು ಯಾವನಾಗಿದ್ದಿಯೋ ಅವನೇ ಆಗಿರುತ್ತಿ. ಹಾಗಿದ್ದರೂ ನೀನು ನಿನ್ನನ್ನು ದೇವತಾ ಸ್ವರೂಪನನ್ನಾಗಿ ತಿಳಿಯುತ್ತಿ. ನೀನು ದೇವತಾ ಅತಿಥಿ ಪಿತೃ ಅಗ್ನಿ ಕಾರ್ಯಗಳಲ್ಲಿ ಅಪವಿತ್ರನೂ ಗುರುದ್ವಿಜ ದೇವರುಗಳ ನಮಸ್ಕಾರದಿಂದ ಪರಾನ್ಮುಖನೂ ಜಿನ ಸಂಬಂಧಿಯಾದ ದೀಕ್ಷೆಯನ್ನು ಹೊಂದಿದವನೂ ಆದ ನಿನಗೆ ಯಾವ ಅತಿಶಯ ಉಂಟಾಗಿರುತ್ತದೆ? ಭೂಮಿಯನ್ನು ಸ್ಪರ್ಶಿಸುವವನೂ ಪಾದಚಾರಿಯೂ ಆಗಿರುವ ನೀನು ಈಗಲೂ ಮನುಷ್ಯನಾಗಿರುತ್ತಿ". ಈ ಪ್ರಕಾರವಾಗಿ ಕೋಪದಿಂದ ದೂಷಿಸಲ್ಪಟ್ಟವನಾದ ಜೈನ ಬ್ರಾಹ್ಮಣನು ಯುಕ್ತಿ ಚತುರಗಳಾದ ಮಾತುಗಳಿಂದ ಮುಂದೆ ಹೇಳುವ ಪ್ರಕಾರವಾಗಿ ಉತ್ತರಿಸಿದನು : 'ತನ್ನನ್ನು ದ್ವಿಜನಾಗಿ ತಿಳಿಯುವ ಎಲೈ ಮನುಷ್ಯನೆ, ನಮಗೆ ಜಿನನು ತಂದೆಯು' (ಜಿನಸೇನಾಚಾರ್ಯ : **ಆದಿಪುರಾಣ**, ಪರ್ವ ೩೯, ಶ್ಲೋಕಗಳು ೧೦೮ರಿಂದ ೧೧೪; ಕನ್ನಡ ಅನುವಾದ, ಎರ್ತೂರಿರು ಶಾಂತಿರಾಜ ಶಾಸ್ತ್ರೀ, ಮೂರನೆಯ ಮುದ್ರಣ ೧೯೯೩, ಪುಟ ೬೩೮).

ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಮತಾಂತರದ ಸಂಘರ್ಷ ಸೂಕ್ಷ್ಮಗಳನ್ನು ಕ್ರಿ.ಶ. ೮೦೦ರಲ್ಲಿಯೇ ಭ್ರಾಜಿಷ್ಣು ಅದ್ಭುತವಾಗಿ ಧ್ವನಿಸುವ ಒಂದು ಪ್ರಸಂಗವನ್ನು ಸೃಷ್ಟಿಸಿದ್ದಾನೆ; ಚಾರಿತ್ರಿಕ ಮಾಹಿತಿಗಳಿಗೆ ಪೂರಕ ನೆಲೆಯಲ್ಲಿ ನಿಲ್ಲುವ ಈ ಸಾಹಿತ್ಯಕ ಸಾಮಗ್ರಿ ಮನನೀಯವಾಗಿದೆ. ಕನ್ನಡ ಸಾಹಿತ್ಯದಲ್ಲಿ ಸಿಗುವ ಮೊಟ್ಟಮೊದಲನೆಯ ಕೃತಿ ಭ್ರಾಜಿಷ್ಣುವಿನ **ಆರಾಧನಾ ಕರ್ಣಾಟ ಟೀಕಾ.** ಜೈನ ಸಮಾಜದ ಸಮೃದ್ಧ ಚಿತ್ರದೊಂದಿಗೆ ಮತಾಂತರದ ವಿಚಾರ ಅದರಲ್ಲಿದೆ. ಅದರ ಎಲ್ಲ ೧೯ ಕಥೆಗಳ ಮಾಹಿತಿಯನ್ನು ವಿಶ್ಲೇಷಿಸಿ ವಿಮರ್ಶಿಸುವುದು ಈ ಸಂಪ್ರಬಂಧದ ಚೌಕಟ್ಟಿಗೆ ಮೀರಿದ್ದು. ಪ್ರಸ್ತುತ ವಿವೇಚನೆಗೆ ಅರ್ಥಪೂರ್ಣವಾಗಿ ಒದಗುವ ಪ್ರಾತಿನಿಧಿಕ ಸಂದರ್ಭವನ್ನು ಚರ್ಚಿಸುತ್ತೇನೆ. ವಡ್ಡಾರಾಧನೆ ಮೊದಲನೆಯ ಕಥೆಯಾದ ಸುಕುಮಾರ ಸ್ವಾಮಿಯ ಕಥೆಯಲ್ಲಿ ನಾಗಶ್ರೀಯು ಜೈನ

ಅಣುವ್ರತ ಸ್ವೀಕರಿಸುತ್ತಾಳೆ. ಅವಳ ತಂದೆ ಅರಮನೆಯ ಪುರೋಹಿತನಾದ ಸೋಮಶರ್ಮ, ತಾಯಿ ತ್ರಿವೇದಿ (ಮೂರು ವೇದಗಳ ಜ್ಞಾನಿ). ಬ್ರಾಹ್ಮಣ ಕನ್ಯೆಯಾದ ನಾಗಶ್ರೀ ಜೈನ ಶ್ರಾವಕ ವ್ರತಗಳನ್ನು ಕೈಗೊಂಡದ್ದು ಸೂರ್ಯಮಿತ್ರ ಮುನಿಯಲ್ಲಿ. ಆತನೂ ಜೈನನಾಗಿ ಮತಾಂತರಗೊಂಡ ಬ್ರಾಹ್ಮಣ. ನಾಗಶ್ರೀಗೆ ತಂದೆ ಹೇಳಿದ ಮಾತು : 'ಮಗಳೆ ನಾಗಶ್ರೀ ನಾಮುಂ ಪಾರ್ವರೆಮುಂ ಲೋಕಕ್ಕೆಲ್ಲಮಗ್ಗಳಂ ಲೋಕದಿಂದಂ ಪೂಜಿತರೆಮುಂ ಎಮ್ಮಿಂದಗ್ಗಳಂ ಪೆಱರಿಲ್ಲ ಅದಱಿಂದಂ ಸವಣರಧರ್ಮಮಂ ನಮಗೆ ಕೊಳಲಾಗ ಬಿಸುಡುಮಗಳೆ' [ಹಂಪನಾ(ಸಂ) : ೧೯೯೩ : ೧೧] ತಂದೆ ಮಗಳು ಜೈನಯತಿಯ ಹತ್ತಿರ ಹೋಗುವಾಗ ದಾರಿಯಲ್ಲಿ ನಡೆದ ಘಟನೆಗಳಿಂದ, ಐದೂ ಅಣುವ್ರತಗಳು ಇರಲಿ ಎಂದು ತಂದೆ ಅನುಮೋದಿಸುತ್ತಾನೆ. ಈ ತಂದೆಗೂ ಜೈನ ಮುನಿಗೂ ವಾಗ್ವಾದವಾಗಿ, ದೊರೆಯತನಕ ದೂರು ಹೋಗುತ್ತದೆ. ರಾಜನೂ ಜೈನಸನ್ಯಾಸಿಯ ಹತ್ತಿರ ಬರುತ್ತಾನೆ. ನಾಗಶ್ರೀ ಪೂರ್ವಭವ ಸ್ಮರಣೆಯಿಂದ ತನ್ನ ಅದ್ಭುತಜ್ಞಾನ ಪ್ರದರ್ಶಿಸುತ್ತಾಳೆ. ಅದರ ಪ್ರಭಾವದಿಂದ ಅರಸನೂ ಬ್ರಾಹ್ಮಣನೂ ಬ್ರಾಹ್ಮಣಿಯೂ ನಾಗಶ್ರೀಯೂ ಜೈನದೀಕ್ಷೆ ಸ್ವೀಕರಿಸುತ್ತಾರೆ.

ಈ ಘಟನೆಯ ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಮನಗಾಣಬೇಕು. ಪರಸ್ಪರ ವಿರೋಧ ನೆಲೆಯಲ್ಲಿ ಕಾಣಿಸಿಕೊಂಡ ವೈದಿಕ-ಅವೈದಿಕ ಮತಗಳೆರಡು ಮುಖಾಮುಖಿಯಾಗಿ ನಿಂತ ಸಂದರ್ಭವಿದು. ಬ್ರಾಹ್ಮಣ ಮತ್ತು ಜೈನ ಈ ಉಭಯ ಸಮಾಜಗಳಲ್ಲಿದ್ದ ವೈರುಧ್ಯಗಳನ್ನು ಹಿನ್ನೆಲೆಗೆ ಸರಿಸಿ, ಒಂದು ಹೊಂದಾಣಿಕೆಯ ಸುವರ್ಣ ಮಾಧ್ಯಮವನ್ನು ಹುಡುಕಿದುವು. ಇವೆರಡರ ನಡುವೆ ಮತಾಂತರ ವ್ಯಾಪಕವಾಗಿ ನಡೆಯಿತು; ಈ ಮತಾಂತರವನ್ನು ನಾಗಶ್ರೀ ಪ್ರಕರಣವೂ ಬಿಂಬಿಸುತ್ತದೆ. ಬ್ರಾಹ್ಮಣರು ಜೈನರಾಗುವುದು ಸುಲಭವಿತ್ತು. ಅದು ಅಂದಿನ ಸಮಾಜದಲ್ಲಿ ಅಂಗೀಕೃತವಾಗಿತ್ತು. ಇವರೆಡು ಸಮಾಜಗಳಲ್ಲಿ ಮಧುರ ಬಾಂಧವ್ಯ ಸಾಧ್ಯವಾಯಿತೆಂದು ತೀರ್ಮಾನಿಸುವಂತಿಲ್ಲ. ಜೈನರಾಗುವುದರಿಂದ ಅಂದು ದಕ್ಕುತ್ತಿದ್ದ ಸಾಮಾಜಿಕ, ಆರ್ಥಿಕ, ರಾಜಕೀಯ ಪ್ರತಿಷ್ಠೆ, ಇತರ ಅನುಕೂಲಗಳನ್ನು ಗಮನಿಸಿದ ಬ್ರಾಹ್ಮಣರು ಜೈನ ಸಮಾಜದೊಳಗೆ ಸೇರಲು ಯಾವ ಹಿಂಜರಿಕೆಯನ್ನೂ ತೋರಲಿಲ್ಲ.

ಬ್ರಾಹ್ಮಣರ ಮೂಲ ಪ್ರವೃತ್ತಿ ಮತ್ತು ಸ್ವಭಾವವೊಂದನ್ನು ಈ ಪ್ರಕರಣವು ಸೂಕ್ಷ್ಮವಾಗಿ, ಸಮರ್ಥವಾಗಿ ಪ್ರತಿಪಾದಿಸಿದೆ. ಅನುಕೂಲ ಸಿಗುತ್ತದೆಯೆಂದಾದರೆ ಅವರು ಯಾವ ಪಕ್ಷಕ್ಕೆ, ಮತಕ್ಕೆ, ಗುಂಪಿಗೆ, ದೇಶಕ್ಕೆ, ಜೀವನ ವಿಧಾನಕ್ಕೆ, ಆಹಾರ ಪದ್ಧತಿಗೆ ಬಹುಬೇಗ ಬದಲಾಗುವುರೆಂಬುದಕ್ಕೆ ಭಾರತದ ಸಾವಿರಾರು ವರ್ಷಗಳ ಚರಿತ್ರೆಯುದ್ದಕ್ಕೂ ಸಾಕ್ಷಿ ಪುರಾವೆಗಳಿವೆ. ಮಿತಭಾಷಿ ಭ್ರಾಜಿಷ್ಣುವಿನ ಸೂಕ್ಷ್ಮ ಕಲಾವಂತಿಕೆಯ, ಕುಸುರಿ ಕೆಲಸದ ಸ್ವಾರಸ್ಯವನ್ನು ವಡ್ಡಾರಾಧನೆಯ ಕಥೆಗಳಲ್ಲಿ ಕಾಣುತ್ತೇವೆ. ಅನೇಕ ಸಂಗತಿಗಳನ್ನು ಸಣ್ಣ ಪುಟ್ಟ ಪಾತ್ರ, ಘಟನೆ, ಸನ್ನಿವೇಶಗಳ ಮೂಲಕ ಧ್ವನಿಸುವ ಪ್ರತಿಭಾಶಾಲಿ ಭ್ರಾಜಿಷ್ಣು.

ರಾಜಸತ್ತೆ ಪ್ರಬಲವಾಗಿದ್ದ ಕಾಲದಲ್ಲಿ ಸಮಾಜವನ್ನು ನಿಯಂತ್ರಿಸುತ್ತಿದ್ದ ಪ್ರಭಾವಿ ಶಕ್ತಿಗಳು ರಾಜ, ಮಂತ್ರಿ, ಪುರೋಹಿತ, ವರ್ತಕ ಸಮುದಾಯ. ಈ ನಾಗಶ್ರೀ ಘಟನೆಯಲ್ಲಿ ರಾಜ, ಮಂತ್ರಿ, ಪುರೋಹಿತ, ಪ್ರಜೆ-ಈ ನಾಲ್ಕೂ ವರ್ಗ. ಅಧಿಕಾರಿಗಳಿಂದ ಸಾಮಾನ್ಯರವರೆಗೆ, ಮತಾಂತರವಾಗಿರುವುದನ್ನು ತೋರಿಸಿದೆ : ಅಂದರೆ ಆಳುವ ವರ್ಗದ ಬೆಂಬಲ ಪಡೆದೇ ಈ ಕೆಲಸ ನಡೆದಿದೆ.

ಎರಡು ಪ್ರಬಲ ಸಂಸ್ಕೃತಿ-ಸಂಪ್ರದಾಯಗಳ ನಡುವೆ ಸೆಣಸಾಟ ನಡೆದಾಗ ಎರಡರಲ್ಲಿ ಒಂದು ಸೋಲಬೇಕು ಅಥವಾ ಇನ್ನೊಂದು ಗೆಲ್ಲಬೇಕು. ಆದರೆ ಸೋಲು ಗೆಲುವು ಸಾಧ್ಯವಾಗದೆ ಹೋದಾಗ, ಎರಡೂ ಸಮಹುದ್ದರಿಗಳೆಂಬುದು ಮನವರಿಕೆಯಾದಾಗ, ಅವೆರಡರ ನಡುವೆ ವ್ಯವಹಾರ ಕುದುರಿ ಪರಸ್ಪರರಲ್ಲಿ ವಿನಿಮಯದ ಅಳವಡಿಕೆ ನಡೆಯುತ್ತದೆ. ವೈದಿಕ ಮತ್ತು ಜೈನ ಸಂಸ್ಕೃತಿ ಪರಂಪರೆಗಳು ಒಂದನ್ನೊಂದು ಶರಣಾಗತಿಗೊಳಿಸಲು ಆಗದಿದ್ದಾಗ ಅವರೆಡರ ನಡುವೆ ಮೈತ್ರಿ ಏರ್ಪಟ್ಟು, ಒಂದು ಇನ್ನೊಂದರ ತಂಟೆಗೆ ಹೋಗದಿರುವಂಥ ಅಲಿಖಿತ ಒಡಂಬಡಿಕೆ ಮಾಡಿಕೊಂಡುವು. ಅವೆರಡು ಸಮಾಜಗಳಲ್ಲಿ ವೈವಾಹಿಕ ಸಂಬಂಧಕ್ಕೂ ಮತಾಂತರಕ್ಕೂ ಅವಕಾಶ ಮುಕ್ತದ್ವಾರವಾಯಿತು.

ಮತಾಂತರವನ್ನು ಕುರಿತು ಮುಂದಿನ ಪುಟಗಳಲ್ಲಿ ವಿವರಣೆಗೆ ತೊಡಗುವುದಕ್ಕೆ ಮೊದಲು ಮತಾಂತರದ ಪರಿಕಲ್ಪನೆ ಕುರಿತು ಸೈದ್ಧಾಂತಿಕ ನಿರ್ವಚನದ ಅಗತ್ಯವಿದೆ.

ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಹೋಗುವುದು ದೇಶಾಂತರ. ಒಂದೇ ದೇಶದಲ್ಲಿಯೂ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗುವುದು ಸ್ಥಳಾಂತರ; ಇದನ್ನು ವಲಸೆ ಹೋಗುವುದು, ಗುಳೆಹೋಗುವುದು ಎನ್ನುತ್ತಾರೆ. ಒಂದು ಮತದಿಂದ ಇನ್ನೊಂದು ಮತಕ್ಕೆ ಹೋಗುವುದು ಮತಾಂತರ. ಮತಾಂತರವೂ ಒಂದು ಬದಲಾವಣೆ, ಮನೋಧರ್ಮದಲ್ಲಾದ ಪರಿವರ್ತನೆ, ಒಬ್ಬ ವ್ಯಕ್ತಿಯಿಂದ ತೊಡಗಿ ಇಡೀ ಒಂದು ದೊಡ್ಡ ಗುಂಪು ಹೀಗೆ ಮತಾಂತರಗೊಳ್ಳಬಹುದು. ಭಾರತದಲ್ಲಿಯೇ ೧೫ನೆಯ ಶತಮಾನದಿಂದ ಕೋಟ್ಯಂತರ ಜನ ಮುಸಲ್ಮಾನರಾದರು. ೧೭ನೆಯ ಶ.ದಿಂದ ಲಕ್ಷಾಂತರ ಜನ ಕ್ರೈಸ್ತರಾದರು; ನಮ್ಮ ಕಾಲದಲ್ಲಿಯೇ ಬಾಬಾಸಾಹೇಬ್ ಡಾ. ಬಿ. ಆರ್. ಅಂಬೇಡ್ಕರರ ಮುಂದಾಳುತನದಲ್ಲಿ ಹತ್ತು ಲಕ್ಷ ಜನ ಮಹರ್ ಅಸ್ಪೃಶ್ಯರು ೧೪-೧೦-೧೯೫೬ ರಂದು ವಿದ್ಯುಕ್ತವಾಗಿ ಬೌದ್ಧಧರ್ಮಕ್ಕೆ ಮತಾಂತರಗೊಂಡರು. ಕರ್ನಾಟಕದಲ್ಲಿ ೧೨ನೆಯ ಶ. ದ ಕಡೆಯ ಎರಡು ದಶಕ ಮತ್ತು ೧೩ನೆಯ ಶತಮಾನದಲ್ಲಿ ಲಕ್ಷಾಂತರ ಜನ ಜೈನರು ಮತ್ತು ಇತರ ಮತಗಳವರು ವೀರಶೈವ-ಲಿಂಗಾಯಿತರಾದರು. ಈ ರೀತಿ ಮತಾಂತರಗೊಳ್ಳುವುದರ ಹಿಂದೆ ಇರುವ ಆಶಯ ಪ್ರಚೋದನೆಗಳೇನು? ಯಾವ ಮನೋಧರ್ಮ ಈ ಪ್ರಕ್ರಿಯೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಿದೆ? ಇದರಲ್ಲಿ ಏನಾದರೂ ತಾತ್ವಿಕ ಬದ್ಧತೆ ಇಲ್ಲವೇ ಸೈದ್ಧಾಂತಿಕ ನಿಷ್ಠೆ ಇದೆಯೆ? ಕೇವಲ ಭಯ-ಬಲಾತ್ಕಾರಗಳಿಂದ ಮತಾಂತರ ನಡೆದಿದೆಯೆ? ಸ್ವಪ್ರೇರಣೆಯಿಂದ ಮತಾಂತರ ಸಂಭವಿಸಲಿಲ್ಲವೆ?- ಮುಂತಾದ ಪ್ರಶ್ನಾವಳಿಯ ಚೌಕಟ್ಟಿನಲ್ಲಿಟ್ಟು ಮತಾಂತರದ ವಿವೇಚನೆ ನಡೆಸಲು ಅವಕಾಶಗಳಿವೆ.

ಮತಾಂತರವೆಂಬುದು ಉಜ್ವಲ ಭವಿಷ್ಯತ್ತಿನ ನಿರೀಕ್ಷೆಯಿಂದ ಮಾಡಿದ ಜೀವವಿಮೆ. ಮತಾಂತರವನ್ನು ಪ್ರೋತ್ಸಾಹಿಸಬಹುದು, ಬಲಾತ್ಕರಿಸಬಹುದು. ಆದರೆ ಮತಾಂತರವನ್ನು ನಿಷೇಧಿಸುವುದು, ನಿರ್ಬಂಧಿಸುವುದು ಅಸಂವಿಧಾನಾತ್ಮಕವೆನ್ನಲಾಗಿದೆ. ಪ್ರತಿಯೊಂದು ಜೀವಿಯೂ ಸುಖಾಪೇಕ್ಷಿ. ತನಗೆ ಎಲ್ಲಿ ಹೆಚ್ಚು ನೆಮ್ಮದಿ ಅಭಯ, ಅನುಕೂಲ, ಆರ್ಥಿಕ ದೃಢತೆ ಇದೆ, ಸಿಗುತ್ತದೆ, ಸಾಧ್ಯ ಎಂಬ ನಂಬಿಕೆ ಉಂಟಾಗುತ್ತದೆಯೊ ಅಲ್ಲಿಗೆ ಹೋಗಲು, ಅಂಥ ಕಡೆ ಇರಲು

ಬಯಸುತ್ತಾರೆ. ಗುಂಪಿನಲ್ಲಿ ತಂಪು ಎಂಬ ಮನೋಧರ್ಮ ಇರುತ್ತದೆ. ತಾವು ಇರುವ ಕಡೆ ಈ ಸೌಲಭ್ಯಗಳ ಕೊರತೆಯನ್ನೂ ಬೇರೊಂದು ಭಾಗದಲ್ಲಿ ಈ ಸೌಲಭ್ಯಗಳ ಅಸ್ತಿತ್ವವನ್ನೂ ಅನುಭವಿಸುತ್ತಿರುವ ಜನರಲ್ಲಿ ಸಂವೇದನ ಶೀಲರಾದವರು, ದಿಢೀರ್ ನಿರ್ಧಾರ ಕೈಗೊಳ್ಳಬಹುದಾದಂಥವರು ವಲಸೆಗೆ ತೊಡಗುವರು. ಪಶುಪಕ್ಷಿಪ್ರಾಣಿಗಳು ಸಹ ಈ ಪ್ರಕ್ರಿಯೆಗೆ ಹೊರತಲ್ಲ. ರಕ್ಷಣೆಗಾಗಿ, ಸಂತಾನ ವೃದ್ಧಿಗಾಗಿ, ಆಹಾರ ಪೂರೈಕೆಗಾಗಿ, ಸಾವಿರಾರು ಕಿ. ಮೀ. ದೂರದಿಂದ ಹಾರಿ ರಂಗನತಿಟ್ಟಿಗೋ, ಕೊಕ್ಕರೆಬೆಳ್ಳೂರಿಗೊ ಬರುವ ಪಕ್ಷಿಗಳನ್ನು ದೃಷ್ಟಾಂತವಾಗಿ ಹೆಸರಿಸಬಹುದು. ಕಳ್ಳಕಾಕರ ದಾಳಿ, ಶತ್ರು ರಾಜರ ಆಕ್ರಮಣ, ಕ್ಷಾಮಡಾಮರಗಳು, ಭೂಕಂಪಗಳು, ರಾಜ್ಯ-ರಾಷ್ಟ್ರ ಪುನರ್ವಿಂಗಡಣೆ, ಉದ್ಯೋಗಾವಕಾಶಗಳು, ದೇಶವಿಭಜನೆ ಮೊದಲಾದವು ಗೂಳೆಯಕ್ಕೂ ತಕ್ಕಮಟ್ಟಿಗೆ ಮತಾಂತರಕ್ಕೂ ಕಾರಣವಾಗಬಹುದು. ಭಾರತ-ಪಾಕಿಸ್ತಾನ ವಿಭಜನೆ, ಭಾಷಾವಾರು ಪ್ರಾಂತ್ಯರಚನೆ, ಆರ್ಯರ ಆಕ್ರಮಣ-ಇವು ಸಾಮುದಾಯಿಕ ಗೂಳೆಯಕ್ಕೆ ಚರಿತ್ರೆಯ ದಾಖಲೆಗಳು.

ಭಾರತದ ಮೂಲ ನಿವಾಸಿಗರ ಮತಧರ್ಮದ ಸ್ವರೂಪ ನಿಗೂಢವಾಗಿದೆ. ಇನ್ನೂ ತನಕ ಅದು ಪೂರ್ಣವಾಗಿ-ನಿಚ್ಚಳವಾಗಿ ಅನಾವರಣವಾಗಿಲ್ಲ. ಕೆಲವು ಮಹತ್ತರವಾದ ಸಮಾಜೊ - ಇತಿಹಾಸ ಸಂಗತಿಗಳು ಈ ಸಂವಾದಕ್ಕೆ ತಳಕು ಹಾಕಿಕೊಂಡಿವೆ. ಅದರಿಂದ ಈ ಬಗೆಯ ಚರ್ಚೆಗೆ ತೊಡಗುವುದು ಈ ಸಂಪ್ರಬಂಧದ ವ್ಯಾಖ್ಯೆಗೆ ಮೀರಿದ್ದು. ಆದರೆ ಈಗ ಬಹುಮಟ್ಟಿಗೆ ಒಪ್ಪಿತವಾಗಿರುವಂತೆ ಜೈನರು ಹೊರಗಿನಿಂದ ಭಾರತಕ್ಕೆ ಬಂದವರಲ್ಲ, ಇಲ್ಲಿಯೇ ಹುಟ್ಟಿ ಬೆಳೆದು ಬಾಳುತ್ತ ಬಂದ ದೇಸಿಗರು, ದ್ರಾವಿಡ ಬುಡಕಟ್ಟಿನವರು, ಅಹಿಂದೂಗಳು. ಜೈನರನ್ನೂ ಆದಿದ್ರಾವಿಡರು, ಆದಿ ಕರ್ನಾಟಕರು ಎಂದೂ ಕರೆಯಬಹುದು. ಬ್ರಾಹ್ಮಣರು ಪಂಜಾಬು ಮತ್ತು ಸಿಂಧೂ ನದಿಯ ಕಿನಾರೆಯವರು, ಗೋಪೂಜಕರು. ಜೈನರು ಗಂಗಾನದಿಯ ಬಯಲಿನವರು, ದ್ರಾವಿಡರು, ಎಮ್ಮೆ ಪಾಲಕರು. ಬ್ರಾಹ್ಮಣರು, ಜೈನರು, ಬೌದ್ಧರು ಅಲ್ಪಸಂಖ್ಯಾತರು. ಬೌದ್ಧರಿಗಿಂತ ಜೈನರೂ, ಜೈನರಿಗಿಂತ ಬ್ರಾಹ್ಮಣರೂ ಅಧಿಕ ಸಂಖ್ಯೆಯಲ್ಲಿದ್ದಾರೆ. ಒಟ್ಟು ಭಾರತದ ಜನಸಂಖ್ಯೆಯಲ್ಲಿ ಇವರು ಕಡಮೆ : ಬ್ರಾಹ್ಮಣರು ೨% ವರೆಗೂ ಇದ್ದರೆ, ಜೈನರು ೦.೪% ಇದ್ದಾರೆ.

ಭಾರತದಲ್ಲಿ ಇಂದಿಗೂ ಉಳಿದು ಬಂದಿರುವ ಅವೈದಿಕ ಮತಗಳಲ್ಲಿ ಜೈನಮತ ಪ್ರಧಾನವಾಗಿದೆ: ಜೈನಮತ ಅವೈದಿಕ ಶ್ರಮಣ ಸಮಾಜವಾಗಿದ್ದು ಅದಕ್ಕೆ ಸುದೀರ್ಘ ಚಾರಿತ್ರಿಕ ಹಿನ್ನೆಲೆಯ ಸಾತತ್ಯವಿದೆ. ಕ್ರಿ. ಪೂ. ೬ನೆಯ ಶ. ದ ವೇಳೆಗಾಗಲೇ ಕೆಲವು ಅಬ್ರಾಹ್ಮಣ ಮತಗಳು-ಚಾರ್ವಾಕರು, ಆಜೀವಕರು, ನಿಗಂಠರು-ಪ್ರತಿಪಾದಿತವಾಗಿದ್ದುವು. ಆ ಕಾಲದ ಅವೈದಿಕತ್ವದ ಪ್ರತಿಪಾದಕರಲ್ಲಿ ಆರು ಜನ ತೀರ್ಥಂಕರರು (ಪಾಲಿ-ತಿತ್ತಿಯರ : ಪ್ರಾಕೃತ-ತಿತ್ಥಕರ): ಪೂರಣಕಸ್ಸಪ, ಪ್ರಕುಧ ಕಾತ್ಯಾಯನ, ಅಜಿತ ಕೇಶಕಂಬಲಿ, ಮಕ್ಖಲಿ ಗೋಸಾಲ, ಸಂಜಯ ಬೇಲಟ್ಠಿಪುತ್ತ, ನಿಗಂಠನಾಥಪುತ್ತ (ಸಂಸ್ಕೃತ-ನಿಗ್ರಂಥ ನಿರ್ಮೋಹಿ) : ಬುದ್ಧ ದೇವನೂ, ಕೆಲವು ಪ್ರತ್ಯೇಕ ಬುದ್ಧರೂ (ಶಾಲಿಭದ್ರ ಮುಂತಾದವರು) ಇದ್ದರು. ಇವರೆಲ್ಲ ಶಿಷ್ಯಸಮುದಾಯ ಪಡೆದು ಮಾನಿತರಾಗಿದ್ದರು. ಆದರೆ ಹೇಳ ಹೆಸರಿಲ್ಲದ ಹಾಗೆ, ಆಯಾ ಮತಸ್ಥಾಪಕರೊಂದಿಗೆ ಅವರು ಪ್ರತಿಪಾದಿಸಿದ ಪಂಥಗಳೂ ಸತ್ತು ಹೋದುವು. ರಾಜಸತ್ತೆಯ, ಪ್ರಜಾಕೋಟಿಯ ಆಸರೆ- ಬೆಂಬಲಗಳಿದ್ದೂ ಬೌದ್ಧಧರ್ಮ ಭಾರತವನ್ನು

ಬಿಡಬೇಕಾಯಿತು ಬುದ್ಧನಿಗೆ ದಶಾವತಾರಗಳಲ್ಲಿಯೇ ಒಂದು ಜಾಗ ಕಲ್ಪಿಸಿಕೊಡುವುದರೊಂದಿಗೆ ಆತ ಪ್ರತಿಪಾದಿಸಿದ ಧರ್ಮದ, ಪ್ರತ್ಯೇಕ ಮುಂದುವರಿಕೆಗೆ ನಿಲುಗಡೆ ತರಲಾಯಿತು. ನಿಗಂಠನಾಥ ಪುತ್ತ ವರ್ಧಮಾನ ಮಹಾವೀರನು ಪ್ರತಿಪಾದಿಸಿದ ಜೈನಧರ್ಮ ಚಿರಂಜೀವವಾಗಿ ಉಳಿದಿದೆ. ಜೈನಧರ್ಮಕ್ಕೂ ಅಡ್ಡಿಗಳನ್ನು ಒಡ್ಡಿದ್ದುಂಟು; ಆದರೆ ಅದು ಅಪಾಯಗಳನ್ನು ಜೀರ್ಣಿಸಿಕೊಂಡು ಬಾಳುತ್ತ ಬಂದಿದೆ. ಬೌದ್ಧ ಧರ್ಮ ಪುನಶ್ಚೇತನಗೊಳ್ಳದಷ್ಟು ಕಷ್ಟಕೋಟಲೆಗೊಂಡರೂ ಈ ಶತಮಾನದ ಮಧ್ಯಭಾಗದಲ್ಲಿ ಡಾ. ಬಿ. ಆರ್. ಅಂಬೇಡ್ಕರರಿಂದಾಗಿ, ಅದು ಪುನರುಜ್ಜೀವನಗೊಳ್ಳುತ್ತಿದೆ. ಬೌದ್ಧರು ಗಂಗಾತೀರದ ಕಣಿವೆಗಳನ್ನೂ ಹಿಮಾಲಯ ಪರ್ವತ ತಪ್ಪಲನ್ನೂ ತೊರೆದು ಉತ್ತರಕ್ಕೆ ವಲಸೆ ಹೋದರು. ಜೈನ ಗಂಗರು ಗಂಗಪೇರೂರು ತೊರೆದು ಇನ್ನೂ ದಕ್ಷಿಣಕ್ಕೆ ಬಂದರು. ತಮಗೆ ದೊರೆತ ಸವಲತ್ತುಗಳ ಪ್ರಾಬಲ್ಯದಿಂದ ಗರಿಗೆದರಿದ ವೈದಿಕ ಸಮುದಾಯ ಆಂಧ್ರದಲ್ಲಿ ಜೈನರ ನೆಲೆಗಳನ್ನು ಧ್ವಂಸ ಮಾಡುವ ಕೆಲಸವನ್ನು ಮೂರನೆಯ ಶತಮಾನದಿಂದ ಹನ್ನೊಂದನೆಯ ಶತಮಾನದವರೆಗೆ ನಿರಾತಂಕವಾಗಿ ಮುಂದುವರಿಸಿದರು. ಅವರ ಪ್ರತಿಭಟನೆಯಿಂದ ಪಾರಾಗಲು ಜೈನ ಗಂಗರು ಪೇರೂರಿಂದ ಕರ್ನಾಟಕಕ್ಕೆ ಬಂದರು. ಕುವಲಾಲಪುರ ಪರಿಸರದಲ್ಲಿ ನೆಲಸಿದರು, ನಂದಿಬೆಟ್ಟದ ಮೇಲೆ ಗಂಗರು ಪಟ್ಟ ಜಿನಾಲಯ ಕಟ್ಟಿದರು (ಅದೀಗ ಗೋಪಾಲಸ್ವಾಮಿಗುಡಿ ಆಗಿದೆ).

ಷಟ್ಕರ್ಮ (ಅಧ್ಯಯನ, ಅಧ್ಯಾಪನ, ಯಜನ, ಯಾಜನ, ದಾನ, ಪ್ರತಿಗ್ರಹ) ನಿರತರಾದ ಬ್ರಾಹ್ಮಣರು ಅಬ್ರಾಹ್ಮಣರಿಗಿಂತ ಧಾರ್ಮಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕ ಸವಲತ್ತುಗಳಿಂದಾಗಿ ಪ್ರಭಾವಶಾಲಿಗಳು. ಅವರು, ಅಷ್ಟೇ ಪ್ರಭಾವಶಾಲಿಗಳಾದ ಜೈನರೊಂದಿಗೆ ತಮ್ಮ ಪ್ರೀತಿ ಪ್ರಕಟಿಸಿದ ಪ್ರಸಂಗಗಳೂ ದಾಖಲಾಗಿವೆ.

೧. ಕಲ್ಯಾಣ ಚಾಲುಕ್ಯರ ತೈಲಪ-ಇರಿವ ಬೆಡಂಗರ ಕಾಲದ ಲೋಕೋನ್ನತೆ ದಾನ ಚಿಂತಾಮಣಿ ಅತ್ತಿಮಬ್ಬೆ ಲಕ್ಕುಂಡಿಯಲ್ಲಿ ಕಟ್ಟಿಸಿದ ಜಿನಾಲಯಕ್ಕೆ ಅಲ್ಲಿಯ ಸಾವಿರ ಬ್ರಾಹ್ಮಣರು 'ಬ್ರಹ್ಮಜಿನಾಲಯ' ವೆಂದೇ ಕರೆದು ಗೌರವಿಸಿದರು. (BKI. I-i No. 52. A.D. 1007-8]

೨. ಅಷ್ಟೋಪವಾಸಿ ಜೈನ ಮುನಿಗಳಿಗೆ ಬೇಹೂರಿನ ಬ್ರಾಹ್ಮಣರು ದಾನವಿತ್ತುದಕ್ಕೆ ಶಾಸನವಿದೆ. [SII 11. IX-i. 115. A.D. 1054]

೩. ಕುಪ್ಪಟೂರಿನ ಪಾರ್ಶ್ವನಾಥ ಜಿನಾಲಯ ಅಲ್ಲಿನ ಬ್ರಾಹ್ಮಣರು 'ಬ್ರಹ್ಮಜಿನಾಲಯ'ವೆಂದು ಕರೆಯಲು ಅನುಮೋದಿಸಿದರು. [EC. VIII ಸೊರಬ 262. A.D. 1077]

ಇವು ಪರಸ್ಪರ ಸೌಹಾರ್ದ ಮತ್ತು ಸಹಿಷ್ಣುತೆ ತೋರಿಸಿದ ಸಂದರ್ಭಗಳು. ಆದರೆ ಇವು ಸ್ಥಾಯೀ ಭಾವನೆಗಳೇನಲ್ಲ. ರಾಜದಂಡ ಪೂರ್ಣವಾಗಿ ಜೈನಪರವಾಗಿದ್ದುದರಿಂದ ಅನಿವಾರ್ಯವಾಗಿ ಹೀಗೆ ಸಹನೆ ಪ್ರಕಟಿಸಿದ್ದಾರೆ. ಉಳಿದಂತೆ ತಮ್ಮ ಒಳಸಂಚುಗಳಿಂದ ನೇರವಾಗಿಯೂ ಪರೋಕ್ಷವಾಗಿಯೂ ಇತರರನ್ನು ಪ್ರಚೋದಿಸಿಯೂ ಜೈನಮಂದಿರ, ಮಠ, ಮನೆಗಳನ್ನು ಮುರಿದಿದ್ದಾರೆಂಬುದಕ್ಕೆ ಚರಿತ್ರೆಯಲ್ಲಿ ಸಾಕ್ಷಿಗಳಿವೆ : ಆ ವಿಚಾರವನ್ನು ಮತ್ತೆ ಮುಂದೆ ಚರ್ಚಿಸಲಾಗುವುದು. ಆದರೆ ಇಲ್ಲಿಗೆ ಸಲ್ಲುವ ಮಾತಿಷ್ಟು : ಎರಡು ಅಹಿಂಸಾ ಸಮಾಜಗಳು, ಪರಸ್ಪರ ಘರ್ಷಣೆ ನಿಲ್ಲಿಸಿ, ಒಂದು ಒಡಂಬಡಿಕೆಯ ಸೌಹಾರ್ದ ಮನೋಧರ್ಮಕ್ಕೆ ತಲೆ ಬಾಗಿದರು.

ಕರ್ನಾಟಕದ ಚಾರಿತ್ರಿಕ ಚೌಕಟ್ಟಿನೊಳಗೆ ೧೨-೧೩ನೆಯ ಶತಮಾನಗಳಲ್ಲೊಮ್ಮೆ, ೧೪-೧೫ನೆಯ ಶ.ಗಳಲ್ಲಿ ಇನ್ನೊಮ್ಮೆ ಹೀಗೆ ಎರಡು ಘಟ್ಟಗಳಲ್ಲಿ ಜೈನರ ಮೇಲೆ ಆಕ್ರಮಣದ ಘಟನೆಗಳು ನಡೆದುವು. ೧೨ನೆಯ ಶ.ದಲ್ಲಿ ಶ್ರೀವೈಷ್ಣವರ ದಾಳಿಯೂ ೧೩ನೆಯ ಶ.ದಲ್ಲಿ ಶೈವ ವೀರಶೈವರ ದಾಳಿಯೂ ಪ್ರತ್ಯೇಕವಾಗಿ ನಡೆದರೆ ೧೪-೧೫ನೆಯ ಶ. ದಲ್ಲಿ ಅವರಿಬ್ಬರೂ ಒಟ್ಟಿಗೆ ಜೈನ ಸಮಾಜದ ಮೇಲೆ ಬಿದ್ದರು. ರತ್ನಾಕರವರ್ಣಿಯೊಬ್ಬ ವೀರಶೈವತ್ವಕ್ಕೆ ಜೈನತ್ವದಿಂದ ಹೋಗಿದ್ದು ಮತ್ತೆ ಜೈನ ತೆಕ್ಕೆಗೆ ಹಿಂತಿರುಗಿದನು (ಹಂಪ ನಾಗರಾಜಯ್ಯ : ರತ್ನಾಕರನ ಹಾಡುಗಳು : ೧೯೭೯ ix:). ಬಿಹಾರ ಜೈನಧರ್ಮದ ತೌರುಮನೆ. ಇಲ್ಲಿ ಹುಟ್ಟಿದ ಜೈನಧರ್ಮಕ್ಕೆ ಇಲ್ಲಿಯೇ ತೊಟ್ಟಿಲು ಕಟ್ಟಿ ತೂಗಿ ಬಾಲ್ಯದಲ್ಲಿ ಪೋಷಿಸಲಾಯಿತು. ಆಮೇಲಿನ ಪುಷ್ಟಿಯಿಂದ ಅದು ಭಾರತದ ಉದ್ದಗಲಗಳಿಗೆ ಹಬ್ಬಿತು. ಇದು ಕ್ರಿ. ಪೂ. ಶತಮಾನಗಳ ಇತಿಹಾಸದ ಸಂಗತಿ. ಅಲ್ಲಿಂದ ಬಹುದೂರ ಬಂದು ಇಂದಿನ ವೇದಿಕೆಯಲ್ಲಿ ನಿಂತು ನೋಡಲು ಬೇಕಾದ ಪರಿಸ್ಥಿತಿ ಕಲ್ಪಿತವಾಗಿದೆ. ಬಿಹಾರದ ರಾಂಚಿಯ ಸುತ್ತ ಮುತ್ತಲ ಪರಿಸರದಲ್ಲಿ ಸುಮಾರು ಆರು ನೂರು ಜೈನ ಶ್ರಾವಕ (ಸರೌಗಿ) ಕುಟುಂಬಗಳು ಕಾರಣಾಂತರಗಳಿಂದ ಅಜೈನರಾಗಿ ಮತಾಂತರಗೊಂಡಿವೆ. ಈ ಮತಾಂತರಿಗಳನ್ನು ಸರಾಕ್ (ಶ್ರಾವಕ್) ಮತದವರೆನ್ನುತ್ತಾರೆ. ದಿಗಂಬರ ಜೈನ ಮುನಿ ಉಪಾಧ್ಯಾಯ ಜ್ಞಾನಸಾಗರ ಮುನೀಜಿ ಈ ಸರಾಕ್ (ಶ್ರಾವಕ) ಜನಾಂಗದ ವಿಚಾರದಲ್ಲಿ ಆಸಕ್ತಿ ತೋರಿದ್ದಾರೆ.

ಹತ್ತೊಂಬತ್ತನೆಯ ಶ.ದಲ್ಲಿ ಜೈನ ಒಳಜಾತಿಗಳಲ್ಲಿ ಸಣ್ಣಪುಟ್ಟ ಸಂಖ್ಯೆಯಲ್ಲಿ ಇದ್ದವರು ದೊಡ್ಡ ಮತ್ತು ಬಲಿಷ್ಠವಾಗಿದ್ದ ಜಾತಿಗಳೊಂದಿಗೆ ವಿವಾಹ ಸಂಬಂಧಗಳನ್ನು ನಡೆಸಲು ಅಸಾಧ್ಯವಾಯಿತು; ಜತೆಗೆ ಅವರಿಗೆ ತಮ್ಮನ್ನು ದೊಡ್ಡವರು ಜೈನ ಸಮಾಜದಿಂದ ಹೊರಗಿಟ್ಟಿದ್ದಾರೆಂಬ ಆತಂಕವಾಯಿತು. ಇದರಿಂದ ನೊಂದ ಕೆಲವು ಕುಟುಂಬ ಪರಿವಾರಗಳು ಜೈನತ್ವದಿಂದ ಮತಾಂತರಗೊಂಡರು; ಹೀಗೆ ಮತಾಂತರವಾದವರಲ್ಲಿ ಬಹುವಾಗಿ ವೈಷ್ಣವ ಮತಕ್ಕೆ ಹೋದರು. (Charlotte Krause : 1930]

ಬಿಹಾರದ ಜೈನ ಸಮಾಜವೊಂದರ ಈ ಮತಾಂತರಕ್ಕೆ (ಸರಾಕ್) ತದ್ವಿರುದ್ಧವಾದ ಘಟನೆ ಭಾರತದ ಪಶ್ಚಿಮೋತ್ತರ ಭಾಗದಲ್ಲಿ, ಮುಖ್ಯವಾಗಿ ರಾಜಸ್ತಾನ-ಮಧ್ಯಪ್ರದೇಶಗಳ ಗಡಿಯಲ್ಲಿ, ಒಂದೂವರೆ ದಶಕಗಳ ಹಿಂದೆ ನಡೆಯಿತು. ರತ್ಲಂ, ಚಿತ್ತೋಡ್ ಮತ್ತು ನೀಮಚ್ ಪ್ರದೇಶ ಪರಿಸರದ 'ಖಟಿಕ' ಎಂಬ ಜನಾಂಗಕ್ಕೆ ಸೇರಿದ ಸುಮಾರು ೧೭ ಸಾವಿರ ಜನ ಜೈನರಾಗಿ ಮತಾಂತರ ಹೊಂದಿದರು. 'ಖಟಿಕ್' ಎಂಬುವರು ಪ್ರಾಣಿಗಳನ್ನು ಕಡಿದು ಕತ್ತರಿಸಿ ಮಾಂಸ ಮಾರಾಟ ಮಾಡುವ ಕಟುಕರು. ಸುಮಾರು ೭೦೦ ಜನ ಸ್ಥಾನಕವಾಸಿ ಜೈನ ಮುನಿ ಸಂಘದ ಆಚಾರ್ಯರಾದ ಶ್ರೀ ನಾನಾಲಾಲ ಜೈನ್ ಅವರ ಉಪದೇಶಗಳಿಂದ ಪ್ರಭಾವಿತರಾಗಿ ಸ್ಫೂರ್ತಿಯಿಂದ ಖಟಿಕ್ ಜನ ಸಮುದಾಯ ಜೈನ ಸಮಾಜವಾಗಿ ಮತಾಂತರಗೊಂಡು 'ವೀರವಾಲ್ ಜೈನ್' ರೆಂದು ನಾಮಾಂತರಗೊಂಡಿದ್ದಾರೆ. ಜನ್ನನ ಯಶೋಧರ ಚರಿತೆಯಲ್ಲಿ ಹಿಂಸಾರಭಸಮತಿಯಾದ ಮಾರಿದತ್ತನು ಪ್ರಾಣಿವಧೆ ನಿಲ್ಲಿಸಿ ಅಹಿಂಸಾ ಸರಸಮತಿಯಾದ ಕಥೆಗೆ ವಾಸ್ತವ ದೃಷ್ಟಾಂತವಾದವರು ಖಟಿಕ್ ವೀರವಾಲ್ ಜೈನರು.

ಸೌರಾಷ್ಟ್ರ (ಗುಜರಾತು)ದಲ್ಲಿ ಕ್ರಿ.ಶ. ೧೦೧೭ರಲ್ಲಿ ಕೆಲವು ಚೈತ್ಯವಾಸಿ ಶ್ವೇತಾಂಬರ ಮುನಿಗಳ ವಿರುದ್ಧ ವನವಾಸಿ ಜೈನ ಸಮಾಜ ಪ್ರತಿಭಟಿಸಿತು. ಈ ಬಂಡಾಯ ಸಂಘಟನೆಗೆ ಮುಂದೆ ೧೪೫೧ರಲ್ಲಿ ನಾಯಕರಾದದ್ದು ಗುಜರಾತಿನ ಶ್ರಾವಕ ಶ್ರೇಷ್ಠ ಲೋಂಕಾಷಾಹ. ಜೈನ ಸಿದ್ಧಾಂತ ಆಧಾರಗಳನ್ನಿತ್ತು ಲೋಂಕಾಶಾಹರು, ಚೈತ್ಯ (ಜಿನಗೃಹ) ಪೂಜೆಯಕ್ರಮ ಮಿಥ್ಯಾತ್ವವೆಂದೂ ಅಜೈನವೆಂದೂ ಜರಿದರು, ಚೈತ್ಯವಾಸಿ ಪದ್ಧತಿಯನ್ನು ನಿರಾಕರಿಸಿದರು. ಆಗಿನ ಗುಜರಾತಿನ ಸಚಿವ ಲಖಂಸಿಯ ರಾಜಕೀಯ ಹಾಗೂ ಜೈನ ಸಮಾಜದ ಬೆಂಬಲದಿಂದ ಮತ್ತು ಪ್ರಾಯಃ ವಿಗ್ರಹಾರಾಧನೆ ವಿರೋಧಿ ಮುಸ್ಲಿಂ ಪ್ರಭಾವದ ಪ್ರೇರಣೆಯಿಂದ, ಲೋಂಕಾಶಾಹರ ಮಾರ್ಗದರ್ಶನದಿಂದ ಸ್ಥಾನಿಕವಾಸಿ ('ಪ್ರಾರ್ಥನಾ ಸಭಾ' ವಾಸಿಗಳು) ಎಂಬ ಪ್ರಭಾವಶಾಲಿ ಜೈನ ಸಮಾಜವೊಂದು ಉದ್ಘಾಟಿತವಾಯಿತು. ಇದರ ಮುಂದುವರಿಕೆಯಾಗಿ ತಾರಣಸ್ವಾಮಿಯ ನೇತೃತ್ವದಲ್ಲಿ 'ತಾರಣಪಥ'ವೊಂದು ಪ್ರಾರಂಭವಾಯಿತು. ತಾರಣಪಥ ಜೈನಸಮಾಜವು ಮತಾಂತರವನ್ನು ಮನ್ನಿಸಿದ್ದಲ್ಲದೆ ಅನೇಕ ಶೂದ್ರ ದಲಿತ ಜಾತಿಗಳವರನ್ನು ಜೈನ ಸಮಾಜಕ್ಕೆ ಸೇರಿಸಿಕೊಂಡಿತು. ಶ್ವೇತಾಂಬರ ಜೈನ ಸಮಾಜದಲ್ಲಾದ ಈ ಪರಿವರ್ತನೆಗಳಿಗೆ ಸಂವಾದಿಯಾಗಿ ದಿಗಂಬರ ಜೈನ ಸಮಾಜದಲ್ಲೂ ಬದಲಾವಣೆ ನಡೆದುವು. ಕುಂದಕುಂದಾಚಾರ್ಯರ ಪ್ರಭಾವದಿಂದ ಬನಾರಸೀದಾಸರು (ಅಗ್ರ) ಬಾಹ್ಯ ಪೂಜೆಗಿಂತ ಅಂತರಂಗದ ಧ್ಯಾನಾದಿ ಭಾವಪೂಜೆ ಮಿಗಿಲೆಂದು ಮನವರಿಕೆ ಮಾಡಿದರು. ಬನಾರಸೀ ದಾಸರ ಹಿಂಬಾಲಕರು ಮತ್ತು ಜೈಪುರದ ಪಂಡಿತ ತೋಡರಮಲ್ಲ ಮಂತಾದವರು (ಮೋಕ್ಷ ಮಾರ್ಗ ಪ್ರಕಾಶಕ : ಕ್ರಿ.ಶ. ೧೮೦೦) ಈ ಹೊಸ ಪುನರುತ್ಥಾನಕ್ಕೆ ಸ್ಪಂದಿಸಿದರು.

ಹರಿಭದ್ರ ಸೂರಿಯು (ಕ್ರಿ.ಶ. ೬ನೆಯ ಶ.) ಜೈನ ಸಮಾಜದ ಕೆಲವು ಮುನಿಗಳ ವೈಭವ ಜೀವನವನ್ನು ವಿರೋಧಿಸಿದನು, ಇದನ್ನು ಇತರರೂ ಬೆಂಬಲಿಸಿದರು. ಇದರ ಪರಿಣಾಮದಿಂದ ಮುನಿಗಳಲ್ಲಿ ಸಾಕಷ್ಟು ಸುಧಾರಣೆ ಸಾಧ್ಯವಾಯಿತು. ಇದರಂತೆಯೇ ೧೫ನೆಯ ಶ.ದಲ್ಲಿ ಶ್ವೇತಾಂಬರ ಸಮಾಜದಲ್ಲಿ ದೇವಸ್ಥಾನ ವಿರೋಧಿ ಚಳವಳಿ, ಒಂದು ಪ್ರಮುಖ ಅರ್ಥಪೂರ್ಣ ಆವಶ್ಯಕ ಬದಲಾವಣೆಗೆ ಚಾಲನೆ ನೀಡಿತು. ಇಂಥ ಪರಿವರ್ತನೆಗಳಿಂದ ತನ್ನನ್ನು ತಾನು ಕಾಯಕಲ್ಪ ಗೊಳಿಸಿಕೊಳ್ಳುತ್ತ, ಅಂದಂದಿನ ಪ್ರಸ್ತುತತೆಗೆ ತೀಡಿ ತಿದ್ದಿಕೊಳ್ಳುತ್ತ ಜೈನ ಸಮಾಜ ಚಿಗುರಿ ನಿತ್ಯ ಹರಿದ್ವರ್ಣ ವಿಲಾಸದಿಂದ ಚಿರಂತನವಾಗಿಯೇ ಉಳಿದಿದೆ.

ಬ್ರಾಹ್ಮಣರು ಜೈನರಾದದ್ದು ಜೈನ ಸಮಾಜದ ಚರಿತ್ರೆಯಲ್ಲಿ ಆರಂಭದ ಹಂತಗಳಲ್ಲಿ; ಕ್ರಿ.ಪೂ. ಐದನೆಯ ಶ. ದಿಂದ ಕ್ರಿ.ಶ. ೧೦ನೆಯ ಶತಮಾನದವರೆಗೂ ಈ ಪ್ರಕ್ರಿಯೆ ನಿರಂತರವಾಗಿ ನಡೆದಿದೆ. ಕ್ರಿ. ಪೂ. ದಶತಮಾನಗಳಲ್ಲಿ ನಡೆದ ಈ ಮತಾಂತರವನ್ನು ಜೈನ ಕಥಾಸಾಹಿತ್ಯದಲ್ಲಿ ಅನೇಕ ಕಡೆ ಸೂಕ್ಷ್ಮವಾಗಿ ಪ್ರಸ್ತಾಪಗೊಂಡಿರುವ ಅಂಶವನ್ನು ಹೇಳಿದ್ದಾಗಿದೆ. ಉತ್ತರಾಧ್ಯಯನದಲ್ಲಿ ಬರುವ ಜಯಘೋಷನ ಪ್ರಕರಣವನ್ನೂ ಸ್ಮರಿಸಬಹುದು (XXV ೫ ರಿಂದ ೨೮). ಅಗ್ನಿಭೂತಿ, ವಾಯುಭೂತಿ, ಇಂದ್ರಭೂತಿ ಮತ್ತು ಅವರು ಪರಿವಾರ ಕೈಗೊಂಡ ಪರಿವರ್ತನೆಯಂತೂ ಹಲವುಕಡೆ ಉಲ್ಲೇಖವಾಗಿರುವ ಪ್ರಸಿದ್ಧ ಪ್ರಸಂಗ (ಆವಶ್ಯಕನಿರ್ಯುಕ್ತಿ : ೫೯೨-೬೫೯). ಹರಿಭದ್ರನು (ಕ್ರಿ.ಶ. ೬ನೆಯ ಶ.) ಶ್ವೇತಾಂಬರ ಸಂಪ್ರದಾಯದ ಮಹಾನ್ ಆಚಾರ್ಯ. ಈತನು ಜನ್ಮವೆತ್ತಿದ್ದು ಬ್ರಾಹ್ಮಣ

ಕುಟುಂಬದಲ್ಲಿ. ವೇದಾದಿಗಳಲ್ಲಿ ಮಹಾಜ್ಞಾನಿಯಾಗಿದ್ದ ಹರಿಭದ್ರನು ಹಮ್ಮಿನಿಂದ ಘೋಷಿಸಿದನು; 'ಯಾರ ಬೋಧನೆಯನ್ನು ನಾನು ನಿರಾಕರಿಸಲು ಅಸಾಧ್ಯವೊ ಅಂಥವರಿದ್ದರೆ ಅವರಿಗೆ ಶಿಷ್ಯನಾಗುತ್ತೇನೆ'. ಆತನು ಅರ್ಥಮಾಡಿಕೊಳ್ಳಲು ಅಸಾಧ್ಯವಾದಂಥ ಶ್ಲೋಕವನ್ನು **ತ್ರಿಷಷ್ಟಿ ಶಲಾಕಾ ಪುರುಷ** ಪುರಾಣದಿಂದ ಯಾಕಿನಿ ಎಂಬ ಕಂತಿಯು ವಾಚಿಸುವುದನ್ನು ಕೇಳಿ ಆಶ್ಚರ್ಯ ಚಕಿತನಾದನು. ಹರಿಭದ್ರನು ಆ ಶ್ಲೋಕ ಕುರಿತು ಯಾಕಿನಿಯನ್ನು ವಿಚಾರಿಸಲು ಆಕೆ ತನ್ನ ಗುರುವಿನ ಬಳಿಗೆ ಕಳಿಸಿದನು. ಹರಿಭದ್ರನು ಜೈನ ಸಿದ್ಧಾಂತ ಕಲಿತು ಜೈನಮತ ಸ್ವೀಕರಿಸಿದನು.

ಮಧ್ಯ ಪ್ರದೇಶದ ದಿಗಂಬರ ಜೈನರಲ್ಲಿ ಮೂರು ಮುಖ್ಯ ಜಾತಿಗಳಿವೆ: ಪರವಾರ್ ಜಾತಿ, ಗೊಲಲಾರೆ ಜಾತಿ ಮತ್ತು ಗೊಲಪೂರ್ವಜಾತಿ. ಇವರೆಲ್ಲ ಪ್ರಧಾನವಾಗಿ ಮಧ್ಯಪ್ರದೇಶದ ಬುಂದೇಲಖಂಡ ಪ್ರದೇಶದಲ್ಲಿ ನೆಲಸಿದ್ದಾರೆ. ಗೊಲಲಾರೆಜಾತಿ ಕುರಿತು ಕೆಲವು ಮಾತುಗಳು ಹೇಳಬೇಕಾದ್ದಿವೆ. ಗೊಲಲಾರೆ ಜಾತಿಯ ಜೈನರು ಮೂಲತಃ ಗೊಲ್ಲ ದೇಶದವರು. ಪ್ರಾಕೃತ ಭಾಷೆಯಲ್ಲಿ ರಚಿತವಾಗಿರುವ ಕ್ಷತ್ರಿಯ ವಂಶಿ ಉದ್ಯೋತನಸೂರಿ ಕವಿ ವಿರಚಿತ **ಕುವಲಯಮಾಲ** ಕಥಾ (೭೭೮) ಗ್ರಂಥದಲ್ಲಿ ಗೊಲ್ಲದೇಶ ಮತ್ತು ಪೂರಕ ವಿಚಾರ ಬಂದಿದೆ. ಶ್ರವಣಬೆಳಗೊಳದ ಶಾಸನಗಳಲ್ಲಿ ಬರುವ ಗೊಲ್ಲಾಚಾರ್ಯನು ಈ ಗೊಲ್ಲದೇಶ ಮೂಲದ ರಾಜನಾಗಿದ್ದು ಸನ್ಯಾಸಿಯಾದವನು.

ಕನ್ನಡದ ಆದಿಕವಿ ಪಂಪನ ತಂದೆ ಬ್ರಾಹ್ಮಣತ್ವದಿಂದ (ಶೈವ ಬ್ರಾಹ್ಮಣ) ಜೈನತ್ವಕ್ಕೆ ಮತಾಂತರಿಸಿದ ಸಂಗತಿಯನ್ನು ಇಲ್ಲಿ ಸ್ಮರಿಸಬಹುದು:

ಜಾತಿಯೊಳೆಲ್ಲಮುತ್ತಮದ ಜಾತಿಯ ವಿಪ್ರಕುಲಂಗೆ ನಂಬಲೇ
ಮಾತೊ ಜಿನೇಂದ್ರ ಧರ್ಮಮೆ ವಲಂ ದೊರೆಧರ್ಮದೊಳೆಂದು ನಂಬಿ ತ
ಜ್ಞಾತಿಯನುತ್ತರೋತ್ತರಮೆ ಮಾಡಿ ನೆಗೆಟ್ಚೆದನಿಂತಿರಾತ್ಮ ವಿ
ಖ್ಯಾತಿಯನಾತನಾತನ ಮಗಂ ನೆಗಟ್ದಂ ಕವಿತಾಗುಣಾರ್ಣವಂ॥
ಪಂಪ, ವಿಕ್ರಮಾರ್ಜುನ ವಿಜಯ : ೧೪-೮೮

ಪ್ರಾಕೃತ ಭಾಷೆಯ ಮಹಾಕವಿಯಾದ ಮತ್ತು ಕರ್ನಾಟಕದ ಆಶ್ರಯ ಪಡೆದು ಬಾಳಿದ ಪುಷ್ಪದಂತನು ಪಂಪನಂತೆಯೇ ಮತಾಂತರಗೊಂಡ ಮನೆತನದವನು. ಪುಷ್ಪದಂತನ ತಂದೆ ಕೇಶವಭಟ್ಟ, ತಾಯಿ ಮುಗ್ಧಾದೇವಿ; ಇವರು ಕಾಶ್ಯಪಗೋತ್ರದ ಶೈವ ಬ್ರಾಹ್ಮಣರು. ಪಾತ್ರಕೇಸರಿ ಯವರೂ ಕಾರಣಾಂತರದಿಂದ ಜೈನ ಧರ್ಮಾವಲಂಬಿಗಳಾದರು. ಕರ್ನಾಟಕದಲ್ಲಿ ಕಾವ್ಯ ರಚಿಸಿದ ಹತ್ತನೆಯ ಶತಮಾನದ ಎರಡು ಮಹಾಭಾಷೆಗಳ ಇಬ್ಬರು ಮಹಾಕವಿಗಳೂ ಪಂಪ-ಪುಷ್ಪದಂತರು, ಜೈನಧರ್ಮಕ್ಕೆ ಮತಾಂತರಗೊಂಡವರ ಮಕ್ಕಳೆಂಬುದು ಒಂದು ಯೋಗಾಯೋಗವಾಗಿ ಕಾಣುತ್ತದೆ. ಇಂದ್ರಭೂತಿಯಿಂದ ಕ್ರಿ.ಪೂ. ಆರನೆಯ ಶತಮಾನದಲ್ಲಿ ಪ್ರಾರಂಭವಾದ ಈ ಮತಾಂತರ ಪ್ರವೃತ್ತಿ ಪ್ರಕ್ರಿಯೆಗಳು ಪಂಪ-ಪುಷ್ಪದಂತರ ಮನೆತನದವರೆಗೆ ದಾಂಗುಡಿಯಿಟ್ಟಿದೆ. ಸಂಸ್ಕೃತ ತತ್ವಾರ್ಥಸೂತ್ರಕ್ಕೆ ಕನ್ನಡ ವ್ಯಾಖ್ಯೆ ಬರೆದ ಬಾಲಚಂದ್ರದೇವ ಹೇಳಿಕೆ: ಬ್ರಾಹ್ಮಣ ದ್ವೈಪಾಯಕನು ಶ್ವೇತಾಂಬರನಾಗಿ ಜೈನಶಾಸ್ತ್ರ ಪಾರಂಗತನಾದನು ಮತ್ತು ಉಮಾಸ್ವಾತಿಯಿಂದ ಬೋಧಿಸಲ್ಪಟ್ಟನು.

ಮೇಲಿನ ನಿದರ್ಶನಗಳನ್ನು ನೋಡಿ ಬ್ರಾಹ್ಮಣರು ಮಾತ್ರ ಜೈನರಾದರೆಂದೇನೂ ತೀರ್ಮಾನಿಸಿಬೇಕಾದ್ದಿಲ್ಲ. ಜೈನರಲ್ಲಿ ವೈದಿಕ ಪರಂಪರೆಗೆ ಮತಾಂತರಗೊಂಡವರೂ ಇದ್ದಾರೆ. ಕ್ರಿ.ಶ. ಹನ್ನೆರಡನೆಯ ಶತಮಾನದ ಮೂರು-ನಾಲ್ಕನೆಯ ದಶಕಗಳಿಂದ ಹೊಯ್ಸಳ ಸಾಮ್ರಾಜ್ಯದ ಪರಿಧಿಯಲ್ಲಿ ಇಂಥ ದೊಡ್ಡ ಮತಾಂತರ ಸಂಭವಿಸಿತು. ಬಿಟ್ಟಿದೇವನು (೧೧೦೮-೧೧೪೨) ವಿಷ್ಣುವರ್ಧನನಾಗಿ ಮತಾಂತರಗೊಂಡ ವಿಚಾರವನ್ನು ಕೆಲವು ಚರಿತ್ರಕಾರರು ಒಪ್ಪಿದ್ದಾರೆ. (ಬಿ. ಎಲ್. ರೈಸ್ ೧೯೦೯ : ೨೦೭). ಈ ಅಂಶವನ್ನು ಅನುಮೋದಿಸುವ ಶಾಸನಾಧಾರಗಳಿಲ್ಲವೆಂದು ಕೆಲವು ಚರಿತ್ರಕಾರರು ಸಂಶಯ ವ್ಯಕ್ತಪಡಿಸಿದ್ದಾರೆ (ಡಿ. ಡೆರೆಟ್ : ೧೯೫೭ : ೨೨೨). ಶಾಸನದ ಆಧಾರಗಳು ಇರದಿದ್ದರೂ ಈ ಮತಾಂತರವನ್ನು ಬೆಂಬಲಿಸುವ ಐತಿಹ್ಯಗಳು ಇವೆ. ಚಂದ್ರಸಾಗರವರ್ಣಿಯೆಂಬ ಜೈನಕವಿ ತನ್ನ 'ಬೆಟ್ಟವರ್ಧನರಾಯ ಚರಿತೆ' ಎಂಬ ಸಾಂಗತ್ಯ ಕಾವ್ಯದಲ್ಲಿ ಶ್ರೀ ರಾಮಾನುಜಾಚಾರ್ಯರ ಮಗಳುದಿರು ರಾಜನನ್ನು ಶ್ರೀವೈಷ್ಣವ ಮತಕ್ಕೆ ಮತಾಂತರಗೊಳಿಸಿದ ರೆಂದು ನಿರೂಪಿಸಿದ್ದಾನೆ. (ಹಂಪ. ನಾಗರಾಜಯ್ಯ, ಎಸ್. ಶಿವಣ್ಣ (ಸಂ) : ೧೯೮೧ : ೧೨೫-೧೪೨).

ತನ್ನ ಒಂದು ಬೆರಳು ಊನವಿದ್ದ ಕಾರಣ ಬೆಟ್ಟವರ್ಧನ ರಾಜನಿಂದ ಆಹಾರದಾನ ಸ್ವೀಕರಿಸಲು ಜೈನ ಗುರುಗಳು ನಿರಾಕರಿಸಿದ್ದರಿಂದ ಅವಮಾನಿತನಾದ ರಾಜನು ನಾಮಧರಿಸಿ ಐಯ್ಯಂಗಾರನಾದನೆಂದೂ ಹಳೆಯಬೀಡಿನ ಪಾರ್ಶ್ವನಾಥ ಚೈತ್ಯಾಲಯವನ್ನು ಬಿಟ್ಟು ಉಳಿದ ಜಿನಾಲಯಗಳನ್ನು ಕಿತ್ತು ಹಾಳು ಮಾಡಿಸಿ ತನ್ನ ಹೆಸರನ್ನು ವಿಷ್ಣುವರ್ಧನರಾಯ ಎಂದು ಪರಿವರ್ತಿಸಿಕೊಂಡನೆಂದೂ ಚಂದ್ರಸಾಗರವರ್ಣಿ ವರ್ಣಿಸಿದ್ದಾನೆ (ಅದೇ : ೧೩೮ - ೧೩೯). ಬಿಟ್ಟಿದೇವನ ಮಗಳು ಕಾಯಿಲೆಬಿದ್ದಾಗ ಅವಳ ರೋಗವನ್ನು ಜೈನರು ವಾಸಿ ಮಾಡಲು ಅಸಾಧ್ಯವಾದಾಗ ರಾಮಾನುಜರ ಪ್ರಭಾವದಿಂದ ಗುಣವಾಯಿತೆಂದೂ ಅದರಿಂದ ರಾಜನು ಅವರ ಶಿಷ್ಯತ್ವ ಸ್ವೀಕರಿಸಿದವೆಂದೂ ಇನ್ನೊಂದು ಐತಿಹ್ಯವಿದೆ. ವಿಷ್ಣುವರ್ಧನನ ಮಗಳು ನಿಷ್ಠಾವಂತ ಜೈನಗಳಾಗಿದ್ದುದಕ್ಕೆ ಶಾಸನಾಧಾರವಿದೆ. ಭಿನ್ನಾಭಿಪ್ರಾಯಗಳ ನಡುವೆಯೂ ಹೊರಪಡುವ ನಿಜದನಿಯೆಂದರೆ ರಾಮಾನುಜಾಚಾರ್ಯರ ಪ್ರಭಾವದಿಂದ ಕರ್ನಾಟಕದಲ್ಲಿ ೧೨ನೆಯ ಶ. ದಲ್ಲಿ ಮತ್ತು ಅನಂತರ ನಾನಾ ಮತಗಳವರು ಶ್ರೀವೈಷ್ಣವರಾದರು; ಅನೇಕ ಜೈನ ಕುಟುಂಬಗಳೂ ಶ್ರೀವೈಷ್ಣವ ಧರ್ಮಕ್ಕೆ ಮತಾಂತರ ಮಾಡಿದರು. ಎಷ್ಟೋ ಜೈನ ದೇವಾಲಯಗಳನ್ನು ಈ ಹಂತದಲ್ಲಿ ಶ್ರೀವೈಷ್ಣವರು ವಶಪಡಿಸಿಕೊಂಡರು. ವಶಪಡಿಸಿಕೊಳ್ಳಲು ಆಗದ ಜಿನಗೃಹಗಳನ್ನು ಪುಡಿಗುಟ್ಟಿದರು.

ತಮಿಳುನಾಡಿನಲ್ಲಿ ಚೋಳರಾಜರು ಆಳುತ್ತಿದ್ದಾಗ, ವಿಷ್ಣು ಭಕ್ತರಾದ ಆಳ್ವಾರರಿಗಿಂತ, ಅಲ್ಲಿನ ಶಿವಭಕ್ತರಾದ ನಾಯನಾರ್ ಪಂಥದವರು ಜೈನರನ್ನು ಹಿಂಸಿಸಿ ಜಿನಾಲಯಗಳನ್ನು ಹಾಳು ಮಾಡಿದರು ಮತ್ತು ಶೈವರು ಮಧುರೆಯಲ್ಲಿ ಜೈನರನ್ನು ಸಾಮೂಹಿಕವಾಗಿ ಕೊಲೆ ಮಾಡಿದುದರ ಉಲ್ಲೇಖಗಳು ಷೇಕ್ಕಿಳಾರ್ ಪೆರಿಯ ಪುರಾಣಂ, ಪರಂಜೋತಿ ಮುನಿವರ್ ತಿರುವಳಯಾದರ್ ಪುರಾಣಂ- ಇದರಲ್ಲಿವೆ. ಜಿನಾಲಯಗಳನ್ನು ಶಿವಾಲಯಗಳನ್ನಾಗಿ ಪರಿವರ್ತಿಸಿದರು. ತಮಿಳುನಾಡಿನಲ್ಲಿ ಮಾಡಲಾಗದ ಸೇಡು ತೀರಿಸಿಕೊಳ್ಳುವ ಕೆಲಸವನ್ನು ಆಳ್ವಾರ್ ಪರಂಪರೆಯ ಶ್ರೀವೈಷ್ಣವರು ಕರ್ನಾಟಕದಲ್ಲಿ ಯಶಸ್ವಿಯಾಗಿ ಮತ್ತು ವ್ಯಾಪಕವಾಗಿ ಮಾಡಿದರು. ಇಲ್ಲಿ ವಿರೋಧಾಭಾಸವೆಂದರೆ

ತಾವು ಬಿಟ್ಟು ಬಂದು ಶ್ರೀವೈಷ್ಣವಕ್ಕೆ ಸೇರಿದ ಜೈನ ಪರಂಪರೆಯವರೇ ಈ ಕೊಡಲಿ ಕಾವಿನ ಕೆಲಸಕ್ಕೆ ತೊಡಗಿದರೆಂಬುದು.

ಜೈನರನ್ನು ಶಿವಭಕ್ತರೂ ವಿಷ್ಣುಭಕ್ತರೂ ಹೀಗೆ ವಿಳರ ಶನಿಕಾಟವಾಗಿ ಏಕಮುಖವಾಗಿ ಕಾಡಲು ಮುಖ್ಯ ಕಾರಣವೆಂದರೆ ಜೈನರು ಸೃಷ್ಟಿಕರ್ತದೈವವನ್ನೂ ಅವತಾರಗಳನ್ನೂ ವೇದಾಗಮಗಳನ್ನೂ ಸ್ವಧರ್ಮಪಾಲನೆಯ ನಿಯಮವನ್ನೂ ಒಪ್ಪದೆ ಹೋದರೆಂಬುದು. ಹಿಂದೂ ಹಿಡಿತದಿಂದ ತಪ್ಪಿಸಿಕೊಳ್ಳುವವರಿಗೆ ಬಾಗಿಲು ತೆರೆದರೆಂಬುದು. ಇಸ್ಲಾಂ ಮತ್ತು ಕ್ರೈಸ್ತರೂ ಇದೇ ಕೆಲಸ ಮಾಡಿದರೂ ಅವರ ಮಸೀದಿ ಮತ್ತು ಪ್ರಾರ್ಥನಾ ಸ್ಥಳಗಳನ್ನು, ಚರ್ಚು (ಇಗರ್ಜಿ)ಗಳನ್ನು ಹಾಳು ಮಾಡುವುದಕ್ಕೆ ಭಯಪಟ್ಟರು; ಮುಸಲ್ಮಾನರ ಮತ್ತು ಕ್ರೈಸ್ತರ ತಂಟೆಗೆ ಹೋಗುವುದಕ್ಕೆ ತುದಿಗಾಲಿನ ಮೇಲೆ ನಿಂತಿದ್ದರೂ, ಆ ಎರಡು ಸಮಾಜಗಳ ಸಂಖ್ಯಾಬಲ, ಆರ್ಥಿಕ ಚೈತನ್ಯ, ಹಲವು ರಾಷ್ಟ್ರಶಕ್ತಿಗಳ ಬೆಂಗಾವಲ ಬೆಂಬಲ ಮೊದಲಾದ ಅಂಶಗಳು ತಡೆಗೋಡೆಯಾಗಿವೆ. ೧೯೯೨ರ ಡಿಸೆಂಬರ್ ೬ ರಂದು ಅಯೋಧ್ಯೆಯ ಮಸೀದಿಯನ್ನು ಕೆಡವಿ ಈಗ ಅದನ್ನು ಮೈಮೇಲೆ ಹಾಕಿಕೊಂಡು ಚಡಪಡಿಸುತ್ತಿದ್ದಾರೆ. ಜೈನರು ಹೊರಗಿನಿಂದ ಬಂದವರಲ್ಲ; ಹಿಂದುಗಳ ದೇವಾಲಯಗಳನ್ನು ಹಾಳು ಮಾಡಲಿಲ್ಲ; ಅಥವಾ ಜಿನಾಲಯವನ್ನಾಗಿ ಪರಿವರ್ತಿಸಲಿಲ್ಲ; ಹಿಂದುಗಳ ರಾಜಬೊಕ್ಕಸವನ್ನೂ ದೇವಾಲಯಗಳ ಐಶ್ವರ್ಯವನ್ನೂ (ಹತ್ತಾರು ಸಲ ಬೇಡ) ಒಂದು ಸಲವಾದರೂ ಕೊಳ್ಳೆ ಹೊಡೆಯಲಿಲ್ಲ; ತಮ್ಮ ಜಿನಗೃಹಗಳನ್ನು ಹಿಂದುಗಳು-ಮುಸಲ್ಮಾನರು ಹಾಳು ಮಾಡಿದ್ದಕ್ಕೆ ಪ್ರತಿಯಾಗಿಯಾದರೂ ಜೈನರು, ಹಿಂದುಗುಡಿಗಳನ್ನೂ ಸಾಬರ ಮಸೀದಿಗಳನ್ನೂ, ನಾಶ ಮಾಡಲು ಪ್ರಯತ್ನ ಕೂಡ ಮಾಡಲಿಲ್ಲ. ಅಹಿಂಸೆಯ ಲಕ್ಷ್ಮಣರೇಖೆಯನ್ನು ದಾಟಲಿಲ್ಲವೆಂಬುದು ಚರಿತ್ರಕಾರರು ಮೆಚ್ಚುಗೆ ಸೂಚಿಸಿರುವ ಅಂಶ.

ಶ್ವೇತಾಂಬರ ಶಾಖೆಗೆ ಸೇರಿದ ಸ್ಥಾನಕವಾಸಿಗಳು ಮತೀಯ ಸುಧಾರಕರಾಗಿ ಗಣನೀಯ ಕಾರ್ಯ ನಿರ್ವಹಿಸಿದ್ದಾರೆ. ರಾಜಸ್ತಾನ-ಮಾರವಾರಗಳಲ್ಲಿ ಸಾಮಾಜಿಕವಾಗಿ ಇವರು ತುಂಬ ಪ್ರಭಾವಶಾಲಿಗಳು. ಸ್ಥಾನಕವಾಸಿಗಳ ಮುಂದಾಳುತನದಲ್ಲಿ, ವ್ಯಾಪಕ ಪ್ರಮಾಣದಲ್ಲಿ, ಕೆಲವು ಹಿಂದು ಪಂಗಡಗಳನ್ನು ಅದರಲ್ಲಿಯೂ ಶೈವರನ್ನು ಹತ್ತನೆಯ ಶತಮಾನದಲ್ಲಿ ಜೈನಮತಕ್ಕೆ ಸೇರಿಸಿಕೊಂಡರು. (Agarchand Mahta + Bhavarmal Nahta : 1973). ಅದುವರೆಗೆ ರಾಜಸ್ತಾನ ಮತ್ತು ಮಾರವಾರ ಪ್ರದೇಶವೆಲ್ಲ ಶೈವರ ಮುಖ್ಯ ಕರ್ಮಭೂಮಿಯೆನಿಸಿತ್ತು. ತಮ್ಮ ಹಿಡಿತದಲ್ಲಿದ್ದ ಪರಿಸರ ಪ್ರದೇಶಗಳಲ್ಲಿ ಹೀಗೆ ಸಹಸ್ರಾರು ಸಂಖ್ಯೆಯಲ್ಲಿ ಜೈನಮತಕ್ಕೆ ಸಮುದಾಯಿಕ ಮತಾಂತರ ಗೊಂಡ ಘಟನೆಯಿಂದ ಶೈವರು ಕ್ರುದ್ಧರಾಗಿ ರುದ್ರಾವತಾರಂಗಡ ನೊಸಲೊಳ್ ಕಣ್‌ಗಡ ಆದರು. ಜೈನರ ಮೇಲೆ ತಮ್ಮ ಸೇಡನ್ನು ತೀರಿಸಿಕೊಳ್ಳಬೇಕೆಂದು ಹೊಸದಾಗಿ ಒಂದು 'ಶಿವಪುರಾಣ' ವನ್ನು ಬರೆದರು; ಅದರಲ್ಲಿ ಜೈನಧರ್ಮ ಮತ್ತು ತೀರ್ಥಂಕರರನ್ನು ವಾಚಾಮಗೋಚರವಾಗಿ ಕೀಳಾಗಿಸಿ ಚಿತ್ರಿಸಿ ಸಮಾಧಾನ ಪಟ್ಟಿದ್ದಾರೆ. (ಶಿವಪುರಾಣ : (ಸಂ) ರಾಮತೇಜ ಶಾಸ್ತ್ರಿ ಪಾಂಡೆಯ : ವಾರಣಾಸಿ)

ವಾದತರ್ಕಗಳಿಂದ ಬೌದ್ಧಿಕವಾಗಿ ಸೋಲಿಸಲು ಸಾಧ್ಯವಾಗದಿದ್ದಾಗ ಮುಂಗೈ ಜೋರಿನಿಂದ

ಭೌತಿಕವಾಗಿಯೇ ಆಕ್ರಮಣಕ್ಕಿಳಿಯುವುದು ಮಾನವ ಸ್ವಭಾವ. ಜೈನಧರ್ಮವನ್ನು ಬೌದ್ಧಿಕ ವಾದಗಳಿಂದ ಸೋಲಿಸುವ ಪ್ರಯತ್ನ ಕ್ರಿ.ಪೂ. ಅಂತ್ಯದ ಮತ್ತು ಕ್ರಿ.ಶ. ಆರಂಭದ ಶತಮಾನಗಳಲ್ಲಿ ನಡೆಯಿತು. ಜೈನರು ವಾದದಲ್ಲಿ ಗೆದ್ದುದನ್ನು ನೂರಾರು ಶಾಸನಗಳು ಹೇಳುತ್ತವೆ. ಹಿಂದೆ ವೈಷ್ಣವರೂ ಶೈವರೂ ಜೈನರ ಮೇಲೆ ಗೂಂಡಾಗಿರಿ ಮಾಡಿದರೆಂಬುದಕ್ಕೂ ಸಾಕ್ಷಿಗಳಿವೆ. ಚೋಳದೇಶದಲ್ಲಿ ಶೈವರು ಮಾಡಿದ ಹಿಂಸಾಕಾಂಡವನ್ನು ಶಾಸನಗಳು ವರ್ಣಿಸಿವೆ, ಚರಿತ್ರಕಾರರೂ ದಾಖಲಿಸಿದ್ದಾರೆ. ಮಧ್ಯಯುಗದಲ್ಲಿ, ವಿಶೇಷವಾಗಿ ೧೨ನೆಯ ಶತಮಾನದಲ್ಲಿ ಕರ್ನಾಟಕದಲ್ಲಿಯೂ ಮೊದಲು ಶ್ರೀ ವೈಷ್ಣವರು ಜೈನರನ್ನೂ ಅವರ ಬಸದಿಗಳನ್ನು ತಮ್ಮದನ್ನಾಗಿಸಿಕೊಳ್ಳುವ ಕಾರ್ಯವನ್ನು ಆರಂಭಿಸಿದರು. ಶ್ರೀವೈಷ್ಣವರ ಈ ಹೋರಾಟದಲ್ಲಿ ದಬ್ಬಾಳಿಕೆಯಿದ್ದರೂ ಕೊಲೆ, ಸುಲಿಗೆ, ಅತ್ಯಾಚಾರಗಳಿಂದ ಕೂಡಿದ್ದಾಗಿರಲಿಲ್ಲ. ಆದರೆ ಅವರ ಮತಾವೇಶಭರಿತ ಹೋರಾಟವನ್ನು ಮುಂದುವರಿಸಿದ ಶೈವರು ಮತ್ತು ವೀರಶೈವರು ಹಿಂಸಾಪಥವನ್ನು ಆರಿಸಿಕೊಂಡು ಆಯುಧಪಾಣಿಗಳಾಗಿ ದಾಳಿಗಿಳಿದರು.

ಹಿಂದಿನ ಪುಟಗಳಲ್ಲಿ ಸೂಚಿಸಿರುವಂತೆ, ಶೈವರು ಚೋಳದೇಶದಲ್ಲಿ ಜೈನರ ಮೇಲೆ ಕೊಲೆಗಡುಕರಾಗಿ ವರ್ತಿಸಿದರು. ಅದರ ಬೆನ್ನಹಿಂದೆಯೇ ಕರ್ನಾಟಕದಲ್ಲಿ ಹೊಯ್ಸಳರ ಆಳ್ವಿಕೆಯಲ್ಲಿ ಶ್ರೀವೈಷ್ಣವರು ಜಿನಮಂದಿರಗಳನ್ನು ಶ್ರೀರಾಮನ, ಶ್ರೀನಿವಾಸನ ಇಲ್ಲವೇ ಆಂಜನೇಯನ ಗುಡಿಗಳಾಗಿಸಿದರು, ಸಹಸ್ರಾರು ಜೈನರನ್ನು ತಮ್ಮ ಮತಕ್ಕೆ ಸೇರಿಸಿಕೊಂಡರು. ಈ ಎರಡು ಘಟನೆಗಳಿಂದ ಒಳಗೊಳಗೇ ನಡುಗತೊಡಗಿದ್ದ ಜೈನ ಸಮಾಜವನ್ನು ಅಲ್ಲೋಲಕಲ್ಲೋಲಗೊಳಿಸಿ ಬುಡಮೇಲು ಮಾಡುವುದು ಸುಲಭ ಮತ್ತು ಇದೇ ಅವರನ್ನು ಅಡಗಿಸಲು ತಕ್ಕ ಸಮಯವೆಂದು ಕೆಲವು ತಾಮಸಗುಣದಿಂದ ಕೂಡಿದ ಶೈವರು ರಕ್ತಪಿಪಾಸುಗಳಂತೆ ಸಶಸ್ತ್ರ ಸನ್ನದ್ಧರಾಗಿ ಜೈನರ ಮೇಲೆರಗಿ ಸಾಮೂಹಿಕ ಕಗ್ಗೊಲೆ ಮಾಡಿದರು. ಇದನ್ನು ಸ್ವಲ್ಪ ವಿಸ್ತಾರವಾಗಿಯೇ ಸಾದ್ಯಂತವಾಗಿ ಚರ್ಚಿಸಬೇಕಾಗುತ್ತದೆ.

೧೨ನೆಯ ಶತಮಾನದ ಉತ್ತರಾರ್ಧದಲ್ಲಿ ಸಂಭವಿಸಿದ ಮತೀಯ ಘರ್ಷಣೆಯಲ್ಲಿ, ಶಾಸನಗಳೂ ಕಾವ್ಯಗಳೂ ಚಿತ್ರಿಸಿರುವ ಹಾಗೆ, ಒಂದು ಗುಂಪು ಉಗ್ರತೆಯಿಂದ ಆಯುಧ ಹಿಡಿದು ಜೈನ ಸಮಾಜದ ಮನೆಗಳ ಮೇಲೆ, ಬಸದಿಗಳ ಮೇಲೆ, ಮಠಗಳ ಮೇಲೆ, ಮತಾಚಾರ್ಯರ ಮೇಲೆ ದಾಳಿ ಮಾಡಿತು. ಜೈನ ಸಮಾಜ ಅದಕ್ಕೆ ತಕ್ಕ ಪ್ರತಿಭಟನೆಗೆ ಇಳಿಯಲಿಲ್ಲ, ಪರಿಣಾಮವಾಗಿ ಆಕ್ರಮಣಕಾರರಿಗೆ ಧೈರ್ಯ ಹೆಚ್ಚಿತು. ಸಹಸ್ರಾರು ಸಂಖ್ಯೆಯಲ್ಲಿ ಮುನಿಗಳೂ ಶ್ರಾವಕರೂ ಕೊಲ್ಲಲ್ಪಟ್ಟರು. ಈಗ ಲೆಕ್ಕಕ್ಕೆ ಸಿಗದಷ್ಟು ಜೈನ ದೇವಾಲಯಗಳು ಲಯವಾದುವು, ನೂರಾರು ಬಸದಿಗಳು ಜೈನೇತರ ದೇವಾಲಯಗಳಾದುವು. ಹೆಂಗಸರು, ಮಕ್ಕಳು, ಮುದುಕರು ಕೆರೆ ಬಾವಿ ನೋಡಿಕೊಂಡರು, ನೇಣು ಹಾಕಿಕೊಂಡರು, ಸಾವಿರಾರು ಕುಟುಂಬಗಳು ವಲಸೆ ಹೋದವು. ತತ್ತರಿಸಿ ಹೋದ ಲಕ್ಷಾಂತರ ಜೈನರು ಜೀವ ಉಳಿದರೆ ಸಾಕೆಂದು ಲಿಂಗಧಾರಣೆ ಮಾಡಿದರು. ಜೈನಮಠಗಳು ವೀರಶೈವ ಮಠಗಳಾದುವು. ಜೈನ ಮಂದಿರಗಳು ಶಿವಾಲಯಗಳಾದುವು. ಜೈನರ ಮನೆಗಳು ವೀರಶೈವ ಮನೆಗಳಾದುವು. ಇದು ಪ್ರಾಣಭಯ ಜೀವಭೀತಿಯಿಂದ ಆದ ಸಾಮೂಹಿಕ ಮತಾಂತರಕ್ಕೆ ಜೀವಂತ ದೃಷ್ಟಾಂತವಾಯಿತು. ಇದಿಷ್ಟೂ ಐತಿಹಾಸಿಕವಾಗಿ ಸಂಭವಿಸಿದ ಜೈನ ಸಮಾಜ ಮೂರಾಬಟ್ಟೆಯಾದ ಘಟನೆಯ ಸಾರಾಂಶ.

ಜೈನ ಸಮಾಜಕ್ಕೆ ಇದರಿಂದ ದೊಡ್ಡ ಲುಕ್ಸಾನು ಆದರೂ ವೀರಶೈವ ಸಮಾಜಕ್ಕೆ ದೊಡ್ಡ ಲಾಭವಾಯಿತು. ಅಳಿದುಳಿದ ಜೈನರಲ್ಲಿ ಕೆಲವರು ಸ್ಥಳವಂದಿಗರ ಕುಮ್ಮಕ್ಕಿನಿಂದ ಜೈನ ಕೇಂದ್ರಗಳಲ್ಲಿಯೇ ನೆಲೆ ನಿಂತರು. ಅಂತಹ ಮನೆತನಗಳಲ್ಲಿದ್ದ ಹೆಣ್ಣು ಮಕ್ಕಳಿಗೆ ವಿವಾಹ ಮಾಡುವುದು ಗಂಡಾಂತರವಾಗಿತ್ತು. ವೀರಶೈವ ಸಮಾಜದವರು ಜೈನ ಸಮಾಜದಿಂದ ಹೆಣ್ಣು ತರುವುದು ಸಾಧ್ಯವಾಯಿತು. ಅಂಥ ಅನಿವಾರ್ಯ ಪ್ರಸಂಗವೊಂದನ್ನು ಕಾವ್ಯವಾಗಿಸಿ 'ಸೋಮನಾಥ ಚರಿತೆ'ಯನ್ನು ರಾಘವಾಂಕ ಕವಿ ರಚಿಸಿದ್ದಾನೆ. ಇದರಲ್ಲಿ ಆದಯ್ಯ ಜೈನರ ಆದಿನಾಥನ ಹೆಸರಿನ ಪ್ರತೀಕ. ಆದಯ್ಯ, ಆದಪ್ಪ, ಆದಿಯಪ್ಪ, ಆದಣ್ಣ, ಆದಿದೇವ-ಇವೆಲ್ಲ ಅದೇ ಹೆಸರಿನ ರೂಪಗಳು. ಜೈನರು ಸಂಪೂರ್ಣವಾಗಿ ವೀರಶೈವ ಸಮಾಜದಲ್ಲಿ ವಿಲೀನವಾದ ವ್ಯಕ್ತಿಗಳ ಸಂಕೇತವಾದ ಆದಯ್ಯನು, ಇನ್ನೂ ವೀರಶೈವರಾಗದೆ ಜೈನರಾಗಿ ಉಳಿದಿದ್ದ ಕುಟುಂಬದ ಪದ್ಮಾವತಿಯನ್ನು ವಿವಾಹವಾಗುತ್ತಾನೆ. ಪದ್ಮಾವತಿಯೆಂಬ ಹೆಸರನ್ನು ಉದ್ದೇಶಪೂರ್ವಕವಾಗಿ ಬಳಸಲಾಗಿದೆ. ಪದ್ಮಾವತಿ ಜೈನರ ಜಿನಶಾಸನ ದೇವತೆಗಳಲ್ಲಿ ಅತ್ಯಂತ ಪ್ರಭಾವಶಾಲಿನಿ, ಜೈನ ಸಮಾಜದಲ್ಲಿ ಅತ್ಯಂತ ಜನಪ್ರಿಯವಾದ ವ್ಯಕ್ತಿವಾಚಕ, ಅಂಕಿತನಾಮಪದ. ರಾಘವಾಂಕನ ಕವಿ ಪ್ರತಿಭೆ ಈ ಎಲ್ಲ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಹಿನ್ನೆಲೆಗಳಿಗೂ ದಕ್ಕುವ ಪ್ರಾತಿನಿಧಿಕ ಪಾತ್ರವನ್ನು ಆರಿಸಿಕೊಂಡಿರುವುದು ಶ್ಲಾಘ್ಯ. ಅಕ್ಕಮಹಾದೇವಿ-ಕೌಶಿಕರ ಅಂತರ್ಜಾತೀಯ ವಿವಾಹ ಸಂಬಂಧವಾಗಿ ಕೆಲವರು ಕೌಶಿಕನನ್ನು ಜೈನನೆಂದಿದ್ದಾರೆ; ಇದನ್ನು ಅನುಮೋದಿಸಲು ಬೇಕಾದ ಆಧಾರಗಳಿಲ್ಲವೆನ್ನಲಾಗಿದೆ. ಭಿನ್ನಾಭಿಪ್ರಾಯದ ಈ ವೀರಶೈವ-ಜೈನ ವಿವಾಹ ಪ್ರಸಂಗವನ್ನು ವಿಸ್ತರಿಸಬೇಕಾದ್ದಿಲ್ಲ. ಆದರೆ ಆದಯ್ಯ-ಪದ್ಮಾವತಿಯರ ಕಥಾ ಪ್ರಸಂಗ ಮಾತ್ರ ಕೇವಲ ಊಹೆಯಾಗದೆ ೧೩ನೆಯ ಶತಮಾನದ ಸಂದರ್ಭದಲ್ಲಿ ನಡೆಯುತ್ತಿದ್ದ ಅಂತರ್ಜಾತೀಯ ವಿವಾಹ ಮೂಲಕವಾದ ಮತಾಂತರಕ್ಕೆ ಹಿಡಿದ ಕಾವ್ಯ ಕನ್ನಡಿ.

ಜೈನ-ಲಿಂಗಾಯಿತ ಸಮಾಜಗಳ ಸಂಬಂಧ ಏಕಮುಖಿಯಾದ ಚಿತ್ರಹಿಂಸೆಯಿಂದಲೇ ಆರಂಭವಾದರೂ ಅನಂತರದಲ್ಲಿ ಅವೆರಡರ ನಡುವೆ ಪುದುವಾಳು ಸಾಧ್ಯವಾಯಿತು. ವೀರಶೈವ-ಲಿಂಗಾಯತ ಸಮಾಜವು ತನ್ನ ಧಾರ್ಮಿಕ ಮಾದರಿಗಳನ್ನು, ಸಾಹಿತ್ಯ ಕೃತಿ ನಿರ್ಮಾಣ ಮತ್ತು ನಿರ್ವಹಣದ ನಮೂನೆಗಳನ್ನು ಜೈನ ಸಮಾಜದ ಪ್ರಭಾವದಿಂದ ರೂಪಿಸಿಕೊಂಡಿತು. ವೀರಶೈವ ಮತವೂ ಶಾಕಾಹಾರಿಯಾದ ಅಹಿಂಸೆಯ ಬುನಾದಿಯ ಮೇಲೇ ನಿಂತಿರುವಂತಹುದು. ಹೀಗಿದ್ದೂ ಏಕಾಂತದ ರಾಮಯ್ಯ, ಗೊಗ್ಗರಸ, ವಿರುಪರಸಾದಿಗಳು ಕೊಲೆಗಡುಕರೋಪಾದಿಯಲ್ಲಿ ಜೈನರ ಮೈಲೇ ಆಕ್ರಮಣ ಮಾಡಿದ್ದೇಕೆ ಎಂಬುದಕ್ಕೆ ಉತ್ತರಗಳನ್ನು ಚರಿತ್ರೆಯ ಒಡಲಿನಲ್ಲಿಯೇ ಹುಡುಕಬೇಕು. ಅಂದು ಈಡೀ ಭಾರತದಲ್ಲೂ ಮತ್ತು ಮುಖ್ಯವಾಗಿ ಕರ್ನಾಟಕದಲ್ಲೂ ಇದ್ದ ಅತ್ಯಂತ ಪ್ರತಿಷ್ಠಿತ ಮತ್ತು ಬಲಿಷ್ಠ ಸಮಾಜವೆಂದರೆ ಜೈನ ಸಮಾಜ. ಧಾರ್ಮಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಹಿತ್ಯಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ-ಹೀಗೆ ಜೀವನದ ಎಲ್ಲ ರಂಗಗಳಲ್ಲಿಯೂ ಜೈನರೇ ತುಂಬಿ ತುಳುಕುತ್ತಿದ್ದರು. ರಾಜರು, ಮಂತ್ರಿಗಳು, ಸೇನಾನಿಗಳು, ಮಂಡಲೇಶ್ವರರು, ಮಹಾಸಾಮಂತರು-ಹೀಗೆ ಅಧಿಕಾರ ಶ್ರೇಣಿಯಲ್ಲಿ ಜೈನರು ವಿಜೃಂಭಿಸುತ್ತಿದ್ದರು. ಊರು ಕೇರಿಗಳೆಲ್ಲಾ ಜೈನರ ಬಸದಿಗಳು! ರಾಜ್ಯಲಕ್ಷ್ಮಿ, ಧನಲಕ್ಷ್ಮಿ, ಸರಸ್ವತಿ-ಎಲ್ಲರೂ ಜೈನರ ಸಮಾಜದ ಸೇವೆಗೆ ಟೊಂಕಕಟ್ಟಿ ನಿಂತಿದ್ದರು. ಹೀಗೊಂದು ಸಮಾಜ ತನ್ನ ಪರಾಕಾಷ್ಠ ಶಿಖರ ಸ್ಥಿತಿಯಲ್ಲಿ ವಿರಾಜಮಾನವಾಗಿರುವಾಗ, ಅದರ ಎದುರಿನಲ್ಲಿ ಇನ್ನೊಂದು ಹೊಸ ಸಮಾಜ ತಲೆಯೆತ್ತಿ ನಿಲ್ಲುವುದಕ್ಕೆ ಹವಣಿಸುವುದಾದರೂ ಹೇಗೆಂಬ ಪರಿಸ್ಥಿತಿಯಿತ್ತು.

ಆದರೆ ವೀರಶೈವ ಸಮಾಜದ ಕೆಲವು ಮುಂದಾಳುಗಳು ಸುಲಭವಾಗಿ ಹಿಂದೆ ಸರಿಯಲಿಲ್ಲ. ಅದೇನೇ ಬರಲಿ ಎಂದು ಪ್ರಾಣದ ಹಂಗು ತೊರೆದು ಕತ್ತಿ ಈಟಿ ಹಿರಿದು ಹೊರಟರು. ಏಕಾಂತದ ರಾಮಯ್ಯ, ಗೊಗ್ಗಯ್ಯ, ಆದಯ್ಯ, ವಿರುಪಯ್ಯಾದಿಗಳು ಅಂಥ ವೀರ ಮಾಹೇಶ್ವರ ಸ್ಥಲದ ದೃಢ ನಿಶ್ಚಲ ಧ್ರುತಗತಿಯಲ್ಲಿ, ತಮ್ಮ ಹೊಸ ಸಮಾಜಕ್ಕೆ ಯಾವ ವಿಳಂಬವೂ ಆಗದೆ ನುಗ್ಗಿದರು. ಜೈನ ಸಮಾಜದ ಅನುಭವಿಸುತ್ತಿರುವ ಸವಲತ್ತು ಪ್ರತಿಷ್ಠೆ ಪಡೆಯುವ ಮಹತ್ವಾಕಾಂಕ್ಷೆ ಹೊತ್ತು ಕಾರ್ಯ ಪ್ರವೃತ್ತರಾದರು. ತಮ್ಮ ಬಯಕೆಯ ಈಡೇರಿಕೆಗಾಗಿ ಜೈನ ಸಮಾಜದ ಮರ್ಯಾದೆಯ ಕೋಡನ್ನು ಮುರಿಯುವುದೊಂದೇ ಅವರುಗಳು ಕಂಡುಕೊಂಡ ಸುಲಭೋಪಾಯ. ನಮಗೆ ಸಮಾನರಿಲ್ಲವೆಂದು ಬೀಗುತ್ತಿದ್ದ ಹಿರಿಯ ಸಮಾಜವನ್ನು ಬಾಗುವಂತೆ ಮಾಡುವುದರಿಂದ ಹೊಸ ಸಮಾಜ ಮುನ್ನುಗ್ಗಲು ಹೆಬ್ಬಾಗಿಲು ತೆರೆದಂತೆ ಆಗುತ್ತದೆಂಬ ಗ್ರಹಿಕೆ ಅವರದು. ಜೈನ ಸಮಾಜ ಕರ್ನಾಟಕದಲ್ಲಿ ಕಟ್ಟಿದ ಕೋಟೆಯನ್ನು ಮುರಿದದ್ದು ಹೀಗೆ. ಇದು ಸರಿಯೆ ತಪ್ಪೆ ಎಂದು ತೂಗುವ ನೆಲೆಯಲ್ಲಿ ಮನಃಸ್ಥಿತಿ ಸಾಗಲಿಲ್ಲ. ವೀರಶೈವವೇ ಎಂದಲ್ಲ, ಬೇರೆ ಯಾವುದೇ ಇಂಥ ಭಾವನೆಯಿಂದ ಹುಟ್ಟುತ್ತ ಹೊರಟ ಹೊಸ ಸಮಾಜಕ್ಕೂ ಇದೊಂದು ಐತಿಹಾಸಿಕ ಅನಿವಾರ್ಯವಾಗಿತ್ತು. ಇದೇ ಗುರಿ ಸಾಧನೆಗಾಗಿ ಜಿನಮಂದಿರಗಳನ್ನು ನಾಶ ಮಾಡುವುದಕ್ಕೂ ವೀರಶೈವ ನಿಷ್ಠ ಮುಖಂಡರು ಮುಂದಾದರು. ಒಂದು ಸಮಾಜದ ಶಕ್ತಿ ಕೇಂದ್ರಗಳಾಗಿರುವ ಪೂಜಾ ಮಂದಿರಗಳನ್ನು ಕೆಡುವುದು ಲಾಗಾಯ್ತಿನಿಂದ ಚಾಲ್ತಿಯಲ್ಲಿರುವ ಒಂದು ಸಮರ ವಿಧಾನ ತಂತ್ರ :

೧. ಹಿಂದು ಮುಂದು ನೋಡದೆ ಎದುರಾದವರನ್ನು ಕೊಲ್ಲುವುದು
೨. ದೇವಾಲಯಗಳನ್ನು ಹಾಳು ಮಾಡುವುದು
೩. ಮಹಿಳೆಯರ ಮಾನಭಂಗ
೪. ಆಸ್ತಿಪಾಸ್ತಿಯ ಲೂಟಿ; ಚರಸ್ವತ್ತಿನ ಅಪಹರಣ
೫. ಬೆಂಕಿ ಹಚ್ಚುವುದು

ಇವು ಐದು ಒಂದು ಸಮಾಜವನ್ನು ತತ್ತರಗುಟ್ಟಿಸುವ ಪ್ರಧಾನ ತಂತ್ರಗಳು. ಈಗ ಚರಿತ್ರೆಯ ಅಂಗೈ ಮೇಲಿರುವ ಆಧಾರಗಳಿಂದ ತಿಳಿದು ಬರುವಂತೆ ಮುಸಲ್ಮಾನರು ಮಾಡಿದ್ದೂ ಇದೆ, ಹಿಂದುಗಳು ಮಾಡಿದ್ದೂ ಇದೆ, ಶೈವ-ವೀರಶೈವರು ಮಾಡಿದ್ದೂ ಇದೆ. ಕಳ್ಳತನಕ್ಕಾಗಿ ಮನೆಗಳಿಗೆ ನುಗ್ಗುವ ದರೋಡೆಕೋರರು ಮನೆಬಾಗಿಲು ಒಡೆದು ಒಳಕ್ಕೆ ನುಗ್ಗಿದವರೆ ಮೊದಲು ಮಾಡುವುದಿಷ್ಟು: ಎದುರಾದವರನ್ನು ಅಪ್ಪಳಿಸುವುದು. ಅಷ್ಟು ಸಾಕು. ಇಡೀ ಮನೆಯಯವರನ್ನೆಲ್ಲಾ ಕೊಲ್ಲಬೇಕಾಗಿಲ್ಲ. ಅಷ್ಟರಿಂದಲೇ ಮನೆಯಷ್ಟೂ ಅಧೀರತೆಯಿಂದ ಗಡಗಡ ನಡುಗುತ್ತ ಹೇಳಿದ ಹಾಗೆ ಕೇಳಲು ಸಿದ್ಧರಾಗಿ ಶರಣಾಗುತ್ತಾರೆ.

ಶಾಸನಗಳು ಮತ್ತು ಕಾವ್ಯಗಳು ಈ ಮೇಲಿನ ಘಟನೆಗಳನ್ನು ವಿಸ್ತಾರವಾಗಿ ಚಿತ್ರಿಸಿವೆ. ಮಾದರಿಗಾಗಿ ನಾಲ್ಕು ದೃಷ್ಟಾಂತಗಳನ್ನು ಉಲ್ಲೇಖಿಸುತ್ತೇನೆ :

೧) ಪೊಟ್ಟಲಕೆರೆಯಲ್ಲಿ ಏಳನೂರು ಜೈನ ಬಸದಿಗಳಿದ್ದುವೆಂದೂ ಚಾಳುಕ್ಯ ರಾಜನಾದ ಸಿಂಗಬಲ್ಲಹ ಜಯಸಿಂಹನಿಗೆ ಜೈನಗುರು ಸರ್ವಜ್ಞಮುನಿ ಇದ್ದನೆಂದೂ, ಜಯಸಿಂಹನ ರಾಣಿ

ಸುಗ್ಗಲೆಯು ದೇಡರದಾಸಿಯನ್ನು ಕರೆಸಿ ಆತನ ಮೂಲಕ ತನ್ನ ಪತಿಯನ್ನು ಶೈವನನ್ನಾಗಿಸಿದಳೆಂದೂ ಆಗ ಪೊಟ್ಟಲಕೆರೆಯ ಏಳುನೂರು ಜಿನಮಂದಿರಗಳನ್ನು ನಾಶಮಾಡಿಲಾಯಿತೆಂದೂ ಪಾಲ್ಕುರಿಕೆ ಸೋಮನಾಥನ ತೆಲುಗು ಬಸವ ಪುರಾಣದಲ್ಲಿದೆ : ಭೀಮ ಕವಿಯ ಕನ್ನಡ ಬಸವ ಪುರಾಣದಲ್ಲಿ ಇದರ ಉಲ್ಲೇಖವಿದೆ (೫೧-೬೪) ಮುನ್ನಿನೇಳ್ನೂರ್ಬಸದಿಗಳನೆಲ್ಲಂ ಹಿರಿದು ಹಾಯ್ಕಿ. ಷಡಕ್ಷರ ಕವಿಯ ವೃಷಭೇಂದ್ರ ವಿಜಯದಲ್ಲಿಯೂ (೩೫-೬೫) ಈ ಹೇಳಿಕೆ ಅನುರಣನಗೊಂಡಿದೆ : ಜಿನೋತ್ಕರಗೇಹಂಗಳನೊತ್ತಿ ಕೀಳ್ತಿಡಿಸಿ ದಾಸಂ ತನ್ನ ಶಿಷ್ಯರ್ಕಳಿಂ. ೨) ವಿರೂಪಾಕ್ಷ ಪಂಡಿತಾರಾಧ್ಯನು ಚೆನ್ನಬಸವಪುರಾಣದಲ್ಲಿ (೫೭-೧೧) ಮಾರ್ದನಿಸಿದ್ದಾನೆ :

ಜಿನಭಕ್ತನೆಸೆವ ದೇಸಿಂಗ ಬಲ್ಲಾಳನಾ
ತನ ಮಡದಿ ಸುಗ್ಗಲೆಯು ಶಿವಭಕ್ತೆ ತನ್ನ ಗುರು
ವೆನಿಪದೇವರ ದಾಸನಂ ಜಿನರ ಕಡೆವಾದಂಗೆಯ್ಯೆ ಪೆಟಿಗೆಯೊಳು
ತೊನೆವ ಘಟಸರ್ಪನಂ ಚಂದ್ರಕಾಂತದ ಲಿಂಗ
ವನೆ ಮಾಡಿ ಗೆಲಿಸಿ ಜೈನರಿಗಾಜ್ಞೆಯಂ ಮಾಡಿ
ಜನಪತಿಯನಂದು ಶಿವಭಕ್ತನಂ ಮಾಡಿದಳದೇನಚ್ಚರಿಯನು॥

೩) ಚೆನ್ನಬಸವಾಂಕನ (೧೫೫೦) ಮಹಾದೇವಿಯಕ್ಕನ ಪುರಾಣದಲ್ಲಿ (೨೫-೫)

ಬಸ್ತಿಗಳನೊಡೆದು ಲಿಂಗಾಗಾರಮೆನಿಸಿನತ
ಮಸ್ತಕರ ಬೌದ್ಧರು ಭಕ್ತರಂ ಮಾಳ್ದವರ
ಮಸ್ತಕದೊಳಭಯವಿತ್ತೆಸೆದನೇಕಾಂತದ ರಾಮಯ್ಯ॥

೪) ಏಕಾಂತ ರಾಮಯ್ಯನು ಜೈನರಿಗೆ ಹಾಕಿದ ಕರಾರು ಶಾಸನೋಕ್ತವಾಗಿದೆ:

ಈ ತಲೆಯನರಿದವರ ಕೈಯೊಳೊಡ್ಡುವೆನವರದಂ
ಸುಟ್ಟಿಂ ಬಳಿಕ್ಕವಾಂ ಪಡೆವೆನೆನಗಾನೆ ಸಜ್ಜೆಯ ಬಸದಿ
ಮುಖ್ಯವಾಗಿಮೆಣ್ನೂರುಂ ಬಸದಿಯ ಜಿನರಂ ಪಲರ
ನೊಡ್ಡುವುದು.
(ಎ.ಇಂ. V. ಪು 213 : ಎಇಂ. : XXIX. ಪು. 140. ಅಬ್ಬಲೂರು ಕ್ರಿ.ಶ. ೧೨೦೦)

೫. ಚಿತ್ತಾರಾಧ್ಯ ಚರಿತೆ ಮತ್ತು ಅಬ್ಬಲೂರು ಚರಿತೆಗಳಲ್ಲೂ ಜೈನಗೃಹಗಳನ್ನು ಕೆಡವಿದ ವಿವರವಿದೆ. ಪೊಟ್ಟಲಕೆರೆಯಲ್ಲಿ ಏಳನೂರು ಬಸದಿಗಳಿದ್ದುವೆಂದೂ, ಅವನ್ನು ಶೈವರು ನಾಶ ಮಾಡಿದರೆಂದೂ ವೀರಶೈವ ಪುರಾಣಗಳೇ ದೊಡ್ಡ ಸಾಧನೆಯಾಗಿ ಹೆಮ್ಮೆಯಿಂದ ಹೇಳಿ ಕೊಂಡಿರುವುದನ್ನು ಲಕ್ಷಿಸಬೇಕು. ಏಕೆಂದರೆ ಇವುಗಳಲ್ಲಿ ಬಹುಪಾಲಿನ ಜಿನಾಲಯಗಳು ದಾನ ಚಿಂತಾಮಣಿ ಅತ್ತಿಮಬ್ಬೆ ಮಾಡಿಸಿದ ೧೫೦೦ ಬಸದಿಗಳ ಗುಂಪಿನವು. ಮತಾಂತರವೆಂಬುದು ವ್ಯಷ್ಟಿ-ಸಮಷ್ಟಿಗಳಲ್ಲಿ ಸಂಭವಿಸಿದ್ದು ಒಂದು ಮುಖ್ಯ. ಈ ಮತಾಂತರ ದೇವರಿಗೆ ಮತ್ತು ದೇವಾಲಯಗಳಿಗೂ ತಪ್ಪಲಿಲ್ಲವೆಂಬುದು ಇದರ ಇನ್ನೊಂದು ಮುಖ. ಜೈನರ ಅಂತಿಮ ತೀರ್ಥಕರನಾದ ಮಹಾವೀರನ ಮೂರ್ತಿ ದೊಡ್ಡಪ್ಪ ಎಂಬ ಹೆಸರಿನಿಂದ ವಿಭೂತಿ ಬಳಿದುಕೊಂಡು ವೀರಶೈವನಾಗಿ ಪೂಜಿತನಾಗುತ್ತಿದ್ದಾನೆ : ಅವನ ಸಂಬಂಧವಾಗಿ ಜಾನಪದ ಕಥೆಗಳೂ ಹುಟ್ಟಿಕೊಂಡಿವೆ. ಇಂಥ

ಇನ್ನೂ ಹಲವಾರು ಉದಾಹರಣೆಗಳಿವೆ. ಇವು ಬಿಡಿ ವಿಗ್ರಹಗಳ ವಿಚಾರವಾಯಿತು. ಇಡೀ ಗುಡಿ ಮತ್ತು ದೇವಾಲಯ ಸಮುಚ್ಚಯಗಳನ್ನು ಮತಾಂತರಗೊಳಿಸಿದ್ದಕ್ಕೆ ಆಸೇತು ಹಿಮಾಚಲ ಸಾಕ್ಷಿಗಳಿವೆ. ಇಡೀ ಉತ್ತರ ಕರ್ನಾಟಕ ಅರ್ಧ ಹಿಂದೂ ಮತ್ತು ವೀರಶೈವ ಶಿವಾಲಯಗಳು ಮೂಲತಃ ಜೈನ ಬಸದಿಗಳು. ಸೌದತ್ತಿಯ ಎಲ್ಲಮ್ಮನ ಗುಡಿ ಪದ್ಮಾವತಿಯಕ್ಷಿಯ ಗುಡಿಯೆಂದೂ, ರಟ್ಟರ ಪಟ್ಟಜಿನಾಲಯವೆಂದೂ ಸ್ಥಾಪಿತವಾಗಿದೆ. ಕೋಲಾರದ ನಂದಿಬೆಟ್ಟದ ಮೇಲಿರುವ ಹಿಂದು ದೇವಾಲಯವು ಗಂಗರ ಪಟ್ಟ ಜಿನಾಲಯವಾಗಿತ್ತು. ಶಿವಮೊಗ್ಗ ಸಮೀಪದ ಹಿಂದೂಗುಡಿ ಮಂಡಲಸಾಸಿರದ ಪಟ್ಟಜಿನಾಲಯವಾಗಿತ್ತು. ಕೊಪ್ಪಳ, ಲಕ್ಕುಂಡಿ ಮುಂತಾದ ಸ್ಥಳಗಳ ನೂರಾರು ಬಸದಿಗಳನ್ನು ಮತಾಂತರಗೊಳಿಸಿರುವುದನ್ನು ಅಲ್ಲಿಯ ಕಂಬ, ತೊಲೆ, ಬೋದಿಗೆ, ಬಾಗಿಲ್ವಾಡ, ಗೋಡೆ, ಪಾಣಿಪೀಠ - ಮೊದಲಾದವುಗಳ ಮೇಲಿರುವ ಶಾಸನಗಳು ಸಾರುತ್ತವೆ. ಹಾಸನಜಿಲ್ಲೆಯ ಎಷ್ಟೋ ಪ್ರಾಚೀನ ಜಿನಗೃಹಗಳನ್ನು ವೈಷ್ಣವ ದೇವಾಲಯಗಳನ್ನಾಗಿ ಮತಾಂತರಿಸಲಾಗಿದೆ. ಇದನ್ನು ಇನ್ನು ಬೆಳೆಸಿ ಹೇಳುವುದು ಬೇಡ; ಇದು ಒಂದು ಮಹಾಪ್ರಬಂಧವಾಗುವಷ್ಟು ದಾಖಲೆಗಳು ಉಪಲಬ್ಧವಿರುವ ಚಾರಿತ್ರಿಕ ಸತ್ಯ.

ಜೈನ ಸಮಾಜವನ್ನೂ ಮತಾಂತರವನ್ನೂ ಕುರಿತು ಬಹಿರಂಗವಾಗಿ, ಗಟ್ಟಿಯಾಗಿ ಮೊದಲು ಮಾತನಾಡಿದ ಬ್ರಹ್ಮಶಿವನಿಗೆ ಕನ್ನಡ ಕವಿ-ಕಾವ್ಯ ಪರಂಪರೆಯಲ್ಲಿ ವಿಶಿಷ್ಟ ಗಣ್ಯ ಸ್ಥಾನವಿದೆ. ನಾನು ಮಂಡಿಸುತ್ತಿರುವ ಈ ಸಂಪ್ರಬಂಧದ ಶೀರ್ಷಿಕೆಯನ್ನು 'ಸಮಯ ಪರೀಕ್ಷೆ' ಎಂದು ಬದಲಾಯಿಸ ಬಹುದೆಂಬಷ್ಟು ಸಮಂಜಸವಾಗಿದೆ. ಇದೇ ವಿಷಯ ಕುರಿತು ಸಾಹಿತ್ಯಕ ವಾಗ್ವಾದವನ್ನು ಕೈಕೊಂಡವನು ಬ್ರಹ್ಮಶಿವ. ಜೈನ ಸಮಾಜ ಮತ್ತು ಮತಾಂತರ ವಿಚಾರವಾಗಿ ಬ್ರಹ್ಮಶಿವಕವಿ ಹೊನಲು ಬೆಳಕು ಹಾಯಿಸಿದ್ದಾನೆ. ಇಲ್ಲಿಯೇ ಸ್ಪಷ್ಟಪಡಿಸಬೇಕಾದ ಸಂಗತಿ : ಬ್ರಹ್ಮಶಿವಕವಿ ಜೈನಮತದಿಂದ ಮಾಹೇಶ್ವರ ಮತಕ್ಕೆ ಮತಾಂತರವಾಗಿ ಆಮೇಲೆ ಮಾಹೇಶ್ವರದಲ್ಲಿ ಹುರುಳಿಲ್ಲವೆಂದು ನಿರಾಕರಿಸಿ ಮತ್ತೆ ಜೈನತ್ವಕ್ಕೆ ಮರಳಿದನೆಂದ ಕವಿಚರಿತೆಕಾರರ ಕಾಲದಿಂದ ಅದೇ ಹಳೆಯ ರಾಗವನ್ನು ಉಳಿದವರೂ ಗುಹಾಧ್ವನಿಯಾಗಿ ಅನುರಣಿಸಿದ್ದಾರೆ. ಬ್ರಹ್ಮಶಿವನು ಮಾಹೇಶ್ವರ ಮತಕ್ಕೆ ಮತಾಂತರ ಮಾಡಿಯೇ ಇರಲಿಲ್ಲ; ಅಂದ ಮೇಲೆ ಅವನು ವಾಪಸ್ಸು ಮತಾಂತರವಾಗುವ ಪ್ರಶ್ನೆಯೇ ಇಲ್ಲ.

ಬ್ರಹ್ಮಶಿವಕವಿ ಅನೇಕ ಪದ್ಯಗಳಲ್ಲಿ ಜೈನ ಸಮಾಜ-ಮತಾಂತರ ಕುರಿತು ಮೌಲಿಕವಾದ ಜಿಜ್ಞಾಸೆ ಮಾಡಿದ್ದಾನೆ. ಅದೆಲ್ಲವನ್ನೂ ಚರ್ಚಿಸುವುದಕ್ಕಿಂತ ಅದರ ಸಾರಾಂಶವನ್ನು ಮೊದಲು ಸಂಕ್ಷೇಪವಾಗಿಟ್ಟು ತರುವಾಯ ವಿಮರ್ಶಾತ್ಮಕವಾಗಿ ವಿವೇಚಿಸುತ್ತೇನೆ.

ಸಾಮಾಜಿಕ ಜಾತಿ ಶ್ರೇಣಿಯಲ್ಲಿ ಮೇಲು ವರ್ಗ (ವರ್ಣ) ದವರೆನಿಸಿದ ಬ್ರಾಹ್ಮಣರೇ ಅಲ್ಲದೆ ಕೆಳಜಾತಿಗಳೆನಿಸಿದ ಅಸ್ಪೃಶ್ಯರೂ ಅಂತ್ಯಜರೂ ಶೂದ್ರರೂ ಮತಾಂತರಗೊಂಡು ಜೈನ ಸಮಾಜದೊಳಕ್ಕೆ ಸೇರಿಕೊಳ್ಳುತ್ತಿದ್ದರು. ಚಾತುರ್ವರ್ಣ ವ್ಯವಸ್ಥೆಯೊಳಗೆ ಬ್ರಾಹ್ಮಣರು ಸನ್ಯಾಸಿಗಳಾಗ ಬಹುದು, ಪುರೋಹಿತರಾಗಬಹುದು ಹೊರತು ಇತರರಲ್ಲ. ಆದರೆ ಜೈನರು ಸ್ತ್ರೀಯರಿಗೂ ಶೂದ್ರರಿಗೂ ದಲಿತರಿಗೂ ಸನ್ಯಾಸಿಗಳಾಗಲು ಬಾಗಿಲು ತೆರೆದರು. ಇದರಿಂದ ಗಲಿಬಿಲಿಗೊಂಡು ಜೈನ ಮತ್ಸರಿಗಳಾದ ಕೆಲವರು ಅಪಪ್ರಚಾರವ್ರತ ಕೈಗೊಂಡರು; ಅನ್ಯಮತದವರು ಜೈನಮತಕ್ಕೆ ಮತಾಂತರವಾಗುವುದನ್ನು

ತಡೆಹಿಡಿಯಲು ಪ್ರಯತ್ನಿಸಿದರು : 'ಜೈನಮತ ಸ್ವೀಕರಿಸಿದರೆ ಬಡತನ ಅಡರುತ್ತದೆ, ದೇಹ ಕೆಡುತ್ತದೆ, ಆಯುಷ್ಯ ಕಡಿಮೆಯಾಗುತ್ತದೆ, ನರಕ ಪ್ರಾಪ್ತಿಯಾಗುತ್ತದೆ; ಶನಿಪೀಡೆಗೆ ಒಳಗಾದವನು ಜಿನಭಕ್ತನಾಗಿ ಹುಟ್ಟುತ್ತಾನೆ' (೨-೫; ೧೨-೨೯, ೩೦; ೧೩-೧೫). ಈ ಬಗೆಯ ಸುಳ್ಳು ಸುದ್ದಿ ಹಬ್ಬುವವರಿಗೆ ಬ್ರಹ್ಮಶಿವ ಉತ್ತರವನ್ನೂ ಕೊಟ್ಟಿದ್ದಾನೆ. ಜೈನ ಸಮಾಜದೊಳಗೆ ಜೀವಂತವಾಗಿದ್ದ ಪ್ರಗತಿಪರ ಧೋರಣೆಯನ್ನು ದೃಷ್ಟಾಂತ ಸಹಿತ ಪ್ರತಿಪಾದಿಸಿದ್ದಾನೆ (೪-೧೨೪, ೧೨೫ : ೯-೮೫). ಆತ ಕೊಟ್ಟಿರುವ ಜೈನ ಸಮಾಜದ ಚಿತ್ರ ಅಧಿಕೃತವೆನಿಸಿದೆ (೪-೭೪ : ೭-೧೩, ೧೫, ೬೭). ಬ್ರಹ್ಮಶಿವನನ್ನು ಅವನ ಹಗೆಗಳೂ ಸೈ ಎನ್ನುವುದಕ್ಕೆ ಕಾರಣವಿದೆ : ಅದು ಅವನಲ್ಲಿ ಮಿಂಚುವ ವಸ್ತುನಿಷ್ಠ ದೃಷ್ಟಿ ತನ್ನ ಸ್ವಮತದ ಇತಿಮಿತಿಗಳನ್ನು ಟೀಕಿಸಿದ್ದಾನೆ (೪-೫೪). ಜೈನ ಸಮಾಜಕ್ಕೆ ಸೇರಿ ಇಲ್ಲಿದ್ದು ಮತ್ತೆ ತಾವು ಹಿಂದಿದ್ದ ಧರ್ಮಕ್ಕೆ ಮರಳುತ್ತಿದ್ದವರನ್ನು ಲೇವಡಿಸಿದ್ದಾನೆ 'ಸತ್ವ ಇಲ್ಲದವರು ಜೈನಮತಕ್ಕೆ ಬಂದರೂ ಅದರಲ್ಲಿ ನಿಲ್ಲುವುದು ಕಷ್ಟ' (೧೩೧೨).

ಮತಾಂತರದಿಂದ ಸಂಸಾರಗಳಲ್ಲಿ ಸಂಭವಿಸಿದ ಇಕ್ಕಟ್ಟು, ಬಿಕ್ಕಟ್ಟು, ಮುಜುಗರಗಳ ಭಾವ ಸಂಕೀರ್ಣತೆಯನ್ನು ಬ್ರಹ್ಮಶಿವಕವಿ ಸಮಂಜಸವಾಗಿಯೇ ಚಿತ್ರಿಸಿದ್ದಾನೆ. ಈಗಾಗಲೇ ಪ್ರಸ್ತಾಪಿಸಿ ಚರ್ಚಿಸಿರುವಂತೆ ೧೨ನೆಯ ಶತಮಾನ ಕರ್ನಾಟಕದ ಚರಿತ್ರೆಯಲ್ಲಿ ಮತೀಯ ಘರ್ಷಣೆಯನ್ನೂ ಮತಾಂತರದ ಸ್ಥಿತ್ಯಂತರವನ್ನೂ ವ್ಯಾಪಕವಾಗಿ ಅನುಭವಿಸಿದ ಕಾಲಘಟ್ಟ. ಹೊಸ ಹುರುಪಿನಿಂದ ರಭಸವಾಗಿ ಮುನ್ನುಗ್ಗಿದ ವೀರಶೈವ ಮತದ ಆಘಾತದಿಂದ ಜೈನ ಸಮಾಜ ನಲುಗಿತು. ಗಾಯದ ಮೇಲೆ ಬರೆ ಎಳೆದಂತೆ, ಶ್ರೀ ವೈಷ್ಣವರ ಉಪಸರ್ಗ : ಅತ್ತ ದರಿ ಇತ್ತ ಪುಲಿ. ಈ ಸಂಘರ್ಷಗಳ ಸವಾಲುಗಳಿಗೆ ತಮಗೆ ತೋಚಿದ ರೀತಿಯಲ್ಲಿ ಜೈನ ಸಮಾಜದ ಸದಸ್ಯರು ವೈಯಕ್ತಿಕ ನೆಲೆಯಲ್ಲಿ ಪ್ರತಿಕ್ರಿಯಿಸಿದರು. ಕೆಲವು ಕುಟುಂಬಗಳಲ್ಲಿ ತಂದೆ ಒಂದು ಮತಕ್ಕೆ, ದೈವಕ್ಕೆ ಎರಗಿದರೆ ತಾಯಿ ಇನ್ನೊಂದಕ್ಕೆ, ಮಗಳು ಮತ್ತೊಂದಕ್ಕೆ, ಮಗ ಮಗದೊಂದಕ್ಕೆ ಮಣಿಯುವುದು ಅಸಹಜವೆನಿಸಲಿಲ್ಲ. ಬ್ರಹ್ಮಶಿವಕವಿ ಕೆಲವು ಸಾಂಸಾರಿಕ ಚಿತ್ರಗಳನ್ನು ಬಿಡಿಸಿದ್ದಾನೆ. ಒಂದೇ ಮನೆಯಲ್ಲಿ ಒಂದು ಸೂರಿನಡಿಯಲ್ಲಿ ಒಂದು ಕಡೆ ಜಿನಮೂರ್ತಿಗೆ ಪೂಜೆ, ಇನ್ನೊಂದು ಕಡೆ ಶಿವಲಿಂಗಕ್ಕೆ ಅಭಿಷೇಕ, ಬೇರೊಂದು ಕಡೆ ವಿಷ್ಣು ಬಿಂಬಕ್ಕೆ ಅರ್ಚನೆ - ಇದು ಪ್ರಾರಂಭವಾಯಿತು. ಮನೆಯ ಯಜಮಾನ ಗಂಡ ಜೈನ, ಹೆಂಡತಿ ಮಾಹೇಶ್ವರಿ! ಬ್ರಹ್ಮಶಿವಕವಿ ಇದನ್ನು ಹೇಗೇ ವ್ಯಾಖ್ಯಾನಿಸಿರಲಿ ಇಂಥದೊಂದು ಸಾಮರಸ್ಯ ಹಲವು ಸಂಸಾರಗಳಲ್ಲಿ ಸಾಧ್ಯವಾಗಿತ್ತೆಂಬುದು ಇಂದಿಗೂ ಅನುಕರಣ ಯೋಗ್ಯ ಅನ್ಯೋನ್ಯತೆಯಾಗಿದೆ. ಶೈವ, ವೈಷ್ಣವ, ಜೈನ ಮತಗಳವರು ಅವರವರ ಆರಾಧ್ಯ ದೈವಕ್ಕೆ ಮಂಡೆ ಬಾಗುತ್ತ ಒಂದೇ ಮನೆಯೊಳಗೆ ಒಟ್ಟಿಗೆ ಬಾಳುತ್ತಿದ್ದ ರೀತಿ ಇಂದಿನ ಮತ ವಿರೋಧಿ ಪ್ರತಿಭಟನಕಾರರಿಗೆ ಮತ್ತು ದ್ವೇಷಕ್ಕೆ ಗಾಳಿ ಬೀಸುವವರಿಗೆ ಕಣ್ಣು ತೆರೆಸುವ ಸಹಿಷ್ಣುತೆಯ ಮೇಲ್ಪಂಕ್ತಿಯಾಗಿದೆ.

ರಾಜನು ಹೇಗೊ ಪ್ರಜೆಗಳು ಹಾಗೆ ಎಂಬಂತೆ ಹೊಯ್ಸಳರಾಜ ವಿಷ್ಣುವರ್ಧನನ ಅರಮನೆಯಲ್ಲಿ ಈ ಮತಸಾಮರಸ್ಯ ಜೀವಂತವಾಗಿತ್ತು. ಇಡೀ ರಾಜ್ಯಕ್ಕೆ ಮಾದರಿಯಾಗಿತ್ತು. ವಿಷ್ಣುವರ್ಧನನ ಪಟ್ಟಮಹಿಷಿ ಶಾಂತಲದೇವಿಯ ತಾಯಿ ಮಾಚಿಕಬ್ಬೆ ಜೈನಳು, ತಂದೆ ಪೆರ್ಗ್ಗಡೆ ಮಾರಸಿಂಗಯ್ಯ

ಶೈವ, ಶಾಂತಲದೇವಿ ಜೈನೆ (EC. II. ಶ್ರಬೆ. ೧೬೧, ೧೬೨, ೧೭೩, ೧೭೪, ೧೭೬). ಹೊಯ್ಸಳ ಮಂತ್ರಿ ಚಂದ್ರಮೌಳಿಯು ಶಿವಭಕ್ತ, ಆತನ ಹೆಂಡತಿ ಆಚಲದೇವಿ ಜಿನಭಕ್ತೆ (ಅದೇ.: ಶ್ರಬೆ. ೪೪೪, ೫೭೧). ಮತಾಂತರ ಕುರಿತ ಚರ್ಚೆಯಲ್ಲಿ ಇದೊಂದು ಶಿಖರ ಸ್ಥಿತಿ. ಬೇರೆ ಬೇರೆ ಜಾತಿಯವರು ಮದುವೆಯಾದರೂ ಒಂದು ಚಾವಣೆಯಡಿ ಬದುಕಿದರೂ ತಾವು ಮತಾಂತರವಾಗದೆ ತಂತಂಮ ಮತವನ್ನು ಉಳಿಸಿಕೊಂಡು ಇನ್ನೊಬ್ಬರ ಮತವನ್ನು ಗೌರವಿಸುತ್ತ ಬಾಳುವುದು ಸಾಧ್ಯವೆಂಬುದನ್ನು ಸಾಬೀತುಪಡಿಸಿದ ಅಪರೂಪದ ನಿದರ್ಶನವಿದು. ಇಂಥ ಸಂಸಾರಗಳು ಹೊಯ್ಸಳ ಅರಮನೆಯಲ್ಲೇ ಅಲ್ಲದೆ ಸಾಮಾನ್ಯ ಗುಡಿಸಲಲ್ಲೂ ಜೀವಂತವಾಗಿದ್ದುದನ್ನು ಬ್ರಹ್ಮಶಿವನ ಬರೆವಣಿಗೆ ಹಿಡಿದಿಟ್ಟಿದೆ.

ಕ್ರಿ.ಪೂ. ಆರನೆಯ ಶತಮಾನದಲ್ಲಿ ಮತ್ತು ಅನಂತರ ನೂರಾರು ವರ್ಷಗಳಲ್ಲಿ ಜೈನಮತಕ್ಕೆ ಮತಾಂತರಗೊಂಡು ಬಂದವರಲ್ಲಿ ಹೆಚ್ಚಿನವರು ಕೆಳವರ್ಗದವರು : ಅಸ್ಪೃಶ್ಯರು, ಆದಿವಾಸಿಗಳು, ಶೂದ್ರರು. ಜೈನಾಗಮಗಳಲ್ಲಿ ಇದಕ್ಕೆ ಪೂರಕ ಸಾಕ್ಷ್ಯಾಧಾರಗಳಿವೆ. ಉತ್ತರಾಧ್ಯಯನದಲ್ಲಿ ಬರುವ ಹರಿಕೇಶಿಯ ಪ್ರಕರಣವನ್ನು ಹೆಸರಿಸಬಹುದು. ಚಂಡಾಲನಾದ ಹರಿಕೇಶಿಯು ಜೈನಮತ ಸೇರಿದ್ದಲ್ಲದೆ ತಪಸ್ವಿಯೂ ಆಗಿ ಎಲ್ಲರ ಪೂಜೆಗೆ ಪಾತ್ರನಾಗುತ್ತಾನೆ (ಉತ್ತರಾಧ್ಯಯನ : XII - ೫ ರಿಂದ ೪೨). ಹೀಗಾಗಿ ಭಾರತದಲ್ಲಿಯೇ ಮೊಟ್ಟಮೊದಲನೆಯ ಬಾರಿಗೆ ಎಲ್ಲ ಕೆಳಜಾತಿಗಳವರಿಗೂ ಮಹಿಳೆಯರಿಗೂ ಧಾರ್ಮಿಕ, ಸಾಮಾಜಿಕ, ಭಾಷಿಕ, ಸಾಂಸ್ಕೃತಿಕ ಬಿಡುಗಡೆ ದೊರೆತು ದೊಡ್ಡ ಕ್ರಾಂತಿಯಾದದ್ದು. ಕ್ರಿ. ಪೂ. ಆರನೆಯ ಶತಮಾನದಲ್ಲಿ, ಜೈನರಿಂದ ಮತ್ತು ಬೌದ್ಧರಿಂದ. ಈ ಪ್ರವೃತ್ತಿ ಬ್ರಹ್ಮಶಿವನ ಕಾಲದಲ್ಲಿಯೂ ಮುಂದುವರಿದಿತ್ತು. ಈ ಸಂಪ್ರಬಂಧದ ವಾಗ್ವಾದದ ಪರಿಧಿಯೊಳಗೆ ಅಳವಡುವಂತೆ ಬ್ರಹ್ಮಶಿವನ ವಿಚಾರಗಳು ಸಾಕಷ್ಟಿವೆ:

೧. ಜೈನನಾದ ಹೊಲೆಯನಿಗೂ ಉತ್ತಮ ಕುಲಜರಿಗಿರುವ ಮಾನ್ಯತೆಯಿದೆ (೨-೪೧)

೨. ಒಮ್ಮೆ ಜೈನನಾದ ಮೇಲೆ ಗೋಮಾಂಸಿಯೂ ಗೋಚರ್ಮದಲ್ಲಿ ತುಂಬಿಸಿದ ನೀರನ್ನು ಕುಡಿಯುವುದಿಲ್ಲ (೬-೨೧)

೩. ಕುಲಹೀನನಾದವನು ಮತಾಂತರಿಸಿ ಜೈನನಾದ ಮೇಲೆ ಹಿಂದಿನ ಹಿನ್ನೆಲೆಯೇಕೆ?

ಜೈನನಾದ ಕುಲಹೀನನಿಗೆ ಕಷ್ಟ ಬಂದರೆ ಜೈನ ಸಮಾಜ ಆದರಿಸಬೇಕು (೪-೩೧) ಶೂದ್ರನಾಗಲಿ, ಪಂಚಮನಾಗಲಿ, ಅಂತ್ಯಜನಾಗಲಿ ಜೈನಮುನಿಯಾದ ಮೇಲೆ ಪ್ರತಿಯೊಬ್ಬನೂ ಅವನ ಕಾಲು ತೊಳೆದು ಗೌರವಿಸಬೇಕು (೫-೧೪೧)

೪. ಒಕ್ಕಲಿಗನಾಗಿದ್ದ ಚಿಕ್ಕಯ್ಯನು ಜೈನ ಮುನಿಯಾದ ಮೇಲೆ ಕುಲಜರೆಲ್ಲ ಅವನ ಕಾಲು ತೊಳೆದು ಪೂಜ್ಯತೆ ತೋರಿದರು (೫-೧೪೨)

೫. ಜೈನನಾಗಿ ಮತಾಂತರಗೊಂಡ ಮೇಲೆ ಹೊಲೆಯನಿಗೂ ವ್ರತ ಶುಚಿ, ಸುಚರಿತೆ ಸಲ್ಲುವವು (೧೪-೧೦೩)

೬. ಚಾರಿತ್ರ್ಯಹೀನ ದೊರೆ ಮಗನಾಗುವುದಕ್ಕಿಂತ ವ್ರತನಿಷ್ಠನಾದ ಹೊಲೆಯನ ಮಗನಾಗುವುದು ಮೇಲು (೧೪-೧೦೫)

೭. ಆಚಾರವೆಂಬುದು ಕುಲಜನಿಗೆ, ಕುಲಹೀನನಿಗೆ ಎಂದು ಬೇರೆ ಇರಬಾರದು. ಹಾಗೆ ಪ್ರತ್ಯೇಕತೆ ಇರುವುದು ಠಕ್ಕ ಧರ್ಮ, ಹೊಲೆಯನ ಹತ್ತಿರ ಇದ್ದ ಮಾತ್ರಕ್ಕೆ ಬಂಗಾರ ತಾಮ್ರ ಆಗುತ್ತದೆಯೆ? ಧರ್ಮವೆಂಬುದು ಕೂಡ ಮೇಲುಜಾತಿ-ಕೀಳುಜಾತಿ ಎಂಬ ತಾರತಮ್ಯ ಇರದೆ ಏಕ ಪ್ರಕಾರವಾಗಿರುತ್ತದೆ. ಕುಲ ಮುಖ್ಯವಲ್ಲ (೧೫-೮,೧೦).

೮. ಮೊದಲು ಹೆಂಡ ಕುಡಿಯುವವನಾಗಿದ್ದಿರಬಹುದು : ಆದರೆ ಅವನು ಜೈನಧರ್ಮವನ್ನು ಮರೆಹೊಕ್ಕ ಮೇಲೆ ನಮಸ್ಕಾರಾರ್ಹನಾಗುತ್ತಾನೆ (೧೫-೩೩)

ಕ್ಷತ್ರಿಯನಾದಿಯಾಗಿ ಕಡೆಯೊಳ್ಪೊಲೆಯಂಬರವೆಲ್ಲ ಜಾತಿಗಂ
ಧಾತ್ರಿಯೊಳೆಲ್ಲಿ ನೋಡುವಡಮೇತೆಱದಿಂ ಕಱುಿಯಿಲ್ಲ ಶುದ್ಧ ಚಾ
ರಿತ್ರಮದೊಂದೆ ಮಾರ್ಗಮಮದಱೆಂ ಜಿನಧರ್ಮ್ಮಮೆಧರ್ಮ್ಮಮೈಹಿಕಾ
ಮುತ್ರಿಕ ಸೌಖ್ಯಹೇತು ಭುವನತ್ರಯ ಸಾರಮದೆಂತುಮೆಲ್ಲಿಯಂ।। ೧೫-೧೧

ಹಿಮಕರನ ಹಿಮಾಂಶುಗಳು
ತ್ತಮಜಾತಿಗಮಂತ್ಯಜಾತಿಗಂ ತಣ್ಪಿಂದಂ
ಸಮನಪ್ಪ ತೆಱದಿನುಂ
ಸಮನಾಗಲೆವೇಳ್ಕುಮಾವಜಾತಿಗಮೆಂತುಂ ।। ೧೫-೧೨

ಪಾಲುತ್ತಮಂಗಂ ಚಾಂ
ಡಾಲಂಗಂ ಸೀಯನಪ್ಪತೆಱದಿಂದಱಿನುಂ
ಮೇಲಪ್ಪ ಜಾತಿಗಂ ಚಾಂ
ಡಾಲಂಗಮದೊಂದೆಯಂದಮಾಗಲೆವೇಳ್ಕುಂ।। ೧೫-೧೩

ಹೀಗೆ ಮಹಾವೀರನ ಕಾಲದಿಂದಲೂ ಅಂತ್ಯಜರು ಜೈನರಾಗಿ ಮತಾಂತರವಾಗಿದ್ದಾರೆ. ಕರ್ನಾಟಕದ ಸಂದರ್ಭದಲ್ಲಿ **ಯಾಪನೀಯ** ಜೈನ ಪಂಥ ಪ್ರಾರಂಭವಾದದ್ದು ಈ ಬಗೆಯ ಹೊಸ ಮತಾತಂತರಿಗಳಿಗೂ ಸ್ತ್ರೀಯರಿಗೂ ವಿಶೇಷ ಧಾರ್ಮಿಕ ಆಶ್ವಾಸನೆ ಸ್ಥಾಪಿಸುವ ಸಲುವಾಗಿ. ಸ್ತ್ರೀಯು ಅದೇ ಭವದಲ್ಲಿ ಮೋಕ್ಷ ಪಡೆಯುತ್ತಾಳೆಂದು ಸ್ಪಷ್ಟವಾಗಿ ಸಾರಿದವರು ಯಾಪನೀಯರು. ಕರ್ನಾಟಕದ ಸಾಂಸ್ಕೃತಿಕ ಅಧ್ಯಯನಕಾರರು ಇದುವರೆಗೆ ಸಮಂಜಸವಾಗಿ ಕಾರಣಕೊಡಲು-ಕಂಡುಕೊಳ್ಳಲು ಅಸಮರ್ಥರಾಗಿರುವುದು ಈ ಯಾಪನೀಯ ಶಾಖೆ ಇದ್ದಕ್ಕಿದ್ದಂತೆ ೧೨ನೆಯ ಶತಮಾನ ಆದ ಮೇಲೆ ಯಾಕೆ ಕಣ್ಮರೆ ಆಯಿತೆಂಬುದು. ಅದಕ್ಕೆ ಸರಿಯಾದ ಉತ್ತರವಿಷ್ಟೆ : ಏಕಾಂತದ ರಾಮಯ್ಯ (ಅಬ್ಬಲೂರು ಶಾಸನ EI. V. p. 213 : EI. xxix. p. 140 ಸು. ೧೨೦೦) ವಿರುಪರಸ (JSI : 1957 : 400) ವೀರಗೊಗ್ಗಿದೇವರಸ (ಅಣ್ಣಿಗೇರಿ ಶಾಸನ ಮತ್ತು JSI : 1957 : 398, SII XV. 59 ನವಲಗುಂದ. ಕ್ರಿ.ಶ. ೧೧೮೪] ಮೊದಲಾದವರು ಕ್ರೂರ ಹಿಂಸೆಯ ಉಪಟಳ ಕೊಟ್ಟು ಕೊಂದ ಜೈನರೆಲ್ಲ ಈ ಯಾಪನೀಯ ಶಾಖೆಯವರಾಗಿದ್ದರು. ೧೨ನೆಯ ಶ. ದಿಂದ ಈಚೆಗೆ ಹಳೆಗನ್ನಡ ಜೈನಕಾವ್ಯಗಳು ಸಿಗದಿರುವುದಕ್ಕೂ ಈ ಹೋರಾಟದಲ್ಲಿ ಜೈನ ಶ್ರುತಭಂಡಾರಗಳನ್ನು ನಾಶಪಡಿಸಿದ್ದೇ ಮುಖ್ಯ ಕಾರಣ. ಜೈನ ಸಮಾಜ ಮತ್ತು ಮತಾಂತರ ಕುರಿತು ಮಾಹಿತಿಗಳನ್ನಿತ್ತು ವಾಗ್ವಾದಕ್ಕಿಳಿದ ಇತರರಲ್ಲಿ ಶ್ರುತಿಕೀರ್ತಿ, ಧರಣಿ ಪಂಡಿತ ಮತ್ತು ಚಂದ್ರಸಾಗರ ವರ್ಣಿ-ಇವರನ್ನು ಹೆಸರಿಬೇಕು. ಈ ಕವಿಗಳ ಕೃತಿಗಳನ್ನು ಮತಾಂತರದ ಹಿನ್ನೆಲೆಯಲ್ಲಿ ಪರಿಶೀಲಿಸುವುದಕ್ಕೆ ಮೊದಲು

ಕೆಲವು ಇದೇ ಬಗೆಯ ವೀರಶೈವ ಕೃತಿಗಳನ್ನು ಪ್ರಸ್ತಾಪಿಸುವ ಔಚಿತ್ಯವಿದೆ. ಸಿದ್ಧಲಿಂಗೇಶ ಕವಿಯ (ಸು. ೧೬೦೦) ಚಿತ್ತಾರಾಧ್ಯ ಚರಿತೆ (ಸುಜ್ಞಾನ ಬೋಧೆ)ಯಲ್ಲಿ ಗುರುಚಿತ್ತಾರಾಧ್ಯನು ನಿಸ್ಸೀತಿ ಪಟ್ಟಣದಲ್ಲಿದ್ದ ೭೦ ಬಸದಿಗಳನ್ನು ಒಡೆಸಿ ಜೈನರ ಗುಡಿಗಳ ಕಳಶಗಳನ್ನು ಶಿವಾಲಯಗಳಿಗೆ ಹಾಕಿಸಿದ್ದನ್ನು ತನ್ಮಯತೆ-ಅಭಿಮಾನಗಳಿಂದ ಪ್ರಶಂಸಿಸಲಾಗಿದೆ. ಶಾಂತನಿರಂಜನ ಕವಿಯ (ಸು. ೧೬೮೦) ಅಬ್ಬಲೂರು ಚರಿತೆಯ ಏಕಾಂತದ ರಾಮಯ್ಯನು ಶಿವಪ್ರೇರಣೆಯಿಂದ ಜಿನಮೂರ್ತಿಗಳನ್ನು ನಾಶಮಾಡಿದ್ದನ್ನು ವಿಸ್ತಾರವಾಗಿ ವೈಭವದಿಂದ ವರ್ಣಿಸಿದೆ. ಜಿನಾಲಯಗಳನ್ನು ನುಚ್ಚುನೂರು ಮಾಡಿದ್ದಲ್ಲದೆ ಜೈನರನ್ನೂ ಅವರ ಹೆಂಗಸರನ್ನೂ ಹಿಂಸಿಸಿ ಕೊಂದುದನ್ನು ಚಿತ್ರಿಸಿದೆ:

ಮೂಲಬಸ್ತಿಯ ತಲೆಕೆಳಗಾಗಿ ಕೆಡೆದುದು
ಬೀಳುತಿರ್ದುವು ಮುಂಬಲ್ಲು
ವಾಲೆಯಿಡುವ ಹಾಲೆ ಹರಿಯಲು ಹೆಣ್ಗಳು
ಹಾಳುಬಾವಿಯ ಬೀಳುತಿಹರು ॥ ೫-೮೩

ಅನಿತರೊಳಗೆ ಒಂದು ಅದ್ಭುತ ತೋರಿತು
ಮನುಜವೇಶವ ತಾಳಿ ಈಶ
ಕನಲಿ ಮಠವು ಪೊಕ್ಕು ಜೈನರ ಗುರುವಿನ
ಕೊನೆ ಮೂಗನರಿದು ನಿಂದಿರ್ದ ॥ ೬-೬

ಬಟ್ಟೆ ಬಟ್ಟೆಯೊಳೆಲ್ಲ ಹರಿವ ರಕ್ತದ ತೊರೆ
ಅಟ್ಟೆಮುಂಡವು ತೇಲಿ ಮುಳುಗೆ
ಕಟ್ಟಳಿಲ್ಲದೆ ಪೆಣಗಳು ಕಂಡು ಶ್ರವಣರು
ಘಟ್ಟದ ಕೆಳಕೆ ಸರಿಯೆ॥ ೬-೧೬

ಹೀಗೆ ಒಂದು ಜನಾಂಗ ಇನ್ನೊಂದು ಧರ್ಮದವರನ್ನು ಮತಾಂಧರಾಗಿ ಕೊಲೆ ಮಾಡಿದ್ದು ಅತ್ಯಂತ ಹೇಯವಾಗಿ ಕಾಣುತ್ತದೆ. ವಿಕೃತ ಶಿಶುಗಳಂತಿರುವ ಇಂಥ ಕವಿಗಳೂ ಕಾವ್ಯಗಳೂ ಇದನ್ನು ಹೆಮ್ಮೆಯಿಂದ ಹಾಡಿ ಹೊಗಳಿ ಮೈಯುಬ್ಬುವುದು ಬರ್ಬರತೆಗೆ ಬಹುಮಾನ ಕೊಟ್ಟಂತೆ. ಕಾವ್ಯ ಕವಿಯ ಅಂತಃಸ್ಥಿತಿಗೆ ಕೆತ್ತಿದ ಪ್ರತಿಮೆ. ಮಾನವೀಯತೆಯನ್ನು ಕಿತ್ತು ಗಾಳಿಗೆ ತೂರಿದ ಪೈಶಾಚಿಕ ಪ್ರವೃತ್ತಿಯಷ್ಟೇ ಇದನ್ನು ಮೆಚ್ಚುಗೆಯಿಂದ ಬರೆಯುವುದು ಸಾಧ್ಯ. ಕೊಲೆಗಡುಕರೆಲ್ಲ ಭಕ್ತರೆಂಬ ಕಾರಣದಿಂದ ಪರಮಾತ್ಮನಿಗೆ ಪ್ರಿಯರಾಗುತ್ತಾರೆಂದು ಒಪ್ಪುವುದಾದರೆ ಜೈಲುಗಳನ್ನು ಮುಚ್ಚಿ ನ್ಯಾಯಲಯಗಳನ್ನು ನಿಷೇಧಿಸಬೇಕಾದೀತು (ಹಂಪ. ನಾಗರಾಜಯ್ಯ : ೧೯೭೫ : ೧೨೭-೯)

ಶ್ರುತಕೀರ್ತಿಯು (೧೫೬೭) **ವಿಜಯಕುಮಾರಿ ಚರಿತೆ** ಕಾವ್ಯವು ಜೈನರಾಗಿ ಉಳಿದಿರುವ ಕುಟುಂಬದೊಂದಿಗೇ ವೀರಶೈವರಾಗಿ ಮತಾಂತರವಾದ ಕುಟುಂಬದವರು ವೈವಾಹಿಕ ಸಂಬಂಧಕ್ಕೆ ಪ್ರಯತ್ನಪಟ್ಟ ಸಾಮಾಜಿಕ ಸವಾಲೊಂದನ್ನು ವಸ್ತುವನ್ನಾಗಿಸಿದೆ : ಈ ಕಾವ್ಯ ಪ್ರಸ್ತುತ ಸಂಪ್ರಬಂಧದ ಚರ್ಚೆಗೆ ಗ್ರಾಸವಾಗಿದೆ. ಧರಣಿ ಪಂಡಿತ (೧೬೫೦) ಮತ್ತು ಚಂದ್ರಸಾಗರವರ್ಣಿಯ ಕೃತಿಗಳು ಕಲಚೂರಿರಾಜ ಬಿಜ್ಜಳನನ್ನು ಜೈನನೆಂದು ಚಿತ್ರಿಸಿವೆ. ಹರಿಹರನ ಬಸವರಾಜ ದೇವರ ರಗಳೆಯಲ್ಲಿ ಬಿಜ್ಜಳನ ಸಾಹಸಾದಿಗಳನ್ನು ಕಡೆಗಣಿಸಿ, ಚಾರಿತ್ರಿಕ ಸತ್ಯವನ್ನು ಬಿಟ್ಟು, ಹೇಡಿಯಂತೆ ಚಿತ್ರಿಸಲಾಗಿದೆ.

ಧರಣಿಪಂಡಿತ ಮತ್ತು ಚಂದ್ರಸಾಗರವರ್ಣಿ ಬಿಜ್ಜಳನನ್ನು ಮೇಲೆ ಎತ್ತಿದರು ನಿಜ, ಆದರೆ ವಿಭೂತಿ ಪುರುಷ ಬಸವಣ್ಣನನ್ನು ನಿರ್ಲಕ್ಷಿಸಿದರು. ಭಕ್ತಿಯ ಭಾವಾವೇಶ ಹರಿಹರನನ್ನು ನಿಜ ಜೀವನದ ವಾಸ್ತವತೆಯಿಂದ ವಿಮುಖನನ್ನಾಗಿಸಿದರೆ, ಮತೀಯ ಆವೇಶ ಜೈನ ಕವಿಗಳನ್ನು ಇತಿಹಾಸಕ್ಕೆ ಮಸಿಬಳಿಯುವಂಥ ಕೆಲಸಕ್ಕೆ ಪ್ರಚೋದಿಸಿದೆ. (ಹಂಪ. ನಾಗರಾಜಯ್ಯ : ೧೯೮೧ : ಮುನ್ನುಡಿ XIX-XX.) ಸಮಕಾಲೀನ ಮತವೈಷಮ್ಯದಿಂದ ಕೂಡಿದ ಚಿತ್ತಾರಾಧ್ಯಚರಿತೆ, ಅಬ್ಬಲೂರು ಚರಿತೆ, ಬಿಜ್ಜಳರಾಯಚರಿತೆ-ಇಂಥ ಅಸಾಹಿತ್ಯಕ ಕೃತಿಗಳಿಗೆ ಮಾನ್ಯತೆ ನೀಡುವ ಅಗತ್ಯವಿಲ್ಲವಾದರು ಅವುಗಳ ಒಡಲಲ್ಲಿ ಮಡಗಿರುವ ಇತಿಹಾಸದ ಕಾಳುಗಳನ್ನು ನೋಡಬೇಕು. ಇಷ್ಟಾಗಿಯೂ ಈ ಜೈನ ಕವಿಗಳು ಶಿವಾಲಯಗಳನ್ನು ನಾಶ ಮಾಡುವ, ಶೈವ-ವೀರಶೈವರನ್ನು ಕೊಲ್ಲುವ, ಸ್ತ್ರೀಯರನ್ನು ಹಿಂಸಿಸಿ ಸಾಯುವಂತೆ ಮಾಡಿದ ರೀತಿಯಲ್ಲಿ ಪ್ರತೀಕಾರ ಪ್ರವೃತ್ತಿಯನ್ನು ಸ್ವಲ್ಪವೂ ತೋರದೆ ಎಂದಿನ ಸಂಯಮವನ್ನು ಪಾಲಿಸಿರುವುದನ್ನೂ ತೌಲನಿಕ ಅಧ್ಯಯನಕಾರರು ಗಮನಿಸಿದ್ದಾರೆ.

೧೨ ನೆಯ ಶತಮಾನದ ಕಡೆಯ ದಶಕದಿಂದ ಪ್ರಾರಂಭವಾದ ಜೈನ ಸಮಾಜದ ವಿಕೇಂದ್ರೀಕರಣ ಅಥವಾ ವಿಘಟನೆಯ ಪರಿಣಾಮಗಳಲ್ಲಿ ಕೆಲವನ್ನು ಸಂಗ್ರಹಿಸಿ ಹೇಳಬಹುದು:

೧. ಜೈನರಲ್ಲಿ ಅನೇಕರು ಶ್ರೀವೈಷ್ಣವರಾದರು.

೨. ಜೈನ ಸಮಾಜದ ೫% ಕ್ಕೂ ಹೆಚ್ಚಿನ ಸಾಮೂಹಿಕ ಮತಾಂತರವಾಗಿ ಅವರೆಲ್ಲ ವೀರಶೈವರಾದರು. ಜೈನ ಕೆಟ್ಟು ಬಣಜಿಗನಾದ ಎಂಬಂಥ ಗಾದೆಗಳು ಹುಟ್ಟಿದುವು. ಸಿರಿವಂತ ವರ್ತಕ ವೃಂದದ ದೊಡ್ಡ ಸಮುದಾಯ (ಶ್ರೇಣಿ)ಗಳು ಅನಾಮತ್ತಾಗಿ ವೀರಬಣಜಿಗರಾದರು.

೩. ಅದುವರೆಗೂ ಜೈನ ಸಮಾಜಾಂತರ್ಗತವಾಗಿದ್ದ ವೈಶ್ಯರಲ್ಲಿ ಕೆಲವರು ಬಣಜಿಗರೆಂಬ ಹೊಸ ಹೆಸರು ಹೊತ್ತು ಬೇರೆಯಾದರೆ, ಇನ್ನು ಕೆಲವರು ಕೋಮಟಿಗರು ಎಂಬ ಹೆಸರಿನಿಂದ ಬೇರೆಯಾದರು. ೧೨ನೆಯ ಶ. ಕ್ಕಿಂತ ಹಿಂದೆ ಈ ಜನಾಂಗ-ಹೆಸರು ಇರಲೇ ಇಲ್ಲ. ಆದರೂ ಕೋಮಟಿಗರ ಆಹಾರ ಪದ್ಧತಿ ಮತ್ತು - ಸೆಟ್ಟಿ, ಶ್ರೇಷ್ಠಿ, ಶೆಟ್ಟಿ ಎಂದು ಅಂತ್ಯವಾಗುವ ಹೆಸರುಗಳೂ ಹಾಗೆ ಉಳಿದುವು. ಜೈನರು ವೈಶ್ಯರಾಗುವ ಪ್ರಕ್ರಿಯೆ ಪ್ರಾರಂಭವಾದದ್ದು ಆಂಧ್ರದಲ್ಲಿ. ಪದ್ಮಾವತೀದೇವಿ ಮೊದಲಾದ ಹಿಂದಿನ ತಮ್ಮ ಯಕ್ಷಿಯ ಬದಲು ಕನ್ಯಕಾಪರಮೇಶ್ವರಿ ದೇವಿಯನ್ನು ಕಲ್ಪಿಸಲಾಯಿತು. ಜೈನಕಥಾಸಾಹಿತ್ಯದ ತುಂಬ ಇರುವುದೇ ಸೆಟ್ಟರ ಪಾತ್ರಗಳೆಂಬುದನ್ನೂ ಇಲ್ಲಿ ನೆನೆಯಬಹುದು. 'ಕದಂಬ ಪುರಾಣ'ದಲ್ಲಿ ಚಂದ್ರಸಾಗರ ವರ್ಣಿಯು ಕೋಮಟಿಗರನ್ನು ಪ್ರಸ್ತಾಪಿಸಿದ್ದಾನೆ.

೪. ಶಿವಮೊಗ್ಗ ಚಿಕ್ಕಮಗಳೂರು, ಮೈಸೂರು, ಮಂಡ್ಯ, ಹಾಸನ ಜಿಲ್ಲೆಗಳ ಕೆಲವು ಕೃಷಿಕ ಪ್ರಧಾನ ಜೈನ ಕುಟುಂಬಗಳು ಒಕ್ಕಲಿಗರಾದರು. ರಾಷ್ಟ್ರಕವಿ ಕುವೆಂಪುರವರು ತಮ್ಮ ಆತ್ಮಕಥೆ ನೆನಪಿನ ದೋಣಿಯಲ್ಲಿ ತಮ್ಮ ಮನೆತನಗಳವರು 'ಜೈನ ಎಡೆ' ಇಡುವ ಪದ್ಧತಿಯನ್ನು ಸೂಚಿಸಿದ್ದಾರೆ. ಆಲನಹಳ್ಳಿಕೃಷ್ಣ ತಾವೆಲ್ಲ ಜೈನ ಮೂಲದವರೆದು ತಿಳಿಸಿದ್ದಾರೆ. ಗಂಗಡಿಕಾರ ಒಕ್ಕಲಿಗರು ಜೈನಗಂಗ ವಂಶದವರೆನ್ನಲಾಗಿದೆ.

೫. ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆಲವು ಜೈನರು ನಾಮಧಾರಿಗಳಾದರು : ಜಿನದೇವ ನಾಯಕರ ಹೆಸರು ಅಂಥದೊಂದು ಪಳೆಯುಳಿಕೆ.

೬. ದಕ್ಷಿಣ ಕನ್ನಡ ಜಿಲ್ಲೆಯ ಅನೇಕ ಜೈನ ಕುಟುಂಬಗಳು, ಆಹಾರ ಪದ್ಧತಿ ಕಾರಣವಾಗಿ ಬಂಟರಾದರು. ಇಂದಿಗೂ ಕುಟುಂಬ ಮತ್ತು ವ್ಯಕ್ತಿವಾಚಕ ಹೆಸರುಗಳು ಜೈನರಿಗೂ ಬಂಟರಿಗೂ ಸಮಾನ.

೭. ಉತ್ತರ ಕನ್ನಡ ಜಿಲ್ಲೆಯ ಕರಾವಳಿಯಲ್ಲಿ, ಮುಖ್ಯವಾಗಿ ಭಟ್ಕಳ ಸುತ್ತಮುತ್ತ ಕೆಲವು ಜೈನರು 'ನವಾಯತರು' ಎಂಬ ಗುಂಪಿನ ಮುಸಲ್ಮಾನರಾದರು. ಇಂದಿಗೂ ನವಾಯತರ ಹೆಂಗಸರು ರಾತ್ರಿ ಊಟ ಮಾಡುವುದಿಲ್ಲ ಮತ್ತು ಅವರ ಹೆಸರುಗಳು ಪದ್ಮಾವತಿ ಬೀಬಿ, ಜ್ವಾಲಾಮಾಲಿನಿ ಬೀಬಿ ಎಂದಿವೆ. ಇದನ್ನು ನೋಡಿದಾಗ ಜೈನ ಮಹಿಳೆಯರು ಗತ್ಯಂತರವಿಲ್ಲದೆ ಇಸ್ಲಾಮ್ ಧರ್ಮಕ್ಕೆ ಮತಾಂತರವಾಗಿರಬಹುದೆಂದು ಊಹಿಸಲು ಅವಕಾಶವಿದೆ.

೮. ೧೨ನೆಯ ಶ.ದ ವರೆಗೂ ಜೈನ ಧರ್ಮದವರಾಗಿದ್ದ ಸಾದರು ೧೫ನೆಯ ಶ.ದ ಹಂತದಲ್ಲಿ ಪ್ರತ್ಯೇಕಗೊಂಡರು. ಕಳಚುರ್ಯ ವೀರಬಿಜ್ಜಣದೇವನು ಕಲ್ಯಾಣದ ನೆಲೆವೀಡಿನಿಂದ ರಾಜ್ಯವಾಳುತ್ತಿರುವ ಅವಧಿಯಲ್ಲಿ ರಚಿತವಾದ ಶಾಸನದಲ್ಲಿ ಮೊಟ್ಟಮೊದಲನೆಯ ಬಾರಿಗೆ 'ಸಾದವಂಶ-ಸಾದಕುಲ'ದ ಪ್ರಸ್ತಾಪ ಸಿಗುತ್ತದೆ. [SII. XVIII. No. 180 A. D. 1168. ನದಿಹರಳಹಳ್ಳಿ, (ಧಾರವಾಡ ಜಿಲ್ಲೆ ರಾಣೆಬೆನ್ನೂರ ತಾ)]. ೧೫ನೆಯ ಶ.ದ. ತರುವಾಯ ಈ ಸಾದರ ಒಂದು ದೊಡ್ಡ ಗುಂಪು ಚಿತ್ರದುರ್ಗ, ತುಮಕೂರು, ಕೋಲಾರ ಜಿಲ್ಲೆಗಳಲ್ಲಿ ತರಳಬಾಳು ಮಠದ ಶಿಷ್ಯರಾಗಿ ವೀರಶೈವರಾದರು. ಕೆಲವರು ಜೈನ ಸಾದರಾಗಿ ಮುಂದುವರಿದರು, ಮತ್ತೆ ಕೆಲವರು ತಾವೇ ಪ್ರತ್ಯೇಕ ಸಾದರೆಂದು ಉಳಿದಿದ್ದಾರೆ.ಚಂದ್ರಸಾಗರ ವರ್ಣಿಯು ಸಾದರು ಜೈನರೆಂದು ೧೮ನೆಯ ಶತಮಾನದ ತನ್ನ ಕೃತಿಯಲ್ಲಿ ದಾಖಲಿಸಿದ್ದಾನೆ (ಹಂಪನಾ : ೧೯೮೧ :) ೧೯೪೦ರ ಸುಮಾರಿನಲ್ಲಿ ಕೋಲಾರ, ತುಮಕೂರು ಜಿಲ್ಲೆಯ ಸಾದರನ್ನು ಮತ್ತೆ ಜೈನ ಮತಕ್ಕೆ ಮತಾಂತರಿಸುವ ಪ್ರಯತ್ನವಾಯಿತು : ಇದು ಸಾದರ ಸಮಾಜದ ಮುಖಂಡರ ಅಪೇಕ್ಷೆಯ ಮೇರೆಗೆ ಅವರ ನೆರವಿನಿಂದ ನಡೆದ ಪ್ರಯತ್ನ. 'ಜೈನ ಸಾದರು' ಎಂದು ಜನಗಣತಿಯಲ್ಲಿ ಕಂದಾಯ ಇಲಾಖೆ ಖಾತೆಗಳಲ್ಲಿ, ಶಾಲಾ ಕಾಲೇಜು ಅರ್ಜಿಗಳಲ್ಲಿ ನಮೂದಿಸಿದಂತಹ ಆಧಾರಗಳಿವೆ.

೯. ಜೈನರು ಬೌದ್ಧರಾಗಿ, ಬೌದ್ಧರು ಜೈನರಾಗಿ ಮತಾಂತರ ಮಾಡಿದ್ದು ಕ್ರಿ.ಶ. ೧೦ನೆಯ ಶತಮಾನಕ್ಕೂ ಮೊದಲೇ ಹೊರತು ಅನಂತರ ಅಲ್ಲ.

೧೦. ಧರ್ಮ, ಜಾತಿ, ಮತ, ವರ್ಣ, ಭಾಷೆ, ಸಂಸ್ಕೃತಿ-ಇವುಗಳಲ್ಲಿ ಸಂಭವಿಸುವ ಸಂಕರ ಭಾರತಕ್ಕೆ ಹೊಸದಲ್ಲ. ಇದು ಸಾವಿರಾರು ವರ್ಷಗಳಿಂದ ನಡೆಯುತ್ತಿರುವ ಪ್ರಾಚೀನ ವಿಷಯ. ಭಾರತದಂತಹ ಬೃಹತ್ ರಾಷ್ಟ್ರದಲ್ಲಿ ಜನಸಂಖ್ಯಾ ಸ್ಫೋಟದ ಸ್ರೋತ ಮತ್ತು ಓಘದಲ್ಲಿ ಸಂಕರ ಅನಿವಾರ್ಯ. ಇದು ೧೨ನೆಯ ಶತಮಾನದ ಚರಿತ್ರೆಯ ಪಾಠವೂ ಹೌದು. ಇಂಥ ಸಂಕರಗಳ ಪರಿಣಾಮವಾಗಿ ಗುಡಿ ಗುಂಡಾರ ಗೋಪುರಗಳ ಜಾತಿ ಲಾಂಛನಗಳಲ್ಲಿ ಮಾರ್ಪಾಡುಗಳಾದುವು.

೧೧. ಕಾಳಾಮುಖಶೈವರು ಉಗ್ರವಿರೋಧಿಗಳೆಂದು, ಅವರಿಂದ ಏಟುಗಳನ್ನು ತಿಂದ ಮೇಲೆ ಮನವರಿಕೆಯಾದ ಜೈನರು ೧೩ನೆಯ ಶತಮಾನದ ಆರಂಭದಿಂದಲೇ ಅವರೊಂದಿಗೆ

ರಾಜಿಯಾದರು. ತಮ್ಮ ಜಿನಾಲಯಗಳಿಗೆ ಅವರಿಂದ ಅಪಾಯಗಳು ಆಗದಿರಲೆಂದು 'ಎಕ್ಕೋಟಿ ಜಿನಾಲಯ'ವೆಂದು ಕರೆಯತೊಡಗಿದರು. (EC. II ಶ್ರಬೆ. ೫೭೩ ಸು. ೧೩ ಶ. : KI.V. No. ೯೮ ಜಮಖಂಡಿ ಕ್ರಿ.ಶ. ೧೧೮೧). ಇದರ ಸ್ವಾರಸ್ಯಕರ ಪರಿವರ್ತನೆ ಮತ್ತು ಪ್ರಭಾವವನ್ನು ಕಂಬದಹಳ್ಳಿಯ ಶಾಸನದಲ್ಲಿ ಕಾಣಬಹುದು : ಶ್ರೀ ಮೂಲಸಂಘ ದೇಸಿಗಣದ ಪೊಸ್ತಕಗಚ್ಛದ ಕಂಬದಹಳ್ಳಿ ತೀರ್ಥವ ಎಕ್ಕೋಟಿ ಜಿನಾಲಯವೆಂದು ಹೆಸರುಂ ಭೇರಿ ಪಂಚಮಹಾಶಬ್ದವಂ ಎಕ್ಕೋಟಿ ಮಹಾರುದ್ರರಿಳ್ದು ಕೊಟ್ಟರು (EC. VII ನಾಗಮಂಗಲ ೩೧. ಸು. ೧೩ ಶ.)

೧೨. ಬೆಳಗಾವಿ ಜಿಲ್ಲೆಯ ಸಂಪಗಾಂವ ತಾಲೂಕು ನೇಸರಿಗೆಯ ಶಾಸನವೂ ಶೈವ-ಜೈನರ ಹೊಂದಾಣಿಕೆಯನ್ನು ಬಿಂಬಿಸುತ್ತದೆ. ಈ ಶಾಸನದ ನಡುವೆ ಲಿಂಗವೂ, ಅದರ ಒಂದು ಪಕ್ಕಕ್ಕೆ ಬಸವ ಮತ್ತು ಸೂರ್ಯ. ಇನ್ನೊಂದು ಬದಿಗೆ ಹಸು-ಕರು, ಕುಡುಗೋಲು ಮತ್ತು ಚಂದ್ರ ಇದೆ. [J.F. Fleet : A Series of Sanskrit and Old Canarese Inscriptions relating to the Ratta chieftains of Saundatti and Belgaum; Journal of the Bombay Branch of the Royal Asiatic Society, No. xxx, Vol. X, 1874, pp. 240-286]

೧೩ Jainism began to loose its ground from about the eleventh century following the subversion of the Rastrakuta empire and the Ganga kingdom, which were its, prinicpal main stay [K. K. Handiqui : 1949 : 347] ಈ ಹೇಳಿಕೆಯನ್ನು ಪುಷ್ಟೀಕರಿಸುವಂಥ ತೀರ ಪರಿಮಿತ ಆಧಾರಗಳೂ ಸಿಗುತ್ತವೆ : ತೊಲಗದೆ ಜೈನ ಮಾರ್ಗದೊಳ್ ನಿಶ್ಚಳರಪ್ಪುದು. [SII. IX-i 117. A.D. 1055] ಆದರೆ ಜೈನ ಧರ್ಮದಿಂದ ಅನ್ಯಧರ್ಮಗಳಿಗೆ ಮತಾಂತರವಾಗುವ ಪ್ರಕ್ರಿಯೆಗೆ ಪ್ರೇರಣೆಗಳು ಚುರುಕಾದದ್ದು ೧೨ನೆಯ ಶ. ದಿಂದ. ಅಪ್ಪಟ ಜೈನರಾಗಿ ಪ್ರಾರಂಭವಾದ ಪಶ್ಚಿಮ ಚಾಳುಕ್ಯರು, ಚೆಂಗಾಳ್ವರು, ಕೊಂಗಾಳ್ವರು ಮೊದಲಾದ ದೊಡ್ಡ-ಸಣ್ಣ ರಾಜ ಮನೆತನಗಳು ಶೈವರಾದರು : ಹೊಯ್ಸಳರು ವೈಷ್ಣವರಾದರು. ಈ ಕಾಲದ ಒಂದು ಶಾಸನದ ಮಾಹಿತಿ ಮತಾಂತರಕ್ಕೊಂದು ದಿಕ್ಸೂಚಿಯಾಗಿದೆ : ಬಾಸವೂರ ೧೪೦ರ ಹೆಮ್ಮಾಡಿಯರಸನು ಮೊದಲು ಪದ್ಮಾವತೀ ಲಬ್ಧವರ ಪ್ರಸಾದನಾಗಿದ್ದನು; ಆಮೇಲೆ ಮಾಹೇಶ್ವರ ದೀಕ್ಷೆ ಕೈಗೊಂಡು ಶೈವನಾದನು [EI. XIX. A.D. 1121. p. 192].

೧೪. ಪ್ರಾಕೃತ ಶ್ರೀಚಂದ್ರ ಕಥಾಕೋಶ, ಸಂಸ್ಕೃತ ಹರಿವಂಶ, ಮಹಾಪುರಾಣ, ಹರಿಷೇಣನ ಬೃಹತ್ ಕಥಾಕೋಶ, ಪ್ರಭಾಚಂದ್ರ ಕಥಾಕೋಶಗಳಲ್ಲಿ, ಚೂರ್ಣಿ ಮತ್ತು ವ್ಯಾಖ್ಯಾನ ಗ್ರಂಥಗಳಲ್ಲಿ ಜೈನ ಸಮಾಜಕ್ಕೆ ಮತಾಂತರಗೊಂಡವರ ಕಥೆಗಳಿವೆ. ಕನ್ನಡದಲ್ಲಿ ಮಾರ್ಗಕಾವ್ಯಗಳಲ್ಲೂ ದೇಸಿ ಕಾವ್ಯಗಳಲ್ಲೂ ಜೈನ ಕವಿಗಳು ವ್ಯವಸ್ಥಿತವಾಗಿ ಈ ಕೆಲಸ ಮಾಡಿದ್ದಾರೆ. ನಯಸೇನ ಕವಿಯ ಧರ್ಮಾಮೃತ, ವೃತ್ತ ವಿಲಾಸನ ಧರ್ಮಪರೀಕ್ಷೆ, ಭ್ರಾಜಿಷ್ಣುವಿನ ವಡ್ಡಾರಾಧನೆ-ಮೊದಲಾದ ಕೃತಿಗಳಲ್ಲಿ ಜೈನ ಸಮಾಜದ ಮತ್ತು ಮತಾಂತರದ ಮಾಹಿತಿಗಳಿವೆ.

ಈ ಸಂಪ್ರಬಂಧದ ಸಾಮಗ್ರಿಯನ್ನು ಎರಡು ಮುಖ್ಯ ಮೂಲಗಳಿಂದ ಸಂಚಯಿಸಿದೆ : ಚಾರಿತ್ರಿಕ ಆಧಾರಗಳು ಮತ್ತು ಸಾಹಿತ್ಯಕ ಆಧಾರಗಳು. ಆಕರದ ಮೂಲಗಳು ಎರಡಾದರೂ ಅವು ಪೂರೈಸುವ ಸಾಮಗ್ರಿ ಒಂದೇ ಆಶಯಕ್ಕೆ ಬದ್ಧವಾಗಿ ದುಡಿಯುತ್ತವೆ. ಈ ವಿಷಯಕ್ಕೆ ಹಲವು ಆಯಾಮಗಳಿವೆ. ಅವೆಲ್ಲದರ ಚರ್ಚೆಗೆ ಅಗತ್ಯವಾದ ಪೂರಕ ಸಾಮಗ್ರಿಯೂ ಉಪಲಬ್ಧವಿದೆ. ಆದರೆ ಅಷ್ಟು ವ್ಯಾಪ್ತಿಗೆ ಈ ಸಂಪ್ರಬಂಧವನ್ನು ಕೊಂಡೊಯ್ಯುವುದು ಅತಿ ಮಹತ್ವದ ಆಕಾಂಕ್ಷೆಯಾಗುತ್ತದೆ. ಅದರಿಂದ ಸಂಪ್ರಬಂಧದ ಕಕ್ಷೆಯನ್ನು, ಅಖಿಲ ಭಾರತದ ಹಿನ್ನೆಲೆಯಿಟ್ಟುಕೊಂಡೂ ಸಹ ಆದಷ್ಟೂ ಕರ್ನಾಟಕದ ಎಲ್ಲೆಯೊಳಗಿನ ಜೈನ ಸಮಾಜ ಮತ್ತು ಮತಾಂತರ ಚರ್ಚೆಗೆ ಹಾಗೂ ಒಟ್ಟಾರೆಯಾಗಿ ಐತಿಹಾಸಿಕ ಸಮೀಕ್ಷೆಗೆ ಆದ್ಯತೆ ಕೊಡಲಾಗಿದೆ.

ಜೈನ ಸಮಾಜ ಹೂ ಚೆಲ್ಲಿದ, ರಂಗವಲ್ಲಿಯಿಟ್ಟು ನಡೆಮಡಿ ಹಾಸಿದ ಹಾದಿಯಲ್ಲಿ ನಡೆದು ಬರಲಿಲ್ಲ. ಅಡ್ಡಿ ಆತಂಕಗಳ, ಪ್ರತಿಭಟನೆ, ವಿರೋಧಗಳ ಸವಾಲುಗಳನ್ನು ಎದುರಿಸುತ್ತ ಜೈನ ಸಮಾಜ ಅಗ್ನಿದಿಬ್ಯಗಳಲ್ಲಿ ಜೀವಂತ ಹಾದು ಬಂದಿದೆ. ಪ್ರಾಕೃತ, ಸಂಸ್ಕೃತ, ತಮಿಳು, ಕನ್ನಡ ಮೊದಲಾದ ಭಾಷೆಗಳ ಪ್ರಾಚೀನ ಕೃತಿಗಳಲ್ಲಿ ಇದಕ್ಕೆ ವಿಪುಲವಾದ ಸಾಕ್ಷ್ಯಾಧಾರಗಳಿವೆ. ಕನ್ನಡದಲ್ಲಿ ಬ್ರಹ್ಮಶಿವನ **ಸಮಯ ಪರೀಕ್ಷೆ** ಕಾವ್ಯದ ಕೆಲವು ಪದ್ಯಗಳು (೧೩-೮, ೨೨, ೩೭ : ೪-೮೮; ೨-೫ ೧೨-೨೯) ಅಭ್ಯಸನೀಯವಾಗಿವೆ.

ಜೈನ ಸಮಾಜದ ಚರಿತ್ರೆಯಲ್ಲಿ ಏರಿಳಿತಗಳಿವೆ. ಪರಿವರ್ತನೆಗಳಿವೆ. ನಿಂತ ನೀರಿನಂತೆ ಸ್ಥಗಿತವಾಗುವ ಹಂತಗಳು ಬಂದಾಗ ಜೈನ ಸಮಾಜವನ್ನು ಹರಿಯುವ ನದಿಯಾಗಿಸಿ ಪುನಶ್ಚೇತನಗೊಳಿಸಲಾಗಿದೆ. ಇಂಥ ಪುನರುಜ್ಜೀವನದ ಪ್ರಕ್ರಿಯೆಯಲ್ಲಿ ಮತಾಂತರದ ಪಾತ್ರವೂ ಇದೆ. ಮತಾಂತರವನ್ನು, ಒಂದು ಸಮಾಜದ ಚಿತ್ತ ಸ್ವಾಸ್ಥ್ಯವನ್ನು ಕಲಕುವ ಅರ್ಬುದ ಬೇನೆಯೆಂದು ಗಾಬರಿಗೊಂಡವರಿದ್ದಾರೆ. ಮತಾಂತರವೆಂಬ ಗಂಡಾಂತರದಿಂದ ಜೈನ ಸಮಾಜವನ್ನು ಪಾರು ಮಾಡಬೇಕೆಂದೆಣಿಸಿದ ಸಂಪ್ರದಾಯವಾದಿ ಮಡಿವಂತರು ಮತಾಂತರಿಗಳಿಗೆ ಬಹಿಷ್ಕಾರದ ಬೆದರಿಕೆ ಒಡ್ಡಿದರು. ಆದರೆ ಮತಾಂತರವೂ ಸ್ವಾಭಾವಿಕ ಪ್ರಕ್ರಿಯೆಯೆಂದು ಭಾವಿಸಿದವರೂ ಇದ್ದರು. ಅಂಥ ಉದಾರವಾದಿಗಳು ಜೈನ ಸಮಾಜದಲ್ಲಿ ಸಂಭವಿಸುವ ಮತಾಂತರಕ್ಕೆ ಯಾವ ಸ್ಥಾನ ಕೊಡಬಹುದೊ ಆ ಸ್ಥಾನವನ್ನು ಕೊಟ್ಟರಾಯಿತೆಂದು ಮತಾಂತರವನ್ನು ಸಹಜವಾಗಿ ಅನುದ್ವೇಗದಿಂದ ಸ್ವೀಕರಿಸಿದರು. ಅಂದರೆ ಇವರು ಮತಾಂತರವನ್ನು ಪ್ರಚೋದಿಸಿದರೆಂದಲ್ಲ, ಬದಲಾಗಿ ಅದನ್ನು ಅನುಮೋದಿಸಿದರು, ತಮ್ಮ ಮತೀಯ ಚೌಕಟ್ಟಿನಲ್ಲಿ ಅದನ್ನೂ ಸೇರಿಸಿದರು. ಈ ಮುನ್ನೋಟದ ಆರೋಗ್ಯಕರ ಮನೋಧರ್ಮ ಜೈನ ಸಮಾಜದ ಸ್ಥಿತಿಸ್ಥಾಪನತ್ವವನ್ನು ಉದ್ದೀಪಿಸಿತು, ಬಿರುಕುಗಳನ್ನು ಮುಚ್ಚಿತು.

ಜೈನ ಸಮಾಜವನ್ನು ಗಂಭೀರವಾಗಿ ತೆಗೆದುಕೊಂಡು ಅದು ಸುಸ್ಥಿರವಾಗಿರಲು ಜೀವನವನ್ನೇ ಮುಡುಪಾಗಿಟ್ಟ ಧಾರ್ಮಿಕ ಗುರುಗಳು ಒಂದು ಕಡೆ. ಗ್ರಹೀತ ನಂಬಿಕೆ ಆಚರಣೆಗಳನ್ನು ಆಗಾಗ ಪ್ರಶ್ನಿಸುವ, ವಿಶ್ಲೇಷಿಸುವ, ಅಗತ್ಯವೆನಿಸಿದಾಗ ಧಿಕ್ಕರಿಸುವ ಶ್ರಾವಕರು ಇನ್ನೊಂದು ಕಡೆ. ಪೊಳ್ಳು ಮೌಲ್ಯಗಳನ್ನು ಛೇಡಿಸುವ ಧಾರ್ಷ್ಟ್ಯ ತೋರಿದ ಮುನ್ನೋಟದ ಮೇಧಾವಿಗಳು ಮತ್ತೊಂದು ಕಡೆ. ಹೀಗೆ ಮೂರು ತೆರೆದ ಕ್ರಿಯೆ ಪ್ರಕ್ರಿಯೆಗಳ ಚಿಂತನ ಮಂಥನ ನಡೆದಾಗಲೂ ಜೈನ ಸಮಾಜದ

ಮೂಲಭೂತ ಅರ್ಥ ಆಶಯಗಳನ್ನು ಕಳೆದುಕೊಳ್ಳಲಿಲ್ಲವೆಂಬುದು ಪರಿಭಾವನ ಯೋಗ್ಯ. ಏಕೆಂದರೆ ಗೃಹೀತ ಮೌಲ್ಯಗಳಿಗೇನೆ ಜೋತು ಬಿದ್ದ ತೀರ ಸಂಪ್ರದಾಯ ಪರರಾದ ಮಡಿವಂತರಿಗೆ, ವೈಚಾರಿಕತೆಯ ಹೊಸತನಕ್ಕೆ ಕೈಚಾಚುವ ಕನಸು ಕಾಣುವುದಕ್ಕೆ ಕಷ್ಟವಾಗುತ್ತದೆ. ಆದರೆ ಹೊರಗೆ ಹೋಗುವ ಹಾಗೂ ಒಳಗೆ ಬರುವ ದಾರಿಗಳು ತಿಳಿಯದೆ ಒದ್ದಾಡುವವರಿಗೆ ಬಿಡುಗಡೆಯ ಮಾರ್ಗ ತೋರುವ ಮಾರ್ಗಕಾರರು ಬೇಕಾಗುತ್ತಾರೆ.

ಸಂಪ್ರದಾಯಕ ಜಿಗುಟುತನವೊಂದು, ಹಳತರ-ಪರಂಪರೆಯ ಮೋಹವೊಂದು ಎಲ್ಲ ಸಮಾಜಗಳಲ್ಲಿಯೂ ಅಂತರ್ನಿಹಿತವಾಗಿರುವ ಗುಣ. ಆಯಾ ಸಮಾಜದ ಪುರೋಹಿತರು, ಮಠಾಧೀಶರು, ಮುಂದಾಳುಗಳು ಈ ಸಂಪ್ರದಾಯಕ್ಕೆ ಕೋಟೆ ಕಟ್ಟಿ, ಸಮಾಜ ಅದರೊಳಗೆ ಬಾಳುವಂಥ ಅಲಿಖಿತ ನಿರ್ಬಂಧವನ್ನು ಹೇರುತ್ತಾರೆ. ಇದರಿಂದಾಗಿ ಸಂಪ್ರದಾಯದ ಪೊರೆ ಕಳಚಿ ಹೊರಬರುವುದು ಬಹು ಜನಕ್ಕೆ ಇರುಸು ಮುರುಸು. ಮತಾಂತರವೂ ಇಂಥ ಇಕ್ಕಟ್ಟುಗಳಲ್ಲೊಂದು ಮತಾತಂತರವೆಂಬುದು ಸಂಪ್ರದಾಯ ನಿಷ್ಠರ ಪಾಲಿಗೆ ಆಯಾ ಸಮಾಜದ ಹಲವು ತಲೆಮಾರುಗಳಿಂದ ಸಂಪಾದಿಸಿದ್ದ ಆಸ್ತಿಯನ್ನು ಕಳೆದುಕೊಂಡಂಥ ನಷ್ಟದ ಅನುಭವ. ಅನ್ಯ ಸಮಾಜವರು ಬಂದು ಸೇರುವುದನ್ನು ತೆರೆದ ತೋಳುಗಳಿಂದ ಬರಮಾಡಿಕೊಳ್ಳುತ್ತಾರೆಯೇ ಹೊರತು ತಮ್ಮ ಸಮಾಜದವರು ಸರಪಳಿಯಿಂದ ಕೊಂಡಿ ಕಳಚಿಕೊಂಡು ಹೋಗುವುದನ್ನು ಸಹಿಸರು. ಜೈನ ಸಮಾಜವೂ ಇಂಥ ಪರಿಸ್ಥಿತಿ ಸ್ವಭಾವಗಳಿಗೆ ಅಪವಾದವೇನಲ್ಲ. ಸ್ಥಳೀಯ ಸಂಪ್ರದಾಯ ಗಳೊಂದಿಗೆ ಕಲೆತು, ಬೆರೆತು ಬಾಳುವ ಅಭಿವ್ಯಾಪಕ-ಸಮಾವೇಶಕ ಗುಣವೊಂದು ಜೈನ ಸಮಾಜದಲ್ಲಿ ಅದರ ಚರಿತ್ರೆಯುದ್ದಕ್ಕೂ ವ್ಯಕ್ತಪಟ್ಟಿದೆಯೆಂಬುದು ನಿಜ.

ಜೈನ ಸಮಾಜದ ಅಂತರಂಗದಲ್ಲಿಯೇ ಕಾಣಿಸಿಕೊಂಡು ಕೆಲವು ವಿಕಸನಾತ್ಮಕ ಧೋರಣೆಗಳು ಈ ಮತಾಂತರ ಪ್ರಕ್ರಿಯೆಯಲ್ಲಿಯೂ ಪ್ರತಿಫಲಿಸಿವೆ. ಜೈನ ಸಮಾಜವು ಚರಿತ್ರೆಯಿಂದ ಪರಿವರ್ತಿತವಾಗುವ ಸಾಧ್ಯತೆಯನ್ನು ಹೊಂದಿರುವ ಜೀವಂತ, ಶಕ್ತಿಯುತ, ಬಲಿಷ್ಠ ಸಮಾಜ. ಅದು ನಿಂತ ನೀರಲ್ಲ. ತಾನು ಬಾಳುತ್ತಿರುವ ಭಾರತೀಯ-ಕರ್ನಾಟಕದ ಐತಿಹಾಸಿಕ ಮತ್ತು ಸಾಮಾಜಿಕ ವಾಸ್ತವತೆಯೊಂದಿಗೆ ಹೊಂದಿರುವ ಸಂಬಂಧ ಚಲನರಹಿತವಾದದ್ದಲ್ಲ. ಜೈನ ಸಮಾಜ ತನ್ನ ಸಾವಿರಾರು ವರ್ಷಗಳ ಚರಿತ್ರೆಯ ಉದ್ದಕ್ಕೂ ಹೊಸ ತಂತ್ರ, ಪ್ರಯೋಗ, ಚಿಂತನೆ, ಪರಿಕಲ್ಪನೆಗಳ ಪರಿವರ್ತನೆಗೆ ಲೋಪ, ಆಗಮ, ಆದೇಶಗಳ ಆಯಾಮಗಳಿಗೆ ತನ್ನನ್ನು ಒಡ್ಡಿಕೊಳ್ಳುತ್ತ ಬಂದಿದೆ. ಜೈನ ಆಗಮ ಪರಂಪರೆಯ ಚೌಕಟ್ಟಿನೊಳಗೇ ಸ್ವತಂತ್ರ ಆಲೋಚನೆಗಳಿಂದ ಹೊಸ ಸಂಗತಿಗಳಿಗೆ ಕೈ ಚಾಚಲು ನೋಡಿದ ಧೀಮಂತರ ಪ್ರಯತ್ನಗಳೂ ಇದರಲ್ಲಿ ಬೆರೆತಿವೆ.

ಜೈನ ಸಮಾಜ ಏಕಕಾಲದಲ್ಲಿ ಸ್ಥಿರವೂ ಚರವೂ ಆಗಿದೆ. ಸ್ಥಿರತೆಯನ್ನು ಚರತೆಯೇ ತಂದುಕೊಟ್ಟಿದೆ. ಅದರಲ್ಲಿ ಘಟಿಸುತ್ತ ಬಂದಿರುವ ಸ್ಥಿತ್ಯಂತರಗಳು ಅದರ ಸ್ಥಿರತೆಗೆ ಧಕ್ಕೆ ತರದೆ ಕಾಯಕಲ್ಪವೆಸಗಿದೆ. ಸ್ಥಾವರಕ್ಕೆ ಅಳಿವು ಉಂಟಾಗದಿರಬೇಕಾದರೆ ಅದರಲ್ಲಿ ಜಂಗಮತೆಗೂ ಅವಕಾಶವಿರಬೇಕು. ಜೈನ ಸಮಾಜದ ಸ್ಥಿರತೆ ಸ್ಥಾವರತೆ ಸಾಧ್ಯವಾಗಿರುವುದು ಅದರ ಚರಿತ್ರೆಯುದ್ಧಕ್ಕೂ ನಿರಂತರವಾಗಿ ನಡೆಯುತ್ತ ಬಂದಿರುವ ಚರತೆ, ಸ್ಥಿತ್ಯಂತರತೆ ಮತ್ತು ಜಂಗಮತೆಯಿಂದ. ಈ ಬಗೆಯ ಚರಿತ್ರೆಯ ನಿಕಷಕ್ಕೆ

ಒಡ್ಡಿದಾಗಲೇ ಅದರ ರಾಚನಿಕ ಆಯಾಮಗಳನ್ನು ವಿಶ್ಲೇಷಿಸುವುದಕ್ಕೆ ಸಾಧ್ಯ. ಇದರ ಫಲಿತವಾಗಿ ಜೈನ ಸಮಾಜದ ಕ್ರಿಯಾತ್ಮಕ ಮೌಲ್ಯ ಪ್ರಕಟಗೊಳ್ಳುತ್ತದೆ. ಚರಿತ್ರೆಯ ಹಾಸಿನಲ್ಲಿ ನಡೆದಿರುವ ಘಟನೆಗಳ ಸಾಂಗತ್ಯವನ್ನು ತಿಳಿಯದಿದ್ದರೆ ಜೈನ ಸಮಾಜದ ವಾಸ್ತವ ಚಿತ್ರ ಸಂವೇದ್ಯವಾಗುವುದಿಲ್ಲ. ಇವಿಷ್ಟೂ ಈ ಸಂಪ್ರಬಂಧದ ವಾಗ್ವಾದದಿಂದ ನಾವು ತಲುಪಲು ಸಾಧ್ಯವಾಗಿರುವ ನೆಲೆಗಳು ಮತ್ತು ಕೈಗೊಳ್ಳಬಹುದಾದ ತೀರ್ಮಾನಗಳು.

ಸಮಗ್ರ ಭಾರತೀಯ ಜೈನ ಸಮಾಜ ಮತ್ತು ಮತಾಂತರ ಕುರಿತು ಅಲ್ಲಲ್ಲಿ ಪ್ರಸ್ತಾಪಿಸುತ್ತ ಕರ್ನಾಟಕದ ಭೌಗೋಳಿಕ ವ್ಯಾಪ್ತಿಗೆ ಹೆಚ್ಚು ಒತ್ತುಕೊಡುವ ಪ್ರಯತ್ನ ಮಾಡಿದ್ದೇನೆ. ಭಾರತದ ಸಾಂಸ್ಕೃತಿಕ, ಸಾಹಿತ್ಯಕ ಸಂದರ್ಭದಲ್ಲಿ ದಾಖಲಾಗಿರುವ ಸೃಜನಶೀಲ ಚಳವಳಿಯೊಂದಿಗೆ ಅಲಿಖಿತ ಪೂರಕ ಸಾಮಗ್ರಿಯನ್ನೂ ಈ ಸಂಪ್ರಬಂಧದ ತೆಕ್ಕೆಗೆ ತಂದುಕೊಂಡಿದ್ದೇನೆ. ಇದರಿಂದಾಗಿ ಹೊಸ ಸಂವಾದದ ಸಾಧ್ಯತೆಗೆ ಇಲ್ಲಿ ಸಾಮಗ್ರಿ ಸಿದ್ಧವಾಗಿದೆ. ಜೈನ ಸಮಾಜದ ಚರಿತ್ರೆಯಲ್ಲಿ ಸಂಭವಿಸಿರುವ ಅನೇಕ ಲಂಘನಗಳ ಕಾರಣಗಳನ್ನು ಅರಿಯಬಹುದಾಗಿದೆ.

ಮತಾಂತರಗಳಾಗಲಿ, ಅಂತರ್ಜಾತೀಯ ವಿವಾಹವಾಗಲಿ ಈ ದಿನಗಳಲ್ಲಿ, ಸಂಬಂಧಪಟ್ಟ ಸಂಸಾರಗಳನ್ನು ಬಿಟ್ಟರೆ, ಇಡೀ ಸಮುದಾಯ ಸಮಾಜವನ್ನು ಅಷ್ಟೇನೂ ಗಾಬರಿ ಗಲಿಬಿಲಿಗೊಳಿಸುವ ವಿಷಯವಲ್ಲದಿರಬಹುದು. ಆದರೆ ಹಿಂದಿನ ಶತಮಾನಗಳತ್ತ, ಹಿಂದಾನೊಂದು ಕಾಲದ ಕಡೆಗೆ ಹಿಮ್ಮೊಗನಾಗಿ ಹೊರಟರೆ ಇದರ ತುಡಿತ ಕೇಳುತ್ತದೆ, ತೀವ್ರತೆ ಅರಿವಿಗೆ ಬರುತ್ತದೆ.

ಅಂತ್ಯಜರಾದಿಯಾಗಿ ಅನ್ಯಜಾತಿಯವರು ಜೈನ ಸಮಾಜದೊಳಗೆ ಮಿಳಿತಗೊಳ್ಳುವುದನ್ನು ಎಲ್ಲ ಕಡೆಯೂ ಮಾನ್ಯ ಮಾಡಿದ್ದರೂ ಒಂದು ಜೈನ ಶಾಸನ ಮಾತ್ರ ಇದನ್ನು ನಿರ್ಬಂಧಿಸಿದೆ : ಗಂಗರಾಜ್ಯಮಂ ಮಾಡಿದ ಸಿಂಹನಂದ್ಯಾಚಾರ್ಯರ್ ತಮ್ಮ ಶಿಷ್ಯರಾದ ಗಂಗ ಕುಲದ ದಡಿಗ-ಮಾಧವರಿಗೆ ಮಾಡಿದ ಉಪದೇಶದಲ್ಲಿ ಅಂತರ್ಜಾತೀಯ ವಿವಾಹಕ್ಕೆ ತಡೆಯೊಡ್ಡಿದ ಮಾತಿದೆ :

> ನುಡಿದುದನಾರೊಳಂ ನುಡಿದು ತಪ್ಪಿದೊಡಂ ಜಿನಶಾಸನಕ್ಕೊಡಂ
> ಬಡದಡಮನ್ಯನಾರಿಗೆರೆದಟ್ಟಿದೊಡಂ ಮಧುಮಾಂಸ ಸೇವೆ ಗೆ
> ಯ್ದಡಮ್ ಅಕುಲೀನಪ್ಪವರ ಕೊಳ್ಕೊಡೆಯಾದಡಮರ್ತ್ಥಿಗರ್ಥಮಂ
> ಕುಡದೊಡಮ್ ಆಹವಾಂಗಣದೊಳೋಡಿದಡಂ ಕಿಡುಗುಂ ಕುಲಕ್ರಮಂ॥

ಇದರಲ್ಲಿನ ವೈರುಧ್ಯವೆಂದರೆ 'ಮನುಷ್ಯಜಾತಿ ತಾನೊಂದವಲಂ' ಎಂದು ಹೇಳಿದ್ದು ಒಂದು ತುದಿಯಾದರೆ, ಅಕುಲೀನರಪ್ಪವರೊಂದಿಗೆ ಕೊಳ್ಕೊಡೆಯಾದರೆ 'ಕುಲಕ್ರಮಂ ಕಿಡುಗುಂ' ಎಂಬುದು ಇನ್ನೊಂದು ತುದಿಯಾಗಿದೆ. ಜೈನ ಸಮಾಜ ಎರಡು ತುದಿಗಳ ನಡುವಣ ಸುವರ್ಣ ಮಾಧ್ಯಮವನ್ನು ಹಿಡಿದು ಬೆಳೆದಿದೆ ಎಂಬುದು ವಾಸ್ತವ ಸಂಗತಿ.

ಸಹಾಯ ಸಾಹಿತ್ಯ : **ಕನ್ನಡ ಗ್ರಂಥಗಳು**

ಅಣ್ಣಾರಾಯ ಮಿರ್ಜಿ : 'ಜೈನಧರ್ಮ', ಮೈಸೂರು, ೧೯೬೯ (ದ್ವಿತೀಯ ಮುದ್ರಣ)

ಕಮಲಾ ಹಂಪನಾ : 'ಜೈನ ಸಾಹಿತ್ಯ ಪರಿಸರ', ೧೯೮೨ ಬೆಂಗಳೂರು
'ಅನೇಕಾಂತವಾದ', ಬೆಂಗಳೂರು - ೧೯೮೨

'ಜಿನಸೇನಾಚಾರ್ಯ' : ಆದಿಪುರಾಣ (ಸಂಸ್ಕೃತ), ಭಾಗ ೧-೨; ಪನ್ನಾಲಾಲ್ ಜೈನ, ವಾರಣಾಸಿ, ೧೯೬೩, ೧೯೬೫

ಜೈನ್, ರವೀಂದ್ರಕುಮಾರ್ : 'ಕವಿವರ ಬನಾರಸೀದಾಸ್' (ಹಿಂದಿ), ದೆಹಲಿ, ೧೯೬೬

ಜೈನ್, ಹಿರಾಲಾಲ್ : 'ಭಾರತೀಯ ಸಂಸ್ಕೃತಿಗೆ ಜೈನಧರ್ಮದ ಕೊಡುಗೆ', (ಹಿಂದಿ ೧೯೬೨)
(ಕನ್ನಡ ಅನುವಾದ) ಮಿರ್ಜಿ ಅಣ್ಣಾರಾಯ, ಸೊಲ್ಲಾಪುರ, ೧೯೭೧

ನಾಗರಾಜಯ್ಯ, ಹಂಪ : 'ವೀರಜಿನೇಂದ್ರ ಚರಿತೆ', ಬೆಂಗಳೂರು, ೧೯೭೬
'ಯಕ್ಷಯಕ್ಷಿಯರು', ಬೆಂಗಳೂರು, ೧೯೭೬
'ರತ್ನಾಕರನ ಹಾಡುಗಳು', ಬೆಂಗಳೂರು, ೧೯೭೯
'ವಡ್ಡಾರಾಧನೆ' (ಸಂ) ಬೆಂಗಳೂರು ೧೯೯೩

ಶಿವಣ್ಣ ಎಸ್. ನಾಗರಾಜಯ್ಯ, ಹಂಪ : (ಸಂ) 'ಚಂದ್ರಸಾಗರ ವರ್ಣಿಯ ಕೃತಿಗಳು', ಬೆಂಗಳೂರು, ೧೯೮೧

ಪಂಪ : 'ವಿಕ್ರಮಾರ್ಜುನ ವಿಜಯಂ' 'ಆದಿಪುರಾಣಂ'

ಫೂಲ್ ಚಂದ್ ಸಿದ್ಧಾಂತ ಶಾಸ್ತ್ರೀ : 'ಜೈಪುರ್ (ಖನಿಯ) ತತ್ವಚರ್ಚಾ (ಹಿಂದಿ-ಎರಡು ಸಂಪುಟಗಳು) ಜೈಪುರ, ೧೯೬೭

ಬ್ರಹ್ಮಶಿವ : 'ಸಮಯ ಪರೀಕ್ಷೆ' : (ಸಂ) ಕುಲಕರ್ಣಿ ಬಿ. ಎಸ್. ಧಾರವಾಡ, ೧೯೫೮

ಭೀಮಕವಿ : 'ಬಸವಪುರಾಣ' : ಮದರಾಸು, ೧೮೯೨

ರಾಘವಾಂಕ : 'ಸೋಮನಾಥ ಚಾರಿತ್ರ'; (ಸಂ)

ವಿರೂಪಾಕ್ಷ ಪಂಡಿತಾರಾಧ್ಯ : 'ಚೆನ್ನಬಸವ ಪುರಾಣ', ಧಾರವಾಡ, ೧೯೩೪ (ಸಂ) ಬಸವನಾಳ

ಷಡಕ್ಷರಿ : 'ವೃಷಭೇಂದ್ರ ವಿಜಯಂ', ಬೆಂಗಳೂರು, ೧೮೭೫

ಹರಿಷೇಣ : 'ಬೃಹತ್-ಕಥಾ ಕೋಶಂ' (ಸಂಸ್ಕೃ) : (ಸಂ) ಉಪಾಧ್ಯೆ ಆ. ನೇ. ಮುಂಬಯಿ, ೧೯೪೩

ಶೇಕ್ಕಿಳಾರ್ (೧೦ನೆಯ ಶ.) : 'ಪೆರಿಯ ಪುರಾಣಂ', (ಸಂ) ಟಿ. ಎಂ. ಕೆ. ಪಿಳ್ಳೈ, ಶ್ರೀವೈಕುಂಠಮ್, ೧೯೬೪, ಪುಟ ೫೩೩

ಪರುಂಜೋತಿ ಮುನಿವರ್ (೧೬ ಶ.) : 'ತಿರುವಿಳಯಾದರ್ ಪುರಾಣಂ': (ಸಂ) ಎನ್. ಎಂ. ವಿ. ನತ್ತರ್ ಮದರಾಸು, ೧೯೬೫, ಪುಟ ೪೪೧-೪೭೯.

ಇಂಗ್ಲಿಷ್ ಕೃತಿಗಳು

1. Agrachand Nehta and Bahvarmal Nehta; Kharatara Geccha ke *pratibodhita gotra aur jatrayam* (Hindi) : Jinadattasuri Seva Sangh, Calcutta 1973.

2. Derrett J.D.M. : *The Hoysalas*, Oxford, 1957
3. Desai P.B. : *Jainism in South India and Some Jaina Epigraphs*, Sholapur, 1957
4. Govardhandas Brahmachari, ed; Srimad Rajachandra's The Self-Realisation (Atma-Siddhi) Agas Gujarat, 1985
5. Handiqui K.K. : *Yasastilaka-Campu and Indian Culture*, Sholapur, 1949
6. Jain, Jagadish Chandra : 1) *Life in Ancient India as depicted* in the Jaina canons, Bombay, 1947
   2) *The Jaina way of Life*, Haryana, 1991
7. Jaini, Padmanabh S. : *The Jaina Pathway of Purification*, California, Berkeley, 1979
8. Jain, Kailas Chandra : *Jainism in Rajashthan*, Sholapur, 1963
9. Kashiwal K.C. : *Khandelwal Jatika Ithihasm*, (Hindi) 1991
10. Michael Carrithers and Coreline Humphrey, ed : *The Assembly of Listerners*, Jains in Society, Combridge, 1991
11. Munishri Nagarajji : *Mahavira and Buddha*, New Delhi, 1970
12. Paul Dundas: *The Jains*, London-Newyork, 1992
12. Phyllis Granoff, ed, : *The Clever Adultress and other stories*, Ontario, Canada, 1990
14. Rice B.L. : *Mysore and Coorg* from Inscriptions, London, 1909
15. Sangave V.A. : *Jain Community* : A Social Survey, Bombay, 1959
16. Upadhye A. N. : Studies in Gothras, *Jaina Antiquary*, 11, No. 3, Arrah.

೭

ಪ್ರಾಚೀನ ಕನ್ನಡ ಪರಂಪರೆ ಮತ್ತು ಜೈನ ಸಾಹಿತ್ಯ

ಈ ನೆಲದ ಮೇಲೆ ಮನುಷ್ಯನ ಆವಿಷ್ಕಾರವಾಗಿ ಎಷ್ಟೋ ಲಕ್ಷಾಂತರ ವರ್ಷಗಳಾಗಿವೆ. ಆದರೆ ಅವನ ಚರಿತ್ರೆ ತಿಳಿದು ಬರುವುದು ಆರೇಳು ಸಾವಿರ ವರ್ಷಗಳಿಂದೀಚೆಗೆ. ಅದರಲ್ಲಿ ಕರ್ನಾಟಕದ ಚರಿತ್ರೆ ಸಿಗುವುದು ೨-೧/೨ ಸಾವಿರ ವರ್ಷಗಳಿಂದ ಮಾತ್ರ. ಇದಕ್ಕೆ ಮುಖ್ಯ ಕಾರಣ ಇತಿಹಾಸದ ಅರಿವಿನ ಕೊರತೆ. ಇಲ್ಲಿ ಸಿಗುವ ಪುರಾತನ ಲೇಖ್ಯ ದಾಖಲೆಗಳು, ಅಶೋಕನ ಶಾಸನಗಳು, ಮೌರ್ಯರ ಇನ್ನಿತರರ ಕುರುಹುಗಳು ಕಡಮೆಯೇ. ಒಂದು ಗಟ್ಟಿಯಾದ ಮಾಹಿತಿ ಮತ್ತು ಐತಿಹ್ಯವೆಂದರೆ ಭದ್ರಬಾಹು ಮುನಿಸಂಘದೊಂದಿಗೆ ಚಂದ್ರಗುಪ್ತ ಮೌರ್ಯನು ಶ್ರವಣ ಬೆಳಗೊಳಕ್ಕೆ ಬಂದನೆಂಬುದು. ಕನ್ನಡ ಪರಂಪರೆ ಎಂದು ಯಾವುದನ್ನು ಗುರುತಿಸಬಹುದೊ ಅದು ೧೬೦೦-೧೮೦೦ ವರ್ಷಗಳಷ್ಟು ಹಳೆಯದು.

ಇದರ ತರುವಾಯದ ಚಾರಿತ್ರಿಕ ಘಟ್ಟ ಶಾತವಾಹನರದು. ಅನಂತರ ಆದಿಕದಂಬರದು. ಈ ರಾಜಸತ್ತೆಯ ಆಳ್ವಿಕೆಗಳಲ್ಲಿ ಜೈನ ಸ್ರೋತ ಸೇರಿದ್ದು ಎದ್ದು ಕಾಣುತ್ತಿತ್ತು. ಜೈನ ಮತ್ತು ಕನ್ನಡ ಪರಂಪರೆಗಳು ಒಟ್ಟಿಗೆ ಕೈ ಕೈ ಹಿಡಿದು ತನ್ನ ಸ್ಪಷ್ಟ ಸ್ವರೂಪದಿಂದ ದೊಡ್ಡದಾಗಿ ಕಾಣಿಸಿದ್ದು ಆದಿ ಕದಂಬರು, ಗಂಗರು, ರಾಷ್ಟ್ರಕೂಟರು, ಬಾದಾಮಿ ಚಲುಕ್ಯರು ಇವರ ಕಾಲದಲ್ಲಿ. ಅಂದಿನ ಜನಜೀವನಕ್ಕೆ ಸಮಾಜಕ್ಕೆ ದುರ್ಬೀನು ಹಾಕಿ ನೋಡುವ ಸಾಹಿತ್ಯ ಕೃತಿಗಳು ಉಪಲಬ್ಧವಿರುವುದು ಕಡಮೆಯೇ. ಆದರೆ ಕೆಲವು ಶಾಸನ ದಾಖಲೆಗಳು ಬೆಳಕು ಬಿಂಬಿಸುವ ರನ್ನಗನ್ನಡಿಗಳಾಗಿವೆ. ಅವೆಲ್ಲದರ ಸಹಾಯದಿಂದ ಸಾಬೀತು ಆಗುವುದಿಷ್ಟು : ಕನ್ನಡವನ್ನು, ಕನ್ನಡಿಗರನ್ನು ಚರಿತ್ರೆಯಿಂದ ಸಾಹಿತ್ಯ ಚರಿತ್ರೆಗೆ ಸರಿಸಿದವರು ಸೇರಿಸಿದವರು ಜೈನ ಲೇಖಕರು. ಕರ್ನಾಟಕದ ರಾಜರಿಗೆ ಧರ್ಮದ ಮತ್ತು ಕಾವ್ಯಧರ್ಮದ ರುಚಿ ಹತ್ತಿಸಿದವರು, ಸಂಸ್ಕಾರ ಕೊಟ್ಟವರು ಜೈನರು. ಕವಿಗಳೆಂದರೆ ಗಗನಗಾಮಿಗಳು, ಕನಸುಣಿಗರು,

ದಂತಗೋಪುರ ವಾಸಿಗಳು ಎಂಬ ಹೇಳಿಕೆಗೆ ಅಪವಾದವಾಗಬಲ್ಲ ಜೈನ ಲೇಖಕರಿದ್ದರು. ಪಂಪ, ರನ್ನ, ಶಾಂತಿನಾಥ, ನಾಗವರ್ಮ, ಜನ್ನ ಮುಂತಾದವರು ಮಣ್ಣಿನ ಮಕ್ಕಳಾಗಿ ದಂಡಾಧೀಶರಾಗಿ ಮಿಂಚಿದವರು.

ಅದರಂತೆ ಕರ್ನಾಟಕದಲ್ಲಿ ಶಾಸನ ಕವಿಗಳೂ ಸಹ ಆರಂಭದಲ್ಲಿ ಜೈನರೇ ಕಾಣುತ್ತಾರೆ : ಹತ್ತನೆಯ ಶತಮಾನ ಒಂದರಲ್ಲೇ ಬೆಳ್ದೇವ, ಗುಣವರ್ಮ, ಶ್ರೀವಿಜಯ, ನಾಗವರ್ಮ, ಪೊನ್ನ (?), ಬಲದೇವ, ಶ್ರೀಧರಯ್ಯ, ಸುಬಗ, ಅರ್ಹದ್ಭಕ್ತ, ರನ್ನ ಮೊದಲಾದವರು ಉಲ್ಲೇಖ್ಯರಾಗಿದ್ದಾರೆ ಜೈನ ಕವಿಗಳ ಸರಸತೆ, ಸಂಸಾರಸುಖ ಮಗ್ನತೆ ಮತ್ತು ಅಂತಿಮವಾಗಿ ಇವೆಲ್ಲದರ ಆಚೆಗಿನ ಅನುಭವದ ತುಡಿತ-ಇವು ಗಮನಾರ್ಹವಾಗಿವೆ. ಸಾಹಿತ್ಯ ಮತ್ತು ಸಮಾಜದ ಅವಿನಾಭಾವ ಸಂಬಂಧವನ್ನು ಜೈನ ಲೇಖಕರು ಅರಿತವರಾಗಿದ್ದರು. ವೀರ, ಭೋಗ, ತ್ಯಾಗ, ಅಹಿಂಸೆ, ಸ್ನೇಹ, ಜೋಳದ ಪಾಳಿ, ಅನ್ಯೋನ್ಯ ದಾಂಪತ್ಯ- ಈ ಬಗೆಯ ಬಹುಮುಖಿ ಸುಖದ ಮುಖಗಳನ್ನು, ಅಂದಂದಿನ ಯುಗದ ಮೌಲ್ಯಗಳನ್ನು ಕಾವ್ಯ ದರ್ಪಣದಲ್ಲಿ ಕನ್ನಡಿಸಿ ಕರ್ನಾಟಕಕ್ಕೆ ಒಂದು ಭವ್ಯ ಪರಂಪರೆಯನ್ನು ಕಟ್ಟಿಕೊಟ್ಟವರು ಜೈನರೆಂಬುದನ್ನು ಒಟ್ಟು ಭಾರತೀಯ ಸಂಸ್ಕೃತಿ ಮತ್ತು ಪರಂಪರೆಗಳ ಹಿನ್ನೆಲೆಯಲ್ಲಿಟ್ಟು ತೌಲನಿಕವಾಗಿ ಸ್ಥೂಲಸಮೀಕ್ಷೆ ಮಾಡುವುದು ಮುಂದಿನ ಬರೆಹದ ಸಾರ.

ಭಾರತೀಯ ಸಂಸ್ಕೃತಿಯ ಅಧ್ಯಯನಕ್ಕೆ ಜೈನಧರ್ಮ ವಿಸ್ತಾರವಾದ ಹಾಸನ್ನು ಸಿದ್ಧಗೊಳಿಸಿಕೊಟ್ಟಿದೆ ಎಂಬ ಮಾತಿಗೆ ಇನ್ನಷ್ಟು ನಿರ್ವಚನಬೇಕಾಗಬಹುದು. ಭಾರತೀಯ ಸಂಸ್ಕೃತಿಯ ದೇಸೀ ಮೂಲಗಳ ಪ್ರತಿಭೆ ಮತ್ತು ಸೃಜನಶೀಲತೆಯ ಸತ್ವ ಸ್ವರೂಪವನ್ನು ಗುರುತಿಸುವುದಕ್ಕೆ ಜೈನಧರ್ಮ ದೊಡ್ಡ ಭಂಡಾರ, ತವನಿಧಿ. ಜೈನಧರ್ಮದ ಶಕ್ತಿ ಹಾಗೂ ಸಾಂಸ್ಕೃತಿಕ ವಿವಿಧತೆಯು ಭಾರತೀಯತ್ವಕ್ಕೆ ನೀಡಿದ ಬೆಡಗು ಬಣ್ಣ ಎಂತಹುದು ಎಂಬುದನ್ನು ಇನ್ನೂ ಅರಿಯಬೇಕಾಗಿದೆ. ಕರ್ನಾಟಕಕ್ಕೆ ಬೌದ್ಧರೂ ಜೈನರಂತೆಯೇ ಹೊರಗಿನಿಂದ ಬಂದವರು. ಬೌದ್ಧರೂ ಇಲ್ಲಿ ಕ್ರಿ.ಪೂ.ದ ಕಡೆಯ ಮತ್ತು ಕ್ರಿ.ಶ.ದ ಆರಂಭದ ಶತಮಾನಗಳಲ್ಲಿ ತಮ್ಮ ಧರ್ಮಪ್ರಚಾರ ಮಾಡಿದರು. ಬೌದ್ಧೀಯ ವಿಹಾರಗಳು ಮತ್ತು ಮೂರ್ತಿಗಳು ಕರ್ನಾಟಕದ ನಾನಾ ಭಾಗಗಳಲ್ಲಿ ದೊರೆತಿವೆ. ಬೌದ್ಧ ಪರಂಪರೆ ಕನ್ನಡ ಸಾಹಿತ್ಯಕ್ಕೆ ಏನೊಂದೂ ಕೊಡುಗೆ ನೀಡಲಿಲ್ಲ. ಇದರಂತೆಯೇ ಕರ್ನಾಟಕಕ್ಕೆ ಹೊರಗಿನಿಂದ ಬಂದ ಕಾಳಾಮುಖರೂ ಕನ್ನಡ ಭಾಷಾ ಸಾಹಿತ್ಯಕ್ಕೆ ಏನೂ ಕಾಣಿಕೆ ಸಲ್ಲಿಸಿಲ್ಲ. ಬೌದ್ಧರು ಮತ್ತು ಕಾಳಾಮುಖರು (ಏಕ್ಕೋಟಿ ಸಮಯ) ಕನ್ನಡದ ವಿಚಾರವಾಗಿ ತೋರಿದ ತಾಟಸ್ಥ್ಯ ಮತ್ತು ಅನಾಸಕ್ತಿಗೆ ಕಾರಣಗಳು ತಿಳಿಯದು. ಬೌದ್ಧರು ಜೈನರಂತೆಯೇ ತಾತ್ವಿಕವಾಗಿ ಜನಭಾಷೆಗೆ ಒಲಿದವರು; ಪಾಲಿ ಭಾಷೆಯಲ್ಲಿ ಬೋಧಿಸಿದರು, ಬರೆದರು. ಕನ್ನಡ ಭಾಷಾ ಸಾಹಿತ್ಯಕ್ಕೆ ಅವರಿಂದ ಉತ್ತೇಜನವನ್ನು ನಿರೀಕ್ಷಿಸುವುದು ಸಹಜವಾದರೂ ಸಮಾಧಾನಕರ ಉತ್ತರ ಸಿಕ್ಕಿಲ್ಲ. ಬೌದ್ಧರೂ ಕನ್ನಡದಲ್ಲಿ ಕೃತಿರಚನೆ ಮಾಡಿರಬಹುದು ಎಂಬ ಕೇವಲ ಊಹೆಯೊಂದು ವ್ಯಕ್ತವಾಗಿದೆ. ಈ ಊಹೆಗೆ ಕೊಟ್ಟಿರುವ ಆಧಾರಗಳು ದುರ್ಬಲವಾಗಿವೆ. ಕಾಳಾಮುಖರು ಸಾಮಾಜಿಕವಾಗಿ, ಬೌದ್ಧರಿಗಿಂತ ಹೆಚ್ಚಾಗಿ, ಕನ್ನಡ ಜನಪದರ ಮೇಲೆ ಪ್ರಭಾವ ಬೀರಿದವರು. ಆದರೆ ಇವರ ಅಭ್ಯಾಸ ಮಾಧ್ಯಮ ಸಂಸ್ಕೃತವಾಗಿತ್ತು. ಲಾಕುಳ (ಲಕುಲೀಶ), ಕಾಳಾಮುಖ, ಪಾಶುಪತ, ಕಾಳರು-ಮುಂತಾದ ಶೈವ ಪಂಥ ಪರಂಪರೆಗಳು

ಕನ್ನಡಕ್ಕೆ ಪ್ರಸನ್ನವಾಗಲಿಲ್ಲ. ಇವರೆಲ್ಲರಿಗಿಂತ ಭಿನ್ನವಾದ ವರ್ತನೆ ತೋರಿದ ವೀರಶೈವ ಪರಂಪರೆ ಕನ್ನಡಕ್ಕೆ ಅಪೂರ್ವವಾದ ರೀತಿಯಲ್ಲಿ ಮಹತ್ವದ ಕೊಡುಗೆಯನ್ನು ನೀಡಿದೆ.

ಕರ್ನಾಟಕದ ರಾಜಕೀಯ ಸಾಹಿತ್ಯ, ಸಂಸ್ಕೃತಿಗಳ ಕ್ಷೇತ್ರಗಳಲ್ಲಿ ಜೈನ ಪರಂಪರೆ ಗಣನೀಯ ಪಾತ್ರವಹಿಸಿದೆ. ಕ್ರಿ.ಶ. ೧೦ ರಿಂದ ೧೩ನೆಯ ಶತಮಾನವು ಪ್ರಮುಖ ಮಾರ್ಪಾಟುಗಳು ಆದ ಕಾಲಘಟ್ಟ. ಧಾರ್ಮಿಕ ಸಮನ್ವಯದೊಂದಿಗೇ ಧಾರ್ಮಿಕ ಸಂಘರ್ಷಗಳೂ ನಡೆದಿವೆ. ತಂತಂಮ ಮತಧರ್ಮಗಳ ಮೇಲ್ಮೆಯನ್ನು ನೆಲೆಗೊಳಿಸಲು ರಾಜರ ಒಡ್ಡೋಲಗಳಲ್ಲಿ, ಸಾರ್ವಜನಿಕರ ಸಮ್ಮುಖದಲ್ಲಿ, ವಿದ್ವತ್ತಿನ ಮಂಟಪಗಳಲ್ಲಿ ಇವರ ಧಾರ್ಮಿಕ ವಾಗ್ವಾದಗಳೂ ಆದುವು. ಜೈನ ಮುನಿಪರಂಪರೆಯಲ್ಲಿ ಕೆಲವರು ಇಂತಹ ವಾದಗಳಲ್ಲಿ ನಿಷ್ಣಾತರಾಗಿದ್ದುದನ್ನು ಶ್ರವಣಬೆಳುಗೊಳದ ಎಷ್ಟೋ ಶಾಸನಗಳು ತಿಳಿಸುತ್ತವೆ.

ಪಿರಿಮಿಡ್ ರಚನೆಯ ಶ್ರೇಣೀಕೃತ ಜಾತೀಯ ಪದ್ಧತಿಯಲ್ಲಿ ಮೇಲೆ ಉತ್ತುಂಗ ಬ್ರಾಹ್ಮಣ್ಯದ ಪಾವಿತ್ರ್ಯ ಮತ್ತು ಕೆಳಗೆ ಪಾತಾಳದಲ್ಲಿರುವ ಅಸ್ಪೃಶ್ಯರ ಅಪಾವಿತ್ರ್ಯ ವರ್ಣವ್ಯವಸ್ಥೆಯ ಎರಡು ಧ್ರುವಗಳೆಂದು ಲೂಯಿಡುಮೊಂಟ್ ಸೂಚಿಸಿದ್ದಾರೆ; ಈ ವಿವರಣೆ ಸಾಂಪ್ರದಾಯಿಕ ಭಾರತೀಯ ಸಮಾಜದಲ್ಲಿರುವ ವರ್ಣವ್ಯವಸ್ಥೆಯನ್ನು ಕುರಿತದ್ದು. ಆದರೆ ಇದು ಸಮಗ್ರಭಾರತದ ಪೂರ್ಣ ಚಿತ್ರಣವೇನಲ್ಲ. ಭಾರತದಲ್ಲಿ ಸಾಮಾಜಿಕವಾಗಿ ಇತರ ಅಹಿಂದೂ ಪರಂಪರೆಗಳು ಜೀವಂತವಾಗಿವೆ. ಅಹಿಂದು ಪ್ರತಿ ಸಂಸ್ಕೃತಿಯಲ್ಲಿ ಹಿಂದೂ ಸಂಸ್ಕೃತಿಯ ಜಾತಿವರ್ಣ ಶ್ರೇಣಿ ಮಾನ್ಯತೆಯಿಲ್ಲ. ಏಕೆಂದರೆ ಅಹಿಂದು ಪ್ರತಿ ಸಂಸ್ಕೃತಿಗಳು ಬ್ರಾಹ್ಮಣರನ್ನು ಕೆಳಗಿಳಿಸಿ ಕ್ಷತ್ರಿಯರನ್ನು ಮೇಲೆ ಕೂಡಿಸಿದ ಜನಪದ 'ಶೂದ್ರ' ಪರಂಪರೆಗಳು. ವೇದಾದಿ ಶಾಸ್ತ್ರಗಳೊಂದಿಗೆ ಜಾತಿ ವ್ಯವಸ್ಥೆಯು ದೈವ ನಿಯಾಮಕ ಎಂಬುದನ್ನೂ ತಿರಸ್ಕರಿಸಿದರು. ಡಾ. ಬಿ.ಆರ್. ಅಂಬೇಡ್ಕರರ ಮಾತುಗಳಿವು : Caste has divine basis. You must therefore destroy the sacredness and divinity with which caste has become invested. In the last analysis, this means you must destroy the authority of *shastras* and the Vedas.

ವೈದಿಕ-ಅವೈದಿಕ ದ್ವೈಧೀಭಾವ ಪ್ರತ್ಯಯವೊಂದು ಪ್ರಾಚೀನ ಭಾರತೀಯ ಜನಮನದಲ್ಲಿ ಮೊಳೆತಿದ್ದಿತು. ಅದರ ಸ್ಪಷ್ಟವಾದ ವಿರೋಧ ಸ್ಫೋಟವಾದದ್ದು ಕ್ರಿ.ಪೂ. ಆರನೆಯ ಶತಮಾನದಲ್ಲಿ. ಆಜೀವಕರು, ಬೌದ್ಧರು, ಜೈನರು, ಚಾರ್ವಾಕರು (ಲೋಕಾಯುತರು) ಮುಂತಾದ ವೈದಿಕೇತರ ಮತಭೇಧಗಳು ಬಲಿತು ನಿಂತಿದ್ದುವು. ಯಜ್ಞ-ಯಾಗಶ್ರಾದ್ಧಾದಿಗಳಲ್ಲಿ ಪ್ರಾಣಿ ಬಲಿಯಿತ್ತು ಪಿತೃಗಳನ್ನು ಸ್ವರ್ಗಕ್ಕೆ ಕಳಿಸಬೇಕೆಂಬ ಅಂದಿನ ವೈದಿಕತ್ವವನ್ನು ಪ್ರತಿಭಟಿಸಿದರು. 'ಅಯ್ಯಾ, ನೀನು ಹೋತವನ್ನು ಬಲಿಕೊಟ್ಟು ನಿಮ್ಮಪ್ಪನನ್ನು ಸ್ವರ್ಗಕ್ಕೆ ಕಳಿಸುವುದೇ ಆದರೆ ನಿನ್ನನ್ನೇ ಬಲಿಕೊಟ್ಟು ಸ್ವರ್ಗಕ್ಕೆ ಯಾಕೆ ಕಳಿಸಬಾರದು' ಎಂದು ಕೇಳಿದ ಚಾರ್ವಾಕರನ್ನು, ಅವರ ಅಂಥ ಪ್ರಶ್ನೆಗಳ ವೈಚಾರಿಕ ಪ್ರಖರತೆಗೆ ಅಪ್ರತಿಭರಾದವರು, ಪ್ರಶ್ನೆಗೆ ಉತ್ತರಿಸುವ ಬದಲು, ಚಾರ್ವಾಕರನ್ನೇ ಬಲಿತೆಗೆದುಕೊಂಡರು; ನಾಸ್ತಿಕವಾದ ಪ್ರತಿಪಾದಕರಿಗೆಲ್ಲಾ ಇದೇ ಗತಿ ಕಾದಿದೆ ಎಂದು ತೋಳುತಟ್ಟಿದರು. ಆದರೆ ಶ್ರವಣ ಪರಂಪರೆಗಳಾದ ಆಜೀವಕರು, ಬೌದ್ಧರು, ಜೈನರು ಈ ಜಾತಿಯ ಗೋಡೆಯನ್ನು ಕೆಡವಿದರು.

ಮೂಲಭೂತವೂ ಸ್ವೋಪಜ್ಞವೂ ವಿಶಿಷ್ಟವೂ ಆದ ವಿಚಾರ ಪ್ರಣಾಲಿಯಿಂದ ಜೈನಧರ್ಮ ತನ್ನ ಸ್ವತಂತ್ರ ಅಸ್ತಿತ್ವವನ್ನು ಸ್ಥಾಪಿಸಿದೆ. ಅದರಂತೆಯೇ ಭಾರತೀಯ ದರ್ಶನಗಳ ಶ್ರೇಣಿಯಲ್ಲಿ ಜೈನದರ್ಶನ ತನ್ನ ಸ್ವಂತಿಕೆಯನ್ನೂ ಪ್ರಕಟಿಸಿದೆ. ಜೈನ-ಬೌದ್ಧ ಧರ್ಮದರ್ಶನಗಳ ಪ್ರತಿಪಾದನೆ ಮತ್ತು ಪರಿಭಾಷೆಯಲ್ಲಿ ಇರುವ ಸಾಮ್ಯಾಂಶಗಳನ್ನಷ್ಟೆ ನೋಡಿದ ಪ್ರೊ. ವಿಲ್ಸನ್, ಲಾಸೆನ್, ವೇಬರ್ ಮೊದಲಾದ ಪಾಶ್ಚಿಮಾತ್ಯರು ಜೈನಧರ್ಮವು ಬೌದ್ಧ ಧರ್ಮದ ಅಂಗವಿರಬೇಕೆಂದು ಭ್ರಾಂತರಾದರು. ಶ್ರೀಮತಿ ಸಿನ್‌ಕ್ಲೇರ್ ಸ್ಟೀವನ್‌ಸನ್‌ರಂಥ ಪೂರ್ವಗ್ರಹದ ಲೇಖಕರು, ಜೈನಧರ್ಮದಲ್ಲಿ ಅಹಿಂಸೆಯನ್ನು ಕುರಿತ ನೆಲೆಯನ್ನು ಗ್ರಹಿಸಲಾಗದೆ ಅಸಂಬದ್ಧವಾದ ಅತಿಶಯೋಕ್ತಿಯೆಂದೂ, ರಿಕ್ತಹೃದಯದ ಪ್ರತಿಪಾದನೆಯೆಂದೂ ದೂರಿದ್ದಾರೆ. ಜೈನಧರ್ಮವು ಹಿಂದೂ ಧರ್ಮದ ಒಂದು ಶಾಖೆಯೆಂದು ತೀರ್ಮಾನ ಕೊಟ್ಟುವರೂ ಇದ್ದಾರೆ. ಯೂರೋಪಿಯನವರು ೧೬ನೆಯ ಶತಮಾನದಿಂದಲೂ ಜೈನ ಸಮಾಜವನ್ನು ಬನಿಯ (ವಣಿಜ) ಎಂದು ಕರೆದಿದೆ. ಆದರೆ ಹಿಂದು ವರ್ತಕರಲ್ಲೂ ಬನಿಯರಿದ್ದಾರೆ. ಪಶ್ಚಿಮದ ಪ್ರವಾಸಿಗಳು, ಮತ ಪ್ರಚಾರಕರು ಜೈನಧರ್ಮ, ಸಮಾಜ ಮತ್ತು ಜೀವನ, ಧಾರ್ಮಿಕಾಚರಣೆ, ಗುರು ಪರಂಪರೆಯನ್ನು ಕುರಿತು ಹೇಳಿರುವುದು ಆಳವಾದ ಅಧ್ಯಯನದಿಂದ ತಳೆದ ತೀರ್ಮಾನಗಳಲ್ಲ. ಅಲ್ಲದೆ ಅವರು ಕೊಡುವ ಜೈನ ಸಂಬಂಧದ ವಿವರಗಳೂ ಸಹ ಮುಖ್ಯವಾಗಿ ಗುಜರಾತಿ ಶ್ವೇತಾಂಬರ ಸಂಪ್ರದಾಯದ ವಿವರಣೆಯಾಗಿವೆ. ಜೈನಧರ್ಮ-ದರ್ಶನ ಕುರಿತು ಸರಿ ತಿಳಿವಳಿಕೆ ಕೊಡುವ ಬರವಣಿಗೆಯಿಂದಾಗಿ ಈಗ ಇಂಥ ಪ್ರಶ್ನೆಗಳನ್ನು ಕೇಳುವ, ಆಪಾದನೆಗಳನ್ನು ಮಾಡುವ ಪರಿಸ್ಥಿತಿ ನಿವಾರಣೆಯಾಗಿದೆ. ಒಟ್ಟು ಭಾರತೀಯ ಸಂಸ್ಕೃತಿ ಮತ್ತು ವಿಚಾರಧಾರೆಯ ಮೇಲೆ ಜೈನಧರ್ಮದ ಪ್ರಭಾವ ಕುರಿತು ಚಿಂತಿಸುವ ಪ್ರಯತ್ನಗಳು ಸಾಕಷ್ಟು ನಡೆದಿವೆ. ಅದರಿಂದ ಈ ಪ್ರತಿಪಾದಿತ ವಿಚಾರಗಳ ಚರ್ಚೆಯನ್ನೇ ಮತ್ತೆ ಪುನರುಚ್ಚರಿಸುತ್ತ ವಾದ ಬೆಳೆಸುವ ಅಗತ್ಯವಿಲ್ಲ. ಪಶ್ಚಿಮದವರ ಬರವಣಿಗೆಗೆ ಮಿತಿಗಳಿವೆ; ಅವರು ಪೂರ್ವಗ್ರಹಗಳಿಂದ ಸದಾ ಮುಕ್ತರೆಂದು ಭಾವಿಸುವುದೇ ತಪ್ಪು.

ದಕ್ಷಿಣ ಭಾರತದ ಚರಿತ್ರೆಯಿಂದ ಗೊತ್ತಾಗುವಂತೆ ಇಲ್ಲಿಯೂ ಜೈನ ಸಿದ್ಧಾಂತದ ದಟ್ಟವಾದ ಪ್ರಭಾವವಿದೆ. ಆಂಧ್ರದಲ್ಲಿ ಕ್ರಿ.ಪೂ. ದಿಂದ ಕ್ರಿ.ಶ. ಹತ್ತನೆಯ ಶತಮಾನದವರೆಗೂ ಜೈನರಿದ್ದರು. ಕ್ರಿ.ಶ. ಮೂರನೆಯ ಶತಮಾನದ. ವೇಳೆಗೆ ಪ್ರತಿಕೂಲ ಪರಿಸರ ಪ್ರಾರಂಭವಾಗಿ ೧೦-೧೧ ಶತಮಾನದ ವೇಳೆಗೆ ಬಹುಮಟ್ಟಿಗೆ ಅದರ ಕುರುಹುಗಳೂ ಉಳಿಯದಂತೆ ಆಂಧ್ರದಲ್ಲಿ ಜೈನ ಸಾಹಿತ್ಯ ಶಿಲ್ಪಾದಿಗಳನ್ನು ವ್ಯವಸ್ಥಿತವಾಗಿ ನಾಶಪಡಿಸಲಾಗಿದೆ. ಬೌದ್ಧರೊಂದಿಗೆ ಜೈನರ ದಾಖಲೆಗಳನ್ನೂ ಶಂಕರಾಚಾರ್ಯರ ದಂಡುದಾಳಿಯಿಂದ ಸುಟ್ಟು ಹಾಕಲಾಯಿತೆನ್ನಲಾಗಿದೆ. ಕೇರಳದ ಕತೆಯೂ ಇದಕ್ಕಿಂತ ಭಿನ್ನವಾಗಿಲ್ಲ. ತಮಿಳು ನಾಡಿನಲ್ಲಿ, ಆಂಧ್ರ ಮತ್ತು ಕೇರಳದಂತೆ ಸಂಪೂರ್ಣವಾಗಿ ನಾಶವಾಗದಿದ್ದರೂ, ಸಾಕಷ್ಟು ಪ್ರಾಚೀನ ಕುರುಹುಗಳು ವಿಧ್ವಂಸಕರ ಏಟುಗಳಿಂದ ಪಾರಾಗಿ ಉಳಿದು ಬಂದಿವೆ. ಚೋಳರು ಶೈವೋಪಾಸಕರಾಗಿದ್ದು ಜೈನ ಬಸದಿಗಳನ್ನು ಹಾಳುಗೆಡವಿ, ಜೈನ ಸಮಾಜದ ಸದಸ್ಯರನ್ನು ಚಿತ್ರಹಿಂಸೆಗೆ ಗುರಿಪಡಿಸಿದ ದಾರುಣ ಘಟನೆಗಳನ್ನು ಚರಿತ್ರೆ ದಾಖಲಿಸಿದೆ. ಕರ್ನಾಟಕದ ಪರಿಸ್ಥಿತಿ ಇವೆಲ್ಲ ರಾಜ್ಯಗಳಿಗಿಂತ ಉತ್ತಮ. ಇಲ್ಲಿಯೂ ಬಸದಿಗಳ ನಾಶ, ಪರಿವರ್ತನೆ, ಜೈನ ಮುನಿ-ಶ್ರಾವಕರ ಕೊಲೆ ನಡೆದಿದೆ; ಆದರೂ ಒಟ್ಟಾರೆಯಾಗಿ ಜೈನ ಸಾಹಿತ್ಯ-ಶಿಲ್ಪ ಸಾಕಷ್ಟು ಉಳಿದು ಬಂದಿವೆ.

ಕನ್ನಡ ಸಾಹಿತ್ಯ ಗರ್ಭೀಕರಿಸಿದ ಪರಂಪರೆಗಳಲ್ಲಿ ವೈದಿಕ ವೈದಿಕೇತರ ಎರಡೂ ಇವೆ. ಸಂಸ್ಕೃತ ಭಾಷೆ ಮತ್ತು ವೈದಿಕ ವರ್ಗವನ್ನು ಮೂಲ ಬಿಂದುವಾಗಿ ಇಟ್ಟುಕೊಂಡು ಬೆಳೆದು ಬಂದ ಪರಂಪರೆಯೊಂದು ನಿರಂತರವಾಗಿ ಇದ್ದೇ ಇದೆ. ಇದರೊಂದಿಗೆ ಕನ್ನಡ ಸಾಹಿತ್ಯ ಸಂಸ್ಕೃತಿಯು ಪಾಳಿ-ಪ್ರಾಕೃತ ಭಾಷೆ ಮತ್ತು ಶ್ರವಣ ಸಮುದಾಯವನ್ನು ಒಳಗೊಂಡೇ ಬೆಳೆಯಿತು. ಪಾಳಿ ಭಾಷೆಯ ಮತ್ತು ಅದರ ಪರಂಪರೆಯ ಪ್ರಭಾವ ಕನ್ನಡದ ಮೇಲೆ ಪ್ರಾಕೃತ ಭಾಷೆಗಳಷ್ಟು ಆಗಲಿಲ್ಲ ಎಂಬುದು ನಿಜ. ಆದರೆ ಪಾಲಿ ಭಾಷೆಯ ಪ್ರಭಾವವೇ ಆಗಿಲ್ಲವೆಂದು ತೀರ್ಮಾನಿಸುವಂತಿಲ್ಲ. ಪ್ರಾಕೃತದ ಪ್ರಭಾವ ಪ್ರಾಬಲ್ಯವನ್ನು ಪ್ರಕಟಿಸುವ ದಾಖಲೆ ದೃಷ್ಟಾಂತಗಳು ಪ್ರಾಚೀನ ಕನ್ನಡ ಸಾಹಿತ್ಯದುದ್ದಕ್ಕೂ ಇವೆ. ಕನ್ನಡದ ಮೊಟ್ಟ ಮೊದಲನೆಯ ಉಪಲಬ್ಧ ಗ್ರಂಥ ವಡ್ಡಾರಾಧನೆಯೇ ಇದಕ್ಕೆ ಜೀವಂತ-ಜ್ವಲಂತ ಸಾಕ್ಷಿ. ಚಾವುಂಡರಾಯ ಪುರಾಣವೂ ಈ ಅಂಶವನ್ನು ದೃಢೀಕರಿಸುತ್ತದೆ.

ಪ್ರಾಚೀನ ಭಾರತದ ಸಾಂಸ್ಕೃತಿಕ ಮಹತ್ವದ ಮಹಾಕಾವ್ಯಗಳೆಂದು ಮಾನ್ಯವಾಗಿರುವ ರಾಮಾಯಣ ಭಾರತದಷ್ಟೇ ಮಹೋನ್ನತಿಯಿಂದ ಇನ್ನೆರಡು ಕೃತಿಗಳು ಜಿನಸೇನ-ಗುಣಭದ್ರರ ಮಹಾಪುರಾಣ ಮತ್ತು ಗುಣಾಢ್ಯನ ಬೃಹತ್ಕಥಾ (ಕ್ರಿ.ಶ. ೧-೨ಶ). ವೈದಿಕಶಾಹಿಯ ಜಾತಿ ರಾಜಕೀಯ ತಂತ್ರಗಾರಿಕೆಯಿಂದ ಬೃಹತ್ಕಥೆಯನ್ನೂ ಪ್ರಾಕೃತ ಭಾಷೆಗಳನ್ನೂ ಪಾಲಿ ಭಾಷೆಯನ್ನೂ ವ್ಯವಸ್ಥಿತವಾಗಿ ಚಪ್ಪಡಿಯೆಳೆದು ಸಮಾಧಿಮರಣ ಪಡೆಯುವಂತೆ ಮಾಡಲಾಯಿತು. ಆದರೆ ಕನ್ನಡದ ಅರಿವಿನ ದಿಗಂತಕ್ಕೆ ಬೃಹತ್ಕಥೆಯು ಬಹುಬೇಗ ಲಭ್ಯವಾಯಿತು. ಶೂದ್ರ ಕವಿಯಾದ ಗುಣಾಢ್ಯನು ಪೈಶಾಚೀಪ್ರಾಕೃತ ಭಾಷೆಯಲ್ಲಿ ರಚಿಸಿದ ೯ ಲಕ್ಷ ಮನೋಹರ ಗಾಥಾಗಳ ಬೃಹತ್ಕಥೆಯನ್ನು ಗಂಗರ ರಾಜನಾದ ಜೈನ ದುರ್ವಿನೀತನು 'ವಡ್ಡ ಕಥಾ' ಹೆಸರಿನಿಂದ ಸಂಸ್ಕೃತಕ್ಕೆ ಭಾಷಾಂತರಿಸಿದನು. ಕರ್ನಾಟಕದ ರಾಜನ ಅನುವಾದದಿಂದ ಪ್ರೇರಣೆಗೊಂಡು ತಮಿಳಿನಲ್ಲಿ ಕೊಂಗುವೇಳಿರ್ ಎಂಬ ಜೈನ ತುಂಡರಸನು ಪೆರುಂಗತೈ (ಬೃಹತ್ಕಥಾ-ವಡ್ಡಕಥಾ-ಪೆರುಂಗತೈ) ರಚಿಸಿದನು. ಕಾಶ್ಮೀರದ ಕ್ಷೇಮೇಂದ್ರನ ಬೃಹತ್ಕಥಾ ಮಂಜರಿ (೧೧ನೆಯ ಶ.), ಸೋಮದೇವನ ಕಥಾ ಸರಿತ್ಸಾಗರ (೧೧ ಶ), ಬುಧಸ್ವಾಮಿಯ ಬೃಹತ್ಕಥಾ ಶ್ಲೋಕ ಸಂಗ್ರಹ (೮ ಶ.) ಕೃತಿಗಳಿಗೆ ಮೊದಲೇ ಮಾರ್ಗಕಾರನಾಗಿ ಕನ್ನಡದ ದುರ್ವಿನೀತನು ಗುಣಾಢ್ಯನ ಕೃತಿಯ ಮಹತ್ತನ್ನು ಮನಗಂಡು ಅದರ ಭಾಷಾಂತರಕ್ಕೆ ಪ್ರಯತ್ನಶೀಲನಾದದ್ದು ಆತನ ವಿಮರ್ಶನ ಪ್ರಜ್ಞೆಯನ್ನು ಬಿಂಬಿಸುತ್ತದೆ. ಸರಿ ಸುಮಾರು ಅದೇ ಕಾಲದಲ್ಲಿ ವಾಚಕ ಸಂಘದಾಸಗಣಿಯು ಪ್ರಾಕೃತದಲ್ಲಿಯೇ **ವಸುದೇವ ಹಿಂಡಿ**ಯನ್ನು ಕ್ರಿ.ಶ. ಸುಮಾರು ನಾಲ್ಕನೆಯ ಶತಮಾನದಲ್ಲಿ ರಚಿಸಿದ್ದಾನೆ. ಈ ರಮ್ಯ ಕಥಾನಕ ಭಾಗವನ್ನು ಗುಣಾಢ್ಯನ ಬೃಹತ್ಕಥಾ ಆಧಾರದಿಂದ ಸಿದ್ಧಪಡಿಸಿದ್ದನ್ನೂ **ಮಜ್ಝಿಮಕಾಂಡ** ಎಂಬ ಇನ್ನೊಂದು ಜೈನಕೃತಿಯೂ ಪ್ರಾಕೃತದಲ್ಲಿಯೇ ರಚಿತವಾದುದನ್ನೂ ಸ್ಮರಿಸಬೇಕು. ಈ ಪ್ರಯತ್ನಗಳಿಂದ ಸಾಬೀತು ಆಗುವಂತೆ, ಜೈನ ಪರಂಪರೆ ಯಾವುದೇ ಶ್ರೇಷ್ಠ ಪರಂಪರೆಯನ್ನು ಗೌರವಿಸುವ ಅನೇಕಾಂತವಾದವನ್ನು ಮೈಗೂಡಿಸಿಕೊಂಡಿತ್ತು.

ಎಂ. ವಿಂಟರ್ ನಿಟ್ಸ್‌ರವರು ಹರಳುಗೊಳಿಸಿ ಮಂಡಿಸಿರುವ ಪ್ರತಿಪಾದನೆ ಹೀಗಿದೆ : "Its (Jainism) characteristic features are the following : It disregards the system

of castes and *āśramas*;. its heroes are, as a rule, not Gods and *Riṣis*, but kings or merchants or even Śūdras. The subjects of poetry taken up by it are not Brahmanic myths and legends but popular tales, fairy stories, fables and parables. It likes to insist on the misery and sufferings of *samsāra*, and it teaches a morality of compassion and *Ahimsa*, quite distinct from the ethnics of Brahmanism with its deals of the great sacrificer and generous supporter of the priests and its strict adherence to the caste system. (M. Winternitz; "The Jains in the History of Indian literature" (ed) Jina Vijaya Muni, Ahmedabad (1946) p.5.]

ಇದಕ್ಕೆ ಪೂರಕ ನೆಲೆಯಲ್ಲಿ ನಿಲ್ಲುವ ಇನ್ನೊಂದು ವಿಚಾರದ ಎಳೆಯನ್ನೂ ಇಲ್ಲಿ ಕೂಡಿಸಬೇಕು. ರಾಮಾಯಣ, ಭಾರತ, ಮಹಾಪುರಾಣ-ಈ ಮೂರು ಮಹಾ ಕಾವ್ಯಗಳ ಕಥಾನಾಯಕರು ಕ್ಷತ್ರಿಯರು; ರಾಮನೂ ಕೃಷ್ಣನೂ ನೀಲಮೇಘ ಶ್ಯಾಮರು, ದ್ರಾವಿಡ ನಾಯಕರು. ಇವರು ಬಿಳುಪು ಹೊಳಪಿನ ಆರ್ಯರಲ್ಲ! ಗುಣಾಢ್ಯನ ಬೃಹತ್ಕಥಾದ ನಾಯಕರು ಶೂದ್ರರು, ವೈಶ್ಯರು ಮತ್ತು ಕ್ಷತ್ರಿಯರು; ಮುಖ್ಯವಾಗಿ ಅಲ್ಲಿನ ಪಾತ್ರಗಳು ಕುಬೇರೋಪಾಸಕರಾದ ವಣಿಜರು. ಮೂಲದ್ರಾವಿಡರೇ ಆದ ಜೈನರು ಈ ಎಲ್ಲ ಕ್ಷತ್ರಿಯ ಶೂದ್ರ ವೈಶ್ಯರನ್ನೊಳಗೊಂಡ ಕಥಾವಸ್ತುವನ್ನು ಗೌರವಿಸಿದರು. ಇದರ ಪ್ರಭಾವವನ್ನು ಕನ್ನಡ ಚಂಪೂ ಷಟ್ಪದಿ ಮತ್ತು ಸಾಂಗತ್ಯ ಕಾವ್ಯಗಳಲ್ಲಿ ವಿಸ್ತಾರವಾಗಿ ಬರುವ ಚಾರುದತ್ತನ ಕತೆಯಲ್ಲಿ ಕಾಣಬಹುದು. ಮುಂದೆ ಇದೇ ಜೈನ ಸಾಹಿತ್ಯದ ಜನಪ್ರಿಯ ಕತೆಯನ್ನು ಆರಿಸಿಕೊಂಡು ಹರಿಹರನು ಮಲುಹಣನ ರಗಳೆ ಕಾವ್ಯವನ್ನು ರಚಿಸಿದ್ದಾನೆ. ಇದೇ ಜೈನವಸ್ತು ೨೦ನೆಯ ಶತಮಾನದ ಐದು ಆರನೆಯ ದಶಕಗಳಲ್ಲಿ ಜನಾನುರಾಗಗಳಿಸಿದ್ದ ದೇವದಾಸಿ ನಾಟಕವಾಗಿ ರೂಪಾಂತರಗೊಂಡಿದೆ (ಹಂಪನಾ. ಚಾರುದತ್ತನ ಕಥೆ : ಮೂಲ ಚೂಲ : ೧೯೯೧ : ೪೮೧-೪೯೮).

ಇಷ್ಟರ ಮಟ್ಟಿಗೆ ಜನಭಾಷೆಗಳಿಗೆ ಒಲಿದ ಜಿನಭಕ್ತ ಕವಿಗಳು ಒಂದು ಹಂತದಲ್ಲಿ ಸಂಸ್ಕೃತದ ಮೇಲ್ಮೆಯನ್ನು ಒಪ್ಪಿಕೊಳ್ಳುವುದು ಅನಿವಾರ್ಯವಾಯಿತು. ಕ್ರಿ.ಪೂ.ದ ಕಡೆಯವರೆಗೂ ಪ್ರಾಕೃತದ ಅಳವಡಿಕೆ ಸಾಕೆಂದು ಹೊರಟ ಶ್ರವಣ ಪರಂಪರೆ, ಕ್ರಿ.ಶ. ದ, ಆರಂಭದ ವೇಳೆಗೆ ಸಂಸ್ಕೃತವನ್ನೂ ಸ್ವೀಕರಿಸಿತು. ಉಮಾಸ್ವಾಮಿಯ ತತ್ವಾರ್ಥ ಸೂತ್ರದಂಥ ಜೈನಾಗಮದ ಮೂಲ ಗ್ರಂಥವೇ ಸಂಸ್ಕೃತದಲ್ಲಿ ಅವತರಿಸಿತು. ಇದು ಪ್ರಾಕೃತ ಪ್ರೇಮಿಗಳಾದ ಜೈನ ಸಮಾಜದಲ್ಲಿ, ಸಂಸ್ಕೃತ ನಿಷ್ಠರಾದ ಬ್ರಾಹ್ಮಣರು ಮತಾಂತರಗೊಂಡ ಮೇಲೆ, ಸಂಭವಿಸಿದ ಭಾಷಾತ್ಮಕ ಧೋರಣೆಯಲ್ಲಿನ ಮಾರ್ಪಾಟು. ಇದೇ ಬಗೆಯಲ್ಲಿ ಬ್ರಾಹ್ಮಣರ ಸೇರ್ಪಡೆಯಿಂದ ಜೈನ ಪರಂಪರೆಯಲ್ಲಿ ವೈದಿಕತ್ವದತ್ತ ಹೆಜ್ಜೆಗಳು ಹೊರಳಿ ಹಿಂದುತ್ವದ ಪ್ರಭಾವಕ್ಕೆ ಪಕ್ಕಾಯಿತು. ಒಂದು ಕಡೆಯಲ್ಲಿ ಜೈನ ಪ್ರಭಾವ ಹಿಂದು ಸಮಾಜದ ಮೇಲೆ ನಡೆಯುತ್ತಿರುವಾಗಲೆ, ಇನ್ನೊಂದು ಕಡೆ ಜೈನ ಸಮಾಜದ ಮೇಲೆ ಹಿಂದುತ್ವದ ವರ್ಚಸ್ಸು ಬೀಳತೊಡಗಿತು. ಈ ಬಗೆಯ ಪರಸ್ಪರ ಕೊಡುಕೊಳ್ಳುವಿಕೆಯ ಪಾರಿಣಾಮಿಕ ಕಾರಣಗಳಿಂದ ಒಂದು ಸಮಾನ ಭಾರತೀಯ ಸಂಸ್ಕೃತಿಯ ಧ್ರುವೀಕರಣಕ್ಕೆ ನಾಂದಿಯಾಯಿತು.

ಸಂಸ್ಕೃತಿಯ ಹಾಗೆಯೇ ಯಾವುದೇ ಸಾಹಿತ್ಯವನ್ನು ತೆಗೆದುಕೊಂಡರೂ ಅದರ ಹಿಂದೆ

ಇನ್ನೂ ಹಲವು ಪ್ರೇರಣೆ ಪ್ರಭಾವಗಳು ಇರುತ್ತವೆ. ಪ್ರಪಂಚದ ಸಾಹಿತ್ಯವನ್ನು ಅದು ಎಷ್ಟು ಭಾರತೀಯ-ಅಮೆರಿಕನ್-ಬ್ರಿಟಿಷ್-ಫ್ರೆಂಚ್-ಜರ್ಮನ್- ಎಂದು ಹಿಂಜಿ ಹಿಸುಕುತ್ತ ಹೊರಟರೆ ಸಮಸ್ಯೆಗಳು ಉದ್ಭವಿಸಬಹುದು. ಆದರೆ ಪ್ರತಿಯೊಂದು ಭಾಷಾ ಸಾಹಿತ್ಯವೂ ತನ್ನ ಜಾಯಮಾನಕ್ಕೆ ಸೂಕ್ತವೆನಿಸಿದ ನಮೂನೆಗಳನ್ನೂ ಅಗತ್ಯವೆಂದು ತೋರಿದ ಮಾದರಿಗಳನ್ನೂ ಅನ್ಯಾನ್ಯ ಮೂಲಗಳಿಂದ ಬಾಚಿ ಅಳವಡಿಸಿಕೊಳ್ಳುತ್ತದೆ. ಎರವಲು ಸರಕುಗಳಿಂದ ತನ್ನ ಕೋಶಭಂಡಾರವನ್ನು ತುಂಬಿಸಿಕೊಳ್ಳುತ್ತದೆ. ಜೈನ ಪರಂಪರೆಗೆ ಮುಖಾಮುಖಿಯಾಗಿ ನಿಲ್ಲಬೇಕಾದ ಪರಿಸ್ಥಿತಿಯಲ್ಲಿ ಕನ್ನಡ ಸಾಹಿತ್ಯ ಅದಕ್ಕೆ ಹೇಗೆ ಪ್ರತಿಕ್ರಿಯಿಸಿತೆಂಬುದನ್ನು ಅರಿಯಬಹುದು. ಭಾರತೀಯ ಸಂಸ್ಕೃತಿಗೆ ಅರ್ಪಿಸಿಕೊಂಡ ಬುದ್ಧಿಭಾವ ಈ ಹೊಸ ಪರಂಪರೆಯ ಪರಿಸರದಲ್ಲಿ ತೋರಿದ ಧೋರಣೆಯನ್ನು ಗುರುತಿಸಬಹುದು. ಇದರ ಸಮ್ಮುಖದಲ್ಲಿ ಜೈನ ಲೇಖಕರು ಹೇಗೆ ಕ್ರಿಯಾಶೀಲರಾದರು ಎಂಬುದನ್ನು ಪರಿಶೀಲಿಸಬಹುದು.

ಕನ್ನಡದಲ್ಲಿ ಮೊದಲು ಬರೆಯತೊಡಗಿದವರು ಜೈನ ಲೇಖಕರೆಂಬುದು ಈಗ ಚರ್ಚೆಯ ವಿಷಯವಾಗಿ ಉಳಿದಿಲ್ಲ. ಜೈನರಿಗೂ ಮೊದಲು ಇದರಲ್ಲಿ ವಿವಿಧ ಜನಪದದ ಓವನಿಗೆ, ಒನಕೆವಾಡು ಸೊಲ್ಲುಗಳು ಸೇರಿದ್ದುವು. ಇಂಥ ಜನಪದರ ಭಾಷೆಯನ್ನು ಜೈನರು ಶಿಷ್ಟಪದವಾಗಿಸಿದರು. ಸಾಜದ ಪುಲಿಗೆರೆಯ ತಿರುಳ್ಗನ್ನಡಕ್ಕೆ ಸಾಹಿತ್ಯದ ಪಟ್ಟ ಕಟ್ಟಿದರು. ಕನ್ನಡ ಭಾಷೆಯ ಸಾಧ್ಯತೆಗಳನ್ನು, ಅದರ ನಾನಾ ಆಯಾಮಗಳಲ್ಲಿ ಸಬಲವಾಗಿ ದುಡಿಸಿಕೊಂಡರು. ಪ್ರಾಯಃ ಕನ್ನಡದ ಹಿಂದೆ ಬೆಂಗಾವಲಾಗಿದ್ದ ಸಂಸ್ಕೃತದೊಂದಿಗೆ ಜೈನರು ಕನ್ನಡ ಭಾಷಾ ಸಾಹಿತ್ಯಗಳಿಗೆ ಪ್ರಾಕೃತ ಭಾಷಾಸಾಹಿತ್ಯದ ಕಾಯಕಲ್ಪ ಮಾಡಿದರು. ಈ ದೋಹದದಿಂದ ಕನ್ನಡ ಕುಸುಮಿಸಿ ಕಳೆಗೊಂಡಿತು. ಈ ಹೊಸ ಕಸಿಯಿಂದ, ಮಿಶ್ರತಳಿಯಿಂದ, ಕನ್ನಡಕ್ಕೆ ದೊಡ್ಡ ಲಾಭವಾದದ್ದು ಎಷ್ಟೆಂಬುದು ಚಿಂತನೀಯ. ಭಾಷೆಯ ಭಂಡಾರ ಸಮೃದ್ಧವಾಯಿತು; ಕನ್ನಡ ಭಾಷೆಗೆ, ಅದರ ಆರಂಭದಲ್ಲಿಯೇ ಅಭಿವ್ಯಕ್ತಿ ಶಕ್ತಿಯ ಸಂವಹನ ಸಾಧ್ಯತೆಗೆ ಬಲ ಬಂದದ್ದು ಜೈನ ಲೇಖಕರ ಪ್ರತಿಭೆಯಿಂದ.

ಜೈನ ಪರಂಪರೆಯ ಜತೆಯಲ್ಲೇ ಮತ್ತು ಪರಿಸರದಲ್ಲೇ ಬಾಳುತ್ತ ಬಂದ ವೈದಿಕ ಮತಗಳಾದ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮತಗಳು ಕನ್ನಡ ಸಾಹಿತ್ಯರಚನೆಗೆ ಅಭಿಮುಖರಾದದ್ದು ತುಂಬ ತಡವಾಗಿ. ಈ ವಿಳಂಬಕ್ಕೆ ಲಾಗಾಯ್ತಿನಿಂದ ಈ ಮತಗಳ ಪರಂಪರೆಯಲ್ಲಿ ಬೇರು ಬಿಟ್ಟಿದ್ದ ಸಂಸ್ಕೃತ ಪ್ರೀತಿಯೇ ಕಾರಣ. ಸಂಸ್ಕೃತವೇ ಗೀರ್ವಾಣವಾಣಿ ಎಂಬ ತಿಳಿವಳಿಕೆ ಅಲ್ಲದೆ ಬೇರೆ ಕಾರಣಗಳು ಏನಿದ್ದುವೆಂಬುದು ತಿಳಿಯದು. ಕನ್ನಡ ಭಾಷಾ ಸಮಾಜದ ನಡುವೆ ಶತಮಾನಗಳ ಕಾಲ ಬಾಳಿಯೂ ಸ್ಥಳೀಯ ಜನರ ಭಾಷೆಗೆ ಸ್ಪಂದಿಸದೆ ಪರಕೀಯವಾಗಿ ಉಳಿದದ್ದು ಸರಿಯಲ್ಲವೆಂಬ ಭಾವನೆ ಅವರನ್ನು ಕಾಡಿದ್ದು ತಡವಾಗಿ; ಸ್ಮಾರ್ತರು, ಮಾಧ್ವರು, ಶ್ರೀವೈಷ್ಣವರು, ಮತ್ತು ಇವುಗಳ ಒಳಜಾತಿಗಳ ಪರಂಪರೆಯ ಲೇಖಕರು ಮಧ್ಯಕಾಲೀನ ಭಕ್ತಿ ಚಳವಳಿಯ ನೆಲೆಯಲ್ಲಿ ಕನ್ನಡದಲ್ಲೂ ಕೃತಿರಚನೆಗೆ ತೊಡಗಿದರು.

ಮುಖ್ಯವಾಗಿ ದಾಸರ ಕೀರ್ತನೆಗಳ ಮೂಲಕ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರವಾಗಿ ಕನ್ನಡ ಸಾಹಿತ್ಯಕ್ಕೆ ಇನ್ನೊಂದು ತಿರುವು ದೊರೆಯಿತು. ಜೈನರೂ (ರತ್ನಾಕರವರ್ಣಿ) ವೀರಶೈವರೂ (ಹಲವರು) ಶೂದ್ರರೂ (ಕನಕದಾಸರು) ಈ ಕೀರ್ತನ ಪ್ರಕಾರದಲ್ಲಿ ತೊಡಗಿದರೂ ಇದು ಮುಖ್ಯವಾಗಿ ವೈದಿಕ

ಹಿಂದು ಮನಸ್ಸುಗಳ ಸಾಹಿತ್ಯಕ ಅಭಿವ್ಯಕ್ತಿ. ಶಿಷ್ಟ ಕನ್ನಡ ಸಾಹಿತ್ಯ ಪ್ರಕಾರದಲ್ಲಿ ದುರ್ಗಸಿಂಹನ ಪಂಚತಂತ್ರ, ರುದ್ರಭಟ್ಟನ ಜಗನ್ನಾಥ ವಿಜಯ ಮತ್ತು ಕುಮಾರವ್ಯಾಸನ ಭಾರತ ಕಥಾಮಂಜರಿ ಇವನ್ನು ಪ್ರತ್ಯೇಕವಾಗಿಯೇ ಹೆಸರಿಸಬೇಕು. ಯೋಗಾಯೋಗವೆಂದರೆ ಈ ಮೂರೂ ಕಾವ್ಯಗಳು ಜೈನ ಪರಂಪರೆಯ ಪ್ರಭಾವದಿಂದ ರೂಪಗೊಂಡಿವೆ. ದುರ್ಗಸಿಂಹನ ಪಂಚತಂತ್ರ ಕಾವ್ಯವು ಜೈನ ಪರಂಪರೆಯ ವಸುಭಾಗಭಟ್ಟನ ಸಂಪ್ರದಾಯಕ್ಕೆ ಸೇರಿದ್ದು ಈಗ ಉಪಲಬ್ಧವಾಗಿರುವ ಐಕೈಕ ಕೃತಿಯಾಗಿದೆ. ನೇಮಿಚಂದ್ರನೇ ಅಲ್ಲದೆ ಪುನ್ನಾಟ ಜಿನಸೇನ, ಆದಿಗುಣವರ್ಮ, ಕರ್ಣಪಾರ್ಯಾದಿ ಜೈನ ಪರಂಪರೆಯ ಭಾರತ ಕಾವ್ಯಗಳಿಂದ ರುದ್ರಭಟ್ಟನ ಜಗನ್ನಾಥ ವಿಜಯ ಮೈಪಡೆದಿದೆ. ಇದೇ ರೀತಿಯಾಗಿ ಜೈನ ಭಾರತಗಳ ದಟ್ಟವಾದ ಪ್ರಭಾವವನ್ನು ಗರ್ಭೀಕರಿಸಿದ ಪಂಪನ ವಿಕ್ರಮಾರ್ಜುನ ವಿಜಯದ ಪ್ರಭಾವದಿಂದ ಕುಮಾರವ್ಯಾಸನ 'ಭಾರತ ಕಥಾ ಮಂಜರಿ' ರಚಿತವಾಗಿದೆ. ಇದು ಜೈನ ಪರಂಪರೆ ಅನ್ಯ ಸಂಪ್ರದಾಯದ ಕನ್ನಡ ಸಂದರ್ಭದ ಲೇಖಕರಿಗೆ ಕೊಟ್ಟ ಪ್ರಚೋದನೆಗೆ ಸಾಹಿತ್ಯಕ ಸಾಕ್ಷಿ.

ಛಂದಸ್ಸಿನ ದೃಷ್ಟಿಯಿಂದ ಜೈನ ಪರಂಪರೆಯವರು ಕನ್ನಡಕ್ಕೆ ನೀಡಿದ ಕೊಡುಗೆ ಗಣ್ಯವಾಗಿದೆ. ಸಂಸ್ಕೃತದಿಂದ ಖ್ಯಾತ ಕರ್ಣಾಟಕಾದಿ ವೃತ್ತಗಳನ್ನು (ಮತ್ತೇಭವಿಕ್ರೀಡಿತ, ಚಂಪಕಮಾಲೆ ಮಹಾಸ್ರಗ್ಧರೆ, ಉತ್ಪಲಮಾಲೆ, ಶಾರ್ದೂಲ ವಿಕ್ರೀಡಿತ, ಸ್ರಗ್ಧರೆ) ಮತ್ತು ಇತರ ಕೆಲವು ಅಪರೂಪದ ಪದ್ಯಜಾತಿಗಳನ್ನು (ಉಜ್ವಲ, ತರಳ, ದ್ರುತವಿಲಂಬಿತ, ಮಲ್ಲಿಕಾಮಾಲೆ, ಮಾಲಿನಿ, ಮಂದಾಕ್ರಾಂತ, ಶೌರ್ಜ್ಜ್ಗ- ಖಚರಪ್ಲುತ, ಹರಿಣಿ ಹರಿಣೀಪ್ಲುತ ಇತ್ಯಾದಿ ವೃತ್ತಜಾತಿಗಳು) ಕನ್ನಡಕ್ಕೆ ಕೂಡಿಸಿ ನೆಯ್ದರು; ಚಂಪೂ ಕಾವ್ಯ ಪ್ರಕಾರದ ನೆಯ್ಗೆಯ ಕುಸುರುಗಳಿಗೆ ಬಣ್ಣ ತುಂಬಿದರು. ಸಂಸ್ಕೃತ ಮೂಲದಿಂದ ಇವಿಷ್ಟೇ ಅಲ್ಲದೇನೆ ಅನುಷ್ಟುಬ್, ಪುಷ್ಪಿತಾಗ್ರ ಮೊದಲಾದ ಬಿಡಿ ಮಾದರಿಗಳನ್ನೂ ಕನ್ನಡಕ್ಕಿಳಿಸಿದರು. ಪ್ರಾಕೃತ ಸಾಹಿತ್ಯದಿಂದ ಗಾಢವಾದ ಪ್ರಭಾವ ಕನ್ನಡದ ಕಾವ್ಯ ಪ್ರಕಾರದ ಮೇಲೆ ಅಗಲು ಜೈನ ಲೇಖಕರು ಕಾರಣರು. ಪದ್ಧಳಿ ರಗಳೆ (ಮಂದಾನಿಲ), ಲಲಿತ ರಗಳೆ (ಮದನಾವತಾರ), ಉತ್ಸಾಹ ರಗಳೆ (ಲಯೋತ್ತರ) ಎಂಬೀ ರಗಳೆಯ ರತ್ನತ್ರಯ ಪ್ರಕಾರವನ್ನೂ ಅದರ ಸೊಗಸನ್ನೂ ಕನ್ನಡದ ಕಾವ್ಯ ಪದ್ಧತಿಯಲ್ಲಿಟ್ಟು ಅನಾವರಣಗೊಳಿಸಿದರು. ಕಂದ ಮತ್ತು ಸಾಂಗತ್ಯ ಕನ್ನಡ ಕಾವ್ಯ ತೋಟ್ಟಿ ಛಂದಸ್ಸಿನ ರೂಪದಲ್ಲಿ ಜನಪ್ರಿಯವಾಗಿವೆ. ಈ ಎರಡರ ರೂಪ ಮತ್ತು ಲಯಗಾರಿಕೆಯನ್ನು ಜೈನ ಕವಿಗಳು ಪ್ರಾಕೃತಮೂಲದಿಂದ ಸ್ವೀಕರಿಸಿ, ಪರಿಷ್ಕರಿಸಿ, ಕನ್ನಡದ ಪದ್ಯದ ನಡಿಗೆಗೆ ಬಿಡಗು ತಂದಿದ್ದಾರೆ. ಹೀಗೆ ಹೊರಗಿನಿಂದ ಆಮದು ಮಾಡಿದ್ದಲ್ಲದೆ ಒಳಗಿನ ದೇಶೀಯ ಅಂಶ ವೃತ್ತಗಳಾದ ಉತ್ಸಾಹ, ತ್ರಿಪದಿ, ಪಿರಿಯಕ್ಕರಗಳಿಗೂ ಉಚಿತ ಎಡೆಕೊಟ್ಟುದರಿಂದಾಗಿ ಕನ್ನಡ ಕಾವ್ಯಗಳಲ್ಲಿ ಲಯಗಾರಿಕೆಯ ಸೊಗಸೂ, ಭಾವದ ರಂಗೂ, ಸಾಭಿನಯಬಳುಕೂ ಸಾಧ್ಯವಾಯಿತು. ಸ್ಥಾನಿಕ ಅಂಶಗಳೊಂದಿಗೆ, ಸಂಸ್ಕೃತ ಪ್ರಾಕೃತ ಭಾಷಾ ಸಾಹಿತ್ಯ ಕೃತಿಗಳ ನಿಕಟ ಸಂಪರ್ಕ ಜೈನ ಲೇಖಕರಿಗೆ ಇದ್ದುದರಿಂದ ಕನ್ನಡ ಭಾಷೆ ಸಾಹಿತ್ಯ ಮೈಪಡೆದ ಶಕ್ತಿ ವರ್ಧಕ ವಸ್ತು, ಛಂದಸ್ಸು, ವರ್ಣನೆ, ಪಾತ್ರ ಚಿತ್ರಣ ಮಾದರಿಗಳಲ್ಲಿ ಗಮನಾರ್ಹ ಕೆಚ್ಚು ಸೇರಿಕೆಯಿದೆ. ಜೈನ ಸಾಹಿತ್ಯ ಕನ್ನಡ ಸಾಹಿತ್ಯದ ಮೇಲೆ ಅಚ್ಚೊತ್ತಿದ ಪ್ರಭಾವದ ಚಹರೆಗಳನ್ನು ಇನ್ನೂ ವಿಪುಲವಾಗಿ ಗುರುತಿಸುತ್ತಾ ಈ ಅಧ್ಯಯನವನ್ನು ಬೆಳೆಸಲಕಾಶವಿದೆ. ಆದರೆ ಸಂಕ್ಷೇಪದಲ್ಲಿ 'ದಿಗ್ದರ್ಶನ ರೂಪದಲ್ಲಿ' ಈಗಿಲ್ಲಿ ನಿರೂಪಿಸಿರುವುದನ್ನು ಒಟ್ಟು ಸಾರಾಂಶವೆಂದು ತಿಳಿಯಬಹುದು.

ಕನ್ನಡಿಗರ ಆಡುಮಾತಿನ ಉಚ್ಚಾರದ ಏರಿಳಿತದ ಲಯದಲ್ಲಿಯೇ ಹೊಮ್ಮುವ ಕಾಕು ಕಟಕಿಗಳನ್ನು ಕಾವ್ಯ ಭಾಷೆಯಲ್ಲಿ ಸಾಭಿನಯಪೂರ್ವಕವಾಗಿ ಹಿಡಿದಿಡುವ ಸಾಮರ್ಥ್ಯವನ್ನೂ ಮನಗಾಣಿಸಿದ್ದಾರೆ. ಅಗ್ರಪೂಜಾರ್ಹವೆಂದು ಮಾನ್ಯನಾದ ಕೃಷ್ಣನಿಗೆ ಅರ್ಘ್ಯವೆತ್ತಲು ಹೊರಟ ಗಳಿಗೆಯಲ್ಲಿ ಶಿಶುಪಾಲನು ಗುಡುಗುವ ಕಿಡಿ ನುಡಿಗಳಲ್ಲಿ ಮಿಡಿಯುವ ಭಾವೋತ್ಕಟತೆ, ಕೋಪ ತಾಪಗಳನ್ನು ಒಂದು ಕಂದ ಪದ್ಯದಲ್ಲಿ ಆದಿಕವಿ ತುಂಬಿದ್ದಾನೆ:

ಕುಡುವೇಳ್ವನ ಕುಡುವನ ಕುಡೆ
ಪಡೆವನ ಪೆಂಪೇಂ ನೆಗಳ್ತೆವಡೆಗುಮೊ ಪೇೞ್ವಿಂ
ಕುಡುವೇಳ್ಗೆಮ ಕುಡುವಣ್ಣಂ
ಕುಡುಗೆಮ ಕುಡೆ ಕೊಳ್ವ ಕಲಿಯನರಿಯಲ್ಕಕ್ಕುಂ

ಕನ್ನಡ ನಾಡಿನ ಕಸುವನ್ನು ತೋರಿಸಲು ಪಂಪಕವಿ ಇಲ್ಲಿ ಉದ್ದೇಶಪೂರ್ವಕವಾಗಿ ಸಂಸ್ಕೃತ ಶಬ್ದಗಳನ್ನು ಸೇರಿಸದೆ, ಅಚ್ಚಗನ್ನಡದ ಮಾತುಗಳನ್ನಷ್ಟೇ ಪೋಣಿಸಿದ್ದಾನೆ. ಇಂತಹ ಪದ್ಯಗಳು ಪಂಪನಲ್ಲಿ ನೂರಾರು, ಒಟ್ಟು ಜೈನ ಸಾಹಿತ್ಯದಲ್ಲಿ ಸಾವಿರಾರು. ಕನ್ನಡ-ಸಂಸ್ಕೃತ, ಕನ್ನಡ-ಪ್ರಾಕೃತ ಭಾಷೆಗಳ ಹದವರಿತ ಹವಣಾದ ಮಿಶ್ರಣಕ್ಕೆ ಮಾದರಿಗಳನ್ನು ನಿರ್ಮಿಸಿಕೊಟ್ಟಿದ್ದಾರೆ.

ಸಮಗ್ರ ಕನ್ನಡ ಸಾಹಿತ್ಯ ಸಂಸ್ಕೃತದ ಅಂಧಾನುಕರಣೆಯೆಂದು ಹೇಳುತ್ತ ಬಂದ ಗಿಳಿಪಾಠ ಪೂರ್ಣಸತ್ಯವಲ್ಲ. ಶಿಷ್ಟಪರ ಸಂಸ್ಕೃತದಷ್ಟೇ ಜನಪರ ಪ್ರಾಕೃತವೂ ಕನ್ನಡ ಭಾಷಾ ಸಾಹಿತ್ಯದ ಮೇಲೆ ಗಾಢವಾದ ಪ್ರಭಾವ ಬೀರಿದೆ. ಭಾಷಾ ನಿಷ್ಠವಾದ ಈ ಬಗೆಯ ವಿವರಣೆ ಇನ್ನೂ ನಿರುಕಾಗಬೇಕಾದರೆ, ಪ್ರಾಕೃತದ ಪ್ರಭಾವ ಎಷ್ಟು ಗಾಢತರವಾಗಿದೆ ಎಂಬುದರ ತೌಲನಿಕ ಅಧ್ಯಯನ ಆಗಬೇಕು. ವಾಸ್ತವವಾಗಿ ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಸಂಸ್ಕೃತಕ್ಕಿಂತ ಪ್ರಾಕೃತವೇ ಹೆಚ್ಚು ಮೊಲೆಯೂಡಿದ್ದು. ಕನ್ನಡದ ಪ್ರಾರಂಭಿಕ ಸಾಹಿತ್ಯಕಾರರು ಜೈನರು. ಜೈನರ ಮೂಲ ಮಾತೃ ಭಾಷೆ ಪ್ರಾಕೃತ; ಅದು ಅವರ ಧಾರ್ಮಿಕ ಭಾಷೆಯೂ ಆಗಿತ್ತು. ಮೊದಲಿಗೆ ಜೈನರ ಶಿಕ್ಷಣ ಮಾಧ್ಯಮವೂ ಸಹ ಪ್ರಾಕೃತವೇ.

ಸರ್ವಭಾಷೆಗಳೂ ಸಮಾನ ಗೌರವಕ್ಕೆ ಪಾತ್ರವೆಂಬ ಪರಿಕಲ್ಪನೆಯೊಂದು ಸಾಧ್ಯವಾದದ್ದು ಅವರಿಗಿದ್ದ ಈ ಬಹುಭಾಷಿಕ ಜ್ಞಾನದ ಹಿನ್ನೆಲೆ ಮತ್ತು ಅರಿವಿನಿಂದ. ನೆರೆಹೊರೆಯನ್ನು, ಪರಿಸರವನ್ನು ಸಹಿಸುವ ಗುಣವೇ ಸ್ಯಾದ್ವಾದ ಸಿದ್ಧಾಂತದ ತಳಪಾಯ. ಇತರರನ್ನೂ, ಇತರರ ಭಾಷೆಯನ್ನೂ ಮರ್ಯಾದೆಯಿಂದ ಕಾಣುವ ಸಹನೆಯ ಮನೋಧರ್ಮ ಜಿನಧರ್ಮದ ಸ್ವಭಾವದಲ್ಲಿ ಸೇರಿಹೋಗಿದೆ. (ಸ್ವ) ಧರ್ಮಾಪೇಕ್ಷ ನೆಲೆಯ ಆಗಮ ಕೃತಿಗಳನ್ನೂ ರಚಿಸಿದ ಪಂಪ ಪೊನ್ನರನ್ನರು (ಸ್ವ) ಧರ್ಮ ನಿರಪೇಕ್ಷ ದೃಷ್ಟಿಯ ಲೌಕಿಕ ಕಾವ್ಯಗಳನ್ನೂ ರಚಿಸಿದರು.

ತಮಿಳು, ಕನ್ನಡ, ತೆಲುಗು ಭಾಷೆಗಳಲ್ಲಿ ಅಭಿವ್ಯಕ್ತಿ ಮಾಧ್ಯಮವನ್ನು ಸಂಸ್ಕೃತಕ್ಕೆ ಸೇರಿಸಿದವರೂ ಮತ್ತು ಬಿಡಿಸಿದವರು ಜೈನಲೇಖಕರೇನೆ. ಸಂಸ್ಕೃತ ಕನ್ನಡ ಭಾಷೆಗಳಲ್ಲಿ ಸಮಾನವಾದ ಪಾಂಡಿತ್ಯ ಪ್ರಭುತ್ವ ತಮಗೆ ಇದೆಯೆಂಬುದನ್ನು ಪಂಪ ಪೊನ್ನ ರನ್ನ ಅಗ್ಗಳ ಜನ್ನ ನೇಮಿಚಂದ್ರ ನಾಗಚಂದ್ರ

ಮೊದಲಾದ ಜೈನ ಕವಿಗಳು ತಮ್ಮ ಕೃತಿಗಳಲ್ಲಿ ಪ್ರಕಟಿಸಿದ್ದಾರೆ; ಜತೆಗೆ ತಾವು ಉಭಯ ಭಾಷಾ ವಿಶಾರದರೆಂದೂ ಹೇಳಿಕೊಂಡಿದ್ದಾರೆ. ಹಾಗೆಂದು ಸಂಸ್ಕೃತಕ್ಕೆ ದಾಸರಾಗದೆ ಒಂದು ಆರೋಗ್ಯಕರವಾದ ಭಾಷಾದೂರವನ್ನೂ, ಭಾಷಾ ಬಾಂಧ್ಯವದ ನೆರೆಯಲ್ಲೇ, ಉಳಿಸಿಕೊಂಡಿದ್ದಾರೆ. ಸಂಸ್ಕೃತದ ಪ್ರಾಬಲ್ಯ ಹೆಚ್ಚಿ ಕನ್ನಡದ ಬುಡಕ್ಕೆ ಅಪಾಯಗಳು ಬಂದಿವೆ ಎಂದೆನಿಸಿದಾಗ ಅದರ ವಿರುದ್ಧ ತಮ್ಮ ಸೊಲ್ಲು ಎತ್ತಿದವರೂ ಜೈನ ಸಾಹಿತ್ಯಕಾರರೇ ಆಗಿದ್ದಾರೆ. ಅನ್ಯ ಭಾಷಾ ಸಂಕರದ ವಿರುದ್ಧವಾದ ಪ್ರತಿಭಟನೆಯ ಈ ಭಾಷಾತ್ಮಕ ಪ್ರಕ್ರಿಯೆಯಲ್ಲಿ ಸೃಜಣ ಪ್ರಕ್ರಿಯೆಯಲ್ಲಿ ಜೈನ ಲೇಖಕರು ತಳೆದಿದ್ದ ಎಚ್ಚರ ಕುರುಹು ಗಮನಾರ್ಹ. ತಮ್ಮ ಸಾಂಸ್ಕೃತಿಕ ಆಂತರಿಕತೆಯನ್ನು ಬೆಳೆಸಿಕೊಳ್ಳಲು ಸಂಸ್ಕೃತವನ್ನು ಕನ್ನಡದೊಂದಿಗೆ ಬೆಸೆದರು. ಅದರೊಂದಿಗೇನ ಜೈನ ಲೇಖಕರು ತಮ್ಮ ಸಾಹಿತ್ಯಕ ಆಂತರಿಕತೆಯನ್ನು ದೃಢಗೊಳಿಸಲು ಅವರ ಧಾರ್ಮಿಕ ಪರಂಪರೆಯ ಪ್ರಾಕೃತ ಸಾಹಿತ್ಯದ ಅಂಶಗಳನ್ನು ಪೋಷಿಸಿ ಪೋಣಿಸಿದರು. ನಯಸೇನ, ಅಂಡಯ್ಯ ಮೊದಲಾದ ಜೈನ ಕವಿಗಳು ತೋರಿದ ಕನ್ನಡ ಭಾಷೆಯ ಪ್ರೇಮ ಮತ್ತು ಭಾಷಾ ಪ್ರಜ್ಞೆ ಸಕಾಲಿಕವಾಗಿತ್ತು. ಅನ್ಯ ಭಾಷಾ ಸಂಕರದ ವಿರುದ್ಧವಾದ ಪ್ರತಿಭಟನೆಯ ಈ ಭಾಷಾತ್ಮಕ ಪ್ರಕ್ರಿಯೆಯಲ್ಲಿ, ಸೃಜನ ಪ್ರಕ್ರಿಯೆಯಲ್ಲಿ ಜೈನ ಲೇಖಕರು ತಳೆದಿದ್ದ ಎಚ್ಚರದ ಕುರುಹು, ಏಕರೂಪೀ ಪ್ರತಿಪಾದನ ಕ್ರಮ (ವಸ್ತು) ಮತ್ತು ವಿಧಾನವನ್ನು (ರೂಪ) ಹೇರುತ್ತಿರುವ ವೈದಿಕ ಸಂಸ್ಕೃತಿಯ ವಿರುದ್ಧವಾಗಿ. ದೇಸೀಯವಾಗಿ ಕ್ರೀಯಾಶೀಲವಾಗಿದ್ದ ಉಪ ಸಂಸ್ಕೃತಿಗಳು ಧ್ವನಿಯೆತ್ತಿದುವು.

ಅಂದು ಜೈನ ಸಾಹಿತಿಗಳು ತಮ್ಮ ಸಮಕಾಲೀನ ಕನ್ನಡ ಲೇಖಕರಿಗೆ ಜನ ಸಮುದಾಯಕ್ಕೆ ತಮ್ಮ ಭಾಷೆಯ ತಾಜಾತನದ ಸೊಗಡನ್ನು ಕಾಪಾಡಿಕೊಳ್ಳಲು ಕೊಟ್ಟ ಕರೆ ಇಂದೂ ಪ್ರಸ್ತುತವಾಗಿದೆ. ಕನ್ನಡ ಪರವಾದ ಭಾಷಾ ಚಳವಳಿಯನ್ನೂ, ಕನ್ನಡಿಗರ ಪರವಾದ ಸಾಂಸ್ಕೃತಿಕ ಚಳವಳಿಯನ್ನೂ ಪ್ರಾರಂಭಿಸಿದವರು ಜೈನ ಬರೆಹಗಾರರು. ಕನ್ನಡವನ್ನು ಕೊಚ್ಚಿಹಾಕುವ ರೀತಿಯಲ್ಲಿ ಹೊರಟ ಸಂಸ್ಕೃತದ ದಬ್ಬಾಳಿಕೆಯನ್ನು ತಡೆಹಿಡಿದವರು ಅಂಡಯ್ಯ ನಯಸೇನರು. ಇದು ಕೇವಲ ಭಾಷಾ ಹೇರಿಕೆಯ ನಿರಾಕರಣೆ ಮಾತ್ರವಲ್ಲ ಜನವಿರೋಧಿ ಪುರಾತನ ನಿಲುವುಗಳ ಒತ್ತಡಕ್ಕೆ, ದೊಡ್ಡಸ್ತಿಕೆಗೆ ತೋರಿದ ತಿರಸ್ಕಾರವೂ ಹೌದು. ಅಂಡಯ್ಯ ನಯಸೇನರು ಅವರ ಕಾಲಕ್ಕಿಂತ ಎಂಟುನೂರು ವರ್ಷ ಮುಂದಿದ್ದರು. ರಳಕುಳ, ಶಿಥಿಲ ಸಮಾಸ ಮುಂತಾದ ಶಾಸ್ತ್ರಗಳ ಕೋಟಲೆ ಹಾಡುವ ಕಾವ್ಯ ಏತಕ್ಕೆ ಬೇಕು ಎಂಬುದು ಬಂಡಾಯಗಾರ ರತ್ನಾಕರವರ್ಣಿಯ ಧಾಟಿ. ಜಡ್ಡುಗಟ್ಟಿದ ಭಾಷಾ ಸಾಹಿತ್ಯ ಸಂಪ್ರದಾಯಗಳಿಗೆ ಈ ಬಗೆಯ ಪ್ರತಿಭಟನೆಯ ಹಿಂದಿರುವ ಜನಪರ ಧೋರಣೆಯ ಕಳಕಳಿಯು ಒಂದು ಜೀವಂತ ಮನೋಧರ್ಮದ ಕುರುಹು. ನಯಸೇನನು ಕನ್ನಡದ ಪರವಾಗಿ ವಕಾಲತ್ತು ಹಿಡಿದು ವಾದಿಸುವ ಹುರುಪಿನಲ್ಲಿ ತನ್ನ ಧರ್ಮದ ಭಾಷೆಯಾದ ಪ್ರಾಕೃತದ ಮೇಲೆ ಕೂಡ ದಾಳಿ ಮಾಡುತ್ತಾನೆಂಬುದು ಅವನ ಪ್ರಾಮಾಣಿಕ ಕಳಕಳಿಯನ್ನು ತೋರುತ್ತದೆ:

ಪೊಸಗನ್ನಡದಿಂ ವ್ಯಾವ
ರ್ಣಿಸುವೆಂ ಸತ್ಕೃತಿಯನೆಂದು ಕನ್ನಡಮಂ ಚಿಂ
ತಿಸಿ ಕೂಡಲಾರದಕ್ಕಟ
ಮಿಸುಕದ ಸಕ್ಕದಮನಿಕ್ಕುವವನುಂ ಕವಿಯೇ॥

ಸಕ್ಕದಮಂ ಪೇಳ್ವೊಡೆ ನೆರೆ
ಸಕ್ಕದಮಂ ಪೇಳ್ಗೆ ಸುದ್ದಗನ್ನಡದೊಳ್ತಂ
ದಿಕ್ಕುವುದೇ ಸಕ್ಕದಮಂ
ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ||

ಕನ್ನಡ, ಕನ್ನಡತನ, ಕನ್ನಡಿಗರು, ಕನ್ನಡನಾಡು ಎಂಬ ಸ್ವಾಭಿಮಾನ, ಸ್ವದೇಶಿ ಪ್ರಜ್ಞೆ ಹುರಿಗೊಳಿಸಿದವರು ಈ ತೆರನಾದ ಲೇಖಕರು. ಕನ್ನಡ ಭಾಷೆ - ಕನ್ನಡದೇಶ ಕುರಿತ ದೇಶಾಭಿಮಾನ-ಭಾಷಾಭಿಮಾನ ಜೈನರು ಕಲಿಸಿದ ಭಾವುಕತೆಯ ಪಾಠ. ಆರಂಕುಸಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ ಎಂಬ ಪಂಪನ 'ತಾಯ್ ನಾಡಿನ' ಹಂಬಲ, 'ಕನ್ನಡಮೆನಿಪ್ಪಾನಾಡು ಚೆಲ್ವಾಯ್ತು' ಎಂದು ಹಾಡಿದ ಆಂಡಯ್ಯನ ಕನ್ನಡತನ ಇಂದಿಗೂ ನೆನಯುವಂತಹದು. ಕವಿರಾಜಮಾರ್ಗಕಾರನಾದ ಶ್ರೀವಿಜಯನೆಂಬ ಜೈನಕವಿಯಂತೂ ಅಂದಿನ ಕನ್ನಡ ನಾಡು ಕಾವೇರಿಯಿಂದ ಗೋದಾವರಿಯವರೆಗೆ ಹಬ್ಬಿದುದನ್ನೂ ಅದರೊಳಗೆ ಪ್ರಸಿದ್ಧವಾಗಿದ್ದ ಕನ್ನಡಿಗರ ಮಹಾನಗರಗಳನ್ನೂ ತಿಳಿಸಿರುವುದರ ಜತೆಗೆ ಕನ್ನಡಿಗರ ವ್ಯಕ್ತಿತ್ವವನ್ನು ಮೂರ್ತಗೊಳಿಸಿದ್ದಾನೆ:

ಸುಭಟರ್ಕಳ್ ಕವಿಗಳ್ ಸು
ಪ್ರಭುಗಳ್ ಚೆಲ್ವರ್ಕಳಭಿಜನರ್ಕಳ್ ಗುಣಿಗಳ್
ಅಭಿಮಾನಗಳತ್ಯುಗ್ರರ್
ಗಭೀರ ಚಿತ್ತರ್ ವಿವೇಕಿಗಳ್ ನಾಡವರ್ಗ್ಗಳ್||

ಜೈನ ಪರಂಪರೆಯಲ್ಲಿ ಆಹಾರ ಅಭಯ ಔಷಧ ಮತ್ತು ಶಾಸ್ತ್ರದಾನಗಳಿಗೆ ವಿಶೇಷ ಪ್ರಾಮುಖ್ಯವಿದೆ. ಈ ಪರಂಪರೆಯಿಂದ ಕನ್ನಡ ಸಾಹಿತ್ಯಕ್ಕೆ ದಕ್ಕಿದ ಪ್ರಯೋಜನವೆಂದರೆ ಅನೇಕ ಕನ್ನಡ ಕಾವ್ಯಗಳನ್ನು ಇಂದಿನವರೆಗೆ ಕಾಪಾಡಲು ಸಾಧ್ಯವಾದದ್ದು. ದಾನಚಿಂತಾಮಣಿ ಅತ್ತಿಮಬ್ಬೆ ರನ್ನಕವಿಯಿಂದ ಅಜಿತ ಪುರಾಣವನ್ನು ಬರೆಸಿದಳು. ಅದರ ಜತೆಗೆ ಆಕೆ ಪೊನ್ನನ ಶಾಂತಿಪುರಾಣದ ಸಾವಿರ ಓಲೆ ಪ್ರತಿಗಳನ್ನು ಮಾಡಿಸಿ ಹಂಚಿದಳು. ಪ್ರಾದೇಶಿಕ ಹಾಗೂ ಸ್ಥಾನಿಕ ದ್ರಾವಿಡ ಭಾಷೆಗಳಿಗೆ ಜೀವ ತುಂಬಿದ ಜೈನ ಲೇಖಕರು ದೇಸಿಯ ಕಸುವನ್ನು ಕಳೆದುಕೊಳ್ಳಲಿಲ್ಲ. ಕನ್ನಡ ಭಾಷೆ-ಸಾಹಿತ್ಯದ ಸಂದರ್ಭದಲ್ಲಿ ಜೈನ ಲೇಖಕರ ಸೃಜನಶಕ್ತಿ ಅದೆಷ್ಟು ಬಗೆಯಲ್ಲಿ ಕ್ರಿಯಾಶೀಲವಾಗಿದೆ ಎಂಬುದನ್ನು ನೋಡಬಹುದು. ಇಡೀ ಕನ್ನಡ ವ್ಯಕ್ತಿತ್ವ ಕಣ್ಣು ಬಿಡಲು ಸಾಧ್ಯವಾದದ್ದು ಜೈನ ಪರಂಪರೆ ಒದಗಿಸಿದ ಜೀವಸ್ವರದಿಂದ. ಸಂಸ್ಕೃತ ಪ್ರಾಕೃತಗಳಿಗೆ ಸಮಾನ ಗದ್ದುಗೆಯಲ್ಲಿ ಅನಾಮತ್ತಾಗಿ ಕನ್ನಡವನ್ನು ಎತ್ತಿಕೂಡಿಸಿದರು. ಕನ್ನಡ ಭಾಷೆಗೆ ಪ್ರೌಢಿಮೆಯನ್ನೂ ಅಭಿಜಾತ ಪರಂಪರೆಯ ಶಕ್ತಿಯನ್ನೂ ನಿರ್ದಿಷ್ಟ ಲಯ ಸ್ವರೂಪವನ್ನೂ ತಂದುಕೊಟ್ಟು ಭಾರತೀಯ ಧಾರೆಯ ನೆಲೆಗೆ ಜಗ್ಗಿ ನಿಲ್ಲಿಸಿದ್ದು ಜೈನ ಸೃಜನ ಸಾಮರ್ಥ್ಯ.

ಸಂಸ್ಕೃತ ಭಾಷೆಯ ಹಿಡಿತದಲ್ಲಿ ಗಿರಕಿ ಹೊಡೆಯುತ್ತಿದ್ದ ಕನ್ನಡಕ್ಕೆ ಅದರ ಸ್ವಸಾಮರ್ಥ್ಯದಿಂದ ಎದ್ದು ನಿಲ್ಲಲು ಪುಷ್ಟಿ ನೀಡಿದರು. ಕನ್ನಡವು ಕಾವ್ಯ ಭಾಷೆಯಾಗಿರುವಂತೆ ಶಾಸ್ತ್ರ ಭಾಷೆಯೂ ಆಗಬೇಕೆಂಬುದು ಜೈನರ ಮುನ್ನೋಟದ ಅರಿವು. ಕನ್ನಡ ಭಾಷೆ ತನ್ನ ಕಸುವಿಗೆ ಸ್ವಂತಿಕೆಗೆ ಹರಿತ ತರಲು ಕನ್ನಡದಲ್ಲಿಯೇ ಯೋಚಿಸಬೇಕೆಂಬುದನ್ನು ಮನದಟ್ಟು ಮಾಡಿದರು. ಕನ್ನಡ ಗದ್ಯದ ನಡಿಗೆಯ

ವಿನ್ಯಾಸ-ನಿರಿಗೆಗಳನ್ನು ಕಾವ್ಯದ ಒಳಗೆ ತರುವ ಜೈನ ಲೇಖಕರ ಮೊದಲ ಪ್ರಯತ್ನಗಳಲ್ಲಿಯೇ ನಿರ್ದಿಷ್ಟ ಕನ್ನಡ ಭಾಷಾ ಪ್ರಭೇದಗಳನ್ನು (ಸಾಜದ ಕನ್ನಡ, ತಿರುಳ್ಗನ್ನಡ, ಪುಲಿಗೆರೆಯ ಕನ್ನಡ, ಒಂಕುಂದ ಕಿಸುವೊಳಲ್ ನಡುವಣ ನಾಡು-ಇತ್ಯಾದಿ) ಸಾಹಿತ್ಯ ಮಾಧ್ಯಮಕ್ಕೆ ಮಾಡಿಕೊಂಡ ಆಯ್ಕೆ, ಅವರಿಗಿದ್ದ ಶಿಷ್ಟ-ಪ್ರತಿಷ್ಠಿತಭಾಷೆ ಮತ್ತು ಉಪಭಾಷಾ ಪರಿಕಲ್ಪನೆ-ಇವನ್ನೂ ಕಾಣಬಹುದು. ಮಾರ್ಗ ಹಾಗೂ ದೇಸಿ-ಇವೆರಡರ ನಡುವಣ ವ್ಯತ್ಯಾಸಗಳನ್ನು ತೋರಿಸಿದ ರೀತಿ ಮತ್ತು ಪ್ರಜ್ಞಾಪೂರ್ವಕವಾಗಿ ಸಂಯೋಜನೆ ಮಾಡಿಕೊಂಡ ಬಗೆ ಕೂಡ ಕಂಡುಬರುತ್ತದೆ. ಅಂದರೆ ಜೈನ ಕವಿಗಳು ಕನ್ನಡಕ್ಕೊಂದು ಖಚಿತವಾದ ಪರಂಪರೆಯನ್ನು ಕಟ್ಟಿಕೊಡುವ ಪ್ರಕ್ರಿಯೆಯಲ್ಲಿ ಕೆಲವು ಪ್ರಯೋಗಗಳನ್ನು ನಡೆಸಿದರೆಂಬುದು ನಿಚ್ಚಳಗೊಳ್ಳುತ್ತದೆ. ಖಚಿತ ಕಲಾತ್ಮಕ ಅಭಿವ್ಯಕ್ತಿಯ ನಿಯೋಗಕ್ಕೆ ಕಾವ್ಯ ಬಂಧದಲ್ಲಿ ಕನ್ನಡವನ್ನು ಅಣಿಗೊಳಿಸಿದ ರೀತಿ, ಜೈನಕವಿಗಳ ಪ್ರಯೋಗಶೀಲತೆಯ ಜತೆ ಜತೆಯಲ್ಲೇ, ಕನ್ನಡ ಕಾವ್ಯ ಭಾಷೆಯ ಸೃಜನಶೀಲ ವಿಕಾಸವನ್ನೂ ಶೋಧಿಸಲು ದಾರಿ ತೆರೆಯುತ್ತದೆ. ಇದರ ಒಟ್ಟು ಪ್ರಭಾವದ ಫಲವಾಗಿ ಎಲ್ಲ ಜೈನ ಲೇಖಕರು ಇಡಿಯಾಗಿ ಕನ್ನಡ ಸಂಸ್ಕೃತಿಗೆ ಮುಖಮಾಡಿಕೊಂಡು ಬರೆಯತೊಡಗಿದರು.

ಪ್ರತಿಯೊಂದು ಭಾಷಾ ಸಮಾಜಕ್ಕೂ ಒಂದೊಂದು ಸಂಸ್ಕೃತಿ ಇರುವಂತೆ ಕನ್ನಡಿಗರ ಸಂಸ್ಕೃತಿ ಎಂಬುದೊಂದು ಪ್ರಕಟವಾಗಿದೆಯೆಂದು ತಿಳಿಸಿದ್ದೇನೆ: ಕನ್ನಡದ ಈ ವೈಶಿಷ್ಟ್ಯಕ್ಕೆ ಜೈನ ಪರಂಪರೆಯ ದೇಣಿಗೆ ದೊಡ್ಡದು. ಭಾಷೆ, ಶೈಲಿ, ರೂಪ, ಮಾರ್ಗ, ಧರ್ಮ-ಹೀಗೆ ವಿವಿಧ ಸ್ತರಗಳಲ್ಲಿ ಮಾರ್ಗನಿಷ್ಠ ಕನ್ನಡ ಸಾಹಿತ್ಯವನ್ನು ದೇಸಿಗೆ ಹೊರಳಿಸಿದ ಪ್ರಯತ್ನದಲ್ಲಿ ಶ್ರಮಣ ಮತ್ತು ಶರಣ ಪರಂಪರೆಗಳು ಪಾತ್ರ ವಹಿಸಿದವು. ಮಾರ್ಗ ನಿಷ್ಠತೆಯು ಸತ್ವ ಹೀನವಾಗುತ್ತಿರುವಾಗ, ದೇಸಿನಿಷ್ಠತೆ ಚೈತನ್ಯ ಶೀಲವಾಗುತ್ತಿರುವಾಗ ಈ ಸಂಕ್ರಮಣ ಘಟ್ಟದಲ್ಲಿ ಇದ್ದ ಕೆಲವೇ ಅಭಿಜಾತ ಲೇಖಕರು ಇಂತಹ ಸ್ಥಿತ್ಯಂತರಗಳಿಗೆ ಹೇಗೆ ಸ್ಪಂದಿಸಿದರೆಂಬ ವಾಗ್ವಾದಗಳು ಇನ್ನೂ ಆಗಬೇಕಾದ್ದಿದೆ. ಕಾವ್ಯ, ಕಾವ್ಯ ಮೀಮಾಂಸೆ, ವ್ಯಾಕರಣ, ನಿಘಂಟು ಶಾಸ್ತ್ರಕೃತಿಗಳನ್ನು ಕನ್ನಡದಲ್ಲಿ ರಚಿಸುವುದರ ಮೂಲಕ ಸಾಂಸ್ಕೃತಿಕ ವಾಗ್ವಾದವನ್ನು ರೂಪಿಸಿಟ್ಟಿದ್ದಾರೆ.

ಒಂದು ಸಂಸ್ಕೃತಿಯ ಪ್ರಭಾವ ಇನ್ನೊಂದರ ಮೇಲೆ ಆಗುವಾಗ ಸಾಮಾಜಿಕ ಮತ್ತು ರಾಜಕೀಯ ಸಂಬಂಧಗಳು ನಿರ್ಮಾಣವಾಗುತ್ತವೆ. ಇದನ್ನು ಕರ್ನಾಟಕ ಮತ್ತು ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಚೆನ್ನಾಗಿ ಕಾಣಬಹುದು. ರಾಜಕೀಯವಾಗಿ ಕನ್ನಡ ಪರಂಪರೆಗೇನೆ ಜೈನ ಹಿನ್ನೆಲೆ ಚೈತನ್ಯ ನೀಡಿದೆ. ಕ್ರಿ. ಪೂ. ಮೂರನೆಯ ಶತಮಾನದಲ್ಲಿ ಉತ್ತರದಿಂದ, ಉಜ್ಜೈನಿ ಮತ್ತು ಮಗಧರಾಜ್ಯದಿಂದ ಭದ್ರಬಾಹುಭಟಾರರ ನೇತೃತ್ವದಲ್ಲಿ ಸಹಸ್ರಾರು ಜೈನರ ಮುನಿ ಸಂಘವು ಕರ್ನಾಟಕಕ್ಕೆ ಆಗಮಿಸಿ ಈಗಿನ ಶ್ರವಣಬೆಳುಗೊಳ, ಕೊಪ್ಪಳ ಮತ್ತು ಕಿತ್ತೂರು (ಪುನ್ನಾಡು)ಗಳಲ್ಲಿ ನೆಲಸಿತು ಎಂಬುದನ್ನು ಪ್ರತಿಪಾದಿಸಲಾಗಿದೆ. ಅಷ್ಟೊಂದು ಬೃಹತ್ ಸಂಖ್ಯೆಯಲ್ಲಿ ಜೈನ ಮುನಿಸಂಘ ಇಲ್ಲಿಗೆ ಬರಬೇಕಾದರೆ ಅದಕ್ಕೂ ಪೂರ್ವದಲ್ಲಿಯೇ ಕರ್ನಾಟಕದಲ್ಲಿ ಜೈನ ಸಮಾಜವೊಂದು ಪ್ರಾಮುಖ್ಯ ಪಡೆದು ಜೀವಂತವಾಗಿದ್ದಿರಬೇಕಾಗುತ್ತದೆ; ಜೈನ ಪರಂಪರೆ ಕರ್ನಾಟಕದಲ್ಲಿ ಕ್ರಿ.ಪೂ. ಆರನೆಯ ಶತಮಾನದಿಂದಲೂ ಅಸ್ತಿತ್ವದಲ್ಲಿ ಇದ್ದಿರಬೇಕು.

ಹೀಗೆ ಮೌರ್ಯರ ಕಾಲಕ್ಕಾಗಲೇ ಕುಡಿಯಿಟ್ಟಿದ್ದ ಜೈನ ಧರ್ಮ, ಕದಂಬರ ಕಾಲದ ವೇಳೆಗೆ ಉಚ್ಛ್ರಾಯಗೊಂಡಿತ್ತು. ಕೆಲವು ಕದಂಬದೊರೆಗಳು ಜೈನರೇ ಆಗಿದ್ದರು. ಜೈನ ಪರಂಪರೆ ಕರ್ನಾಟಕ ರಾಜಕೀಯ ಶಕ್ತಿ ಸಂವರ್ಧನೆಗೆ ಕೊಟ್ಟ ಕೊಡುಗೆಯೆಂದರೆ ಕದಂಬರು, ಗಂಗರು, ರಾಷ್ಟ್ರಕೂಟರು, ಹೊಯ್ಸಳರು ಪಶ್ಚಿಮ ಚಾಳುಕ್ಯರು, ಸಾಂತರರು, ಚೆಂಗಾಳ್ವರು, ಕೊಂಗಾಳ್ವರು, ಚೌಟರು, ಅಜಿಲರು, ಬಂಗರು, ತೇರದಾಳ ಶಿಲಾಹಾರರು, ಸೇವುಣರು, ಮಣಲೆಯರು, ಹಾಡುವಳ್ಳಿ ಬೀಳಗಿ ಕ್ಷೇಮಪುರ ಕಳಸ-ಕಾರ್ಕಳ ಮೊದಲಾದ ಸ್ಥಳ ಮೂಲದವರು - ಹೀಗೆ ಚಕ್ರಾಧಿಪತ್ಯಗಳಿಂದ ಹಿಡಿದು ಸಾಮಂತರವರೆಗೆ ಅನೇಕ ದೊಡ್ಡ-ಸಣ್ಣ ಜೈನ ರಾಜಮನೆತನಗಳು ಕರ್ನಾಟಕದ ಚರಿತ್ರೆಯಲ್ಲಿ ಉಲ್ಲೇಖನೀಯ ಯೋಗದಾನ ನೀಡಿದ್ದಾರೆ. ಕರ್ನಾಟಕ ವಾಸ್ತು ಮತ್ತು ಶಿಲ್ಪಕ್ಕೆ ಜೈನ ಪರಂಪರೆಯ ಸಹಯೋಗ ಸ್ಮರಣೀಯವಾಗಿದೆ. ಪಟ್ಟಜಿನಾಲಯಗಳು, ಅಣ್ಣಿಗೆರೆ, ನಿಟ್ಟೂರು, ಪುಲಿಗೆರೆ, ಮೂಡಬಿದ್ರಿ, ಕಾರ್ಕಳ, ಶ್ರವಣಬೆಳ್ಗೊಳ ಹಿರಿಯಂಗಡಿ, ಹೊಂಬುಜ ಮುಂತಾದ ಸ್ಥಳಗಳ ಜಿನಾಲಯಗಳು ವಾಸ್ತುವಿನ ದೃಷ್ಟಿಯಿಂದ ಗಮನಸೆಳೆಯುತ್ತವೆ. ನಿರಾಭರಣ ನಗ್ನ ಸೌಂದರ್ಯ ಹೊಮ್ಮುವ ಪದ್ಮಾಸನ ಧ್ಯಾನಸ್ಥ ತೀರ್ಥಂಕರ ಮೂರ್ತಿಗಳು, ಗೊಮ್ಮಟ ಮೂರ್ತಿಯ ಪರಂಪರೆ, ಅತಿಸುಂದರವೆನಿಸಿರುವ ಯಕ್ಷ ಯಕ್ಷಿಯರ ಮೂರ್ತಿಗಳು-ಇವು ಶಿಲ್ಪದ ದೃಷ್ಟಿಯಿಂದ ಪ್ರತ್ಯೇಕವಾಗಿ ಹೆಸರಿಸಬೇಕಾದ ಪ್ರಾಮುಖ್ಯ ಪಡೆದಿವೆ.

ಭಾರತೀಯ ತತ್ವಶಾಸ್ತ್ರ, ಭಾರತೀಯ ಇತಿಹಾಸ, ಭಾರತೀಯ ಸಾಹಿತ್ಯ ಎಂಬಂತೆ ಭಾರತೀಯ ಸಂಸ್ಕೃತಿ ಎಂಬುದು ಭಾರತೀಯ ಮನಸ್ಸು ಮತ್ತು ಸಮಷ್ಟಿ ಪ್ರಜ್ಞೆಯ ವಿಕಾಸದ ಇತಿಹಾಸ. ಹಲವು ಜನಾಂಗಗಳು ವರ್ಣಗಳು, ಭಾಷಾ-ಸಾಹಿತ್ಯ ಕರಗಿ ವಿಲೀನವಾಗಿರುವ ದೊಡ್ಡ-ಅಖಂಡ ದೀರ್ಘ ಚಿಂತನಧಾರೆಯಾಗಿರುವುದು ಭಾರತೀಯ ಸಂಸ್ಕೃತಿ. ಭಾರತೀಯ ಸಂಸ್ಕೃತಿಯು ಮೂಢನಂಬಿಕೆಗಳಿಂದ ಕೂಡಿದ ದುರಭಿಮಾನದ ಹುಚ್ಚು ಉದ್ವೇಗವೆಂಬ ಆಕ್ಷೇಪ ಕೂಡ ಇದೆ; ಅದರಲ್ಲಿ ಕಿಂಚಿದಂಶ ಸತ್ಯವೆನಿಸುವಂಥ ಘಟನೆಗಳೂ ಆಗಿವೆ. ಆದರೆ ಈ ಬಗೆಯ ಆಕ್ಷೇಪಗಳನ್ನು ಮುಂದಿಟ್ಟು ಭಾರತೀಯ ಸಂಸ್ಕೃತಿಯ ಸೃಜನಶೀಲತೆ ಮತ್ತು ಸೂಕ್ಷ್ಮತೆಗಳನ್ನು ಅಲ್ಲಗಳೆಯುವುದು ಸರಿಯಲ್ಲ.

ಆರ್ಯ-ದ್ರಾವಿಡರ ಸಂಕರ, ಸಂಸ್ಕೃತ-ಪ್ರಾಕೃತ-ದ್ರಾವಿಡ ಭಾಷೆಗಳ ಚಿಂತನೆಗಳ ಸಂಯೋಜನೆ-ಇದೆಲ್ಲವೂ ಭಾರತೀಯ ಸಂಸ್ಕೃತಿಯಲ್ಲಿ ಸಂಕರಗೊಂಡಿವೆ. ಸಂಸ್ಕೃತ ಒಂದರಿಂದಲೇ ಸಂಸ್ಕೃತಿಯ ಅಧ್ಯಯನಕ್ಕೆ ಸಾಮಗ್ರಿಯನ್ನು ಹೆಕ್ಕುವುದು ಏಕಪಕ್ಷೀಯ ಪ್ರಯತ್ನ. ಅದರೊಂದಿಗೆ ಸಂಸ್ಕೃತಿಯ ಬೇರುಗಳು ಇರುವ ಪ್ರಾಕೃತ ಮತ್ತು ಕನ್ನಡಾದಿ ದ್ರಾವಿಡ ಪರಂಪರೆಯ ಸಾಮಗ್ರಿಯನ್ನೂ ಸಂಚಯಿಸಿಕೊಳ್ಳಬೇಕು. ಭಾರತೀಯ ಸಂಸ್ಕೃತಿಯ ಮತ್ತು ರಾಷ್ಟ್ರೀಯ ಸಾಹಿತ್ಯದ ಸಂದರ್ಭದಲ್ಲಿಯೇ ಪ್ರಾದೇಶಿಕ ಸಾಹಿತ್ಯವಾದ ಕನ್ನಡ ಸಾಹಿತ್ಯದ ವಿಶಿಷ್ಟತೆಯನ್ನೂ ಕಾಣಬಹುದು. ಹೀಗೆ ಭಾರತೀಯ ಸಂಸ್ಕೃತಿಯನ್ನು ಕೇವಲ ಸಂಸ್ಕೃತ ಕಡೆಯಿಂದ ಸಂಸ್ಕೃತದ ಕೇಂದ್ರಿತವಾಗಿ ನೋಡುವ ರೂಢಿಯ ಪ್ರವೃತ್ತಿಯಿಂದ ಬಿಡಿಸಿ ಇನ್ನೊಂದು ಮಾರ್ಗದ ಪರಿಚಯ ಮಾಡಿದವರೂ ಜೈನ ಲೇಖಕರೆ.

ಕನ್ನಡ ಸಾಹಿತ್ಯಕ್ಕೆ ಸಂಸ್ಕೃತ ಪ್ರಾಕೃತಾದಿ ಹೊರ ಭಾಷಾ ಸಂಸ್ಕೃತಿಗಳ ಪ್ರಭಾವದೊಂದಿಗೆ ಆಂತರಿಕವಾಗಿಯೇ ಜೈನ ಪರಂಪರೆಯೊಂದರ ದಟ್ಟವಾದ ಪ್ರಭಾವ ಶತಮಾನಗಳವರೆಗೆ ಕೆಲಸ

ಮಾಡಿದೆ. ಆದ್ದರಿಂದ ನಮ್ಮ ಅಧ್ಯಯನದ ನೆಲೆಗಳಿಗೆ ಎರಡೂ ಪಾತಳಿಗಳ ಸಂಬಂಧವನ್ನು ಗುರುತಿಸುವ ಹೊಣೆಗಾರಿಕೆಯಿದೆ. ಕರ್ನಾಟಕವೆಂಬ ಭೌಗೋಳಿಕ ಪ್ರಾದೇಶಿಕ ಸಾಹಿತ್ಯದ ಚೌಕಟ್ಟಿನೊಳಗೆ ಕೂಡ ಭಾರತೀಯ ರಾಷ್ಟ್ರೀಯ ಸಂಬಂಧ ಇರುವುದರ ಸ್ವರೂಪ ಕುರಿತ ತೌಲನಿಕ ಅಧ್ಯಯನ ಹೆಚ್ಚು ಮೌಲಿಕ ಅರ್ಥಪೂರ್ಣ ಎನಿಸುತ್ತದೆ. ಭಾರತೀಯ ಸಂಸ್ಕೃತಿಯಲ್ಲಿರುವ ಆಂತರಿಕ ವಿರೋಧಗಳನ್ನು ಅಮಾನುಷೀಕರಣದ ಪ್ರವೃತ್ತಿಗಳನ್ನು ಆಳವಾಗಿ ಅಭಿವ್ಯಕ್ತಿಸಿದರು. ಇದರಿಂದಾಗಿ ಭಾರತೀಯ ಸಂಸ್ಕೃತಿಯನ್ನು ವಾಸ್ತವಿಕ ದರ್ಶನದ ನೆಲೆಗ ಜಗ್ಗಿ ನಿಲ್ಲಿಸುವುದು ಸಾಧ್ಯವಾಯಿತು. ಈ ಜಗ್ಗಾಟದಲ್ಲಿ ಎರಡೂ ಸಂಸ್ಕೃತಿಗಳ ನಡುವೆ ಕೊಡುವ-ತೆಗೆದುಕೊಳ್ಳುವ ವ್ಯವಹಾರವೂ ನಡೆಯಿತು. ಈ ಬಗೆಯ ವ್ಯಾಪ್ತವಾದ ಹಿನ್ನಲೆಯಲ್ಲಿ ಕನ್ನಡ ಸಾಹಿತ್ಯದ ಅನನ್ಯತೆಯನ್ನು ಗುರುತಿರುವುದು ಪ್ರಸ್ತುತ ಪ್ರಬಂಧದ ಕೇಂದ್ರ ಪ್ರಜ್ಞೆ. ಭಾರತೀಯ ಸಂಸ್ಕೃತಿಗೂ, ಜೈನ ಪರಂಪರೆಗೂ, ಕನ್ನಡ ಸಾಹಿತ್ಯ ಹೊಂದಿರುವ ದ್ವಿಮುಖಿ ಸಂಬಂಧದಲ್ಲಿ ಮೂಲಗಳಿಗೆ ಕನ್ನಡ ಎಷ್ಟು ಋಣಿ ಎಂಬುದನ್ನು ಗುರುತಿಸುವದಷ್ಟೇ ಆಗದೆ, ತನ್ನ ಮೇಲಾಗಿರುವ ಈ ಪ್ರಭಾವವನ್ನು ಜೀರ್ಣಿಸಿಕೊಂಡು ಬೆಳೆದ ಕನ್ನಡ ಸಾಹಿತ್ಯ, ಈ ಸ್ವೀಕೃತಿಗೆ ಪ್ರತಿಯಾಗಿ ತಾನು ಕೊಟ್ಟ ಸ್ವೋಪಜ್ಞ ಕೊಡುಗೆಯ ಪ್ರಭಾವವನ್ನು ಗ್ರಹಿಸುವದೂ ಸಹ ಈ ಪ್ರಬಂಧದ ಮುಖ್ಯ ಆಶಯ. ಋಣದ ಜತೆ ಜತೆಗೇನೆ ಹೀಗೆ ಅದರ ವೃದ್ಧಿಯನ್ನು ಗುರುತಿಸುವುದು ಸಾಧ್ಯವಾಗುವುದರಿಂದ ಕನ್ನಡ ಸಾಹಿತ್ಯದ ನೆಲೆ ಬೆಲೆಗಳ ಸ್ವರೂಪ ಕುರಿತ ವಿವೇಚನೆಗೆ ಇನ್ನಷ್ಟು ಮೊನಚು, ಅರ್ಥವಂತಿಕೆ, ಪ್ರಸ್ತುತತೆ ಬರುತ್ತದೆ. ಏಕೆಂದರೆ ಕನ್ನಡ ಸಾಹಿತ್ಯ ತಾನೊಂದು ಪ್ರತ್ಯೇಕ ನಡುಗಡ್ಡೆಯಾಗಿ ನಿಲ್ಲದೆ ಸಮಗ್ರ ಭಾರತದ ಸಮಷ್ಟಿ ಪ್ರಜ್ಞೆಗೆ ಸ್ಪಂದಿಸುತ್ತ Pan-Indian ಸ್ವರೂಪದಲ್ಲಿ ಸೇರಿಕೊಂಡೇ ಬೆಳೆದಿದೆ.

ಭಾರತೀಯ ಸಂಸ್ಕೃತಿಯ ಸಂರಚನೆಗಳನ್ನು ವಿಶ್ಲೇಷಿಸಲೂ (Structural analysis) ಪೃಥಕ್ಕರಿಸಲೂ ಕಷ್ಟವಾಗುವಂತೆ ಅದರಲ್ಲಿ ಅಂಟಿಕೊಂಡಿರುವ ಬೆಸುಗೆಗಳನ್ನು ಬಿಡಿಸಿನೋಡಬೇಕೆಂದು ಈ ಸಂಪ್ರಬಂಧದ ಆರಂಭದಲ್ಲಿ ನಾನು ಹೇಳಿದ್ದು ಯಾಕೆ ಎಂಬುದು ಈಗ ಸ್ಪಷ್ಟವಾಗಿರಬೇಕು. ಸಂಸ್ಕೃತಿಯೂ ಒಂದು ಬದಲಾಗುವ ಪ್ರಕ್ರಿಯೆ. ಭಾರತೀಯ ಸಂಸ್ಕೃತಿಗೆ ಪರಾಕು ಹೇಳುವ ಭರದಲ್ಲಿ, ಆ ಮುಖ್ಯ ಪ್ರವಾಹದೊಳಗೆ ಕೂಡಲ ಸಂಗಮವಾಗಿರುವ ಸಮ ಹಾಗೂ ಉಪಸಂಸ್ಕೃತಿಗೆ ಸಿಗಬೇಕಾದ ಸಮಾನ ನ್ಯಾಯದಿಂದ ವಂಚಿತವಾಗದಂತೆ ನೋಡಿಕೊಳ್ಳಬೇಕಾದ ಹೊಣೆ ಸಂಸ್ಕೃತಿಯ ವ್ಯಾಖ್ಯಾನಕಾರರ ಮೇಲಿದೆ. ಭಾರತೀಯ ಸಂಸ್ಕೃತಿ ಎನ್ನುವುದು ಒಂದು ಧರ್ಮದ, ವರ್ಣದ, ವರ್ಗದ, ಜಾತಿಯ ಮತದ ಸಂಸ್ಕೃತಿಯಲ್ಲ. ಪ್ರತಿಯೊಂದು ಪರ್ಯಾಯ ಸಂಸ್ಕೃತಿಯೂ ತನ್ನ ಸತ್ವದ ಅಂಶಗಳನ್ನು, ಧಾತು-ವೀರ್ಯವನ್ನು ಮುಖ್ಯಧಾರೆಗೆ ಸುರಿದು ಒಂದು ಸಮ್ಮಿಶ್ರ ಭಾರತೀಯ ಸಂಸ್ಕೃತಿ ಏರ್ಪಟ್ಟಿದೆ. ಬಿಳಿಯ ಬಣ್ಣದೊಳಗೆ ಬೆರೆತ ಏಳು ಬಣ್ಣಗಳಂತೆ, ಭಾರತೀಯ ಸಂಸ್ಕೃತಿಯೊಳಗೆ ವೈದಿಕ-ಅವೈದಿಕವಾದ ನಾನಾ ಸಮಸಂಸ್ಕೃತಿಗಳು ಮೇಳೈಸಿವೆ. ಭಾರತೀಯ ಸಂಸ್ಕೃತಿಯ ನೊಗಕ್ಕೆ ಹಲವು ಹೆಗಲುಗಳು ತಮ್ಮನ್ನು ಒಡ್ಡಿಕೊಂಡು ಭಾರತೀಯ ತೇರನ್ನು ಮುಂದೆ ಎಳೆದಿವೆ. ಈ ಒಳ ಎಳೆಗಳಲ್ಲಿ ಯಾವುದು ಮೊದಲು, ಮೇಲು, ಶ್ರೇಷ್ಠ ಎಂಬುದಲ್ಲ ಪ್ರಶ್ನೆ : ಯಾವ ಎಳೆಗಳು ಈ ಹುರಿಯಲ್ಲಿ ಸೇರಿಕೊಂಡಿವೆ ಎಂಬುದನ್ನು ತನಿಯಾಗಿ ನೋಡುವುದು ಪ್ರಸ್ತುತ ಸಂಪ್ರಬಂಧದ ಆಶಯ. ಭಾರತೀಯ ಸಂಸ್ಕೃತಿ ಎಂಬುದು ಒಂದು ಸಮ್ಮಿಶ್ರ ಸಂಸ್ಕೃತಿಯಾಗಿರುವುದರಿಂದಲೇ ಅದಕ್ಕೆ ಈ ದೊಡ್ಡ ದೇಶದಲ್ಲಿ ಸಾರ್ವತ್ರಿಕತೆ ಸಾಧ್ಯವಾಗಿರುವುದು ಮತ್ತು ಆ ಕಾರಣದಿಂದಲೇ ಈ ದೇಶದಲ್ಲಿ ಬಹುಮಟ್ಟಿಗೆ ಸಾಮರಸ್ಯ ಕಂಡುಬರುತ್ತಿರುವುದು.

ಕನ್ನಡ ಸಾಹಿತ್ಯದ ಬಹುಮುಖವಾದ ಉತ್ಕರ್ಷ ವಿಕಾಸಕ್ಕೆ ಜೈನ, ವೈದಿಕ, ಶೈವ - ಈ ಮೂರೂ ಪರಂಪರೆಗಳ ತ್ರಿವೇಣಿ ಸಂಗಮದ ಕೊಡುಗೆಯಿದೆ. ಹೊಸಗನ್ನಡ ಸಾಹಿತ್ಯದಲ್ಲಂತೂ ಈ ಮುಪ್ಪುರಿಯ ಜತೆಗೆ ಇಸ್ಲಾಂ ಮತ್ತು ಕ್ರೈಸ್ತ ಪರಂಪರೆಯ ಸಹಯೋಗವೂ ಲಭ್ಯವಾಗಿದೆ. ಇದರಿಂದ ಕನ್ನಡ ಸಾಹಿತ್ಯಕ್ಕೆ ವಿಶೇಷ ಲಾಭವಾಗಿದೆ.

ಹಿಂದೂ ಧರ್ಮ ಬೌದ್ಧ ಧರ್ಮಗಳಂತೆ ಜೈನ ಧರ್ಮವೂ ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ಮುಖ್ಯಧಾರೆಯಲ್ಲಿ ಸೇರಿ ಹೋಗಿದೆ. ಭರತಖಂಡದ ಆರ್ಥಿಕ, ಧಾರ್ಮಿಕ, ಮತ್ತಿತರ ಪೂರಕ ಕ್ಷೇತ್ರಗಳಲ್ಲಿ ಜೈನರು ಇಂದಿಗೂ ಪ್ರಮುಖ ಕಾಣಿಕೆಯನ್ನು ನೀಡುತ್ತಿದ್ದಾರೆ. ಅಹಿಂಸೆ ಮತ್ತು ಬೌದ್ಧಿಕ ಸಾಪೇಕ್ಷತ್ವಗಳ ವಿಚಾರದಲ್ಲಿ ಉಳಿದ ಧರ್ಮಗಳಿಗಿಂತ ಭಿನ್ನತೆ ಹೊಂದಿರುವ ಜಿನಧರ್ಮ ಈಗ ನಡೆಯುತ್ತಿರುವ ಇಪ್ಪತ್ತೊಂದನೆಯ ಶತಮಾನದಲ್ಲಿ ಮಾನವ ಜೀವನಕ್ಕೂ ಚಿಂತನಧಾರೆಗೂ ಯಾವ ಸ್ಪಷ್ಟವಾದ ಪ್ರಸ್ತುತತೆಯನ್ನು ಪಡೆದಿದೆ ಎಂಬುದನ್ನು ಅರಿಯಬೇಕು.

ವೈದಿಕ-ಬೌದ್ಧ ಮತ ಧರ್ಮಗಳೊಂದಿಗೆ ಜೈನ ಪರಂಪರೆ ಸಾಕಷ್ಟು ಪ್ರಮಾಣದಲ್ಲಿ ಬೆಸೆದುಕೊಂಡರೂ, ತನ್ನತನವನ್ನು ಉಳಿಸಿಕೊಂಡು ಬಂದಿರುವುದು ಅದರ ಧಾರ್ಮಿಕ ಮುಖ (religions aspect) ಆಗಿರುವಂತೆ ಕನ್ನಡ ಸಾಹಿತ್ಯಕ್ಕೂ ಗಾಢವಾದ ಪ್ರಭಾವ ಬೀರಿದೆ. ಸಂಸ್ಕೃತದೊಂದಿಗೆ ಪ್ರಾಕೃತವೂ (ಅಪಭ್ರಂಶ-ಶೌರಸೇನಿ, ಅರ್ಧಮಾಗಧೀ, ಮಹಾರಾಷ್ಟ್ರೀ, ಪಾಳಿ, ಪೈಶಾಚೀ) ಪ್ರವೇಶಿಸಿ, ಕನ್ನಡ ಭಾಷೆಗೆ ಬಿಗಿ-ಬನಿ, ಬಾಗು-ಬಳುಕು ಸಾಧ್ಯವಾಯಿತು. ಅದರ ಅಭಿವ್ಯಕ್ತಿಯ ಸಾಧ್ಯತೆಗಳು ಹಿಗ್ಗಿದುವು. ಇದು ಜೈನ ಲೇಖಕರಿಂದ ಕನ್ನಡ ಹೊಸದಾಗಿ ಪಡೆದ ಭಾಷಿಕ ಮುಖ (Linguistic aspect). ಆರಾಧನಾ ಟೀಕಾ, ಆದಿಪುರಾಣ, ಶಾಂತಿಪುರಾಣ, ಅಜಿತ ಪುರಾಣ, ಯಶೋಧರ ಚರಿತೆ, ಧರ್ಮಾಮೃತ-ಮುಂತಾದ ನೂರಾರು ಹೊಸ ಬಗೆಯ ಕಾವ್ಯಗಳು, ಟೀಕಾಗ್ರಂಥಗಳು, ಹೊಸ ವಸ್ತು, ಛಂದಸ್ಸು-ಇನಿಷ್ಟೂ ಕನ್ನಡ ಭಂಡಾರಕ್ಕೆ ಸೇರಿದುವು. ಇದು ಜೈನ ಲೇಖಕರು ಕನ್ನಡಕ್ಕೆ ಜೋಡಿಸಿದ ಸಾಹಿತ್ಯ ಮುಖ. ಜೈನ ಸಾಹಿತಿಗಳ ಸೃಜನಶಕ್ತಿಯಿಂದ ಕನ್ನಡದ ಲಯಕ್ಕೆ ಹೊಸನಡಿಗೆ, ಕನ್ನಡ ಕಾವ್ಯಕ್ಕೆ ಹೊಸನಿರಿಗೆ ದೊರೆಯಿತು. ಫಲವಾಗಿ ವಿನೂತನ ವಿನ್ಯಾಸದ ಕಸುವು ಕನ್ನಡಕ್ಕೆ ದಕ್ಕಿತು. ಹೀಗೆ ಜೈನ ಪರಂಪರೆ ಕನ್ನಡ ಸಾಹಿತ್ಯಕ್ಕೆ ಹಲವು ವಿಶಿಷ್ಟ ಮಾದರಿಗಳನ್ನು (Models) ತೋರಿಸಿಕೊಟ್ಟಿತು ಮತ್ತು ಕನ್ನಡದ ಅಂತಃಸತ್ವವನ್ನು ಕದಲಿಸಲಾಗದಂತೆ ಸ್ಥಾಪಿಸಿತು.

ಭಾರತದ ಪ್ರಾಚೀನ ಧರ್ಮಗಳಲ್ಲಿ ಒಂದಾದ ಜೈನ ಪರಂಪರೆ ಕೆಲವು ಮುಖ್ಯ ನೆಲೆಗಳಲ್ಲಿ ಕರ್ನಾಟಕ ಪರಂಪರೆಯನ್ನು, ಭಾರತೀಯ ಸಾಂಸ್ಕೃತಿಕ ಪರಂಪರೆಯ ಧಾರೆಗೆ ವಿರೋಧವಾಗದ ಹಾಗೆ, ಕೈ ಹಿಡಿದು ನಡೆಸಿತು. ಭಾರತೀಯ ಮತ್ತು ಕರ್ನಾಟಕ ಸಂಸ್ಕೃತಿಯ ತಾತ್ವಿಕ ನೆಲೆಗಳನ್ನು ಗ್ರಹಿಸಲೂ, ಕನ್ನಡ ಸಾಹಿತ್ಯದ ಚಲನ ಶೀಲತೆಯನ್ನು ಗುರುತಿಸಲೂ ಜೈನ ಪರಂಪರೆಯ ಅಧ್ಯಯನ ಉಪಯುಕ್ತ ಮಾಹಿತಿಗಳನ್ನು ಒದಗಿಸಿಕೊಡುತ್ತದೆ.

೮

ರವಿದೇವಿಯಕ್ಕಳ ಶಾಸ್ತ್ರದಾನದ ಅನನ್ಯತೆ

ಶಿವಮೊಗ್ಗ ಜಿಲ್ಲೆ ಜೈನಧರ್ಮ ಪ್ರಭಾವನೆಗೆ ನೀಡಿದ ಕೊಡುಗೆ ಅಪಾರ ಮತ್ತು ಅಪೂರ್ವ. ಗಂಗರು ಕುವಲಾಲಪುರ (ಕೋಲಾರ) ವನ್ನೂ ನಂದಗಿರಿಯನ್ನೂ (ನಂದಿಬೆಟ್ಟ) ತಮ್ಮ ಆರಂಭದ ಆಡಳಿತ ಕೇಂದ್ರವಾಗಿ ಮಾಡಿಕೊಂಡರು. ಅನಂತರ ಅದೇ ಅವಧಿಯಲ್ಲಿ ಕ್ರಿ.ಶ. ನಾಲ್ಕನೆಯ ಶತಮಾನದಲ್ಲಿಯೇ ಸಿಂಹನಂದಿ ಆಚಾರ್ಯರ ಉಪದೇಶದಂತೆ ಗಂಗರ ಮಾಧವ ಮತ್ತು ದಡಿಗ ಸಹೋದರರು ಶಿವಮೊಗ್ಗ ಜಿಲ್ಲೆಯಲ್ಲಿಯೂ ಜಿನಧರ್ಮ ಬಿತ್ತಿದರು. ಶಿವಮೊಗ್ಗ ಹತ್ತಿರದ ಈಗಿನ ಕಲ್ಲೂರು ಗುಡ್ಡದ ನೆರೆಹೊರೆಯ ಪ್ರದೇಶವನ್ನು ಒಳಗೊಂಡಂತೆ ತುಂಗಾನದಿಯ ಎಡ-ಬಲ ದಂಡೆಗುಂಟ ಮಂಡಲಿ-ಸಾವಿರ ಎಂಬ ಹೆಸರಿನ ರಾಜ್ಯವನ್ನು ಹಬ್ಬಿಸಿದರು.[೧] ರಾಷ್ಟ್ರಕೂಟ ಸಾಮ್ರಾಜ್ಯ ಕ್ರಿ.ಶ. ೯೭೭ರಲ್ಲಿ ಮುಳುಗಿದ ಮೇಲೂ ಮಂಡಲಿಯ ಗಂಗರು ಮುಂದುವರಿದರು. ಈ ಮಂಡಲಿ ಸಹಸ್ರ ನಾಡಿನ ಮೇರೆಗಳು ಹೀಗಿದ್ದುವು : ಉತ್ತರಕ್ಕೆ ಶಿಕಾರಿಪುರ ತಾಲ್ಲೂಕು, ಈಶಾನ್ಯಕ್ಕೆ ಹೊನ್ನಾಳಿ ತಾಲ್ಲೂಕು, ಮೂಡಣಕ್ಕೆ ಚನ್ನಗಿರಿ ತಾಲ್ಲೂಕು, ತೆಂಕಣಕ್ಕೆ ನರಸಿಂಹರಾಜಪುರ ಮತ್ತು ತರೀಕೆರೆ ತಾಲ್ಲೂಕುಗಳು, ನೈರುತ್ಯಕ್ಕೆ ತೀರ್ಥಹಳ್ಳಿ ತಾಲ್ಲೂಕು, ಪಡುವಣಕ್ಕೆ ಸಾಗರ ಮತ್ತು ಹೊಸ ನಗರ ತಾಲ್ಲೂಕುಗಳು, ವಾಯವ್ಯಕ್ಕೆ ಸೊರಬ ತಾಲ್ಲೂಕು.[೨] ಈ ಗಡಿಮೇರೆಗಳೊಳಗೆ ಹಬ್ಬಿ ದಾಂಗುಡಿಯಿಟ್ಟ ಮಂಡಲಿ-ಸಾಸಿರ ನಾಡು ಮಾಡಿದ ಜೈನಾಳಿಕೆಯಲ್ಲಿ ಕೈಗೂಡಿದ ಹಾಗೂ ಅಖಿಲ ಭಾರತ ವ್ಯಾಪ್ತಿಯ ಪರಿಗಣನೆಗೆ ಅರ್ಹವಾದ ಅತ್ಯಂತ ಮಹತ್ವದ ಸಾಧನೆಯೆಂದರೆ 'ಷಟ್-ಖಂಡ-ಆಗಮ ಸಿದ್ಧಾಂತ' ಗ್ರಂಥಕ್ಕೆ ಬರೆದ ಅಪೂರ್ವ ಟೀಕಾ ಗ್ರಂಥವಾದ **ಧವಲಾದ** ಪ್ರತಿ ಮಾಡಿಸಿದ್ದು.

ಗಂಗವಾಡಿ ೯೬,೦೦೦ ರಾಜ್ಯ ವ್ಯಾಪ್ತಿಯಲ್ಲಿ ಅಂತರ್ಗತವಾದ ಮಂಡಲಿ-ಸಾಸಿರವು ಗಂಗವಾಡಿಯ ಸುಂದರ ಮುಖವೆನಿಸಿ ಪ್ರತಿಷ್ಠಿತ ನಾಡಾಗಿತ್ತು. ಆ ಮುಖಕ್ಕೆ ಮುಖ್ಯವಾದ ಮೂಗಿನ ಹಾಗೆ ಮಂಡಲಿನಾಡಿನೊಳಗೆ ಬನ್ನಿಕೆರೆ ಶೋಭಿಸುತ್ತಿತ್ತು. ಮಂಡಲಿ ಸಾಸಿರ ನಾಡಿನ ಒಡೆಯರು ಪರಮ ಜಿನಭಕ್ತರಾಗಿದ್ದು

ತಟ್ಟೆಕೆರೆ, ನಿದಿಗೆ, ನೆಲ್ಲವತ್ತಿ (ಈಗಿನ ನ್ಯಾಮತಿ), ಪುರುಲೆ ಗ್ರಾಮ, ಬನ್ನಿಕೆರೆ, ಹರಕೆರೆ - ಮುಂತಾದ ಮುಖ್ಯ ಊರುಗಳಲ್ಲಿ ಬಸದಿಗಳನ್ನು ನಿರ್ಮಿಸಿದ್ದರು.[೩] ಮಂಡಲಿಯ ಗುಡ್ಡದ ಮೇಲಿನ (ಈಗಿನ ಕಲ್ಲೂರುಗುಡ್ಡ) ಪಾರ್ಶ್ವನಾಥ ಚೈತ್ಯಾಲಯ ಅವರ ಪಟ್ಟದ ಬಸದಿಯಾಗಿತ್ತು.[೪] ಪಾರ್ಶ್ವನಾಥ ತೀರ್ಥಂಕರರು ಮತ್ತು ಪದ್ಮಾವತೀದೇವಿಯು, ಪೊಂಬುಜದ ಸಾಂತರರಿಗೆ ಹೇಗೊ ಹಾಗೆ ಅವರ ಪಕ್ಕದ ನಾಡಾದ ಮಂಡಲಿಯ ಅರಸರಿಗೂ ಆರಾಧ್ಯರಾದ ಮನೆದೇವರುಗಳಾಗಿದ್ದರು.

ಉತ್ತರಕಾಲೀನ ಮಂಡಲಿಯ ಗಂಗ ರಾಜರಲ್ಲಿ ಮಹಾಮಂಡಲೇಶ್ವರ ತ್ರಿಭುವನಮಲ್ಲ ಭುಜಬಲ ಗಂಗ ಪೆರ್ಮಾಡಿದೇವನಿಮ್ಮಡಿಯು ಪ್ರಸಿದ್ಧನಾಗಿದ್ದು ಕ್ರಿ.ಶ. ೧೧೦೩ ರಿಂದ ೧೧೧೮ರ ವರೆಗೆ ೧೫ ವರ್ಷ ಆಳಿದನು. ಕಲ್ಯಾಣ ನಗರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತ ಮಾಡುತ್ತಿದ್ದ ಚಕ್ರವರ್ತಿ ತ್ರಿಭುವನಮಲ್ಲ ವಿಕ್ರಮಾದಿತ್ಯ ಪೆರ್ಮಾಡಿದೇವನ (ಕ್ರಿ.ಶ. ೧೦೭೬-೧೧೨೫) ಮಹಾಮಾಂಡಲಿಕರಾಗಿದ್ದುದರಿಂದ ಮಂಡಲಿ ರಾಜನಾದ ಇಮ್ಮಡಿ ಭುಜಬಲಗಂಗನಿಗೆ ತ್ರಿಭುವನಮಲ್ಲ ಭುಜಬಲಗಂಗ ಪೆರ್ಮಾಡಿದೇವನಿಮ್ಮಡಿ ಎಂಬ ಹೆಸರು ಬಂದಿತ್ತು. ಈ ಮಹಾಮಂಡಲೇಶ್ವರ ತ್ರಿಭುವನಮಲ್ಲ ಭುಜಬಲಗಂಗನಿಗೆ ಇಬ್ಬರು ಮಡದಿಯರು. ಹಿರಿಯ ಹೆಂಡತಿ ಹಾಗೂ ಪಟ್ಟದ ರಾಣಿಯಾಗಿದ್ದವಳು ಚಂದಲದೇವಿ.[೫] ಈಕೆಗೆ ಗಂಗ ಮಹಾದೇವಿ ಎಂಬುದು ರೂಢಿಯ ಎರಡನೆಯ ಹೆಸರು.[೬] ಭುಜಬಲಗಂಗನ ಪಟ್ಟಮಹಿಷಿಯಾದ ಈ ಚಂದಲದೇವಿ (ಗಂಗಾಮಹಾದೇವಿ)ಯ ತಾಯಿ ದೇವಮತಿ, ತಂದೆ ಚಾಮುಂಡ. ಚಾಮುಂಡನಿಗೆ ಚೌಂಡಾಡಿ, ಪೊಯ್ಸಳ ಸೆಟ್ಟಿ, ನೊಣಂಬಿ ಸೆಟ್ಟಿ - ಎಂಬ ಇತರ ಹೆಸರುಗಳು ರೂಢಿಯಲ್ಲಿದ್ದುವು.

ಭುಜಬಲಗಂಗ ಪೆರ್ಮಾಡಿ ಮಹಾಮಂಡಲೇಶ್ವರನ ಎರಡನೆಯ ರಾಣಿ ಬಾಚಲದೇವಿ. ಆಕೆ ಆ ಕಾಲದ ಅಪ್ರತಿಮ ಕಲಾರತ್ನ. ಬಾಚಲದೇವಿ ಸಂಗೀತ ಶಾರದೆ, ನೃತ್ಯ ಸರಸ್ವತಿ. ಬಹುಮುಖ ಪ್ರತಿಭೆಯ ಬಾಚಲದೇವಿ ಮಂಡಲಿನಾಡಿನ ಮಹಿಳೆಯರಲ್ಲಿ ಮುಡಿಯ ಮಾಣಿಕ್ಯ. ಆಕೆಯ ಅನ್ಯಾದೃಶ ಕಲಾ ಪರಿಣತಿಯನ್ನು ಸಮಕಾಲೀನ ಶಾಸನ ಕಂಡರಿಸಿದೆ.[೭] ತನ್ನ ನಿರಂತರ ಸಾಧನೆಯಿಂದ ಅಂದಿನ ಸಂಗೀತಗಾರರನ್ನು ಮೀರಿಸಿದ್ದಳು. ತನ್ನ ಕಂಠಸಿರಿಯಿಂದ ಸಂಗೀತ ಸುಧೆ ಹರಿಸಿ ರಸಿಕರ ಮೆಚ್ಚಿಗೆ ಗಳಿಸಿದ್ದಳು. ಹಾಡುಗಾರಿಕೆಯಲ್ಲದೆ ನಾಟ್ಯ ರಾಣಿಯಾಗಿ ಬಾಚಲದೇವಿ ಮಿಂಚಿದ್ದಳು. ಮಂಡಲಿನಾಡು ಆಕೆಯ ನೃತ್ಯ ಕೌಶಲಕ್ಕೆ ತಲೆದೂಗಿ **'ಪಾತ್ರಜಗದಲೆ'** ಎಂಬ ರಾಜ ಪ್ರಶಸ್ತಿಯಿತ್ತು ಗೌರವಿಸಿತು.[೮] ಮಂಡಲಿ-ಸಾಸಿರ ನಾಡಿನ ಸಾಂಸ್ಕೃತಿಕ ಕೆನೆಯೆನಿಸಿದ ಬಾಚಲದೇವಿ ನಿಷ್ಠಾವಂತ ಜಿನಭಕ್ತೆ. ಆಕೆಯ ಅರಮನೆ ಇದ್ದುದು ಬನ್ನಿಕೆರೆಯಲ್ಲಿ.[೯] ತನ್ನ ತೌರೂರು ಚರಿತ್ರಾರ್ಹವಾಗುವಂತೆ ಬನ್ನಿಕೆರೆಯಲ್ಲಿ ಬಾಚಲದೇವಿ ಭವ್ಯವಾದ ಉತ್ತಂಗ ಪಾರ್ಶ್ವನಾಥ ಚೈತ್ಯಾಲಯವನ್ನು ಕಟ್ಟಿಸಿದಳು. ಆ ಬಸದಿ ಮಂಡಲಿನಾಡಿಗೆ ಆಭರಣವಾಗಿ ಶೋಭಿಸಿತು.[೧೦] ಬನ್ನಿಕೆರೆಯ ಉತ್ತುಂಗ ಚೈತ್ಯಾಲಯದ ಆಚಾರ್ಯರು ಶ್ರೀ ಶುಭಚಂದ್ರ ಸಿದ್ಧಾಂತ ದೇವರು. ಪಾಪಗಳು ಅವರನ್ನು ಮುಟ್ಟಲಾರವು. ಹಾಲುಗಡಲಿನ ಹಾಗೆ, ಬಿಳಿಯ ಮುತ್ತುಗಳನ್ನು ಪೋಣಿಸಿ ಕಟ್ಟಿದ ಹಾರದಂತೆ ಶುಭಚಂದ್ರರ ಹೆಸರು ಎಲ್ಲೆಲ್ಲೂ ಹರಡಿತ್ತು. ಒಳ್ಳೆಯ ನಡತೆಯೆಂಬ ರತ್ನಗಳಿಗೆ ಅವರು ಆಕರವಾಗಿದ್ದರು. ಸುಜ್ಜನರಿಗೆ ಸದಾ ಬಂಧುವೆನಿಸಿದ ಅವರು ಬಲ್ಲಿದರೆಂಬ ದುಂಬಿಗಳಿಗೆ ಹೂವಾಗಿದ್ದರು. ಆದರೆ ಹೂಬಾಣಗಳ ಎರೆಯನಾದ ಕಾಮದೇವನಿಗೆ ಶುಭಚಂದ್ರರು ಚೂಪಾದ ಬಾಣವಾಗಿದ್ದರು.

ಪರಮಜಿನೇಶ್ವರ ವಿರಚಿತವಾದ ವರಸಿದ್ಧಾಂತ ಸಾಗರವನ್ನು ಈಸಿ ದಡಮುಟ್ಟಿದ್ದ ಸಿದ್ಧಾಂತ ವಿದ್ಯಾನಿಧಿ ಶುಭಚಂದ್ರದೇವರು ಶ್ರೇಷ್ಠ ತಪಸ್ವಿಗಳಾದ ಶ್ರೀ ಮಲಧಾರೀದೇವ ಮುನಿಪರ ಶಿಷ್ಯರಾಗಿದ್ದರು. ಮಲಧಾರಿದೇವರ ಮಹಿಮೆ ದೊಡ್ಡದು.[೧೧] ಅವರು ಮರವೆಯಲ್ಲಿ ಕೂಡ ವ್ಯಾವಹಾರಿಕ ಮಾತನ್ನಾಗಲಿ ಲೌಕಿಕ ವಾರ್ತೆಯನ್ನಾಗಲಿ ಆಡುತ್ತಿರಲಿಲ್ಲ. ದೇಹಕ್ಕೆ ಅಂಟಿದ ಕೊಳೆಯು ಆ ಶರೀರ ಧರಿಸಿದ ಕವಚದಂತಿತ್ತು. ನವೆಯಾದರೂ ಮೈಯನ್ನು ಒಮ್ಮೆಯೂ ಕೆರೆದುಕೊಂಡವರಲ್ಲ. ಒಂದು ಪಕ್ಕಕ್ಕೆ ಮಲಗಿದರೆ ಮತ್ತೆ ಅದನ್ನು ಬದಲಾಯಿಸಿ ಹೊರಳಾಡಿದವರಲ್ಲ. ಬಾಗಿಲು ಮುಚ್ಚಿ ಸಂಜೆ ಧ್ಯಾನಕ್ಕೆ ಕುಳಿತರೆ ಮತ್ತೆ ಬೆಳಗಿನವರೆಗೆ ಬಾಗಿಲು ತೆರೆದವರಲ್ಲ. ಸೂರ್ಯ ಮುಳುಗಿದ ಮೇಲೆ ಮತ್ತೆ ಸೂರ್ಯೋದಯವಾಗುವತನಕ ಹೊರಗೆ ಬರುವವರಲ್ಲ; ಕುಕ್ಕುಟಾಸನ ಹಾಕಿ ಕುಳಿತರೆಂದರೆ ಅದರಿಂದ ದಣಿವು ಆಯಿತೆಂದು ಸೋತವರಲ್ಲ. ಲೌಕಿಕ ಬಂಧನ ಕಳಚಿದ ಸನ್ಯಾಸ ವೃತ್ತಿಯ ಸಂಯಮ ನಿಯಮಗಳನ್ನು ಮರೆತವರಲ್ಲ. ಅವರಂತೆ ಕಠಿಣ ರೀತಿಯಲ್ಲಿ ತಪಸ್ಸು ಮಾಡುವವರು ವಿರಳ. ಬಹುನಾಲಗೆಯ ಆದಿಶೇಷನಿಗೂ ಮಲಧಾರಿ ಯತಿಪತಿಯ ಮಹಿಮೆಯ ಗುಣಗಳನ್ನು ತಿಳಿಸುವುದು ಕಷ್ಟವೆನಿಸಿತ್ತೆಂಬ ಕೀರ್ತಿಗೆ ಪಾತ್ರರಾದ ಮಲಧಾರಿ ಮುನಿಪರ ಯಶೋವಂತ ಉತ್ತರಾಧಿಕಾರಿಯೆನಿಸಿ ನೆಗಳಿದವರು ಶುಭಚಂದ್ರದೇವ ಸಿದ್ಧಾಂತ ದೇವರು. ನಿಗಿನಿಗಿ ಮಿರುಗುವ ಇವರ ಪಾರದರ್ಶಕ ಚರಿತೆಯನ್ನು ಬಿತ್ತರಿಸುತ್ತ ಶಾಸನಗಳು ಮತ್ತು ಕಾವ್ಯಗಳು ಮುಕ್ತಕಂಠದಿಂದ ಸ್ತೋತ್ರಾಭಿಷೇಕಧಾರೆಯಿಂದ ತೋಯಿಸಿವೆ.[೧೨] ಇವರು ಹೊಯ್ಸಳ ರಾಜರ ಮತ್ತು ಉತ್ತರಕಾಲೀನ ಗಂಗರ ರಾಜಗುರು, ಮಂಡಲಿ ಸಾಸಿರ ನಾಡಿನ ಮಂಡಲಾಚಾರ್ಯರು. ಇವರ ಮೇಲಾಳಿಕೆ, ಮುನ್ನೋಟ, ಆಗಮಶಾಸ್ತ್ರ ಪ್ರಭುತ್ವ, ಸಂಘಟನ ಸಾಮರ್ಥ್ಯ, ಶಿಷ್ಯ ಸಂಪತ್ತು ಮೊದಲಾದ ಸಾಧನೆಗಳು ಇಂದಿಗೂ ಬೆರಗು ತರುತ್ತವೆ.

ಶ್ರವಣಬೆಳಗೊಳ, ಕೊಪ್ಪಳ ಮತ್ತು ಮಂಡಲಿ - ಇವು ಪರಸ್ಪರ ಹೊಕ್ಕಳ ಬಳ್ಳಿ ಸಂಬಂಧವಿರುವ ಪ್ರಾಚೀನ ಜೈನ ತೀರ್ಥ ಕ್ಷೇತ್ರಗಳು. ಜೈನ ಸಿದ್ಧಾಂತ ಪಾರಂಗತರಾದ ಆಚಾರ್ಯವರೇಣ್ಯರು ವಿಹರಿಸಿದ ಹಾಗೂ ಮುಡುಪಿದ ಎಡೆಗಳು. ಗುರುಶಿಷ್ಯ ಪರಿವಿಡಿಯಿಂದ ಜಿನವಾಣಿ ಅಮೃತವರ್ಷಧಾರೆಯು ವಿಚ್ಛಿನ್ನವಾಗದಂತೆ ಅಚ್ಯುತವಾಗಿ ಉಳಿಸಿ ಯಾರು ಶ್ರುತಜ್ಞಾನ ಪ್ರಗಲ್ಭರೆನಿಸಿದ್ದರೊ ಅವರುಗಳನ್ನು, ಧವಳಾ ವ್ಯಾಖ್ಯಾನ ಗ್ರಂಥದ ಪ್ರತಿಯೆತ್ತುವ ಕಾರ್ಯ ಮುಗಿದ ಮೇಲೆ, ಕೊನೆಯ ಪ್ರಶಸ್ತಿ ವಾಚನ ಭಾಗದಲ್ಲಿ ಹೆಸರಿಸಿ ನೆನೆಯಲಾಗಿದೆ. **ಷಟ್‌ಖಂಡಾಗಮದ** ಟೀಕೆಗಳನ್ನು ಕರತಲಾಮಲಕ ಮಾಡಿಕೊಂಡಿದ್ದ ಹನ್ನೆರಡನೆಯ ಶತಮಾನದ ಆರಂಭದ ದಶಕದವರೆಗಿನ ಮೂರು ನಾಲ್ಕು ತಲೆಮೊರೆಯ ಗುರುಹಿರಿಯರ ನಾಮೋಲ್ಲೇಖನವನ್ನು ದಾಖಲಿಸಲು ನಿರ್ದೇಶನವಿತ್ತು ಕೈಗೂಡಿಸಿದವರು **ಮೇ**ಧಾವಿ ಶುಭಚಂದ್ರಾಚಾರ್ಯರು. ಶಾಸನಗಳೂ ಧವಲಾ ಸಿದ್ಧಾಂತ ಪ್ರಶಸ್ತಿ ಪದ್ಯಗಳೂ ಏಕ ಪ್ರಕಾರವಾಗಿ ಕೈ ಮುಗಿದು ನುತಿಸಿಕೊಂಡು ಕೊನೆದಾಡುವ ಆಚಾರ್ಯ ಸಮುದಾಯವನ್ನು ಪರಿಚಯಿಸುವ ಸಂದರ್ಭದಲ್ಲಿ ಆ ಘನಮಹಿಮರಿಗೆ ತಪ್ಪದೆ ಬಳಸುವ ಬಿರುದಾವಳಿ ಹಾಗೂ ವಿಶೇಷಣ ಶಬ್ದಗಳು ಅವರವರು ಗಳಿಸಿದ್ದ ಆಗಮಕೋವಿದತನವನ್ನೂ ಜಿನಶಾಸನವನ್ನು ತಮ್ಮ ಜೀವಿತಾವಧಿಯಲ್ಲಿ ಪ್ರಭಾವನೆಗೊಳಿಸಿದ್ದನ್ನೂ ಒತ್ತು ಕೊಟ್ಟು ಹೇಳಿವೆ.

ಧವಲಾದ ಅಂತಿಮ ಪ್ರಶಸ್ತಿವಾಚನ ಗದ್ಯಪದ್ಯಗಳಲ್ಲಿ ವಿರಾಜಮಾನರಾಗಿರುವ ಆಚಾರ್ಯಾವಳಿ ಹೀಗಿದೆ; ಕೊಂಡಕುಂದಾಚಾರ್ಯರು, ಗೃದ್ಧಪಿಚ್ಛಾಚಾರ್ಯರು, ಬಳಾಕ ಪಿಂಚಾಚಾರ್ಯರು, ಗುಣನಂದಿ ಪಂಡಿತರು, ದೇವೇಂದ್ರ ಸಿದ್ಧಾಂತರು, ವಸುನಂದಿ ಮುನೀಂದ್ರರು, ಗೊಲ್ಲಾಚಾರ್ಯರು, ತ್ರಿಕಾಲ ಯೋಗೀಶ್ವರರು ರವಿಚಂದ್ರ ಸಿದ್ಧಾಂತದೇವ, ಪೂರ್ಣಚಂದ್ರ ಸಿದ್ಧಾಂತದೇವ, ವೀರನಂದಿ ಸಿದ್ಧಾಂತದೇವ ವರ್ಧಮಾನಗುರು, ಒಂದನೆಯ ಮತ್ತು ಎರಡನೆಯ ಶ್ರೀಧರದೇವ, ಮಲಧಾರಿದೇವ, ನೇಮಿಚಂದ್ರ ಮಲಧಾರಿದೇವ, ಚಂದ್ರಕೀರ್ತಿ ಭಟ್ಟಾರಕ, ದಿವಾಕರಣಂದಿ ಸಿದ್ಧಾಂತಿದೇವ, ಮಾಘಣಂದಿ ಮತ್ತು ಮೇಘಚಂದ್ರ ಸೈದ್ಧಾಂತದೇವ ಮುನಿಪರು.[೧೩]

ಬನ್ನಿಕೆರೆಯಲ್ಲಿ ನಿರ್ಮಿಸಿದ ಉತ್ತುಂಗ ಜಿನಪಾರ್ಶ್ವ ಜಿನಾಲಯದ ಆರಂಭಕ್ಕೆ ಪಂಚಕಲ್ಯಾಣದ ಮುಖ್ಯ ಆಚಾರ್ಯರಾಗಿ ಸೂಕ್ತ ಮಾರ್ಗದರ್ಶನ ಮಾಡಲು ಭುವನವಿಖ್ಯಾತ ಶುಭಚಂದ್ರದೇವ ಮುನಿಪರು ಶ್ರವಣಬೆಳಗೊಳದಿಂದ ಮಂಡಲಿನಾಡಿಗೆ ಆಗಮಿಸಬೇಕೆಂದು ಮಂಡಲಿನಾಡ ಮಹಾಮಂಡಲೇಶ್ವರ ಇಮ್ಮಡಿ ಭುಜಬಲಗಂಗ ಪೆರ್ಮಾಡಿ ರಾಜನೂ ರಾಣಿಯರಾದ ಗಂಗ ಮಹಾದೇವಿಯೂ ಬಾಚಲದೇವಿಯೂ ಭಕ್ತಿಯಿಂದ ಪ್ರಾರ್ಥಿಸಿದರು. ಅದರಂತೆ ಶುಭಚಂದ್ರರು ಮಂಡಲಿ ನಾಡಿಗೆ ದಯಮಾಡಿಸಿದ್ದು ಕ್ರಿ.ಶ. ೧೧೧೧ರಲ್ಲಿ ಎಂದು ಶಿವಮೊಗ್ಗ ೮೯ನೆಯ ಸಂಖ್ಯೆಯ ಹೆಬ್ಬಂಡೆಗ್ರಾಮದ ಶಾಸನ ಸ್ಪಷ್ಟಪಡಿಸಿದೆ. ಬನ್ನಿಕೆರೆಯ ಉತ್ತುಂಗ ಚೈತ್ಯಾಲಯ ನಿರ್ಮಾಣ ಮುಗಿದದ್ದು ಕ್ರಿ.ಶ. ೧೧೧ರಲ್ಲಿ. ಆ ಹೊಚ್ಚ ಹೊಸ ಬಸದಿಯಲ್ಲಿ ತನ್ನ ತಾಯಿ ದೇವಮತಿಯು ಶ್ರುತಪಂಚಮಿ ನೋಂತು ಉದ್ಯಾಪನೆ ಮಂಗಳ ಕಾರ್ಯವನ್ನು ನೆರವೇರಿಸಲು ನೇರವಾದ ಕಾರಣ ಮಗಳು ಚಂದಲದೇವಿ (ಗಂಗ ಮಹಾದೇವಿ) ಎಂಬುದು ದಿಟವೇ ಆದರೂ ಇತರ ಸಂಗತಿಗಳೂ ಅದರಲ್ಲಿ ಮಿಳಿತವಾಗಿದ್ದುವು.

ಮಂಡಲಿನಾಡಿನ ಒಡೆಯ ಇಮ್ಮಡಿ ಭುಜಬಲಗಂಗ ಪೆರ್ಮಾಡಿ ದೇವನ ಅತ್ತೆ ರವಿದೇವಿಯಕ್ಕನವರು ಶ್ರುತಪಂಚಮಿ ನೋಂಪಿಯನ್ನು ಆಚರಿಸಿ, ಅದರ ಮುಕ್ತಾಯ ಶಾಸ್ತ್ರ ವಿಧಿಗಳನ್ನು ನೆರವೇರಿಸಲು ಮಗಳು - ಅಳಿಯನ ಮಂಡಲಿ ಬೀಡಿಗೆ ಬಂದರು. ತುಂಗಾನದಿಯ ದಂಡೆಯ ಸಮೀಪ ಈಗಲೂ ಇರುವ ಪುಟ್ಟ ಗ್ರಾಮವಾದ ಬನ್ನಿಕೆರೆಯು ೧೧-೧೨ನೆಯ ಶತಮಾನದಲ್ಲಿ ಪ್ರಬಲ ಜೈನ ತೀರ್ಥವಾಗಿತ್ತು. ಬಾಚಲದೇವಿ ವಿನಿರ್ಮಿತ ಇಲ್ಲಿನ ಪಾರ್ಶ್ವನಾಥ ಚೈತ್ಯಾಲಯವನ್ನು ಆಯ್ಕೆ ಮಾಡಿದ್ದಕ್ಕೆ ಇದ್ದ ನಾಲ್ಕು ಪ್ರಬಲ ಕಾರಣಗಳಿವು:

೧. ಆ ಕಾಲದ ಅದ್ವಿತೀಯ ತಪಸ್ವಿ, ರಾಜಗುರು, ಸಿದ್ಧಾಂತದ ತಲಸ್ಪರ್ಶಿ ಜ್ಞಾನಸಂಪನ್ನ ಶುಭಚಂದ್ರಾಚಾರ್ಯರು ಬನ್ನಿಕೆರೆಯ ಬಸದಿಯಲ್ಲಿದ್ದು ಚಾತುರ್ಮಾಸವನ್ನು ಪೂರೈಸಿದ್ದರು. ಅಲ್ಲದೆ ಆ ಚೈತ್ಯಾಲಯವು ಅವರ ಧರ್ಮಾಡಳಿತಕ್ಕೆ ಒಳಪಟ್ಟಿತು. ಕ್ರಿ.ಶ. ೧೧೧೧ರಲ್ಲಿ ಸಮಸ್ತ ಮಂಡಲಿರಾಜ ಪರಿವಾರ ಸೇರಿದ್ದಾಗ ಶುಭಚಂದ್ರರ ಆದೇಶದಂತೆ ಮುಂದಿನ ವಾರ್ಷಿಕ ಪೂಜೆಯ ವೇಳೆಗೆ ಶ್ರುತ ಪಂಚಮಿ ನೋಂಪಿಯ ಉದ್ಯಾಪನೆಗೆ ಹೊಂದಿಕೊಂಡ ಹಾಗೆ ಧವಲಾ ಗ್ರಂಥದ ಪ್ರತಿಯನ್ನು ಮಾಡಿಸಿ ಶಾಸ್ತ್ರದಾನವಾಗಿ ಕೊಡಲು ರವಿದೇವಿಯಕ್ಕ ಸಮ್ಮತಿಸಿದಳು.

೨. ಬನ್ನಿಕೆರೆ ಚೈತ್ಯಾಲಯ ರವಿದೇವಿಯಕ್ಕನ ಅಳಿಯನ ರಾಜಧಾನಿಯಾದ ಎಡೆಹಳ್ಳಿಗೆ ಸಮೀಪದಲ್ಲಿದ್ದ ಊರಾಗಿತ್ತು. ತನ್ನ ಮಗಳು ಚಂದಲದೇವಿಯ ಸವತಿ ಸೋದರಿಯಾದ ಬಾಚಲದೇವಿಯ ಗುಣಸಂಪನ್ನತೆ, ಸಚ್ಚಾರಿತ್ರ್ಯ, ಜಿನಭಕ್ತಿ ಪ್ರಿಯವೆನಿಸಿತ್ತು.

೩. ಬನ್ನಿಕೆರೆ ಪಾರ್ಶ್ವನಾಥ ಚೈತ್ಯಾಲಯವು ವಿಶಾಲೋನ್ನತವಾಗಿದ್ದು ನೋಂಪಿಯ ಉದ್ಯಾಪನೆಗೆ ಪ್ರಶಸ್ತವಾಗಿತ್ತು. ರವಿದೇವಿಯಕ್ಕನವರ ಕುಲಗುರುಗಳಾದ ಭುವನ ವಿಖ್ಯಾತ ಶುಭಚಂದ್ರ ಸಿದ್ಧಾಂತದೇವರೊಂದಿಗೆ ಮುನಿಚಂದ್ರ ಸಿದ್ಧಾಂತದೇವ, ಪ್ರಭಾಚಂದ್ರ ಸಿದ್ಧಾಂತದೇವ, ಮಾಧವ ಚಂದ್ರದೇವ, ಅನಂತವೀರ್ಯಮುನಿ, ಶ್ರುತಕೀರ್ತಿ ಮತ್ತು ಮಾಘನಂದಿ ಸಿದ್ಧಾಂತದೇವ - ಮೊದಲಾದ ಅತಿರಥ ಮಹಾರಥರೆನಿಸಿದ ಜೈನಾಚಾರ್ಯರ ಸಿದ್ಧಾಂತ ಪ್ರಭಾವಳಿ ಅಲ್ಲಿ ಜ್ಯೋತಿಯಾಗಿ ಬೆಳಗುತ್ತಿತ್ತು.

೪. ಅದೇ ವರ್ಷ, ಕ್ರಿ.ಶ. ೧೧೧೨ನೆಯ ಇಸವಿಯಲ್ಲಿ ಭುಜಬಲಗಂಗ ಪೆರ್ಮಾಡಿದೇವನು ತನ್ನ ರಾಜಧಾನಿಗೆ ಹತ್ತಿರವಿದ್ದ ಇನ್ನೊಂದು ಊರಾದ ಕುರುಳಿತೀರ್ಥದಲ್ಲಿ ಗಂಗಜಿನಾಲಯವನ್ನು ನಿರ್ಮಿಸಿ, ತನ್ನ ಗುರುಗಳಾದ ಮಾಧವಚಂದ್ರ ದೇವರ ಕಾಲು ತೊಳೆದು ಆ ಬಸದಿಗೆ ಹಲವು ಕೊಡುಗೆಗಳನ್ನು ನೀಡಿದ್ದನು.[೧೪]

ಇವೆಲ್ಲ ಶುಭಗಳೂ ಹುರಿಗೊಂಡು ಯೋಗಾಯೋಗವೆನಿಸಿದಂತೆ ರವಿದೇವಿಯಕ್ಕನವರು ಶ್ರುತಪಂಚಮಿ ಆಚರಣೆಗೂ ಧವಲಾ ಗ್ರಂಥದ ಶಾಸ್ತ್ರದಾನಕ್ಕೂ ಸಮ್ಮತಿಸಿದ್ದು ಜೈನ ಧಾರ್ಮಿಕ ಇತಿಹಾಸದಲ್ಲಿ ಅಮೃತಗಳಿಗೆ. ಶ್ರುತಪಂಚಮಿ ಸಾಂಸ್ಕೃತಿಕ ಮಹತ್ವದ ಹಬ್ಬ. ಜ್ಯೇಷ್ಠ ಶುದ್ಧ ಪಂಚಮಿಯ ದಿವಸ ಶಾಸ್ತ್ರಗಳನ್ನು ಪೂಜಿಸಿ ಗೌರವಿಸುವ ಮೂಲಕ ಶ್ರುತ ಜ್ಞಾನದೀಪ್ತಿಯನ್ನು ಮನನ ಮಾಡುವ ವಿಶಿಷ್ಟ ಪರಂಪರೆ ಜೈನ ಸಮಾಜದಲ್ಲಿದೆ. ಈ ಪರಂಪರೆಗೆ ಭವ್ಯ ಚಾರಿತ್ರಿಕ ಹಿನ್ನೆಲೆಯಿದೆ.

ಮೊದಲಿಗೆ ಎರಡೂವರೆ ಸಾವಿರ ವರ್ಷಗಳ ಹಿಂದೆ ಶ್ರುತರೂಪದಲ್ಲಿ ಇದ್ದ ಆಗಮಶಾಸ್ತ್ರ ಕ್ರಮೇಣ ನೆನಪಿನಿಂದ ನಷ್ಟವಾಗತೊಡಗಿತು. ಇದನ್ನು ತಿಳಿದು ಭೂತಬಲಿ ಮತ್ತು ಪುಷ್ಪದಂತರ ಆಚಾರ್ಯರು ಗುಜರಾತು ಪ್ರಾಂತ್ಯದ ಉಜ್ಜಯಂತಗಿರಿ (ಗಿರ್ನಾರ್ ಪರ್ವತ)ದ ಚಂದ್ರಗುಹೆಯಲ್ಲಿ ತಪಸ್ಸು ಮಾಡುತ್ತಿದ್ದ ಪೂರ್ವಗಳ ಏಕದೇಶ ಜ್ಞಾನಿಗಳಾಗಿದ್ದ ಧರಸೇನಾಚಾರ್ಯರಿಂದ ಕಲಿತು ಷಟ್‌ಖಂಡ ಆಗಮ ಸಿದ್ಧಾಂತ ಗ್ರಂಥವನ್ನು ಸೂತ್ರರೂಪದಲ್ಲಿ ಲಿಪಿಬದ್ಧವಾಗಿಸಿದರು. ಪುಷ್ಪದಂತರು ಬನವಾಸಿಯಲ್ಲಿದ್ದು ಷಟ್‌ಖಂಡಾಗಮದ ಹಸ್ತಪ್ರತಿಯನ್ನು ಬರೆದು ಮುಗಿಸಿದ ಪವಿತ್ರ ದಿವಸ ಜ್ಯೇಷ್ಠ ಶುಕ್ಲ ಪಂಚಮಿಯಾಗಿತ್ತು. ಆ ದಿವಸದಂದು ಚತುರ್ವಿಧ ಶ್ರಮಣ ಸಂಘದವರು ಸೇರಿ ಸಿದ್ಧಾಂತ ಶಾಸ್ತ್ರ ಗ್ರಂಥವನ್ನು ಅಲಂಕರಿಸಿ ಭಕ್ತಿಯಿಂದ ಪೂಜಿಸಿದರು. ಅಂದಿನಿಂದ 'ಶ್ರುತ ಪಂಚಮಿ ದಿವಸ'ವು ಜೈನ ಸಮಾಜದಲ್ಲಿ ಒಂದು ಪವಿತ್ರ ಪರ್ವತಿಥಿಯಾಗಿ ಮನ್ನಣೆ ಪಡೆಯಿತು.

ಈ ಮಹಿಮಾನ್ವಿತ ಶ್ರುತ ಪಂಚಮಿ ಹಬ್ಬವನ್ನೇ ರವಿದೇವಿಯಕ್ಕಳು ವ್ರತವಾಗಿ ನೋನಲು ಆಯ್ಕೆ ಮಾಡಿದ್ದು ಆಕೆ ಎಂತಹ ಪ್ರಬುದ್ಧ ಚೇತನಳೂ ಭವ್ಯಜೀವಿಯೂ ಆಗಿದ್ದಳೆಂಬುದನ್ನು ಹೇಳುತ್ತದೆ. ಇನ್ನೂ ಅಪೂರ್ವ ಕಾಲಲಬ್ಧಿ ಹೇಗೆ ಕೂಡಿಬಂದಿತೆಂದರೆ ಈ ಶ್ರುತ ಪಂಚಮಿಯನ್ನು ನೋಂತು ಇದರ ಉದ್ಯಾಪನೆಗೆ ಬನ್ನಿಯಕೆರೆಯ ಪಾರ್ಶ್ವನಾಥ ಚೈತ್ಯಾಲಯವನ್ನು ಆರಿಸಿಕೊಂಡಳು.

ಪಾರ್ಶ್ವನಾಥ ತೀರ್ಥಂಕರರು ಆಕೆಯ ಮನೆದೇವರು. ಆ ಕಾರಣದಿಂದ ಆಕೆ ಮುಂದೆ, ಅಂದರೆ ಈ ಉಜ್ಜವಣೆಯಾದ ಆರು ವರ್ಷಕ್ಕೆ, ಕತ್ತರಿಘಟ್ಟದಲ್ಲಿ ಒಂದು ಪಾರ್ಶ್ವನಾಥ ತ್ರಿಕೂಟಜಿನಾಲಯವನ್ನು ಕಟ್ಟಿಸಿದಳು - ಈ ಸಂಗತಿಯನ್ನು ಅನಂತರ ಮತ್ತೆ ಪ್ರಸ್ತಾಪಿಸಿ ವಿವರಿಸಲಾಗುವುದು. ಹೀಗೆ ಬನ್ನಿಕೆರೆಯಲ್ಲಿ ಶ್ರುತಪಂಚಮಿಯನ್ನು ನೋಂತು ಅದನ್ನು ಪೂರೈಸಿ ಮುಗಿಸುವ ಸಮಯಕ್ಕೆ ಶ್ರುತ ಪೂಜೆ ಮಾಡುವ ಸಲುವಾಗಿ ಅಲ್ಲಿ ಅಲಭ್ಯವಾಗಿದ್ದ ಧವಲಾ ಗ್ರಂಥದ ಪ್ರತಿಯನ್ನು ಕುಲಗುರುಗಳಾದ ಶುಭಚಂದ್ರ ಸಿದ್ಧಾಂತ ದೇವರಿಗೆ ಬರೆಯಿಸಿಕೊಟ್ಟಳು. ಇದರಿಂದ ಅರ್ಥಪೂರ್ಣವಾದ ಶ್ರುತ ಪೂಜೆಯನ್ನು ಸಾರ್ಥಕ ರೀತಿಯಲ್ಲಿ ನೆರವೇರಿಸಿದಂತಾಯಿತು.

ಷಟ್‌ಖಂಡಾಗಮದಲ್ಲಿ ಜೀವಟ್ಠಾಣ, ಖುದ್ದಾಬಂಧ, ಬಂಧಸ್ವಾಮಿತ್ವ ವಿಚಯ, ವೇದನಾ, ವರ್ಗಣಾ ಮತ್ತು ಮಹಾಬಂಧ ಎಂಬ ಆರು ಖಂಡಗಳಿವೆ. ಈ ಷಟ್ ಖಂಡಾಗಮಕ್ಕೆ ಕೊಂಡಕುಂದ, ಶ್ಯಾಮಕುಂದ, ತುಂಬಲೂರ, ಸಮಂತಭದ್ರ ಮತ್ತು ಬಪ್ಪದೇವ ಎಂಬ ಆಚಾರ್ಯರು ಬರೆದ ಟೀಕಾಗ್ರಂಥಗಳು ನಮ್ಮವರೆಗೆ ಉಳಿದುಬರಲಿಲ್ಲ. ಈಗ ಸಿಕ್ಕಿರುವ ಏಕೈಕ ಟೀಕಾಗ್ರಂಥವೇ ಧವಲ. ಇದನ್ನು ಪಂಚಸ್ತೂಪಾನ್ವಯದ ವೀರಸೇನಾಚಾರ್ಯರು ಶಕಸಂವತ್ಸರ ೭೩೮ರ ಕಾರ್ತಿಕ ಶುಕ್ಲ ತ್ರಯೋದಶಿ, ಅಂದರೆ ಕ್ರಿ.ಶ. ೮೧೬ರಲ್ಲಿ ಪೂರೈಸಿದರು. ೭೨ ಸಾವಿರ ಶ್ಲೋಕ ಪ್ರಮಾಣದ ಈ ಧವಲವನ್ನು ವೀರಸೇನಾಚಾರ್ಯರು ವಾಟಗ್ರಾಮದ ಜೈನಮಠದಲ್ಲಿ ಬರೆದರು; ಇದೇ ಈಗಿನ ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯಲ್ಲಿರುವ ವಾಟನಗರ (ವಾಡ್ನೇರ್). ಅನಂತರ ಇದರ ಪ್ರತಿಗಳು ಬಂಕಾಪುರ, ಶ್ರವಣಬೆಳಗೊಳ, ಕೊಪ್ಪಳ ಮೊದಲಾದ ಪ್ರಮುಖ ಜೈನ ಶ್ರುತ ಭಂಡಾರ ಸೇರಿದುವು.

ಚಾಮುಂಡರಾಯನಿಗೆ ಬೋಧಿಸಲೂ, ಗೊಮ್ಮಟ ಸಾರವನ್ನು ರಚಿಸಲೂ ಆಚಾರ್ಯ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಯವರು ಬಳಸಿದ್ದು ಶ್ರವಣಬೆಳಗೊಳದ ಪ್ರತಿಯನ್ನು. ಇದು ಆಚಾರ್ಯ ಜಿನಸೇನರಶಿಷ್ಯರಾದ ಗುಣಭದ್ರಾಚಾರ್ಯರಿಂದ ಅಜಿತಸೇನಾಚಾರ್ಯರ ಕಡೆಗೆ ಬಂದು ಅನಂತರ ಶ್ರವಣಬೆಳಗೊಳಕ್ಕೆ ಮುಟ್ಟಿದ ಮುಖ್ಯಪ್ರತಿ. ಈ ಪ್ರಾಚೀನ ಪ್ರತಿ ೧೧೧೨ರ ವೇಳೆಗೆ ತ್ರುಟಿತವಾಗತೊಡಗಿದ್ದಿರಬಹುದು. ಬನ್ನಿಕೆರೆಗೆ ಶ್ರವಣಬೆಳಗೊಳದಿಂದ ಆಗಮಿಸಿದ್ದ ಶುಭಚಂದ್ರ ಸಿದ್ಧಾಂತರು ರವಿದೇವಿಯಕ್ಕನವರಿಗೆ ಶಾಸ್ತ್ರದಾನ ಮಾಡುವ ಸಲುವಾಗಿ ಧವಲದ ಪ್ರತಿಯೆತ್ತಲು ಈ ಬೆಳಗೊಳದ ಮೂಲ ಪ್ರತಿಯನ್ನಿತ್ತರು. ಹೀಗಾಗಿ ರವಿದೇವಿಯಕ್ಕ ಮತ್ತು ಮಲ್ಲಿಕಬ್ಬೆಯರು ಜಿನ್ನ ಮತ್ತು ಉದಯಾದಿತ್ಯರೆಂಬ ಪ್ರತಿಕಾರರಿಂದ ಪ್ರತಿಯೆತ್ತಲು ಸಹಾಯವಾದ ಮೂಲ ಪ್ರತಿ ಶ್ರವಣಬೆಳಗೊಳದ ಸಿದ್ಧಾಂತ ಬಸದಿಯ ಶ್ರುತಭಂಡಾರ ನಿಕ್ಷಿಪ್ತದಿಂದ ಬಂದದ್ದು. ಶ್ರವಣಬೆಳಗೊಳದ ಮೂಲಪ್ರತಿಯ ಆಧಾರದಿಂದ ಕ್ರಿ.ಶ. ೧೧೧೨ರಲ್ಲಿ ನಕಲು ಮಾಡಿದ ಯಥಾ ಪ್ರತಿಯು ಅಲ್ಲಿಂದ ಮೂಡಬಿದರೆ ಸೇರಿತು. ಅದೇ ಇಂದಿಗೂ ಏಕಮೇವಾದ್ವಿತೀಯ ಸಂರಕ್ಷಿತ ಪ್ರತಿಯಾಗಿ ಉಳಿದು ಕಡೆಗೆ ಕಳೆದ ಶತಮಾನದಲ್ಲಿ ಮುದ್ರಣದ ಬೆಳಕು ಕಂಡದ್ದು. ಆದರೆ, ಈ ಸ್ಥಳಾಂತರಗೊಳ್ಳುತ್ತಿದ್ದ ಪ್ರಕ್ರಿಯೆಯಲ್ಲಿ ಶ್ರವಣಬೆಳಗೊಳದ ಮೂಲಪ್ರತಿ ಅನುಪಲಬ್ಧವಾಯಿತು.

ರವಿದೇವಿಯಕ್ಕೆ ಅಸಾಮಾನ್ಯಳಾದ ಸ್ತ್ರೀರತ್ನ. ಒಳ್ಳೆಯ ಗುಣಗಳೇ ಆಕೆಯ ಅಲಂಕಾರ. ಸತ್ಯ, ಶೀಲ, ಆಚಾರಗಳಿಂದ ಆಕೆ ಆದರ್ಶಪ್ರಾಯ ಶ್ರಾವಕ ಶ್ರೇಷ್ಠಳಾಗಿದ್ದಳು. ದೇಮತಿ, ದೇವಮತಿ, ರತಿದೇವಿ, ದೇಮವ್ವ, ದೇಮಕ್ಕ ಸೆಟ್ಟಿತಿ, ರವಿದೇವಿಯಕ್ಕ - ಎಂಬ ನಾನಾ ನಾಮರೂಪಗಳಿಂದ

ಅಂದಿನ ಸಮಾಜದ ಪ್ರೀತಿ ಗೌರವಗಳಿಗೆ ಪಾತ್ರಳಾಗಿದ್ದಳು. ಉನ್ನತ ಸ್ಥಾನಮಾನಗಳಿಂದ ವಿಭೂಷಿತೆಯಾದರೂ ನಯವಿನಯ ಸಂಪನ್ನಳಾಗಿದ್ದಳು. ಸಿದ್ಧಾಂತ, ಶಾಸ್ತ್ರ ಮತ್ತು ಸಾಹಿತ್ಯದಲ್ಲಿ ಶ್ರದ್ಧೆಯಿತ್ತು. ಬಲ್ಲಿದರನ್ನು ಪ್ರಸನ್ನಗೊಳಿಸಿ ಪ್ರೋತ್ಸಾಹಿಸಿದಳು. ಜಿನಪೂಜೆ, ಜಿನಸ್ತೋತ್ರದಲ್ಲಿ ತಲ್ಲೀನಳು. ನಿತ್ಯ ಬಸದಿಯಲ್ಲಿ ಜಿನರ ಅಭಿಷೇಕ ಮಾಡಿ ಜಿಗಂಧೋದಕವನ್ನು ತಳೆದು ಪವಿತ್ರ ಶರೀರಳಾಗುವಳು.[೧೬]

ಸಮ್ಯಕ್ತ್ವ ಚೂಡಾಮಣಿಯಾದ ರವಿದೇವಿಯಕ್ಕಳು ಅಕಳಂಕ ಚರಿತಳೂ ಸುಜನೈಕ ಬಾಂಧವಳೂ ಆದ ನಾಗಲೆಯೆಂಬ ಶ್ರಾವಕಿಯ ಹಿರಿಯ ಮಗಳು. ನಾಗಲೆಗೆ ರತ್ನತ್ರಯರೆನಿಸಿದ ರವಿದೇವಿಯಕ್ಕ (ದೇಮತಿ), ಬೂಚಿರಾಜ (ಬೂಚಣ) ಮತ್ತು ದಂಡನಾಯಕಿತಿ ಲಕ್ಷ್ಮೀದೇವಿ (ಲಕ್ಕಲೆ) ಎಂಬ ಮೂವರು ಮಕ್ಕಳೂ ಕೀರ್ತಿಶಾಲಿಗಳು. ರವಿದೇವಿಯಕ್ಕಳು ಹೊಯ್ಸಳ ಸಾಮ್ರಾಜ್ಯದ ರಾಜಶ್ರೇಷ್ಠಿಯಾದ ಚಾಮುಂಡನ ಮನಸ್ಸೆಂಬ ಮಾನಸ ಸರೋವರದಲ್ಲಿ ಕ್ರೀಡಿಸುವ ರಾಜಹಂಸೆಯಾಗಿದ್ದಳು. ರವಿದೇವಿಯಕ್ಕ ಮತ್ತು ಚಾಮುಂಡಯ್ಯ ಆದರ್ಶ ದಂಪತಿಗಳಾಗಿದ್ದು ಶುಭಚಂದ್ರ ಸಿದ್ಧಾಂತದೇವರ ಶಿಷ್ಯರಾಗಿದ್ದರು.[೧೮] ಚಾಮುಂಡನಿಗೆ ಚಾವುಂಡಾಡಿ, ಪೊಯ್ಸಳಸೆಟ್ಟಿ, ನೊಣಂಬಿಸೆಟ್ಟಿ ಎಂಬ ಇತರ ಜನಪ್ರಿಯ ಹೆಸರುಗಳಿದ್ದುವು. ಆತನು ಸಾಹಸೋತ್ತುಂಗ, ಚಲದಂಕರಾಮ, ಸಾಹಸಭೀಮ, ದೀನಾನಾಥ ಬುಧಜನ ಕಲ್ಪವೃಕ್ಷ - ಎಂಬ ಪ್ರಶಸ್ತಿಗಳಿಂದ ಭೂಷಿತನಾಗಿದ್ದನು. ಚಾಮುಂಡನು ಹೊಯ್ಸಳಸೆಟ್ಟಿಯೆನಿಸಿದ್ದರಿಂದ ಪತ್ನಿಯಾದ ರವಿದೇವಿಯಕ್ಕ ನವರಿಗೂ ದೇಮಿಕಬ್ಬೆ ಸೆಟ್ಟಿತಿ ಎಂಬ ಹೆಸರು ಬಳಕೆಯಾಯಿತು. ಸತಿಪತಿಗಳೊಂದಾದ ಜಿನಭಕ್ತಿ ಅಸಾಮಾನ್ಯವಾದುದು. ನೊಣಂಬಿಸೆಟ್ಟಿ ಮತ್ತು ರವಿದೇವಿಯಕ್ಕ ದಂಪತಿಗಳು ಕತ್ತರಿಘಟ್ಟದಲ್ಲಿ (ಮಂಡ್ಯ ಜಿಲ್ಲೆ, ಕೃಷ್ಣ ರಾಜಪೇಟೆ ತಾಲ್ಲೂಕು) ೨೪-೧೨-೧೧೧೮ರಂದು ಗುರುವಾರ ತ್ರಿಕೂಟ ಜಿನಾಲಯವನ್ನು ಮಾಡಿಸಿದರು. ಮೂಲ ಸಂಘದ ದೇಸಿಗ ಗಣದ ಪುಸ್ತಕ ಗಚ್ಛದ ಕೊಂಡಕುಂದಾನ್ವಯದ ಕುಕ್ಕುಟಾಸನ ಮಲಧಾರಿದೇವರ ಶಿಷ್ಯರೂ ತಮ್ಮ ಗುರುಗಳೂ ಆದ ಶುಭಚಂದ್ರ ಸಿದ್ಧಾಂತ ದೇವರಿಗೆ ಈ ಬಸದಿಯನ್ನು ಒಪ್ಪಿಸಿದರಲ್ಲದೆ ದೇವರ ಪೂಜಾಕಾರ್ಯಗಳಿಗೆ ಅರ್ಹನಹಳ್ಳಿಯನ್ನೂ ಎರಡುಗಾಣ, ಎರಡು ತೋಟ, ಭೂಮಿಕಾಣೆಯನ್ನೂ ತೆರಿಗೆಗಳಿಲ್ಲದಂತೆ ಬಾಧಾರಹಿತವಾಗಿ ದತ್ತಿಗಳನ್ನು ಕೊಟ್ಟರು.[೧೯]

ಪರಮ ಅರ್ಹದ್ಭಕ್ತಳಾದ ದೇಮತಿಯು ಜಿನೋಪದಿಷ್ಟ ಅನೇಕಾಂತಮತಕ್ಕೆ ರಕ್ಷಣೆ ನೀಡಿ ಜಿನಶಾಸನ ದೇವತೆಯೆನಿಸಿದಳು. ಯಾವಾಗಲೂ ಜನರಿಗೆ ಆಹಾರದಾನ ನೀಡುತ್ತ, ಹೆದರಿದವರಿಗೆ ಆಸರೆಯಾಗಿ ನೆರಳು ನೀಡುತ್ತ, ಕಾಹಿಲೆಗಳಿಂದ ನರಳುವವರಿಗೆ ಔಷಧೋಪಚಾರಗಳನ್ನು ಉಚಿತವಾಗಿ ಒದಗಿಸುತ್ತ, ಓದಲು ಬಯಸುವ ಯತಿ ಕಂತಿಯರಿಗೂ ಗೃಹಿಣಿ ಗೃಹಸ್ಥರಿಗೂ ಆಗಮ ಶಾಸ್ತ್ರ ಗ್ರಂಥಗಳನ್ನು ದೊರಕಿಸುತ್ತ ರವಿದೇವಿಯು ಆದರ್ಶ ಉಪಾಸಕಿಯಾಗಿದ್ದಳು. ಭವ್ಯಜೀವಿ ರವಿದೇವಿಯು ತನ್ನ ಅವಸಾನ ಕಾಲ ಹತ್ತಿರ ಬಂದುದನ್ನು ಮೊದಲೇ ಅರಿತಳು. ಕೂಡಲೆ ಆಕೆ ಆರಾಧನಾಶಾಸ್ತ್ರ ಗ್ರಂಥದಲ್ಲಿ ಹೇಳಿರುವ ಪ್ರಕಾರ ಸಲ್ಲೇಖನ ವ್ರತವನ್ನು ಸ್ವೀಕರಿಸಿದಳು. ವಿಕಾರಿ ಸಂವತ್ಸರದ ಫಾಲ್ಗುಣ ಬಹುಳ ಗುರುವಾರದಂದು (೨೬-೨-೧೧೨೦) ಸನ್ಯಸನ ವಿಧಿಯಿಂದ ಶ್ರವಣಬೆಳಗೊಳದ ಚಿಕ್ಕಬೆಟ್ಟವಾದ ಚಂದ್ರಗಿರಿಯ ಮೇಲೆ ಮುಡಿಪಿದಳು. ಆ ನಾರೀಮಣಿ ಸಾಧ್ವಿ ಜಿನಭಕ್ತೆ ರವಿದೇವಿಯಕ್ಕಳ ಚಿರಸ್ಮರಣೆಗಾಗಿ ಆಕೆಯ ತಂಗಿಯೂ, ಗಂಗರಾಜ ದಂಡನಾಯಕನ ಮಡದಿಯೂ ಆದ ಲಕ್ಷ್ಮೀಮತಿ (ಲಕ್ಕಲೆ) ದಂಡನಾಯಕಿತಿಯು ವಿಜಯ ಸ್ತಂಭವನ್ನು ನಿಲ್ಲಿಸುವ ರೀತಿಯಲ್ಲಿ ನಿಸಿಧಿ ಸ್ಮಾರಕವಾದ

ಕಲ್ಲಿನ ಕಂಬವನ್ನು ನಿಲ್ಲಿಸಿದಳು.[೨೦] ರವಿದೇವಿಯಕ್ಕನವರು ಬಸದಿ ಕಟ್ಟಿಸಿದರು, ಧವಲಾ ಗ್ರಂಥದ ಪ್ರತಿ ಮಾಡಿಸಿದರು, ಚತುರ್ವಿಧ ದಾನಗಳನ್ನು ನೀಡಿದರು - ಇವು ಒಂದೊಂದೂ ಅವರ ಧರ್ಮಾನುರಾಗದ ಕಾರ್ಯಗಳು. ಇವೆಲ್ಲದಕ್ಕೂ ಕಿರೀಟ ತೊಡಿಸಿದಂತೆ ಆಕೆ ಸಮಾಧಿಮರಣಕ್ಕೂ ಸಜ್ಜಾದಳೆಂಬುದು ಮಾಗಿದ ಪಕ್ವ ಮನೋಧರ್ಮವನ್ನು, ಜಿನಧರ್ಮದ ಸಿದ್ಧಾಂತದಲ್ಲಿ ಶ್ರದ್ಧೆ ಬೇರೂರಿತ್ತೆಂಬುದನ್ನು ಚೆನ್ನಾಗಿ ಕನ್ನಡಿಸುತ್ತದೆ. ಆಚಂದ್ರಾರ್ಕ ಕೀರ್ತಿಗೆ ಪಾತ್ರಳಾದ ರವಿದೇವಿಯಕ್ಕಳನ್ನು ದಾನಚಿಂತಾಮಣಿ ಅತ್ತಿಮಬ್ಬೆಗೂ ಜಿನಶಾಸನ ದೇವತೆಗೂ ಹೋಲಿಸುವುದರಲ್ಲಿ ಔಚಿತ್ಯವಿದೆ.

ರವಿದೇವಿಯಕ್ಕನವರು ಧವಲಾ ಗ್ರಂಥದ ಪ್ರತಿಯನ್ನು ಮಾಡಿಕೊಡುವುದಕ್ಕಾಗಿ ಲಿಪಿಕಾರರ ಆಯ್ಕೆಯಲ್ಲಿ ತೋರಿದ ಮುನ್ನೆಚ್ಚರಿಕೆ ಮತ್ತು ವಿಚಕ್ಷಣೆ ಪ್ರಶಂಸನೀಯವಾಗಿದೆ. ಧವಲಾ ಗ್ರಂಥಧ ಪ್ರತಿಯೆತ್ತುವ ಕಾರ್ಯ ಸಾಮಾನ್ಯ ವೃತ್ತಿ ಸಂಪ್ರತಿಕಾರರಿಂದ ಕೈಗೂಡುವಂತಹುದಾಗಿರಲಿಲ್ಲ. ಗೊಮ್ಮಟ ಶಿಲ್ಪವನ್ನು ಕಡೆಯಲು ತುಂಬ ಪರಿಣತನಾದ ಪ್ರತಿಭಾಶಾಲಿಯಾದ ಶಿಲ್ಪಿ ಬೇಕು. ಗೊಮ್ಮಟ ಸದೃಶ ಧವಲಾ ಸಿದ್ಧಾಂತ ಗ್ರಂಥದ ಪ್ರತಿ ಮಾಡಲು ನಿಷ್ಣಾತನೂ ಬಹುಶ್ರುತನೂ ಆದ ಪ್ರತಿಕಾರ ಬೇಕು ಎಂಬುದನ್ನು ರವಿದೇವಿಯಕ್ಕ ಮನಗಂಡರು. ಅದಕ್ಕಾಗಿ ಅಂದಿನ ದಿನಗಳಲ್ಲಿ ಕನ್ನಡ ನಾಡಿನಲ್ಲಿಯೇ ಅತ್ಯುತ್ತಮ 'ಲಿಪಿಕಾರರ ರಾಜ' ಎಂದೆನಿಸಿದ ಕುಶಲಿಯನ್ನು ಆಯೋಜಿಸಲಾಯಿತು. ಆ ನಿಪುಣ ಲಿಪಿಕಾರನ ಹೆಸರು ಜಿನ್ನಪಯ್ಯ. ಆತನನ್ನು ಕೊಪ್ಪಳದಿಂದ ಬರಮಾಡಿಕೊಂಡು ಈ ಕೆಲಸವನ್ನು ಒಪ್ಪಿಸುವುದರಲ್ಲಿ ಕೊಪ್ಪಳ, ಶ್ರವಣಬೆಳಗೊಳ ಮತ್ತು ಮಂಡಲಿ ಸ್ಥಳಗಳ ಆಚಾರ್ಯರು ಸಮಾಲೋಚಿಸಿ ಮಾರ್ಗದರ್ಶನ ನೀಡಿದ್ದಾರೆ. ಧವಲಾ ಪ್ರಶಸ್ತಿ ಪದ್ಯ ಮಾಲಿಕೆಯಲ್ಲಿ ಬಂದಿರುವ ಕೆಲವು ವೃತ್ತ ಮತ್ತು ಕಂದ ಪದ್ಯಗಳು ಯಥಾವತ್ತಾಗಿ ಕೊಪ್ಪಳ, ಶ್ರವಣಬೆಳಗೊಳ ಮತ್ತು ಹುಣಸಿಹಡಗಲಿಯ ಶಾಸನಗಳಲ್ಲಿವೆ. ಕಾಲಾನುಕ್ರಮಣಿಕೆಯ ದೃಷ್ಟಿಯಿಂದ ಪರಿಗಣಿಸಿದಾಗ ಶಾಸನಗಳಲ್ಲಿರುವ ಉಲ್ಲೇಖಗಳು ಧವಲಾದ ಪ್ರಶಸ್ತಿ ರಚನೆಗಿಂತಲೂ ಪ್ರಾಚೀನವಾಗಿವೆ. ಇದರಿಂದ ಪ್ರತೀತವಾಗುವ ಸಾರಾಂಶ ಸಂಗತಿಯೆಂದರೆ ಧವಲಾ ಪ್ರಶಸ್ತಿಯನ್ನು ರಚಿಸಿದವರು ಯಾರೇ ಆಗಿರಲಿ ಅವರು ಬಹುಶ್ರುತರಾಗಿದ್ದರಲ್ಲದೆ ಜೈನ ಪ್ರಾಚೀನ ತೀರ್ಥಸ್ಥಳಗಳ ಶಾಸನ ಸಂಪತ್ತನ್ನೂ ಜೈನ ಆಚಾರ್ಯ ಪರಂಪರೆಯನ್ನೂ ಸರಿಯಾಗಿ ಅರಿತವರಾಗಿದ್ದರು.

ಧವಲಾದ ಪ್ರತಿಕಾರರು ಇಬ್ಬರು - **ಜಿನ್ನಪಯ್ಯ** ಮತ್ತು **ಉದಯಾದಿತ್ಯ**. ಇವರಲ್ಲಿ ಜಿನ್ನನು ತನ್ನ ವಿಚಾರವಾಗಿ ಒಂದು ವೃತ್ತ ಹಾಗೂ ಎರಡು ಕಂದ ಪದ್ಯ ರಚಿಸಿದ್ದಾನೆ. ಅದರ ಸಾರಾಂಶವಿಷ್ಟು : ಪವಿತ್ರವೂ ಶೋಭಾಕರವೂ ಆದ ಕುಪಣವು (ಈಗಿನ ಕೊಪ್ಪಳ) ಪ್ರಸಿದ್ಧವಾದ ಪಟ್ಟಣ. ಈ ಪಟ್ಟಣದೊಳಗೆ 'ಮನು ನೀತಿ ಮಾರ್ಗ' ಎಂಬ ಪ್ರಶಸ್ತಿಗೆ ಪಾತ್ರನಾದ ಜಿನ್ನನಿದ್ದಾನೆ. ಆತನನ್ನು - "ಉತ್ತಮವಾದ ವಂಶವೆಂಬ ಕಡಲಿಗೆ ಶೋಭೆಯನ್ನುಂಟು ಮಾಡುವವನೂ ಶ್ರೇಷ್ಠನೂ ಎಲ್ಲ ಬಲ್ಲಿದರ ಮುಖಶೋಭೆಗೆ ಕನ್ನಡಿಯಂತೆ ಇರುವವನೂ ದೇವತೆಗಳ ಎರೆಯನಾದ ದೇವೇಂದ್ರನಿಂದ ಪೊಡಮಡಲಾದ ಜಿನರ ಅಡಿದಾವರೆಗಳಲ್ಲಿ ದುಂಬಿಯಂತೆ ಇರುವವನೂ ಆಗಿದ್ದಾನೆ" ಎಂದು ಎಲ್ಲ ಜನರೂ ವರ್ಣಿಸುವರು. ಜಿನ್ನಮಯ್ಯನು ಜಿನರ ಪಾದಪದ್ಮವನ್ನು ಪೂಜಿಸುವ ಉಪಾಸಕ. ಆತ ಎಣೆಯಿಲ್ಲದಷ್ಟು ವಿನಯಗುಣದ ಕಡಲು. ದಾನ ಮಾಡುವುದರಲ್ಲಿ ಜಿನ್ನನು

ಸಂತೋಷಪಡುತ್ತಿದ್ದನು. ಮನುಧರ್ಮ ಶಾಸ್ತ್ರದಲ್ಲಿ ಹೇಳಿರುವ ನೀತಿಗಳನ್ನು ಪಾಲಿಸುತ್ತ ಶೌಚ ಗುಣಸಂಪನ್ನನಾದ ಜಿನ್ನನು ತನ್ನ ಸತಿಯಲ್ಲದ ಇತರ ಹೆಂಗಸರಿಂದ ದೂರ ಇರುತ್ತಿದ್ದನು. ಸಂಸಾರಿಗರು ಬೇಡಿದ ಹಣವನ್ನು ನೀಡುವ ಉದಾರ ಸ್ವಭಾವದವನು. ಜಿನ್ನನು ಅಕ್ಷರಗಳನ್ನು ಅತಿ ಸುಂದರವಾಗಿ ಬರೆಯುತ್ತಿದ್ದನು. ಅವನ ವರ್ಣಮಾಲೆ ಮುದ್ದಾಗಿರುತ್ತಿತ್ತು. ಕಡಲಾಳದಿಂದ ಮುಕ್ಕಿಲ್ಲದ ಮುತ್ತುಗಳನ್ನು ಆಯ್ದಾಯ್ದು ಪೋಣಿಸಿ ಆನಂದದಿಂದ ವರುಣನು ಸರಸ್ವತಿಯು ಕೊರಳಿಗೆ ಹಾಕಿದ ಹಾರದ ಹಾಗೆ ಜಿನ್ನನು ಬರೆಯುವ ಅಕ್ಷರಮಾಲೆ ಕಂಗೊಳಿಸುತ್ತಿತ್ತು.[೨೨]

ಇಷ್ಟು ಮಡಿಯಾದ ಅಮಲಿನ ಸನ್ನಡತೆಯಿಂದ, ಜನಮನದ ಮನ್ನಣೆ ಗಳಿಸಿದ ಕೊಪಣತೀರ್ಥದ ಜಿನ್ನಮನು ಧವಲಾ ಟೀಕಾದ ಸಿದ್ಧಾಂತ ಗ್ರಂಥವನ್ನು ಪ್ರತಿಯೆತ್ತಿ ಬರೆದಿರುವ ಹಸ್ತಪ್ರತಿಯೇ ಇಂದಿಗೂ ನಮ್ಮವರೆಗೂ ಉಳಿದುಬಂದಿರುವ ಏಕೈಕ ಸಂರಕ್ಷಿತ ಹಸ್ತಪ್ರತಿ.

ಈ ಮಾಹಿತಿಯಿಂದ ಪ್ರತೀತವಾಗುವಂತೆ, ಧವಲಾ ಟೀಕಾಗ್ರಂಥಗಳ ಪ್ರತಿಕಾರರು ಅಸಾಮಾನ್ಯರು. ಅವರು ಕವಿಗಳು, ಪ್ರೌಢ ವಿದ್ವಾಂಸರು. ಭಾಷಾಮರ್ಯಾದೆಯನ್ನೂ ಅಕ್ಷರ ಸೌಷ್ಠವವನ್ನೂ ಆಗಮ ಪರಂಪರೆಯನ್ನೂ ಆಚಾರ್ಯರ ಗುರು-ಶಿಷ್ಯ ಗುರ್ವಾವಳಿಯನ್ನೂ ಬಲ್ಲವರು. ಕನ್ನಡ, ಸಂಸ್ಕೃತ, ಪ್ರಾಕೃತ ಭಾಷೆಗಳಲ್ಲಿ ಸಮದಂಡಿಯಾದ ಪ್ರಭುತ್ವ ಪಡೆದಿದ್ದರು. ಚಿತ್ರಕರ್ಮದಲ್ಲೂ ಪರಿಶ್ರಮ ಉಳ್ಳವರಾಗಿದ್ದರು. ಜಿನಮತದಲ್ಲಿ, ಜಿನಪೂಜೆಯಲ್ಲಿ, ಜಿನಾಗಮದಲ್ಲಿ ಜಿನಬಿಂಬದಲ್ಲಿ ಭಕ್ತಿ, ಶ್ರದ್ಧೆ, ಅನುರಾಗ, ನಿಷ್ಠೆಯನ್ನು ಹೊಂದಿದ್ದರು. ರವಿದೇವಿಯವರು ಇಂತಹ ಪ್ರತಿಕಾರರನ್ನು ಆರಿಸಿ ನಿಯೋಜಿಸಿದ್ದರೆಂಬುದು ಪ್ರತ್ಯೇಕವಾಗಿ ಉಲ್ಲೇಖಿಸಬೇಕಾದ ಸಂಗತಿ.

ಇದೇ ಧವಲಾ ಸಿದ್ಧಾಂತ ಗ್ರಂಥದ ಸತ್ ಪ್ರರೂಪಣ ವಿವರಣೆಯ ಕಡೆಯಲ್ಲಿ ಬಂದಿರುವ ಪ್ರಶಸ್ತಿ ಪದ್ಯಗಳು ಅದರ ಕಾಲ ನಿರ್ಣಯಕ್ಕೂ ಸಮಕಾಲೀನ ಆಚಾರ್ಯರ ಪರಿಚಯಕ್ಕೂ ಪ್ರಶಸ್ತವಾದ ಆಕರವಾಗಿದೆ. ಸತ್ಕರ್ಮ ಪಂಚಿಯನ್ನು ಶ್ರೀ ಮಾಘನಂದಿ ಸಿದ್ಧಾಂತದೇವರಿಗೆ ಬರೆಸಿಕೊಟ್ಟ, ಅಂದರೆ ಹಸ್ತಪ್ರತಿಯನ್ನು ಶಾಸ್ತ್ರದಾನವಾಗಿ ಮಾಡಿಸಿಕೊಟ್ಟ ಸಂಗತಿ ಕೂಡ ದಾಖಲಾಗಿದೆ. ಜಿನರ ಅಡಿದಾವರೆಗಳಲ್ಲಿ ದುಂಬಿಯಂತೆ ಇರುವ ಶಾಂತಿನಾಥನು ಎಣೆಯಿಲ್ಲದ ಸತ್ಪಾತ್ರದಾನ ಮಾಡುವುದರಲ್ಲಿ ನಿರತನಾಗಿದ್ದನು.[೨೩] ಆತನು ಸಮ್ಯಕ್ತ್ವ ಸಂಪನ್ನನಾಗಿದ್ದು ಬಹು ಕೀರ್ತಿ ಗಳಿಸಿದ್ದನು. ಈ ಶಾಂತಿನಾಥನಿಗೆ ಶಾಂತಿಸೇನ ಎಂಬುದು ಎರಡನೆಯ ಹೆಸರು, ಸೇನ ಎಂಬುದು ರೂಢಿಯ ಹೆಸರು.[೨೪] ಮಹಾಬಂಧ, ಅಂದರೆ ಮಹಾಧವಲಾದ ಸ್ಥಿತಿಬಂಧಾಧಿಕಾರದ ಕಟ್ಟ ಕೊನೆಯಲ್ಲಿರುವ ಈ ಪ್ರಶಸ್ತಿ ಪದ್ಯಗಳ ಮಹತ್ವವೆಂದರೆ ಶಾಂತಿಸೇನ ಮತ್ತು ಆತನ ಮಡದಿ ಮಲ್ಲಿಕಬ್ಬೆಯ ಉದಾರತೆಯನ್ನು ತಿಳಿಸಿರುವುದು. ಮಲ್ಲಿಕಬ್ಬೆ ಪತಿಗೆ ತಕ್ಕ ಸತಿ.[೨೫] ಈ ಅನುರೂಪ ದಾಂಪತ್ಯದ ಹಿರಿಮೆ ಜನಮನವನ್ನು ಗೆದ್ದಿತ್ತು. ಆಕೆಯು ಹೆಂಗಸರಲ್ಲಿ ರತ್ನಪ್ರಾಯಳಾಗಿದ್ದಳಲ್ಲದೆ ಜಿನ ಪೂಜೆಯಲ್ಲಿಯೂ ಬಗೆ ಬಗೆಯ ದಾನದಿಂದಲೂ ನಿರ್ಮಲ ಭಾವದಿಂದಲೂ ಗೌರವ ಗಳಿಸಿದ್ದಳು. ಆಕೆಯ ಮಹಿಮೆ ಮನೆ ಮಾತಾಗಿತ್ತು. ಗಂಡ ಹೆಂಡತಿ ಜಿನಭಕ್ತಿಯಲ್ಲಿ ಸರಿದೊರೆಯಾಗಿದ್ದಂತೆ ದಾನಧರ್ಮದಲ್ಲೂ ಸರಿಮಿಗಿಲಾಗಿದ್ದರು.

ರತಿದೇವಿಯೊಂದಿಗೆ ಈ ಮಲ್ಲಿಕಬ್ಬೆಯೂ ಬನ್ನಿಕೆರೆಯ ಪಾರ್ಶ್ವನಾಥ ಚೈತ್ಯಾಲಯದಲ್ಲಿ

ಶ್ರೀಪಂಚಮಿ ನೋಂಪಿಯನ್ನು ನೋಂತು ಪೂರೈಸಿದಳು. ಆ ರತಿದೇವಿಯಕ್ಕಳು ಶುಭಚಂದ್ರ ಸಿದ್ಧಾಂತದೇವರಿಗೆ ಧವಲಾವನ್ನು ಪ್ರತಿ ಮಾಡಿಸಿಕೊಟ್ಟಂತೆ ಈ ಮಲ್ಲಿಕಬ್ಬೆಯೂ ಶ್ರೀಪಂಚಮಿ ಉದ್ಯಾಪನೆಯ ನಿಮಿತ್ತದಿಂದ ಸತ್ಕರ್ಮ ಪಂಚಿಕೆಯನ್ನು ಪ್ರತಿ ಮಾಡಿಸಿ ಮಾಘನಂದಿ ಸಿದ್ಧಾಂತ ದೇವರಿಗೆ ಭಕ್ತಿಯಿಂದ ಒಪ್ಪಿಸಿದಳು.[೨೬] ಧವಲಾದ ಹಸ್ತಪ್ರತಿಯನ್ನು ಬರೆದು ಪ್ರತಿ ಮಾಡಿದವನು ಜಿನ್ನಮಯ್ಯನಾದರೆ ಈ ಮಹಾಬಂಧ ಸ್ಥಿತಿಬಂಧಾಧಿಕಾರದ ಸತ್ಕರ್ಮ ಪಂಚಿಯ ಸಂಪ್ರತಿಕಾರ ಉದಯಾದಿತ್ಯನೆಂಬ ಲಿಪಿಕಾರ.[೨೭] ಮೇಘಚಂದ್ರ ವ್ರತಿಪತಿಯ ಶಿಷ್ಯರಾದ ಹಾಗೂ ಸೈದ್ಧಾಂತಿಕಾಗ್ರೇಸರರೆನಿಸಿದ ಮಾಘನಂದಿ ವ್ರತೀಂದ್ರರಿಗೆ ಶಾಂತಿಸೇನನ ಕೀರ್ತಿವಧು ವನಿತಾರತ್ನಳಾದ ಮಲ್ಲಿಕಬ್ಬೆಯು ಸತ್ಪುಣ್ಯಾಕರ ಮಹಾಬಂಧವನ್ನು ಉದಯಾದಿತ್ಯನಿಂದ ಪ್ರತಿ ಮಾಡಿಸಿ ಶಾಸ್ತ್ರದಾನವೆಸಗಿದಳು. ದಾನಚಿಂತಾಮಣಿ ಅತ್ತಿಮಬ್ಬೆಯು ಸ್ಥಾವರತೀರ್ಥವಾದ ೧೫೦೧ ಬಸದಿಗಳನ್ನು ಮಾಡಿಸಿದಳು, ಅಜಿತ ಪುರಾಣವನ್ನು ರನ್ನನಿಂದ ಬರೆಸಿದಳು ಪೊನ್ನನ ಶಾಂತಿಪುರಾಣದ ಸಾವಿರ ಪ್ರತಿಮಾಡಿಸಿ ಹಂಚಿದಳು. ರವಿದೇವಿಯಕ್ಕ ಹಾಗೂ ಮಲ್ಲಿಕಬ್ಬೆ ಧವಲಾ ಮತ್ತು ಮಹಾಧವಲಾದ ಪ್ರತಿ ಮಾಡಿಸಿ ಜಂಗಮ ತೀರ್ಥವನ್ನು ಬೆಳಗಿದರು. ರವಿದೇವಿಯಕ್ಕನನ್ನು ಕುರಿತು ಹೇಗೆ ಶಾಸನದಿಂದಲೂ ಪೂರಕ ಮಾಹಿತಿ ದೊರೆತಿದೆಯೊ ಹಾಗೆ ಮಲ್ಲಿಕಬ್ಬೆ ಮತ್ತು ಆಕೆಯ ಪತಿಯನ್ನು ಕುರಿತು ಶಾಸನದಲ್ಲಿ ವಿವರ ಸಿಗುತ್ತದೆ.

ಗುಲಬರ್ಗಾ ಜಿಲ್ಲೆಯ ಚಿತಾಪುರ ತಾಲೂಕಿಗೆ ಸೇರಿರುವ ಹುಣಸಿ-ಹಡಗಲಿ ಹಿಂದಿನಿಂದಲೂ ಹೆಸರಾಂತ ಜೈನ ಕೇಂದ್ರ. ಹಡಂಗಿಲೆ ಎಂಬುದು ಈ ಊರಿಗೆ ಇದ್ದ ಮೊದಲ ಹೆಸರು. ಕ್ರಿ.ಶ. ೧೦೯೮-೧೦೯೯ರಲ್ಲಿ ಬರೆಯಲಾದ ಇಲ್ಲಿನ ಒಂದು ಶಾಸನ ಚಾರಿತ್ರಿಕ ದೃಷ್ಟಿಯಿಂದ ಮತ್ತು ಧವಲಾ ಟೀಕಾಗ್ರಂಥದ ಸಂಬಂಧವಾಗಿ ತುಂಬ ಮಹತ್ವದ್ದೆನಿಸಿದೆ.[೨೮] ವಿಶಾಲ ಕಲ್ಯಾಣಚಾಳುಕ್ಯ ಸಾಮ್ರಾಜ್ಯವನ್ನು ಹೆಸರಾಂತ ತ್ರಿಭುವನಮಲ್ಲ ವಿಕ್ರಮಾದಿತ್ಯ ಸಾಮ್ರಾಟನು (೧೦೭೬-೧೧೨೬) ಆಳುತ್ತಿರುವಾಗ ನಡೆದ ಕೆಲವು ಧಾರ್ಮಿಕ ಸಂಗತಿಗಳು ಈ ಹಡಗಲಿ ಶಾಸನದಲ್ಲಿ ನಮೂದಾಗಿವೆ.

ತ್ರಿಭುವನಮಲ್ಲ ಚಕ್ರವರ್ತಿಯ ಪಿರಿಯರಸಿ ಚಂದಲದೇವಿಯು ಅಲಂದೆ-೧೦೦೦ ಪ್ರದೇಶವನ್ನು ಆಳುತ್ತಿದ್ದಳು. ಮಹಾಮಂಡಲೇಶ್ವರನೂ ಕೊಪಣಪುರವರಾಧೀಶ್ವರನೂ ಪದ್ಮಾವತೀದೇವೀಲಬ್ಧ ವರಪ್ರಸಾದನೂ ಆದ ಬಿಬ್ಬರಸನು ಈ ಅಲಂದೆ -೧೦೦೦ ನಾಡಿನ ಭಾಗವಾಗಿದ್ದ ಗೊಂಕ-೧೨೦ ಮತ್ತು ಬಾಡ - ೬೦ಕ್ಕೆ ಮುಖ್ಯನಾಗಿದ್ದನು. ಆದಿಗೊಂಕ-೧, ಕತ್ತನೃಪಾಳ,ಮಲ್ಲಿದೇವ, ಗೊಂಕನೃಪ-೨, ಮತ್ತು ಬಿಜ್ಜರಸ ಇವರು ನಾಭಿರಾಜ ಅನ್ವಯ (ವಂಶ)ಕ್ಕೆ ಸೇರಿದವರು, ಕೊಪಣಪುರವರಾಧೀಶ್ವರರು, ಪದ್ಮಾವತೀದೇವೀ ಲಬ್ಧವರಪ್ರಸಾದರು. ಮುಗುಟ, ಹುಣಸಿ ಹಡಗಲಿ, ಹೋಡಲ, ಹರಸೂರು ಮೊದಲಾದ ಶಾಸನಗಳಲ್ಲಿ ನಾಭಿರಾಜ ಅನ್ವಯದ ಸಾಮಂತರ ಮಾಹಿತಿಗಳಿವೆ. ಮೊದಲು ಆಳಿಕೆ ಮಾಡಿದ ಆದಿಗೊಂಕ (ಗುಣಾಂಕ)ನಿಂದ ಈ ೧೨೦ ಗ್ರಾಮಗಳ ಕಂಪಣಕ್ಕೆ 'ಗೊಂಕ-೧೨೦' ಎಂದು ಹೆಸರಾಯಿತು.

ಈ ಪ್ರದೇಶದೊಳಗಿನ ಊರುಗಳಾದ ಹಡಂಗಿಲೆ (ಈಗಿನ ಹುಣಸಿ ಹಡಗಲಿ) ಹಿರಿಯ ಮೆಳಕುಂದೆ, ಕಿರಿಯ ಮೆಳಕುಂದೆ, ಮಣಲಿ (ಮಳ್ಳಿ), ಕೊಳನೂರು (ಕೊಳ್ಳೂರು), ಬೆಳಗುಪ್ಪ(ಪ್ಪಿ) ಮತ್ತು ಮೂಲವಳ್ಳಿ (ಮುನಳ್ಳಿ) ಇವುಗಳ ಪ್ರಭುವಾಗಿದ್ದವನು ಚೌಧುರೆ ರಕ್ಕಸಯ್ಯ. ಈತ ಕೋಟಿರಾಜ

ಮತ್ತು ತೈಲಬ್ಬೆ ದಂಪತಿಗಳ ಮಗ. ಅತ್ರೇಯ ಗೋತ್ರ ಪವಿತ್ರನಾದ ರಕ್ಕಸಯ್ಯನು ಇಂದ್ರನಂತೆ ಶೋಭಿಸುತ್ತ ಜೈನಮತ ಪ್ರಮುಖನಾಗಿದ್ದನು. ಕಡಲಿನ ಹಾಗೆ ಗಂಭೀರನಾಗಿದ್ದು ವಾದಿಗಳಿಗೆ ಕಣ್ಣೆನಂತಿದ್ದನು.[೨೯]

ಮಹಾಪುರುಷನಾದ ಚೌಧರೆ ರಕ್ಕಸಯ್ಯನು ಆಹಾರ, ಅಭಯ, ಔಷಧ ಮತ್ತು ಶಾಸ್ತ್ರದಾನಗಳೆಂಬ ಜೈನಧರ್ಮ ಪ್ರಣೀತ ನಾಲ್ಕು ಬಗೆಯ ದಾನಗಳನ್ನು ಮಾಡುವುದರಲ್ಲಿ ಸ್ವರ್ಗ ಮತ್ತು ಮೋಕ್ಷಗಳ ಸುಖ ಸಂಪದವನ್ನು ಅನುಭವಿಸುತ್ತಿದ್ದನು. ಚತುರ್ವಿಧದಾನವನ್ನೇ ಚತುರ್ವಿಧ ಪುರುಷಾರ್ಥವೆಂದು ತಿಳಿದು ದಾನ ಕೊಡುತ್ತಿದ್ದನು.[೩೦] ಆತನ ಮಡದಿ ಅಕ್ಕಣಬ್ಬೆ ಮನುಷ್ಯರಲ್ಲಿ ಅಭಿಮಾನಿ, ಸ್ತ್ರೀಯರಲ್ಲಿ ಅಪರೂಪದಾಕೆ. ಸತ್ಪಾತ್ರದಾನ ಮಾಡುವ ಹೆಚ್ಚುಗಾರಿಕೆಯಲ್ಲಿ, ದೇವಪೂಜೆಯ ಶೋಭೆಯಲ್ಲಿ, ಚಾರಿತ್ರ್ಯದ ಹಿರಿಮೆಯಲ್ಲಿ ಚೌಧರೆ ರಕ್ಕಸಯ್ಯ ದಂಪತಿಗಳು ಪಾರ್ಶ್ವನಾಥರ ಮತ್ತು ಶಾಂತಿನಾಥರ ಎರಡು ಬಸದಿಗಳನ್ನು ಮಾಡಿಸಿದರು. ಪಾರ್ಶ್ವನಾಥ ಬಸದಿಯನ್ನು ಕಲ್ಲಿನಲ್ಲಿ ಕಟ್ಟಿಸಿದ್ದರಿಂದ ಈ ಎರಡು ಬಸದಿಗಳ ಸುಣ್ಣಬಣ್ಣಕಾರಣೆಗೂ ರಿಪೇರಿಗೂ ದತ್ತಿಯಿತ್ತರು. ದೇವರಿಗೆ ಸಂತತವಾಗಿ ಮಾಡುವ ಅಭಿಷೇಕ, ಅಷ್ಟವಿಧಾರ್ಚನೆ, ಜೀವದಯಾಷ್ಟಮಿ ಮೊದಲಾದ ಪರ್ವದ ಮಹಾಪೂಜೆಗಳಿಗೂ ಬಂದುಹೋಗುವ ರಿಷಿಮುನಿಗಳ ಆಹಾರದಾನಕ್ಕೂ ಚೌಧುರೆ ರಕ್ಕಸಯ್ಯ ತನ್ನ ಸಾಮ್ರಾಜ್ಯದ ಮಹಾರಾಣಿಯಾದ ನೃತ್ಯ ವಿದ್ಯಾಧರಿ ಚಂದಲದೇವಿಯರ ಶ್ರೇಯೋಧರ್ಮವಾಗಿ ಹೊಲ, ತೋಟ, ಗಾಣಗಳನ್ನು ಬಿಟ್ಟುಕೊಟ್ಟನು. ಆತ ಈ ದಾನಗಳನ್ನು ಕೊಟ್ಟ ತೇದಿಯು ಚಾಳುಕ್ಯ ಚಕ್ರವರ್ತಿ ತ್ರಿಭುವನಮಲ್ಲನು ಪಟ್ಟಾಭಿಷಿಕ್ತನಾಗಿ ೨೩ ವರ್ಷಗಳಾಗಿದ್ದುದಕ್ಕೆ ಹೊಂದಿಕೆಯಾಗಿತ್ತು.

ಇಂತಹ ಮಹಿಮಾನ್ವಿತ ದಂಪತಿಗಳಾದ ಚೌಧರೆ ರಕ್ಕಸಯ್ಯ ಮತ್ತು ಅಕ್ಕಣಬ್ಬೆ ಸತ್ಯ, ಶೌಚ ಹಾಗೂ ಪುಣ್ಯ ಸಂಗಮಿಸಿದಂತಿದ್ದರು. ಈ ಜಿನಭಕ್ತರ ಮಗ ಶಾಂತಿವರ್ಮನೂ ತಾಯಿತಂದೆಯ ಎರಕದಲ್ಲಿ ಮಿಂದು ಬಂದವನು. ಶಾಂತಿವರ್ಮ (ಶಾಂತ)ನಿಗೆ ಜಿನನಾಥನು ಇಷ್ಟದೈವ, ಬಾಳ ಚಂದ್ರದೇವನು ಗುರುದೇವ, ಶ್ರಾವಕರೇ ನೆಂಟರಿಷ್ಟರು.[೩೨] ತ್ಯಾಗ ಮಾಡುವ ಉದಾರ ಗುಣದಲ್ಲಿ ಕರ್ಣನೆನಿಸಿದ್ದನು, ಮಡದಿಗೆ ಮನ್ಮಥನಂತೆ ಒಪ್ಪವಾಗಿದ್ದನು ಈ ಜಿನಭಕ್ತ. ಆದರೆ ಈತನ ಕೋಪಕ್ಕೆ ಪಾತ್ರರಾದರವರ ಪಾಲಿಗೆ ಕಾಳಸರ್ಪದಂತೆ ಭಯಂಕರನಾಗಿದ್ದನು.[೩೩] ಇಂತಹ ಶಾಂತಿವರ್ಮನ ಹೆಂಡತಿ ಮಲ್ಲಿಯಕ್ಕ. ಈಕೆ ವಿಶದ ಗುಣ ಸಂಪನ್ನೆ. ನೋಂಪಿಗಳನ್ನು ಆಚರಿಸುತ್ತಿದ್ದಳು. ಧರ್ಮಮೂರ್ತಿ ಮತ್ತು ಪತಿಭಕ್ತಿ ಪರಾಯಣೆ ತನ್ನ ಈ ಗುಣದಲ್ಲಿ ಮಲ್ಲಿಯಕ್ಕ ಪುರಾಣ ಪ್ರಸಿದ್ಧರಾದ ಸೀತೆಗೂ ಆರುಂಧತಿಗೂ ಪಾರ್ವತಿಗೂ ಸಮಾನವೆನಿಸಿದ್ದಳು.[೩೪] ಶಾಂತಿವರ್ಮ- ಮಲ್ಲಿಕಬ್ಬೆಯರು ಮೂಲಸಂಘದ ದೇಸಿಗಣದ ಪುಸ್ತಕ ಗಚ್ಛದ ಹಿರಿಯ ಸಮುದಾಯಕ್ಕೆ ಸೇರಿದವರಾಗಿದ್ದರು. ತಮ್ಮ ತಾಯಿ ತಂದೆಯರು ನೀಡಿದ್ದ, ಮಾಡಿದ್ದ ದಾನಧರ್ಮ ಕಾರ್ಯಗಳನ್ನು ನಿಲ್ಲಿಸದೆ ಮಲ್ಲಿಕಬ್ಬೆಯೂ ಶಾಂತನೂ ಶ್ರದ್ಧೆಯಿಟ್ಟು ಮುಂದುವರಿಸಿದರು. ಶಾಂತನಾಥನೂ ಆತನ ಪತ್ನಿ ಮಲ್ಲಿಕಬ್ಬೆಯೂ ಉದಯಾದಿತ್ಯನಿಗೆ ಆಶ್ರಯವಿತ್ತು ಮಹಾಧವಲಾದ ಸತ್ಕರ್ಮ ಪಂಚಿಯನ್ನು ಪ್ರತಿಮಾಡಿಸಿ ಮಾಘನಂದಿ ಆಚಾರ್ಯರಿಗೆ ಶಾಸ್ತ್ರದಾನ ಮಾಡಿದರು.

ಅಡಿ ಟಿಪ್ಪಣಿಗಳು

೧. ಅನ್ತು ಧರಿತ್ರಿಗಧಿಪತಿಯಾಗಿ ಧಡಿಗ ಮಾಧವರೀರ್ವ್ವರುಂ
ಕೊಂಕಣವಿಷಯ ಸಾಧನಾ ನಿಮಿತ್ತಂ ಬರುತ್ತಂ
ಮಂಡಲಿಯಂ ಕಂಡರದಱ ಪ್ರಭಾವಮೆಂತೆನೆ....
ನಾಲ್ಕು ಪೆಸರಿಂದೊಪ್ಪುವ ಮಂಡಲಿಯ ಬಹಿರ್ಬ್ಭಾಗದೊಳು
ಸೌಗನ್ಧಮಂ ಕೂಡೆ ಪಸರಿಸುವ ಸಹಸ್ರಪತ್ರವಪ್ಪಲರ್ದ್ದ
ತಾವರೆಗಳಿಂ ನಾನಾ ಜಲಚರಿಯುಲಿಪದಿಂದೊಪ್ಪುವ
ಹೆಗ್ಗೆಱೆಯಂ ಕಂಡು ಬೀಡಂ ಬಿಟ್ಟು ತದ್ಗಿರಿಯ ರಮ್ಯಂ
ಕಂಡು ಚೈತ್ಯಾಲಯಮಮಂ ಮಾಡಿಮೆಂದು ಸಿಂಹನಂದ್ಯಾಚಾರ್ಯ್ಯರ್
ಪೇಳೆ ಮಹಾಪ್ರಸಾದಮೆಂದು ಚೈತ್ಯಾಲಯಮಮಂ ಮಾಡಿಸಿ
ಕೆಲವಾನುದಿವಸದಿಂ ಕೋಳಾಲಕ್ಕೆ ಪೋಗಿ ಸುಖದಿಂ
ರಾಜ್ಯಂಗೆಯ್ಯುತ್ತಮಿರೆ॥
(ಎಪಿಗ್ರಾಫಿಯ ಕರ್ನಾಟಿಕ ಸಂಪುಟ VII-i (ಹಳೆಯ ಆವೃತ್ತಿ), ಶಿವಮೊಗ್ಗ - ೪, ೧೧೨೧-೨೨, ಪು. ೧೧, ಸಾಲು : ೩೫, ೩೭-೩೯)

೨. Nagarajaiah, Hampa : *The Later Gangas-Mandali Thousand*, Bangalore, 1999, page. 5

೩. ಎಪಿಗ್ರಾಫಿಯ ಕರ್ನಾಟಿಕ, ಸಂಪುಟ VII, ಶಿವಮೊಗ್ಗ ಶಾಸನಗಳು, ಸಂಖ್ಯೆ ೯೭, ೬, ೫೭, ೧೦, ೬೪ ಮತ್ತು ೪

೪. ಭುಜಬಳಗಂಗ ಪೆರ್ಮ್ಮಾಡಿದೇವಂ
ಮಂಡಲಿಯ ಬೆಟ್ಟದ ಮೇಲೆ ಮುನ್ನಂ ದಡಿಗ ಮಾಧವರ್
ಮಾಡಿಸಿದ ಬಸದಿಯಂ ತಮ್ಮ ಗಂಗಾನ್ವಯದವರ್
ಪಡಿಸಲಿಸುತ್ತಂ ಬರಲು ತದನನ್ತರಂ ಮರವೆಸನಾಗಿ ಮಾಡಿಸಿ
ಮಂಡಲಿ ಸಾಸಿರವೆಡದೊಳಱೆಯೆಪ್ಪತ್ತಱ ಬಸದಿಗಳಿನ್ದಪ್ಪುವ
ಮುನ್ನಾದುವಕ್ಕುಂ ಪಟ್ಟದ ಬಸದಿಯ ಪ್ರತಿಬದ್ಧವಾಗಿ
ಸಮಾದೇಯಮ್ಮುರ್ಖ್ಯವಾಗಿ ಬಿಟ್ಟ ದತ್ತಿ.....
ಪಟ್ಟದ ತೀರ್ತ್ಥದ ಬಸದಿಗೆ ಸಲುತ್ತಮಿರೆ॥
(ಅದೇ; ಪುಟ ೧೪, ಸಾಲು : ೬೯-೭೧)

೫. ಗಂಗನ ಪಟ್ಟಮಹಾದೇವಿಯಂತು ನೋಂತರುಮೊಳರೆ..
ಜಗದೊಳೊರ್ವಳೆ ಭಾಗಿಯೆ ತಾನೆ ಲೇಸೆಹುಃ ನನ್ನಿಯೊಳಿನ್ತು
ಗರ್ಬ್ಭಿತರಾರ್ಗ್ಗಳ ಚಂದಲದೇವಿಯಂದದಿಂ॥
ಶ್ರೀಮದ್ ಭುಜಬಳಗಂಗದೇವಂಗಂ ಗಂಗಮಹಾದೇವಿಗಂ....
(ಅದೇ : ಶಿವಮೊಗ್ಗ ೬೪, ಕ್ರಿ.ಶ. ೧೧೧೨, ಪುಟ ೬೮, ಸಾಲು : ೮೯)

೬. ಇನ್ತೆನಿಸಿದ ಬರ್ಮ್ಮದೇವನ ಪಟ್ಟಮಹಾದೇವಿಯೆಂತೆಂದಡೆ
ಜಿನೇಂದ್ರಪಾದಾಂಬುಜ ಮತ್ತು ಭ್ರಿಂಗೀಗುಣಾವಳೀ ಭೂಷಿತಾಂಗೀ
ನಿತಂಬಿನೀನಾಂ ತಿಳಕಾಯಮಾನಾ ವಿರಾಜತೇ ಗಂಗ ಮಹಾದೇವೀ॥
(ಅದೇ; ಶಿವಮೊಗ್ಗ ೫೭, ಕ್ರಿ.ಶ. ೧೧೧೫, ಪುಟ ೫೯, ಸಾಲು : ೩೯. ಇದೇ ಸಾಲು ಯಥಾವತ್ತಾಗಿ ಶಿವಮೊಗ್ಗ ಶಾಸನ ೬೪ರಲ್ಲೂ ಆವರ್ತನಗೊಂಡಿದೆ (ಸಾಲು : ೮೪-೮೫)

೭. ನೆಗರ್ದ್ದ ಪೆರ್ಮ್ಮಾಡಿ ದೇವರುಂ ಗಂಗ ಮಹಾದೇವಿಯರುಂ

ರಾಜ್ಯಂಗೆಯ್ಯುತ್ತಮಿರಲಾ ಮಹಾಮಂಡಳೇಶ್ವರನರ್ದ್ಧಾಂಗಲಕ್ಷ್ಮಿ
ಶ್ರೀವಧು ಜಯವಧು ಕೀರ್ತ್ತಿ
ಶ್ರೀವಧು ವಾಗ್ವಧುವೆನಿಪ್ಪ ವಧು ಗಂಗನೃಪಂ
ಗೀ ವಧುವೆನಿಸಿದ ಬಾಚಲ
ದೇವಿಯೊಳೆಣೆಯೆನ್ನೆನುಳಿದ ನೃಪವನಿತೆಯರಂ॥

ಈ ಚತುರಂಬುಧಿವೇಷ್ಟಿತ
ಭೂಚಕ್ರದ ಸತಿಯರೆನ್ನಲಾದಡವೇನೋ
ಬಾಚಲದೇವಿಗೆ ಸಮನೆ
ಕಾಚಮಣಿಪ್ರತತಿ ದೊರೆಯೆ ಚಿಂತಾಮಣಿಯೊಳ್॥

ಕಾಮಮದೇಭ ಗಾಮಿನಿಗೆ ದಾನಮೆ ಪೂಜ್ಯಮೆನಿಪ್ಪ ಪೆಂಪಿನಿಂ
ದೀ(ಮಹಿಮೂರು) ಮಂ ತಣಿಪಿ ಕಲ್ಪಕುಜಕ್ಕೆಣೆ.. ಸು
ದ್ಧಮತಿವರ ದಾನಗುಣ ಭೂಷಣೆ ದಾನವಿನೋದೆ ದಾನಚಿಂ
ನ್ತಾಮಣಿ ದಾನ ಕಲ್ಪಲತೆಯೆಂಬಿದು ಬಾಚಲದೇವಿಗೊಪ್ಪದೇ॥
(ಈ ವೃತ್ತ ಪದ್ಯದ ಛಂದಸ್ಸು ಕೆಟ್ಟಿದೆ)
(ಅದೇ : ಶಿವಮೊಗ್ಗ ೯೭)

೮. ಎಱಗದರಾತಿ ಭೂಭುಜರನಾಜಿಯೊಳಂಜಿಸಿ ತಂನಿಜಾಂಘ್ರಿಗ
ಳ್ಗೆಱಗಿಸುತಿರ್ಪ್ಪ ದರ್ಪ್ಪದ ಪೊಡ (ರ್ಪ್ಪಿನ ಪೆಂಪಿನ) ಗಣ್ಡನಪ್ಪ ತ
ನ್ನೆಱೆಯನ ನಾಟಕಂ ತನಗೆ ಗಂಗಮಹೀ ಭುಜನಂ ವಿಳಾಸದಿಂ
ದೆಱಗಿಸಿ (ಸಂದ) ಭಾಗ್ಯಭರದುಂನತಿ ಬಾಚಲದೇವಿಗೊಪ್ಪುಗಂ॥

ಅರಿಬಿರುದ ಪಾತ್ರಜಗದ (ಲೆ) ಧರೆಗೆಲ್ಲಂ ನೀನೆ ರಾಯಜಗದೆ
ನಾನೀ ಧರೆಗೆಲ್ಲಮೆನ್ದು ಪಿರಿದಾದರದಿಂದೆತ್ತಿಸಿ **ಪಾತ್ರಜಗದಳೆ**
(ಯೆಂದು) ಕುಡೆ ರಾಯಜಗದಳೆ ಪೆಸರ್ವಡೆದ (ಪಡೆಯೆ)ಡೆಯ ಕಡೆಯ
ಬಡವುಗಿಳೆಯಲ್ಪಡೆದಳೆ ರಾಯರೊಳಪ್ಪುಕುಡೆ ಬಾಚಲದೇವಿ ಪಾತ್ರಜಗದಳೆವೆಸರಂ॥
(ಅದೇ : ಶಿವಮೊಗ್ಗ ೯೭)

೯. ಭುಜಬಳಗಂಗಭೂಪಾಳ ವಿಶಾಳ ವಕ್ಷಸ್ಥಳವಾಸಿನಿ
ನೃತ್ಯ ವಿದ್ಯಾಪ್ರಭಾವ ಪ್ರಭುತ ನಿರ್ಮ್ಮಳಯಶೋವಿಭಾಸಿನಿ
ಪ್ರತಿಪಕ್ಷ ಗಾಯಕಾ ಗಾನಮಾನ ಪರಿಖಂಡನೆ
ಅನವರತ ದಾನಜನಿತ ವಿಬುಧ ಜನ ಹರ್ಷೆ
ಚತುರವಿದ್ಯಾವಿನೋದೆ ಕಸ್ತೂರಿಕಾಮೋದೆ
ಅರಿಬಿರುವ ಪಾತ್ರಜಗದಳೆ
ಜಿಗನ್ಧೋದಕ ಪವಿತ್ರೀಕೃತ ವಿನೀಳ ನೀಳ ಕುಂತಳೆ
ನಿಖಿಳ ಕುಳಪಾಳಿಕಾ ಗೀಯಮಾನ ವಿಶದ ಯಶೋಗೀತಿ
ಜಿನ ಶಾಸನ ಸಾಮ್ರಾಜ್ಯ ಯಶಪ್ಪತಾಕೆ
ಪರೋಪಕರಾ ಕಮಳಾಕರ ಚಕ್ರವಾಕೆ
ಸೌಭಾಗ್ಯ ಶಚೀದೇವಿ ಶ್ರೀಮದ್ ಬಾಚಲದೇವಿಯರ್

ಬನ್ನಿಕೆಱೆಯ ತ್ರಿಭೋಗಾಭ್ಯಂತರ ಸಿದ್ಧಿಯಿಂ ಸುಖದಿನಿಪ್ಪ(ರ್)॥
ಜಳಧಿಪರೀತ ಭೂವಲದೊಳ್ನೆಗರ್ದೊಪ್ಪುವ ಗಂಗವಾಡಿ ನಾ
ಡೊಳಗೆ ನೆಗರ್ತ್ತೆವೆತ್ತೆಸೆವ ಮಂಡಲಿನಾಳ್ಕೆ ಮುಖಕ್ಕೆ ಮೂಗೆನಿ
ಪ್ಪಳವಿಯನಾನ್ತ ಬನ್ನಿಕೆಱೆಯೊಳ್ ನೆಱೆದೊಪ್ಪುವ ಪಾರ್ಶ್ವನೀ
ಗಳಿಕುಳ ನೀಳ ಕುನ್ತಳೆಗೆ ಬಾಚಲದೇವಿಗಭೀಷ್ಟ ಸಿದ್ಧಿಯಂ॥
(ಅದೇ; ಶಿವಮೊಗ್ಗ ೯೭, ಕ್ರಿ.ಶ. ೧೧೧೩)

೧೦. ಅನ್ತೆನಿಸಿ ನೆಗರ್ದ್ದ ಶ್ರೀಮದ್ ಬಾಚಲದೇವಿ
ಈ ಭುವನದೊಳೆಂದುಂ ಪರಿಶೋಭಿತಮಿಂ (ತೆಂದು ಬಗೆದು)
ಆಹಾರಾಭಯ ಭೈಷಜ್ಯ ಶಾಸ್ತ್ರ ದಾನಮನೆನೆಯಲ್॥

ಮಾಡುವ ಬಗೆಯಿಂ ಮಣ್ಡಲಿ
ನಾಡೊಳಗಣ ಬನ್ನಿ (ಕೆಱೆಯೊಳ) ನಸುಯದಿಂದಂ
ಮಾಡಿಸಿದಳ್ ಜಿನಗೃಹಮಂ
ನಾಡಾಡಿಗಳುಂಬಮೆಂದು ಧರೆ ಪೊಗಳ್ವಿನೆಗಂ॥

ಸಂಗಙ್ಗಳೊಳಗಿದುತ್ತಮ
ಸಂಗಂ... ಮೂಲ ಸಂಗಮಾ ಸಂಗದು
ತ್ತುಂಗಂ ದೇಸಿಗಗಣಮಾ
ಸಂಗದೊಳಾ (ಜಿನಮುನಿ) ಗುಡ್ಡಿ ಬಾಚಲದೇವಿ॥

ಸುರ ಮನುಜ ಭುಜಗ ಭುವನಾ
ನ್ತರದೊಳ್ ಮುನ್ನಾದವಿನ್ನುದಿಪ್ಪುವವಿನ್ತೀ
ದೊರೆಯ ಜಿನಭವನಮಲ್ಲೆಂ
ಬರಮಾತು ದಿಟಂ ಬುಧಾಬ್ಜವನ ಕಳಹಂಸಾ॥
(ಅದೇ; ಶಿವಮೊಗ್ಗ ೯೭)

೧೧. ಮಱೆದುಮದೊರ್ಮ್ಮೆ ಲೌಕಿಕದ ವಾರ್ತ್ತೆಯನಾಡದ ಕೆತ್ತಬಾಗಿಲಂ
ತೆಱೆಯದ ಭಾನುವಸ್ತಮಿತಮಾಗಿರೆ ಪೋಗದ ಮೆಯ್ಯನೊರ್ಮ್ಮೆಯುಂ
ತುಱಿಸದ ಕುಕ್ಕುಟಾಸನಕೆ ಸೋಲದ ಗಂಡವಿಮುಕ್ತ ವೃತ್ತಿಯಂ
ಮಱೆಯದ ಘೋರ ದುಶ್ಚರ ತಪಶ್ಚರಿತಂ ಮಳಧಾರಿದೇವರಾ॥
[ಧವಲಾದ ಈ ಪದ್ಯವು ಕ್ರಿ.ಶ. ೧೧೨೩ರಲ್ಲಿ ಬರೆಯಲಾದ ಶ್ರವಣಬೆಳಗೊಳ ಶಾಸನವೊಂದರಲ್ಲಿ ಬಂದಿದೆ (ಎಕ-೨, ಶಾಸನ ಸಂಖ್ಯೆ - ೧೩೪ (೧೧೭), ಕ್ರಿ.ಶ. ೧೧೨೩, ಪುಟ - ೮೧, ಸಾಲು : ೮೮ ರಿಂದ ೯೩). ಅಲ್ಲದೆ ಈ ವೃತ್ತ ಪದ್ಯವನ್ನು ನೇಮಿಚಂದ್ರ ಮಹಾಕವಿ (೧೧೭೪) ತನ್ನ ನೇಮಿನಾಥ ಪುರಾಣದಲ್ಲಿ ಅನಾಮತ್ತಾಗಿ ಬಳಸಿದ್ದಾನೆ (ಆಶ್ವಾಸ - ೧, ಪದ್ಯ ಸಂಖ್ಯೆ - ೮೯) ಮತ್ತು ಹನ್ನೆರಡು ಪದ್ಯಗಳಲ್ಲಿ ಅವರ ಮಹಿಮೆಯನ್ನು ವರ್ಣಿಸಿದ್ದಾನೆ (೧-೮೧ ರಿಂದ ೯೨)]
ನೆಱೆಯೆ ತನುತ್ರಮಿಕ್ಕಿದವೊಲಿರ್ದ್ದ ಮಲಂ ತಿನೆ ಮೆಯ್ಯನೊಮರ್ಮೆಯುಂ
ತುಱಿಸುವುದಿಲ್ಲ ನಿದ್ದೆವರೆ ಮಗ್ಗುಲನಿಕ್ಕುವುದಿಲ್ಲ ಬಾಗಿಲಂ
ಕಿಱುತೆಯೆಂಬುದಿಲ್ಲುಗುಳ್ವುದಿಲ್ಲ ಮಲಂಗುವುದಿಲ್ಲಹೀನ್ನನುಂ

ನೆಱೆವನೆ ಬಣ್ಣಿಸಲ್ಗುಣಗಣಾವಳಿಯಂ ಮಳಧಾರಿದೇವರಂ॥
[ಧವಲಾ ಪ್ರಶಸ್ತಿ ಭಾಗದಲ್ಲಿ ಬಳಸಲಾಗಿರುವ ಈ ಚಂಪಕಮಾಲೆ ವೃತ್ತ ಪದ್ಯವು ಕೊಪ್ಪಳ ಶಾಸನಗಳಲ್ಲಿ ಬಂದಿದೆ : ನಾಗರಾಜಯ್ಯ, ಹಂಪ : **ಕೊಪ್ಪಳ ಶಾಸನಗಳು**, ಶಾಸನ ಸಂಖ್ಯೆ - ೪೩, (ತೇದಿರಹಿತ ಶಾಸನ) ಪು. ೧೧೪.]

೧೨. ಎಪಿಗ್ರಾಫಿಯ ಕರ್ನಾಟಿಕ, ಸಂಪುಟ-೨, (ಪರಿಷ್ಕೃತ), ಶ್ರವಣಬೆಳಗೊಳ ಶಾಸನ ಸಂಖ್ಯೆ, ೪೮೪ (೩೫೧) ಕ್ರಿ.ಶ. ೧೧೧೯; ಶಾಸನ ೧೫೮ (೧೨೯) ಕ್ರಿ.ಶ. ೧೧೨೦; ಶಾಸನ ೮೨ (೭೩) ಕ್ರಿ.ಶ. ೧೧೧೮; ಶಾಸನ - ೧೬೦ (೧೩೦) ಕ್ರಿ.ಶ. ೧೧೨೧

೧೩. ಈ ಆಚಾರ್ಯ ವರೇಣ್ಯರ ಮಾಹಿತಿಗಳು ಶ್ರವಣಬೆಳಗೊಳ ಶಾಸನ ಸಂಪುಟದಲ್ಲೂ ಕೊಪ್ಪಳ ಶಾಸನಗಳು ಸಂಪುಟದಲ್ಲೂ *Jaina Corpus of Koppala Inscriptions X-Rayed* (Nagarajaiah, Hampa : Bangalore, 1999) ಎಂಬ ಇಂಗ್ಲಿಷ್ ಪುಸ್ತಕದಲ್ಲೂ ಸಿಗುತ್ತವೆ.

೧೪. ಎಪಿಗ್ರಾಫಿಯ ಕರ್ನಾಟಿಕ, ಸಂಪುಟ VII-i, ಶಾಸನ ಸಂಖ್ಯೆ - ಶಿವಮೊಗ್ಗ ೬೪

೧೫. ಆಸ್ಥಾನ ಮಹಾವಿದ್ವಾನ್ ಸ್ಯಾದ್ವಾದ ವಿದ್ಯಾವಾರಿಧಿ, ನ್ಯಾಯತೀರ್ಥ ಸುಬ್ಬಯ್ಯ ಶಾಸ್ತ್ರೀ : ಷಟ್ ಖಂಡಾಗಮ, ಬೆಂಗಳೂರು, ೧೯೬೭

೧೬. ಎಪಿಗ್ರಾಫಿಯ ಕರ್ನಾಟಿಕ, ಸಂಪುಟ - ೨, ಶ್ರವಣಬೆಳಗೊಳ ಶಾಸನ ಸಂಖ್ಯೆ - ೧೫೮ (೧೨೯), ಕ್ರಿ.ಶ ೧೧೨೦, ಪುಟ ೯೯-೧೦೧

೧೭. ಅದೇ; ಶಾಸನ ಸಂಖ್ಯೆ - ೧೫೫ (೧೨೬) ಕ್ರಿ.ಶ. ೧೧೧೩, ಪುಟ. ೯೧

೧೮. ಅದೇ; ಶಾಸನ ಸಂಖ್ಯೆ - ೧೫೮ (೧೨೯)

೧೯. ಉತ್ತಮ ವಸ್ತು ಸುವರ್ಣ್ನಮ
ನುತ್ತಮಪಾತ್ರಕ್ಕೆಗೊಟ್ಟು ದೇಮಾಂಬಿಕೆ ತಾ
ನುತ್ತಮೆಯೆನೆ ಸಕಳಜನಂ
ಕತ್ತರಿಘಟ್ಟದೊಳ್ ಬಸದಿಯಂ ಮಾಡಿಸಿದಳ್॥
[ಎಪಿಗ್ರಾಫಿಯ ಕರ್ನಾಟಿಕ (ಪರಿಷ್ಕೃತ), ಸಂಪುಟ-೬ ಕೃಷ್ಣರಾಜ ಪೇಟೆ - ೩, ೨೪-೧೨-೧೧೧೮, (ಗುರುವಾರ), ಹೊಸಹೊಳಲು (ಮಂಡ್ಯ ಜಿಲ್ಲೆ, ಕೆ. ಆರ್. ಪೇಟೆ ತಾಲ್ಲೂಕು)]

೨೦. ಎಪಿಗ್ರಾಫಿಯ ಕರ್ನಾಟಿಕ, ಸಂಪುಟ - ೨, ಶಾಸನ ಸಂಖ್ಯೆ - ೧೫೮ (೧೨೯)

೨೧. ಶ್ರೀ ಕುಪಣಂ ಪ್ರಸಿದ್ಧ ಪುರುಮಾಪುರದೊಳ್ಮಿಗೆ ವಂಶವಾರ್ದ್ಧಿಶೋ
ಭಾಕರಮೂರ್ಜ್ಜಿತಂ ನಿಖಿಲ ಸಾಕ್ಷರಿಕಾಸ್ಯವಿಲಾಸದರ್ಪ್ಪಣಂ
ನಾಕಜನಾಥವಂದ್ಯ ಜಿನಪಾದ ಪಯೋರುಹಭೃಂಗನೆಂದು ಭೂ
ಲೋಮಕದ್ಯೆದೆ ವರ್ಣ್ನಿಪುದು ಜಿನ್ನಮನಂ ಮನುನೀತಿಮಾರ್ಗ್ಗನಂ॥

ಜಿನಪದ ಪದ್ಮಾರಾಧಕ
ಮನುಪಮ ವಿನಯಾಂಬುರಾಶಿ ದಾನವಿನೋದಂ
ಮನುನೀತಿಮಾರ್ಗ್ಗನ ಸತೀ
ಜನದೂರಂ ಲೌಕಿಕಾರ್ಥದಾನಿಗ ಜಿನ್ನಂ॥

ವಾರಿಧಿಯೊಳಗೆ ಮುತ್ತಂ
ನೇರಿದುವಂಗೊಂಡು ಕೋದು ವರುಣಂ ಮುದದಿಂ
ಭಾರತಿಯ ಕೊರಳೊಳಿಕ್ಕಿದ
ಹಾರಮನನುಕರಿಸಲೆಸೆಯೆವರೆವೊಂ ಜಿನ್ನಂ॥

೨೨. ಇನ್ನೊಂದು ಮಹತ್ವದ ಸಂಗತಿಯೆಂದರೆ ಈ ಜಿನ್ನನ ಕೀರ್ತಿಯನ್ನು ಅಜರಾಮರಗೊಳಿಸುವಂತೆ,

ಈತನು ಹುಟ್ಟಿದ ಊರಿಗೆ ಜಿನ್ನಾಪುರ ಎಂದು ಈತನ ಹೆಸರನ್ನೇ ಇಡಲಾಗಿದೆ. ಈ ಊರು ಇಂದಿಗೂ ಕೊಪ್ಪಳದ ಸಮೀಪದಲ್ಲಿರುವುದನ್ನು ಇತ್ತೀಚೆಗೆ ಸಂಶೋಧಿಸಿದ್ದೇನೆ.

೨೩. ಜಿನಪದಕಮಲ ಮಧುವ್ರತನ್
ಅನುಪಮ ಸತ್ಪಾತ್ರದಾನ ನಿರತಂ ಸಮ್ಯ
ಕ್ತನಿಧಾನಂ ಕೀರ್ತಿ ವಧೂ
ಮನಸಿಜನೆನೆ ಶಾಂತಿನಾಥನೆಸೆದಂ ಧರೆಯೊಳ್॥

೨೪. ವರಸಮ್ಯಕ್ತದ ದೇಶಸಂಯಮದ ಸಮ್ಯಗ್ಬೋಧದತ್ಯಂತ ಭಾ
ಸುರಹಾರತ್ರಿಕ ಸೌಖ್ಯಹೇತುವೆನಿಸಿರ್ದಾ ದಾನದೌದಾರ್ಯದೇ
ತರದಿಂದೀತನೆ ಜನ್ಮ ಭೂಮಿಯೆನುತಂ ಸಾನಂದದಿಂಕ್ಕಂರ್ತು ಭೂ
ಭರಮೇನಂ ಪೊಗಳುತ್ತಮಿರ್ಪ್ಪುದಭಿಮಾನಾಧೀನನಂ ಸೇನನಂ॥

೨೫. ಆ ವನಿತಾ ರತ್ನದ ಪೆಂ
ಪಾವಂಗಂ ಪೊಗಳಲರಿದು ಜಿನಪೂಜೆಯ ನಾ
ನಾವಿಧದ ದಾನದಮಲಿನ
ಭಾವದೊಳಾ ಮಲ್ಲಿಕಬ್ಬೆಯಂ ಪೊಲ್ವರಾರ್॥

೨೬. ಶ್ರೀ ಪಂಚಮಿಯಂ ನೋಂತು
ದ್ಯಾಪನಮಂ ಮಾಡಿ ಬರೆಸಿ ರಾದ್ಧಾನ್ತಮನಾ
ರೂಪವತಿ ಸೇನವಧುಜಿತ
ಕೋಪರ್ಶ್ರೀ ಮಾಘನಂದಿ ಯತಿಪತಿಗಿತ್ತಳ್॥

೨೭. ॥ಶ್ರೀ ಮಾಘಣಂದಿ ಸಿದ್ಧಾಂತ ದೇವರ್ಗ್ಗೆ ಸತ್ಕರ್ಮ್ಮ ಪಂಚಿಯಂ
ಶ್ರೀ ಮದುದಯಾದಿತ್ಯಂ ಪ್ರತಿಸಮಾನಂ ಬರೆದಂ ಮಂಗಲಮಹಾ॥

೨೮. ಇದುವರೆಗೆ ಅಜ್ಞಾತನಾಗಿದ್ದ ಈ ಶಾಂತಿನಾಥನು ಯಾರೆಂಬುದನ್ನು ಇತ್ತೀಚೆಗೆ ಸಂಶೋಧಿಸಿದ್ದೇನೆ. ಶಾಂತಿನಾಥನೂ ಆತನ ಪತ್ನಿ ಮಲ್ಲಿಕಬ್ಬೆಯೂ ಶಾಸನೋಕ್ತರಾಗಿದ್ದಾರೆ:

1. Desai, P.B. : *Jainism in South India and Some Jaina Epigraphs*, Solapur, 1957. pp. 241-52

ಹನುಮಾಕ್ಷಿ *ಗೋಗಿ* : ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ಹುಬ್ಬಳ್ಳಿ, ೧೯೯೬

೨೯. ಅತ್ರೇಯ ಗೋತ್ರ ಪವಿತ್ರಂ
ಸುತ್ರಾಮಂ ಜೈನಮತದ ವಿಭುಬವನಕ್ಕಂ
ನೇತ್ರಂ ವಾದಿಕುಳಕ್ಕಂ
ದಾತ್ರಿಯೊಳೀ ರಕ್ಕಸಂ ಪಯೋರಾಸಿವರಂ॥
[ಹುಣಸಿಹಡಗಲಿ ಶಾಸನ, ಕ್ರಿ.ಶ. ೧೦೯೯]

೩೦. ಪಡೆವಡೆ ರಕ್ಕಸನಂತಿರೆ
ಪಡೆವುದು ಪುರುಷಾರ್ತ್ಥಮಂ ಮಹಾಪುರುಷನವಂ
ಕುಡುವ ಚತುರ್ವ್ವಿಧ ದಾನಂ
ಕುಡುಗುಂ ಸ್ವರ್ಗ್ಗಾಪವರ್ಗ್ಗ ಸುಖ ಸಂಪದಮಂ॥ (ಅದೇ)

೩೧. (ಉತ್ಪಲಮಾಲಾವೃತ್ತಪದ್ಯ)

ಮಾನವ ಮಾನಿನೀ ಜನದೊಳಂ ದೊರೆಯೆಂಬುದೆ ಪಾತ್ರದಾನದು
ದ್ದಾನಿಗೆ ದೇವಪೂಜೆಯ ವಿಭಂತಿಗೆ ಶೀಳದ ಸಂಪದಕ್ಕೆ ತ
ತ್ಸಾನುಗುಣವ್ರತಾಚರಣ ಲೀಲೆಗೆ ಸಾಕ್ಷರ ರಕ್ಷಣ ಕ್ಷಮಾ
ನೂನು ಪರಾರ್ತ್ಥ ವ್ರಿತ್ತಿಗೆ ಮಹಾಸತಿ ರತ್ನಮನಕ್ಕಣಬ್ಬೆಯಂ।। (ಅದೇ)

೩೨. ಜಿನನಾಥಂ ದೆಯ್ವಂ
ಮುನಿನಾಥಂ ಬಾಳಚಂದ್ರದೇವಂ ಗುರುಭ
ವ್ಯನಿಕಾಯಂ ಬಾಂಧವಜನ
ಮೆನೆ ಜಗದೊಳ್ ಶಾಂತನಂತು ನೋಂತವರೊಳರೇ।।

೩೩. ಇನಜನೆನೆ ಚಾಗಿ ಕಾಂತೆಗೆ
ಮನಸಿಜನ ವೊಲೊಪ್ಪುತಿರ್ಪ್ಪನರ್ಹನ ಬಂಟಂ
ಮುನಿವಂಗೆ ಕಾಳಸರ್ಪ್ಪನು
ಮೆನಿಸಿದನೀ ಶಾಂತಿವರ್ಮ್ಮನನ್ವಿತ ಧರ್ಮ್ಮಂ।। (ಅದೇ)

೩೪. ಆತನ ಸತಿ ವಿಶದ ಗುಣ
ವ್ರತಾನ್ವಿತೆ ಧರ್ಮ್ಮಮೂರ್ತಿ ಪತಿಭಕ್ತಿಯೊಳಾ
ಸೀತೆಗರುಂಧತಿಗೆ ಕುಭಿ
ಜ್ಜಾತೆಗೆ ದೊರೆ ಮಲ್ಲಿಯಕ್ಕನೆಂಬಳ್ ಪೆಸರಿಂ।। (ಅದೇ)

೯

ಬಸದಿಗಳು ಸಾಂಸ್ಕೃತಿಕ ತವನಿಧಿ

ವಿಷಯ ಪ್ರವೇಶ ಉಪನ್ಯಾಸ

ಇತ್ತೀಚೆಗೆ ದೇಶೀಯ ಸಾಧನೆ ಹಾಗೂ ಚಿಂತನೆಗಳನ್ನು ಆಧುನಿಕೋತ್ತರ ಹಾಗೂ ವಸಾಹತೋತ್ತರ ಸಂವಾದಗಳ (post-modern and post-colonial discourse) ವಿಷಯವಾಗಿ ಸ್ವೀಕರಿಸಿ, ರಾಷ್ಟ್ರೀಯ ಅಂತಾರಾಷ್ಟ್ರೀಯ ಸಂಕಿರಣಗಳಲ್ಲಿ ಚರ್ಚಿಸಲಾಗುತ್ತಿದೆ. ಕರ್ನಾಟಕದ ಸಂದರ್ಭದಲ್ಲಿ ಇದುವರೆಗೆ ಹೆಚ್ಚಾಗಿ ಬೃಹತ್ ಸಂಸ್ಕೃತಿಗಳ (meta and mega-culture) ವ್ಯಾಪಕ ಅಧ್ಯಯನ ನಡೆದಿದೆ. ಬಹು ಸಂಖ್ಯಾತರ, ಬಹುಪ್ರಬಲರ ಹಾಗೂ ಬಹು ಪ್ರಮುಖ ಎಂದು ತಿಳಿದ ಸಂಗತಿಗಳನ್ನು ಕುರಿತ ಸ್ಥೂಲ-ವ್ಯಾಪಕ ಅಧ್ಯಯನ ನಡೆದಿದೆ. ಹಾಗೆಯೇ ಕೆಲವು ನಿರ್ದಿಷ್ಟ ಸಂಗತಿಗಳ ಸೂಕ್ಷ್ಮ ಅಧ್ಯಯನವೂ ಆಗಿದೆ. ಇತ್ತೀಚಿನ ದಶಕಗಳಲ್ಲಿ ಮೇಲುಸ್ತರದ ಶಿಖರ ಸಮೀಕ್ಷೆಗಿಂತ ಕೆಳಗಿನ, ಬುಡದ ವಿಷಯಗಳ ಅಧ್ಯಯನಕ್ಕೆ (sub-altern study) ಒತ್ತು ಬಿದ್ದಿದೆ.

"ಜೈನ ಪರಂಪರೆಯ ಅರಿವಿಗೆ, ಪುನಾರಚನೆಗೆ ನೆರವಾಗುವ ಅಧ್ಯಯನ ಸಾಮಗ್ರಿಯಲ್ಲಿ ಬಸದಿಗಳಿಗೆ ವಿಶೇಷ ಆದ್ಯತೆಯಿದೆ. ಜೈನ ಪರಂಪರೆ ಗರ್ಭೀಕರಿಸಿದ ಸಾಂಸ್ಕೃತಿಕ ಅಭಿವ್ಯಕ್ತಿಯ ಪಲ್ಲಟ ಮತ್ತು ಪರಿಣಾಮಗಳನ್ನು ಗುರುತಿಸಲೂ ಜೈನಧರ್ಮ ಸಂಬಂಧದ ವಾಗ್ವಾದಗಳ ಪರಿಚಯ ಪಡೆಯಲೂ ಬಸದಿಗಳು ಆಕರವಾಗಿವೆ. ಬಸದಿಗಳು ಗತಕಾಲದ ಇತಿಹಾಸಕ್ಕೆ, ಶ್ರುತ ಭಂಡಾರಕ್ಕೆ ತೆರೆದ ಮಹಾಬಾಗಿಲು. ಬಸದಿಗಳ ಬಾಗಿಲು ತೆರೆಯುವುದೆಂದರೆ ಜ್ಞಾನಕೋಶವನ್ನು ಅನಾವರಣಗೊಳಿಸಿದಂತೆ. ಉದಾತ್ತ ಅಮರತತ್ವ ಕಿರಣಗಳನ್ನು ಜೀವಕೋಟಿಗೆ ಬೀರಿದ ಅರಿವಿನ ಅರವಂಟಿಗೆಗಳು ಬಸದಿಗಳು. ಜಿನಮಂದಿರಗಳು ವಿದ್ಯಾದಾನ ಮಂದಿರಗಳೂ ಹೌದು. ಶ್ರಾವಕವರ್ಗಕ್ಕೆ ತಕ್ಕ ಮಾರ್ಗದರ್ಶನ ಬಸದಿಗಳಲ್ಲಿ ಸಿಗುತ್ತಿತ್ತು. ಅಲ್ಲಿಗೆ ಬಂದವರಿಗೆ ಮಾನಸಿಕ ನೆಮ್ಮದಿ, ಆತ್ಮ ಸಂತೃಪ್ತಿ, ಜ್ಞಾನಾರ್ಜನೆ

ಸಿಗುತ್ತಿತ್ತು. ಬಸದಿಗಳು ಸಾರ್ವಜನಿಕ ಹಿತದ ಸಾಂಸ್ಕೃತಿಕ ಚಟುವಟಿಕೆಗಳ ತವರುಮನೆ." (ನಾಗರಾಜಯ್ಯ, ಹಂಪ : ೧೯೯೮-ಬಿ : ೩೧)

"ಬಸದಿಗಳು ಜೈನಧರ್ಮದ ಸಂಘಟನೆಯಲ್ಲಿ ಗಣನೀಯ ಪಾತ್ರವಹಿಸಿವೆ. ಜೈನ ಸಮಾಜಕ್ಕೆ ಸಾಂಘಿಕ ಸಾಂಸ್ಥಿಕ ಸ್ವರೂಪವನ್ನು ಕೊಡುವುದರಲ್ಲಿ ಈ ಚೈತ್ಯಾಲಯಗಳು ಪ್ರಮುಖ ಕಾರ್ಯನಿರ್ವಹಿಸಿವೆ. ಪ್ರಸಿದ್ಧ ಧಾರ್ಮಿಕ ಆಚಾರ್ಯರು, ಮುನಿಸಂಘ ಚಾತುರ್ಮಾಸಕ್ಕೆಂದು ನೆಲೆ ನಿಂತಾಗಳಂತೂ ಬಸದಿಗಳು ಚಟುವಟಿಕೆಯ ಜೇನುಗೂಡುಗಳಾಗುತ್ತಿದ್ದುವು. ಪೂಜಾಸಂಪ್ರದಾಯದ ಉಗಮಕ್ಕೂ ಬಸದಿಗಳೇ ಜನ್ಮ ಸ್ಥಳ. ದಾನದತ್ತಿಗಳಿಂದ ಬಸದಿಗಳು ಬಾಳಿದವು, ಬೆಳೆದವು, ಬೆಳಗಿದುವು. ರಕ್ಷಿತರ ರಕ್ಷಣೆ ಇಲ್ಲದಾಗ ಸೊರಗಿದುವು, ಪಾಳುದೇಗುಲಗಳಾದುವು, ಧರ್ಮಾಂಧರ ಮತದ ಸೇಡಿನ ದಳ್ಳುರಿಗೆ ಈಡಾದುವು. ಮತದ್ವೇಷದ ಫಲವಾಗಿ ಅನ್ಯಧರ್ಮೀಯರ ಆಕ್ರಮಣಕ್ಕೆ ತುತ್ತಾದುವು. ಅಳಿದುಳಿದ ಕೆಲವು ಜಿನಾಲಯಗಳು ಶಿವಾಲಯಗಳಾಗಿ, ವೈಷ್ಣವ ದೇವಾಲಯಗಳಾಗಿ, ಮಸೀದಿಗಳಾಗಿ ಪರಿವರ್ತಿತವಾದುವು. ಬಸದಿಗಳ ಇತಿಹಾಸ ರಾಷ್ಟ್ರೀಯ ಹೆದ್ದಾರಿಯಲ್ಲ, ಕಲ್ಲು ಮುಳ್ಳುಕೊರಕಲುಗಳ ಏಳು ಬೀಳಿನ ಚರಿತ್ರೆ" (ನಾಗರಾಜಯ್ಯ ಹಂಪ : ಶಾಸನಗಳಲ್ಲಿ ಬಸದಿಗಳು; ೧೯೯೮ ಬಿ : ೩೧-೩೨).

ಬಸದಿಗಳ ಅಧ್ಯಯನ ಅಭಿವ್ಯಾಪಕವಾದುದು. ಬಸದಿಗಳು ಜನರಿಂದ, ಜನರಿಗಾಗಿ, ಜನರದೇ ಆದ ದೇವ ಮಂದಿರಗಳು. ಬಸದಿಗಳ ಸಂಬಂಧ ಕರ್ನಾಟಕಕ್ಕೆ ಕ್ರಿಸ್ತಶಕದ ಆರಂಭದ ಶತಮಾನಗಳಿಂದೀಚೆಗೇ ಹೊರತು ಅದರ ಆಚೆಗೆ ಹೋಗುವುದಿಲ್ಲ. ಅನೇಕ ಊರುಗಳನ್ನು ಬಸದಿಗಳಿಂದ ಗುರುತಿಸಲಾಗಿದೆ : ವಸದಿಗಾಲ್ ಬಸದಿಯೂರು (ಎಕ. VI (ಪ) ಚಾನ ೩೪೭ ೭-೮ ಶ), ಬಸ್ತಿಯ ಗದ್ದೆ (ಎಕ IV (ಪ) ಶ್ರೀ ಪ ೧೬. ೯ - ೧೦ಶ. ಕ್ಯಾತನಹಳ್ಳಿ), ಬಸ್ತಿಮಾದಳಿ (ಎಕ.VI (ಪ). ಹು. ೩೨, ೧೬೬೯. ತರೀಕಲ್ಲು), ಬಸ್ತಿಹಳ್ಳಿ (ಎಕ VI (ಪ) ೨೩, ೧೬೬೪). ಹೀಗೆಯೇ ಬಸ್ತಿಪುರ, ದೊಡ್ಡಬಸ್ತಿ, ಚಿಕ್ಕಬಸ್ತಿ, ಉಲ್ಲಾಳ ಬಸ್ತಿ ಮುಂತಾದ ಇನ್ನೂ ಹತ್ತಾರು ಊರುಗಳಿವೆ. [ನಾಗರಾಜಯ್ಯ, ಹಂಪ : ಚಂದ್ರಕೊಡೆ; ೧೯೯೭ ಸಿ: ೩-೧೦] ಬಸದಿ ಎಂಬುದು ಸಂಸ್ಕೃತದ ವಸತಿ ಎಂಬ ಶಬ್ದದ ತದ್ಭವ. ಇದು ಕನ್ನಡದಲ್ಲಿ ಮಾತ್ರ ಜೈನದೇವಾಲಯ ಎಂಬರ್ಥದಲ್ಲಿ ಬಳಕೆಯಲ್ಲಿದೆ. ಇಂದಿಗೂ ಹಿಂದಿಯಲ್ಲಿ ಮತ್ತು ಉತ್ತರಭಾರತದಲ್ಲಿ ಬಸ್ತಿ ಎಂದರೆ ಗ್ರಾಮ, ವಾಸಸ್ಥಳ ಎಂದೇ ಅರ್ಥ. ದೇವರ ಮನೆ ಎಂಬರ್ಥದಲ್ಲಿ ಕನ್ನಡ ಹಾಗೂ ದ್ರಾವಿಡಮೂಲದ ಕೋಯಿಲ್ ಮತ್ತು ಗುಡಿ ಎಂಬೆರಡು ಶಬ್ದಗಳಿವೆ. ಕೋ ಎಂದರೆ ಎರೆಯ, ಒಡೆಯ ಎಂದರ್ಥ; ಕೋ ಇರುವ ಇಲ್ ಯಾವುದೊ ಅದು ಕೋಯಿಲ್ ಆಯಿತು. ಕನ್ನಡದಲ್ಲಿಯೂ ದುಗ್ಗಮಾರ ಕೋಯಿಲ್ವಸದಿ ಎಂದು ಶಾಸನೋಕ್ತವಾಗಿದೆ [ಎಕ III (ಪ) ಹೆಕೊ. ೬೩.೯. ಶ. ಹೆಬ್ಬಲಗುಪ್ಪೆ] ಕೊಯಿಲ್ವಸದಿ ಎಂಬುದು ಕನ್ನಡ-ಸಂಸ್ಕೃತ ರೂಪಗಳು ಸೇರಿರುವ ಅರಿಸಮಾಸ, ನಾಗುಳವಸದಿ ಎಂಬಲ್ಲಿ [ಕ. ಇ. ೧೧. ೫. ೮೫೯] ವಸದಿ ಎಂಬ ರೂಪವಿದೆ; ವಸತಿ ಎಂಬ ರೂಪವೂ ಉಂಟು: ಜಿನಗೃಹದಲ್ಲಿಯುಂ ವಸತಿಯೆಂಬುದು [ನಾಗವರ್ಮ : ಅಭಿದಾನ ರತ್ನಮಾಲಾ ಕರ್ನಾಟಕ ಟೀಕೆ (೧೦೪೨) : ೧೩೪-೨೧]; ಪ್ರಯೋಗ-ಪಂಚವಸತಿ (ಹೊಂಬುಜ ಶಾಸನ) ಉತ್ತರಭಾರತದಲ್ಲಿಯೂ ದಿಲ್ವಾಡಾ (ದೇವ-ಕುಲ-ವಾಟಕ) ಪರ್ವತದ ಮೇಲಿನ ವಿಶ್ವವಿಖ್ಯಾತ

ವಿಮಲವಸತೀ (ವಸಹಿಕಾ ೧೦೩೧-೩೨) ಲೂಣ ವಸತೀ, ಖರತರ (ಚತುರ್ಮುಖ) ವಸತೀ ಎಂಬ ಹೆಸರು ಚಾಲ್ತಿಯಲ್ಲಿದೆ.

ದೇಶ್ಯ ಶಬ್ದವಾದ ಗುಡಿ ಎಂಬುದಕ್ಕೂ ಆಯತನ, ಆಲಯ ಎಂಬ ಶಬ್ದಗಳಿಗೆ ಇರುವಂತೆಯೇ, ಮನೆ-ಕುಟೀರ ಎಂಬುದೇ ಮೂಲಾರ್ಥ. ಈ ಶಬ್ದಕ್ಕೂ ಆಯತನ, ಆಲಯ, ವಸತಿ ಎಂಬ ಶಬ್ದಗಳಿಗೆ ಬಂದಂತೆ, ದೇವಾಲಯ-ದೇವಸ್ಥಾನ ಎಂಬರ್ಥವೂ ಬಳಕೆಗೆ ಬಂದಿದೆ :

> ಗುಡಿಗುಡಿ ಕೇರಿಕೇರಿಯೊಳು ವಂದನಮಾಲೆಗಳೆತ್ತ ನೋಟ್ಟಿಡಂ
>
> (ನಾಗರಾಜ, ಪುಣ್ಯಾಸ್ರವ, ೭೮೧)

> ಗುಡಿಬಸದಿಯೆ ಜಿನನೆ ಜಗ
> ಕ್ಕೊಡೆಯಂ ಬೇರಿನ್ನು ದೈವಮುಂ ಗುಡಿಯುಂ ಪೇಳ್ಪೊಡವಿಯೊಳೊಳವೆ।
>
> (ಷಡಕ್ಷರ ದೇವ (೧೬೭೭) ವೃಷಭೇಂದ್ರವಿಜಯ)

ಕೋಯಿಲ್ ಎಂಬ ಶಬ್ದದಂತೆ ಗುಡಿ ಎಂಬ ಶಬ್ದವೂ ಯಾವುದೇ ಧರ್ಮದ ದೇಗುಲ ಎಂಬ ವ್ಯಾಪಕಾರ್ಥದಲ್ಲಿ ನಿಂತಿದೆ, ಬಸದಿ ಎಂಬಂತೆ ಜೈನದೇವಾಲಯ ಎಂಬಷ್ಟೇ ಅರ್ಥಕ್ಕೆ ನಿಲ್ಲಲಿಲ್ಲ. ಕುಡಿ-ಗುಡಿ ಎಂಬೀ ದೇಶ್ಯ ಶಬ್ದವು ಸಂಸ್ಕೃತಕ್ಕೆ ಹೋಗಿ ಕುಟಿ ಎಂದಾಗಿದೆ; ಗಂಧಕುಟಿ ಎಂಬರೂಪವನ್ನು ನೋಡಬಹುದು.

ಬಸದಿ ಎಂಬ ಶಬ್ದರೂಪ ಕ್ರಿ.ಶ. ೮೦೦ರ ರಚನೆಯಾದ ವಡ್ಡಾರಾಧನೆಯಲ್ಲಿದೆ; ಶಿವಮಾರನ ಬಸದಿ ಎಂಬುದು ಶಾಸನಸ್ಥ ಪ್ರಥಮ ಪ್ರಯೋಗ (ಎಕ. ೨.ಶಾಸನ ಸಂಖ್ಯೆ ೪೦೫ ಸು. ೮೧೦). ಕನ್ನಡ ನಾಡಿನಲ್ಲಿ ಬಸದಿ ಎಂಬ ಶಬ್ದರೂಪ ತಡವಾಗಿ ಬಳಕೆಗೆ ಬಂದಿತೇ ಹೊರತು ಬಸದಿ ಗಳನ್ನುಕಟ್ಟುವ ಕೆಲಸ ತಡವಾಗಿಲ್ಲ. ಮಥುರಾ ಉತ್ಖನನದಲ್ಲಿ ದೊರೆತ ೧೭೨ ಜಿನಬಿಂಬಗಳಲ್ಲದೆ ಅಲ್ಲಿ ಪಾಸಾದ (ಸಂ. ಪ್ರಸಾದ), ಸ್ತೂಪ ಮತ್ತು ಹಲವು ಜಿನಮಂದಿರಗಳು ಕ್ರಿ.ಪೂ. ಎರಡನೆಯ ಶತಮಾನದಿಂದ ಇದ್ದುದು ತಿಳಿದು ಬಿಂದಿದೆ. ಬಿಹಾರಿನ ಲೋಹಾನಿಪುರ ಮತ್ತು ಚೌಸದಲ್ಲಿಯೂ ಕ್ರಿ.ಪೂ. ದ ಜಿನಮೂರ್ತಿಗಳು ಸಿಕ್ಕಿವೆ. ನಂದರಾಜನು ಕೊಂಡೊಯ್ದ ಜಿನ ಬಿಂಬವನ್ನು ಕಳಿಂಗದ ಮಹಾಮೇಘವಾಹನ ಖಾರವೇಲ ಸಾಮ್ರಾಟನು ಮರಳಿಗೆದ್ದು ತಂದುದನ್ನು ಉದಯಗಿರಿ ಬೆಟ್ಟದ ಮೇಲಿನ ಹಾಥಿಗುಂಫಾ ಗುಹೆಯ ಕ್ರಿ.ಪೂ. ಒಂದನೆಯ ಶತಮಾನದ ಶಾಸನ ದಾಖಲಿಸಿದೆ. ಬೌದ್ಧಧರ್ಮದ ಮಹಾವಂಶ (ಕ್ರಿ.ಶ. ಐದನೆಯ ಶತಮಾನ) ಗ್ರಂಥವು ಶ್ರೀಲಂಕದ ಅನುರಾಧಪುರದಲ್ಲಿ ಪಾಂಡುಕಾಭಯ ರಾಜನು ಕ್ರಿ.ಪೂ. ನಾಲ್ಕನೆಯ ಶತಮಾನದಲ್ಲಿ ಜೈನ ಮುನಿಗಳಿಗೆ ಜಿನಾಲಯವನ್ನು ಕಟ್ಟಿಸಿಕೊಟ್ಟುದನ್ನು ನಮೂದಿಸಿದೆ; ಮದುರೈ ಮತ್ತು ಶ್ರೀಲಂಕಾದ ಜೈನರಲ್ಲಿದ್ದ ಬಾಂಧವ್ಯವನ್ನು ಶಾಸನಗಳು ಅನುಮೋದಿಸಿವೆ.

ಕ್ರಿ.ಶ. ಒಂದರಿಂದ ಮೂರನೆಯ ಶತಮಾನದೊಳಗಿನ ಅವಧಿಯಲ್ಲಿ ರಚಿತವಾಗಿರುವ **ನಾಯಾಧಮ್ಮಕಹಾಓ** (ಸಂ. ಜ್ಞಾತೃಧರ್ಮ ಕಥಾ) ಮತ್ತು **ರಾಯಪಸೇಣಿಜ್ಜ** (ಸಂ. ರಾಜಪ್ರಶ್ನೀಯ) ಗ್ರಂಥಗಳಲ್ಲಿ ಜಿಣಘರ (ಜಿನಗೃಹ) ಮತ್ತು ಜಿನ ಪಡಿಮಾ (ಜಿನ ಪ್ರತಿಮಾ) ಹಾಗೂ ಅವುಗಳ ಪೂಜೆಯ ವಿವರಗಳಿವೆ. ಮಹಾಕವಿ ವಿಮಲಸೂರಿಯ (ಕ್ರಿ.ಶ. ೪೭೩) **ಪಊಮಚರಿಯ**

(ಪದ್ಮ ಚರಿತ) ಜೈನ ದೇವಾಲಯಗಳನ್ನು ಪರಿಚಯಿಸಿದೆ. ಇವಲ್ಲದೆ ಇನ್ನೂ ಇರುವ ವಿಪುಲ ಪೂರಕ ಆಕರಗಳ ಆಧಾರದಿಂದ ಕ್ರಿ.ಪೂ. ಅಯ್ದನೆಯ ಶತಮಾನದ ವೇಳೆಗೆ ಜಿನಬಿಂಬಗಳ ಪೂಜೆ ಹಾಗೂ ಜಿನಾಲಯಗಳ ನಿರ್ಮಾಣ ಆರಂಭವಾಗಿತ್ತೆಂದು ತಿಳಿದುಬರುತ್ತದೆ. ಪ್ರಾಚೀನವಾದ ಬಸದಿಗಳನ್ನು ಬೇರೆ ಜೈನ ಪರಿಭಾಷೆಯಿಂದ ಕರೆಯಲಾಗಿದೆ : ಅರ್ಹತ್ ಪರಮೇಷ್ಠಿ ಚೈತ್ಯಾಲಯ, ಅರ್ಹಗೇಹ, ಅರ್ಹತ್‌ದೇವಾಯತನ, ಜಿನಗೃಹ, ಜಿನಾಲಯ, ಚೇದಿಯ, ಚೈತ್ಯಾಲಯ, ಜಿನಗೇಹ, ಜಿನನಾಥಾವಾಸ, ಜಿನಭವನ, ಜಿನಮಂದಿರ, ತೀರ್ಥೇಶವಾಸಂ -ಮುಂತಾದ ಸಮಾನಾರ್ಥಕ ಪರ್ಯಾಯ ಶಬ್ದಗಳನ್ನು ಶಾಸನಗಳಲ್ಲಿ ಬಳಸಲಾಗಿದೆ. ಆಯತನ ಎಂದರೆ ಆಸರೆ, ನೆಲೆ, ಮನೆ, ವಾಸ ಸ್ಥಾನ ಎಂದರ್ಥವಾದರೂ ಅದಕ್ಕೆ ದೇವಾಲಯ ವೆಂಬರ್ಥ ರೂಢಿಯಾಯಿತು. ಅರ್ಹದಾಯತನ, ಜಿನಾಯತನ, ಸಿದ್ಧಾಯತನ ಎಂಬ ಶಬ್ದಗಳೊಂದಿಗೆ ಕೂಡಿಬಂದ ಕಾರಣ ಈ ಅರ್ಥ ಪ್ರಾಪ್ತವಾಯಿತು. ನಾಗವರ್ಮನು (೧೦೪೦) ದೇಗುಲಂಗಳನೆ ಆಯತನವೆಂಬುದು-ಎಂದಿದ್ದಾನೆ (ಅಭಿದಾನ ರತ್ನಮಾಲಾ ಕರ್ಣಾಟ ಟೀಕೆ : (ಸಂ) ವೆಂಕಟರಾವ್, ಎ ಮತ್ತು ಶೇಷ ಅಯ್ಯಂಗಾರ್. ಎಚ್. ೧೯೪೦ : ಪು. ೪೯-೧೩೮). ಅಂದರೆ ಆಯತನ ಎಂಬುದಕ್ಕೆ ಯಾವುದೇ ದೇವಾಲಯ ಎಂಬ ವ್ಯಾಪಕ ಅರ್ಥವಿತ್ತು: ಪಂಪಕವಿಯ ಪ್ರಯೋಗ ನೆನಪಾಗುತ್ತದೆ - 'ಅಲ್ಲಿಗಲ್ಲಿಗೊಡೆದ ಕೆಱಗಮದಾಯತನಕ್ಕಂ ಧನಮನಿತ್ತು ಜೀರ್ಣೋದ್ಧಾರಮಂ ಮಾಡಿಸುತ್ತಂ' ಪಾಂಡವರು ದೇಶ ಸಂಚಾರವೆಸಗಿದರಂತೆ (ಪಂಪಭಾರತಂ, ೨-೯೭ವ).

ಬಸದಿಗಳ ನಿರ್ಮಾಣಕ್ಕೆ ಕೆಸರು ಕಲ್ಲು ಇಟ್ಟವರು ಗಂಗರು. ಆ ಅಡಿಗಲ್ಲಿನ ಮೇಲೆ ಕಟ್ಟಿದವರು ಬನವಾಸಿಯ ಆದಿ ಕದಂಬರು. ಕದಂಬರನ್ನು ಸರಿಸಿ ಮೇಲೇರಿದ ಬಾದಾಮಿ ಚಾಳುಕ್ಯರು, ಅವರನ್ನು ಕೆಳಕ್ಕೆ ತಳ್ಳಿ ಬಂದ ರಾಷ್ಟ್ರಕೂಟರು, ರಾಷ್ಟ್ರಕೂಟರನ್ನೂ ಗಂಗರನ್ನೂ ಒಟ್ಟಿಗೆ ಸೋಲಿಸಿ ಗದ್ದುಗೆ ಹತ್ತಿದ ಕಲ್ಯಾಣ ಚಾಳುಕ್ಯರು, ಕಲಚುರ್ಯರು, ಸೇವುಣರು, ಹೊಯಿಸಳರು, ವಿಜಯನಗರದರಸುಗಳು ಹೀಗೆ ಒಬ್ಬರಾದ ಮೇಲೆ ಒಬ್ಬರು ಬಂದರು, ಬಸದಿಗಳ ಪರಂಪರೆಗೆ ಜೀವತುಂಬಿದರು, ವೈಭವ ತಂದರು. ರಾಜ ಮಹಾರಾಜರಿಂದ ಹಿಡಿದು, ಎಲ್ಲ ಶ್ರೇಣಿಯ ಅಧಿಕಾರಿಗಳು ಮೊದಲುಗೊಂಡು ಪ್ರಜೆಗಳವರೆಗೆ ಬಸದಿಗಳನ್ನು ಅಖಂಡವಾಗಿ ಅಧಿಕಾಧಿಕ ಸಂಖ್ಯೆಯಲ್ಲಿ ಮಾಡಿಸಲು ಕಾರಣಗಳಿದ್ದುವು, ಪ್ರೇರಣೆಗಳಿದ್ದುವು. ಕದಂಬರ ಹಲಸಿತಾಮ್ರಪಟ ಶಾಸನವೊಂದು ಅಯ್ದನೆಯ ಶತಮಾನದ ವೇಳೆಗೆ ರಾಜ - ಪ್ರಜೆಗಳಲ್ಲಿ ಬಸದಿಗಳ ಬಗ್ಗೆ ಹೆಪ್ಪುಗಟ್ಟಿದ್ದ ನಂಬಿಕೆಯನ್ನು ಹೀಗೆ ತಿಳಿಸಿದೆ :

> ಯಸ್ಮಿನ್ ಜಿನೇನ್ದ್ರ ಪೂಜಾ ಪ್ರವರ್ತ್ತತೇ ತತ್ರತತ್ರ ದೇಶ ಪರಿವೃದ್ಧಿಃ
> ನಗರಾಣಾಂ ನಿರ್ಭಯತಾ ತದ್ದೇಶ ಸ್ವಾಮಿನಾಂ ಚೋರ್ಜ್ಜಾ। ನಮೋ ನಮಃ।।
> (Corpus of Kadamba Inscriptions : No. 24 : 5 century C.E. : Halsi : p. 95)

ಜಿನೇಂದ್ರರ ಪೂಜೆ ನಡೆಯುವ ನಾಡು ಬೆಳೆಯುತ್ತದೆ, ನಗರಗಳಲ್ಲಿ ಹೆದರಿಕೆ ಇರುವುದಿಲ್ಲ, ರಾಜನು ಊರ್ಜಿತನಾಗುವನು. ಈ ತಿಳಿವಳಿಕೆಗೆ ಅನುಗುಣವಾಗಿ ಹೊಯ್ಸಳ ವಿಷ್ಣುವರ್ಧನನ ಮಹಾಪ್ರಧಾನನಾದ ದೇವರಾಜನು ರಾಜ, ರಾಷ್ಟ್ರ ಯಶೋ-ಧನ ವೃದ್ಧ್ಯರ್ಥವಾಗಿ ತ್ರಿಕೂಟ ಪಾರ್ಶ್ವಜಿನಭವನವನ್ನು ಮಾಡಿಸಿದನು. [ಎಕ. VII(R) ನಾಮಂ. ೬೪, ೧೧೪೫, ಪು. ೪೫-೪೯ ಯಲ್ಲಾದಹಳ್ಳಿ). ಒಂದನೆಯ ಮಾರಸಿಂಹನ ದಂಡನಾಯಕ ಶ್ರೀವಿಜಯನು ಬಸದಿಗಳನ್ನು ಎಲ್ಲೆಲ್ಲಿ

ಕಟ್ಟಿಸಿದನೆಂಬುದು ಮಣ್ಣೆತಾಮ್ರ ಪಟದಲ್ಲಿ ದಾಖಲಾಗಿದೆ [ಎಕ. . IX (BLR). ನೆಮಂ. ೬೦ ಕ್ರಿ.ಶ. ೭೯೮);

ಗ್ರಾಮೇ ಪುರೇ ನದೀ ತೀರೇ ಗಿರೌ ದ್ವೀಪೇ ಸರೋಂತಿಕೇ
ಪ್ರಾವರ್ತ್ತಯತ್ಸ್ವ ಕೀರ್ತ್ಯಾಭಾಮಯೋನೇಕಾಂ ವಸತಿಂ ಪ್ರಭುಃ॥

ವಾಸ್ತವವಾಗಿ ಪ್ರತಿಯೊಬ್ಬ ಉಪಾಸಕರೂ ತಮ್ಮ ಗಳಿಕೆಯನ್ನು ಹೇಗೆ ಬಸಳಬೇಕೆಂಬುದನ್ನು ಶ್ರಾವಕಾಚಾರಗಳು ಹೇಳಿವೆ:

ಜಿನೇಂದ್ರ ಭವನೋದ್ಧಾರಂ ಪುಸ್ತಕಂ ತಥಾ
ಸಂಘಶ್ಚತುರ್ವಿಧಶ್ಚೇತಿ ಸಂಪ್ರೋಕ್ತಂ ಕ್ಷೇತ್ರಂ ಸಪ್ತಕಂ॥

ಬಸದಿಗಳ ಜೀರ್ಣೋದ್ಧಾರ, ಜಿನ ಪ್ರತಿಮೆಮಾಡಿಸುವುದು, ಶಾಸ್ತ್ರಗ್ರಂಥ ಪ್ರಕಟಿಸುವುದು, ಋಷಿ ಆರ್ಜಿಕಾ ಶ್ರಾವಿಕಾ ಶ್ರಾವಕ ಎಂಬ ಚತುಃಸ್ಸಂಘಕ್ಕೆ ಆಹಾರಾದಿ ದಾನ ಮಾಡುವುದು-ಈ ಏಳು ಕ್ಷೇತ್ರಗಳಲ್ಲಿ ಗೃಹಸ್ಥನು ತನ್ನ ನ್ಯಾಯಾರ್ಜಿತ ಸಂಪತ್ತನ್ನು ವಿನಿಯೋಗಿಸುತ್ತ ಆತ್ಮ ಕಲ್ಯಾಣದ ಹಾದಿಯನ್ನು ಕಾಣಬೇಕು. 'ಧರ್ಮಂ ಪ್ರಾಗೇವ ಚಿಂತೇತ್' ಎಂಬ ವಾಕ್ಯಾರ್ಥವನ್ನು ಪರಿಭಾವಿಸಿ ತಮಗೆ ಶ್ರೇಯೋನಿಬಂಧನಾರ್ಥವಾಗಿ ಉರ್ವೀತಿಳಕವೆಂಬ ಪಂಚಬಸದಿಯನ್ನು ಮಾಡಿಸಿದ ಚಟ್ಟಲದೇವಿ ಸ್ಮರಣೀಯ ಸ್ತ್ರೀ :

ಕೆಱೆಬಾವಿ ಬಸದಿ ದೇಗುಲ
ಮಱವಂಟಿಗೆ ತೀರ್ಥಶತ್ರಮಾರವೆ ಮೊದಲಾ
ಗಱೆಕೆಯ ಧರ್ಮ್ಮಾದಿಗಳಂ
ನೆಱೆ ಮಾಡಿಸಿ ನೋನ್ತಳೆಸಕೆ ಚಟ್ಟಲದೇವಿ॥
(ನಾಗರಾಜಯ್ಯ, ಹಂಪ : ಸಾಂತರರು - ಒಂದು ಅಧ್ಯಯನ : ೧೯೯೭ A : ೧೩೪-೩೫)

ದಾನ ಚಿಂತಾಮಣಿ ಅತ್ತಿಮಬ್ಬೆ ನಮ್ಮ ಊಹೆಗೂ ಎಟುಕದ ೧೫೦೧ ಬಸದಿಗಳನ್ನು ಮಾಡಿಸಿದ್ದು ಈ ಬಗೆಯ ಘನೋದ್ದೇಶಗಳಂದಲೇ -

ಆ ಸತಿ ಮುಮ್ಮಾಡಿಸಿದಾ
ಸಾಸಿರದಯ್ನೂರು ಬಸದಿಗಿದು ಕಳಶಮೆನ
ಲ್ಭಾಸುರಮಾಯ್ತು ಜಿನೇಂದ್ರಾ
ವಾಸಂ ತೊಳಗುವ ಸುವರ್ಣ ಕಳಶೋನ್ನತಿಯಿಂ॥
(ಸೌ.ಇ.ಇ.XI-i. ೧೦೦೭ ಲಕ್ಕುಂಡಿ; ಕಮಲಾ ಹಂಪನಾ, ಗುಣದಂಕಕಾರ್ತಿ ಅತ್ತಿಮಬ್ಬೆ ೧೯೯೪: ೪೪)

ಲಕ್ಕುಂಡಿಯ ಬ್ರಹ್ಮಜಿನಾಲಯವು ಚಕ್ರವರ್ತಿದತ್ತಿಯನ್ನು ಪಡೆದುದಲ್ಲದೆ, ಚಕ್ರವರ್ತಿಯಿತ್ತ ಹೊನ್ನ ಕಳಶದಿಂದಲೂ ಸುಶೋಭಿತವಾಯಿತು. ಚಾಳುಕ್ಯ ಚಕ್ರವರ್ತಿದತ್ತಿಯನ್ನು ಪಡೆದ ಬಸದಿ ಇದೊಂದೇ. ಬಂಕೇಯ ರಾಜ (ಬಂಕರಸ) ನು ಕೊಳನೂರು (ಕೊಣ್ಣೂರು) ಗ್ರಾಮದಲ್ಲಿ ಕ್ರಿ.ಶ. ೮೬೦ರಲ್ಲಿ ಮಾಡಿಸಿದ ಜಿನೇಂದ್ರ ಭವನಕ್ಕೆ ರಾಷ್ಟ್ರಕೂಟ ಚಕ್ರವರ್ತಿ ಅಮೋಘ ವರ್ಷನು ಚಕ್ರವರ್ತಿದತ್ತಿ ನೀಡಿದ್ದನು. ಈ ರೀತಿ ಬಸದಿಗಳನ್ನು ಕಟ್ಟಿಸುವ ಮನಸ್ಸುಗಳಿಗೆ ಪ್ರಚೋದನೆ

ನೀಡಿದ ಸಂಗತಿಗಳಲ್ಲಿ ಸ್ವಾರಸ್ಯವಾದ ಕೆಲವನ್ನು ಮತ್ತೊಂದು ಶಾಸನ ನಿರೂಪಿಸಿದೆ : ಪಡೆದರ್ಥಂ ಕಳ್ಳರಿಂ ದಾಯಿಗರಿನಳಿಪರಿಂ ಭೂಪರಿಂ ಕಿಚ್ಚಿನಿಂದಂ ಕಿಡುಗುಂ - ಎಂದು ಅರಿತು ಕಾಳಿಯಕ್ಕಳು ಬಸದಿ ಕಟ್ಟಿಸಿದಳಂತೆ [ಎ.ಕ.. VI. (BLR) ಚಿಕ್ಕಮಗಳೂರು ೧೩೭. ಕ್ರಿ.ಶ. ೧೧೩೦ ಸೆಂಬನೂರು).

ರಾಜಗೃಹದ ಒಳಹೊರಗುಗಳನ್ನು ಶ್ರೇಣಿಕನು ಜಿನಗೃಹಗಳಿಂದ ಆಚ್ಛಾದಿಸಿದನೆಂದೂ ಆತನ ಅಧೀನ ಸಾಮಂತ ಮನ್ನೆಯರೂ ಸಹ ಮಗಧ ರಾಜ್ಯದ ಎಲ್ಲೆಡೆಗಳಲ್ಲಿ ಬಸದಿಗಳನ್ನು ಮಾಡಿಸಿದರೆಂದೂ ಪುನ್ನಾಟಸಂಘ ಜಿನಸೇನರು ಹರಿವಂಶಪುರಾಣದಲ್ಲಿ ತಿಳಿಸಿದ್ದಾರೆ ಮತ್ತು ಬಸದಿಗಳ ಉದ್ದ, ಅಗಲ, ಎತ್ತರ ಕುರಿತೂ ಹೇಳಿದ್ದಾರೆ. ಪುನ್ನಾಟ ಜಿನಸೇನರ (೭೮೮ ಕ್ರಿ.ಶ.) ಪ್ರಕಾರ ಬಸದಿಯ ಅಳತೆಯು ಈ ಪ್ರಮಾಣದಲ್ಲಿರಬೇಕು : ಉದ್ದ ೧೦೦ಅಡಿ ಇದ್ದರೆ ಅಗಲ ೫೦ ಮತ್ತು ಎತ್ತರ ೭೫ ; ಇದು ಸ್ಥೂಲವಾಗಿ ೧;೧/೨ : ೩/೪ ಪ್ರಮಾಣದಲ್ಲಿದೆ. ಹಿಂದೂ ದೇವಾಲಯ ರಚನೆ ಕುರಿತ ವಾಸ್ತುಗ್ರಂಥಗಳಾದ ಗುರುದೇವ ಪದ್ಧತಿ, ತಂತ್ರಾಗಮ ಸಮುಚ್ಚಯ, ಬೃಹತ್ ಸಂಹಿತಾ, ಮಯಮತ, ಮಾನಸಾರ, ಪ್ರಯೋಗ ಮಂಜರಿ, ಶೈವಾಗಮ ನಿಬಂಧನಗಳಲ್ಲಿ ದೇವಾಲಯವನ್ನು ಅಲ್ಪ (ಕನಿಷ್ಠ), ಮಧ್ಯಮ (ಮ), ಉತ್ತಮ (ಉತ್ಕೃಷ್ಟ) ಎಂದು ವರ್ಗೀಕರಿಸಿ ಅವುಗಳ ಉದ್ದಗಲ ಉತ್ತರಾದಿಗಳನ್ನು ನಿರ್ದೇಶಿಸಿರುವುದಕ್ಕೂ ಜೈನವಾಸ್ತು ಶಾಸ್ತ್ರಕೃತಿಗಳ ಸಂವಾದಿನಿರೂಪಣೆಗೂ ಇರುವ ಸಾಮ್ಯ ವೈಷಮ್ಯಗಳನ್ನು ಕುರಿತು ತೌಲನಿಕವಾಗಿ ನೋಡಬೇಕು.

ಬಸದಿಗಳನ್ನು ಕಟ್ಟುವ ವಿಧಿ, ವಿಧಾನ, ಜಿನ ಬಿಂಬಗಳಪರಿಮಾಣ, ಪ್ರಮಾಣ, ಆಸನಕ್ರಮ, ಗರ್ಭಗೃಹ, ಅಂತರಾಳ, ಸಭಾಮಂಡಪ, ಪ್ರೇಕ್ಷಗೃಹ, ತೋರಣ (ದ್ವಾರ), ಪ್ರಾಕಾರ (ಕೂಟ), ಸ್ತಂಭ-ಕುಡ್ಯ, ಪ್ರದಕ್ಷಿಣಾಪಥ, ವೇದಿಕಾ (ಪಟ್ಟಿಕೆ), ಗವಾಕ್ಷ, ಗೋಪುರ, ಏಕಕೂಟ - ದ್ವಿಕೂಟ-ತ್ರಿಕೂಟ-ಪಂಚಕೂಟ, ವಾಪಿಕಾ, ಪಾಳಿಧ್ವಜಾದಿಗಳು, ಯಕ್ಷ-ಯಕ್ಷಿಯರು, ದ್ವಾರಪಾಲಕರು, ಹಸ್ತಗಳ ಸಂಖ್ಯೆ, ಕೈಗಳಲ್ಲಿ ಹಿಡಿಯುವ ಆಯುಧಾದಿ ವಸ್ತುಗಳು, ಮುಕ್ಕೊಡೆ, ಪ್ರಭಾವಳಿ, ಲಾಂಛನವಿನ್ಯಾಸ, ಮಾನಸ್ತಂಭ, ದ್ವಾರಬಂಧದ ಇಕ್ಕೆಲಗಳು, ತಳವಿನ್ಯಾಸ, ಇವುಗಳ ಮೇಲೆ ಇರುವ ಅಲಂಕರಣಗಳಲ್ಲಿ ಆನೆ ಸಿಂಹ ಕುದುರೆ ಮಕರ ಹಂಸ ಮಯೂರ ಮಾಲಾಲಂಕಾರಣ ಮೊದಲಾದುವನ್ನು ಖಚಿತ ಪಡಿಸಿರುವ ಜೈನ (ದಿಗಂಬರ - ಶ್ವೇತಾಂಬರ) ವಾಸ್ತು ಶಾಸ್ತ್ರಗ್ರಂಥಗಳಿವೆ : ಅಪರಾಜಿತ ಪೃಚ್ಛಾ, ಅಭಿದಾನ ಚಿಂತಾಮಣಿ, ಆಚಾರ ದಿನಕರ, ತಿಲೋಯಪಣ್ಣತ್ತಿ, ನಿರ್ವಾಣಕಲಿಕಾ, ಪ್ರತಿಷ್ಠಾತಿಲಕ, ಪ್ರತಿಷ್ಠಾಸಾರ ಸಂಗ್ರಹ, ಪ್ರತಿಷ್ಠಾಸಾರೋದ್ಧಾರ, ಪ್ರವಚನಸಾರೋದ್ಧಾರ, ವಸುನಂದಿ ಆಚಾರ್ಯ ಮತ್ತು ಜಯಸೇನ ಆಚಾರ್ಯರ ಪ್ರತಿಷ್ಠಾ ಪಾಠಗಳು-ಮೊದಲಾದವು ಮಾನ್ಯವಾಗಿವೆ. ಪ್ರಾಚೀನ ಕಾಲದಿಂದ ಬಸದಿಗಳ ನಿರ್ಮಾಣದ ಒಂದು ವ್ಯಾಕರಣ ಪರಂಪರೆ ಬೆಳೆದು ಬಂದಿದೆ. ಪ್ರಾಕೃತ ಬೋಧಪಾಹುಡದಲ್ಲಿಯೇ ಆಯತನ, ಚೈತ್ಯಗೃಹ, ಪ್ರತಿಮಾ, ದರ್ಶನ, ಬಿಂಬ, ಜಿನಮುದ್ರಾ, ಜ್ಞಾನ, ದೇವ, ತೀರ್ಥ, ಅರ್ಹತ್, ಪ್ರವ್ರಜ್ಯಾ-ಈ ಹನ್ನೊಂದರ ಸ್ವರೂಪದ ಪರಿಚಯವಿದೆ (ನಾಗರಾಜಯ್ಯ, ಹಂಪ : ಸುಚಿತ್ರ ಗೊಂಬುಜ; ೧೯೯೭):

ಸ್ಥಾಪಯೇದರ್ಹತಾಂ ಛತ್ರತ್ರಯಾಶೋಕ ಪ್ರಕೀರ್ಣಕೇ
ಪೀಠಂ ಭಾಮಂಡಲಂ ಭಾಷಾಂ ಪುಷ್ಪವೃಷ್ಟಿಂ ಚ ದುಂದುಭಿಂ॥

ಸ್ಥಿರೇತರಾರ್ಚಯೋಃ ಪಾದ ಪೀಠಾಧ ಸ್ಥಾದ್ಯಥಾಯಥಂ
ಲಾಂಛನಂ ದಕ್ಷಿಣೇ ಪಾರ್ಶ್ವೇ ಯಕ್ಷೋಯಕ್ಷಿಚ ವಾಮಕೇ॥

ಜಿನಪ್ರತಿಮೆಯು ಮುಕ್ಕೊಡೆ ಅಶೋಕ ವೃಕ್ಷ ಚಾಮರ ಸಿಂಹಪೀಠ ಪ್ರಭಾಮಂಡಲ ದಿವ್ಯಧ್ವನಿ ಪುಷ್ಪವೃಷ್ಟಿ ದುಂದುಭಿ- ಎಂಬ ಅಷ್ಟಮಹಾ ಪ್ರಾತಿಹಾರ್ಯಗಳಿಂದ ಕೂಡಿದುದೂ ಸ್ಥಿರ ಮತ್ತು ಚರ ಬಿಂಬಗಳ ಪಾದ ಪೀಠದ ಕೆಳಗೆ ಲಾಂಛನ ಉಳ್ಳುದೂ ಬಲಭಾಗದಲ್ಲಿ ಯಕ್ಷರೂ ಎಡಭಾಗದಲ್ಲಿ ಯಕ್ಷಿಯರೂ ಇರುವಂತಹುದೂ ಆಗಿರಬೇಕೆಂದು ಪ್ರತಿಷ್ಠಾಪಾಠದಲ್ಲಿ ಜಯಸೇನರು ಹೇಳಿದ್ದಾರೆ. ಆದರೆ ಬಾದಾಮಿ ಮತ್ತು ಐಹೊಳೆ ಜೈನಗುಹೆಗಳಲ್ಲಿ ಪಾರ್ಶ್ವಜಿನರ ಶಿಲ್ಪದಲ್ಲಿಯೂ, ಎಲ್ಲೋರ ೩೨ನೆಯ ಸಂಖ್ಯೆಯಲ್ಲಿರುವ ಪಾರ್ಶ್ವರ ಶಿಲ್ಪದಲ್ಲಿಯೂ, ಕಲಕತ್ತೆಯ ಇಂಡಿಯನ್ ಮ್ಯೂಸಿಯಮ್ಮಿನಲ್ಲಿರುವ ಆರನೆಯ ಶತಮಾನದ (ಸಂಖ್ಯೆ A 25 III) ಮತ್ತು ಒಂಬತ್ತನೆಯ ಶತಮಾನದ ಎರಡು ಪಾರ್ಶ್ವಜಿನರ ಶಿಲ್ಪದಲ್ಲಿಯೂ ಪದ್ಮಾವತಿಯಕ್ಷಿಯು ಜಿನರ ಬಲಭಾಗದಲ್ಲಿದ್ದು ಧರಣೇಂದ್ರ ಯಕ್ಷನು ಎಡಭಾಗದಲ್ಲಿರುವುದು ಅಪವಾದವೆನಿಸಿದರೂ ಗಮನಾರ್ಹವಾಗಿದೆ. (Nagarajaiah, Hampa: Jina-Parsva Temples in Karnataka : 1999)

ಆಚಾರ್ಯ ಆಶಾಧರರು ಪ್ರತಿಷ್ಠಾಸಾರೋದ್ಧಾರದಲ್ಲಿ ಜಿನಬಿಂಬಗಳ ಮೂರ್ತಿಲಕ್ಷಣಗಳನ್ನು ಸ್ಪಷ್ಟಪಡಿಸಿದ್ದಾರೆ :

ಶಾಂತಂ ಪ್ರಸನ್ನ ಮಧ್ಯಸ್ಥ ನಾಸಾಗ್ರಸ್ಥಾವಿಕಾರ ಕೃತ್
ಸಂಪೂರ್ಣ ಭಾವ ರೂಪಾನುವಿದ್ಧಾಂಗಂ ಲಕ್ಷಣಾನ್ವಿತಂ।
ರೌದ್ರಾದಿ ದೋಷ ನಿರ್ಮುಕ್ತ ಪ್ರಾತಿಹಾರ್ಯಾಂಕ ಯಕ್ಷಯುಕ್
ನಿರ್ಮಾಪ್ಯವಿಧಿನಾ ಪೀಠೇ ಜಿನಬಿಂಬಂ ನಿವೇಶಯೇತ್॥

ಅಲ್ಲದೆ ಪ್ರಾತಿಹಾರ್ಯ ಸಮಸ್ತ ಅಲಂಕಾರ ಆಯುಧ ವಾಹನ ವಿಭೂಷಿತ ಯಕ್ಷರ ಸಹಿತ ವಿಭೂಷಿತವೂ ಸರ್ವಾಂಗ ಸುಂದರವೂ ಆದ ತೀರ್ಥಂಕರರ ಪ್ರತಿಮೆಗಳನ್ನು ಮಾಡಿಸಬೇಕು. ಪ್ರಾತಿಹಾರ್ಯ ಮತ್ತು ಯಕ್ಷ-ಯಕ್ಷಿಯರು ಇಲ್ಲದ ನಿರಾಕಾರ ಬಿಂಬವು ಸಿದ್ಧ ಪರಮೇಷ್ಠಿಗಳದ್ದಾಗಿರುತ್ತದೆ. ಇಂತಹ ಜಿನರ ಸಿದ್ಧರ ಬಿಂಬಗಳನ್ನು ಪ್ರತಿಮಾ ಲಕ್ಷಣವಿಧಿ (ಪಡಿಮಾ ಲಕ್ಷಣ ವಿಹಿ) ಪ್ರಕಾರ ಹರಳು ಚಿನ್ನ ಬೆಳ್ಳಿ ರತ್ನ ಹಿತ್ತಾಳೆ ಮತ್ತು ಸ್ಫಟಿಕಮಣಿ - ಮುಂತಾದವುಗಳಿಂದ ಮಾಡಬೇಕೆಂದು ವಸುನಂದಿಯು ಶ್ರಾವಕಾಚಾರದಲ್ಲಿ (ಗಾಥಾ. ೩೯೦) ಹೇಳಿದ್ದಾನೆ. ಮೂಡಬಿದ್ರಿ, ಶ್ರವಣಬೆಳಗೊಳ, ಹೊಂಬುಜಗಳಲ್ಲಿ ಇಂತಹ ನವರತ್ನದ ಜಿನಬಿಂಬಗಳು ಇದ್ದು, ಇವನ್ನು ಸಿದ್ಧಾಂತ ದರ್ಶನ ರೂಪದಲ್ಲಿ ಯಾತ್ರಾರ್ಥಿಗಳ ದರ್ಶನಕ್ಕೆ ಇಡುವರು. ಬಸದಿಗಳು ಕಲೆಯನ್ನು ಅಲಕ್ಷಿಸಿಲ್ಲ; ಅದರ ಸಾಂಸ್ಕೃತಿಕ ಮುಖ ಪ್ರತ್ಯೇಕ ಅಧ್ಯಯನಕ್ಕಿರುವ ಸಾಮಗ್ರಿ.

ಜಿನರ, ಜಿನಶಾಸನ ದೇವತೆಗಳ ಬಿಂಬಗಳನ್ನು ಆನೆಯ ಮೇಲೆ ಅಂಬಾರಿ ಅಂದಣಗಳಲ್ಲಿಟ್ಟೂ ಪಲ್ಲಕ್ಕಿಯಲ್ಲಿಟ್ಟೂ ತೇರಿನಲ್ಲಿ ಕೂಡಿಸಿಯೂ ಮೆರವಣಿಗೆ ಮಾಡಿ ಉಪಾಸಕವೃಂದ ಆನಂದಿಸುವುದನ್ನು ಮಹಾಕವಿ ರತ್ನಾಕರವರ್ಣಿ ವರ್ಣಿಸಿದ್ದಾನೆ :

ದೀಕ್ಷಾಗ್ರಾಹಿಗಳಂ ದಯಾಶ್ರುತಮನಾ ಯಕ್ಷರ್ಕಳಂ ನಿಮ್ಮಸ
ಲ್ಲಕ್ಷದ್ಬಿಂಬಮನಾನೆಯಂದಣಗಳೊಳ್ಪಲ್ಲಕ್ಕಿಯೊಳ್ ತೇರೊಳಿ

ಟ್ಟಕ್ಷೂಣೋತ್ಸವದಿಂ ಪ್ರಭಾವನೆಗಳಂ ಮಾಳ್ಪಂ ನಿರಾಯಾಸದಿಂ
ಮೋಕ್ಷ ಶ್ರೀಗಧಿನಾಥನಪ್ಪುದರಿದೇ ರತ್ನಾಕರಾಧೀಶ್ವರಾ॥

೨೪ ಜನ ತೀರ್ಥಂಕರರಲ್ಲಿ ಕೆಲವು ತೀರ್ಥಂಕರರಿಗೆ ಸ್ವತಂತ್ರ ರೂಪದಲ್ಲಿ ಒಂದೂ ಬಸದಿ ನಿರ್ಮಾಣವಾಗದೆ, ಮತ್ತೆ ಕೆಲವು ತೀರ್ಥಂಕರರಿಗೆ ಹೆಚ್ಚಿನ ಬಸದಿಗಳಿವೆ. ರೂಪಮಂಡನದಲ್ಲಿಯೂ ಈ ರೀತಿ ಹೇಳಿದೆ:

ಜಿನಸ್ಯ ಮೂರ್ತಯೋನಂತಾಃ ಪೂಜಿತಾಃ ಸರ್ವಸೌಖ್ಯದಾಃ
ಚತುರ್ಸ್ತ್ರೋSತಿಶಯ್ಯೈರ್ಯುಕ್ತಾಸ್ತಾಸ್ತಾಂ ಪೂಜಾ ವಿಶೇಷತಃ।
ಶ್ರೀ ಆದಿನಾಥೋ ನೇಮಿಶ್ಚ ಪಾರ್ಶ್ವೋ ವೀರ ಚತುರ್ಥಕಃ
ಚಕ್ರೇಶ್ವರ್ಯಂಬಿಕಾ ಪದ್ಮಾವತೀ ಸಿದ್ಧಾಯಿಕೇತಿ ಚ॥

ಆದಿನಾಥ ನೇಮಿನಾಥ ಪಾರ್ಶ್ವನಾಥ ವೀರವರ್ಧಮಾನ - ಈ ನಾಲ್ವರು ತೀರ್ಥಂಕರರ ಹಾಗೂ ಚಕ್ರೇಶ್ವರಿ ಅಂಬಿಕಾ ಪದ್ಮಾವತೀ ಸಿದ್ಧಾಯಿಕಾ - ಈ ನಾಲ್ವರು ಜಿನ ಶಾಸನದೇವತೆಗಳ ಪ್ರಸಾರಾಧಿಕ್ಯ ಕರ್ನಾಟಕದಲ್ಲೂ ಕಂಡು ಬಂದಿದೆ. ಈ ನಾಲ್ವರಲ್ಲಿ ಮತ್ತೆ ಪಾರ್ಶ್ವಜಿನರ ಮತ್ತು ಪದ್ಮಾವತೀ ದೇವಿಯ ಬಸದಿಗಳೂ ಮೂರ್ತಿಗಳೂ ವಿಪುಲವಾಗಿವೆ. ಇದಕ್ಕೆ ಶಿಲ್ಪ-ಶಿಲ್ಪೇತರ ಕಾರಣಗಳಿವೆ (ನಾಗರಾಜಯ್ಯ, ಹಂಪ : ಯಕ್ಷ ಯಕ್ಷಿಯರು: ೧೯೭೬). ಜಿನಬಿಂಬಗಳನ್ನು ನಿಲ್ಲಿಸುವುದರಲ್ಲಿ, ಬಸದಿಗಳ ಮುಖ್ಯದ್ವಾರವನ್ನು ನಿಲ್ಲಿಸುವುದರಲ್ಲಿ ಪೂರ್ವಕ್ಕೆ ಮುಖ ಮಾಡಿರಬೇಕೆಂದು ಶಾಸ್ತ್ರಗಳಲ್ಲಿ ಹೇಳಿದೆ. ಕುಲಾಚಲ, ವಕ್ಷಾರ, ಕುಂಡಗಿರಿ, ರುಚಕ ಪರ್ವತಗಳ ನಾಲ್ಕು ದಿಕ್ಕಗಳಲ್ಲೂ ಪೂರ್ವಕ್ಕೆ ಮುಖ ಮಾಡಿದ ಚೈತ್ಯಗೃಹಗಳಿದ್ದುವು (ಜಿನಸೇನಾಚಾರ್ಯ : ಹರಿವಂಶ ಪುರಾಣ : ೫.೭೨೯). ಬಸದಿಗೆ ಒಂದೇ ಬಾಗಿಲು ಇದ್ದಲ್ಲಿ ಅದು ಪೂರ್ವಕ್ಕೇ ಇರಬೇಕು, ಎರಡು ಬಾಗಿಲು ಇದ್ದಲ್ಲಿ ಪೂರ್ವ-ಪಶ್ಚಿಮಗಳಿಗಿರಬೇಕು, ಮೂರು ಇದ್ದಲ್ಲಿ ಪೂರ್ವ ಪಶ್ಚಿಮಗಳ ಮಧ್ಯದಲ್ಲೊಂದು ಇರಬೇಕು, ಆದರೆ ದಕ್ಷಿಣ ದಿಕ್ಕಿಗೆ ಮಾತ್ರ ಬಾಗಿಲು ಇಡಕೂಡದು ಎಂದು ಹೇಳಿದೆ (ಪ್ರಸಾದ ಮಂಡನ : ೫.೯)

ಏಕ ದ್ವಾರಂ ಭವೇತ್ ಪೂರ್ವಂ ದ್ವಿದ್ವಾರಂ ಪೂರ್ವ ಪಶ್ಚಿಮೇ
ತ್ರಿದ್ವಾರಂ ಮಧ್ಯಜಂ ದ್ವಾರಂ ದಕ್ಷಿಣಾಸ್ಯಂ ವಿವರ್ಜಯೇತ್॥

ಕರ್ನಾಟಕದ ಪ್ರಾಚೀನ ಜಿನಭಕ್ತೆಯರಲ್ಲಿ ಗಣ್ಯಸ್ತ್ರೀಯಾದ ಕುಂದಾಚ್ಚಿಯು ಕ್ರಿ.ಶ. ೭೭೬-೭೭ರಲ್ಲಿ ಕಟ್ಟಿಸಿದ 'ಲೋಕತಿಲಕ ಜಿನಾಲಯ'ವು ಉತ್ತರ ದಿಕ್ಕಿನಲ್ಲಿತ್ತು; ಧರ್ಮಕಾರ್ಯ್ಯಯಾ ನಿರ್ಮ್ಮಿತಾಯ ಶ್ರೀಪುರೋತ್ತರ ದಿಶಮಲಂಕರ್ವ್ವತೇ ಲೋಕ ತಿಲಕ ನಾಮ್ನೇ ಜಿನಭವನಾಯ[EC. VIII(R) ನಾ.ಮಂ ೧೪೯ (IV ನಾಮಂ ೮೫) ಕ್ರಿ.ಶ. ೭೭೬-೭೭ ದೇವರಳ್ಳಿ (ಮಂಡ್ಯ ಜಿ. (ನಾ.ಮಂ.ತಾ.) ಪು. ೧೪೪-೪೭]. ಇದು ಶ್ರೀಪುರದ ಉತ್ತರ ದಿಕ್ಕಿನಲ್ಲಿದ್ದ ಬಸದಿಯೇ ಹೊರತು ಇದರ ಬಾಗಿಲು ಪೂರ್ವಕ್ಕೆ ಮುಖ ಮಾಡಿದ್ದುದನ್ನು ನಿರಾಕರಿಸಿಲ್ಲ.

ಬಸದಿಗಳನ್ನು ಕುರಿತು ಕಳೆದ ನಲವತ್ತು ವರ್ಷಗಳ ನನ್ನ ಅಧ್ಯಯನದಿಂದ ಮನವರಿಕೆಯಾಗಿರುವಂತೆ, ಕರ್ನಾಟಕದಲ್ಲಿ ಮಧ್ಯಕಾಲೀನ ಯುಗದ ವೇಳೆಗೆ ಸುಮಾರು ಎಂಟು

ಸಾವಿರ ಬಸದಿಗಳಿದ್ದವು. ಅವುಗಳಲ್ಲಿ ಮತ್ತು ಒಟ್ಟು ಕರ್ನಾಟಕದಲ್ಲಿ ಮೊಟ್ಟ ಮೊದಲು ಕಟ್ಟಿಸಿದ ಬಸದಿಗಳನ್ನು ಹೆಸರಿಸುತ್ತೇನೆ.

ಇಂದಿಗೆ ಸರಿಯಾಗಿ ನೂರು ವರ್ಷದ ಹಿಂದಿನ ಘಟನೆ : ೧೮೯೭ರಲ್ಲಿ ಕೋಲಾರ ಜಿಲ್ಲೆ ಮಾಲೂರು ತಾಲೂಕು ನೊಣಮಂಗಲ ಹಳ್ಳಿಯ ರೈತರು ಊರಿನ ಹೊರಗೆ ದಿಬ್ಬದ ಹೊಲವನ್ನು ಉಳುತ್ತಿದ್ದರು. ನೇಗಿಲಿಗೆ ಗಟ್ಟಿಯಾದ ಭಾಗ ತಾಗಿತು. ಅಗೆದು ನೋಡಿದರು. ಅದೊಂದು ಹಾಳುಗೋಡೆ. ಉತ್ಖನನಕಾರ್ಯ ನಡೆಯಿತು. ಪಾಳು ಬಸದಿಯ ತಳಭಾಗವೂ ಗೋಡೆಗಳೂ ಕಂಡುವು. ಗೋಡೆಗಳನ್ನು ಒಂದೂವರೆ ಅಡಿ ದಪ್ಪದ ಬಹುದೊಡ್ಡ ಇಟ್ಟಿಗೆಗಳಿಂದ ಕಟ್ಟಲಾಗಿತ್ತು: ಇಟ್ಟಂಗಿಗಳು ನಲಂದಾದಲ್ಲಿ ದೊರೆತ ಮಾದರಿಯಲ್ಲಿದ್ದುವು. ಪೂರ್ವಕ್ಕೆ ಮುಖ ಮಾಡಿದ್ದ ಬಾಗಿಲ್ವಾಡದ ಬಳಿಯ ಸೀಳುಗುಂಡಿಯಲ್ಲಿ ಸಿಕ್ಕಿಹಾಕಿಕೊಂಡಿದ್ದ ತಾಮ್ರಪಟ ಶಾಸನಗಳು (ಮಾಲೂರು ೭೩) ಸಿಕ್ಕಿದುವು. ಇದೇ ಬಸದಿಯ ಒಳಗಡೆ ಉತ್ತರಕ್ಕಿದ್ದ ಗೋಡೆಯಲ್ಲಿ ಮುಂದೆ ಚಾಚಿದ ಒಂದು ಕಪಾಟು (ಅಲಮಾರು) ಇತ್ತು. ಈ ಬಾಗಿಲವಾಡದೊಳಗಡೆ ಇನ್ನೊಂದು ತಾಮ್ರ ಶಾಸನ (ಅದೇ, ಮಾಲೂರು. ೭೨) ಸಿಕ್ಕಿತು. ಈ ಕಪಾಟದಲ್ಲಿಯೇ ಬಸದಿಗೆ ಸಂಬಂಧಿಸಿದ ಇನ್ನೂ ಕೆಲವು ಪೂಜಾಪರಿಕರಗಳೂ ದೊರೆತುವು. ಅವುಗಳ ವಿವರ : ೧. ಒಂದು ಲೋಹದ ಆನೆ ೨ ಎಂಟು ಶಂಖಗಳು. ಇವು ವಾದ್ಯವಾಗಿ ಊದಲು ಅನುಕೂಲವಾಗುವಂತೆ ತೂತುಗಳನ್ನು ಕೊರೆಯಲಾಗಿತ್ತು. ೩. ವಿವಿಧ ಅಳತೆಯ ಐದು ಜಿನಬಿಂಬಗಳು, ೪. ಗಂಟೆ, ದೀಪಸ್ತಂಭ, ಹರಿವಾಣ, ಅಲಂಕರಣಗೊಂಡ ಕಳಶ, ಪೀಠ-ಮುಂತಾದ ಲೋಹ ನಿರ್ಮಿತ ವಸ್ತುಗಳು, ೫. ಪೆಟ್ಮಡಿ ಎಂದು ಪೂರ್ವದ ಹಳಗನ್ನಡ ಲಿಪಿಯಲ್ಲಿ ಕೊರೆದಿರುವ ಹಾಗೂ ಹಲವು ಸುರಳಿ ನುಲಿಚುಗಳಿರುವ ದೊಡ್ಡ ಶಂಖ. [Rice, B.L. : EC. X (1905) : "Intro". VII-IX)]

ವಾಸ್ತವವಾಗಿ ಇದು ಕರ್ನಾಟಕದ ಅತ್ಯಂತ ಪ್ರಾಚೀನವೂ ಮೊಟ್ಟಮೊದಲನೆಯದೂ ಆದ ಬಸದಿ. ಕೋಲಾರ ಜಿಲ್ಲೆಯಲ್ಲಿಯೇ ಇಡೀ ನಾಡಿಗೆ ಮೊದಲು ಚಿನ್ನ ಸಿಕ್ಕಿದ್ದು. ಅದೇ ಜಿಲ್ಲೆಯಲ್ಲಿ ಮೊತ್ತಮೊದಲನೆಯ ಬಸದಿ ಕಟ್ಟಲ್ಪಟ್ಟಿದ್ದೂ ಒಂದು ಯೋಗಾಯೋಗ. ಇದರಲ್ಲಿ ಚಾರಿತ್ರಿಕ ಔಚಿತ್ಯವೂ ಇದೆ. ನೊಣಮಂಗಲದಲ್ಲಿ ಊರಾಚೆಯ ಗುಡ್ಡವು ಕ್ರಿ.ಶ. ನಾಲ್ಕನೆಯ ಶತಮಾನದಲ್ಲಿ ಗಂಗರು ಕಟ್ಟಿದ ಬಸದಿ. ಇದರಲ್ಲಿ ದೊರೆತ ಎರಡು ತಾಮ್ರಶಾಸನಗಳು ಕ್ರಮವಾಗಿ ಮಾಲೂರು ೭೨ ಮತ್ತು ೭೩ ಎಂದು ಮಾನ್ಯವಾಗಿವೆ. ಇವೆರಡೂ ಕ್ರಿ.ಶ. ಐದನೆಯ ಶತಮಾನದ ಶಾಸನಗಳೆಂಬ ವಿಷಯ ಪರಿಭಾವನೀಯ ಯೋಗ್ಯ:

೧. (ಮಾಲೂರು ೭೩) ನಮಸ್ಸರ್ವಜ್ಞಾಯ ಎಂದು ಜಿನಸ್ತುತಿಯಿಂದ ಆರಂಭವಾಗುವ ಶಾಸನ. ಮಹಾಧಿರಾಜ ಮಾಧವ ವರ್ಮನು (೪೪೦-೬೯) ತನ್ನ ಆಳಿಕೆಯ ೧೩ನೆಯ ವರ್ಷದಲ್ಲಿ ತನಗೆ ಶ್ರೇಯೋರ್ಥವಾಗಿ ಮಹಾತಟಾಕದ (ದೊಡ್ಡಕೆರೆ) ಕೆಳಗೆ ಹನ್ನೆರಡು ಖಂಡುಗ ಭತ್ತ ಬಿತ್ತನೆ ಮಾಡುವಷ್ಟು ಕ್ಷೇತ್ರವನ್ನು ತೋಟಕ್ಷೇತ್ರವನ್ನೂ ಪಟು ಕ್ಷೇತ್ರವನ್ನು ಕುಮಾರಪುರಗ್ರಾಮ ಎಂಬ ಇಡೀ ಹಳ್ಳಿಯನ್ನೂ ಮುದುಕೊತ್ತೂರ ವಿಷಯದಲ್ಲಿ ಅಳವಟ್ಟಿದ್ದ ಪೆರ್ಬ್ಬೊಟಿಲ್ (ಪಿರಿಯ+ಪೊಟಿಲ್ ದೊಡ್ಡ ಪಟ್ಟಣ) ಎಂಬಲ್ಲಿದ್ದ ಅರ್ಹದಾಯತನಕ್ಕೆ ಸರ್ವನಮಸ್ಯವಾಗಿ ದಾನಕೊಟ್ಟನು. ಗಂಗ

ಮಾಧವನಿಗೆ ಈ ಪ್ರೇರಣೆ ಕೊಟ್ಟವರು ರಾಜಗುರು ವೀರದೇವ ಆಚಾರ್ಯರು. ಕುಮಾರಪುರ ಗ್ರಾಮದತ್ತಿಯನ್ನು ಕೊಟ್ಟವನು ಇಮ್ಮಡಿಮಾಧವ (೩೭೦-೯೦) ಎಂಬ ಅಭಿಪ್ರಾಯವೂ ಇದೆ.

೨. (ಮಾಲೂರು . ೭೨) ತನ್ನ ರಾಜಗುರು ಪರಮ ಅರ್ಹತ ವಿಜಯಕೀರ್ತಿಗಳ ಉಪದೇಶ ಪ್ರಕಾರ ಮಾಧವವರ್ಮನ ಮಗ ಕೊಂಗಣಿವರ್ಮ ಅವಿನೀತನು (೪೬೬-೮೫) ತನ್ನ ಆಳ್ವಿಕೆಯ ಪ್ರಥಮ ವರ್ಷದಲ್ಲಿ ಎರಡು ಅರ್ಹದಾಯತನಗಳಿಗೆ ದತ್ತಿಯಿತ್ತನು.

ಅ) ಚಂದ್ರನಂದಿ ಮುನಿ ಮತ್ತು ಇತರರು ಉರನೂರು ಗ್ರಾಮದಲ್ಲಿ ಕಟ್ಟಿಸಿದ್ದ ಅರ್ಹದಾಲಯಕ್ಕೆ ಕೊರಿಕುಂದ ವಿಷಯದಲ್ಲಿದ್ದ ವೆನ್ನೆಲ್ಕರನಿ ಎಂಬ ಹಳ್ಳಿಯನ್ನು ಬಿಟ್ಟುಕೊಟ್ಟನು.

ಆ) ಏವಾನಿ ಅಡಿಗಳ ಪೇರೂರು (ಹಿರಿಯೂರು) ಅರ್ಹದಾಲಯಕ್ಕೆ ೧/೪ ಕರ್ಷಪಣವನ್ನು ಬಿಟ್ಟುಕೊಟ್ಟನು.

ಮಾಲೂರು ೭೨-೭೩ನೆಯ ಶಾಸನಗಳ ಕಾಲ ಐದನೆಯ ಶತಮಾನದ ಆರಂಭವಾದರೂ ದತ್ತಿಗಳನ್ನು ಕೊಟ್ಟಿರುವುದು ಹೊಸದಾಗಿ ಕಟ್ಟಿಸಿದ ಬಸದಿಗಳಿಗೆ ಅಲ್ಲ. ದತ್ತಿ ಕೊಡುತ್ತಿರುವ ವೇಳೆಗಾಗಲೇ ಹಿಂದೆ ಕಟ್ಟಿಸಿದ್ದ ಹಳೆಯ ಮೂರು ಬಸದಿಗಳಿಗೆ. ಅದರಿಂದ ಪೆರ್ಬ್ಬೊಳಲು, ಉರನೂರು, ಪೇರೂರು-ಎಂಬ ಈ ಮೂರು ಊರುಗಳ ಅರ್ಹದಾಯತನಗಳು ನಾಲ್ಕನೆಯ ಶತಮಾನದಲ್ಲಿಯೇ ಕಟ್ಟಲಾಗಿದ್ದ ಬಸದಿಗಳು. ಆ ವೇಳೆಗಾಗಲೇ ಗಂಗರು ನಂದಗಿರಿಯಲ್ಲಿ ಒಂದು ಕೋಟೆಯನ್ನೂ ಬೆಟ್ಟದ ಮೇಲೆಯೇ ವೃಷಭಜಿನರು (ಆದಿತೀರ್ಥಂಕರರು) ಮೂಲ ನಾಯಕರಾಗಿರುವ ಒಂದು ಪಟ್ಟ ಜಿನಾಲಯವನ್ನೂ ಕಟ್ಟಿದ್ದರು. [EC.X. (1905), CB. 29, C. 750 C.E.].

ಗಂಗರು ಎಂಬುದು ಒಂದು ಮುಪ್ಪುರಿಗೊಂಡ ಜೈನಮನೆತನ. ಸೇಲಂ, ಧರ್ಮಪುರಿ, ಕೊಯಮತ್ತೂರು ಜಿಲ್ಲೆಗಳನ್ನು ಒಳಗೊಂಡ ಕೊಂಗುನಾಡು ಕೂಡ ವೆಂಗಿಮಂಡಲದ ಹಾಗೆ ಒಂದು ಮಧ್ಯನಾಡು - ಬಫರ್‌ಸ್ಟೇಟ್, ಬೆಟ್ಟಬಯಲುಗಳು ಕೂಡುವ ಎಡೆ. ಕೊಂಗರು ಗಡಿನಾಡ ತೊರೆಯರು, ಬೇಡರ ಪಡೆಯ ಪಂಗಡ. ತೊರೆಯು ಜಲಸಂಬಂಧಿಯಾದ ಮಾತು ಎಂಬ ಗ್ರಹಿಕೆಯಿಂದ, ಕೊಂಗ ಶಬ್ದರೂಪದ ಧ್ವನಿ ಸಾಮ್ಯದಿಂದ, ಅವೆರಡೂ ಸೇರಿ, ಸಂಸ್ಕೃತೀಕರಣಗೊಂಡು 'ಗಂಗರು' ಎಂಬರೂಪ ಜನಿಸಿರಬೇಕು. ಈ ಬಗೆಯ ಬೆಸುಗೆಗೆ ಪೇರೂರು ಕಡೆಯಿಂದ ಬಂದು ಮಿಳಿತವಾದ ಗಂಗರು ಕಾರಣವಾದರು. ಅಂದರೆ ಗಂಗ ಪೇರೂರು ಜತೆಗೆ ಈ ಕೊಂಗ ತೊರೆಯರು ಸಂಗಮಿಸಿ ಏಕಾಂಗವಾದ ಒಂದು ರಾಜಕೀಯ ಶಕ್ತಿಯಾದ ಗಂಗಕುಲವಾಯಿತು. ಮೊರಸುನಾಡು ಮತ್ತು ಅದರ ನೆರೆಹೊರೆಯ ಕೋಲಾರಭಾಗದ ಗಂಗವಾಡಿ ಆರು ಸಾವಿರವು ಈ ಎಲ್ಲ ಕೂಡಲ ಸಂಗಮಗಳಿಂದ, ಮೈಸೂರು ಕಡೆಯದೂ ಸೇರಿ, ಗಂಗವಾಡಿ ೯೬೦೦೦ವಾಗಿ ವರ್ಧಿಸಿತು. ಗಂಗರು ಸ್ಥಳೀಯ ಕನ್ನಡಿಗರು, ದ್ರಾವಿಡರು ಎಂಬುದಕ್ಕೆ ಕೊಂಗುಣಿ ಎಱೆಯಪ, ಎಱೆಗಂಗ, ದಡಿಗ, ಕಂಬಯ, ನನ್ನಿಗಂಗ, ಮೊಕ್ಕರ, ಮುತ್ತರಸ, ಅರಸಾಣೆ, ಕಟ್ಟಾಣೆ - ಎಂಬ ಆ ಅರಸರ ಹೆಸರುಗಳ ಬಲಕೊಡುತ್ತವೆ. ಮೈಸೂರು ಜಿಲ್ಲೆ ಮತ್ತು ಕೊಡಗು ಜಿಲ್ಲೆಗಳು ಕೂಡುವೆಡೆಯ ಭಾಗವನ್ನು ಹಿಂದೆ ಆಳಿದ 'ಕೊಂಗಾಳ್ವ'ರಲ್ಲಿರುವ 'ಕೊಂಗ (ಗು)' ಶಬ್ದವನ್ನೂ ನೆನೆಯಬೇಕು.

ಕೊಂಗುನಾಡಿನಲ್ಲಿಯೂ ಜೈನಧರ್ಮ ಜನಪ್ರಿಯವಾಗಿತ್ತು : The Kongu region possess even now many vestiges of the popularity enjoyed by Jainism in ancient days. I may mention here an epigraphical evidence too. Some inscriptions of the Kongu-Coḷa rulers mention as coins then in circulation - *āṇai - achchu - siri - yakki - palanjalagai* or merely *siri - yakki - palanjalagai.* Here *yakki* is the same as *yaksi* denoting minor Jaina female deities and *palanjalagai* stands for ancient, though not obsolete, coins. This medieval evidence is clearly indicative of the popular backing which Jainism had received in the Kongu-country-from ancient times [Ramesh, K.V. : Kongu in South Indian Histroy - in '*Srinidhih*' - Perspectives in Indian Archaeology, Art and Culture : 1983:323]

ಗಂಗರ ಕುಲ - ಮೂಲದ ವಿಚಾರವಾಗಿ ಅವರು ಗಂಗಾನದಿಯ ಬಯಲಿನಿಂದ ಬಂದವರು ಎಂದು ಹೇಳುವುದಕ್ಕಿಂತ ಈ ಮೇಲಿನ ವಿವರಣೆಯನ್ನು ಪರಿಶೀಲಿಸಬೇಕು. ಗಂಗರ ಆರಂಭದ ನಾಲ್ಕನೆಯ - ಐದನೆಯ ಶತಮಾನದ ರಾಜರ ಕಾಲ ನಿರ್ದೇಶನದಲ್ಲಿ ಏಕಾಭಿಪ್ರಾಯ ಕಡಮೆ ಎಂಬುದನ್ನೂ ನೆನಪಿಡಬೇಕು; ಈ ವಾಂಶಿಕಾದಿ ಚರ್ಚೆಗಳು ಇಲ್ಲಿಗೆ ಅಪ್ರಸ್ತುತ. ಆದರೆ ಗಂಗರು ಪಕ್ಕಾ ಜೈನರೆಂಬುದು ನೇಸರ ಬೆಳಕಿನಷ್ಟು ನಿಚ್ಚಳವಾಗಿದೆ. ನೊಣಮಂಗದಲ್ಲಿದ್ದ ಪ್ರಾಚೀನ ಪಾಳು ಬಸದಿಯ ನಿವೇಶನವನ್ನು ಪ್ರಾಚ್ಯವಸ್ತು ಸಂರಕ್ಷಣ ಇಲಾಖೆಯು ಹರಪ್ಪ - ಮೊಹೆಂಜದಾರೊದ ರೀತಿಯಲ್ಲಿ ಕಾಪಾಡಬೇಕಿತ್ತು. ಆ ಕರ್ತವ್ಯಲೋಪದಿಂದಾಗಿ ಊರಿನವರು ಇದ್ದ ಬದ್ದ ಇಟ್ಟಿಗೆಗಳನ್ನು ಸಾಗಿಸಿದರು. ಆ ಪಾಳು ಬಸದಿಯಲ್ಲಿ ದೊರೆತ ವಸ್ತುಗಳು ಎಲ್ಲಿ ಸೇರಿವೆ ಎಂಬುದು ಸಂಶೋಧನೆಯಾಗಬೇಕಾದ ಜರೂರು ಇದೆ. ಏಕೆಂದರೆ ಅಲ್ಲಿ ದೊರೆತ ದೊಡ್ಡ ಶಂಖದ ಮೇಲಿನ 'ಪೆಟ್ಟುಮಿಡಿ' ಎಂಬ ಅಚ್ಚಕನ್ನಡ ಮಾತು ಕ್ರಿ.ಶ. ಅಯ್ದನೆಯ ಶತಮಾನದ ಆರಂಭದ್ದು; ಕ್ರಿ.ಶ. ೪೦೦ರಿಂದ ೪೧೦ರ ಅವಧಿಯ ಈ ಬರೆಹವೇ ಕನ್ನಡದ ಮೊಟ್ಟ ಮೊದಲನೆಯ ಶಾಸನ; ಪಲ್ಮಿಡಿ ಶಾಸನಕ್ಕಿಂತಲೂ ನಾಲ್ಕೈದು ದಶಕ ಹಿಂದಿನದು 'ಪೆಟ್ಟುಮಿಡಿ' ಶಾಸನ ಶಬ್ದ. ಅದರಿಂದ ಇದನ್ನು ಸಂರಕ್ಷಿತ ಶಾಸನವಾಗಿ ಉಳಿಸಬೇಕಾಗಿದೆ. ಈ ಶಬ್ದವು ಕನ್ನಡ ನಿಘಂಟಿನಲ್ಲಿ ದಾಖಲಾಗಿಲ್ಲ; ಇದರ ಅರ್ಥವೂ ಅಸ್ಪಷ್ಟ. ವಯಿರಮುಡಿ ಎಂಬ ಮಾತಿನೊಂದಿಗೆ ಪೆಟ್ಟುಮಿಡಿಯನ್ನು ಹೋಲಿಸಬಹುದು. ಪಂಚಮಹಾವಾದ್ಯಗಳಲ್ಲಿ ಸಂಕುವೂ ಒಂದು : ಪಲ್ಲವ ಸತ್ತಿಗೆ ಸಂಕಂ ಝುಲ್ಲಳಿ ಜಯಮಂಗಳ - ಇವು ಪಂಚಮಹಾವಾದ್ಯಗಳು [EC. IV. Hg. 18. 1057]. ಪಂಚಬಸ್ತಿಗಳಲ್ಲಿ ಕಳಸ ಜಗಳೆ ಜಾಗಟೆ ಮೊದಲಾದ ಪಂಚ ಮಹಾವಾದ್ಯ ಸಲುವುದು. (EC. IX. (BLR) 18.1368 ಮಾಗಡಿ ಕಲ್ಯ). ಅಯ್ದು ಮಂಗಳ ವಾದ್ಯಗಳಲ್ಲಿ ಒಂದಾದ ಸಂಕವನ್ನು ಬಸದಿಗಳಲ್ಲಿ ಮೊಳಗಿಸುತ್ತಿದ್ದರೆಂಬುದಕ್ಕೆ ಈ ನೊಣಮಂಗಳ ಪ್ರಾಚೀನ ಬಸದಿಯಲ್ಲಿ ದೊರೆತ 'ಪೆಟ್ಟುಮಿಡಿ' ದೊಡ್ಡ ಶಂಖವೂ, ಇನ್ನೂ ಇತರ ಚಿಕ್ಕ ಎಂಟು ಶಂಖಗಳೂ ವಾದ್ಯದ ರೀತಿಯಲ್ಲಿಯೇ ಸಜ್ಜುಗೊಂಡಿದ್ದುದು ಸಾಕ್ಷಿ. [Conch - shells pierced for use as musical instrument - Rice, B.L.]

ನಾಲ್ಕನೆಯ ಶತಮಾನದಲ್ಲಿ ಕಟ್ಟಲಾದ ಪೆರ್ಬೊಳಲು ಬಸದಿ, ಉರನೂರು ಬಸದಿ, ಪೇರೂರು ಬಸದಿ - ಎಂಬ ಮೂರು ಬಸದಿಗಳಿಗೆ ಸೇರಿದ ಈ ದಾನಶಾಸನಗಳು ಅಷ್ಟೇ ಪ್ರಾಚೀನವಾದ ನೊಣಮಂಗಲ ಬಸದಿಯಲ್ಲಿ ಸೇರಿದ್ದುದಕ್ಕೆ ಕಾರಣವೆಂದರೆ ಮೂರು ಬಸದಿಗಳು ನೊಣಮಂಗಲ ಅರ್ಹದಾಯತನಕ್ಕೆ ಪ್ರತಿಬದ್ಧವಾಗಿದ್ದುದು, ಮತ್ತು ನೊಣಮಂಗಲವು ಕರ್ನಾಟಕದ ಪ್ರಾಚೀನತಮ ಜೈನಮಠದಿಂದ ಕೂಡಿದ ಸ್ಥಳವಾಗಿದ್ದುದು. ಪೆರ್ಬೊಳಲು ದೊಡ್ಡ ಪಟ್ಟಣವಾಗಿದ್ದರೆ ಪೇರೂರು ಹಿರಿಯೂರು ಆಗಿದ್ದಿತು. ಇದಾದ ಮೇಲೆ ಅಯ್ದನೆಯ ಶತಮಾನದ ಆರಂಭದ ದಶಕಗಳಲ್ಲಿ ಕಟ್ಟಿದ್ದು ಹೊಸಕೋಟೆಯ ಬಸದಿ (ನಾಗರಾಜಯ್ಯ, ಹಂಪ : ಚಂದ್ರಕೊಡೆ : ೧೯೯೭ : ೮೩): ಇದು ಕೂಡ ನೊಣಮಂಗಲಕ್ಕೆ ಹತ್ತಿರದ ಊರು. ಹೀಗೆ ಗಂಗರು ಕೇವಲ ೫೦ ಕಿ.ಮೀ. ಅಂತರದಲ್ಲಿರುವ ನಂದಿಬೆಟ್ಟದ ಮೇಲೆ, ನೊಣಮಂಗಲ, ಪೆರ್ಬೊಳಲು, ಉರನೂರು, ಪೇರೂರು ಮತ್ತು ಹೊಸಕೋಟೆ - ಈ ಆರು ಸ್ಥಳಗಳಲ್ಲಿ ಕ್ರಿ.ಶ. ೫ನೆಯ ಶತಮಾನದ ವೇಳೆಗೆ ಬಸದಿಗಳನ್ನು ನಿರ್ಮಿಸಿದ್ದರು. ನೊಣಮಂಗಲ ಊರಿಗೆ ಜಯಮಂಗಲ ಎಂದು ಇತ್ತೀಚೆಗೆ ಪುನರ್ ನಾಮಕರಣ ಮಾಡಲಾಗಿದೆ.

ಬಸದಿಗಳನ್ನು ಕಟ್ಟುವ ಧಾರ್ಮಿಕ ಚಟುವಟಿಕೆಯನ್ನು ಗಂಗರು ತಾವು ವಲಸೆ ಹೋದ ಕಡೆಗಳಲ್ಲಿಯೂ ತಮ್ಮ ಆಡಳಿತ ವ್ಯಾಪ್ತಿಯ ಸ್ಥಳಗಳಲ್ಲೂ ಮುಂದುವರಿಸಿದರು. ಇನ್ನೂ ಕುವಲಾಲಪುರದಲ್ಲಿ ಇರುವಾಗಲೇ ಗಂಗರ ಒಂದು ಗುಂಪು ಸಿಂಹಣಂದಿ ಆಚಾರ್ಯರ ಮಾರ್ಗದರ್ಶನದಲ್ಲಿ ಇಂದಿನ ಶಿವಮೊಗ್ಗ ಜಿಲ್ಲೆಗೆ ಆಗಮಿಸಿ ಶಿವಮೊಗ್ಗ ಹತ್ತಿರದ ತುಂಗೆಯ ತೀರದಲ್ಲಿ ನೆಲಸಿತು. ಶಿವಮೊಗ್ಗ ಬಳಿಯ ಕೊಲ್ಲೂರು ಗುಡ್ಡದ ಮೇಲೆ ತಮ್ಮ ಪಟ್ಟಜಿನಾಲಯವನ್ನು ಮೊದಲು ಮರದಲ್ಲಿ ಮಾಡಿಸಿದರು; ಮಂಡಲಿಸಾಸಿರವೆಂದು ಮುಂದೆ ಕೀರ್ತಿಗಳಿಸಿದ ಒಂದು ಆಡಳಿತಭಾಗವನ್ನು ಕಟ್ಟಿದರು. ಕೊಂಗುಣಿವರ್ಮ ಮಾಧವನು (೩೫೦-೭೦) ಮಂಡಲಿಯಲ್ಲಿ ಸುಮಾರು ಕ್ರಿ.ಶ., ೩೬೦ ರಲ್ಲಿ ಮರದ ಚೈತ್ಯಾಲಯವನ್ನು ಕಟ್ಟಿಸಿದನು. [Shaik Ali, B : 1976 : 31-39, 386-87; Sharma, I.K. : 1983:67-83]. ಇದು ಕರ್ನಾಟಕದಲ್ಲಿಯೇ ಪ್ರಾಚೀನವಾದ ಮೊತ್ತ ಮೊದಲನೆಯ ಮರದ ಬಸದಿ. ನೊಣಮಂಗಲದ ಬಸದಿ ಇಟ್ಟಿಗೆಯಲ್ಲಿ ಕಟ್ಟಿದ್ದು. ಪೆರ್ಬೊಳಲು ಉರನೂರು ಪೇರೂರು ಮತ್ತು ಹೊಸಕೋಟೆಯ ಬಸದಿಗಳೂ ಇಟ್ಟಿಗೆಯವೇ ಇದ್ದರಿಬೇಕು. ನಂದಿಬೆಟ್ಟದ ಬಸದಿ ಗುಹೆಯಲ್ಲಿಯೂ ಇದ್ದಿತಲ್ಲದೆ ಕಲ್ಲಿನ ಸಹಾಯದಿಂದ ರೂಪಿತವಾಗಿದ್ದಿತು. ಹೀಗಾಗಿ ಕರ್ನಾಟಕದಲ್ಲಿ ಮಾಡಿಸಲಾದ ಮೊದಲ ಹಂತದ ಏಳೂ ಬಸದಿಗಳನ್ನು ಕಟ್ಟಿಸಿದವರು ಗಂಗರು.

ದಕ್ಷಿಣ ಕರ್ನಾಟಕದಲ್ಲಿ, ಗಂಗರ ಮುಂದಾಳಿಕೆಯಲ್ಲಿ ಈ ನಿರ್ಮಾಣ ನಡೆಯುತ್ತಿರುವ ವೇಳೆಯಲ್ಲಿ ಉತ್ತರ ಕರ್ನಾಟಕದ ಕಡೆಯೂ ಒಂದು ಸಮಾನಾಂತರ ಬಸದಿಗಳ ನಿರ್ಮಾಣ ಮತ್ತು ಅನೇಕಾಂತಮತ ಚಟುವಟಿಕೆ ನಡೆಯಿತು. ಅದರ ಮೇಲಾಳಿಕೆಯು ಕುಂತಳದೇಶದ ಬನವಾಸಿಯ ಆದಿಕದಂಬರಿಗೆ ಸೇರಿತ್ತು. ಕಾಕುತ್ಸ್ಥವರ್ಮನ (೪೦೫-೩೦) ಆಳಿಕೆಯ ವೇಳೆಗೆ ಬನವಾಸಿ ಮಂಡಲವು ಜೈನಧರ್ಮಕ್ಕೆ ನಡೆಮಡಿ ಹಾಸಿತ್ತು. ಆಚಾರ್ಯ ಧರಸೇನರ ಶಿಷ್ಯ ಆಚಾರ್ಯ ಪುಷ್ಪದಂತನು ಷಟ್‌ಖಂಡಾಗಮದ ಸತ್‌ಪ್ರರೂಪಣವೆಂಬ ಅಧಿಕಾರಕ್ಕೆ ೧೭೭ ಮೂಲಸೂತ್ರಗಳನ್ನು ಬರೆದು ಭೂತಬಲಿ ಆಚಾರ್ಯರಿಗೆ ಕಳಿಸಿಕೊಟ್ಟಿದ್ದು ಈ ಬನವಾಸಿಯಿಂದ ಎಂಬುದು ಗಮನಾರ್ಹ; ಇದು

ಕ್ರಿ.ಶ. ೧೫೬ರಲ್ಲಿ ನಡೆದ ಘಟನೆ. ಮುಂದೆ ಇದೇ ಷಟ್‌ಖಂಡಾಗಮಕ್ಕೆ ಆಚಾರ್ಯ ಸಮಂತಭದ್ರರು ಬನವಾಸಿಯಲ್ಲಿ ವ್ಯಾಖ್ಯಾನವನ್ನು ಬರೆದರು (ಕ್ರಿ.ಶ. ೫ ಶ.) ಬನವಾಸಿಯು ಜೈನ ಕೇಂದ್ರವಾಗಿದ್ದುದಕ್ಕೆ ಹರಿಷೇಣನ ಬೃಹತ್ಕಥಾಕೋಶದಲ್ಲಿ (ಕ್ರಿ.ಶ. ೯೩೩) ಆಧಾರಗಳಿವೆ. ವನವಾಸೀಗಚ್ಛ ಎಂಬ ಒಂದು ಜೈನಮುನಿಶಾಖೆಯು ಈ ಬನವಾಸೀ ಮೂಲದಿಂದ ಬಂದದ್ದು.

ಪಲಾಶಿಕಾ (ಹಲಸಿಗೆ - ಹಲಸಿ)ಪ್ರದೇಶ ಸ್ಯಾದ್ವಾದ ಸಿದ್ಧಾಂತದ 'ದಿವ್ಯಧ್ವನಿಯನ್ನು ಅನುರಣಿಸುತ್ತಿತ್ತು. ಖೇಟಗ್ರಾಮವು ಪವಿತ್ರ ಅರ್ಹತ ಮತದವರ ಆಡುಂಬೊಲವಾಗಿತ್ತು. ತನ್ನನ್ನು ಯುದ್ಧವೊಂದರಲ್ಲಿ ಉಳಿಸಿದ ಋಣಕ್ಕಾಗಿ ಗುಣಗಳ್ಳನಾದ ಕಾಕುತ್ಸ್ಥವರ್ಮನು ಶ್ರುತಕೀರ್ತಿಸೇನಾನಿಗೆ ಖೇಟಗ್ರಾಮಕ್ಕೆ ಸೇರಿದ ಬಳೋವರ ಕ್ಷೇತ್ರವನ್ನು ದಾನವಿತ್ತನು : ಭಗವತಾಂ+ಅರ್ಹತಾಂ ಸರ್ವ್ವಭೂತಶರಣ್ಯಾನಾಂ। ತ್ರೈಲೋಕ್ಯನಿಸ್ತಾ ರಕ್ಷಾಣಾಂ ಖೇಟಗ್ರಾಮೇ ಬಳೋವರ ಕ್ಷೇತ್ರಂ ಶ್ರುತಕೀರ್ತಿ ಸೇನಾಪತಯೇ ಆತ್ಮನಸ್ತಾಸ್ತಾರಣಾರ್ತ್ಥಂ ದತ್ತವಾನ್ [CKI : 1985 : No. 3 : 5th century C.E]. ಈ ಶ್ರುತಕೀರ್ತಿಯೇ ಕರ್ನಾಟಕದ ಮೊಟ್ಟಮೊದಲನೆಯ ಜೈನ ಸೇನಾಪತಿ ಎಂಬುದು ವಿಶೇಷ ಗಮನಿಕೆಗೆ ತಕ್ಕ ವಿಷಯ.

ಖೇಟಗ್ರಾಮ ವಿಷಯವು ನೊಣಮಂಗಳ ಶಾಸನಗಳ ಕಾಲಾವಧಿಗೇ ಸೇರಿದ್ದಲ್ಲದೆ ಅದರಂತೆಯೇ ತಾಮ್ರಪಟವಾಗಿದೆ, ಸಂಸ್ಕೃತಶಾಸನವಾಗಿದೆ. ಇನ್ನೂ ಸ್ವಾರಸ್ಯವೆಂದರೆ ಗಂಗರೂ ಕದಂಬರೂ ಸಮಾನ ನಿರ್ಗ್ರಂಥ ಧರ್ಮವತ್ಸಲತೆ ಕಾರಣದಿಂದ ವೈವಾಹಿಕ ಬಾಂಧವ್ಯದಿಂದ ಬೆಸೆದುಕೊಂಡರು. ಕದಂಬರ ಕೃಷ್ಣವರ್ಮನ (೪೩೦-೬೦) ಸೋದರಿಯನ್ನು ಗಂಗರ ಮಾಧವನು II (೪೦೦-೨೦) ಮದುವೆಯಾಗಿದ್ದನು: ಕಾಕುತ್ಸ್ಥವರ್ಮನ ತಂಗಿಯನ್ನು ತಡಂಗಾಲ ಮಾಧವನು (೪೪೦-೬೯) ವಿವಾಹವಾಗಿದ್ದನು. ಈ ಬಗೆಯ ಬೀಗತನದ ಒಗೆತನವಿದ್ದರೂ ಮುಂದೆ ಹಗೆತನದಿಂದ ಕಾದಾಡಿದ್ದುಂಟೆಂಬುದು ರಾಜಕಾರಣದ ಮಾತು. ಮೃಗೇಶವರ್ಮನು (೪೫೫-೮೦) ಬೃಹತ್ ಪರಲೂರು ಎಂಬಲ್ಲಿನ ಬಸದಿಯ ಅರ್ಹತರ ಪೂಜೆಗೂ ಜೀರ್ಣೋದ್ಧಾರಕ್ಕೂ ಭೂದಾನ ಕೊಟ್ಟನು [CKI : No. 13 : 5th century.C.E.]. ಅರ್ಹಚ್ಛಾಲಾ ಜಿನಾಲಯ ಜಿನೇಂದ್ರರಿಗೂ ಶ್ವೇತಪಟರಿಗೂ ನಿರ್ಗ್ರಂಥರಿಗೂ ಯಾಪನೀಯರಿಗೂ ಕೂರ್ಚಕರಿಗೂ ದಾನಗಳನ್ನಿತ್ತ ಸಂಗತಿ ಪ್ರಸಿದ್ಧವಿದೆ - (ಅದೇ. ನಂ. ೯). ಬನವಾಸಿ ಕದಂಬರ ೫೨ ಶಾಸನಗಳಲ್ಲಿ ೧೫ ಜೈನಶಾಸನ ಗಳಾಗಿರುವುದೂ ೯ ಜನ ರಾಜರಲ್ಲಿ ೫ ಜನರು ಜೈನರಾಗಿರುವುದೂ ಗಮನಾರ್ಹವಾಗಿದ್ದು, ಕದಂಬರು ಬಸದಿಗಳಿಗೂ ಬಸದಿಯೊಡೆಯರಿಗೂ ಆಸರೆಯಾಗಿ ನಿಲ್ಲಲು ಕಾರಣವಾಯಿತು.

ಆರಂಭದಲ್ಲಿ ಕಟ್ಟಲಾಗಿದ್ದ ಮರದ ಮತ್ತು ಇಟ್ಟಿಗೆಯ ಬಸದಿಗಳನ್ನು ಜೀರ್ಣೋದ್ಧರಿಸಿ ಕಲ್ಲಿನಲ್ಲಿ ಕಟ್ಟಿದರು. ಬಸದಿಗಳ ನಿರ್ಮಾಣದಲ್ಲಿ ಇದು ಎರಡನೆಯ ಹಂತ : ಮರವೆಸನಾಗಿ ಮಾಡಿಸಿ ಮಣ್ಣಲಿಸಾಸಿರ ಯೆಡೆದೊರೆಯೆಪ್ಪತ್ತರ ಬಸದಿಗಳಿನ್ದೊಪ್ಪುವ ಮಣ್ಣಲಿಯ ಪಟ್ಟದ ತೀರ್ಥದ ಬಸದಿಯಂ ಕಲುವೆಸನಾಗಿ ಮಾಡಿಸಿದ ಪಟ್ಟದ ಬಸದಿ [ಎಕ. VII (BLR), ಶಿವಮೊಗ್ಗ, ೪. ೧೧೨೧-೨೨, ಪು. ೧೦೧೫). ಕುಂತಳದೇಶದಲ್ಲಿ ಸಂತತವೂ ವಸಂತವಾಗಿರುವ ಬನವಾಸಿ ನಾಡಿನ ಬಳಿಗ್ರಾಮ ಬಳ್ಳಿಗಾವೆಯ ಶಾನ್ತಿ ತೀರ್ತ್ಥೇಶವಾಸವನ್ನು ಮೊದಲು ಮರದಲ್ಲಿ ಮಾಡಿಸಿದ್ದುದನ್ನು ಮತ್ತೆ ಕಲ್ಲಿನಲ್ಲಿ ಕಟ್ಟಲಾಯಿತೆಂದು ಇನ್ನೊಂದು ಶಾಸನದಲ್ಲಿದೆ :

ಆ (ದಾರುಕ)ರ್ಮ್ಮ ನಿರ್ಮ್ಮಿತ
ಮದಂ ಶಿಲಾಕರ್ಮ್ಮಮಾಗೆ ಮಾಡಿ ಸುಕೋಳ್ವೋ
ದುದು ನಿನಗೆ ಧರ್ಮ್ಮವೆಂಬುದು
ಮದರ್ಕ್ಕೆ ಬಗೆದಂದು ಧರ್ಮ್ಮ ನಿರ್ಮ್ಮಳ ಚಿತ್ತಂ॥

[ಎಕ. VII-i (1902) ಶಿಕಾರಿಪುರ, ೧೩೬, ೧೦೬೮. ಬಳ್ಳಿಗಾವೆ (ಶಿವಮೊಗ್ಗ ಜಿಲ್ಲೆ)]

ಗಂಗರು ಹೀಗೆ ಬಸದಿಗಳನ್ನು ಮಣ್ಣು ಮರ ಇಟ್ಟಿಗೆ-ಗಾರೆ ಕಲ್ಲುಗಳಿಂದ ಕಟ್ಟಿಸುವ ಸಾಧನೋಪಕರಣ ಪ್ರಯೋಗಗಳೊಂದಿಗೆ ವಾಸ್ತು-ಶಿಲ್ಪ ಪ್ರಯೋಗಗಳನ್ನೂ ಮಾಡಿದರು. ದುರ್ವಿನೀತನು ಕೋಗಳಿಯಲ್ಲಿ ಕ್ರಿ.ಶ. ೫೩೦ರಲ್ಲಿ ಕಟ್ಟಿಸಿದ ಬಸದಿಯೇ ಕರ್ನಾಟಕದ ಮೊಟ್ಟಮೊದಲನೆಯ ಸರ್ವತೋಭದ್ರ ಜಿನಾಲಯ (ನಾಗರಾಜಯ್ಯ, ಹಂಪ : ೧೯೯೭ಸಿ : ೮೭). ಜಯದುತ್ತರಂಗ ಇಮ್ಮಡಿ ಬೂತುಗನ ಹೆಂಡತಿ ಕಲ್ಲಬ್ಬಾಳು ಮಾಡಿಸಿದ ಬಸದಿಯಲ್ಲಿ ಚಿತ್ರಗಳೂ ಇದ್ದುವು: ಸುಧಾಚಿತ್ರಚಿತ್ರಾದಿ ಪೂಜಾರ್ಥಂ [EI. XXXVI. ಪು. ೯೭-೧೧೦, ಕ್ರಿ.ಶ. ೯೬೨ ಕಾದಲೂರು] ಮತ್ತು ತನ್ನ ತಾಯಿ ಮಾಡಿಸಿದ ಈ ಬಸದಿಗೆ ಪೂಜಾದಿಗಳಿಗಾಗಿ ಇಮ್ಮಡಿ ಮಾರಸಿಂಹನು ಕೊಂಗಲ್ ನಾಡಿನ ಕಾದಲೂರನ್ನು ಸೂರಸ್ಥಗಣದ ಏಳಾಚಾರ್ಯರಿಗೆ ಒಪ್ಪಿಸಿದನು (ನಾಗರಾಜ್ಯಯ, ಹಂಪ : ೧೯೯೭-ಸಿ. : ೮೬). ಗಂಗರು ನೂರಾರು ಬಸದಿಗಳನ್ನೂ ಜಿನಬಿಂಬಗಳನ್ನೂ ಮಾನಸ್ತಂಭಗಳನ್ನೂ ಮಾಡಿಸಿದರು (ಅದೇ ೮೨-೮೮). ಗಂಗರ ಹೆಂಗಸರು ಕೂಡ ಇದರಲ್ಲಿ ಹಿಂದೆ ಬೀಳಲಿಲ್ಲ. ಪಟ್ಟಜಿನಾಲಯ, ತೀರ್ಥದ ಬಸದಿ, ಗೊಮ್ಮಟ ಶಿಲ್ಪ ವಿನ್ಯಾಸ, ಜಿನಶಾಸನ ದೇವತೆಗಳ ಶಿಲ್ಪ ಮಾದರಿಗಳು, ಬಸದಿಗಳ ಒಟ್ಟು ವಾಸ್ತು - ಶಿಲ್ಪ ರಚನೆಯ ಒಂದು ಸಿದ್ಧ ಚೌಕಟ್ಟನ್ನು ಕಟ್ಟಿಕೊಟ್ಟವರು ಗಂಗರು ಮತ್ತು ಕದಂಬರು.

ಗಂಗರು ಅಂತಿಮವಾಗಿ ಕುವಲಾಪುರ ಪ್ರದೇಶವನ್ನು ಬಿಟ್ಟು ಮಣ್ಣೆ (ಮಾನ್ಯಪುರ)' ಶಿವಗಂಗೆ ಮೂಲಕ ಜೈತ್ರಯಾತ್ರೆ ಹೊರಟರು. ಮಣ್ಣೆಯಲ್ಲಿ 'ಶ್ರೀ ವಿಜಯ ಜಿನಾಲಯ' ವೂ ಶ್ರೀಪುರದಲ್ಲಿ ಲೋಕತಿಲಕ ಜಿನಾಲಯವೂ ನಿರ್ಮಿತವಾದುವು. ಶಿವಗಂಗೆ ಜೈನರ ತೀರ್ಥವಾಗಿತ್ತು. ಶಿವಗಂಗೆ ಬೆಟ್ಟಕ್ಕೆ ಇದ್ದ ಪ್ರಾಚೀನ ಹೆಸರು 'ಗಂಗಕೂಟ'' ಬೆಟ್ಟ ಎಂದು. ವೇಂಗಿ ಚಾಳುಕ್ಯರ ರಾಜನಾದ ಗುಣಗ ವಿಜಯಾದಿತ್ಯನು (೮೪೯-೯೨) ರಾಷ್ಟ್ರಕೂಟರ ಅಮೋಘವರ್ಷನ ಪರವಾಗಿ ಗಂಗವಾಡಿಯ ಮೇಲೆ ದಂಡೆತ್ತಿ ಹೊರಟು ತಲಕಾಡಿನ ನೀತಿಮಾರ್ಗ ಪೆರ್ಮಾನಡಿಯ ಪಡೆಯನ್ನು ೮೬೬ ರಲ್ಲಿ ಸೋಲಿಸಿದನು. ಆ ಸಮಯದಲ್ಲಿ ಗಂಗರ ಪಡೆಯು ಗಂಗಕೂಟ ಬೆಟ್ಟದಲ್ಲಿ ಆಶ್ರಯ ಪಡೆದಿತ್ತು. ನೀತಿಮಾರ್ಗನು ಅಮೋಘವರ್ಷನೊಂದಿಗೆ ಒಪ್ಪಂದ ಮಾಡಿಕೊಂಡನು. ಮುಂದೆ ಪರಮಗೂಳನ ಮನೆತನದಿಂದ ಹುಟ್ಟಿದ ಅದಳವಂಶವೆಂಬ ಜೈನಕುಲದವರು ಶಿವಗಂಗೆಯಲ್ಲಿ ಬಸದಿಯನ್ನು ಕಟ್ಟಿಸಿದರು; ಅದರ ವಿವರಗಳು ಇಲ್ಲಿಗೆ ಅಪ್ರಸ್ತುತ.

ಗಂಗರು ಶಿವಗಂಗೆ ಮಾರ್ಗವಾಗಿ ಮಂಕುಂದ, ಬೇವೂರು, ಅರೆತಿಪ್ಪೂರು, ಗುತ್ತಲು ಕಡೆಯಿಂದ ಮುನ್ನಡೆದರು. ಮಂಡ್ಯಜಿಲ್ಲೆ ದಾಟಿ ಸೋಸಲೆ ಕಡೆಯಿಂದ ಮುಂದುವರಿದರು. ಸೋಸಲೆ ಜೈನಕೇಂದ್ರವಾಗಿತ್ತು ಮತ್ತು ಅಲ್ಲಿ ಗಂಗರು ಕಟ್ಟಿದ ಐದನೆಯ ಶತಮಾನದ ಬಸದಿಯಿತ್ತು. ಕರ್ನಾಟಕದ

ಅತ್ಯಂತ ಪ್ರಾಚೀನವಾದ ಮೊಟ್ಟ ಮೊದಲನೆಯ ನಿಸಿದಿ ಶಾಸನ ಸೋಸಲೆಯಲ್ಲಿ ಸಿಕ್ಕಿದೆ (ದೇವರ ಕೊಂಡಾರೆಡ್ಡಿ : ಸೋಸಲೆಯ ನಿಸಿದಿ ಶಾಸನ : ಇತಿಹಾಸದರ್ಶನ-೪; ೧೯೮೯:೮-೧೦). ನಿಸಿದಿಗಳು ಬಸದಿಗಳ ಭಾಗ. ಮರಣವ್ರತವಾದ ಸಲ್ಲೇಖನವ್ರತಧಾರಿಗಳಾಗಿ ಮುಡಿಪಿದವರ ಮಾಹಿತಿ ಕೊಡುವ ಸ್ಮಾರಕ ಶಿಲೆಗಳು.ನಿಸಿದಿಗಳು (ನಾಗರಾಜಯ್ಯ, ಹಂಪ : ಕೊಪ್ಪಳದ ಶಾಸನಗಳು :೧೯೯೮-೭). ಕಟ್ವಿಪ್ಪು ಎಂಬ ಶಬ್ದದ ಅರ್ಥಕೂಡ ಸಮಾಧಿಮರಣ ಹೊಂದಿದವರ ಗುಡ್ಡ ಎಂದು. ವಸುದೇವ ಹಿಂಡಿಯಲ್ಲಿ (ಕ್ರಿ.ಶ. ೫-೬. ಶ) ಸಮ್ಮೇತ (ದ) ಗಿರಿಯನ್ನು ಇಪ್ಪತ್ತು ಜಿನರ 'ನಿಸೀಹಿಯಾ' ಎಂದೂ ಅವುಗಳ ಪೂಜೆಗಾಗಿ ಜನರು ಬರುತ್ತಿದ್ದರೆಂದೂ ಹೇಳಿದೆ; ಅಲ್ಲದೆ ಚಂಪಾನಗರ ಸಮೀಪದ ವಾಸುಪೂಜ್ಯ ಮಂದಿರವನ್ನು ಪ್ರಾಕೃತದಲ್ಲಿ 'ನಿಸೀಹಿತಾಯತಣ' (ಸಂಸ್ಕೃತಃ ನಿಸೀಧಿಕಾಯತನ) ಎಂದೂ ಕರೆದಿದೆ. ಪಾರ್ಶ್ವನಾಥ ಜಿನರೇ ಚಾರಿತ್ರಿಕವಾಗಿ ಸಲ್ಲೇಖನ ವಿಧಾನದಿಂದ ಮುಡಿಪಿದ ಮೊದಲಿಗರು.

ಸೋಸಲೆಯಿಂದ ಮುಂದೆ ಹೊರಟ ಗಂಗರು ವರುಣ ಗ್ರಾಮದ ಮೂಲಕವಾಗಿ ಈಗಿನ ಚಾಮುಂಡಿ ಬೆಟ್ಟದಲ್ಲೂ ಬಸದಿಯನ್ನು ಕಟ್ಟಿಸಿ, ಅಲ್ಲಿಂದ ಮುಂದೆ ಪಯಣಿಸುತ್ತ ನಂಜನಗೂಡು, ಗುಂಡ್ಲಪೇಟೆ, ಚಾಮರಾಜನಗರ ಮೂಲಕ ಅಂತಿಮವಾಗಿ ತಲವನಪುರ ತಲಪಿದರು, ಕುವಲಾಲಪುರ ಗಂಗರು ತಲಕಾಡು ಗಂಗರಾದರು; 'ತಲೈಕ್ಕಾಡು' ಎಂದರೆ ಕೊಡೆಯಂತಿರುವ ಕಾಡು ಎಂದರ್ಥ; ಈ ಶಬ್ದ ತಲೆಕಾಡು ಎಂದು ಮಾರ್ಪಾಡು ಪಡೆದಿದೆ.

ಬಸದಿಗಳು ಸಹಸ್ರಾರು ಸಂಖ್ಯೆಯಲ್ಲಿ ಇದ್ದುದು ಹಳೆಯ ಮೈಸೂರು ಭಾಗದಲ್ಲಿ ಅಲ್ಲ. ಉತ್ತರ ಕರ್ನಾಟಕ ಭಾಗವೇ ಬಸದಿಗಳ ನೆಲೆವೀಡು, ಕೊಪ್ಪಳವೇ ಅದರ ವಿಜಯಸ್ಕಂಧಾವಾರ. ಕಟ್ವಿಪ್ಪು, ಕೊಪ್ಪಳ, ಕೊನಕೊಂಡ, ಕೆಲ್ಲಂಗೆರೆ, ಕೋಗಳಿ, ಪುಲಿಗೆರೆ, ಅಣ್ಣಿಗೆರೆ, ಹನಸೋಗೆ ಹೊಂಬುಜ, ಹುನಗುಂದ, ಹಲಸಿ, ಹಳ್ಳೂರು, ಸೌದತ್ತಿ ಮೊದಲಾದುವು ಬಸದಿಗಳ ತೊಟ್ಟಿಲುಗಳಾಗಿ ವಿಜೃಂಭಿಸಿದುವು. ಬಾದಾಮಿ ಚಾಳುಕ್ಯರು ಬನವಾಸಿಯ ಕದಂಬರ ರಾಜ್ಯದೊಂದಿಗೆ ಅವರ ಜಿನಧರ್ಮ ಪರಾಯಣತೆಯನ್ನೂ ಕಿತ್ತು ತಮ್ಮದಾಗಿಸಿದರು, ಗಂಗರ ಹಾಗೆ ತಾವೂ ಜಿನಾನುರಾಗಿಗಳಾದರು. ಕದಂಬರಿಗಿಂತ ಗಂಗರಿಗಿಂತ ತಾವೇನೂ ಕಡಮೆಯಲ್ಲವೆಂದು ತೋರಿಸಲು ಬಾಹುಬಲಿ ಶಿಲ್ಪ (ಕಾಮಜಿನಾಲಯ), ಪಾರ್ಶ್ವನಾಥ - ಪದ್ಮಾವತೀದೇವಿ ಶಿಲ್ಪ (ಕಲ್ಲೀಲಿಯ ಪದ್ಮಾಲಯ) ಮಾಡಿಸಿದರು. ಒಂದು ರಾಜ ಮನೆತನದ ವಾಸ್ತು ಶಿಲ್ಪ ಮಾದರಿಗಳೂ ಸಹ ಧಾರ್ಮಿಕ ಪರಂಪರೆಯ ಹಾಗೆಯೇ ಇನ್ನೊಂದು ಅರಸುಕುಲಕ್ಕೆ ಹೇಗೆ ಮುಂದುವರಿಯುತ್ತ ವೆಂಬುದಕ್ಕೆ ಇದೊಂದು ಉದಾಹರಣೆ. ಬಾದಾಮಿಯ ಮತ್ತು ಐಹೊಳೆಯ ಜೈನ ಗುಹಾಗುಡಿಗಳೂ ಅಣ್ಣಿಗೆರೆ - ಪುಲಿಗೆರೆಯ ಬಸದಿಗಳೂ ಆರು - ಏಳನೆಯ ಶತಮಾನದ ರಚನೆಗಳು. ಐಹೊಳೆಯ ಮೇಗುಡಿಯನ್ನು ಪ್ರಸಿದ್ಧ ರಾಜಕವಿ ರವಿಕೀರ್ತಿಯು ಮಾಡಿಸಿದ್ದು ಶಾಸನೋತ್ಕೀರ್ಣವಾಗಿದೆ. [EI. VI. pp. I ff]. ಇದು ಕರ್ನಾಟಕದಲ್ಲಿ ಕಟ್ಟಲಾದ ಮೊಟ್ಟಮೊದಲನೆಯ ದ್ರಾವಿಡ ಶೈಲಿಯ ಸುಂದರ ಬಸದಿ *[Jaina Art and Architecture,* vol. III : 1975 : 454]. ಕವಿ ರವಿಕೀರ್ತಿಯಂತೆಯೇ ಪಂಪನ ತಮ್ಮ ಜಿನವಲ್ಲಭ, ನಾಗಚಂದ್ರ, ಜನ್ನ ಮೊದಲಾದ ಕವಿಗಳೂ ಬಸದಿಗಳನ್ನು ಮಾಡಿಸಿದರು.

ಕವಿಗಳು ತಮ್ಮ ಕಾವ್ಯಗಳನ್ನು ಬಸದಿಗಳಲ್ಲಿ ಬರೆದರು, ಸಂಪ್ರತಿಕಾರರು ಬಸದಿಗಳಲ್ಲಿ ಕುಳಿತು ಪ್ರತಿಗಳೆತ್ತಿದರು. ಸಾಹಿತ್ಯವೂ ಬಸದಿಗಳಲ್ಲಿ ಪಲ್ಲವಿಸಿತು, ಧರ್ಮದೊಂದಿಗೆ ಕಾವ್ಯ ಧರ್ಮವೂ ಹೆಜ್ಜೆ ಹಾಕಿತು.

ಬಸದಿಗಳಿಗೆ ಸಂಬಂಧಿಸಿದಂತೆ ಇದುವರೆಗೆ ಆಗಿರುವ ಅಧ್ಯಯನ ಬಹಳ ಕಡಮೆ. ಅಲ್ಲದೆ ಸರಿಯಾದ ಮಾಹಿತಿಯ ಕೊರತೆಯಿಂದಾಗಿ ತಪ್ಪು ತಿಳಿವಳಿಕೆಗೆ ಕಾರಣವಾಗಿದೆ. ಉದಾಹರಣೆಯೊಂದಿಗೆ ಇದನ್ನು ಸ್ಪಷ್ಟಪಡಿಸುತ್ತೇನೆ : Jainism can not be said to have created a special architecture of its own, for wherever they went the Jains adopted the local building tradition [Havell, E.B. : *The ancient and Madiaeval Architecture of India* - A Study of Indo-Aryan civilisation, London : 1915:174] ಎಂಬ ಹೇಳಿಕೆಯೂ The Jains in their temple building usually followed the structural tradition of the Brahmanical sects [ibid, p. 65-66] ಎಂಬ ಹೇಳಿಕೆಯೂ ಸರಿಯಾದ ಅಧ್ಯಯನದ ಅಭಾವದಿಂದ ಉಂಟಾದ ತಪ್ಪು ತೀರ್ಮಾನಗಳು. ಜೈನ ಪರಂಪರೆ ಪ್ರಾರಂಭದಿಂದಲೂ ಬ್ರಾಹ್ಮಣ ಪರಂಪರೆಗಿಂತಲೂ ಬೌದ್ಧ ಪರಂಪರೆಗೆ ಹತ್ತಿರವಿದೆ. ಜೈನರು ತಾವು ನೆಲಸಿದ ಸ್ಥಳೀಯ ವಾಸ್ತು ಪರಂಪರೆಗೆ ಸ್ಪಂದಿಸಿದರೆ ಅದು ಭೂಷಣವೇ ಹೊರತು ದೋಷವಲ್ಲ. ಹೋದ ಬಂದ ಕಡೆಗಳಲ್ಲಿ ಪ್ರತ್ಯೇಕ ದ್ವೀಪಗಳಾಗದೆ ಆಯಾ ಸ್ಥಳಪದ್ಧತಿಗೆ, ಭಾಷೆಗೆ, ಸಂಸ್ಕೃತಿಗೆ ಗೌರವ ತೋರಿರುವುದು ಸ್ವಾಗತಾರ್ಹ. ಮುಖ್ಯವಾಹಿನಿಯೊಂದಿಗೆ ಸೇರಿಯೂ ತನ್ನ ಸ್ವೋಪಜ್ಞಲಕ್ಷಣಗಳನ್ನು ಜಿನಬಿಂಬಗಳಲ್ಲಿ, ಜಿನಶಾಸನ ದೇವತೆಗಳಲ್ಲಿ, ಮಾನಸ್ತಂಭದಲ್ಲಿ, ಗೊಮ್ಮಟ ಶಿಲ್ಪಗಳಲ್ಲಿ ಜೈನ ಪರಂಪರೆ ಪ್ರಕಟಿಸಿರುವುದು ವೈಶಿಷ್ಟ್ಯಪೂರ್ಣವಾಗಿದೆ. ಇಡೀ ರಾಷ್ಟ್ರದ ಉದ್ದಗಲಗಳಲ್ಲಿ ಒಂದು ಎರಕದಲ್ಲಿ ಹಾಕಿ ತೆಗೆದಂತೆ ತನ್ನ ಶೈಲಿಯೇ ಸರ್ವತ್ರ ರಾರಾಜಿಸಬೇಕೆಂಬುದು ಏಕಾಂತ ಸಿದ್ಧಾಂತ. ಆದರೆ ಜೈನರದು ಅನೇಕಾಂತ ಸಿದ್ಧಾಂತ. ಪ್ರಾದೇಶಿಕ ಅಭಿರುಚಿಯನ್ನು ಮನ್ನಿಸುವ ಸಂಸ್ಕಾರ. ಅನೇಕರಲ್ಲಿ ಏಕವಾಗಿರುತ್ತಲೇ ತನ್ನ ತನವನ್ನೂ ಜೈನತ್ವವು ವಾಸ್ತು-ಶಿಲ್ಪ ವಿನ್ಯಾಸದಲ್ಲಿಯೂ ಉಳಿಸಿಕೊಂಡಿದೆ. ಹವಾಗುಣ, ಅಲ್ಲಲ್ಲಿ ಸಿಗುವ ವಸ್ತುಗಳು, ಸ್ಥಳೀಯ ಶಿಲ್ಪಿಗಳ ಸಾಮರ್ಥ್ಯ, ಅಂದಂದಿನ ಶೈಲಿ ಪರಂಪರೆಯ ಓಘ, ಆರ್ಥಿಕ ಅನುಕೂಲ ಪ್ರಮಾಣ - ಇವೆಲ್ಲವೂ ಬಸದಿಗಳ ರಚನೆಯಲ್ಲಿ ಪ್ರಭಾವ ಬೀರಿವೆ. Because of local availability marble was used in Abu region of Rajasthan at least from 7th C.A.D., The roof type of structure assimilated to temple architecture may once have had its regions with heavy rain or snow; early Calukya monuments in Karnataka clearely accomodate the symbolic form of the temple to a local assembly hall tradition; Pallava use of granite rather than sand stone had some effect on the nature of Pallava ornament; in some regions of India, stones were carved in place, in others they were finished completely before being fitted together; no one can look at centres such as Vijayanagar without recognition of the importance of local patrons

and their ambitions [Michael, W. Meister, Regions and Indian Architecture-in-*Nirgrantha,* vol. II (1996). 87]. ಆದ್ದರಿಂದ E.B. Havell ಅವರ ಆಕ್ಷೇಪ ಸ್ವೀಕಾರ ಯೋಗ್ಯವಲ್ಲ.

Jose Pereira ಒಂದು ಕಡೆ ಹೀಗೆ ಹೇಳಿದ್ದಾರೆ : Of the Tirthankara and Arhant, the former-either because of the sculptors obsession with this theme, or their inertia of poverty of ideas - is overwhelmingly the main subject of Jaina sculputure [Jose Pereira : Monolithic Jainas. The Iconography of the Jain Temples of Ellora : 1977:39] ಈ ಹೇಳಿಕೆಯ ಬಾಲಿಶವಾಗಿದೆ. ಧಾರ್ಮಿಕ ಶಿಲ್ಪ ರಚನೆಯಲ್ಲಿ ಶಿಲ್ಪಿಯ ಪಾತ್ರವನ್ನು ಸರಿಯಾಗಿ ಗ್ರಹಿಸದ ಕಾರಣ ಈ ಬಗೆಯ ತಪ್ಪು ಹೇಳಿಕೆಗೆ ಎಡೆಯಾಗಿದೆ. ತೀರ್ಥಂಕರರ ಬಿಂಬಗಳ ಏಕತಾನತೆಯ ಹಿಂದೆ ಒಂದು ಸೂತ್ರವಿದೆ, ಆಶಯವಿದೆ : More use is made of repitition as in rows of Tirthankara images, which like the repeated Buddhas, set up a hypnotic rhythm, a kind of visual *mantra* or aid to concentration. The method of communication is to use an element of purely visual stimulation to the senses directly relating to the spiritual experience in contrast to the more indirect literary method of story telling art, by which the devotee is invited to share in a dramatic scene of action, and in which the gods seem to share more vividly the vicissitudes of mundane life. An important function of ritual is, precisely, to transcand mundane experience, and it is this function which is served by the less dramatic, less active, more iconic imagery employed here. Some later observers attribute the repitition to a dearth of creative imagination. Such a criticism reveals a lack of understanding of the nature of creativity in art. "Imagination', the making of images, neither begins nor ends with the invention of new or varied subjects [Doris Chatam, Style and Composition in the Indra Sabha and the Jagannatha sabha caves at Ellora-in-*'Nirgrantha'* Vol. 2: 1996:83]

ಜೈನ ವಾಸ್ತು - ಶಿಲ್ಪ ಪರಂಪರೆಯ ಪ್ರಮುಖ ಲಕ್ಷಣಗಳನ್ನಾಗಿ ಬಸದಿಯನ್ನು, ಬಸದಿಯ ಒಳಹೊರಗಿನ ವೈಶಿಷ್ಟ್ಯಗಳನ್ನು ನಿರೂಪಿಸುವಾಗ ಇದುವರೆಗೆ ಹೇಳಿದ ಬಸದಿಗಳು, ಮಾನಸ್ತಂಭಗಳು, ನಿಸಿದಿಗೆಗಳು, ಚತುರ್ಮುಖ ಬಸದಿಗಳು, ನಿರಾಭರಣ ನಗ್ನ ಜಿನಬಿಂಬಗಳು, ಬಾಹುಬಲಿ ಮೂರ್ತಿಗಳು, ಜಿನಶಾಸನ ದೇವತೆಗಳು, ನಾಗರ ಕಲ್ಲುಗಳು, ಯಂತ್ರಗಳು, ಮಂತ್ರ ಚಿತ್ರ ತಗಡುಗಳು - ಇವಿಷ್ಟೇ ಎಂದಲ್ಲ, ಇವುಗಳೊಂದಿಗೆ ಇನ್ನೂ ಕೆಲವು ಸಂಗತಿಗಳೂ ವಸ್ತು -ಪದಾರ್ಥಗಳೂ ಇವೆ (ನಾಗರಾಜಯ್ಯ, ಹಂಪ : ಸಚಿತ್ರ ಹೊಂಬುಜ : ೧೯೯೭ - ಬಿ : ೨೨) ಭಾರತೀಯ ವಾಸ್ತು ಶಿಲ್ಪ ಕಲಾ ಪ್ರಪಂಚಕ್ಕೆ, ಗುಣಗಾತ್ರ ಎರಡರಲ್ಲೂ ಜೈನರ ಕೊಡುಗೆ ಗಣ್ಯತಮವಾದದ್ದು. D.C. Sarkar said that in all spheres of creative art, Jains were supreme. The Jaina temples are found in Bangladesh also as in the South, North

and West of our country. Its influence on the cultural pattern of our country is very great and deep. Dr. Sarkar unequivocally subscribed to the view that the variety with deep insight, richness with supreme qulity and ethos combined with unparallelled artistic grace are some of the basic characteristics of the Jaina art. Dr. Sarkar concluded that time has come when we must take serious efforts to preserve these finest and noblest specimen of human art couched in divinity [*Jain Journal*, vol. VII-3 : 1974 : 128]

ಕರ್ನಾಟಕ ಜಿನ ಚೈತ್ಯಾಲಯಗಳ ಆಗರ. ಕಳೆದ ೧೬೦೦ ವರ್ಷಗಳಿಂದ ಈ ಕನ್ನಡ ನಾಡಿನ ಉದ್ದಗಲಗಳಲ್ಲಿ ಅರ್ಹದಾಯತನಗಳು ಸಾವಿರಾರು ಸಂಖ್ಯೆಯಲ್ಲಿ ಕಂಡುಬಂದಿವೆ. ಸಾಮಾನ್ಯ ಪ್ರಜೆಯಿಂದ ಹಿಡಿದು ರಾಜಮಹಾರಾಜರವರೆಗೆ ಸಾವಿರಾರು ಜನ ಜಿನಭಕ್ತರು ಮರದಲ್ಲಿ, ಇಟ್ಟಿಗೆಯಲ್ಲಿ, ಕಲ್ಲಿನಲ್ಲಿ ಬಸದಿಗಳನ್ನು ಕಟ್ಟಿಸಿ ಕೈ ಮುಗಿದಿದ್ದಾರೆ. ಬಸದಿಗಳು ಕೇವಲ ಭಕ್ತಿಯ ಗೋಡೆಗಳಲ್ಲ ; ಅವು ಸಾವಿರಾರು ವರ್ಷಗಳ ಭವ್ಯ ಪರಂಪರೆಯ ಅಮೃತಧಾರೆಯ ಪ್ರತೀಕ, ಚೈತನ್ಯಮಯಿ ಸಂಸ್ಕೃತಿಯ ಕೇಂದ್ರ, ಜಿನವಾಣಿಯನ್ನು ಜನವಾಣಿಯಾಗಿಸಿದ ನೆಲೆ, ಜೀವಕೋಟಿಗೆ ಅಭಯಪ್ರದಾನ ಮಾಡಿದ ಪವಿತ್ರ ತಾಣ, ಋಷಿ ಮುನಿಗಳು ಹರಸಿದ ತೀರ್ಥವಾಣಿಯನ್ನು ಹರಿಸಿದ ಬೀಡು, ಚತುರ್ವಿಧ ಸಂಘದ ಸಮಾಗಮವೇದಿಕೆ, ಧರ್ಮ ಇತಿಹಾಸ ವಾಸ್ತು ಶಿಲ್ಪ ಕಲೆ ಮುಪ್ಪುರಿಗೊಂಡ ನಲ್ದಾಣ. ಕರ್ನಾಟಕದ, ಆ ಮೂಲಕ ಭಾರತೀಯ ಅರಿವಿನ ಕಣಜಕ್ಕೆ ಬಸದಿಗಳ ಅಧ್ಯಯನ ದೊಡ್ಡ ಕೊಡುಗೆ (ಕಮಲಾ ಹಂಪನಾ : *ಶಾಸನಗಳಲ್ಲಿ ಬಸದಿಗಳು* - ಹಂಪನಾ ಪುಸ್ತಕದ ಬೆನ್ನುಡಿ : ೧೯೯೮ -ಬಿ)

ಆಧಾರ ಗ್ರಂಥಗಳು

Epigraphia Carnatika (EC.)
Epigraphia Indica (EI)
South Indian Inscriptions (SII)
Corpus of Kadamba Inscriptions (CKI), ed. Gopal, B.R. (1985)
Inscriptions of Western Gangas (IWG), ed. Ramesh, K.V. 1984)

1976. Shik Ali, B : *History of the Western Gangas*, Mysore.
1983. Sharma, I.K. : Brick Temples of Western Gangas - in 'Srinidhih' - Perspectives in Indian Archeology Art and Culture.
1915 Havell, E.B. : *The Ancient and Mediaeval Architecture of India* - A Study of Indo-Aryan Civilizaiton London.
1995 Kamala Hampana : Attimabbe and Chalukyas, Bangalore
1996. Michael W. Meister : Regions and Indian Architercture - in *'Nirgrantha'*, vol. 2.
1977 Jose Pereira : Monolithic Jinas, The Iconography of the Jain Temples of Ellora.
1975. *Jaina Art and Architecute*, vol. III, ed. A. Ghosh.

1996. Doris Chatam : Style and Composition in the Indra Sabha and the Jagannatha Sabha Caves at Ellora, in '*Nirgrantha*' vol. 2.

1974, *Jain Journal*, vol. VII, I. No. 3.

ನಾಗರಾಜಯ್ಯ, ಹಂಪ

೧೯೭೬, ಯಕ್ಷಯಕ್ಷಿಯರು

೧೯೯೬. ಕವಿವರ ಕಾಮಧೇನು (ಅತ್ತಿಮಬ್ಬೆ)

೧೯೯೭-ಎ. ಸಾಂತರರು : ಒಂದು ಅಧ್ಯಯನ

೧೯೯೭-ಬಿ. ಸಚಿತ್ರ ಹೊಂಬುಜ

೧೯೯೭-ಸಿ. ಚಂದ್ರಕೊಡೆ

೧೯೯೮-ಎ. ಕೊಪ್ಪಳ ಶಾಸನಗಳು

೧೯೯೮-ಬಿ. ಶಾಸನಗಳಲ್ಲಿ ಬಸದಿಗಳು

ಸಂಕೇತ ಸೂಚಿ

ಎಕ : ಎಪಿಗ್ರಾಫಿಯ ಕರ್ನಾಟಕ ಸಂಪುಟಗಳು

ಕಇ : ಕರ್ನಾಟಿಕ ಇನ್ಸ್‌ಕ್ರಿಪ್ಷನ್ಸ್ ಸಂಪುಟಗಳು

ಚಾನ : ಚಾಮರಾಜನಗರ

(ಪ) : ಪರಿಷ್ಕೃತ

ಸೌ.ಇ.ಇ: ಸೌತ್ ಇಂಡಿಯನ್ ಇನ್ಸ್‌ಕ್ರಿಪಷನ್ಸ್

CKI : Corpus of Kadamba Inscriptions Volumes.
EC : Epigraphia Carnatika volumes.
EI : Epigraphia Indica Volumes.
SII : South Indian Inscription Volumes.

೧೦

ಬಾಬಾನಗರ ಶಾಸನದ ಅನನ್ಯತೆ ಮತ್ತು ಬಿಜ್ಜಳನ ಮತ ನಿರ್ಣಯ

ಬಿಜಾಪುರ ಜಿಲ್ಲೆ / ತಾಲ್ಲೂಕಿಗೆ ಸೇರಿದ ಬಾಬಾನಗರ ಪ್ರಾಚೀನ ಜೈನ ಕೇಂದ್ರ. ಇದರ ಹಳೆಯ ಹೆಸರು ಕನ್ನಡಿಗೆ. ಇದು ವಿಜಾಪುರದಿಂದ ಪಶ್ಚಿಮಕ್ಕೆ ೨೭ ಕಿಮೀ. ಅಂತರದಲ್ಲಿದೆ. ಇಲ್ಲಿ ದೊರೆತಿರುವ ಶಾಸನಗಳಲ್ಲಿ ಒಂದರ ಅಪೂರ್ವತೆಯ ಚರ್ಚೆ ಈ ಸಂಪ್ರಬಂಧದ ವಿಷಯ. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್‌ನ ೧೮ನೆಯ ಸಂಪುಟದಲ್ಲಿ ಅಚ್ಚಾಗಿರುವ ೧೮೭ನೆಯ ಸಂಖ್ಯೆಯ ಚಾರಿತ್ರಿಕ ಮಹತ್ವದ ಈ ಶಾಸನ ಬಹುಮುಖಿ ಅಧ್ಯಯನವನ್ನು ತಾಳುವ ನಿಕ್ಷಿಪ್ತ. ನಾನಾ ನಿಟ್ಟಿನಿಂದ ಈ ಶಾಸನದ ವಿಭಿನ್ನ ಪಾತಳಿಗಳನ್ನು ಬಿಡಿಸಿ ನೋಡಿದರೆ ಹಲವು ವಿಶಿಷ್ಟ ಸಂಗತಿಗಳು ಹೊರಹೊಮ್ಮುತ್ತವೆ. ಈ ಶಾಸನ ಗರ್ಭೀಕರಿಸಿದ್ದು ಇದುವರೆಗೆ ಪ್ರಸ್ತಾಪಗೊಳ್ಳದ ಹೊಸ ವಿಚಾರಗಳನ್ನು ಸಂಕ್ಷೇಪ ರೂಪದಲ್ಲಿ ಪ್ರಸ್ತಾಪಿಸಲಾಗುವುದು.

೧. ಇದು ಕಲಚುರ್ಯರ ಆಳ್ವಿಕೆಗೆ ಸೇರಿದ ಶ್ರೇಷ್ಠ ಶಾಸನಗಳಲ್ಲೊಂದು.

೨. ಒಟ್ಟು ೭೧ ಸಾಲುಗಳ ಈ ಸಾದ್ಯಂತ ಜೈನ ಶಾಸನ ತುಂಬ ತ್ರುಟಿತವಾಗಿದೆ.

೩. ಇದು ಕನ್ನಡ ಭಾಷೆಯಲ್ಲಿರುವ ದಾನ ಶಾಸನ. ಜೈನರ ಬಸದಿಗಳಿಗೆ ಕಲಚುರ್ಯ ರಾಜರೂ ಆಪ್ತೇಷ್ಟ ಪರಿವಾರದವರೂ ದತ್ತಿಗಳನ್ನಿತ್ತು ಪೂಜೆ ಪುರಸ್ಕಾರಗಳನ್ನೆಸಗಿದ ವಿವರಗಳಿವೆ.

೪. ಪ್ರಾಸಂಗಿಕವಾಗಿ ರಾಜಕೀಯ, ಸಮಾಜೊ-ಧಾರ್ಮಿಕ, ಸಾಂಸ್ಕೃತಿಕ ವಿಶೇಷತೆ ಇರುವ ವಿಚಾರಗಳೂ ಪ್ರಸ್ತಾಪವಾಗಿವೆ.

೫. ರಾಷ್ಟ್ರಕೂಟರ ಆರಂಭದ ಆಳ್ವಿಕೆಗೆ ಸೇರಿದ ಮಹಾನ್ ತಾರ್ಕಿಕ, ಭಟ್ಟ ಅಕಲಂಕ ಆಚಾರ್ಯನ (೭೨೦-೮೦) **ಪ್ರಮಾಣ ಸಂಗ್ರಹ**ದಿಂದ ಆಯ್ದ

ಶ್ರೀಮತ್ ಪರಮ ಗಂಭೀರ ಸ್ಯಾದ್ವಾದಾಮೋಘ ಲಾಂಛನಂ.. ಎಂಬ ಜನಪ್ರಿಯ ಶ್ಲೋಕದಿಂದ ಈ ಶಾಸನ ಅನಾವರಣಗೊಂಡಿದೆ (ಸಾಲು. : ೧)

೬. ಪ್ರಾರ್ಥನಾನಂತರದ ಪಂಕ್ತಿಗಳು ಕಲಚುರಿ ಪೆರ್ಮಾಡಿದೇವನ (೧೧೧೮-೩೦) 'ಪ್ರಿಯಾಗ್ರ ನನ್ದನಂ' ಹಾಗೂ ಸ್ವತಂತ್ರ ಕಲಚುರ್ಯ ಆಳ್ವಿಕೆಯ ಉದ್ಘಾಟಕ ಇಮ್ಮಡಿ ಬಿಜ್ಜಣದೇವರಸನ (೧೧೩೦-೬೭) ಸಾಹಸ ಹಾಗೂ ಧಾರ್ಮಿಕ ಶ್ರದ್ಧೆಯ ಮನೋಧರ್ಮವನ್ನು ಹೊಗಳಿವೆ : ಆತನ ಪ್ರಶಸ್ತಿಗಳೂ ಬಂದಿವೆ. (ಸಾಲು : ೨ ರಿಂದ ೧೧)

೭. ಅನಂತರ ವರ್ಣಿತವಾಗಿರುವುದು ಬಿಜ್ಜಣದೇವನ ಕಿರಿಯ ತಮ್ಮನಾದ ವೀರಮೈಳುಗಿ ಕ್ಷೋಣೀಶನ (೧೧೬೫) ಜೈನತ್ವದ ಕಾಳಜಿಗಳು (ಸಾಲು : ೧೨ ರಿಂದ ೨೦)

೮. ಮುಂದಿನ ಭಾಗದಲ್ಲಿ ಕನ್ನಡಿಗೆ ಪಟ್ಟಣ (ಬಾಬಾನಗರ) ಪೀಠದ ಆಚಾರ್ಯನೂ ಜಿನಪಾದಾಂಬುಜ ಭೃಂಗನೂ ಆದ ಮಾಣಿಕ್ಯ ಭಟ್ಟಾರಕ ಮುನಿರಾಜನ ಪರಿಚಯವಿದೆ. ಈ ಶಾಸನೋಕ್ತ ಬಿಜ್ಜಣ, ಮೈಳುಗಿ, ಸೋಮನೃಪ ರಾಜರೂ (ರವಿ) ದೇವ, ಚಾವುಂಡರಾಯನೂ ಈ ಮಾಣಿಕ್ಯ ಭಟ್ಟಾರಕನ ಶಿಷ್ಯರು (ಸಾಲು : ೨೦ರಿಂದ ೨೩)

೯. ಶ್ರಾವಕ ಶಿಷ್ಯನಾದ (ರವಿ) ದೇವನು ಕನ್ನಡಿಗೆಯಲ್ಲಿ ಎಂಟನೆಯ ತೀರ್ಥಂಕರರಾದ ಚಂದ್ರಪ್ರಭರ ಬಸದಿಯನ್ನು ಮಾಡಿಸಿ ಉನ್ನತಿಯನ್ನು ಹೊಂದಿದನು. (ಸಾಲು : ೨೪ ರಿಂದ ೨೭)

೧೦. ಚತುರ್ವಿಧ ದಾನಗೈದು ಹೆಸರು ಗಳಿಸಿದ್ದ ಚಾವುಂಡರಾಯನು ಕನ್ನಡಿಗೆಯ ಈ ಚಂದ್ರಪ್ರಭ ಜಿನಭವನದ ಮುಂದೆ ಮೂರುಲೋಕಗಳನ್ನು ಅಳೆಯುವ ಮಾನದಂಡವೊ ಎಂಬಂತೆ ಕಂಗೊಳಿಸಿದ ಎತ್ತರವಾದ ಮಾನಸ್ತಂಭವನ್ನು ಮಾಡಿಸಿದನು (ಸಾಲು. ೨೭ ರಿಂದ ೩೦).

೧೧. ನಿಜಭುಜ ಪ್ರತಾಪಿಯೂ ಉತ್ತರೋತ್ತರ ಅಭಿವೃದ್ಧಿ ಪ್ರವರ್ಧಮಾನನೂ ಆಗಿ ಆಚಂದ್ರಾರ್ಕತಾರಂಬರಂ ಸಲ್ಲುತ್ತ ಬಿಜ್ಜಣ ದೇವರಸನು ರಾಜ್ಯವಾಳುತ್ತಿದ್ದನು. ಜಿನ ಗನ್ಧೋದಕಪವಿತ್ರೀಕೃತೋತ್ತಮಾಂಗನೂ ಪರಿಜನ ಪಾರಿಜಾತನೂ ಆದ ಬಿಜ್ಜಣದೇವರಸನು ಸಕವರ್ಷ ೧೦೮೩ನೆಯ (ಕ್ರಿ.ಶ. ೧೧೬೦) ವಿಕ್ರಮ ಸಂವತ್ಸರದ ಪುಷ್ಯ ಪೂರ್ಣಿಮೆ ಅಷ್ಟಾಹ್ನಿಕ ಪರ್ವ ನಿಮಿತ್ತ ಮಂಗಳವೇಡದ ರಾಯರ ಆಚಾರ್ಯ ಮೂಲಸಂಘದ ದೇಶಿಗಣದ ತ್ರಿಭುವನ ದೇವರ ಸನ್ತಾನ ಮಾಣಿಕ್ಯ ಭಟ್ಟಾರಕ ಮಾಡಿಸಲಾಗಿದ್ದು 'ಕನ್ನಡಿಗೆ ಪಟ್ಟಣದ ಕನ್ನಡಿ' ಎಂಬಂತೆ ಹೊಳೆಯುತ್ತಿದ್ದ ಬಸದಿಯಲ್ಲಿ ಅಷ್ಟವಿಧಾರ್ಚನೆಗೂ ಜೈನಮುನಿಗಳ (ರಿಷಿಯರ) ಆಹಾರದಾನಕ್ಕೂ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೂ ೨೪ ಮತ್ತರು ಜಮೀನನ್ನು ದಾನವಾಗಿ ಬಿಟ್ಟುಕೊಟ್ಟನು (ದತ್ತಿಯಿತ್ತ ಹೊಲದ ಗಡಿಮೇರೆಗಳನ್ನೂ ಹೇಳಿದೆ) : (ಸಾಲು : ೩೧ರಿಂದ ೪೭)

೧೨. ಶಾಸನದ ಮೂರನೆಯ ಹಾಗೂ ಕಡೆಯ ಭಾಗದಲ್ಲಿ ಕಲಚುರಿ ಸೋಮನೃಪನು (೧೧೬೫-೭೭) ಕನ್ನಡಿಗೆ ಬಸದಿಯ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಕೊಡಮಾಡಿದ ಭೂಮಿಕಾಣಿಯ ವಿವರಗಳಿವೆ. ಈ ಬಸದಿಯನ್ನು ಕಟ್ಟಿಸಿದಾತ ಚಂದಿಮಯ್ಯ. ಸೋಮನೃಪ ಎಂಬುದು ಬಿಜ್ಜಳನ ಎರಡನೆಯ ಮಗನಾದ ರಾಯಮುರಾರಿ ಸೋವಿದೇವನಿಗಿದ್ದ ಇನ್ನೊಂದು

ಹೆಸರು. ಸೋಮನೃಪನು ತನ್ನ ನೆಲೆವೀಡಾದ ಮೋದೆಗನೂರಿಂದ ಆಳುತ್ತಿದ್ದನೆಂದು ಶಾಸನೋಕ್ತವಾಗಿದೆ. ಮೋದೆಗನೂರು / ಮೊದೆಗನೂರು ಎಂಬುದು ಈಗಿನ ಕೊಪ್ಪಳ ಜಿಲ್ಲೆ - ತಾಲ್ಲೂಕಿಗೆ ಸೇರಿದ ಮಾದನೂರು ಗ್ರಾಮ. ತಾನು ತಳೆದ (ತಾಟ್ಟಿ) ಪಟ್ಟಾಭಿಷೇಕದ (ಪಟ್ಟಬನ್ಧನ) ಪ್ರಥಮ ವಾರ್ಷಿಕ ಶುಭಾವಸರದ ಸಂಸ್ಮರಣೆಗೆಂದು ಈ ದಾನವನ್ನು ಕ್ರಿ.ಶ. ೧೧೬೮ರ ಸಂವತ್ಸರದ ಪುಷ್ಯ ಬಹುಳ ೧೩ ಆದಿವಾರದಂದು ಬಸದಿಗೆ ಒಪ್ಪಿಸಿದನು (ಸಾಲು : ೪೬ರಿಂದ ೬೪)

೧೩. ಮಲ್ಲಿನಾಥ ಪುರಾಣಂ, ರಾಮಚಂದ್ರ ಚರಿತ ಪುರಾಣಂ ಕಾವ್ಯಗಳ ಸತ್ಕವಿ ನಾಗಚಂದ್ರನುತ ಮೊಮ್ಮಂ ನಾಗಚಂದ್ರಾಗ್ರಜಂ ಮಲ್ಲಿನಾಥನು ಈ ಶಾಸನವನ್ನು ಬರೆದನು, ಮೂಲಿಗ ನಾಗಾರ್ಯನು ಕಂಡರಿಸಿದನು:

> ಪೊಸಮುತ್ತಂ ಚತುರಾಸ್ಯನಾಯ್ದಮೃತದಿಂದಂ ತೋಯ್ದು ಕೋದಿಕ್ಕಿದೆ
> ಕ್ಕಸರಂ ವಾಗ್ವಧುವಿ(ಂ)ಗೆ ತಾನೆನಿಸಿ ಸುವ್ಯಕ್ತಂಗಳಾದಕ್ಕರಂ
> ಮಿಸುಗ(ಲ್) ಶಾಸನಮಂ ಸಮಸ್ತು ಬರೆದಂ ಶ್ರೀ ಮಲ್ಲಿನಾಥ (ಕಳಾ)
> ವಸಥಂ ಸತ್ಕವಿ ನಾಗಚಂದ್ರನುತ ಮೊಮ್ಮಂ ನಾಗಚಂದ್ರಾಗ್ರಜಂ॥

(ಸಾಲು : ೭೦-೭೧)

ಮೇಲ್ಕಂಡ ಚಾರಿತ್ರಿಕ ಮಾಹಿತಿಗಳನ್ನು ಒಳಗೊಂಡಿರುವ ಬಾಬಾನಗರ (ಕನ್ನಡಿಗೆ) ಶಾಸನದ ಅಪೂರ್ವತೆಯನ್ನು ಉತ್ಪ್ರೇಕ್ಷಿಸುವ ಅಗತ್ಯವಿಲ್ಲ. ಈ ಕಲ್ಲಿನ ಬರೆಹ ಬಿಟ್ಟುಕೊಟ್ಟಿರುವ ಸರಕಿನ ಸೂಕ್ಷ್ಮಾಂಶಗಳನ್ನು ಸಣ್ಣ ಸಣ್ಣ ಭಾಗಗಳನ್ನು ಎತ್ತಿಕೊಂಡು ತಪಶೀಲಾಗಿ ವಿಚಾರ ಮಾಡುವುದರಿಂದ ಶಾಸನದ ಪ್ರಾಮುಖ್ಯ ನಿಚ್ಚಳವಾಗುತ್ತದೆ. ಕಲಚುರಿ ರಾಜರ, ಆಳ್ವಿಕೆಯ, ಧಾರ್ಮಿಕತೆಯ ಹಾಗೂ ರಾಜಕೀಯ ನೆಲೆಗಳ ಸುಳಿವುಗಳೂ ಅಡಕವಾಗಿವೆ.

ಕಲಚುರಿ ರಾಜ್ಯಲಕ್ಷ್ಮಿ ಅಲ್ಪಾಯುಷಿ. ಬಿಜ್ಜಳನು ಎಂಟು ಮಕ್ಕಳ ತಂದೆ. ಈ ಮಕ್ಕಳಲ್ಲಿ ಇಬ್ಬರು ಮಗಳುದಿರು. ಆರು ಜನ ಮಗಂದಿರಿಗೆ ರಾಜ ಗದ್ದುಗೆಯೇರುವ ಹುರುಪು; ಸಿಂಹಾಸನ ಮೋಹದ ಬಲೆ. ಮುನ್ನೋಟವಾಗಲಿ, ಕ್ಷಾತ್ರತೇಜಸ್ಸಾಗಲಿ ಇರದ ಅಣ್ಣ ತಮ್ಮಂದಿರು ಹಗೆತನದ ಕಿಚ್ಚಿನಲ್ಲಿ ಕಮರಿ ಕರಿಕಾದರು. ಯಾರೂ ಹೆಚ್ಚುಕಾಲ ಆಳಲಿಲ್ಲ, ಬಾಳಲಿಲ್ಲ. ಹೀಗಾಗಿ ಈ ಶಾಸನದಲ್ಲಿ ಬಸದಿಗೆ ದಾನವಿತ್ತ ರಾಜನಾಗಿ ಮೈಳುಗಿ ಕಾಣಿಸಿಕೊಳ್ಳುತ್ತಾನೆ. ಇದು ಬಿಜ್ಜಳನ ಕಡೆಯ ಘಟ್ಟಕ್ಕೆ ಹಾಗೂ ಮೈಳುಗಿ ಮತ್ತು ಸೋಮನೃಪನ ಆರಂಭ ಹಂತಕ್ಕೆ ಸೇರಿದೆ. ತಂದೆ, ಮಗ, ತಮ್ಮ, ಮೊಮ್ಮಗ, ಅಳಿಯ ಒಂದೇ ಶಾಸನದಲ್ಲಿ ಪ್ರಸ್ತಾಪಿತವಾಗಿದ್ದಾರೆ. ಚಾವುಂಡರಾಯನು ಬಿಜ್ಜಳನ ಅಳಿಯ, ಬಿಜ್ಜಳನ ಮಗಳಾದ ಸಿರಿಯಾದೇವಿಯ ಗಂಡ. ಈತನೂ ಜೈನನಾಗಿದ್ದು ಕನ್ನಡಿಗೆಯಲ್ಲಿನ ಬಸದಿಯ ಮುಂದೆ ಮೂರು ಲೋಕಗಳನ್ನು (ಲೋಕತ್ರಯ) ಅಳೆಯುವ 'ಮಾನದಂಡವಿದು' ಎಂಬಂತಿರುವ ಉನ್ನತ ಮಾನಸ್ತಂಭವನ್ನು 'ಮಾಡಿಸಿದಂ'.

ಕಳಚುರಿ ಬಿಜ್ಜಳ ಮತ್ತು ಮಕ್ಕಳ ಮಾಹಿತಿಯೊಂದಿಗೆ ಕವಿ ನಾಗಚಂದ್ರನ ಮಕ್ಕಳ ಮೊಮ್ಮಕ್ಕಳ ಪ್ರಸ್ತಾಪವೂ ಬೆಸುಗೆಗೊಂಡು ಈ ಶಾಸನ ತನ್ನ ಹಿರಿಮೆಯನ್ನು ಇಮ್ಮಡಿಸಿಕೊಂಡಿದೆ. ಅಲ್ಲದೆ

ಸಾಲು ೨೫ರಲ್ಲಿರುವ (ರ)ವಿದೇವನು ನಾಗಚಂದ್ರನ ಮಗನಾದ ದೇವಣ್ಣನಾಗಿರಲೂ ಬಹುದು. ಮದರಾಸು ಪ್ರಾಚ್ಯಕೋಶಾಗಾರದಲ್ಲಿರುವ 'ಲೋಕಲ್ ರೆಕಾರ್ಡ್ಸ್' ಸಂಪುಟ ೨೬ರಲ್ಲಿ (ಪುಟ ೨೫೧) 'ಶ್ರೀಮತ್ ತ್ರಿಭುವನ ಮಲ್ಲದೇವರಣುಗೆಯರಪ್ಪ ಶ್ರೀಮನ್ ಮಾಳಲದೇವಿಯರು ಶಕವರ್ಷ ೧೦೨೭ ಪಾರ್ಥಿವ ಸಂವತ್ಸರದ ಫಾಲ್ಗುಣ ಪೂರ್ಣಿಮಾ ಆದಿವಾರ ಪರ್ವ್ವ ನಿಮಿತ್ತಂ.... ತಮ್ಮಾಳ್ಕೆ ಭತ್ತಗ್ರಾಮ ಕುಣಿಲಂಗೇರಿಯ ಹಂಪಕವಿಯ ಮಗ ದೇವಣ್ಣನ ವಕ್ಕರಣೆಯ ಧರ್ಮಕ್ಕೆ ಧಾರಾಪೂರ್ವಕ' ಎಂದಿದೆ. ಇದರ ಕಾಲ ಕ್ರಿ.ಶ. ೧೧೦೫.

ಶಾಸನದಲ್ಲಿ ಹೆಸರಿಸಿರುವ ಮಂಗಳವೇಡೆ, ಕನ್ನಡಿಗೆ ಮತ್ತು ಮೋದೆಗನೂರು - ಮೂರು ಊರುಗಳಲ್ಲಿ ಮೊದಲೆರಡು ಸ್ಥಳಗಳು ಜೈನಕೇಂದ್ರಗಳು. ಕನ್ನಡಿಗೆಯು (ಬಾಬಾನಗರ) ಇಂದಿಗೂ ಪಾಳುಬಸದಿಗಳಲ್ಲದೆ ನಿತ್ಯ ಪೂಜೆಗೊಳ್ಳುತ್ತಿರುವ ಚಿಂತಾಮಣಿ ಪಾರ್ಶ್ವನಾಥ ಬಸದಿಯಿಂದ ಪ್ರಸಿದ್ಧವಾಗಿದೆ. ವಿಜಾಪುರದಲ್ಲಿದ್ದ ೧೪ರಿಂದ ೧೬ ಜಿನಾಲಯಗಳ ಬಿಂಬಗಳಲ್ಲಿ ಕೆಲವು ಇಂಡಿ, ಬಾಬಾನಗರಗಳ ಬಸದಿಗಳಲ್ಲಿವೆ. ಬಿಜಾಪುರ, ಮಂಗಳವೇಡೆ, ಕನ್ನಡಿಗೆ, ಮಾಳಕವಟೆ - ಇವೆಲ್ಲ ಹತ್ತಿರವಾಗಿರುವ ಜೈನಾಪುರಗಳು. ಕನ್ನಡಿಗೆ ಕಲ್ ಬರೆಹ ಬಿಜ್ಜಳನನ್ನು, ಜೈನ ದಾಖಲೆಗಳಲ್ಲಿ ವಾಡಿಕೆಯಲ್ಲಿರುವ ಬಿಜ್ಜಣದೇವ ಎಂಬ ನಾಮರೂಪದಿಂದ ಪರಿಚಯಿಸಿದೆ.

ಬಿಜ್ಜಣ(ಳ) ದೇವನು ಜೈನಕೇಂದ್ರವಾದ ಇಂಗಳೇಶ್ವರದಲ್ಲಿ (ವಿಜಾಪುರ ಜಿಲ್ಲೆ, ಬಾಗೇ ವಾಡಿ ತಾ) ಹುಟ್ಟಿ, ಮತ್ತೊಂದು ಜೈನ ಗದ್ದುಗೆಯಾದ ಮಂಗಳವೇಡೆಯಲ್ಲಿ ಬೆಳೆದನು. ಆ ಕಾರಣಕ್ಕಾಗಿಯೂ ಮಂಗಳವೇಡೆಯನ್ನು ಬಿಜ್ಜಣನು ತನ್ನ ಮೊದಲ ನೆಲೆವೀಡನ್ನಾಗಿಸಿದನು. ಈತನು ಚಿಪ್ಪಗಿರಿಯಲ್ಲಿ (ಆಂಧ್ರ : ಕರ್ನೂಲು ಜಿಲ್ಲೆ ಆಲೂರು ತಾ) ಗುಡ್ಡದ ಮೇಲೆ ಕಟ್ಟಿಸಿದ ಮಹಾವೀರ ಬಸದಿ ಇನ್ನೂ ತನಕ ಉಳಿದು ಬಂದಿದೆ. ಇದರ ಗರ್ಭಗೃಹ, ಅರ್ಧಮಂಟಪ, ವಿಮಾನ, ಮಹಾಮಂಡಪ, ಮುಖಮಂಟಪ, ಗೂಢ ಮಂಡಪದ ನಾಲ್ಕು ಕಂಬಗಳು, ನವರಂಗದ ಕಕ್ಷಾಸನ - ಈ ವಾಸ್ತು ವಿಶಿಷ್ಟವಾಗಿದೆ.

ಪ್ರೊ. ರಾಮಸ್ವಾಮಿ ಐಯ್ಯಂಗಾರ್, ಪ್ರೊ. ಡಿ. ಕೆ. ಭೀಮಸೇನರಾವ್ ಮೊದಲಾದವರು, ವೀರಶೈವ ಮತ್ತು ಜೈನ ಕವಿಗಳ ಹೇಳಿಕೆಯನ್ನು ಬೆಂಬಲಿಸಿ, ಬಿಜ್ಜಳನು ಜೈನನೆಂದಿದ್ದಾರೆ. ಕೆಲವರು ಇದು ಇದಮಿತ್ಥವೆಂದು ಇತ್ಯರ್ಥವಾಗಲು ಶಾಸನಾಧಾರಗಳು ಬೇಕೆಂದು ಸಂಶಯ ವ್ಯಕ್ತಪಡಿಸಿದ್ದುಂಟು : There is no clear proof, however, that Bijjala was really a Jain [*The Early History of the Deccan* : 1960-464] ಆದರೆ ಏತತ್ಸಂಬಂಧವಾದ ಪೂರಕ ಸಾಮಗ್ರಿ ಶಾಸನಗಳ ಒಡಲಲ್ಲಿದೆ.

ಬಿಜ್ಜಳನನ್ನು ಪರಿಚಯಿಸುವಾಗ ಬಳಸಿರುವ ವಿಶೇಷಣಗಳು ಪರಿಭಾವನೀಯವಾಗಿವೆ. ಅವುಗಳಲ್ಲಿ ೩೨ರಿಂದ ೪೬ನೆಯ ಸಾಲಿನ ಪ್ರಯೋಗ ಬಿಜ್ಜಳನ ಸ್ವಂತ ಧರ್ಮ ಯಾವುದಾಗಿ ತ್ತೆಂಬುದಕ್ಕೆ ಹೊನಲು ಬೆಳಕು ಹಾಯಿಸುತ್ತದೆ. ಬಿಜ್ಜಣದೇವರಸನು *'ರಾಜ್ಯಂಗೆಯ್ಯುತ್ತಲಿರ್ದ್ದ ಜಿನಗನ್ಧೋದಕಪವಿತ್ರೀಕೃತೋತ್ತಮಾಂಗ'*ನಾಗಿದ್ದನೆಂಬ ಶಾಸನ ಪಾಠದ ಮಹತ್ವವನ್ನು ಸರಿಯಾಗಿ ಅರಿಯಲು ಜೈನಧರ್ಮದ ಆಚರಣೆಯ ಹಿನ್ನೆಲೆ ತಿಳಿದಿರಬೇಕಾಗುತ್ತದೆ. ಜೈನಗುಡಿಗಳಲ್ಲಿ ಅಥವಾ ಮನೆಗಳಲ್ಲಿ, ಅಭಿಷೇಕ ಪೂಜೆ ಪ್ರಾರ್ಥನೆಗಳಾದ ಮೇಲೆ ಶ್ರಾವಕ ಶ್ರಾವಕಿಯರ ತಲೆಯ ಮೇಲೆ

ತೀರ್ಥವನ್ನು ಚಿಮುಕಿಸುತ್ತಾರೆ. ಇಲ್ಲಿ ತೀರ್ಥವನ್ನು ಕೈಗೆ ಹಾಕಿಸಿಕೊಂಡು ಕುಡಿಯುವ ಸಂಪ್ರದಾಯವಿಲ್ಲ. ಜಿನಬಿಂಬಗಳಿಗೆ, ಶ್ರೀಗಂಧವನ್ನು ತೆಯ್ದು ಮಾಡಿದ ಅಭಿಷೇಕ ಜಲವನ್ನು ಚಿಕ್ಕ ಗೋಮುಖ ಪಾತ್ರೆಯಲ್ಲಿ ಹಿಡಿದಿಡುತ್ತಾರೆ. ಇದೇ ಜಿನಗನ್ಧೋದಕ. ಇದರಲ್ಲಿ ಅದ್ದಿದ ಬಿಡಿಹೂವಿಂದ ಜಿನಗನ್ಧೋದಕವನ್ನು ಜಿನಭಕ್ತರ ತಲೆಯ ಮೇಲೆ ಸಿಂಪಡಿಸುವರು. ಈ ಸಿಂಪಡಿಕೆಯಿಂದ ಮೈಮನ ಪವಿತ್ರವಾಯಿತೆಂಬ ಹಿತದ ಪುಳಕಾನುಭವಗೊಳ್ಳುವುದೇ 'ಪವಿತ್ರೀಕೃತ ಉತ್ತಮಾಂಗಂ' ಎಂಬುದು. ಉತ್ತಮಾಂಗವು ಶಿರಸ್ಸು. ಅಂದರೆ, ತಲೆಗೆ ತೀರ್ಥವನ್ನು ತಳೆಯುವುದು.

ಇಲ್ಲಿ ಗಮನಿಕೆಗೆ ಹಾಗೂ ಸಸೂಕ್ಷ್ಮ ಗ್ರಹಿಕೆಗೂ ಗ್ರಾಸವಿದೆ. ಬಿಜ್ಜಳದೇವರಸನಿಗೆ ಜಿನಮಂದಿರಕ್ಕೆ ಬಂದ ಮೇಲೆ ಜಿನಗಂಧೋದಕವನ್ನು ಹಾಕಿದ್ದಲ್ಲ. ಆತ ನಿತ್ಯ ಅರಮನೆಯಲ್ಲಿ *ಜಿನಪೂಜೆ ಮಾಡಿ, ಜಿನಗನ್ಧೋದಕವನ್ನು ಚಿಮುಕಿಸಿಕೊಂಡು, ಪವಿತ್ರೀಕೃತ ಉತ್ತಮಾಂಗನಾದವನು.* ಬಿಜ್ಜಣನು ಪರಿಜನ ಪಾರಿಜಾತನೂ ಆಶ್ರಿತರಿಗೆ ಬೇಡಿದ್ದನ್ನು ನೀಡುವ ಮೋಡವೂ (ಮೇಘನುಂ) ಆಗಿದ್ದನೆಂದು ಪರಿಚಯಿಸುವ ಪದಪುಂಜಗಳಲ್ಲಿ ಪೋಣಿಸಿಕೊಂಡು ಈ ಮಾತು ಹೆಣೆದು ಬಂದಿರುವುದು ವಿಶಿಷ್ಟವಾಗಿರುವಂತೆ ಆತನ ವೈಯಕ್ತಿಕ ಮತಾಚಾರಣೆಯನ್ನೂ ಕನ್ನಡಿಸುತ್ತಿದೆ. 'ಜಿನಗನ್ಧೋದಕ ಪವಿತ್ರೀಕೃತಗಾತ್ರ'ವೆಂಬ ಪದಪುಂಜದ ಪ್ರಯೋಗ ಜೈನಶ್ರಾವಕರ ಪರಿಚಯ ಸಂದರ್ಭದಲ್ಲಷ್ಟೆ ಬರುತ್ತದೆಂಬುದಕ್ಕೆ ಶಾಸನಾಧಾರಗಳುಂಟು:

೧ ಎಂಎಆರ್. ೧೯೨೧, ಪುಟ ೧೮, ಕ್ರಿ.ಶ. ೯೬೩ ಕಾಡಲೂರು
೨. ಸೌಇಇ, ಸಂಪುಟ ೧೧-೧, ಸಂಖ್ಯೆ ೫೨, ಕ್ರಿ.ಶ. ೧೦೦೭, ಲಕ್ಕುಂಡಿ.
೩. (ಜೈನಿಸಮ್ ಇನ್ ಸೌತ್ ಇಂಡಿಯ) ಇಂಗಳಗಿ ಶಾಸನ, ೧೦೯೪
೪. ಎಕ ೭-೧. ಶಿವಮೊಗ್ಗ ೯೭, ಕ್ರಿ.ಶ. ೧೧೧೨
೫. ಎಕ. ೬ (ಪ) ಕೃಷ್ಣರಾಜಪೇಟೆ ೩, ಕ್ರಿ.ಶ. ೧೧೧೮ ಹೊಸಹೊಳಲು (ಮಂಡ್ಯ ಜಿಲ್ಲೆ)
೬. ಎಕ ೨ (ಪ) ಶ್ರವಣಬೆಳಗೊಳ ೧೭೬ (೧೪೩), ಕ್ರಿ.ಶ. ೧೧೨೩
೭. ಎಕ ೭ (ಪ) ನಾಗಮಂಗಲ ೧೬೯, ಕ್ರಿ.ಶ. ೧೧೪೨ ಕಸಲಗೆರೆ (ಮಂಡ್ಯ ಜಿಲ್ಲೆ)
೮. ಎಕ ೧೨, ತಿಪಟೂರು ೯೩, ಕ್ರಿ.ಶ. ೧೧೭೪ ಕರಡಾಳು (ತುಮಕೂರು ಜಿಲ್ಲೆ)
೯. ಸೌಇಇ, ಸಂಪುಟ ೧೫, ಶಾಸನ ಸಂಖ್ಯೆ ೨೧೪, ಕ್ರಿ.ಶ. ೧೧೯೯, ಗದಗ
ಮೇಲ್ಕಂಡ ಶಾಸನಗಳಲ್ಲಲ್ಲದೆ ಕಾವ್ಯಗಳಲ್ಲೂ ಇದರ ಪ್ರಸ್ತಾಪವಿದೆ.

ಬಿಜ್ಜಣದೇವರಸನು ಜಿನಗಂಧೋದಕ ಪವಿತ್ರೀಕೃತ ಉತ್ತಮಾಂಗನಾಗಿದ್ದುದಲ್ಲದೆ ಬಸದಿಗೆ ಅಷ್ಟಾಹ್ನಿಕ ಪರ್ವ ನಿಮಿತ್ತವಾಗಿ ೨೪ ಮತ್ತರು ಭೂಮಿ ಬಿಟ್ಟಿದ್ದಾನೆಂಬುದೂ ಅಷ್ಟೇ ಪ್ರಮುಖ ವಿಷಯ. ಏಕೆಂದರೆ ಅಷ್ಟಾಹ್ನಿಕವನ್ನು ವ್ರತಾದಿಗಳಿಗೆ ಶ್ರೇಷ್ಠವಾದ ಪರ್ವದಿನವಾಗಿ ಜೈನರು ದೊಡ್ಡದಾಗಿ ಆಚರಿಸುತ್ತಾರೆ. ಇದಕ್ಕೆ ನಂದೀಶ್ವರ ಅಷ್ಟಾಹ್ನಿಕ ಎಂದೂ ಹೆಸರಿದೆ. ಮಧ್ಯ ಲೋಕದ ಎಂಟು ದ್ವೀಪಗಳಲ್ಲಿ ಅತ್ಯಂತ ವಿಸ್ತಾರವಾಗಿರುವುದು ನಂದೀಶ್ವರ ದ್ವೀಪ. ಇದರ ನಟ್ಟನಡುವೆ ಇರುವ ಅಂಜನ ಪರ್ವತದ ನಾಲ್ಕೂ ದಿಕ್ಕುಗಳಲ್ಲಿ ಅಕೃತ್ರಿಮ ಚೈತ್ಯಾಲಯಗಳಿವೆ. ಈ ಚೈತ್ಯಾಲಯಗಳಲ್ಲಿರುವ

ಜಿನಬಿಂಬಗಳನ್ನು ಚತುರ್ನಿಕಾಯ ಅಮರರು ವರ್ಷಕ್ಕೆ ಮೂರು ಬಾರಿ, (ಆಷಾಢ, ಕಾರ್ತಿಕ, ಫಾಲ್ಗುಣ ಮಾಸಗಳಲ್ಲಿ ಶುಕ್ಲ ಪಕ್ಷದ ಅಷ್ಟಮಿಯಿಂದ ಪೂರ್ಣಿಮಾ ಪೂರ್ತಾ) ಎಂಟುದಿನ ಪೂಜಿಸುವರು. ಇಷ್ಟು ಮುಖ್ಯವಾದ ಪರ್ವದಲ್ಲಿ ಬಿಜ್ಜಳನು ಭಾಗಿಯಾದ ನೆನಪಿಗಾಗಿ ಕೊಡುಗೆ ನೀಡಿರುವುದನ್ನು ಪ್ರತ್ಯೇಕವಾಗಿ ಪರಿಗಣಿಸಬೇಕಾಗಿದೆ. ತನ್ನ ಕೊಡುಗೆಯನ್ನು, ವಾಡಿಕೆಯಂತೆ ರಿಪೇರಿ ಸುಣ್ಣ ಬಣ್ಣ ಕಾರಣೆಗಳಿಗೆಂದು ಹೇಳದೆ, **ಅಷ್ಟವಿಧಾರ್ಚನೆಗೆ** ಬಳಸಬೇಕೆಂದು ಹೇಳಿರುವುದೂ ಪೃಥಕ್ಕಾದ ಪರಿಶೀಲನೆಗೆ ಅರ್ಹವಾಗಿದೆ. ಬಿಜ್ಜಣದೇವರಸನು ತಾನು ಮಾತ್ರ ಜೈನನಾಗಿದ್ದುದಲ್ಲದೆ ತನ್ನ ವಿಶ್ವಾಸಕ್ಕೆ ಅರ್ಹರಾದ ಜೈನ ಅಧಿಕಾರಿಗಳನ್ನೂ (೧೧೩೫-೧೨೨೫) ಹತ್ತಿರ ಇಟ್ಟುಕೊಂಡಿದ್ದನು. ಅಂಥವರಲ್ಲಿ ಅಗ್ರಗಣ್ಯನಾದವನು ಮಹಾಸೇನಾನಿಯಾದ ರೇಚಣ. ಆತ ಪ್ರತಿಷ್ಠಿತ ಮನೆತನದಿಂದ ಬಂದವನು. ಘನತೆವೆತ್ತ ಆ ರೇಚಣನು ಬಿಜ್ಜಣನ ಚಮೂಪನಾದೊಡನೆ, ತನ್ನ ಹಿರಿಯರು ದಲ್ಲಪ ಮಲ್ಲಪಾದಿಗಳು ಉಪಯೋಗಿಸಿದ ರಾಜಕೀಯ ಕೌಶಲವನ್ನು ಬತ್ತಳಿಕೆಯಿಂದ ಹೊರತೆಗೆದನು. ದಲ್ಲಪ-ಮಲ್ಲಪಾದಿಗಳು ಚಾಳುಕ್ಯ ತೈಲಪನಿಗೆ, ಆತನಿನ್ನೂ ತರ್ದವಾಡಿಯ ಮಹಾಸಾಮಂತ ನಾಗಿರುವಾಗಲೇ ಹುರಿದುಂಬಿಸಿ ರಾಷ್ಟ್ರಕೂಟರಿಗೆ ಪ್ರತಿಸ್ಪರ್ಧಿಯಾಗಿ ನಿಲ್ಲಿಸಿ ಗೆಲ್ಲಿಸಿದರು. ಅದೇ ತೆರನಾಗಿ ಈಗ, ದಲ್ಲಪನ ಅನಂತರ ಆರನೆಯ ತಲಮಾರಿಗೆ ಸೇರಿದ ರೇಚಣನು ರಾಜಕೀಯದ ದಾಳಗಳನ್ನು ಉರುಳಿಸಿದನು. ತೈಲಪನಂತೆಯೇ ಮಹತ್ವಾಕಾಂಕ್ಷಿಯಾದ ಬಿಜ್ಜಣನೂ ಚಾಳುಕ್ಯ ಸಿಂಹಾಸನದತ್ತ ಹದ್ದುಗಣ್ಣು ಬೀರುತ್ತ ಹೊಂಚು ಹಾಕುತ್ತಿದ್ದನು. ರೇಚಣನ ಕಲಿತನ, ಯುದ್ಧ ಕೌಶಲ ತನ್ನ ಬೆಂಬಲಕ್ಕೆ ದಕ್ಕಿದೊಡನೆ ಬಿಜ್ಜಣನೂ ಕಾರ್ಯೋನ್ಮುಖನಾಗಿ ಚಕ್ರವರ್ತಿ ಗದ್ದುಗೆ ಹತ್ತಿ ಕುಳಿತನೆಂಬುದನ್ನು ಸಮಕಾಲೀನ ಶಾಸನ ಅಸ್ಖಲಿತವಾಗಿ ಸಾರಿದೆ:

ಕ್ರಮದಿಂದಾ ಬಿಜ್ಜಲೋರ್ವ್ವೀಪತಿಗೆ ಪಡೆದು ಸಪ್ತಾಂಗ ಸಂಪತ್ತಿಯಂ ಮ
ತ್ತಮದಂ ತಚ್ಚಕ್ರಿಯಿಂದತ್ತಲುಮೊದವಿದ ರಾಜಾವಳೀ ಲೀಲೆಗಂ ತಂ
ದುಮಿದೇ ಸಪ್ತಾಂಗಮಂ ಕಾಣಿಸಿದನೆನೆ ಜಗಂ ಮಂತ್ರದಿಂ ತಂತ್ರದಿಂ ವಿ
ಕ್ರಮದಿಂ ಶ್ರೀಯಿಂ ಸದಾಚಾರದಿನೊಸೆದಂ ರೇಚಿದಣ್ಣಾಧಿನಾಥಂ॥

ಕಳಚುರ್ಯ ಕ್ಷಿತಿಪಾಳ ರಾಜ್ಯಲತೆ ಪರ್ವಲ್ ತನ್ನ ದೋಃಶಾಖೆಯಂ
ವಿಳಸನ್ಮಂದರ ಸಾನುಗಂ ವಿಬುಧ ಸೇವ್ಯಂ ವಿಸ್ತೃತಚ್ಛಾಯನ
ಸ್ಖಳಿತೌದಾರ್ಯ ವಿಳಾಸಭಾಸಿ ಸುಮನಸ್ಸಂಪೂರ್ಣ್ಣನುದ್ಯದ್ಯಶಃ
ಫಳದಿಂ ರೇಚಣ ದಣ್ಣನಾಥನೆಸೆದಂ ಲೋಕೈಕ ಕಲ್ಪದ್ರುಮಂ॥
(ಎಕ ೭-೧, ಶಿಕಾರಿಪುರ ೧೯೭, ಕ್ರಿ.ಶ. ೧೧೮೦, ಚಿಕ್ಕಮಾಗಡಿ)

ರೇಚಣನು ಬಿಜ್ಜಳನನ್ನು ಕಲಚುರಿ ಚಕ್ರವರ್ತಿಯೆನಿಸಿ ಸಿಂಹಾಸನದಲ್ಲಿ ಕೂಡಿಸಿದನು; ದಲ್ಲಪನು ತೈಲಪನನ್ನು, ಕುಳ್ಳಿರಿಸಿದಂತೆ. ಚಾಳುಕ್ಯರ ರಾಜಧಾನಿಯಾದ ಕಲ್ಯಾಣವನ್ನೇ ವಿಜಯಸ್ಕಂದಾವಾರವಾಗಿ ಮುಂದುವರಿಸಲು ಬಿಜ್ಜಳನಿಗೆ ರೇಚಣನು ಸೂಚಿಸಿದನು; ತೈಲಪನಿಗೆ ರಾಷ್ಟ್ರಕೂಟರ ರಾಜಧಾನಿ ಯಾದ ಮಳಖೇಡವನ್ನೇ ಮುಂದುವರಿಸಲು ವಿವೇಕ ಬೃಹಸ್ಪತಿ ದಲ್ಲಪನು ಸೂಚಿಸಿದಂತೆ.

ಬಿಜ್ಜಳನಾದ ಮೇಲೂ (ಮತ್ತಂ) ಆ ಕಲಚುರ್ಯ ರಾಜ್ಯವನ್ನು (ಅದಂ) ಅನಂತರ ಬಂದ ರಾಜರುಗಳ ಆಡಳಿತ ನಿರ್ವಹಣೆಗೂ (ತತ್ ಚಕ್ರಿಯಿಂದತ್ತಲುಂ ಒದವಿದ ರಾಜಾವಳೀ ಲೀಲೆಗಂ)

ರಾಜ್ಯಾಡಳಿತದ ಏಳು ಅಂಗಗಳನ್ನು (ಸ್ವಾಮಿ, ಅಮಾತ್ಯ, ಜನಪದ, ದುರ್ಗ, ಕೋಶ, ಸೈನ್ಯ, ಮಿತ್ರ) ದೊರೆಯುವಂತೆ (ಸಪ್ತಾಂಗಮಂ ಕಾಣಿಸಿದನೆನೆ) ರೇಚಣನು ಶ್ರಮಿಸಿದನು. ರಾಜರಿಗೆ ಇರಬೇಕಾದ ರಹಸ್ಯಾಲೋಚನೆ (ಮಂತ್ರದಿಂ), ಉಪಾಯ (ತಂತ್ರದಿಂ), ಪರಾಕ್ರಮದಿಂದ (ವಿಕ್ರಮದಿಂ) ನೆರವಿತ್ತು, ಕಳಚುರ್ಯ ಕುಲದ ರಾಜರ ರಾಜ್ಯವೆಂಬ ಬಳ್ಳಿಯು (ಕ್ಷಿತಿಪಾಳ ರಾಜ್ಯಲತೆ) ಹಬ್ಬುವುದಕ್ಕೆ ರೇಚರಸನು ತನ್ನ ತೋಳುಗಳೆಂಬ ಕೊಂಬೆಗಳನ್ನು (ದೋಃಶಾಖೆಯಂ) ಚಾಚಿದನು. ಸಂಕಮದೇವನಿಗೂ (೧೧೭೬-೮೦), ಆಹವಮಲ್ಲನಿಗೂ (೧೧೮೦-೮೩) ಮಹಾಪ್ರಧಾನನೂ ಬಾಹತ್ತರ ನಿಯೋಗಾಧಿಪತಿಯೂ ದಂಡಾಧಿನಾಥನೂ ಆಗಿದ್ದು ಕಲಚುರಿ ರಾಜವಂಶ ಇತಿಹಾಸದಲ್ಲಿ ವಿಲೀನವಾದ ಮೇಲೆ ತೆಂಕಣದ ತೇಜಸ್ವಿಗಳಾಗಿ ತೊಳಗುತ್ತಿದ್ದ, ಹೊಯ್ಸಳರ ವೀರಬಲ್ಲಾಳನಲ್ಲಿ (೧೧೭೩-೧೨೨೦) ಮಂತ್ರಿಯಾಗಿ, ಶ್ರೀಕರಣಾಧಿಕಾರಿಯಾಗಿ ಕಾರ್ಯವನ್ನು ನಿರ್ವಹಿಸಿದನು. ರೇಚಣನು ಲಕ್ಕುಂಡಿಯಲ್ಲಿ ವಸುಧೈಕ ಬಾಂಧವ ಜಿನಾಲಯವನ್ನೂ ಅರಸೀಕೆರೆಯಲ್ಲಿ ಸಹಸ್ರಕೂಟ ಜಿನಾಲಯವನ್ನೂ ಜಿನನಾಥಪುರದಲ್ಲಿ ಶಾಂತಿನಾಥ ಬಸದಿಯನ್ನೂ ಮಾಡಿಸಿದ್ದಲ್ಲದೆ ಆಚಣ್ಣ ಕವಿಗೆ ಆಶ್ರಯವಿತ್ತು ವರ್ಧಮಾನ ಪುರಾಣವನ್ನು ಬರೆಯಲು ನೆರವಾದನು.

ಕಲಚುರ್ಯ ರಾಜರು ತಮ್ಮ ತೀರ ಪರಿಮಿತ ಅವಧಿಯ ಆಳ್ವಿಕೆಯಲ್ಲಿ ಜೈನಧರ್ಮಕ್ಕೆ ತೋರಿದ ಅಕ್ಕರೆ, ನೀಡಿದ ಆಸರೆ, ಕೊಟ್ಟ ದಾನ ದತ್ತಿಗಳ ವಿವರಗಳು ಶಾಸನಗಳಲ್ಲಿವೆ: ಕೆಲವನ್ನು ನಿದರ್ಶನ ನಿಮಿತ್ತ ಹೆಸರಿಸುತ್ತೇನೆ:

೧. ಸೊಲ್ಲಾಪುರ ತಾಲ್ಲೂಕು ಮಾಳಕವಟೆ (ಮಾಳವಿಟಿಗೆ)ಯ ಶಾಸನವು ಕಲಚುರಿ ಬಿಜ್ಜಳದೇವರಸನ ಅರ್ಧಾಂಗಲಕ್ಷ್ಮಿಯೆನಿಸಿದ ರಂಭಾದೇವಿಯು ಅಣಂದೂರು ೩೦೦ ರ ಮಂದುಬ್ಬೆ - ೩೦ರ ಮಾಳವಿಟಗೆಯ ಜಿನಾಲಯಕ್ಕೆ ಅನೇಕ ದಾನಗಳನ್ನು ನೀಡಿ ತನ್ನ ಜಿನಭಕ್ತಿಯನ್ನು ತೋರಿದಳು ಮತ್ತು ಪ್ರಾಚೀನ ಬಸದಿಯನ್ನು ಪುನರ್ಭರಣಗೊಳಿಸಿದಳು (ಇನ್‌ಸ್ಕ್ರಿಪ್ಷನ್ಸ್ ಸೋಲಾಪುರ್ ಡಿಸ್ಟ್ರಿಕ್ಟ್: ಶಾಸನ ಸಂಖ್ಯೆ ೧೭, ಕ್ರಿ.ಶ. ೧೧೬೬, ಮಾಳಕವಟೆ (ಮಹಾರಾಷ್ಟ್ರ : ಸೋಲಾಪುರ ಜಿ. ತಾ)

೨. ದಕ್ಷಿಣ ಸೋಲಾಪುರ ತಾಲ್ಲೂಕು ಕಂದಲಗಾಂವ್ ಜಿನಗೃಹಕ್ಕೆ ಕೊಟ್ಟ ಕೆಲವು ಕೊಡುಗೆಗಳ ವಿವರಗಳಿರುವ ಶಾಸನ (ಮುಕ್ಕಾಗಿದೆ) : ಅದೇ; ಸೋಲಾಪುರ ಶಾಸನ ಸಂಖ್ಯೆ ೧೮ (ದಕ್ಷಿಣ ಸೋಲಾಪುರ ತಾ.), ಕ್ರಿ.ಶ. ೧೧೬೬

೩. ಸೌಇಇ, ಸಂಪುಟ ೧೫, ಸಂಖ್ಯೆ ೧೧೯, ಕ್ರಿ.ಶ. ೧೧೭೩, ಲಕ್ಕುಂಡಿ (ಗದಗ ಜಿ/ತಾ) : ಗುಣನಿಧಿ ಕೇಶವದೇವನಿಂದ ಬಲ್ಲೆಯ ಜೇಮಯ್ಯನ ಬಸದಿಗೆ ಸುವರ್ಣದಾನ.

೪. ಸೌಇಇ, ಸಂಪುಟ ೧೫, ಶಾಸನ ಸಂಖ್ಯೆ ೧೨೮, ಕ್ರಿ.ಶ. ೧೧೭೪; ಮತ್ತು ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್, ಸಂಪುಟ ೫, ಶಾಸನ ಸಂಖ್ಯೆ ೩೮, ಚಿಕ್ಕಹಂದಿಗೋಳ ಜಿನಾಲಯಕ್ಕೆ ನೀಡಿದ ಭೂದಾನದ (ತ್ರುಟಿತ) ಶಾಸನ. ಇದು 'ಅನುಪಮ ಕವಿ ಕಾಳಿದಾಸ' ಎಂಬ ಬಿರುದು ಇರುವ ಹಿಟ್ಟಿನ ಸೇನಬೋವಕವಿ ಬರೆದಿರುವ ಶಾಸನ.

೫. ಕಲ್ಬುರ್ಗಿ ಜಿಲ್ಲೆಯ ಶಾಸನಗಳು (ಸಂ : ಪ. ಗೋಗಿ), ಅಡಕಿ ಶಾಸನ ಸಂಖ್ಯೆ ೩, ಕ್ರಿ.ಶ.

೧೧೬೫ ರಾಯಮುರಾರಿ ಸೋವಿದೇವನ ದಣ್ಡನಾಯಕ ಮತ್ತು ಆಡಕ್ಕಿಯ ಪ್ರಭು ಕೊಪ್ಪರಸನು ಕ್ರಿ.ಶ. ೧೧೨೫ರಲ್ಲಿ ಮಾಡಿಸಿದ ಕೊಪ್ಪ ಜಿನಾಲಯದ ಚೆನ್ನಪಾರ್ಶ್ವದೇವರ ಅಂಗಭೋಗ, ಅಷ್ಟವಿಧಾರ್ಚನೆ, ಜೀವದಯಾಷ್ಟಮಿ ನಂದೀಶ್ವರದ ಪರ್ವಾದಿಗಳಿಗೆ ೧೧೬೫ ರಲ್ಲಿ ಕೊಟ್ಟ ಕೊಡುಗೆಗಳ ವಿವರ.

೬. ಆಡಕಿಯ ಶಾಸನ ಸಂಖ್ಯೆ ೪, ಕ್ರಿ.ಶ. ೧೧೬೫ : ರಾಯಮುರಾರಿ ಸೋವಿದೇವನ ಆಳ್ವಿಕೆಯಲ್ಲಿ ಆಡಕ್ಕಿಯ ಪಿರಿಯ ಬಸದಿಯಾದ ಪದ್ಮಾವತೀ ಮಹಾದೇವಿಯ ತೀರ್ಥದ ಬಸದಿಯಲ್ಲಿ ಅಷ್ಟವಿಧಾರ್ಚನೆಗೆ ಅಯ್ಯಾವಳೆ ಅಯ್ನೂರ್ವರು ಬಿಟ್ಟದಾನ.

೭. ಅದೇ ಆಡಕಿಯ ಶಾಸನ ಸಂಖ್ಯೆ ೫, ಕ್ರಿ.ಶ ೧೧೭೨ : ರಾಯಮುರಾರಿ ಸೋವಿದೇವರು ಮೊದೆಗನೂರು - ಕೊಪ್ಪ ನೆಲೆವೀಡಿನಲ್ಲಿದ್ದು ಕಲಚುರಿ ರಾಜ್ಯವನ್ನು ಆಳುತ್ತಿರುವಾಗ ಮಹಾಮಂಡಳೇಶ್ವರ ಏಚರಸನೂ ಇತರರೂ ಆಡಕ್ಕಿಯ ಮೂಲಸಂಘದ ಘಟಾಂತಕಿ ದೇವಿಯರು ತೀರ್ಥದ ಪಿರಿಯ ಬಸದಿಯ ಪಾರ್ಶ್ವದೇವರ ಅಂಗಭೋಗಕ್ಕೂ ಅಷ್ಟವಿಧಾರ್ಚನೆಗೂ ಜೀವದಯಾಷ್ಟಮಿ ನಂದೀಶ್ವರ ಗ್ರಹಣ ಪರ್ವ ದಿನಗಳಿಗೂ ನಿತ್ಯ ಪೂಜೆಗೂ ಬಿಟ್ಟ ನೆಲ ಹೊಲ, ಕೊಟ್ಟ ಇತರ ತೆರಿಗೆ ವಿನಾಯಿತಿಗಳ ಮಾಹಿತಿ.

೮. ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕು ಕರಡಿಕಲ್ಲ ಗ್ರಾಮದ ವೀರಭದ್ರ ದೇವರ ಗುಡಿಯಲ್ಲಿರುವ ವೀರಭದ್ರಸ್ವಾಮಿ ವಿಗ್ರಹದ ಹಿಂದಿನ ಬದಿಯಲ್ಲಿರುವ ಜೈನ ಶಾಸನ : ಕ್ರಿ.ಶ. ೧೧೫೯. ಇದರ ೩೯ನೆಯ ಸಾಲಿನಿಂದ ಮುಂದಕ್ಕೆ ಶಾಸನ ಪಾಠವನ್ನು ಓದುವುದು ಅಸಾಧ್ಯವಾಗಿದೆ (ಭೀಮಸೇನರಾವ್, ಡಿ.ಕೆ. : ೧೯೯೯ : ೧೬೫-೬೭)

೯. ಸೌಇಇ, ಸಂಪುಟ ೧೮, ಸಂಖ್ಯೆ ೧೮೦, ಕ್ರಿ.ಶ. ೧೧೬೮, ನದಿಹರಳಹಳ್ಳಿ (ಹಾವೇರಿ ಜಿ/ ರಾಣೆಬೆನ್ನೂರು ತಾ.) ಈ ಶಾಸನವು ಗೊಟ್ಟಗಡಿ ಗ್ರಾಮದ ವೃಷಭ ಜಿನೇಂದ್ರ ಚೈತ್ಯಾಲಯಕ್ಕೂ ಸತ್ರಕ್ಕೂ ಅರಸಿಗಾವುಣ್ಡೆ - ನಾಗಗಾವುಣ್ಡ ಭೂದಾನ ಬಿಟ್ಟುದನ್ನು ಹೇಳಿದೆ.

೧೦. ಸೌಇಇ, ಸಂಪುಟ ೧೫, ಸಂಖ್ಯೆ ೧೦೮, ಕ್ರಿ.ಶ. ೧೧೬೭ : ಚಾಳುಕ್ಯರ ಅಕ್ಕಾದೇವಿಯು ಅರಸಿಬೀಡು / ವಿಕ್ರಮಪುರದಲ್ಲಿ (ಬಿಜಾಪುರ ಜಿ/ಹುನುಗುಂದ ತಾ) ಕಟ್ಟಿಸಿದ್ದ (ಎಇ, ಸಂಪುಟ ೧೭, ಸಂಖ್ಯೆ ೧೦, ಕ್ರಿ.ಶ. ೧೦೪೬) ಗುಣದ ಬೆಡಂಗಿ ಜಿನಾಲಯಕ್ಕೆ 'ಸಿಂದಕುಳ ಕಮಳ ಮಾರ್ತಣ್ಡಂ ಬಿಟ್ಟರಸರ ಮಗಂ ಹೊಲರಸರು' ದಾನ ಕೊಟ್ಟದ್ದು ಕ್ರಿ.ಶ. ೧೧೬೭ ರಲ್ಲಿ.

೧೧. ಎಆರ್‌ಎಸ್‌ಐಇ ೧೯೨೮-೨೯, ಅನುಬಂಧ - ಈ, ಸಂಖ್ಯೆ ೪೦, ಕ್ರಿ.ಶ. ೧೧೬೭.

೧೨. ವರದಿ ೧೯೪೭-೪೮, ಮಂತಗಿ (ಹಾವೇರಿ ಜಿ / ಹಾನಗಲ್ಲ ತಾ) ಶಾಸನದಲ್ಲಿ ಹಾನುಗಲ್ಲದ ಕಲಿದೇವ ಸೆಟ್ಟಿಯು ಚತುರ್ವಿಂಶತಿ ತೀರ್ಥಂಕರರನ್ನು ಸ್ಥಾಪಿಸಿ ನಾಗಚಂದ್ರ ಭಟ್ಟಾರಕರಿಗೆ ಒಪ್ಪಿಸಿದ ದಾನಗಳ ವಿವರಗಳಿವೆ.

೧೩. ವರದಿ ೧೯೩೩-೩೪, ಸಂಖ್ಯೆ ೧೨೦, ಕ್ರಿ.ಶ. ೧೧೬೦, ಬಾಬಾನಗರ ಶಾಸನ.

೧೪. ಎಕ ೭-೧, ಸಂಖ್ಯೆ ಶಿಕಾರಿಪುರ ೧೯೭, ಕ್ರಿ.ಶ. ೧೧೮೦, ಚಿಕ್ಕಮಾಗಡಿ (ಶಿವಮೊಗ್ಗ

ಜಿ.) ವಾಜಿ ವಂಶೋದ್ಭವನೂ ದಾನಚಿಂತಾಮಣಿ ಅತ್ತಿಮಬ್ಬೆಯ ಮನೆತನದವನೂ ಸಾಹಿತ್ಯ ವಿದ್ಯಾಧರನೂ ವಸುಧೈಕ ಬಾಂಧವನೂ ಕಲಚುರ್ಯರ ದಂಡನಾಯಕನೂ ಆದ ರೇಚಣ ಚಮೂಪನು ಚಿಕ್ಕಮಾಗಡಿಯಲ್ಲಿ ಸಾಮಂತ ಶಂಕರನು ಕಟ್ಟಿಸಿದ ಹೊಸ ಬಸದಿಯ ಪೂಜೆಗೆ, ತನ್ನ ಆಪ್ತ ಮಂತ್ರಿ ಕವಡೆಯ ಬೊಪ್ಪನೊಂದಿಗೆ ಭಾಗವಹಿಸಿ ಉದಾರ ಕೊಡುಗೆಗಳನ್ನಿತ್ತನು (ನಾಗರಾಜಯ್ಯ, ಹಂಪ : ಚಂದ್ರಕೊಡೆ : ೧೯೯೭ : ೪೯-೬೧)

೧೫. ಎಕ ೭-೧, ಶಿಕಾರಿಪುರ ೧೧೯

೧೬. ಎಕ ೧೦ (ಪ) ಅರಸೀಕೆರೆ ೧೭, ೧೮ ಮತ್ತು ೩೧

೧೭. ಎಕ ೭-೧ ಶಿಕಾರಿಪುರ ೨೨೫ ಚಿಕ್ಕಮಾಗಡಿ

೧೮. ದೇಸಾಯಿ, ಪಿ.ಬಿ (ಸಂ), ಶಾಸನ ಪರಿಚಯ (ಕೊಪ್ಪಳ ಜಿಲ್ಲೆಯ ಶಾಸನಗಳು), ೧೯೫೮, ಸಂಖ್ಯೆ ೨೨, ಕ್ರಿ.ಶ. ೧೧೭೭ : ಚಕ್ರವರ್ತಿಯಪ್ಪ ಸಂಕಮದೇವನುಮಂ ತತ್ ಪ್ರಧಾನನಪ್ಪ ವಸುಧೈಕ ಬಾಂಧವ ರೇಚಿದೇವನುಮಂ-ಎಂಬ ವಿವರಗಳಿವೆ.

೧೯. ನಾಗರಾಜಯ್ಯ, ಹಂಪ (ಸಂ) : ಕೊಪ್ಪಳ ಶಾಸನಗಳು, ೧೯೯೮ : ಸಂಖ್ಯೆ ೫೧, ಕ್ರಿ.ಶ. ೧೨೦೪ : ಕಲಚುರಿ ರಾಜ್ಯ ಪತನಾನಂತರ ರೇಚಣ ದಂಡಾಧೀಶನೊಂದಿಗೆ ಹೊಯ್ಸಳ ರಾಜರ ಅಧೀನನಾದ ಕವಡೆಯ ಬೊಪ್ಪನು ಕೊಳತೂರು, ಲೊಕ್ಕಿಗುಂಡಿ, ಕುಪಣ, ಬಂಕಾಪುರ, ಹೂಲಿ, ಕೋಗಳಿ, ಮುಳ್ಗುಂದ, ಬಟ್ಟಕೆರೆ, ಹಾನುಂಗಲ್ಲು, ನವಿಲ್ಗುಂದ, ಬೆಳುಗೊಳ, ಬಂದಣಿಕಾಪುರ, ಪುರಿಕರ (ಪುಲಿಗೆರೆ) ಮೊದಲಾದ ಊರುಗಳ ಬಸದಿಗಳನ್ನು ಹೊಸದಾಗಿಸಿದ್ದನ್ನು ಹೇಳಿದೆ, 'ಕಳಚುರಿ ಕ್ಷೋಣೀಶರಿರ್ಪ್ಪಂತೆ ಮೇದಿನಿಯಂ ಪಿಡಿದನ್' ಎಂಬ ಪ್ರಯೋಗ ಪರಿಭಾವನ ಯೋಗ್ಯವಾಗಿದೆ.

ಬಾಬಾನಗರ ಶಾಸನದಲ್ಲಿನ **'ಮಂಗಳವೇಡದ ರಾಯರಾಚಾರ್ಯ'** (ರಾಜರ ಗುರುಗಳು) ಎಂಬ ಪ್ರಯೋಗದ ಹೆಚ್ಚಳವನ್ನು ಬಿಚ್ಚಳಿಸಬೇಕು. ಬಿಜಾಪುರ ಸಮೀಪದ ಮಂಗಳವೇಡೆಯು (ಮಹಾರಾಷ್ಟ್ರ : ಸೊಲ್ಲಾಪುರ ಜಿ.) ಕಲಚುರ್ಯರ ಆರಂಭದ ರಾಜಧಾನಿ. ತರಿಕಡುನಾಡಿನಲ್ಲಿ ಅಂತರ್ಗತವಾಗಿದ್ದ ಮಂಗಳವಾಡ ಪುರವರಾಧೀಶರಾಗಿ ಮೆರೆದ ಕಲಚುರ್ಯರಾಯ(ರಾಜ)ರ ಆಚಾರ್ಯರು ಜೈನ ಮೂಲ ಸಂಘದ ದೇಶಿಗಣದ ಪರಂಪರೆಯವರು. ಬಿಜ್ಜಣದೇವರಸ ರಾಯನ ಆಚಾರ್ಯರು ತ್ರಿಭುವನದೇವರು. ಈ ಆಚಾರ್ಯರ ಶಿಷ್ಯರಾದ ಮಾಣಿಕ್ಯ ಭಟ್ಟಾರಕರು ಬಿಜ್ಜಣದೇವನ ತಮ್ಮನಾದ ವೀರ ಮೈಳುಗಿಗೂ ಮಗ ಸೋಮನೃಪನಿಗೂ ರಾಜಗುರು. ಶಾಸನದಲ್ಲಿ ಉಲ್ಲೇಖಗೊಂಡಿರುವ ಬಸದಿಗಳು ಮೂರು : ಅ. ಕನ್ನಡಿಗೆಯಲ್ಲಿ ರವಿದೇವನು ಮಾಡಿಸಿದ ಚಂದ್ರಪ್ರಭ ಬಸದಿ, ಇದರ ಎದುರು ಚಾವುಂಡರಾಯನು ಮಾನಸ್ತಂಭ ನಿಲ್ಲಿಸಿದನು. ಆ. ಕನ್ನಡಿಗೆಯಲ್ಲಿ ಮಾಣಿಕ್ಯ ಭಟ್ಟಾರಕರು ಮಾಡಿಸಿದ್ದು, ಇದಕ್ಕೆ ಕ್ರಿ.ಶ ೧೧೬೦ರಲ್ಲಿ ಬಿಜ್ಜಣದೇವ ಅಷ್ಟಾಹ್ನಿಕ ಪರ್ವ ನಿಮಿತ್ತ ದತ್ತಿಯಿತ್ತನು. ಇ. ಕನ್ನಡಿಗೆಯಲ್ಲಿ ಚಂದಿಮಯ್ಯ ಮಾಡಿಸಿದ ಬಸದಿ. ಇದಕ್ಕೆ ತನ್ನ ನೆಲೆವೀಡಾದ ಮೋದೆಗನೂರಲ್ಲಿದ್ದು ತನ್ನ ಪಟ್ಟಾಭಿಷೇಕದ ನಿಮಿತ್ತ ಸೋಮನೃಪನು ದಾನ ಕೊಟ್ಟನು.

ಸಾರಾಂಶ : ಕಲಚುರ್ಯರ ಇತಿಹಾಸಕ್ಕೆ, ಸಾಂಸ್ಕೃತಿಕ ಸಂಕಥನಕ್ಕೆ ತಕ್ಕ ಅಧಿಕೃತ ಹಾಸನ್ನು ತನ್ನೊಡಲಲ್ಲಿ ಮಡಗಿಕೊಂಡಿರುವ ಅತ್ಯಂತ ಮಹತ್ವದ ಶಾಸನ ಬಾಬಾನಗರದ್ದು. ನಾನಾ

ಮಗ್ಗಲುಗಳಿಂದ, ಒಳನೋಟಗಳಿಂದ ಇದರ ವಿನ್ಯಾಸದ ನಿರಿಗೆಗಳನ್ನು ಬಿಡಿಸುವ ಹುಡುಕಾಟ ಇನ್ನೂ ಆಗಬೇಕಾಗಿದೆ. ಒಂದು ಸಾಮ್ರಾಜ್ಯದ ಹುಟ್ಟು ಬೆಳವಣಿಗೆಯನ್ನು ಅರಿಯಲು ತಳಹದಿಯಾಗಿ ಒದಗುವ ಆಧಾರಗಳನ್ನು ಕರಾರುವಾಕ್ಕಾಗಿ ಕನ್ನಡಿಸುವ ಕನ್ನಡಿಗೆಯ ಶಾಸನವನ್ನು ಚರಿತ್ರಕಾರರು ಸಂಶೋಧನೆ ಸಂವಾದಗಳಿಗೆ ಬಳಸಿಕೊಳ್ಳುವುದು ಅನಿವಾರ್ಯ.

ಕಳಚುರಿ ರಾಜಾವಳಿ

ಬಿಜ್ಜಳ ೧ (೧೦೫೭)

ಕೃಷ್ಣ (ಕನ್ನಮ) ೧೯೧೦೬೭)

ಜೋಗಮ (೧೦೮೦-೧೧೧೮)

ಪೆರ್ಮಾಡಿದೇವ (೧೧೧೮-೧೧೩೦)
(ಹೆಂ. ನಾಗಲದೇವಿ)

ಬಿಜ್ಜಣ (೪) ದೇವ
(ಹೆಂ. ಏಚಲದೇವಿ)
(೧೧೩೦-೬೫)

ರಾಜ ೩

ಮೈಳುಗಿ
(೧೧೬೫)

- ವಜ್ರದೇವ
- ರಾಯಮುರಾರಿ ಸೋವಿದೇವ (ಸೋಮನೃಪ, ಸೋಮದೇವ) (೧೧೬೫-೭೫)
- ಮಲ್ಲಿಕಾರ್ಜುನ (೧೧೭೫-೭೬)
- ಸಂಕಮ ೨ (೧೧೭೬-೮೦)
- ಅಹವಮಲ್ಲ (೧೧೮೦-೮೩)
- ಸಿಂಘಣ (೧೧೮೩-೮೪)
- ಸಿರಿಯಾದೇವಿ (ಗಂಡ. ಚಾವುಂಡರಾಯ)
- ಕಿರಿಯ ಮಗಳು (ಗಂಡ. ಬರ್ಮರಸ)

ಸಂಕೇತ ಸೂಚಿ

ಏಆರ್ಎಸ್ಐಇ : ಆನ್ಯುಯಲ್ ರಿಪೋರ್ಟ್ ಆಫ್ ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್

ಎಇ : ಎಪಿಗ್ರಾಫಿಯ ಇಂಡಿಕ ಶಾಸನ ಸಂಪುಟ

ಎಕ : ಎಪಿಗ್ರಾಫಿಯ ಕರ್ನಾಟಿಕ ಶಾಸನ ಸಂಪುಟ

ಕ್ರಿ.ಶ. : ಕ್ರಿಸ್ತ ಶಕ

ಜಿ : ಜಿಲ್ಲೆ

ತಾ : ತಾಲ್ಲೂಕು

ಎಂಎಆರ್ : ಮೈಸೂರು ಆರ್ಕಿಯಲಾಜಿಕಲ್ ರಿಪೋರ್ಟ್

ಪ : ಪರಿಷ್ಕೃತ ಆವೃತ್ತಿ

ಶ್ರಬೆ : ಶ್ರವಣಬೆಳಗೊಳ

ಸಂ: ಸಂಪಾದಕರು

ಸೌಇ : ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್ ಶಾಸನ ಸಂಪುಟ

ಸಹಾಯ ಸಾಹಿತ್ಯ ಸೂಚಿ

ಕಲುಬರ್ಗಿ, ಎಂ.ಎಂ. : ವಿಜಾಪುರ ನಾಗಚಂದ್ರನ ಮಲ್ಲಿನಾಥ ಬಸದಿ ಹಾಗೂ ಚಿತ್ರದುರ್ಗದ ಪ್ರಾಚೀನ ಹೆಸರು - ಎರಡು ಟಿಪ್ಪಣಿಗಳು, **ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ**೭೦-೧, ಜೂನ್ ೧೯೮೫.

ನಾಗರಾಜಯ್ಯ ಹಂಪ :

೧, **ಕೊಪ್ಪಳ ಶಾಸನಗಳು**, ಮೈಸೂರು, ೧೯೯೮

೨. **ಚಂದ್ರಕೊಡೆ**, ಹಂಪಿ, ೧೯೯೭

೩. **ನಾಗಚಂದ್ರ** : ಇತಿವೃತ್ತ (೧೯೮೯), ಗದಗ ದ್ವಿ.ಮು. ೧೯೯೨

೪. **ಶಾಸನಗಳಲ್ಲಿ ಎರಡು ವಂಶಗಳು**, ಮುಂಬಯಿ ೧೯೯೫

೫. **ಶಾಸನಗಳಲ್ಲಿ ಜೈನ ತೀರ್ಥಗಳು**, ಬೆಂಗಳೂರು ೧೯೯೮

೬. **ಸಾಂತರರು : ಒಂದು ಅಧ್ಯಯನ**, ಹೊಂಬುಜ ೧೯೯೭

ಭೀಮಸೇನರಾವ್, ಡಿ.ಕೆ. : **ಹದಿಮೂರನೆಯ ಶತಮಾನದ ಕರ್ನಾಟಕಾಂಧ್ರ ಮಹಾರಾಷ್ಟ್ರ ಸಾಹಿತ್ಯಾವಲೋಕನ**, ಬೆಳಗಾವಿ (ದ್ವಿ.ಮು.) ೧೯೯೯

ಸೀತಾರಾಮ ಜಾಗೀರ್‌ದಾರ್ ; ಎರಡು ಹೊಸ ಶಾಸನಗಳು ಮತ್ತು ನಾಗಚಂದ್ರನ ಇತಿವೃತ್ತ, **ಮಾನವಿಕ ಕರ್ನಾಟಕ** ೫-೧, ನವೆಂಬರ್ ೧೯೮೪

ಹನುಮಾಕ್ಷಿ ಗೋಗಿ (ಸಂ) : **ಕಲ್ಬುರ್ಗಿ ಜಿಲ್ಲೆಯ ಶಾಸನಗಳು**, ಹುಬ್ಬಳ್ಳಿ, ೧೯೯೬

Desai, P.B. : 1. **Basavesvara and His Times**

2. **Jainism in South India and some Jaina Epigraphs,** Sholapur 1957

Gopalakrishna Murthi, S : **Jaina Vestiges in Andhra,** Hyderbad. 1963

Jawaharlal, Ghanta : **Jainism in Andhra**, Hyderabad. 1994

Nagarajaiah, Hampa : 1. **Jaina Corpus of Koppala Inscriptions XRay**ed, Banglaore. 1999

2. **The Later Gangas : Mandali - Thousand,** Bangalore . 1999

Ramaswamy Aiyyangar, M.S. : **Studies in South Indian Jainism.** Madras, 1922, (Part - 1)

Ritti, Srinivasa, and Ananda Kumbhar : **Inscriptions from Solapur District**, Dharwada, 1988.

೧೧

ವಡ್ಡಾರಾಧನೆ : ಸಾಂಸ್ಕೃತಿಕ ಮುಲುಕುಗಳು

ಜೈನ ಸಮಾಜದ ಗತಿಶೀಲತೆಗೆ ಇದ್ದ ಅಂದಂದಿನ ಸಾಂದರ್ಭಿಕ ಒತ್ತಡಗಳು, ಅದರಲ್ಲಿ ಉಂಟಾದ ಬದಲಾವಣೆಗಳ ಬಗ್ಗೆ, ಅದರ ಇರುವಿಕೆಗೂ ಪ್ರಸರಣಕ್ಕೂ ಎದುರಾದ ಸವಾಲುಗಳು, ಹಾದು ಬಂದ ಸ್ಥಿತ್ಯಂತರಗಳು, ಸಾಂಸ್ಕೃತಿಕ ಹೊಣೆಗಾರಿಕೆಗೆ ಜೈನ ಕಥಾಪರಂಪರೆ ಹೆಗಲುಕೊಟ್ಟಿರುವ ಕ್ರಮ-ಇವನ್ನು ಕುರಿತ ಚರ್ಚೆಯತ್ತ ಸಾಂಸ್ಕೃತಿಕ ವಾಗ್ವಾದಗಳನ್ನು ಬೆಳೆಸಲು ಬೇಕಾಗುವ ತಕ್ಕ ಸಾಮಗ್ರಿ ವಡ್ಡಾರಾಧನೆಯ ಒಡಲಲ್ಲಿ ಅಡಗಿದೆ. ಇಲ್ಲಿನ ಕಥೆಗಳು ಎತ್ತುವ ಮಹತ್ವದ ಸಾಂಸ್ಕೃತಿಕ ಸಂವಾದಗಳನ್ನು ಸಂಸ್ಕೃತಿ-ಉಪಸಂಸ್ಕೃತಿಗಳ ಮುಖಾಮುಖಿ ಸಂದರ್ಭದಲ್ಲಿಟ್ಟು ಚರ್ಚೆಯನ್ನು ಸ್ಫೋಟಿಸುವ ಪರಿ ಪರಿಭಾವನಯೋಗ್ಯ. ಇದರ ಕಥನದ ಮಾದರಿಯಲ್ಲಿ ಮತ್ತೆ ಮತ್ತೆ ಆವರ್ತನಗೊಳ್ಳುವ ಸಾಂಸ್ಕೃತಿಕ ಆಶಯಗಳ ಪದರ ಪಾತಳಿಗಳನ್ನು ಪೃಥಕ್ಕರಿಸಿ ನೋಡುವ ಪ್ರಯತ್ನ ಇನ್ನೂ ಆಗಬೇಕಾಗಿದೆ. ವಡ್ಡಾರಾಧನೆಯ ಕಥೆಗಳ ಸಂಚಲನ ಮತ್ತು ವಿಕಾಸ ಅಡ್ಡರೇಖಾತ್ಮಕ ವಾಗಿಯೂ ಲಂಬರೇಖಾತ್ಮಕವಾಗಿಯೂ ಪ್ರಾಕೃತ ಹಾಗೂ ಸಂಸ್ಕೃತಗಳ ಮೂಲಕ ಸಾಗಿಬಂದಿದೆ. ಕನ್ನಡ ಸಂದರ್ಭದಲ್ಲಿ ಇದರ ಅಧ್ಯಯನ ಇದುವರೆಗೆ 'ಮ್ಯಾಕ್ರೊ ಲೆವಲ್'ನಲ್ಲಿ ನಡೆದಿದೆಯೇ ಹೊರತು 'ಮೈಕ್ರೊ ಲೆವಲ್'ನಲ್ಲಿ ಪರಿಶೀಲನೆಗೆ ತೊಡಗಿಲ್ಲ.

ಸಾಂಸ್ಕೃತಿಕ ವಾಗ್ವಾದಗಳನ್ನು ಬೆಳೆಸಲು ಬೇಕಾಗುವ ಜೀವದ್ರವ್ಯ ಕೇಂದ್ರ ಪ್ರಜ್ಞೆಯಾಗಿರುವ ವಡ್ಡಾರಾಧನೆಯ ಸೊಗಡನ್ನು, ಆಯಾ ಕಾಲದ ಬೆಳಕಿಗೆ ಹಿಡಿದು ನೋಡುವ ಪ್ರಾಯೋಗಿಕ ವಿಮರ್ಶೆ ಕೃತಿಯ ಪ್ರಸ್ತುತತೆಯನ್ನು ಸ್ಥಾಪಿಸುತ್ತದೆ. ವಡ್ಡಾರಾಧನೆಯಲ್ಲಿ ಬಿಂಬಿತವಾಗಿರುವ ಸಾಂಸ್ಕೃತಿಕ ಲೋಕ ಅಭಿವ್ಯಾಪಕವಾದದ್ದು. ಇದರ ಮನಸ್ಸು ಸೃಜನಶೀಲವಾದ್ದು, ಅರಿವು ಜೀವಪರ ಕಾಳಜಿಯ ಸ್ವರೂಪದ್ದು. ಇದರ ಒಳಮುಖಿ ಅಧ್ಯಯನದಿಂದ ಅನಾವರಣಗೊಳ್ಳುವ ಸಂಸ್ಕೃತಿಯ ರೂಪ ರೂಪಾಂತರದ ಅನುಭವಗಳನ್ನು ಶೋಧಿಸಬೇಕಾಗಿದೆ. ಜೈನಕಥನ ಪರಂಪರೆಯಲ್ಲಿ

ವಡ್ಡಾರಾಧನೆ ಯಾಕೆ ಉಜ್ವಲ ಕೃತಿ ಮತ್ತು ಹೇಗೆ ಇದು ಶ್ರೇಷ್ಠ **ಕಥೆಗಳ ಮಾಣಿಕ್ಯ ಕೋಶ** ಆಗಿದೆ. ಎಂಬುದನ್ನು ಸಾಂಸ್ಕೃತಿಕ ಮುಖಾಮುಖಿಯ ಸಂಘರ್ಷವಿರುವ ಕಥನ ಭಾಗದಲ್ಲಿ ಗ್ರಹಿಸಬೇಕು.

ಜೈನ ಸಾಂಸ್ಕೃತಿಕ ಜಗತ್ತು ತನ್ನ ಸಂವೇದನೆಯ ಒಟ್ಟು ಸ್ವರೂಪದಲ್ಲಿ ಜಾನಪದವನ್ನೂ ಒಳಗೊಂಡಿದೆ. ಅದು ತನ್ನ ಜನಾಂಗ ಬದ್ಧತೆಯೊಂದನ್ನೇ ಆಶ್ರಯಿಸದೆ ಸಾರ್ವತ್ರಿಕ ಸ್ವರೂಪಕ್ಕೂ ಬಾಗಿಲು ತೆರೆದಿದೆ. ಪ್ರಾದೇಶಿಕ ಪರಂಪರೆಯ ಪಳೆಯುಳಿಕೆಗಳು ಉಲಿಯುವ ಕಡೆಗಳಲ್ಲಿ ವಡ್ಡಾರಾಧನೆ ಜಾತಿಬದ್ಧ ನೆಲೆಗೆ ಜಗ್ಗದೆ ಮಾನವ ಸ್ವಭಾವದ ಅಭಿವ್ಯಕ್ತಿಯಾಗಿ ಮಿಡಿದಿರುವುದು ಗಂಭೀರ ಚರ್ಚೆಗೆ ಗ್ರಾಸವಾಗಿದೆ. ಅಂದರೆ, ಜೈನತ್ವದ ಅನನ್ಯತೆಯ ನೆಲೆಯನ್ನು ನೆಲೆಯೂರಿಸುತ್ತಿರುವಾಗಲೇ ಏಕಕಾಲಕ್ಕೆ ಅದರ ಸಾಂಸ್ಕೃತಿಕ ಪರಂಪರೆಗೆ ಒದಗುತ್ತಿರುವ ನಿಶ್ಶಬ್ದ ಮಹಾದುರಂತವನ್ನು ಪ್ರತಿಮಾತ್ಮಕವಾಗಿ ಕಂಡರಿಸುವ ಪ್ರಭಾವಶಾಲಿ ಕಥನಕೌಶಲ ವಡ್ಡಾರಾಧನಕಾರನ ಶಕ್ತಿಯ ಸೆಲೆ. ಪಾರಮಾರ್ಥಿಕ ಸತ್ಯದೊಂದಿಗೆ ವ್ಯಾವಹಾರಿಕ ವಾಸ್ತವವನ್ನು ಬೆಸೆಯುವ ಕಸುಬುಗಾರಿಕೆಯ ಭಾಗಗಳಲ್ಲಿ ಸಾಂಸ್ಕೃತಿಕ ಸ್ವಂತಿಕೆ ಕೆನೆಕಟ್ಟಿರುವುದನ್ನು ಕಾಣಬಹುದು.

ವಡ್ಡಾರಾಧನಕಾರನಾದ ಭ್ರಾಜಿಷ್ಣು ದೇಸೀ ಕಾವ್ಯಧೋರಣೆಯ ಸ್ವತಂತ್ರ ಮನೋಧರ್ಮದ ಕಥೆಗಾರ. ಪ್ರಾಚೀನ ಪರಂಪರೆಯ ಪ್ರಣಾಲಿಯಲ್ಲಿ ಹರಿದುಬಂದ ಹಳೆಯ ಕಥೆಗಳನ್ನು ಸಪ್ರಾಣಿಸಿ ಅಭಿಜಾತತೆಯನ್ನು ತಂದಿರುವುದು ಅವನ ಸೃಷ್ಟಿ ಶಕ್ತಿಗೆ ದಿವ್ಯಸಾಕ್ಷಿ. ಅನೇಕ ಜೈನ ಕಥೆಗಳ ಮೂಲವಾಗಲಿ, ಮೊದಲ ಲೇಖಕ ಯಾರೆಂಬುದಾಗಲಿ ತಿಳಿಯುವುದು ಕಷ್ಟ. ಅಷ್ಟರಮಟ್ಟಿಗೆ ಅವು ಒಂದು ಶಿಷ್ಟಪದ ವಾಚಕ ಸಂಪ್ರದಾಯದೊಳಗೆ ನುಸುಳಿ ಕಥಾ ಪರಂಪರೆಯ ವಾಹಿನಿಯಲ್ಲಿ ತೇಲುತ್ತವೆ. ಯಾವ ಕಥೆಯ ಚೆಲುವಿಗೆ ಯಾವ ಲೇಖಕ ಮಾರುಹೋಗುತ್ತಾನೊ ಆತ ಅದೇ ಕಥೆಯನ್ನು ಇನ್ನೊಮ್ಮೆ ತನ್ನ ಕಲ್ಪನೆಯ ಮೂಸೆಯಲ್ಲಿ ಅದ್ದಿ ತೆಗೆದು ಹೊಸ ಎರಕದಿಂದ ಮುಂದಿನ ತಲೆಮಾರಿಗೆ ದಾಟಿಸುತ್ತಾನೆ. ಇದೊಂದು ಬಗೆಯ ರಿಲೇ ರೇಸು, ಕೊಕ್ಕೊ ಆಟ. **ಆರಾಧನಾ ಕಥಾ ಚಕ್ರದ** ಪರಿಭ್ರಮಣ ಈ ಬಗೆಯದು.

ಕಥೆಗಾರರಿಗೆ ಬೇಕಾಗಿರುವುದು ಇಡೀ ಸಾವಯವ ಕಥಾಶರೀರವಲ್ಲ. ಅದಷ್ಟನ್ನೂ ತಾವೇ ಸ್ವೋಪಜ್ಞವಾಗಿ ಸೃಷ್ಟಿಸಬಲ್ಲ ನಿರ್ದೇಶನೋಕ್ತಿಗಳು ಮಾತ್ರ. ವಡ್ಡಾರಾಧನೆ ಗ್ರಂಥದ ಗಾಹೆಗಳಿಗೆ ಪಾರಂಪರಿಕ ಪರಿಸರದ ಪರಿಚಯವಿರುವ ಬುದ್ಧಿ ಭಾವಗಳು ತಕ್ಕ ವ್ಯಾಖ್ಯಾನ ವಿಸ್ತಾರವನ್ನು ತಟ್ಟನೆ ತಗುಳಿಸುವ ಸಾಧ್ಯತೆಯಿದೆ. ಜೈನ ಪರಂಪರೆಯಲ್ಲಿ ಪ್ರಚಲಿತವಿದ್ದ ಐತಿಹ್ಯಗಳನ್ನೂ ಕಥೆ-ಆಖ್ಯಾನ-ಉಪಾಖ್ಯಾನಗಳನ್ನೂ ಎರಡು ಸಾಲಿಗಿಳಿಸಿ ಸಂಕೇತಿಕರಣಗೊಳಿಸಿದೆ. ಇದನ್ನು encoding ಎಂದು ಹೇಳಬಹುದು. ಸಂಕೇತಗೊಳಿಸಿದ ಈ ಗಾಹೆನಿಕ್ಷೇಪದಲ್ಲಿ ಹುದುಗಿರುವ ಕಥಾ ಸರಿತ್ ಸಾಗರ ನಿಧಿಯನ್ನು ವಿಸಂಕೇತಿಸಿ, decode ಮಾಡಿ ಹೊರತೆಗೆಯುವುದು ಭ್ರಾಜಿಷ್ಣುಗೆ ಕರತಲಾಮಲಕವಾಗಿತ್ತು. ಅದರೊಂದಿಗೆ ಆತ ತನ್ನ ಕಾಲದ ಸಾಂಸ್ಕೃತಿಕ ಸಂಗತಿಗಳನ್ನೂ ಕೂಡಿಸಿ ಹೆಣೆಯುವ ಕೆಲಸವನ್ನು ಅಲ್ಲಲ್ಲಿ ಯಶಸ್ವಿಯಾಗಿ ಮಾಡಿದ್ದಾನೆ.

ವಡ್ಡಾರಾಧನೆಯಲ್ಲಿ ಕಂಡುಬರುವ ಎಡಪಂಥೀಯವೂ ಜನಪರವೂ ಪರ್ಯಾಯ

ಸಂಸ್ಕೃತಿಯವೂ ಪ್ರತಿಭಟನೆಯವೂ ಆದ ಮುಸುಕಿನೊಳಗಿನ ಮುಲುಕು ಬಿಕ್ಕುಗಳ ಒಳ ಎಳೆಗಳನ್ನು ಭಾಷಿಕ ರೂಪಾಂತರ ಚಿಪ್ಪಿನಿಂದ ಹೊರಗೆಳೆಯಬಹುದು. ಜೀವಪರ ಕಾಳಜಿಯ ಸಾಂಸ್ಕೃತಿಕ ತುಡಿತಗಳನ್ನು ಬಿಡಿಸಿ ಬಿಸಲಿಗೆ ಒಣಗಿ ಹಾಕುವ ಕೆಲಸಕ್ಕೆ ವಿಮರ್ಶೆ ಸಜ್ಜಾಗಬೇಕು. ಆ ದಿಕ್ಕಿನ ವಿಸ್ತಾರವಾದ ವಿಮರ್ಶೆಗೆ ಇಳಿಯಡೆ ಸಂಕ್ಷೇಪ ರೂಪದಲ್ಲಿ ಕೆಲವು ದೃಷ್ಟಾಂತಗಳನ್ನು ಹರಳು ಗೊಳಿಸಿಟ್ಟಿದ್ದೇನೆ.

ಮನುಷ್ಯರು ದಟ್ಟ ವ್ಯಾಮೋಹಿಗಳು. ಮನುಷ್ಯನ ಮೂಲಪ್ರವೃತ್ತಿ ಚರಿತ್ರೆಯಲ್ಲಿ ರತಿಕೇಳಿ ವೈಹಾಳಿಗೆ ಎಳೆಸುವ ಸುಪ್ತ ಲೈಂಗಿಕ ಬಯಕೆ ಜೀವಂತವಾಗಿದ್ದು ಅವಕಾಶಕ್ಕಾಗಿ ಹೊಂಚಿರುತ್ತದೆ. ಮೃಗತ್ವ ಮತ್ತು ದೈವತ್ವದ ವಾಸನೆಗಳು, ಸಂಸ್ಕಾರಗಳು ಮನುಷ್ಯನಲ್ಲಿದ್ದು ಸಾಂದರ್ಭಿಕ ಒತ್ತಡಗಳಲ್ಲಿ ಹೊರಹೊಮ್ಮುತ್ತದೆ. ರಾಜ ರಾಣಿ ಮಂತ್ರಿ ಸೇನಾನಿ ವಣಿಜ-ಯಾರೂ ಇದಕ್ಕೆ ಹೊರಗಲ್ಲ. ಈ ಋತುಸತ್ಯ ಕಾರ್ತಿಕ ಋಷಿಯ ಕಥೆ, ಗಜಕುಮಾರನ ಕಥೆ, ಚಾಣಾಕ್ಯರಿಸಿ ಕಥೆ, ಗಜಕುಮಾರನ ಕಥೆ, ಚಾಣಾಕ್ಯರಿಸಿಯ ಕಥೆ, ಚಿಲಾತ ಪುತ್ರನ ಕಥೆಗಳಲ್ಲಿ ಪ್ರಬಲವಾಗಿ ವಿವೃತಗೊಂಡಿದೆ. **ಕನ್ನೆ ಮಾಡದ ಗೋಡೆಗಳೊಳಗೆ ದಿನಗಳನ್ನು ಎಣಿಸುತ್ತ, ಗಂಡನ ಉಸಿರು ತಾಕದೆ, ಬಸಿರು ಒಣಗಿದ ಏರುಂಜವ್ವನೆಯರು ಹೇಳುವ ಲೈಂಗಿಕ ಬರದ ಧ್ವನಿರಮ್ಯ ಅಭಿವ್ಯಕ್ತಿ ಹೆಪ್ಪುಗಟ್ಟಿದ ವಾಕ್ಯ ಚಿಂತನೀಯ** : 'ನಮಗೆ, ಸೌಭಾಗ್ಯವಿಲ್ಲದವರಿಗೆ ಭರ್ತಾರನ ದೆಸೆಯಿಂದಪ್ಪ ಸೂಳುಂ ಪಾಳಿಯುಂ ಇಲ್ಲದವರಿಗೆ ಬಸಿರೂ ಮಗನೂ ಎಲ್ಲಿ ಸಾಧ್ಯ?'. ಈ ಮಾತು ವೃಷಭಸೇನಭಟಾರರ ಕಥೆಯಲ್ಲಿ ಪೆಂಡವಾಸದವರಿಂದ ಬಂದಿದೆ ಎಂಬುದನ್ನು ಮರೆಯುವಂತಿಲ್ಲ.

ಋಷಿಯ ಬೆನ್ನಿನ ಮೇಲೆ ಊಟದ ತಳಿಗೆಯಿರಿಸಿ ಬಿಸಿಯಂಬಲಿ ಬಡಿಸುವವರೂ ಸುಖಿಸಿರಿಗೆ ಕಾರಣನಾದ ಮನೆಯ ಆಳಿಗೆ ಹೊಟ್ಟೆ ತುಂಬ ಉಣಲಿಕ್ಕಿದ್ದೆ ದೊಡ್ಡ ತಪ್ಪಾಗಿಸಿ ಹೆಂಡತಿಯನ್ನು ಸೊಪ್ಪುನಾರಾಗಿ ಬಡಿದು ಮನೆಯಿಂದ ಅಟ್ಟುವ ಗಂಡಂದಿರೂ ಬುದ್ಧಿವಾದ ಹೇಳಿದ ಅತ್ತಿಗೆಯನ್ನು ಕಾಲಿಂದ ಒದೆದು ಓಡಿಸಿದ ಮೈದುನರೂ ಪಾತ್ರ ಪ್ರತೀಕಗಳಾಗಿ ಮೈತಳೆದಿವೆ. ದನಕರುಗಳ ಬಾಯಿಗೆ ತಾಯಿಯ ಮೊಲೆ ಹಾಲು ಕುಡಿಯದ ಹಾಗೆ ಮುಖಪಟ್ಟಿ ಕಟ್ಟುವ ಪ್ರಾಣಿದಯೆ ಇರದ ಕ್ರಮ ಪರಿಚಯವಿದೆ. ಅದರ ಮಾದರಿಯ ಮುಂದುವರಿಕೆಯಾಗಿ, ಕೆಲಸದ ನಡುವೆ ಬಿಡುವು ಮಾಡಿ ತನ್ನ ಮೊಲೆಕೂಸಿಗೆ ಹಾಲೂಡಿಸಲು ಆಗದಂತೆ ಮೊಲೆಕಟ್ಟು ಬಿಗಿದು ಕಟ್ಟಿ ಹೆಣ್ಣಾಳುಗಳನ್ನು ದುಡಿಸುವ ದಣಿಗಳೂ ಇಲ್ಲಿ ಚಿತ್ರಿತರಾಗಿದ್ದಾರೆ. ದ್ವೇಷಾಸೂಯೆಯಿಂದ ಹಿಂದಿನ ಸೇಡು ತೀರಿಸಿಕೊಳ್ಳಲು ಜೈನಮುನಿ ಸಮಾಜದ ಮೇಲೆ ವೃಥಾ ಆಪಾದನೆ ಹೊರಿಸಿ ತೊಂದರೆ ಕೊಡುವ ಅನ್ಯ ಸಮಾಜದ ಕುಟಿಲೋಪಾಯವನ್ನು ಮಹೇಂದ್ರದತ್ತಾಚಾರ್ಯರ ಕಥೆಯಲ್ಲಿ ನಿರೂಪಿಸಲಾಗಿದೆ.

ಹಳ್ಳಿಗರ ಜಾಣತನ ಪ್ರತಿನಿಧಿಗಳಾಗಿ ಸುಕುಮಾರಸ್ವಾಮಿ ಕಥೆಯ ಮುದುಕಿಯೂ ಚಾಣಾಕ್ಯರಿಸಿಯ ಕಥೆಯ ಮುದುಕಿಯೂ ಮಿಂಚಿದ್ದಾರೆ. ರೈತರು ಮುಗ್ಧತೆಯಿಂದ ಬೇಸ್ತುಬಿದ್ದು ವಂಚಿತರಾಗುವ ಕಥೆಗಳು ಗಮನಸೆಳೆಯುತ್ತವೆ. ಸುಲಿಗೆಯ ಸ್ವರೂಪ ಚಿತ್ರಣ ಸುಕುಮಾರನ ಕಥೆಯಲ್ಲಿದೆ. ಚಾಣಾಕ್ಯ ಕೂಡ ಜಾಣ ನಯವಂಚಕನೆಂದು ಸೂಚಿತವಾಗಿದೆ. ಬೆಟ್ಟದ ಮೇಲೆ ತಂದು ಸುರಿಯುವ ಒಂದುಗಾಡಿ ಮಣ್ಣಿಗೆ ಸಮತೂಕದ ಹೊನ್ನು ಕೊಡುವ ಡಂಗುರ ಸಾರಿಸುತ್ತಾನೆ.

ಅದರಂತೆ ನೂರಾರು ಬಂಡಿಯವರು ಬೆಟ್ಟದ ತುದಿಗೆ ಮಣ್ಣು ಸಾಗಿಸುತ್ತಾರೆ. ಆದರೆ ಚಾಣಾಕ್ಯನು ಒಂದು ಗಾಡಿಯವನಿಗೆ ಮಾತ್ರ ಬಂಗಾರವಿತ್ತು. 'ನನಗೆ ಬೇಕಿದ್ದುದು ಒಂದು ಗಾಡಿ ಮಣ್ಣು ಮಾತ್ರ' ಎಂದು ಹೇಳಿ, ಉಳಿದ ಗಾಡಿಯವರನ್ನು ಜಾಣತನದ ಮಾತಿನಿಂದ ನಿರುತ್ತರಗೊಳಿಸುವುದು ನಿರ್ದಯತೆ ಮತ್ತು ಶೋಷಣೆಯಾಗಿದೆ. ದೊಡ್ಡವರ ದಗಲಬಾಜಿತನ, ಹಗಲುದರೋಡೆ ಹೇಗಿರುತ್ತದೆಂಬುದರ ಪ್ರತಿಬಿಂಬ ಈ ಪ್ರಸಂಗ.

ಸುಕುಮಾರಸ್ವಾಮಿ ಕಥೆಯಲ್ಲಿ ಬರುವ ನಾಗಶ್ರೀಯ ಆಖ್ಯಾನ ಮೇಲುನೋಟಕ್ಕೆ ತನಗೆ ತಾನು ಸ್ವಯಂಪೂರ್ಣವಾಗಿ ನಿಲ್ಲುವ ಸ್ವತಂತ್ರ ಕಥೆ. ಆದರೆ ವಾಸ್ತವವಾಗಿ ಅದು ರಾಷ್ಟ್ರಕೂಟರ ಕಾಲದಲ್ಲಿ ವ್ಯಾಪಕವಾಗಿ ನಡೆದ ಮತಾಂತರದ ಮಾದರಿ. ಒಂದು ಮತಧರ್ಮದಿಂದ ಇನ್ನೊಂದು ಮತಧರ್ಮಕ್ಕೆ, ಸಾಮಾಜಿಕ-ರಾಜಕೀಯ ರಕ್ಷಣೆ ಮೊದಲಾದ ಪ್ರಬಲ ಕಾರಣಗಳಿಗಾಗಿ, ವಲಸೆ ಹೋಗುವುದನ್ನು ಪ್ರತಿಮೆಯಾಗಿಸಿ ಕಲಾತ್ಮಕವಾಗಿ ಚಿತ್ರಿಸಿರುವುದು ಭ್ರಾಜಿಷ್ಣುವಿನ ಸಾಧನೆ.

ಈ ಬಗೆಯ **ಗಂಭೀರವಾದ ಸಾಂಸ್ಕೃತಿಕ ಸ್ತರದ ವಾಗ್ವಾದಗಳಿಗೆ ಸೂಕ್ತ ಪರಿಪ್ರೇಕ್ಷ್ಯ ಮತ್ತು ಹಾಸು ವಡ್ಡಾರಾಧನೆಯಲ್ಲಿದೆ.**

೧೨

ರಾಷ್ಟ್ರಕೂಟರ ಕಾಲದ ಪ್ರಾಚೀನ ಜಿನಾಲಯ ಸಂಶೋಧನೆ

ಇತ್ತೀಚೆಗೆ ನಾನು ಹೊಸದಾಗಿ ಸಂಶೋಧಿಸಿದ ಪ್ರಾಚೀನ ಬಸದಿ ಮತ್ತು ಜೈನ ಶಿಲ್ಪಗಳು ಹಲವಾರಿವೆಯಾದರೂ ಅವುಗಳಲ್ಲಿ ಅತ್ಯಂತ ಮಹತ್ವದ ಕೆಲವು ವೈಶಿಷ್ಟ್ಯಗಳನ್ನು ಈ ಪುಟ್ಟ ಲೇಖನದಲ್ಲಿ ಪರಿಚಯಿಸಿದ್ದೇನೆ

೧. ಆಳಂದ (ಆಳಂದಿ, ಆಳಂದೆ, ಅಳಂದೆ)

ಗುಲಬರ್ಗಾ ಜಿಲ್ಲೆಯ ತಾಲ್ಲೂಕು ಕೇಂದ್ರವಾದ ಆಳಂದದಲ್ಲಿ ಜೀರ್ಣೋದ್ಧಾರದಿಂದ ಪುನರ್ಘರಣಗೊಂಡಿರುವ ಪ್ರಾಚೀನ ಬಸದಿಯಿದೆ. ಇದರ ಗೋಡೆಗಳು ಕೂಡ ನವೀಕರಣ ಗೊಂಡಿರುವುದರಿಂದ ಈ ಚೈತ್ಯಾಲಯದ ಹಳಮೆ ಅರಿವಿಗೆ ಬರುವುದಿಲ್ಲ. ಆದರೆ ಒಳಗಡೆಯ ಸಭಾಮಂಟಪದ ಕುಬ್ಜ ಕಂಬಗಳು ಹಳೆಯವೆಂದು ಸುಲಭವಾಗಿ ತಿಳಿಯುತ್ತದೆ. ಜಿನಾಲಯದಲ್ಲಿ ಚವ್ವೀಸ ತೀರ್ಥೀ ಪ್ರಾಚೀನ ವಿಗ್ರಹವಿದ್ದರೂ ಅದಕ್ಕೆ ಆಧುನಿಕ ಅಮೃತ ಶಿಲಾಮಯ ಪುಟ್ಟ ಗಂಧಕುಟಿ ಕಟ್ಟಲಾಗಿದೆ. ಸಂಗಮುವರಿಯು ಹಾಗೂ ಪಂಚ ಲೋಹದ ಹಲವು ಜಿನಬಿಂಬಗಳಿವೆ. ೨$^{೧}/_{೨}$ ಅಡಿಯ ಪಾರ್ಶ್ವನಾಥರ ವಿಗ್ರಹವು ಮೂಲನಾಯಕ ಮೂರ್ತಿಯಾಗಿದೆ. ಆದರೆ ಹಿತ್ತಾಳೆಯಲ್ಲಿ ಮಾಡಿದ ೧$^{೧}/_{೪}$ ಅಡಿಯಿರುವ ಚತುರ್ಭುಜ ಸರ್ವಾಹ್ಣ ಯಕ್ಷನು ಸಾಲಂಕೃತ ಆನೆಯ ಮೇಲೆ ನಿಂತು ಧರ್ಮಚಕ್ರವನ್ನು ಹಿಡಿದಿರುವುದು ಸುಂದರವಾಗಿದೆ. ಸರ್ವಾಹ್ಣ ಯಕ್ಷನು ತನ್ನ ಮೇಲಿನ ಎರಡು ಕೈಗಳಲ್ಲಿ ಜಿನರನ್ನು ಹೊತ್ತಿದ್ದಾನೆ. ನಾಲ್ಕು ಅಡಿಯ ಇನ್ನೊಂದು ಆದಿನಾಥ ಜಿನ ಬಿಂಬವು ಪದ್ಮಾಸನದಲ್ಲಿದೆ, ತಲೆಯ ಸುತ್ತ ಪ್ರಭಾಮಂಡಲವಿದೆ. ಎಡಬಲಗಳಲ್ಲಿ ಚಾಮರಧಾರಿಗಳಿದ್ದಾರೆ. ಮೇಲೆ ಮುಕ್ಕೊಡೆಯಿದೆ.

ಆದರೆ ಆಳಂದ ಬಸದಿಯ ಮಹತ್ವವನ್ನು ಹೆಚ್ಚಿಸಿರುವುದು ಇಲ್ಲಿ ನಿತ್ಯವೂ ಪೂಜೆಗೊಳ್ಳುತ್ತಿರುವ ಕೂಷ್ಮಾಂಡಿನೀ ಯಕ್ಷಿಯ ಮೂರ್ತಿ. ಎರಡೂವರೆ

ಅಡಿಯಿರುವ ಈ ಶಿಲಾಮೂರ್ತಿಯು ರಾಷ್ಟ್ರಕೂಟರ ಕಾಲಕ್ಕೆ ಕ್ರಿ.ಶ. ಒಂಬತ್ತನೆಯ ಶತಮಾನಕ್ಕೆ ಸೇರಿದ್ದಾಗಿದೆ. ಸುಖಾಸೀನ ನಿಲವಿನಲ್ಲಿರುವ ಈ ಮೂರ್ತಿಯ ಎಡಗಡೆ ಸಿಂಹವನ್ನು ಹತ್ತಿ ಕುಳಿತಿರುವ ಬಾಲಕನಿದ್ದಾನೆ. ಬಲಗಡೆಗೆ ಮಾವಿನ ಗೊಂಚಲು ಮತ್ತು ಫಲವನ್ನು ಹಿಡಿದು ನಿಂತಿರುವ ಇನ್ನೊಬ್ಬ ಬಾಲಕನಿದ್ದಾನೆ. ಈ ಹುಡುಗರಿಬ್ಬರೂ ಜಿನಶಾಸನ ದೇವಿ ಕೂಷ್ಮಾಂಡಿಯ ಮಕ್ಕಳು. ಬಲಗಾಲನ್ನು ಸ್ವಲ್ಪ ಕೆಳಕ್ಕೆ ಇಳಿಯ ಬಿಡಲಾಗಿದೆ. ಎಡಗಾಲನ್ನು ಮಡಚಿದೆ. ಹೀಗೆ ಅರ್ಧ ಪದ್ಮಾಸನದಲ್ಲಿರುವ ದ್ವಿಭುಜೆ ಯಕ್ಷಿಯು ಸಾಲಂಕೃತ ಳಾಗಿದ್ದು ಬಲಗೈಯಲ್ಲಿ ಫಲಭರಿತ ಮಾವಿನ ಗೊಂಚಲನ್ನೂ ಎಡಗೈಯಲ್ಲಿ ಫಲವನ್ನೂ ಹಿಡಿದಿದ್ದಾಳೆ. ಮೂರು ವರಿಸೆಯಲ್ಲಿ ಸಿಂಬೆ ಸುತ್ತಿ ಕೊಂಡಿರುವ ತಲೆಯ ಕೇಶ ವಿನ್ಯಾಸವು ನೋಡ ತಕ್ಕದ್ದಾಗಿದೆ. ತಲೆಯ ಇನ್ನೂ ಮೇಲುಗಡೆಗೆ ಮಾವಿನ ಮರದ ಕೊಂಬೆಯಿದೆ. ಪುಷ್ಟವಾಗಿ ತುಂಬಿಕೊಂಡ ಎದೆಯ ಹಿನ್ನೆಲೆಯಲ್ಲಿ ಸಣ್ಣದಾದ, ತೆಳುವಾದ ದೇವಿಯ ಸೊಂಟವು ಗಮನ ಸೆಳೆಯುತ್ತದೆ. ಅಯ್ದು ಅಂಗುಲ ದಪ್ಪ ಕಲ್ಲಿನಲ್ಲಿ ಕಡೆದು ಮೂಡಿಸಿರುವ ಈ ಯಕ್ಷಿಯು ಕರ್ನಾಟಕದಲ್ಲಿ ಪೂಜೆಗೊಳ್ಳುತ್ತಿರುವ ಅತ್ಯಂತ ಪ್ರಾಚೀನ ಕೂಷ್ಮಾಂಡಿನೀ ಶಿಲ್ಪವಾಗಿದೆ. ಆಮ್ರಾ, ಅಂಬಿಕಾ, ಕೂಷ್ಮಾಂಡೀ, ಕೂಷ್ಮಾಂಡಿನೀ ಎಂಬ ಹೆಸರುಗಳಿರುವ ಈ ದೇವಿಯು ಶ್ರವಣಬೆಳಗೊಳದ ಸ್ಥಳ ದೇವತೆಯೂ ಹೌದು. (ಹಂಪನಾ : ಯಕ್ಷ ಯಕ್ಷಿಯರು : ೧೯೭೬ : ೧೩೬-೩೮) ಐಹೊಳೆಯ ಮೇಗುಡಿಯಲ್ಲಿ ಕ್ರಿ.ಶ. ೬೭೫ರ ಅವಧಿಗೆ ಸೇರಿದ ಅಂಬಿಕಾದೇವಿಯ ಪ್ರಾಚೀನ ಸುಂದರ ಸಪರಿವಾರ ಶಿಲ್ಪವಿದೆ. ಆದರೆ ಅದು ಸ್ವಲ್ಪ ಮುಕ್ಕಾಗಿದೆ.

೨. ಗಡಿಕೇಶವಾರ : ಜಿನಗೃಹ ಮತ್ತು ಜೈನಮಠ

ಗುಲಬರ್ಗಾ ಜಿಲ್ಲೆಯ ಚಿಂಚೋಳಿ ತಾಲೂಕಿನಲ್ಲಿರುವ ಗಡಿ ಕೇಶವಾರ ಗ್ರಾಮವು ಪುರಾತನ ಕಾಲದಿಂದಲೂ ಜೈನಧರ್ಮದ ಕೇಂದ್ರವಾಗಿ ಬೆಳೆದು ಬಂದಿದೆ. ಕ್ರಿ.ಶ. ಏಳನೆಯ ಶತಮಾನದಿಂದ ೧೪ನೆಯ ಶತಮಾನದವರೆಗೆ ಇದು ಜೀವಂತವಾಗಿ ಉಸಿರಾಡುತ್ತಿತ್ತು. ಇಲ್ಲಿ ಎರಡು ಜಿನಾಲಯಗಳಿದ್ದುವು. ಅವುಗಳಲ್ಲೊಂದು ವಿಶಾಲ ಪ್ರಾಕಾರದಿಂದ ಶೋಭಾಯಮಾನವಾಗಿತ್ತು. ಈ ದೊಡ್ಡ ಬಸದಿಯ ಪಕ್ಕದಲ್ಲಿ ಜೈನಮಠವೂ ಗುರುಕುಲವೂ ಇದ್ದಿತು. ಹಾಲಿ ಒಂದು ಬಸದಿ ನಾಶವಾಗಿದ್ದು, ಇನ್ನೊಂದು ಹಿರಿಯ ಬಸದಿಯು ಹಾಳು ಸುರಿಯುತ್ತಿದೆ. ಗಡಿ ಕೇಶವಾರ ಊರಿನ ಒಂದು ತುದಿಯಲ್ಲಿ ಪಾಳು ಬಸದಿ ಈಗಲೂ ತನ್ನ ಗತವೈಭವವನ್ನು ಸಾರುತ್ತಿದೆ. ಈ ಹಳೆಯ ಬಸದಿಗೆ ಹೋಗುವ ಮೊದಲು ಬೇವಿನ ಮರದ ಜಗತಿಕಟ್ಟೆ ಸಿಗುತ್ತದೆ. ಜಗತಿಯ ಮೇಲೆ ಜೈನ ಕುರುಹುಗಳಿವೆ. ಅವುಗಳಲ್ಲಿ ಒಂದು ತಲೆಯಿಲ್ಲದ ಯಕ್ಷ ಶಿಲ್ಪವು 'ಅತ್ಯಂತ' ಪ್ರಮುಖ ಶಿಲ್ಪವಾಗಿದೆ. ಕುಳಿತಿರುವ ವಿನ್ಯಾಸದ ಈ ಚತುರ್ಭುಜ ಯಕ್ಷ ಮೂರ್ತಿಯು ಪ್ರಾಯಃ ಕರ್ನಾಟಕದಲ್ಲಿಯೇ ಇಂದು ದೊರೆಯುವ ಹಳೆಯ ಹಾಗೂ ವಿಶಿಷ್ಟ ಯಕ್ಷ ಶಿಲ್ಪ. ಬಿರಿದ ತಾವರೆ ಮಣೆಯ ಮೇಲೆ ಪದ್ಮಾಸನದಲ್ಲಿರುವ ಇದರ ಭಂಗಿ ಮತ್ತು ಶರೀರ ವಿನ್ಯಾಸದಿಂದ ಈ ಅಪೂರ್ವ ಜೈನ ಯಕ್ಷ ಶಿಲ್ಪವು ಕ್ರಿ.ಶ. ಏಳನೆಯ ಶತಮಾನದ್ದೆಂದು ಕಂಡು ಬರುತ್ತದೆ. ಇದರಿಂದಾಗಿ ಬಾದಾಮಿ ಚಾಲುಕ್ಯರ ಕಾಲಕ್ಕಾಗಲೇ ಗಡಿ ಕೇಶವಾರ ಗ್ರಾಮವು ಜೈನ ಕೇಂದ್ರವಾಗಿತ್ತೆಂದು ಸಾಬೀತಾಗುತ್ತದೆ.

ಈ ವೇದಿಕೆಯಿಂದ ಎಡಗಡೆಯ ಓಣಿಯಲ್ಲಿ ಹೊರಟರೆ ಹಾದಿ ಬದಿಯ ಇಕ್ಕೆಲಗಳಲ್ಲೂ

ಜೈನ ಶಿಲ್ಪಗಳು ಅನಾಥವಾಗಿ ಬಿದ್ದಿರುವುದು ಕಾಣುತ್ತದೆ. ಇದರಲ್ಲಿ ಮುರಿದ ಕಂಬಗಳ, ಮಾನ ಸ್ತಂಭಗಳ ಭಾಗಗಳೂ ಸೇರಿವೆ. ಇನ್ನೂ ಹತ್ತು ಹೆಜ್ಜೆ ಮುಂದೆ ಹೋದರೆ ಜೀರ್ಣ ಜಿನಾಲಯವೂ ಅದರ ಎಡಕ್ಕೆ ಪಾಳು ಜೈನ ಮಠವೂ ಸಿಗುತ್ತದೆ. ಬಸದಿಯ ಮುಂದುಗಡೆ ಒಂದು ಕಾಲದಲ್ಲಿದ್ದ ಮುಖ ಮಂಟಪ ಮತ್ತು ಪ್ರಾಕಾರದ ಕುರುಹುಗಳಿವೆ. ದೇವಾಲಯದ ಪ್ರವೇಶ ಭಾಗದ ಕಂಬ ಮತ್ತು ಭಿತ್ತಿ ಮೇಲಿರುವ ಶಾಸನದ ಒಕ್ಕಣೆ ತ್ರುಟಿತವಾಗಿಲ್ಲ. ಬಸದಿಯ ಒಳಗಡೆ ಹೋಗಲು ಇರುವ ಬಾಗಿಲ್ವಾಡದ ದ್ವಾರಶಾಖೆಗಳು ಸವೆದು ಮಂಕಾಗಿವೆ; ಅದರ ನಯ ನುಣುಪು ವಿವರಗಳು ಅಳಿಸಿವೆ. ಲಲಾಟದಲ್ಲಿ ಜಿನ ಬಿಂಬವಿದೆ.

ನವರಂಗವು ವಿಶಾಲವಾಗಿದೆ. ಅದರಲ್ಲಿನ ಮುಖ್ಯ ನಾಲ್ಕು ಕಂಬಗಳ ಜತೆಗೆ ತೊಲೆಯು ಕುಸಿಯದ ಹಾಗೆ ಆಸರೆಯಾಗಿ ನಿಲ್ಲಿಸಿರುವ ಇನ್ನೆರಡು ಕಂಬಗಳಿವೆ. ಒಟ್ಟು ಈ ಆರೂ ಕಂಬಗಳು ಹಳೆಯವು. ಬಸದಿಯ ತಳ ವಿನ್ಯಾಸವು ಗರ್ಭಗೃಹ, ಅಂತರಾಳ, ನವರಂಗ, ಮುಖ ಮಂಟಪ ಎಂದು ನಾಲ್ಕು ಹಂತಗಳಿಂದ ಕೂಡಿದೆ. ಗರ್ಭಗೃಹದ ಹಿಂಬದಿಯಲ್ಲಿದ್ದ ಗೋಡೆ ಪೂರ್ತಿ ಕುಸಿದಿದೆ. ಗರ್ಭಗೃಹದ ಎಡಗಡೆಗೆ ಗೋಡೆಯಾಚೆ ಒಂದು ಸೇದುವ ಬಾವಿಯಿದೆ. ಅದರಲ್ಲಿ ಈಗಲೂ ನೀರು ದೊರೆಯುತ್ತಿದ್ದು ಬಾವಿ ಬಳಕೆಯಲ್ಲಿದೆ. ಪಕ್ಕದ ಮಠದೊಳಗೆ ಹೋಗಲು ಇಲ್ಲಿಂದಲೂ ಬಾಗಿಲಿದೆ. ಮಠದೊಳಗೆ ಇರುವ ನಾಲ್ಕು ಬಾಗಿಲುಗಳಲ್ಲಿ ಒಂದರಲ್ಲಿ ಮಾತ್ರ ಲಲಾಟ ಜಿನ ಬಿಂಬವಿದ್ದು ಉಳಿದುವನ್ನು ಮಾರ್ಪಡಿಸಲಾಗಿದೆ.

ಉದ್ದಳತೆ ತುಸು ಕಿರಿದಾದರೂ ಅಗಲ ನವರಂಗದ ಅಳತೆಗೆ ಸರಿಯಾಗಿರುವ ಗರ್ಭಗೃಹದಲ್ಲಿ ಮೂಲನಾಯಕ ಜಿನ ಬಿಂಬವಿದೆ. ಪರ್ಯಂಕಾಸನದಲ್ಲಿ ಕುಳಿತಿರುವ ಆತ್ಮಧ್ಯಾನ ತಲ್ಲೀನರಾದ ಪಾರ್ಶ್ವನಾಥ ತೀರ್ಥಂಕರರ ಬಿಂಬವು ನಾಲ್ಕು ಅಡಿ ಎತ್ತರವಿದ್ದು ನಯನ ಮನೋಹರವಾಗಿದೆ. ಏಳು ಹೆಡೆಗಳ ಮೇಲುಗಡೆ ಮುಕ್ಕೊಡೆಯಿದೆ. ಛತ್ರತ್ರಯದ ಪಾರ್ಶ್ವಗಳ ಶಿಲ್ಪ ಮಸುಕಾಗಿದೆ. ಏಳು ಹೆಡೆಗಳ ಕೆಳಗೆ, ಜಿನರ ತಲೆಯ ಹಿಂಬದಿಗೆ ಭಾಮಂಡಲವಿದೆ. ಒಪ್ಪವಾದ ಗಂಭೀರ ಕೋಲು ಮುಖ ಮುದ್ರೆಯು ಯೋಗ ಮುದ್ರೆಯಿಂದ ಕೂಡಿದೆ. ಗುಂಗುರು ಕೂದಲು ದಟ್ಟವಾಗಿ ತಲೆಯ ತುಂಬ ಸುರುಳಿಯಾಗಿ ಹರಡಿದ್ದು ಹಣೆಯ ಮುಂಬದಿಯವರೆಗೆ ಬಂದಿದೆ. ಹಣೆಯ ಅರ್ಧದವರೆಗೆ ಹೀಗೆ ಹೆಚ್ಚಾಗಿ ಮುಂಚಾಚಿದ ರೀತಿಯಲ್ಲಿ ಕೂದಲನ್ನು ತೋರಿಸಿರುವ ಶಿಲ್ಪಗಳು ವಿರಳ. ಪಾರ್ಶ್ವನಾಥ ಜಿನರ ಪಾರ್ಶ್ವಗಳಲ್ಲಿ ನಿಂತಿರುವ ಚಾಮರಧರರ ಶಿಲ್ಪವೂ ಅಲಂಕಾರವೂ ಮನೋಜ್ಞವಾಗಿದೆ.

ಪಾರ್ಶ್ವಜಿನರ ಬೆನ್ನಿಗೆ ಇರುವ ಎಡಬಲದ ಎರಡು ಕಂಬಗಳೂ, ತುದಿಯಲ್ಲಿರುವ ಮಕರವೂ, ಅಂಚಿಗೆ ಮೈಚಾಚಿ ಎದ್ದು ನಿಂತ ಸಿಂಹಗಳೂ ಸ್ಪಷ್ಟವಾಗಿ ಕಾಣುತ್ತವೆ. ಗರ್ಭಗೃಹದ ಬಾಗಿಲ್ವಾಡವು ನಷ್ಟವಾಗಿದೆ. ಪ್ರಾಯಃ ಮಕರ ತೋರಣ ಅಲಂಕಾರವಿದ್ದಂತೆ ತೋರುತ್ತದೆ. ಸಭಾ ಮಂಟಪದಲ್ಲಿ ಎಡಗಡೆ ಗೋಡೆಯ ಮುಂದೆ ಕಾಯೋತ್ಸರ್ಗದಲ್ಲಿ ನಿಂತಿರುವ ಪಾರ್ಶ್ವನಾಥರ ಇನ್ನೊಂದು ಸುಂದರ ಬಿಂಬವಿದೆ. ಅದರ ಹಿಂಬದಿಯಲ್ಲಿ ಒಂಬತ್ತು ಸುತ್ತು ಬಂದಿರುವ ನಾಗೇಂದ್ರನು ತನ್ನ ಏಳು ಹೆಡೆಯನ್ನು ಪಾರ್ಶ್ವನಾಥ ಜಿನರ ತಲೆಯ ಮೇಲೆ ಬಿಚ್ಚಿ ಹಿಡಿದಿದ್ದಾನೆ. ಅದರ ಮೇಲೆ ಒಂದೇ ಕೊಡೆಯಂತೆ ಕಾಣುವ ಮುಕ್ಕೊಡೆಯಿದೆ. ಪಾರ್ಶ್ವನಾಥರ ತಲೆಯ ಹಿಂಭಾಗಕ್ಕೆ ಭಾಮಂಡಲವಿದೆ. ಎಡಬಲಗಳಲ್ಲಿ ಚಾಮರವಾಗಲಿ, ಚಾಮರಧರರಾಗಲಿ, ಯಕ್ಷ ಯಕ್ಷಿಯರಾಗಲಿ ಇಲ್ಲ. ಎಡ-ಬಲದ

ತುದಿಗಳಿಗೆ ಮೂರಂಗುಲದ ಪಟ್ಟಿಯೊಂದು ಲಾಳಾಕಾರದಂತೆ ಮಿರುಗುತ್ತಿದೆ. ನವರಂಗದ ನಾಲ್ಕು ಕಂಬಗಳೂ ಕ್ರಿ.ಶ. ಒಂಬತ್ತನೆಯ ಶತಮಾನಕ್ಕೆ ಸೇರಿದ್ದೆಂದು ಅದರ ಶಿಲ್ಪ ಮಾದರಿಯಿಂದ ಗೊತ್ತಾಗುತ್ತದೆ. ಈಗಿರುವ ಸ್ಥಿತಿಯನ್ನು ನೋಡಿ ಈ ಬಸದಿಯ ಗರ್ಭಗೃಹದ ಮೇಲೆ ಶಿಖರವಿತ್ತೊ ಇಲ್ಲವೊ ಹೇಳಲಾಗುವುದಿಲ್ಲವಾದರೂ ವಿಶಾಲ ಮುಖ ಮಂಟಪವಿತ್ತೆಂದು ಖಚಿತವಾಗಿ ಹೇಳಬಹುದು.

ಗಡಿ ಕೇಶವಾರ ಗ್ರಾಮದ ಪಾರ್ಶ್ವನಾಥ ಬಸದಿಯು ಈ ಭಾಗದ ಪ್ರಖ್ಯಾತವಾದ ಬಸದಿಯಾಗಿತ್ತೆಂಬುದು ಲಕ್ಷ್ಯ ಕೊಡಬೇಕಾದ ವಿಷಯ. ವಾಸ್ತುಶಿಲ್ಪ ಲಕ್ಷಣದ ದೃಷ್ಟಿಯಿಂದ ಕೂಡ ಇದೊಂದು ಮಹತ್ವದ ದೇವಾಲಯ.

೩. ಮಳಖೇಡದ ಜೈನ ಕೋಟೆ

ಮಳಖೇಡವು (ಮಾನ್ಯಖೇಟ) ರಾಷ್ಟ್ರಕೂಟ ಸಾಮ್ರಾಟರ ಮುಖ್ಯ ರಾಜಧಾನಿಯಾಗಿ ವಿಜೃಂಭಿಸಿದ ಮಹಾನಗರ. ಜಿನಸೇನ ಆಚಾರ್ಯರ ಶಿಷ್ಯನಾದ ಅಮೋಘವರ್ಷ ನೃಪತುಂಗನ ಕಾಲದಲ್ಲಿ ಮಳಖೇಡವು ವಿಜಯ ಸ್ಕಂಧಾವಾರವಾಗಿ ಬೆಳೆಯಿತು. ಮಳಖೇಡವು ಇಂದು ತನ್ನ ಸಾವಿರ ವಾರ್ಷಗಳ ಹಿಂದಣ ಸಿರಿಸಂಪದವನ್ನು ಕಳೆದುಕೊಂಡಿದೆ. ರಾಷ್ಟ್ರಕೂಟರನ್ನು ಕೆಳಗೆ ತಳ್ಳಿ ಚಾಳುಕ್ಯ ಸಾಮ್ರಾಜ್ಯವನ್ನು ಕ್ರಿ.ಶ. ೯೭೩-೭೪ರಲ್ಲಿ ಉದ್ಘಾಟಿಸಿದ್ದು ಇಮ್ಮಡಿ ತೈಲಪ ಚಕ್ರವರ್ತಿ (ಕ್ರಿ.ಶ. ೯೭೩-೯೮) ತೈಲಪನೂ, ಅವನ ಮಕ್ಕಳೂ, ಮೊಮ್ಮಕಳೂ ಜಗದೇಕಮಲ್ಲ ಜಯಸಿಂಹನವರೆಗೆ (ಕ್ರಿ.ಶ. ೧೦೧೫-೪೨) ಜೈನರಾಗಿದ್ದರೆಂದು ಚರಿತ್ರಕಾರರು ತಿಳಿಸಿದ್ದಾರೆ. ತೈಲಪನು ರಾಷ್ಟ್ರಕೂಟರನ್ನು ಸೋಲಿಸಿದ ಮೇಲೆ ಮಳಖೇಡವನ್ನೇ ತನ್ನ ನೆಲೆವೀಡನ್ನಾಗಿ ಮುಂದುವರಿಸಿದನು. ಮಳಖೇಡದ ಕೋಟೆಯ ಒಳಗಡೆ ರಾಜರು ವಾಸವಾಗಿದ್ದ ಭಾಗಗಳಿವೆ. ಕೋಟೆಯ ಹಿಂಭಾಗದಲ್ಲಿ ಕಾಗಿನಾ ನದಿ ಹರಿಯುತ್ತದೆ. ಕೋಟೆಯೊಳಗೆ ಇರುವ ಕೋಟೆಯ ಪಶ್ಚಿಮದಲ್ಲಿ ಮುಖ್ಯ ದ್ವಾರವಿದೆ. ಅದು ರಾಜದ್ವಾರ. ಆ ರಾಜದ್ವಾರದ ವೈಶಿಷ್ಟ್ಯವೆಂದರೆ ಅದರ ಲಲಾಟದಲ್ಲಿ ಪರ್ಯಂಕಾಸನದಲ್ಲಿ ಕುಳಿತಿರುವ ಪಾರ್ಶ್ವನಾಥರ ಜಿನಬಿಂಬ ಇರುವುದು.

ಈ ರಾಜದ್ವಾರದ ದ್ವಾರ ಶಾಖೆಗಳು ಸುಂದರ ಕೆತ್ತನೆಯಿಂದ ಕೂಡಿದ್ದು ಲಲಾಟ ಬಿಂಬದ ಬಳಿ ಪೂರ್ತಿ ಕಲ್ಲು ಸೀಳಿದೆ. ಈ ಬಾಗಿಲ್ವಾಡವು ತೈಲಪ ಚಕ್ರವರ್ತಿಯ ಮತ್ತು ಇರಿವ ಬೆಡಂಗ ಸತ್ಯಾಶ್ರಯನ ಕಾಲಕ್ಕೆ ಸೇರಿದ್ದು. ಇದು ಅಖಿಲ ಭಾರತ ಮಹತ್ವವನ್ನು ಪಡೆದಿರುವ ಅಪೂರ್ವ ಜಿನಶಿಲ್ಪ. ಕ್ರಿ.ಶ. ೯೮೫-೯೫ರ ಅವಧಿಯಲ್ಲಿ ರಚಿತವಾದದ್ದು. ಈ ಅರಬಾಗಿಲು ಶಿಥಿಲವಾಗಿದ್ದು ಕುಸಿಯುತ್ತಿದೆ. ಮೇಲಕ್ಕೆ ಹೋಗುವ ಮೆಟ್ಟಿಲುಗಳಿಗೆ ಹಾಕಿದ್ದ ಸೈಜುಗಲ್ಲುಗಳು ಉರುಳಿ ಬಿದ್ದಿವೆ. ಹತ್ತುಮಾರು ದೂರದಲ್ಲಿ ಅರಮನೆಯ ಖಾಸಾ ದೇವಾಲಯ, ಪಟ್ಟ ಜಿನಾಲಯ ಕೂಡ ಪಾಳು ಬಿದ್ದಿದೆ. ಮಳಖೇಡ ಊರೊಳಗಿನ ಪ್ರಾಚೀನ ಬಸದಿಯನ್ನು ಜೀರ್ಣೋದ್ಧಾರಗೊಳಿಸಲಾಗಿದೆ. ಅದರಂತೆ ಕೋಟೆಯೊಳಗಿನ ರಾಜದ್ವಾರದ ರಿಪೇರಿಯೂ ಶೀಘ್ರವಾಗಿ ನಡೆದರೆ ಚರಿತ್ರೆಯ ಸ್ಮಾರಕವೊಂದು ಉಳಿದುಕೊಳ್ಳುತ್ತದೆ.

೪. ಹರಿಜನವಾಡದಲ್ಲಿ ನೇಮಿನಾಥ ಜಿನಾಲಯ

ಗುಲಬರ್ಗಾ ಜಿಲ್ಲೆಯ ಚಿತಾಪುರ ತಾಲೂಕು ಪೇಠ ಶಿರೂರು ಗ್ರಾಮದ ಬಳಿ ಹಳ್ಳದ ದಂಡೆಯಲ್ಲಿ ಹರಿಜನವಾಡವಿದೆ. ಈ ಹರಿಜನ ಕೇರಿಗೆ ಪ್ರವೇಶವಾಗುತ್ತಿದ್ದಂತೆ ಮೊದಲಿಗೆ ಒಂದು ದೇವಾಲಯ ಸಿಗುತ್ತದೆ. ಇದನ್ನು ಬೌದ್ಧ ದೇವಾಲಯವೆಂದೂ ಹೇಳುವುದುಂಟು. ವಾಸ್ತವವಾಗಿ ಇದೊಂದು ಬಸದಿ. ಈ ಜಿನಾಲಯ ತುಂಬ ಪ್ರಾಚೀನವಾದುದು. ಅಷ್ಟೇ ಅಲ್ಲದೆ ಇದು ರಾಷ್ಟ್ರಕೂಟರ ಕಾಲದ ಕ್ರಿ.ಶ. ಒಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಕಟ್ಟಲಾದ ಚೈತ್ಯಾಲಯ. ಬಸದಿಯ ತಳವಿನ್ಯಾಸದಿಂದ ಇದರ ರಚನೆಯು ಸರಿಯಾಗಿ ತಿಳಿದು ಬರುತ್ತದೆ. ಗರ್ಭಗುಡಿ, ಅಂತರಾಳ, ನವರಂಗ-ಹೀಗೆ ಮೂರು ಹಂತದಲ್ಲಿರುವ ಈ ಬಸದಿಯು ಸಾಕಷ್ಟು ಜೀರ್ಣಗೊಂಡಿದ್ದರೂ ತನ್ನ ಮೂಲದ ಕುರುಹುಗಳನ್ನು ಉಳಿಸಿಕೊಂಡಿದೆ.

ಪ್ರಾಯಃ ಒಂದು ಮುಖಮಂಟಪವೂ ಈ ಗುಡಿಗೆ ಇದ್ದಿರಬೇಕೆನಿಸುತ್ತದೆ. ನವರಂಗದಲ್ಲಿ ಇರುವ ನಾಲ್ಕು ಕಂಬಗಳು ರಾಷ್ಟ್ರಕೂಟರ ಕಾಲದ ದೇವಾಲಯಗಳ ಶಿಲ್ಪ ವಿನ್ಯಾಸಕ್ಕೆ ಅನುಗುಣವಾಗಿವೆ. ನವರಂಗದೊಳಗೆ ಬರುವುದಕ್ಕೆ ಇರುವ ಬಾಗಿಲಲ್ಲಿ ಕೂಡ ಪುರಾತನ ಚಹರೆಗಳು ಉಳಿದಿವೆ. ದ್ವಾರಶಾಖೆಗಳು ನಾಲ್ಕು ಕಾಣುತ್ತವೆ. ಲಲಾಟದಲ್ಲಿ ಗಜಲಕ್ಷ್ಮಿಯ ಮೂರ್ತಿಯಿದೆ. ಅದರ ಮೇಲುಗಡೆ ಇರುವ ಮೂರು ಹಂತಗಳ ಶಿಲ್ಪಗಳಲ್ಲಿ ಮೂರನೆಯ ಹಂತದಲ್ಲಿ ತೀರ್ಥಂಕರರು ಪದ್ಮಾಸನದಲ್ಲಿ ಕುಳಿತಿದ್ದು ಅವರ ಪಕ್ಕ ಪಕ್ಕದಲ್ಲಿ ಯಕ್ಷಯಕ್ಷಿಯರು ಕುಳಿತಿರುವುದನ್ನು ಉಬ್ಬು ಶಿಲ್ಪದ ಮೂಲಕ ತೋರಿಸಿದೆ. ಇದೊಂದು ಅಪರೂಪವೆನಿಸುವ ವಿಶಿಷ್ಟ ವಿನ್ಯಾಸ.

ಗರ್ಭಗೃಹದಲ್ಲಿ ಬಸದಿಯ ಮೂಲ ನಾಯಕ ಸ್ವಾಮಿಯಾದ ನೇಮಿನಾಥ ತೀರ್ಥಂಕರರು ಪದ್ಮಾಸನದಲ್ಲಿ ಸಿಂಹ ಪೀಠ ಮೇಲೆ ಕುಳಿತಿದ್ದಾರೆ. ಮಂದಸ್ಮಿತ ವದನ, ನೀಳವಾದ ಕಿವಿಗಳು, ಗುಂಗುರು ಕೂದಲು, ಭಾಮಂಡಲ, ಮುಕ್ಕೊಡೆ, ಆ ಕಡೆ ಈ ಕಡೆ ಚಾಮರಧರರು - ಈ ವಿವರಗಳು ನಿಚ್ಚಳವಾಗಿವೆ. ಸೂಕ್ಷ್ಮವಾಗಿ ಗಮನಿಸಿದರೆ ಜಿನರ ಹಿಂಬದಿಯಲ್ಲಿ ಎರಡೂ ತುದಿಗಳಲ್ಲಿ ವ್ಯಾಳಿಯ ಮುಖ ಮತ್ತು ಅದರ ಕೆಳಗೆ ನಿಗಿರಿ ನಿಂತ ಸಿಂಹದ ಮೈ ಕಾಣಿಸುತ್ತದೆ. ಅಂತರಾಳದಲ್ಲಿ ಕೂಷ್ಮಾಂಡಿನೀ ಯಕ್ಷಿಯ ವಿಗ್ರಹವಿದೆ. ಗೋಡೆಗೆ ಒರಗಿಸಿ ಇಟ್ಟಿರುವ ಈ ಜಿನಶಾಸನದೇವಿಯು ಸುಖಾಸೀನೆಯಾಗಿದ್ದಾಳೆ. ದ್ವಿಭುಜೆಯಾದ ಈ ಅಂಬಿಕಾ ಯಕ್ಷಿಯ ಬಲಗೈ ಮುರಿದಿದೆ. ಎಡಗೈ ತೊಡೆಯ ಮೇಲೆ ಕುಳಿತ ಮಗನ ಮೈ ಬಳಸಿದೆ. ಮಗನ ಮುಖ ಮೈ ಕಾಣಿಸುತ್ತದೆಯಾದರೂ ಕುತ್ತಿಗೆಯ ಭಾಗ ಮುಕ್ಕಾಗಿ ತುಂಡಾಗಿದೆ. ಅಂಬಿಕೆಯ ಕೇಶವಿನ್ಯಾಸ ಆಳಂದ, ಮಳಖೇಡ ಮತ್ತು ಬಂಕೂರು ಜಿನಾಲಯಾಗಳಲ್ಲಿರುವ ಅಂಬಿಕೆ (ಕೂಷ್ಮಾಂಡಿನಿ) ಯ ಕೇಶವಿನ್ಯಾಸವನ್ನು ಹೋಲುತ್ತದೆ. ಇದು ರಾಷ್ಟ್ರಕೂಟರ ಕಾಲದ ಒಂದು ವಿಶಿಷ್ಟ ಶೈಲಿ.

ತೀರ್ಥಂಕರರಿಗೂ, ಕೂಷ್ಮಾಂಡಿನೀ ದೇವಿಗೂ, ಬಾಗಿಲಿಗೂ ಕಡು ನೀಲಿ ಬಣ್ಣವನ್ನು ಬಳಿದಿರುವುದರಿಂದ ಕೆಲವು ಶಿಲ್ಪದ ಲಕ್ಷಣಗಳು ಮುಚ್ಚಿಹೋಗಿವೆ. ರಾಷ್ಟ್ರಕೂಟರ ಇಮ್ಮಡಿ ಕೃಷ್ಣನ ಆಳ್ವಿಕೆಯ ಅವಧಿಯಲ್ಲಿ ನಿರ್ಮಾಣಗೊಂಡ ಈ ಬಸದಿಯು ಹರಿಜನರಿಂದ ಪೂಜೆ ಗೊಳ್ಳುತ್ತಿರುವುದು ಮತ್ತೊಂದು ವಿಶೇಷ.

ಮುಳುಗುಂದ, ಮಲ್ಲ ಸಮುದ್ರ, ಕಳಸಾಪುರ ಮುಂತಾದ ಸ್ಥಳಗಳಲ್ಲಿ ನಾನು ಪತ್ತೆ ಮಾಡಿದ ಹೊಸ ಶೋಧಗಳ, ಶಾಸನ ಮತ್ತು ಶಿಲ್ಪಗಳ ಮಾಹಿತಿಯನ್ನು **ಅರವಂಟಿಗೆ** ಪತ್ರಿಕೆಯ ಎರಡು ಸಂಚಿಕೆಗಳಲ್ಲಿ ವಿಸ್ತಾರವಾಗಿ ಚರ್ಚಿಸಿದ್ದೇನೆ. ಅವನ್ನು ಬಿಟ್ಟು ಹೊಸ ಮಾಹಿತಿಯನ್ನು ಈ ಲೇಖನದಲ್ಲಿ ಒದಗಿಸಿದ್ದೇನೆ. ಇದರಿಂದ ಜೈನ ಪರಂಪರೆ ಮತ್ತು ಉಜ್ವಲ ಇತಿಹಾಸದ ಮಹತ್ವದ ಸಂಗತಿಗಳು ಬೆಳಕಿಗೆ ಬಂದಂತಾಗಿದೆ.

೧೩
ರಾಯಜಗಝುಂಪ ಪ್ರಶಸ್ತಿಯ ಅನನ್ಯತೆ

ನಾನು ೧೯೮೯-೯೬ರ ಅವಧಿಯಲ್ಲಿ ಹೊಂಬುಜದ ಐತಿಹಾಸಿಕ ಹಿನ್ನೆಲೆಯನ್ನು ಕುರಿತು ಸಂಶೋಧನ ಕಾರ್ಯದಲ್ಲಿ ನಿರತನಾಗಿದ್ದಾಗ ಹಲವು ಮಹತ್ವದ ಸಂಗತಿಗಳು ನನ್ನ ಕುತೂಹಲವನ್ನು ಕೆರಳಿಸಿದುವು. ಅವುಗಳಲ್ಲಿ ಒಂದು ಈ ಕೆಳಗೆ ಉದಾಹರಿಸಿರುವ ಚಂಪಕಮಾಲೆ ವೃತ್ತ ಪದ್ಯ:

ನಳನೆ ವಿನೋದಿ ಧರ್ಮ್ಮಜನೆ ಧಾರ್ಮ್ಮಿಕನಬ್ಧಿಯೆ ರತ್ನದಾಗರಂ
ಕುಳಿಶಮೆ ಶಸ್ತ್ರಮರ್ಜ್ಜುನನೆ ಧನ್ವಿ ಸುರೇಂದ್ರನೆ ಭೋಗಿ ಮಂದರಾ
ಚಳಮೆ ಗಿರೀಂದ್ರಮಪ್ರತಿಮ **ರಾಯಝುಳಪ್ಪನೆ** ಚಕ್ರಿ ತೈಲಮಂ
ಡಳಿಕನೆ ದಾನಿಯೆಂದು ಮುಡಿಗಿಕ್ಕಿದೆನಾರ್ಪ್ಪವರೆತ್ತಿಕೊಳ್ಳಿರೇ॥೧

"ನಳನಂತೆ ರಸಿಕರಾಜ, ಧರ್ಮರಾಯ (ಯುಧಿಷ್ಠಿರ)ನಂತೆ ಧಾರ್ಮಿಕ ಪ್ರವೃತ್ತಿಯಿರುವಾತ, ಕಡಲಿನಂತೆ ಗುಣರತ್ನದಾಗರ, ವಜ್ರಾಯುಧದಂತೆ ಶಸ್ತ್ರ ಸನ್ನದ್ಧ, ಅರ್ಜುನನ ಹಾಗೆ ಧನುರ್ಧರ, ದೇವೇಂದ್ರನಂತೆ ಭೋಗಿ, ಮಂದರ ಪರ್ವತದಂತೆ ಸ್ಥಿರ ಧೈರ್ಯ. ಇಂತಹ ತೈಲ ಮಂಡಳಿಕನೆ ಶ್ರೇಷ್ಠ ದಾನಿ, ಮತ್ತು ರಾಯಝುಳಪ್ಪನೆ ಅನ್ಯಾದೃಶನಾದ ಚಕ್ರಾಧಿಪತಿ ಎಂದು ಮುಡಿಗೇರಿಸಿಕೊಂಡಿದ್ದೇನೆ. ಶಕ್ತಿ ಇದ್ದವರು ಎತ್ತಿಕೊಳ್ಳಿರಿ"[೨] ಎಂಬುದು ಈ ಪದ್ಯದ ತಿರುಳು.

ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕು ಹೊಂಬುಜ ಕ್ಷೇತ್ರ ಸತತವಾಗಿ ಒಂದು ಸಾವಿರ ವರ್ಷ ಸಾಂತರರೆಂಬ ಮಾಂಡಲಿಕರ ರಾಜಧಾನಿಯಾಗಿತ್ತು. 'ಸಾಂತಳಿಗೆ ಸಾಸಿರ'ವೆಂಬ ಪುಟ್ಟ ರಾಜ್ಯವನ್ನು ಆಳಿದ ಸಾಂತರರಾಜರಲ್ಲಿ ಒಬ್ಬನಾದ ಮುಮ್ಮಡಿ ತೈಲಪನ (೧೦೯೦-೧೧೩೦) ವರ್ಣನೆ ಮೇಲಿನ ವೃತ್ತಪದ್ಯದಲ್ಲಿ ಬಂದಿದೆ. ಈ ಪದ್ಯದಲ್ಲಿ ಒಂದು ಅಪರೂಪದ ರಾಜಪ್ರಶಸ್ತಿ ಪ್ರಯೋಗವಾಗಿದೆ. **ರಾಯಝುಳಪ್ಪ** ಎಂಬುದೇ ಆ ವಿಶಿಷ್ಟ ಬಿರುದು. ಬಿ. ಎಲ್. ರೈಸರು ಈ ಶಾಸನ (ಪದ್ಯ)ಕ್ಕೆ ಕೊಟ್ಟಿರುವ ಇಂಗ್ಲಿಷ್ ಭಾಷಾಂತರ ಭಾಗದಲ್ಲಿ 'among the equalled kings *jhalappa* is the emperor (chakri)' ಎಂದು

ಹೇಳಿ, ಅದಕ್ಕೆ ಲಗತ್ತಿಸಿರುವ ಅಡಿಟಿಪ್ಪಣಿಯಲ್ಲಿ 'who this is meant for is not clear' ಎಂದಿದ್ದಾರೆ.[೩] ಆದರೆ ಈ ರಾಜ ಪ್ರಶಸ್ತಿ ಕಲ್ಯಾಣ ಚಾಳುಕ್ಯ ಚಕ್ರವರ್ತಿ ತ್ರಿಭುವನಮಲ್ಲ ಆರನೆಯ ವಿಕ್ರಮಾದಿತ್ಯನಿಗೆ ಇದ್ದ ಬಿರುದೆಂಬುದನ್ನು ನಾನು ಸ್ಪಷ್ಟಪಡಿಸಿದ್ದೇನೆ.[೪] ಈ ಬಿರುದು ಆತನಿಗೆ ೧೦೮೨ರ ಸುಮಾರಿಗೆ ಬಂದಂತೆ ಭಾವಿಸಲು ಇನ್ನೊಂದು ಶಾಸನ ಪ್ರಯೋಗ ತಕ್ಕ ಆಧಾರವನ್ನು ಒದಗಿಸಿದೆ.

ಶ್ರೀಮತ್ರಿಭುವನಮಲ್ಲಂ
ಸಾಮಜರಿಪು ವಿಕ್ರಮಂ ಪರಾಕ್ರಮತುಂಗಂ
ಸಾಮಾನ್ಯಮಲ್ಲನೆಳೆಯೊಳ್
ಸೋಮೇಶ್ವರನನುಜನದಟ **ರಾಯ ಝುಳಪ್ಪಂ**॥[೫]

ಶ್ರೀಮತ್ ತ್ರಿಭುವನಮಲ್ಲ (ಮೂರು ಲೋಕಗಳ ಜಟ್ಟಿ) ಪ್ರಶಸ್ತಿ ಇರುವ ಮತ್ತು ಸಿಂಹ ಸಾಹಸಿಯೂ ಶೂರರಲ್ಲಿ ಶ್ರೇಷ್ಠನೂ ಭೂಮಿಯಲ್ಲಿ ಅಸಾಮಾನ್ಯನೂ ಸೋಮೇಶ್ವರ (ಭುವನೈಕ ಮಲ್ಲ) ನ ತಮ್ಮನೂ ಆಗಿದ್ದು 'ಅದಟ ರಾಯಝುಳಪ್ಪ'ನೆನಿಸಿದ್ದನು".೬ 'ಅದಟ' ವೆಂದರೆ ಅತಿ ಪರಾಕ್ರಮವೆಂದರ್ಥ. ಸಂಸ್ಕೃತದ 'ಅದೃಷ್ಟ'ವೆಂಬ ಶಬ್ದ ಮರಾಟಿಯಲ್ಲಿ 'ಅದಟ'ವೆಂದು ತದ್ಭವಗೊಂಡು ಕನ್ನಡದಲ್ಲೂ ಬಳಕೆಯಾಗಿದೆ.

ಸಾಂತರ ಇತಿಹಾಸ ಹಾಗೂ ಅವರ ಮೇಲಾಳುಗಳಾಗಿ ಆಳಿದ ಚಾಳುಕ್ಯರ ಸಮಕಾಲೀನ ಚರಿತ್ರೆಯ ಅರಿವು ಇದ್ದ ಕವಿ ಈ ಶಾಸನವನ್ನು ಬರೆದಿದ್ದಾನೆ. ರಾಯ ಎಂಬುದು ಪ್ರಾಕೃತ ಶಬ್ದರೂಪ, ಸಂಸ್ಕೃತದ ರಾಜನ್ ಶಬ್ದದಿಂದ ನಿಷ್ಪನ್ನಗೊಂಡಿದೆ. ಝುಳಪ್ಪ / ಜಳಪ್ಪ ಎಂಬುದು ಪ್ರಾಕೃತ ಝುಡಪ್ಪ ಎಂಬ ಶಬ್ದದಿಂದ ಬಂದಿದೆ; ಮೇಲೆರಗಿ ಹೊಡೆಯುವವನು, ಪರಾಕ್ರಮ ಎಂಬುದು ಇದರ ಶಬ್ದಾರ್ಥ. ಹೀಗಾಗಿ *'ರಾಯಝುಳಪ್ಪ'* ಎಂಬ ರಾಜಪ್ರಶಸ್ತಿಯಲ್ಲಿರುವ ಎರಡೂ ಶಬ್ದಗಳು ಪ್ರಾಕೃತ ಮೂಲದವು. ತ್ರಿಭುವನಮಲ್ಲ ವಿಕ್ರಮಾದಿತ್ಯ ಚಕ್ರಿಗೆ ರಾಯಝು(ಜ)ಳಪ್ಪ ಎಂಬ ವಿಶಿಷ್ಟ ಪ್ರಶಸ್ತಿ ಇದ್ದುದನ್ನು ಇನ್ನೆರಡು ಶಾಸನಗಳು ದಾಖಲಿಸಿವೆ.

೧. ರಾಯಜಗದಲ ಮನೋಜ ರತಿಮಚ್ಚರಿಪ
ಸವತೀಮದಭಂಜನೆ ರಾಯ ಭಂಗಾಜದೇವಮನಜ್ಜಯೋ ನಿಧಿ
ಪ್ರವರ್ದ್ಧಮಾನ ಚಂದ್ರವದನೆ ಸೌಭಾಗ್ಯ ಸದನೆ
ರಾಯಜಳಪ್ಪ ಕಳ್ಪಾವನೀಜ ಸಮಾಲಿಂಗಿತ ಜಂಗಮಲತೆ..ಚಂದಲಿದೇವಿ॥[೭]

೨. ದ್ವಿತೀಯ ಲಕ್ಷ್ಮೀ ಸಮಾನೆ ಕಲಹಂಸಯಾನೆ
ರಾಯ ಝುಳಪ್ಪ ಕಟ್ಟಿಕುಜ ಸಮಾಲಿಂಗಿತ ಕಲ್ಪಲತೆ
ಸಾಮಂತ ಸೀಮಂತಿನೀ ಪರಿವೃತೆ
ಶ್ರೀಮತ್ರಿಭುವನಮಲ್ಲದೇವ... ಶ್ರೀಮತ್ಪಿರಿಯರಸಿ ಚನ್ದಲದೇವಿಯರು
ಅಲಂದೆ ಸಾಸಿರ ಪ್ರಮುಖವನೇಕ ಭತ್ತ ಗ್ರಾಮಂಗಳಂ
ದುಷ್ಟನಿಗ್ರಹ ಶಿಷ್ಟ ಪ್ರತಿಪಾಳನದಿಂದಾಟ್ಟಿರಸುಗೆಯ್ಯುತ್ತಮಿರೆ॥[೮]

ಸ್ವಾರಸ್ಯವೆಂದರೆ ಆಳಂದಶಾಸನದಲ್ಲಿ ತ್ರಿಭುವನಮಲ್ಲ ವಿಕ್ರಮಾದಿತ್ಯನ ಎರಡು ರಾಜ ಪ್ರಶಸ್ತಿಗಳು

ಬಳಕೆಯಾಗಿರುವುದು : 'ರಾಯಜಳಪ್ಪ'ದ ಜತೆಗೆ ರಾಯಜಗದಳ ಎಂಬುದೂ ಬಂದಿದೆ. *ರಾಯಜಗದಳಂ* ಎಂಬ ಬಿರುದನ್ನು ಮತ್ತೊಂದು ಶಾಸನವೂ ಉಲ್ಲೇಖಿಸಿದೆ.

ಅರಿರಾಯರೊಳಪ್ಪಂ ರಾ
ಯರಾಕ್ಷಸಂ **ರಾಯಜಗದಳಂ** ರಾಯಧರಾ
ಧರವಜ್ರ ರಾಯ ವಿಧ್ವಂ
ಸಿ ರಾಯ ಸರ್ವ್ವಜ್ಞಮೂರ್ತ್ತಿ ತ್ರಿಭುವನಮಲ್ಲಂ॥[೯]

ಕಲ್ಯಾಣ ಚಾಳುಕ್ಯ ಸಾಮ್ರಾಟರ ನೀಳಾಳಿಕೆಯಲ್ಲಿ ವಿಕ್ರಮಾದಿತ್ಯನಷ್ಟು ದೀರ್ಘಕಾಲ ಸಿಂಹವಿಷ್ಟರದ ಮೇಲೆ ಕುಳಿತು ಆಳಿದವರು ಇನ್ನೊಬ್ಬರಿಲ್ಲ; ಕ್ರಿ.ಶ. ೧೦೭೬ರಿಂದ ೧೧೨೫ ರ ವರೆಗೆ ಆತ ರಾಜಗದ್ದುಗೆಯಲ್ಲಿದ್ದನು. ಸಹಜವಾಗಿಯೇ ಆತನಿಗೆ ಅನೇಕಾನೇಕ ರಾಜ ಪ್ರಶಸ್ತಿಗಳಿದ್ದುವು. ವಾಡಿಕೆಯಾಗಿ ಬಳಕೆಯಾಗುವ ಪ್ರಶಸ್ತಿಮಾಲಿಕೆಯಲ್ಲಿ ಪೋಣಿಸಿಕೊಂಡು ಹೊಳೆಯುವ ಸ್ವೋಪಜ್ಞಕಾಂತಿಯ ಬಿರುದುಗಳೂ ಸೇರ್ಪಡೆಯಾಗಿದ್ದುವು. ಅವುಗಳಲ್ಲಿ ರಾಯಝು(ಜ)ಳಪ್ಪಂ, ರಾಯಜಗದಳ (೮) ಮತ್ತು **ರಾಯಜಗಜಮ್ಪ (ಮ್ಪ)** ಎಂಬುವು ಗಮನಾರ್ಹವಾಗಿವೆ.

ಈ ಮೂರು ಬಿರುದುಗಳಲ್ಲಿ ಅತ್ಯಂತ ಮಹತ್ವದ್ದು ಮತ್ತು ವೈಶಿಷ್ಟ್ಯ ಪೂರ್ಣವಾಗಿರುವುದು *ರಾಯಜಗಜಂಪ* ಎಂಬ ಪ್ರಶಸ್ತಿ. ಕಾಲಾನುಕ್ರಮಣಿಕೆಯಲ್ಲಿ ಅಳವಡಿಸಿ ಹೇಳುವುದಾದರೆ ಇದು ಮೊಟ್ಟ ಮೊದಲು ಕಣ್ಣಿಗೆ ಬೀಳುವುದು ಶಾಸನದಲ್ಲಿ ಅಲ್ಲ; ಕನ್ನಡ ಗದ್ಯ ಗ್ರಂಥದಲ್ಲಿ ಇದರ ಮೊದಲ ಪ್ರಯೋಗವಿದೆ: "ಇಂತೆನಿಸಿ ನೆಗಟ್ದಿ ಚಾವುಂಡರಾಜಂ ಮುನ್ನೆ ಮನ್ನೆಯಖೇಡದ ಕಾಳೆಗದೊಳಾಳ್ದನ ಬೆಸದಿಂ ವಜ್ಜಳದೇವನ **'ಜಗಝುಂಪಿ'**ಯೆಂಬ ಚಕ್ಕಳಿಕೆಯ ತಲೆಯ, ತಳಿರ ತಲೆಯನಾನೆ ಮೆಟ್ಟಿದಂತೆ, ತನ್ನಾನೆ ಪರಿಯೆ ಗೆಲ್ದ ಸಾಹಸದಿಂ"[೧೦] - ಎಂಬುದು ಕಲಿ-ಕವಿ ಚಾಮುಂಡರಾಯನ (೯೭೮) ಪ್ರಯೋಗ. ಈ ಉದ್ಧರಣದ ಉಲ್ಲೇಖ ತಿಳಿಸುವಂತೆ, 'ಜಗಝುಂಪಿ'ಯೆಂಬ ಗೌರವ ಸೂಚಕ ಪದವಿ ಮೊಟ್ಟ ಮೊದಲು ಅನ್ವಯವಾಗಿರುವುದು ವಜ್ಜಳದೇವನೆಂಬ ಸಾಮಂತನಿಗೆ. ಈ ವಜ್ಜಳ/ವಜ್ಜಳನು ಪಾತಾಳಮಲ್ಲನೆಂಬಾತನ ಅನುಜ (ತಮ್ಮ)ನೆಂದೂ ಈತ ಶಿಲಾಹಾರ ಮನೆತನಕ್ಕೆ ಸೇರಿದ ಮಾಂಡಲಿಕನೆಂದೂ ಒಂದು ನಂಬಿಕೆಯಿದೆ. ಇನ್ನೊಂದು ಅಭಿಪ್ರಾಯದ ಪ್ರಕಾರ ವಜ್ಜಳನು ಈಗಿನ ಆಂಧ್ರದ ಚಿತ್ತೂರು ಜಿಲ್ಲೆಯ ಪುಂಗನೂರು ನೆರೆಹೊರೆಯ 'ಪುಲಿನಾಡ'ನ್ನು ಆಳುತ್ತಿದ್ದು ರಾಷ್ಟ್ರಕೂಟರ ಮುಮ್ಮಡಿ ಕೃಷ್ಣ ಮಹಾರಾಜನ ಸಾಮಂತರಲ್ಲಿ ಒಬ್ಬನಾಗಿದ್ದ. ವಜ್ಜಳನು ಅವಿಧೇಯನಾಗಿ ತಾನೇ ಸ್ವತಂತ್ರ ರಾಜನೆಂದು ಹೇಳುತ್ತ ಆಳಲು ತೊಡಗಿದಾಗ ಬೂತುಗನ ಮಗ ಗಂಗಚೂಡಾಮಣಿ ಇಮ್ಮಡಿ ಮಾರಸಿಂಹನು ಯುದ್ಧದಲ್ಲಿ ಸದೆ ಬಡಿದನೆಂದು ಶ್ರವಣಬೆಳಗೊಳ ಶಾಸನ ಸಾರಿದೆ :'ಬಗೆಯಲಳುಂಬಮಪ್ಪ ಬಲದಲ್ಲನನೋಡಿಸಿ ಗೆಲ್ದ ಶೌರ್ಯ್ಯಮಂ ಪೊಗಟ್ಟೆನೊ ಧಾತ್ರಿಯೊಳ್ನೆಗಟ್ದಿ ವಜ್ಜಳನಂ ಬಿಡೆಯಟ್ಟಿದೇಟ್ಗೆಯಂ ಪೊಗಟ್ಟೆನೊ'[೧೧]. ಈ ಸಮರದಲ್ಲಿ ಮಾಂಡಲಿಕ ಮಾರಸಿಂಹನಿಗೆ ಸೇನಾನಿಯಾದ ಚಾಮುಂಡರಾಯನು ನೆರವಾಗಿದ್ದನೆಂದು ಇನ್ನೊಂದು ಶಾಸನ ನಮೂದಿಸಿದೆ.[೧೨]

ಚಾವುಂಡರಾಯಪುರಾಣ ರಚಿತವಾದದ್ದು ಕ್ರಿ.ಶ. ೯೭೮ರಲ್ಲಿ. ಚಾಮುಂಡರಾಯನು ವಜ್ಜಳನನ್ನು ಸೋಲಿಸಿದ್ದು 'ಮುನ್ನೆ ಮನ್ನೆಯಖೇಡದ ಕಾಳೆಗದೊಳ್'. ಆದರಿಂದ ವಜ್ಜಳದೇವನು

೯೭೮ಕ್ಕೂ ಮುಂಚೆ, ಪ್ರಾಯಃ ಕ್ರಿ.ಶ. ೯೬೦ರ ಸುಮಾರಿಗೆ ಜಗಝುಂಪಿಯೆಂಬ ಬಿರುದನ್ನು ಪಡೆದಿದ್ದನು. ಅಂತಹ ಬಿರುದೆಂಬ ತೊಗಲಿನ ತಲೆಯನ್ನು, ಅಂದರೆ ಜಗಝುಂಪಿ ಬಿರುದಾಂಕಿತ ವಜ್ವಳನ ತಲೆಯನ್ನು, (ಚಿಗುರಿನ ತುದಿಯನ್ನು ಆನೆ ಮೆಟ್ಟಿ ಒಸಗಿ ಹಾಕಿದಷ್ಟು ಲೀಲಾಜಾಲವಾಗಿ) ಚಾಮುಂಡರಾಜನು ತನ್ನ ಆನೆಯನ್ನು ಮೇಲೆ ಬಿಟ್ಟು ಸಾಹಸವನ್ನು ಮೆರೆದನು. ಈ ಕಾಳಗ ಮನ್ನೆಯಖೇಡ (ಮಾನ್ಯ ಖೇಟ)ದಲ್ಲಿ ನಡೆಯಿತು. ಗಂಗರು ಮತ್ತು ಅವರ ಎರೆಯರಾದ ರಾಷ್ಟ್ರಕೂಟರ ಕಾಲದಲ್ಲಿ ಈ ಪ್ರಶಸ್ತಿ ಪ್ರಚುರತೆ ಪಡೆದಿತ್ತು.

ಹೀಗೆ ಚಾಮುಂಡರಾಜನು ಅಕ್ಷರಲೋಕಕ್ಕೆ ದಾಟಿಸಿದ ಜಗಝುಂಪಿಯೆಂಬ ರಾಜಬಿರುದು ಅನಂತರದ ಕಾಲಘಟ್ಟಕ್ಕೆ ಸೇರಿದ ಹತ್ತಾರು ಶಾಸನಗಳಲ್ಲಿ ಬಳಕೆಗೊಂಡು ಹಿರಿಮೆಗಳಿಸಿದೆ. ಶಾಸನ ಪ್ರಪಂಚದಲ್ಲಿ ಇದು ಮೊದಲು ತಲೆದೋರಿದ್ದು ಕ್ರಿ.ಶ. ೧೦೧೯ರ ಅವಧಿಗೆ ಸೇರಿದ ಶಾಸನ ವೊಂದರಲ್ಲಿ : ಚೌವಣ ಸಹಸ್ರಬಾಹು **ರಾಯಜಗಝುಂಪಿ** ಕೀರ್ತಿವಿದ್ಯಾಧರಂ[೧೩]. ಇದರ ಅನಂತರದ (೧೦೨೬) ಪ್ರಯೋಗ ಕೂಡ ಒಬ್ಬ ಮಾಂಡಲಿಕನ ಬಿರುದಾಗಿಯೇ ಕಂಡು ಬಂದಿದೆ:

> ಸುವರ್ಣ್ನ ಗರುಡಧ್ವಜ ಸಹಜ ವಿದ್ಯಾಧರ
> ತ್ಯಾಗ **ಜಗಜ್ಝಮ್ಪಿ** ಮಣ್ಡಲಿಕ ಶಿಖಾಮಣಿ[೧೪]

ಮೇಲಿನ ಎರಡು ಶಾಸನ ಪ್ರಯೋಗಗಳೊಂದಿಗೆ ಉದಾಹರಿಸಿ ಚರ್ಚಿಸಬೇಕಾದ ಇನ್ನೊಂದು ಪ್ರಯೋಗ ಹೀಗಿದೆ :

> **ಅರಿರಾಯಜಗಝುಂಪ** ಮಾಳವರಾಯ[೧೫]

ಈ ಮೂರೂ ಶಾಸನ ಪ್ರಯೋಗಗಳು ಚಾಳುಕ್ಯರ ಆಳ್ವಿಕೆಯ ಅವಧಿಗೆ ಸೇರಿವೆ. ಆದರೆ ಇವಿಷ್ಟೂ ತ್ರಿಭುವನಮಲ್ಲ ವಿಕ್ರಮಾದಿತ್ಯನು ಚಾಳುಕ್ಯ ಸಿಂಹಾಸನ ಹತ್ತುವುದಕ್ಕಿಂತ ಮುಂಚಿನ ಅವಧಿಗೆ ಸಂಬಂಧಪಟ್ಟಿವೆ. ಮೊದಲಿನ ಎರಡು ಪ್ರಯೋಗಗಳು ಜಗದೇಕಮಲ್ಲ ಜಯಸಿಂಹನು (೧೦೧೬-೪೬) ರಾಜ್ಯಭಾರ ಮಾಡುತ್ತಿದ್ದಾಗ ರಚಿತವಾದ ಶಾಸನಗಳಿಗೆ ಸೇರಿವೆ, ಮತ್ತು ಮೂರನೆಯದು ಭುವನೈಕಮಲ್ಲದೇವ ಎರಡನೆಯ ಸೋಮೇಶ್ವರನು (೧೦೬೮-೭೬) ಆಳುತ್ತಿದ್ದಾಗ ಬರೆಯಲ್ಪಟ್ಟ ಶಾಸನ. ಮೇಲೆ ಕೊಟ್ಟಿರುವ ಮೂರೂ ಪ್ರಯೋಗಗಳು ಚಾಳುಕ್ಯರ ಕಾಲದ ಶಾಸನ ಗಳಲ್ಲಿ ಬಳಕೆಯಾಗಿದ್ದರೂ ಇವು ಯಾವುವೂ ಚಾಳುಕ್ಯ ಚಕ್ರವರ್ತಿಗಳಿಗೆ ಅನ್ವಯವಾಗಿಲ್ಲ. ರಾಯಜಗಝು(ಜ)ಂಪ(ಪಿ) ಎಂಬ ಪ್ರಶಸ್ತಿ ರಾಜಪ್ರಶಸ್ತಿಯೇ ಆಗಿದ್ದರೂ ಸಾಮಂತ - ಮಾಂಡಲಿಕ ರಾಜರಿಗೆ ಕೊಡಲಾಗಿದೆಯೇ ಹೊರತು ಇದನ್ನು ಚಕ್ರವರ್ತಿಗೆ ಬಳಸಲಾಗಿಲ್ಲ. ಚಾವುಂಡರಾಯನ ಕಾಲದಲ್ಲಿ ದೃಗ್ಗೋಚರವಾದ ಪ್ರಶಸ್ತಿ ಭುವನೈಕಮಲ್ಲನವರೆಗೆ ಇದೇ ಏರ್ಪಾಟು ಕಂಡುಬರುತ್ತದೆ.

ರಾಯಝುಳಪ್ಪ ಮತ್ತು **ರಾಯಜಗಝುಂಪ** ಎಂಬ ಬಿರುದುಗಳು ಚಕ್ರವರ್ತಿಗೂ ಅನ್ವಯಗೊಂಡು ಪದವಿಯೋನ್ನತಿ ಪಡೆದದ್ದು ತ್ರಿಭುವನಮಲ್ಲ ವಿಕ್ರಮಾದಿತ್ಯನ ಕಾಲದಲ್ಲಿ. ಈಗಾಗಲೆ ಸಂಪ್ರಬಂಧದ ಆರಂಭದಲ್ಲಿ ರಾಯಝುಳಪ್ಪ ಎಂಬ ಬಿರುದು ವಿಕ್ರಮಾದಿತ್ಯನಿಗೆ ಅನ್ವಯಿವಾಗಿರುವುದನ್ನು ಹೊಂಬುಜ ಮತ್ತು ಲಕ್ಷ್ಮೇಶ್ವರದ ಶಾಸನಗಳಲ್ಲಿ ಸಿಗುವ ಉಲ್ಲೇಖಗಳಿಂದ ತಿಳಿದಿದ್ದಾಗಿದೆ. ಈಗ **ರಾಯಜಗಝುಮ್ಪ** ಎಂಬ ಪ್ರಶಸ್ತಿಯ ಐತಿಹಾಸಿಕ ಮಹತ್ವದ ಪ್ರಯೋಗಗಳನ್ನು ಪರಿಶೀಲಿಸಬಹುದು.

೧. ಮಹಾಶಕ್ತಿ ಪ್ರಭಾವಂ ತ್ಯಾಗ ಜಗಝುಂಪಿ ಝುಂಪಳಾಚಾರ್ಯ [೧೬]

೨. ತ್ಯಾಗ ಜಗಝುಂಪನರ್ಧಾಂಗಿ.. ಮೈಳಲದೇವಿಯರ್[೧೭]

೩. ಚಟ್ಟ ಭೂಪಂಗೆ ನೆಟ್ಟನೆ/ಕೊಟ್ಟಂ ಧರೆಮೆಚ್ಚಿನ ಜಗಝುಂಪಂ[೧೮]

೪. ತ್ಯಾಗ ಜಗಝುಂಪ ಝುಂಪಳಾಚಾರ್ಯ್ಯಂ.[೧೯]

೫. ಚಾಗ ಜಗಝುಂಪಳಾಚಾರ್ಯ್ಯ ಕೀರ್ತ್ತಿ ಮಾರ್ತ್ತಣ್ಡ ಮೂರ್ತಿ[೨೦]

೬. ಅರಿರಾಯ ಜಗಝುಂಪ[೨೧]

೭. ವೀರರಿಪುರಾಯಜಗಝುಂಪ[೨೨]

೮. ಅರಿರಾಯ ಜಗಜ್ಜಂಪ[೨೩]

೯. ಅರಿರಾಯ ಜಗಝುಂಪ[೨೪]

೧೦. ಯಾದವ ಕುಳಕಮಳ ಅರಿರಾಯ ಜಗಜ್ಝಂಪಿ
ಮಾಳವರಾಯ ಮದನ ತ್ರಿಣೇತ್ರ[೨೫]

೧೧. ಅರಿರಾಯ ಜಗಝುಂಪ ಕಂಪಣಾಚಾರ್ಯ್ಯ
ಶ್ರೀ ಯಾದವ ನಾರಾಯಣ ಪ್ರವುಢ ಚಕ್ರವರ್ತ್ತಿ
ಶ್ರೀ ವೀರ ರಾಮಚಂದ್ರದೇವ[೨೬]

ಶಾಸನಗಳನ್ನು ಜಾಲಾಡಿ ತಡಕಿ ಹುಡುಕಿದರೆ ಈ ಪ್ರಶಸ್ತಿಯನ್ನು ಬಳಸಿರುವ ಇನ್ನೂ ಒಂದೆರಡು ಶಾಸನಗಳು ಸಿಕ್ಕಾವು. ಇಲ್ಲೆಲ್ಲ ಉಪಯೋಗಿಸಲಾದ ಪ್ರಶಸ್ತಿ ಮಾಮೂಲಿ ಸವಕಳಿ ಬಿರುದಲ್ಲ ಎಂಬುದು ಮೊದಲ ಓದಿಗೇನೆ ತಿಳಿದುಬರುತ್ತದೆ. ಉಪಲಬ್ಧ ಪ್ರಯೋಗಗಳನ್ನು ಕಾಲಾನುಕ್ರಮಣಿಕೆಗೆ ಅಳವಡಿಸಿ ಇಟ್ಟಿರುವುದರಿಂದ ಒಂದೊಂದಾಗಿ ಹೆಕ್ಕಿ ಬಿಡಿಸಿನೋಡುವುದು ಕಷ್ಟವೇನಲ್ಲ. ಆತ್ಯಂತಿಕವಾದ ಪರಿಭಾವನೆಯಿಂದ ಪ್ರತೀತವಾಗುವ ಪ್ರಕಾರ ಇದೊಂದು ವಿಶಿಷ್ಟ ಪ್ರಭಾವಳಿ ಇರುವ ರಾಜಪ್ರಶಸ್ತಿ. ಸಾಮಂತರಾಜರಿಂದ ಹಿಡಿದು ಸಾಮ್ರಾಟನವರೆಗೆ ಹೊಂದಿಕೊಳ್ಳುತ್ತ ಬಂದಿರುವ 'ರಾಯ/ತ್ಯಾಗ ಜಗಝುಂಪ' ಬಿರುದು ಗರ್ಭೀಕರಿಸಿರುವ ರಾಜಕೀಯ ಹಾಗೂ ಚಾರಿತ್ರಿಕ ಸೂಕ್ಷ್ಮಗಳ ಒಂದು ಹಕ್ಕಿ ನೋಟ **'ಸಾಂತರರು : ಒಂದು ಅಧ್ಯಯನ'** ಎಂಬ ಸಂಶೋಧನ ಗ್ರಂಥದಲ್ಲಿದೆ.[೨೭] ಆದರೆ ಅಲ್ಲಿ ಈ ಪ್ರಶಸ್ತಿಯ ಅರ್ಥ ವ್ಯಾಪ್ತಿ ಮತ್ತು ಪ್ರಯೋಗ ಬಹುಳತೆ ನಿರೂಪಿತವಾಗಿಲ್ಲ.

ಜಗಝುಂಪ ಎಂಬ ಸಮಾಸದಲ್ಲಿ ಜಗತ್+ಝುಂಪ ಎಂಬ ಎರಡು ಸ್ವತಂತ್ರ ಶಬ್ದಗಳಿವೆ. ಇವೆರಡೂ ಸಂಸ್ಕೃತ ಶಬ್ದಗಳು. ಭುವನಂ, ವಿಷ್ಟಪಂ, ಲೋಕಃ, ಜಗತ್ - ಈ ನಾಲ್ಕು ಜಗದ ಪೆಸರ್ ಎಂಬುದಾಗಿ ನಾಗವರ್ಮನು (೧೦೪೨) ಅಭಿಧಾನ ರತ್ನಮಾಲಾ ಕರ್ಣಾಟ ಟೀಕೆಯಲ್ಲಿ (೨೨-೧೩೩) ತಿಳಿಸಿದ್ದಾನೆ.[೨೮] ಜಗ(ತ್) ಎಂಬುದು ಬಹುರೂಢಿಯ ಮಾತು. ಆದರೆ ಝುಂಪ ಎಂಬುದು ಮಾತ್ರ ಅಪರೂಪದ ಶಬ್ದ. ಸಂಸ್ಕೃತ ಮೂಲದ ಈ ಝುಂಪ, ಝುಂಪಾ ಎಂಬ ಶಬ್ದದ ಅರ್ಥ ಹಾರುವುದು, ನೆಗೆತ, ಕುಪ್ಪಳಿಸುವಿಕೆ. ಈ ಕಾರಣದಿಂದಾಗಿ ಕೋತಿ/ಮಂಗನಿಗೆ ಝುಂಪಾಕ, ಝುಂಪಾರು, ಝುಂಪೀ(ನ್) ಎಂದೂ ಕರೆಯಲಾಗಿದೆ. ಸಂಸ್ಕೃತ ಇಂಡೊ ಯೂರೋಪಿಯನ್ ಭಾಷಾ ಪರಿವಾರಕ್ಕೆ ಸೇರಿದ ಇಂಡೊ-ಆರ್ಯನ್ ಶಾಖೆಯ ಒಂದು ಭಾಷೆ. ಇದೇ ಇಂಡೊ-ಯೂರೋಪಿಯನ್ ಭಾಷಾಕುಟುಂಬದ ಇನ್ನೊಂದು ಶಾಖೆ ಇಂಡೊ-ಜರ್ಮನಿಕ್;

ಇಂಗ್ಲಿಷ್ ಭಾಷೆ ಈ ಶಾಖೆಗೆ ಸೇರಿದ್ದು. ಒಂದು ದೊಡ್ಡ ಪರಿವಾರಕ್ಕೆ ಸೇರಿದ ಭಾಷೆಗಳಾಗಿರುವುದರಿಂದ ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳ ನೂರಾರು ಶಬ್ದಗಳು ಸಮಾನ ಮೂಲದಿಂದ ಬಂದಿವೆ.[೨೯] ಅದರಂತೆ ಸಂಸ್ಕೃತದ ಝುಂಪ ಶಬ್ದದ ಜ್ಞಾತಿ ರೂಪವೇ ಇಂಗ್ಲಿಷಿನಲ್ಲಿರುವ Jump. ಇಂಗ್ಲಿಷಿನಲ್ಲಿ Jump ಎಂಬ ಶಬ್ದ ಪಡೆದಿರುವ ಪ್ರಸಾರ ಬಾಹುಳ್ಯ ಸಂಸ್ಕೃತದಲ್ಲಿ ಝುಂಪ ಶಬ್ದ ಪಡೆದಿಲ್ಲ. ಕನ್ನಡದಲ್ಲೂ ಅಷ್ಟೆ. ಕೇಶಿರಾಜನೇನೊ ಶಬ್ದಮಣಿದರ್ಪಣದಲ್ಲಿ ಸೂತ್ರ ೨೫೫ರ ಪ್ರಯೋಗವಾಗಿ ಝಕಾರಕ್ಕೆ ಜಕಾರಂ : ಝುಂಪ-ಜಂಪ ಎಂದು ಕೊಟ್ಟಿದ್ದಾನೆ.

ಸ್ವತಂತ್ರವಾಗಿ 'ಝುಂಪ'ಶಬ್ದ ಬಳಕೆಗೆ ಬರದಿದ್ದರೂ ರಾಜಪ್ರಶಸ್ತಿಯ ರೂಪದಲ್ಲಿ ಪ್ರಚುರಗೊಂಡಿದೆ. 'ಜಗ ಝುಂಪ'ನೆಂದರೆ ಜಗದೊಡೆಯ, ಜಗದೇರೆಯ, ಲೋಕ ವಿಖ್ಯಾತ ಎಂದರ್ಥ. ಅಂದರೆ 'ತನ್ನ ಬಾಹುಬಲದಿಂದ ಲೋಕವನ್ನು ಗೆದ್ದವನು' ಯಾರೊ ಆತ ಜಗಝುಂಪ; ಜಗಝುಂಪಿ ಎಂದೂ ಉಂಟು. ವಾಚ್ಯಾರ್ಥ 'ಜಗತ್ತನ್ನು ಹಾರುವವನು' ಎಂದಿದ್ದರೂ ಅದರ ಧ್ವನ್ಯಾರ್ಥ 'ಜಗತ್ತನ್ನು ಆಳುವವನು' ಎಂದು. ಇದು 'ಜಗದ್ದಳ' ಎಂಬ ಬಿರುದು ಇದ್ದಂತೆ.[೩೦] 'ಜಗದ್ದಳ' ಎಂದರೆ 'ಜಗತ್ತನ್ನು ಸೀಳುವವನು' ಎಂಬುದಾಗಿ ಶಬ್ದಾರ್ಥವಿದ್ದರೂ ಇಲ್ಲಿ ಸೂಚಿತವಾದ ಅರ್ಥ 'ಜಗತ್ತನ್ನು ಆಳುವವನು' ಎಂದು. ಅದೇ ರೀತಿಯಲ್ಲಿ, ಶಬ್ದಾರ್ಥ ನಿರ್ಣಯ ಜಿಜ್ಞಾಸೆಯನ್ನು ಅನುಲಕ್ಷಿಸಿ, **'ರಾಯ-ಜಗ-ಜಂಪ'**ಪ್ರಶಸ್ತಿಯ ಅರ್ಥೈಸುವಿಕೆ '(ತನ್ನ ಶೌರ್ಯದಿಂದ) ರಾಜನು **ಲೋಕವನ್ನು-ಗೆದ್ದವನು'** ಎಂದಾಗುತ್ತದೆ. ತನ್ನ ಹಗೆಗಳನ್ನು ಬಗ್ಗು ಬಡಿದು ಜಗದ್ವಿಖ್ಯಾತನಾದವನು ಯಾರೊ ಆತನೇ ಜಗಝುಂಪ. ಅನ್ವಯಿಕವಾಗಿ, ಶಾಸನಗಳ ಸರಣಿಯನ್ನು ಪರಿಶೀಲಿಸಿ ಇದರ ಆಯಾಮವನ್ನೂ ನಿರ್ಧರಿಸಬಹುದು.

ಕರ್ನಾಟಕದ ಚರಿತ್ರೆಯ ಹಾಸಿನಲ್ಲಿ **ರಾಯಜಗಜಂಪವೆಂಬ** ವೈಶಿಷ್ಟ್ಯಪೂರ್ಣ ರಾಜಪ್ರಶಸ್ತಿ ಎಷ್ಟು ಕಾಲಮಾನದವರೆಗೆ ಪ್ರಸರಗೊಂಡಿದೆ ಎಂದು ನೋಡಿದಾಗ, ಒಟ್ಟು ಸುಮಾರು ೨೫೦ ವರ್ಷಗಳ ವರೆಗೆ ಬಳಕೆಯಾಗಿರುವಂತೆ ಕಾಣುತ್ತದೆ. ಅದರಲ್ಲಿಯೂ ಇದರ ಪ್ರಸಾರಾಧಿಕ್ಯ ಚಾಳುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನಿಗೆ ಹೊಂದಿಕೊಂಡು ಬಂದಿದೆ. ಈತನಿಗೆ ಇದ್ದ ಹಲವಾರು ಪ್ರಶಸ್ತಿಗಳ ಸರಮಾಲೆಯಲ್ಲಿ ಪರಂಪರೆಯಿಂದ ಬಂದವುಗಳೂ ಹೆಣೆದುಕೊಂಡಿದ್ದುವು. ಆ ಬಿರುದು ಬಾವಲಿಗಳಲ್ಲಿ ಕೆಲವು ರಾಜಕೀಯ ಕ್ಲೀಷೆಯಾಗಿ ಮೇಲಿಂದ ಮೇಲೆ ಚರ್ವಿತ ಚರ್ವಣಗೊಳ್ಳುತ್ತ ಬಳಕೆಯಾಗುವುದುಂಟು. ನೀತಿ, ಧರ್ಮ, ಪುರಾಣ, ಶೀಲಾದಿ ಸದ್ಗುಣ ಸಾಹಸ ಸಿಂಚಿತ ಪ್ರಶಸ್ತಿಗಳು ಹಾಗೆ ಆವರ್ತನಗೊಳ್ಳುವುದು ಅಪರೂಪವೇನಲ್ಲ. ಆದರೆ ಜಗಝುಂಪ ಎಂಬುದು ಸುಲಭ ಬಳಕೆಗೆ ಸಿಗುವ ಸರಳ ಔಪಚಾರಿಕ ಪ್ರಯೋಗವಲ್ಲ. ಇತಿಹಾಸದ ಘಾಟು ಇರುವ ಈ ಪ್ರಶಸ್ತಿಯ ಪರಿಪ್ರೇಕ್ಷ್ಯವನ್ನು ಪರಿಭಾವಿಸಿದರೆ ಇದು ತ್ರಿಭುವನಮಲ್ಲ ವಿಕ್ರಮಾದಿತ್ಯನ ಚರಿತೆಯೊಂದಿಗೆ ಹಾಸುಹೊಕ್ಕಾಗಿ ಹೆಣೆದುಕೊಂಡಿರುವುದು ನಿಚ್ಚಳವಾಗುತ್ತದೆ. ಗಂಗರ ಹಾಗೂ ರಾಷ್ಟ್ರಕೂಟರ ಆಳ್ವಿಕೆಯ ಕಡೆಕಡೆಯ ಹಂತದಲ್ಲಿ ತಲೆಯೆತ್ತಿ ಕಾಣಿಸಿಕೊಂಡ ಜಗಝುಂಪ ವೆಂಬ ಮನ್ನಣೆಯ ಮಾತು ಕಲ್ಯಾಣ ಚಾಳುಕ್ಯರ ಆಡಳಿತದ ಅವಧಿಯಲ್ಲಿ ವಿಜೃಂಭಿಸಿತು. ಕಲಚುರಿ ಮತ್ತು ಹೊಯ್ಸಳರ ಕಾಲದಲ್ಲಿಯೂ ಚಲಾವಣೆಯಲ್ಲಿದ್ದು ಹದಿಮೂರನೆಯ ಶತಮಾನದ ಅಂತ್ಯದ ವೇಳೆಗೆ ಚರಿತ್ರೆಯಲ್ಲಿ ಇದು ವಿಲೀನವಾಯಿತು.

ಉಪಲಬ್ಧ ಹದಿನಾಲ್ಕು ಪ್ರಯೋಗಗಳಲ್ಲಿ ಜಗಝಂಪ ಎಂಬ ಬಿರುದು, ಮೊದಲ ಮೂರನ್ನು ಮತ್ತು ಕಡೆಯ ಮೂರನ್ನು ಮತ್ತು ೧೧೨೫ರ ಭಾವಿಹಾಳ ಪ್ರಯೋಗವನ್ನು ಬಿಟ್ಟರೆ, ಉಳಿದ ಅಯ್ದು ವಿಕ್ರಮಾದಿತ್ಯನಿಗೆ ಅನ್ವಯವಾಗಿ ಬಂದಿವೆ ಎಂಬುದು ವಿಶೇಷ ಗಮನಿಕೆಗೆ ತಕ್ಕ ಮಾಹಿತಿ. ಈ ಅಂಶ ಆತನ ಶೌರ್ಯಕ್ಕೂ ಮಿಗಿಲಾಗಿ ಜನಮನ್ನಣೆಯನ್ನೂ ಬಿಂಬಿಸುವ ರಾಜಕೀಯ ಮಹತ್ವದ್ದು. ಲಭ್ಯ ಅಯ್ದು ಪ್ರಯೋಗಗಳನ್ನು ಪ್ರಾಯೋಗಿಕ ವಿಮರ್ಶೆಗೆ ಒಳಪಡಿಸಿ ಸುಲಿದು ನೋಡಿದರೆ, 'ತ್ಯಾಗ/ಚಾಗ ಜಗಝಂಪ' ಎಂದೇ ಬಂದಿವೆ ಎಂಬುದನ್ನು ಪರಿಗಣಿಸಿದರೆ, ಈ ಸಾತತ್ಯವು ಆತನ ಔದಾರ್ಯವನ್ನು ಒತ್ತಿ ಹೇಳುವ ಪ್ರಶಸ್ತಿಯಾಗಿರುವುದನ್ನು ಸ್ಪಷ್ಟಪಡಿಸುತ್ತದೆ. ಈ ಪ್ರಶಸ್ತಿ ಪ್ರಯೋಗವಾಗಿರುವ ಕಾಲಮಾನ ಅವಧಿಯನ್ನು ಪರಾಮರ್ಶಿಸಿದಾಗ ಇನ್ನೊಂದು ಸಂಗತಿ ಹೊರಬರುತ್ತದೆ. ತ್ಯಾಗ ಜಗಜಂಪವೆಂಬ ಈ ಅಯ್ದೂ ಪ್ರಯೋಗಗಳಿರುವ ಶಾಸನಗಳ ತೇದಿ ೧೧೨೪-೧೧೨೫ ಆಗಿದೆ. ವಾಸ್ತವವಾಗಿ ಇದು ವಿಕ್ರಮಾದಿತ್ಯನ ನೀಳಾಳಿಕೆಯ ಕಡೆಯ ಎರಡು ವರ್ಷಗಳ ಇಳಿಗಾಲದ ಅವಧಿ[೧೧]. ಸುಮಾರು ೯೫ ವರ್ಷಗಳ ವಯೋವೃದ್ಧನಾಗಿದ್ದು ಸಾವಿನ ಎಣಿಕೆಯಲ್ಲಿದ್ದ ವಿಕ್ರಮಾದಿತ್ಯನು ಈ ಅವಧಿಯಲ್ಲಿ 'ಅರಿರಾಯ ಜಗಝಂಪ' ಆಗಿರುವುದು ಅಸಾಧ್ಯವಾಗಿತ್ತು. ಅದರಿಂದ ಆತನನ್ನು 'ತ್ಯಾಗ ಜಗಝಂಪ' ಎಂಬ ಬಿರುದಿನೊಂದಿಗೆ ಚಿತ್ರಿಸಿರುವುದು ಸಹಜವಾಗಿದೆ, ಸ್ವಭಾವೋಕ್ತಿಯಾಗಿ ಪ್ರಯೋಗವಾಗಿದೆ. ದೈವದ ಅನುಗ್ರಹಾಕಾಂಕ್ಷೆಯಿಂದ, ಪ್ರಜೆಗಳ ಅನುರಾಗ ಬಯಕೆಯಿಂದ ಈ ಮುತ್ತರಾಜನು ದಾನ ಧರ್ಮಗಳಲ್ಲಿ ನಿರತನಾಗಿದ್ದ ಕಾಲದಲ್ಲಿ ತ್ಯಾಗ ಜಗಝಂಪನೆನಿಸಿದನೆಂಬ ನಿಜದನಿಯನ್ನು ನಿನದಿಸುತ್ತಿದೆ.

ಇದಕ್ಕೆ ಪೂರಕವಾಗಿ ದಾಖಲಾಗಿರುವ ಕಾವ್ಯ ಪ್ರಯೋಗವೂ ಬಂದಿದೆ. ವಿಕ್ರಮಾದಿತ್ಯನ ಸಾಮಂತರಾದ ಕೊಲ್ಲಾಪುರ ಶಿಲಾಹಾರರ ರಾಜನಾದ ಗಂಡರಾದಿತ್ಯನ ಮಗ ವಿಜಯಾದಿತ್ಯನ ಮಂತ್ರಿ ಲಕ್ಷ್ಮನ ಆಶ್ರಯದಲ್ಲಿ ಕ್ರಿ.ಶ. ೧೧೩೦ರಲ್ಲಿ ನೇಮಿನಾಥ ಪುರಾಣವೆಂಬ ಚಂಪೂಕಾವ್ಯವನ್ನು ಕರ್ಣಪಾರ್ಯಕವಿ ರಚಿಸಿದ್ದಾನೆ. ಅದರಲ್ಲಿ ವಿಕ್ರಮಾದಿತ್ಯನನ್ನು ಒಂದು ದಾನದ ಪ್ರಸಂಗದಲ್ಲಿ ಉಲ್ಲೇಖಿಸುತ್ತ, 'ಮಹಾತೇಜಸ್ವಿಯೂ ಸಮಸ್ತ ಭೂಮಂಡಲದ ಬಡತನವನ್ನು ವಜ್ರದಂತೆ ಕತ್ತರಿಸಿ ಹಾಕಿರುವವನೂ ಆದ ಮಹಾತ್ಮ ವಿಕ್ರಮಾಂಕ' ಎಂದು ವಿಶೇಷಣವಿತ್ತು ವರ್ಣನೆ ಮಾಡಲಾಗಿದೆ.[೩೨]

ಇದುವರೆಗಿನ ಸಮೀಕ್ಷೆ ಸಾಬೀತು ಪಡಿಸುವಂತೆ ಜಗಝಂಪ ಎಂಬ ರಾಜ ಪ್ರಶಸ್ತಿ ವಿಶಿಷ್ಟವಾದದ್ದು. ಈ ಪ್ರಶಸ್ತಿಯಲ್ಲಿ ಇತಿಹಾಸದ ಛಾಟು ಇರುವಂತೆ ವಾಸ್ತವತೆಯ ಸ್ಪರ್ಶವೂ ಇರುವುದನ್ನು ಅಂದಿನ ಸಂದರ್ಭಗಳ ಹಿನ್ನೆಲೆಯಲ್ಲಿ ಚೆನ್ನಾಗಿ ಮನಗಾಣಬಹುದು. ಮುಖ್ಯವಾಗಿ ಇದರ ಇತಿಹಾಸ ರೋಚಕವಾಗಿದೆ.

ಅಡಿ ಟಿಪ್ಪಣಿಗಳು

೧. ಎ.ಕ., ಸಂಪುಟ ೮ (ರೈಸ್) ನಗರ ೩೭, ಕ್ರಿ.ಶ. ೧೧೪೭, ಹೊಂಬುಜ (ಶಿವಮೊಗ್ಗ ಜಿಲ್ಲೆ, ಹೊಸನಗರ ತಾ॥)

೨. ನಾಗರಾಜಯ್ಯ, ಹಂಪ : ಸಾಂತರರು -ಒಂದು ಅಧ್ಯಯನ : ಹೊಂಬುಜ : ೧೯೯೭ : ೭೬

೩. ಎ.ಕ. ೮ (ರೈಸ್) ಪು. ೧೪೧

೪. ನಾಗರಾಜಯ್ಯ, ಹಂಪ : ೧೯೯೭ : ೭೫-೭೭

೫. ಸೌ.ಇ.ಇ., ಸಂಪುಟ ೨೦, ಸಂಖ್ಯೆ ೫೫, ಕ್ರಿ.ಶ. ೧೦೮೨, ಲಕ್ಷ್ಮೇಶ್ವರ, ಪು. ೬೭.
೬. ನಾಗರಾಜಯ್ಯ, ಹಂಪ : ೧೯೯೭ : ೭೭.
೭. ಹನುಮಾಕ್ಷಿ ಗೋಗಿ (ಸಂ) : ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ಹುಬ್ಬಳ್ಳಿ, ೧೯೯೬ : ಆಳಂದ ಶಾಸನ ಸಂಖ್ಯೆ೧, ಕ್ರಿ.ಶ. ೧೦೮೨, ಪು. ೩೭ : ಎಇಂ. ಸಂಪುಟ ೨೮, ಸಂಖ್ಯೆ ೩೫.
೮. ಅದೇ : ಹುಣಸಿ ಹಡಗಲಿ ೩೮, ಕ್ರಿ.ಶ. ೧೧೯೯, ಪು. ೨೨೯, ಸಾಲು : ೧೧.
೯. ಅದೇ : ಯಡ್ರಾಮಿ ಶಾಸನ ೫೧, ಕ್ರಿ.ಶ. ೧೧೯೫, ಪು. ೩೪೫.
೧೦. ಚಾವುಂಡರಾಯಪುರಾಣಂ (ಸಂ), ಕಮಲಾಹಂಪನಾ, ಶೇಷಗಿರಿ, ೧೯೮೩, ಪು. ೪೩೯.
೧೧. ಎಕ-೨(ಪ) ಶಾಸನ ಸಂಖ್ಯೆ ೬೪ (೫೯), ಕ್ರಿ.ಶ. ೯೭೪, ಪು. ೨೨, ಸಾಲು: ೮೩-೮೪.
೧೨. ಅದೇ : ಶಾಸನ ಸಂಖ್ಯೆ ೩೮೮ (೨೮೧), ಕ್ರಿ.ಶ. ೧೦ನೆಯ ಶತಮಾನ, ಪು. ೨೪೭.
೧೩. ಇಂಡಿಯನ್ ಆ್ಯಂಟಿಕ್ವೆರಿ, ಸಂಪುಟ ೫, ಸಂಖ್ಯೆ ೧೫, ಕ್ರಿ.ಶ. ೧೦೧೯.
೧೪. ಎ.ಇಂ. ಸಂಪುಟ ೧೧, ಸಂಖ್ಯೆ ೨೬೩, ಕ್ರಿ.ಶ. ೧೦೨೬, ಸಾಲು : ೧೮.
೧೫. ಎ.ಕ. ಸಂಪುಟ ೮ (ರೈಸ್) ಸೊರಬ ೨೭೬. ಕ್ರಿ.ಶ. ೧೦೭೦, ಸಾಲು : ೬೦.
೧೬. ಎ.ಇಂ. ಸಂಪುಟ ೧೭, ಸಂಖ್ಯೆ ೧೧೮/೯ ಕ್ರಿ.ಶ. ೧೧೨೪.
೧೭. ಎ.ಇಂ, ಸಂಪುಟ ೧೩, ಸಂಖ್ಯೆ ೨೭೦/೮, ಕ್ರಿ.ಶ. ೧೧೨೫.
೧೮. ಎ.ಇಂ., ಸಂಪುಟ ೧೩, ಸಂಖ್ಯೆ ೩೦೨, ಕ್ರಿ.ಶ. ೧೧೨೫.
೧೯. ಸೌಇಇ, ಸಂಪುಟ ೧೫, ಸಂಖ್ಯೆ ೯, ಕ್ರಿ.ಶ. ೧೧೨೫, ಭಾವಿಹಾಳ (ಧಾರವಾಡ ಜಿಲ್ಲೆ ತಾ||) ಈ ಬಿರುದು ವಿಕ್ಕಿಯ ಸಾಮಂತ ಜಯಕೇಸಿದೇವನಿಗಿತ್ತು. ಪು. ೮, ಸಾಲು : ೧೦.
೨೦. ಸೌ.ಇ.ಇ. ೧೧-೧, ಸಂಖ್ಯೆ ೧೭೭, ಕ್ರಿ.ಶ. ೧೧೨೫, ಮುಗದ (ಧಾರವಾಡ ಜಿಲ್ಲೆ/ತಾ) ಪು. ೨೩೨.
೨೧. ಕೊಲ್ಹಾಪುರ ಶಾಸನ ಸಂಖ್ಯೆ ೧೬, ಕ್ರಿ.ಶ. ೧೧೮೯, ಜಿಲ್ಲೆ / ತಾ|| ಪು. ೨೩೨ ಸಾಲು : ೩೬.
೨೨. ಸೌಇಇ. ಸಂಪುಟ ೨೦ ಸಂಖ್ಯೆ ೨೦೫, ಕ್ರಿ.ಶ. ೧೨೪೭, ಪು. ೨೫೭, ಸಾಲು : ೫.
೨೩. ಎಇಂ. ಸುಪಂಟ ೧೯, ಸಂಖ್ಯೆ ೨೩, ಕ್ರಿ.ಶ. ೧೨೫೦, ಸಾಲು : ೧೯.
೨೪. ಸೌಇಇ, ಸಂಪುಟ ೨೦, ಸಂಖ್ಯೆ ೨೧೩, ಅತೇದಿಶಾಸನ, ಪು. ೨೬೪.
೨೫. ಎಇಂ, ಸಂಪುಟ ೨೧, ಸಂಖ್ಯೆ ೧೨, ಕ್ರಿ.ಶ. ೧೨೬೦, ಸಾಲು : ೨೦.
೨೬. ಎಕ, ಸಂಪುಟ ೭-೧ (ರೈಸ್) ಹೊನ್ನಾಳಿ ಸಂಖ್ಯೆ ೧೭, ಕ್ರಿ.ಶ. ೧೨೮೬ ಬಲ್ಲೇಶ್ವರ ಗ್ರಾಮ (ಶಿವಮೊಗ್ಗ ಜಿಲ್ಲೆ, ಹೊನ್ನಾಳಿ ತಾ) ಪು. ೩೭೪-೭೫.
೨೭. ನಾಗರಾಜಯ್ಯ, ಹಂಪ : ಸಾಂತರರು - ಒಂದು ಅಧ್ಯಯನ : ೧೯೯೭ : ಪು. ೭೪-೭೭.
೨೮. ಅಭಿಧಾನ ರತ್ನಮಾಲಾ ಕರ್ಣಾಟ ಟೀಕೆ (ನಾಗವರ್ಮಕವಿ ವಿರಚಿತ) : (ಸಂ) ಎ. ವೆಂಕಟರಾವ್, ಶೇಷ ಅಯ್ಯಂಗಾರ್, ಮದರಾಸು, ೧೯೪೦.
೨೯. ನಾಗರಾಜಯ್ಯ, ಹಂಪ : ಭಾಷಾ ವಿಜ್ಞಾನ, ಮೈಸೂರು, ೧೯೬೮.
೩೦. ಸೌಇಇ, ಸಂಪುಟ ೧೧-೨, ಸಂಖ್ಯೆ ೧೫೫, ಕ್ರಿ.ಶ. ೧೧೦೪ : ಮತ್ತು ಜರ್ನಲ್ ಆಫ್ ದಿ ಬಾಂಬೆ ಬ್ರಾಂಚ್ ಆಫ್ ದಿ ರಾಯಲ್ ಏಷಿಯಾಟಿಕ್ ಸೊಸೈಟಿ, ಸಂಪುಟ ೧೦, ಕ್ರಿ.ಶ. ೧೨೦೫, ಪುಟ. ೨೨೪.
೩೧. Nagarajaiah, Hampa : *Vikramaditya VI and Jainism*, Tumkur, 2000.
೩೨. ಕರ್ಣಪಾರ್ಯ ವಿರಚಿತ ನೇಮಿನಾಥ ಪುರಾಣಂ; (ಸಂ) ಹಂಪ. ನಾಗರಾಜಯ್ಯ ಮತ್ತು ಆರ್. ವಿ. ಕುಲಕರ್ಣಿ, ಬೆಂಗಳೂರು, ೧೯೮೧ (ಆಶ್ವಾಸ - ೪, ಪದ್ಯ ೭೯) ಪುಟ. ೨೦೩.

೧೪

ಮೈಳಾಪತೀರ್ಥ : ಶಾಸನಗಳ ಆಧಾರ

ಇಂದಿನ ಬೆಳಗಾವಿಗೆ ಪ್ರಾಚೀನ ಹೆಸರು ವೇ(ಳು)ಣು ಗ್ರಾಮ. ಈ ಜಿಲ್ಲೆಯ ಸವದತ್ತಿ (ಸೌಂದತ್ತಿ, ಸೌದತ್ತಿ, ಸಾವನ್ಧತ್ತಿ) ಎಂಬುದರ ಸಂಸ್ಕೃತಿಕರಣಗೊಳಿಸಿದ ರೂಪವೆ ಸುಗಂಧವರ್ತಿ. ಸೌದತ್ತಿಗೆ ಹತ್ತೊಂಬತ್ತನೆಯ ಶತಮಾನದವರೆಗೆ ಪರಸಗಡ ತಾಲ್ಲೂಕಾ ಎಂದು ಕರೆಯಲಾಗಿದೆ. ಬೆಳಗಾವಿ-ಸವದತ್ತಿಯ ಸುತ್ತಣ ಪ್ರದೇಶವನ್ನು ಹಿಂದೆ ಪ್ರಸಿದ್ಧ ರಟ್ಟಕುಲ ಪ್ರಧಾನರು ಆಳಿದರು. ಸುಮಾರು ೩೫೦ ವರ್ಷಗಳಷ್ಟು ದೀರ್ಘಕಾಲ ಇದು ರಟ್ಟರ ಆಳ್ವಿಕೆಯಿತ್ತು. ಅವರ ಕಾಲದ ಸಂಸ್ಕೃತ ಮತ್ತು ಕನ್ನಡ ಶಾಸನಗಳನ್ನು ಜೆ. ಎಫ್. ಫ್ಲೀಟ್ ಪ್ರಕಟಿಸಿದ್ದಾರೆ (೧೮೭೪).

ಸೌಂದತ್ತಿ - ಸೌದತ್ತಿ ಎಂಬ ಶಬ್ದರೂಪದ ನಿಷ್ಪತ್ತಿ ಮತ್ತು ವಿಕಾಸ ಕುರಿತ ಚರ್ಚೆ ತೃಪ್ತಿಕರವಾಗಿ ನಡೆದಿಲ್ಲ. ಈಗ ಜನರೂಢಿಯಲ್ಲಿ ವಾಡಿಕೆಯಾಗಿರುವಂತೆ ಸೌಂದತ್ತಿ-ಸೌದತ್ತಿ-ಸವದತ್ತಿ ಎಂಬುದು ಸಂಸ್ಕೃತ ಸುಗಂಧವರ್ತಿಯಿಂದ ಬಂದ ತದ್ಭವ ರೂಪಗಳಲ್ಲ. ವಾಸ್ತವವು ಇದರ ತದ್ವಿರುದ್ಧವಾಗಿ ನಡೆದಿರುವ ಭಾಷಿಕ ಪ್ರಕ್ರಿಯೆಯಾಗಿದೆ. ಇವೆಲ್ಲದಕ್ಕೂ ಮೂಲಶಬ್ದ 'ಸವಣದತ್ತಿ' ಎಂಬುದು. ಜೈನ ಮುನಿಗಳಾದ ಶ್ರಮಣರಿಗೆ ದತ್ತಿಯಾಗಿ ಕೊಟ್ಟದೇಗುಲ-ಹೊಲ-ನೆಲ ಇದ್ದ ಪ್ರದೇಶವೇ ಸವಣದತ್ತಿ. ಸಂಸ್ಕೃತದ ಶ್ರವಣವು ಪ್ರಾಕೃತದಲ್ಲಿ ಸಮಣ-ಸವಣ ಎಂದಾಗುತ್ತದೆ; ಜೈನ ಸನ್ಯಾಸಿ ಎಂದು ಅದರ ಅರ್ಥ, ಶ್ರಮಣ-ಶ್ರವಣ ಎಂಬ ಸಂಸ್ಕೃತ ಯುಗ್ಮ ರೂಪಗಳಿಗೆ ಸಂವಾದಿಯಾಗಿ ಪ್ರಾಕೃತದಲ್ಲಿ ಸಮಣ-ಸವಣ ಎಂಬ ಸಮಾನರೂಪಗಳಿವೆ. ಕನ್ನಡದಲ್ಲಿಯೂ ಇವೇ ಪ್ರಾಕೃತ ರೂಪಗಳು ೧೨೦೦ ವರ್ಷಗಳಿಂದ ಬಳಕೆಯಾಗುತ್ತಿವೆ. ಮಲೆಯ+ಪರಿ=ಬೆಟ್ಟದ ಹೊಳೆ. ಮಲೆಗಳಲ್ಲಿ ಹುಟ್ಟಿ ಬೆಳ್ವಲ ನಾಡಿನಲ್ಲಿ ಹರಿಯುವ ಹೊಳೆ ಮಲೆಯಪರಿ→ಮಲೆಪರಿ→ಮೈಳಾಪ. ಇದರ ಸಂಸ್ಕೃತಕರಣಗೊಳಿಸಿದ ರೂಪ ಮಲಪ್ರಭೆ, ಮಲಪ್ರಭಾ.

ಸೌದತ್ತಿಯ ಎಲ್ಲಮ್ಮನಗುಡಿಯು ಆ ಪ್ರದೇಶವನ್ನು ಆಳಿದ ಅಪ್ಪಟ ಜೈನರಾದ ರಟ್ಟರ ಪಟ್ಟಜಿನಾಲಯವಾಗಿತ್ತು ಎಂಬುದು ಈಗ ಸ್ಥಾಪಿತವಾಗಿರುವ ಸತ್ಯ. ರಟ್ಟರ ಕಾಲದಲ್ಲಿ ಈ ಭಾಗವೆಲ್ಲವೂ ಜೈನರ ನೆಲೆವೀಡಾಗಿತ್ತು. ಅನೇಕ ಜೈನ ಮುನಿ ಸಂಘಗಳೂ, ಅನ್ವಯಗಳೂ, ಗಣಗಳೂ, ಗಚ್ಛಗಳೂ ಇಲ್ಲಿ ಜೀವಂತವಾಗಿದ್ದುವು. ಅವುಗಳಲ್ಲಿ ಚಂದ್ರಿಕಾವಾಟ ಎಂಬ ಅನ್ವಯವು ಪ್ರಬಲವಾಗಿದ್ದಿತು. ಚಂದ್ರಪ್ರಭ ತೀರ್ಥಂಕರರ ದೇವಾಲಯವೇ ಪ್ರಮುಖವಾಗಿದ್ದುದರಿಂದ ಚಂದ್ರಿಕಾವಾಟವೆಂಬ ಹೆಸರೂ, ಮುನಿಸಂಘವೂ ರೂಪಿತವಾಯಿತೆಂಬ ಅಭಿಪ್ರಾಯವಿದೆ; ಚಂದ್ರಿಕಾವಾಟ ಎಂಬುದು ಸ್ಥಳವಾಚಿ ಮೂಲದಿಂದ ಬಂದ ಅಭಿಧಾನವೆಂಬ ಗ್ರಹಿಕೆಯೂ ಇದೆ.

ಈ ಚಂದ್ರಿಕಾವಾಟ ಅನ್ವಯದಲ್ಲಿಯೇ ಕಾರೇಯಗಣವೂ, ಸೇನಾನ್ವಯವೂ, ತಿಂತ್ರಣೀ ಗಚ್ಛವೂ ಸೇರಿವೆ. ಸೌದತ್ತಿ-೧೨ಕ್ಕೆ ಸಂಬಂಧಿಯಾದ ಮುಳುಗುಂದ ಹೆಸರಿನ ಹಳ್ಳಿಯ ಜಿನ ಮಂದಿರಕ್ಕೆ ಕನ್ನ ಭೂಭುಜನು ತನ್ನ ಸೀವಟದಿಂದ ಎರಡು ಹುಣಸೆಯ ಮರಗಳ ನಡುವಣದ ಆರು ನಿವರ್ತನ ಭೂಮಿಯನ್ನು ಇತ್ತನು : ತಿಂತ್ರಿಣೀ ವೃಕ್ಷಯೋರ್ದ್ವಯೋರ್ ಮಧ್ಯೇ ಯಾ ಸ್ಥಿತಾ ಭೂಮಿರ್ದತ್ತಾ ಶ್ರೀ ಕನ್ನ ಭೂಭುಜಾ (ಫ್ಲೀಟ್ : ೧೮೭೪ : ೧೯೪). ತಿಂತ್ರಿಣೀ ವೃಕ್ಷದ ಸಂಬಂಧದಿಂದಾಗಿ ತಿಂತ್ರಿಣಿಗಚ್ಛವೆಂದು ಹೆಸರಾಯಿತು. ಹುಣಸಿಹಡಗಲಿಯು ಈ ತಿಂತ್ರಿಣೀಗಚ್ಛದ ಉಗಮಸ್ಥಳ.

ಮೈಳಾಪ ತೀರ್ಥವು ಮೊದಲಿನಿಂದಲೂ ಮುಳುಗುಂದದ ಸಂಬಂಧ ಹೊಂದಿತ್ತು. ಮೈಳಾಪತೀರ್ಥವು ಮಳಹಾರೀ ಎಂಬ ನದಿಯ ಸೀಮಾ ಪ್ರದೇಶದಲ್ಲಿ ಪ್ರಭಾವಶಾಲಿ ಜೈನಯಾತ್ರಾಸ್ಥಳ [ಫ್ಲೀಟ್ : ೧೮೭೪ : ೧೯೮]. ಮೈಳಾಪ ತೀರ್ಥವು ಕೇಂದ್ರಬಿಂದುವಾಗಿದ್ದ ಜೈನ ಸನ್ಯಾಸಿಗಳೂ ಶಿಷ್ಯರೂ ಒಂಬತ್ತು ಹತ್ತನೆಯ ಶತಮಾನಗಳಲ್ಲಿಯೇ ಕಂಡುಬರುತ್ತಾರೆ. ಮೈಳಾಪತೀರ್ಥ ಪರಂಪರೆಗೆ ಸೇರಿದ ಜಿನಮಂದಿರಗಳ ಸವಣರಿಗೆ ರಾಷ್ಟ್ರಕೂಟ ರಾಜರಿಂದ ದಾನದತ್ತಿಯಾಗಿ ಕೊಡಲ್ಪಟ್ಟ ಸ್ಥಳವೇ ಸವಣದತ್ತಿ. ಮೈಳಾಪತೀರ್ಥ ಸವಣರಿಗೆ ರಟ್ಟರಾಜರು ದತ್ತಿ ಕೊಟ್ಟ ಕಾರಣ 'ಸವಣದತ್ತಿ' ಎಂಬ ಹೆಸರು ಚಾಲ್ತಿ ಪಡೆಯಿತು. ಸವಣದತ್ತಿ ಎಂಬ ಶಬ್ದರೂಪ ಕ್ರಮೇಣ ಜನರ ಉಚ್ಚಾರಣಾನುಕೂಲಕ್ಕೆ ಅನುಗುಣವಾಗಿ ಶಬ್ದಗಳು ಹೊರಳುತ್ತ ಸವಣದತ್ತಿ-ಸವಂದತ್ತಿ-ಸೌಂದತ್ತಿ-ಸವದತ್ತಿ-ಸೌದತ್ತಿ ಎಂಬ ವ್ಯತ್ಯಾಸಗಳನ್ನು ಪಡೆದು ಕೊಂಡಿದೆ. ಒಂದು ಶಾಸನದಲ್ಲಿ ಈ ಅಂಶಕ್ಕೆ ಒದಗಲ್ಲಾಗಿ ನಿಲ್ಲುವ ಮಾತುಗಳಿವೆ: ಸವಂದತ್ತಿಯ ಸವಣಬೊಲದ (ಕ. ಇ. ೬. ನಂ. ೭೩, ೧೨೨೮).

ಶಾಸನಗಳಲ್ಲಿ ನಮೂದಾಗಿರುವ ಪ್ರಕಾರ ಮುಳ್ಗುಂದದ 'ವರವೈಶ್ಯಜಾತಿಜಾತ:'. ಶ್ರೇಷ್ಠಿಭಿಃ (೧೮೭೪ : ೧೯೦-೯೧), ಅಂದರೆ ವೈಶ್ಯಕುಲದವರು (ಬಯಿಸಕುಲ) ಮೈಳಾಪತೀರ್ಥಕ್ಕೆ ದಾನದತ್ತಿಗಳನ್ನಿತ್ತು ಶಿಷ್ಯರಾಗಿದ್ದರು. ಸೌದತ್ತಿಯ ರಟ್ಟರೆನಿಸಿದ ರಾಜಮನೆತನದ ಆರಂಭದ ದೊರೆಗಳಾದ ಮೆರಡ, (ಹೋ: ಚಪಡ) ಪ್ರೀಥ್ವೀರಾಮ, ಪಿಟ್ಟುಗ, ಕನ್ನರ-ಎಂಬೀ ಆದ್ಯರು ಸಹ ಸವಣದತ್ತಿಯಾದ ಮೈಳಾಪತೀರ್ಥದ ಆಡಳಿತ ನೋಡಿಕೊಳ್ಳುತ್ತ ನಿರ್ವಹಣೆಯ ಭಾಗವಾಗಿದ್ದರು. ಪ್ರಿಥ್ವೀರಾಮನು ಮೈಳಾಪತೀರ್ಥದ ಗುರುಕುಲದಲ್ಲಿ ಛಾತ್ರ (ಚಟ್ಟ=ಶಿಷ್ಯ) ನಾಗಿದ್ದು ಅಲ್ಲಿ ಕಲಿಯುತ್ತಿದ್ದನೆಂದು ಶಾಸನದಲ್ಲಿ ಅಸ್ಖಲಿತವಾಗಿ ದಾಖಲಾಗಿದೆ.

ಸೌದತ್ತಿಯಲ್ಲಿರುವ ಈಗಿನ ಎಲ್ಲಮ್ಮನ ಇಡೀ ಗುಡ್ಡವೇ ಆ ಮೈಳಾಪ ತೀರ್ಥವಾಗಿತ್ತು : ಎಲ್ಲಮ್ಮನ ಗುಡಿ ರಟ್ಟರ ಪಟ್ಟಜಿನಾಲಯವೆಂದು ಈ ಲೇಖನದ ಆರಂಭದಲ್ಲಿ ಹೇಳಿದ್ದಾಗಿದೆ. ಈ ಸವಣದತ್ತಿ (ಸೌದತ್ತಿ) ಯು ಕುಹೂಂಡಿ (ಕೂಂಡಿ) ಮುನ್ನೂರಕ್ಕೆ ರಾಜಧಾನಿಯಾಗಿತ್ತು. ಈ ನೆಲವೀಡು ೧೨ನೆಯ ಶತಮಾನದಲ್ಲಿ ಸೌದತ್ತಿಯಿಂದ ವೇಣುಗ್ರಾಮಕ್ಕೆ (ಬೆಳಗಾವಿ)-೭೦ ಕ್ಕೆ ವರ್ಗಾಯಿಸಲ್ಪಟ್ಟಿತು. ಹೀಗೆ ಸ್ಥಳಾಂತರಿಸಲ್ಪಟ್ಟ, ಆ ವೇಣುಗ್ರಾಮ-೭೦ಕ್ಕೆ ರಾಜಧಾನಿಯಾಗಿದ್ದ ರಟ್ಟರಾಜ್ಯವನ್ನು ಹದಿಮೂರನೆಯ ಶತಮಾನದಲ್ಲಿ ಪರಾಜಯಗೊಳಿಸಿ ಸಚಿವ ಬೀಚಣನು ತನ್ನ ಯಾದವ ನೃಪತಿಯಾದ ಕನ್ನರದೇವ (ಕೃಷ್ಣರಾಜ)ನಿಗೆ ಒಪ್ಪಿಸಿದನು.

ಸವದತ್ತಿ, ಮುಳ್ಗುಂದ-ಇವು ಧವಳ ವಿಷಯದಲ್ಲಿ ಇದ್ದುವೆಂದು ಶಾಸನೋಕ್ತವಾಗಿದೆ (೧೮೭೪-೧೯೦). ಧವಳ ವಿಷಯವೆಂದರೆ ಶಾಸನಗಳಲ್ಲಿ ನೂರಾರು ಬಾರಿ ಬರುವ ಬೆಳ್ವೊಲ ಮುನ್ನೂರರ ಪ್ರದೇಶ. ಈ ಧವಳ ವಿಷಯದಲ್ಲಿನ ವರ-ವೈಶ್ಯಜಾತಿಯಲ್ಲಿ ಹುಟ್ಟಿದ ಚಂದ್ರಾರ್ಯನ ಮಗನಾದ ಚೀಕಾರ್ಯನು ಮುಳ್ಗುಂದದಲ್ಲಿ ಉನ್ನತಜಿನಾಲಯವನ್ನು ಕ್ರಿ.ಶ. ೮೫೦ರಲ್ಲಿ ಕಟ್ಟಿಸಿದನು. ಚೀಕಾರ್ಯನ ಮಗಂದಿರು ನಾಗಾರ್ಯ ಮತ್ತು ಅರಸಾರ್ಯ. ಚಿಕ್ಕಮಗನಾದ ಅರಸಾರ್ಯನು ಜೈನ ನಯಶಾಸ್ತ್ರದಲ್ಲೂ, ಆಗಮ ಶಾಸ್ತ್ರದಲ್ಲೂ ಕುಶಲನೂ ಸಮ್ಯಕ್ತ್ವ ಚಿತ್ತನೂ ಆಗಿದ್ದನೆಂದು ಕ್ರಿ.ಶ. ೯೦೨ರ ಶಾಸನ ಹೇಳುತ್ತದೆ; [ಫ್ಲೀಟ್ : ೧೮೭೪ : ೧೯೧ : ಸಾಲು ೫-೭; ಹಂಪನಾ, ಮುಳುಗುಂದದ ಮೂರು ಅಪ್ರಕಟಿತ ಶಾಸನಗಳು, **ಅರವಂಟಿಗೆ** ೧-೨ ೨೦೦೧].

ಅರಸಾರ್ಯನ ತಂದೆಯಿಂದ ನಿರ್ಮಿಸಲಾದ (ಪಿತೃಕಾರಿತ) ಜಿನಾಲಯವು ಧವಳ ವಿಷಯದ ಮುಳ್ಗುಂದ ಎಂಬ ಹೆಸರಿನ ನಗರದಲ್ಲಿದ್ದು, ಅದು ಚಂದ್ರಿಕಾವಾಟದ ಸೇನಾನ್ವಯಕ್ಕೆ ಸೇರಿತ್ತು. ಚಂದ್ರಪ್ರಭ ತೀರ್ಥಕರರ ದೇವಾಲಯದ ಮೂಲದ ಪರಂಪರೆಗೆ ಸೇರಿದ ಮುನಿಗಳು ಚಂದ್ರಿಕಾವಾಟದ ಅನ್ವಯದವರೆಂದು ತಿಳಿಯಲು ಯಾವುದೇ ಬಾಧಕಗಳಿಲ್ಲವೆಂದು ಆಗಲೇ ಸೂಚಿಸಿದ್ದಾಗಿದೆ. ಸೌದತ್ತಿಯ ಶಾಸನದ ಆರಂಭದಲ್ಲಿಯೂ ಚಂದ್ರಪ್ರಭ ತೀರ್ಥಂಕರರ ಸ್ತುತಿಯಿದೆ - ಚಂದ್ರಪ್ರಭ ಆಖ್ಯಾಯ ಜೈನಶಾಸನವೃದ್ಧಯೇ (೧೮೭೪-೧೯೦ : ಸಾಲು ೨೦). ಚಂದ್ರಪ್ರಭಾ ಎಂಬುದಕ್ಕೆ ಸಂಸ್ಕೃತ ಸಂವಾದಿ ಶಬ್ದವೇ ಚಂದ್ರಿಕಾ ; ಚಂದ್ರಪ್ರಭು ತೀರ್ಥಂಕರ ಜಿನಾಲಯದ ಸ್ಥಳವೇ ಚಂದ್ರಿಕಾವಾಟ. ಚಂದ್ರಪ್ರಭರ ಶಾಸನವನ್ನು (ಜಿನೋಪದಿಷ್ಟ ಉಪದೇಶ ಸಾರ) ವೃದ್ಧಿಸಿ ಪ್ರಚಾರ ಮಾಡುವುದರಲ್ಲಿ ನಿರತರಾದ ಮುನಿಗಳು ಚಂದ್ರಿಕಾವಾಟ ಅನ್ವಯದವರು. ಆದ್ದರಿಂದ ಇದರ ಪೂರ್ವಾಪರ ಹಾಗೂ ಅಂತರ ಬಾಹ್ಯ ಪ್ರಮಾಣಾಧಾರಗಳೆಲ್ಲ ಬೊಟ್ಟುಮಾಡಿ ತೋರಿಸುವಂತೆ ಈ ಚಂದ್ರಿಕಾವಾಟ ಅನ್ವಯದ ಜೈನಯತಿ ಸಮುದಾಯದ ಉಗಮಸ್ಥಳ ಮುಳ್ಗುಂದದ ಚಂದ್ರಪ್ರಭ ಜಿನಾಲಯ. ಇದು ಒಂಬತ್ತನೆಯ ಶತಮಾನದ ನಡುಗಾಲದಲ್ಲಿ ಆರಂಭವಾಯಿತು. ಆಮೇಲೆ ಈ ಜೈನ ಗುರು ಪರಂಪರೆಗೆ ಸೇರಿದ ಹಲವಾರು ಮುನಿ-ಭಟ್ಟಾರಕರ ಉಲ್ಲೇಖಗಳು ಸಿಗುತ್ತವೆ. (ಎ.ಇ.೮, ೧೯೩. ಕ್ರಿ.ಶ. ೯೦೨ : ಇ. ಆ. ೧೬, ೫೫.೧೦೫೩ : ೫೧೧. ೧೮ ೭೧.೧೦೬೬-ಇತ್ಯಾದಿ) ಹಲವಾರು ಶಾಸನ ಪ್ರಯೋಗಗಳಿವೆ.

ಮೈಳಾಪತೀರ್ಥಕ್ಷೇತ್ರವು ಮುಳ್ಗುಂದ, ಸವದತ್ತಿ, ವೇಣುಗ್ರಾಮ, ಐಹೊಳೆ, ಪಟ್ಟದಕಲ್ಲು,

ಬದಾಮಿ, ಸೊರಟೂರು, ಬಂಕಾಪುರ ಮೊದಲಾದ ಜೈನಕೇಂದ್ರ ಸ್ಥಳಗಳಿಗೆಲ್ಲ ಮುಖ್ಯ ಉಪಾಸನಾ ಸ್ಥಳವಾಗಿತ್ತು. ಅದರ ಮೂಲ ಸೆಲೆ ಎಲ್ಲಿತ್ತೆಂಬ ಪ್ರಶ್ನೆಯನ್ನೂ ಪರಿಶೀಲಿಸಬಹುದು. ಇದಕ್ಕೆ ಉತ್ತರವನ್ನು ಶಾಸನದಲ್ಲಿಯೇ ಅವಿತು ಕುಳಿತಿರುವ 'ಮಳಹಾರೀ ನದೀ ಸೀಮಾ' ಎಂಬ ಬೆರಳುಸನ್ನೆಯ ಸೂಚನೆಯ ಒಡಲಲ್ಲಿ ಹುಡುಕಬೇಕು. ಮೈಳಾಪ ತೀರ್ಥವು ಮಳಹಾರೀ (ಮಲಪ್ರಭಾ) ತೊರೆಯ ತಡಿಯ ಮೇಲಿದ್ದ ಒಂದು ಊರೆಂಬುದೊಂದು ಸ್ಪಷ್ಟ ಸೂಚನೆ. ಮೈಳಾಪ ತೀರ್ಥದ ಕಾರೇಯ ಗಣದಲ್ಲಿ ಆಗಿಹೋದ ಜಿನಮುನಿಗಳಲ್ಲಿ ಪ್ರಾಚೀನರು ಮುಳ್ಳಭಟ್ಟಾರಕರು. ಇವರ ಕಾಲ ಸು. ಕ್ರಿ.ಶ. ೮೦೦ ಮುಳ್ಳಭಟ್ಟಾರಕರ ಶಿಷ್ಯರು ಗುಣಕೀರ್ತಿ ಮುನೀಶ್ವರರು. ಗುಣವಂತರೂ, ಸೂರಿಗಳೂ ಆದ ಗುಣಕೀರ್ತಿ ಮುನಿಯಕಾಲ ಕ್ರಿ.ಶ. ೮೩೫. ಇವರ ಶಿಷ್ಯರು ಇಂದ್ರಕೀರ್ತಿಸ್ವಾಮಿ ; ಇವರ ಕಾಲ ಕ್ರಿ.ಶ. ೮೭೦. ಸವದತ್ತಿಯರಟ್ಟರ ಮೂಲ ಪುರುಷನಾದ ಮೇರಡನ ಹಿರಿಯ ಮಗನಾದ (ಅಗ್ರನನ್ದನ) ಪೃಥ್ವೀರಾಮನು ಈ ಇಂದ್ರಕೀರ್ತಿ ಸ್ವಾಮಿಯ ಶಿಷ್ಯನೂ ಮತ್ತು ರಾಷ್ಟ್ರಕೂಟರ ಇಮ್ಮಡಿ ಕೃಷ್ಣರಾಜನ ಮಹಾಸಾಮಂತನೂ ಆಗಿದ್ದನು (ಫ್ಲೀಟ್೧೮೭೪-:೧೯೫: ಸಾಲು ೧೮)

ಕ್ರಿ.ಶ. ೮೭೦ರ ಅಜೂಬಾಜಿನಲ್ಲಿ ಪೃಥ್ವೀರಾಮನಿಂದ (ತೇನ ಭೂಪೇನ) ಮೈಳಾಪತೀರ್ಥಕ್ಕೆ ಸೇರಿದ ಒಂದು ಜಿನಗೃಹವು ಕಟ್ಟಲ್ಪಟ್ಟಿತು (ಕಾರಿತೇನ ಜಿನೇನ್ದ್ರ ಭವನ : ಅದೇ : ಪುಟ ೧೯೫ : ಸಾಲು ೧೩-೧೪). ಈ ಜಿನಭವನಕ್ಕೆ ರಾಜನು ಆರು ನಿವರ್ತನದಷ್ಟು ಭೂಮಿದಾನ ಮಾಡಿದನು. ಅದಾದ ನೂರು ವರ್ಷಗಳ ತರುವಾಯ ಮುಂದೆ ಇದೇ ಬಸದಿಗೆ ಇಮ್ಮಡಿ ಕಾರ್ತವೀರ್ಯ (ಕತ್ತಭೂಪ) ಮತ್ತು ಆತನ ಹಿರಿಯ ಹೆಂಡತಿ (ಅಗ್ರಕಾಂತೆ) ಭಾಗಲಾಂಬಿಕೆ (ಬಾಗಲಾದೇವಿ) ಕಾಲದಲ್ಲಿ ಮತ್ತೆ ೧೮ ನಿವರ್ತನ (ಅಷ್ಟಾದಶ ನಿವರ್ತನ) ಭೂಮಿಯನ್ನು ಸರ್ವಬಾಧಾನಿವರ್ಜಿತವಾಗಿಸಿ ದಾನ ಕೊಡಲಾಗಿದೆ. ಈ ಒಂದು ಶತಮಾನದ ಅಂತರದಲ್ಲಿ ಸವದತ್ತಿ ರಟ್ಟಕುಲವು ಕಲ್ಯಾಣ ಚಾಳುಕ್ಯರ ಚಕ್ರಾಧಿಪತ್ಯದ ಅಧೀನತೆಗೆ ಸರಿದಿದ್ದರೂ. ಕಾರ್ತವೀರ್ಯ ನೃಪನು ಮಹಾಮಂಡಳೇಶ್ವರನಾಗಿದ್ದನು. ಪ್ರಸಿದ್ಧ ಮೈಳಾಪತೀರ್ಥವನ್ನು ಕೆಲವು ಶಾಸನಗಳು ಪ್ರಸ್ತಾಪಿಸಿವೆ:

೧. ಶ್ರೀಮನ್+ಮೈಳಾಪತೀರ್ತ್ಥಸ್ಯ ಗಣೇ ಕಾರೇಯನಾಮನಿ ೧ ಬಭೂವ+ಉಗ್ರತಪೋಯುಕ್ತ : ಮುಳ್ಳಭಟ್ಟಾರಕೋ ಗಣೀ।। (ಫ್ಲೀಟ್; ಜೆಬಿಬಿಆರ್ಎಎಸ್, ೪೦-೨, ಕ್ರಿ.ಶ. ೮೭೬, ಪುಟ. ೧೯೪, ಸಾಲು ೬)

೨. ಶ್ರೀಯಾಪನೀಯಾಂಬುಧಿ ಪೂರ್ಣ್ನಚಂದ್ರೋ ಮೈಳಾಪತೀರ್ತ್ಥಾಭರಣೋ ಗಣೋಭೂತ್ ಕಾರೇಯಗಣಮಾ ಪ್ರತಿಬದ್ಧ ತತ್ವೈರಾಚಾರ್ಯವರ್ಯ್ಯೈರ್ಪ್ರಥಿತಪ್ರಥಿವ್ಯಾಂ।। (ಎ.ಇ.೧೫, ೫೩೦.೧೦೫೯. ಮೊರಬ (ಧಾರವಾಡ ಜಿ/ನವಲ್ಗುಂದ ತಾ.) ಪು. ೩೫೯. ಸಾಲು : ೩-೪.

೨ಎ. ಕಲಭಾವಿ (ಬೆಳಗಾವಿ ಜಿ./ ಸಂಪಗಾಂವತಾ) ರಾಮಲಿಂಗ ಗುಡಿ ಎದುರಿನ ಕಲ್ಲು ಶಾಸನ.

೩. ನವಿಲೂರ ಬಳಿಯ ಬಾ . . . ಹಳ್ಳಿಯ ಘ . . .
(ಬ)ಸದಿ ಮೈಳಾಪಾನ್ವಯ ಕಾರೇಯಗಣದ ಗುಡ್ಡ
ಕೇಮಣ ರೇಚಣ ಜೀರ್ನ್ನೋದ್ಧಾರಂ ಮಾಡಿಸಿದ

ಬಸದಿ ಚಂದ್ರನಾಥ ಸ್ವಾಮಿಗಳ ಅಷ್ಟವಿಧಾರ್ಚನೆಗೆ
ರಿಷಿಯರಜ್ಜಿಯರಾಹಾರ ದಾನಕ್ಕೆ ಆ ಸ್ಥಳದ ಅಱುವತ್ತೊಕ್ಕಲು
ಸಾಸಿರ್ವ್ವರುಂ ಶ್ರೀರಾಜಧಾನಿ ನರೇಂದ್ರ. ದ ಕುಳಿಯ
ಬಸದಿಯಾಚಾರ್ಯ ಬಾಹುಬಲಿದೇವರ ಶಿಷ್ಯತಿ
ರಾಜಮತಿ ಕನ್ತಿಯರ ಕಾಲಂ ಕರ್ಚ್ಚಿ ಆಚಂದ್ರಾರ್ಕ್ಕ
ತಾರಂಬರಂ ಧಾರಾ ಪೂರ್ವ್ವಕಂಮಾಗೆ ಬಿಟ್ಟರು॥

[ಧಾರವಾಡ ತಾಲ್ಲೂಕು ಶಾಸನಗಳು, ೪೫. ಸು. ೧೨ ಶ. ನುಗ್ಗಿಕೇರಿ. ಪು. ೮೩]

೪. ಶ್ರೇಯಶ್ರೀ ಯಾಪನೀಯಾನ್ವಯ ಮುಖ ಮುಕುರಂ
ಚಾರುಮೈಳಾಪ ತೀರ್ತ್ಥಾಮ್ನಾಯ ಶ್ರೀ ಕಂಠಿಕಾ
ಕಾರೆಯಗಣ ತಿಳಕಂ ಧರ್ಮ್ಮ ಸಂರಕ್ಷಣಾಭಿಪ್ರಾಯಂ
ಶ್ರೀ ರಾಮಚಂದ್ರ ಬ್ರತಿಪತಿ ತನಯರಿ ಬಾಪ್ಪು
ಸಾಮಾನ್ಯನೇ ವಿದ್ಯಾಯೋಷಿನ್ಮಂಡನಂ ಬಾಹುಬಲಿ
ಮುನಿವರಂ ಸಿದ್ಧ ಸೈದ್ಧಾನ್ತ ಕಾನ್ತಂ

[ಕ.ಇ. ೬, ೬೮.೧೨೦೩. ಸಾಲು : ૩೭-૩೯ ಮಣಿಗುಂದಗೆ (ಮನಗುಂಡಿ : ಧಾರವಾಡ ಜಿ.)]

೫. ಕನ್ನಡ ಕವಿಗಳಲ್ಲಿಯೇ ವಿಶಿಷ್ಟನಾದ ಬ್ರಹ್ಮಶಿವ ಕವಿಯೂ (೧೧೭೫) ತನ್ನ **ಸಮಯ** ಪರೀಕ್ಷೆ ಎಂಬ ಕಾವ್ಯದಲ್ಲಿ

ಧರೆಯೊಳ್ ಮುಟ್ಟದೆ ನೆಗೆದಂ
ತರಿಕ್ಷದೊಳ್ನಿಲಸಿನಿಂದ **ಮೈಳಾಪ ಜಿನೇ**
ಶ್ವರತೀರ್ಥದತಿಶಯಮನಾ
ಧರಣೇಂದ್ರಂ ಪೊಗಟಲಱಿಯನುಳಿದವರಳವೇ॥ (೨-೪೭)

ಎಂಬುದಾಗಿ ಮೈಳಾಪ ತೀರ್ಥಮಂದಿರದ ಮಹಿಮೆಯನ್ನು ಕೊಂಡಾಡಿದ್ದಾನೆ.

ಮೈಳಾಪ ತೀರ್ಥದ ಕಾರೆಯಗಣ ಎಂಬ ಹೆಸರು ವೃಕ್ಷ ಮೂಲ ನಾಮಪ್ರಕೃತಿ. ಕಾರೆ ಎಂಬುದುಒಂದು ಬಗೆಯ ಹಣ್ಣು ಬಿಡುವ ಮುಳ್ಳುಗಿಡ. ಕಾರೆಯ (ಕಾರೇ) ಹಣ್ಣು, ಬೋರೆಯ (ಬೋರೇ) ಹಣ್ಣು ಎಂಬುದು ರೂಢಿಯ, ಹಳ್ಳಿಯಕಡೆ ಈಗಲೂ ಚಾಲ್ತಿಯಲ್ಲಿರುವ ಮಾತುಗಳು. ತಿಕ್ತಕಿಯೆನಲ್ ಕಾರೆಯಕ್ಕು ಎಂಬುದಾಗಿ ಮಂಗರಾಜ ನಿಘಂಟಿನ ಹೇಳಿಕೆಯಿದೆ (೭೨-೩೭) ಕಾರೆ ಎಂಬುದು ಅಚ್ಚಗನ್ನಡದ (ದ್ರಾವಿಡ) ಶಬ್ದ. ತಮಿಳಿನಲ್ಲಿ ಕಾರೈ ಎಂದು, ಮಲೆಯಾಳದಲ್ಲಿ ಕಾರ, ತುಳುವಿನಲ್ಲಿ ಕಾರೆ, ಕೊಡಗು ಭಾಷೆಯಲ್ಲಿ ಕಾರೆಮಣಿ ಎಂದೂ ಇದಕ್ಕೆ ಹೆಸರಿದೆ. ಕಾರೆಗಿಡಗಳು ಇದ್ದ ಜೈನಮಠ ಮುಂದಿರಗಳಿಂದ ಬಳಕೆಗೆ ಬಂದ ಗಣವೆ ಕಾರೆಯ ಗಣ. ಕಾರೆಯ ಎಂಬುದು ಪಷ್ಟ್ಯಂತರೂಪ. ಕಾರೆಯ ಗಿಡದ ಮುಳ್ಳನ್ನು ಕಾರೆಮುಳ್ಳು ಎಂದು ಕರೆಯುತ್ತಾರೆ. ಈ ಗಣಕ್ಕೆ ಸೇರಿದ ಮೊದಲನೆಯ ಜೈನ ಗುರುವಿನ ಹೆಸರು ಮುಳ್ಳಭಟ್ಟಾರಕರು.

ಮುಳ್ಳು ಎಂಬುದು ನಾಮಪ್ರಕೃತಿ, ಮುಳ್ಳ ಎಂಬುದಗು ಪಷ್ಟ್ಯಂತರೂಪ, ಕಾರೆ ಎಂಬ ಮುಳ್ಳಿನ ಗಿಡಗಳಿದ್ದ ಮಟಕ್ಕೆ ಸಂಬಂಧಿಸಿದ ಗಣದ ಗುರುಗಳು ಮುಳ್ಳಭಟಾರರು-ಎಂಬುದಷ್ಟೇ ಇದರರ್ಥ.

ಕಾರೆಯಗಣದ ಜೈನಯತಿಗಳ ಪಂಗಡವು ೧೦-೧೩ ನೆಯ ಶತಮಾನದವರೆಗೂ, ಚಾಳುಕ್ಯ ರಾಜ್ಯ ಇರುವವರೆಗೂ, ಪ್ರಚಲಿತವಾಗಿತ್ತು (ಕ.ಇ.೫, ೬೮. ೧೨೦). ಕಾರೆಯನಾಳ್ವ ಜಯಸೇನ ಭಟಾರರನ್ನು ಶಾಸನ ಸ್ಮರಿಸಿದೆ (ಎ.ಕ. ೩. ನಂಜನಗೂಡು ೧೯೨, ಕ್ರಿ.ಶ. ೯೬೮). ಮೈಳಾಪಾನ್ವಯಮೆನಿಸಿದ ಕಾರೆಯಗಣಗಗನ ಚೂಡಾಮಣಿಗಳು ಶಾಸನೋಕ್ತರು (ಎ. ಇ. ೧೮, ೩೧೧. ೧೧ ಶ) ಅನ್ತಾ ಕಾರೆಯಗಣದೊಳತಿ ಪ್ರಸಿದ್ಧರುಂ ಮಹಾಪ್ರಬುದ್ಧ ಶಾಸನರುಂ ಆದವರು ಆಗಿಹೋಗಿದ್ದಾರೆ (ಕ.ಇ. ೧, ೩೨.೧೨೧೯).

ಮೈಳಾಪತೀರ್ಥಕ್ಕೂ ಮೈಲರ (ಖಂಡೋಬಾ) ದೇವರಿಗೂ, ನಾಮ ಸಾದೃಶ್ಯದ ಹೊರತು, ಏನೇನೂ ಸಂಬಂಧವಿಲ್ಲ. ಮೈಳಾಪತೀರ್ಥ ಆಮ್ನಾಯವು ಯಾಪನೀಯ ಸಂಘದಲ್ಲಿ ಅಂತರ್ಗತ ವಾಗಿತ್ತು (ಕ.ಇ. ೬೮, ೧೨೦೩). ಮೈಳಾಪತೀರ್ಥಕ್ಕೆ ನಡೆದುಕೊಳ್ಳುವ ಶ್ರಾವಕಿಯರಿಗೆ ಮೈಳಲಾದೇವಿಯೆಂಬ ಹೆಸರಿಡುತ್ತಿದ್ದರು. ಸವಣದತ್ತಿಯ ರಟ್ಟರ ಮತ್ತು ಚಾಳುಕ್ಯ ರಾಜರ ಕೆಲವು ರಾಣಿಯರಿಗೂ, ರಾಜಕುಮಾರಿಯರಿಗೂ ಮೈಳಲಾದೇವಿ ಹೆಸರಿದೆ; ಅವರು ಈ ಮೈಳಾಪತೀರ್ಥದ ಭಕ್ತರು. ಮೈಳಾಪತೀರ್ಥಾಮ್ನಾಯವೂ ಮೈಳಾಪಾನ್ವಯವೂ ಶಾಸನೋಕ್ತವಾಗಿದ್ದು, ಐತಿಹಾಸಿಕ ಮಹತ್ವ ಪಡೆದು ಮೂರು ನಾಲ್ಕು ಶತಮಾನದವರೆಗೆ, ೧೦ರಿಂದ ೧೪ನೆಯ ಶತಮಾನದ ವರೆಗೆ ಪ್ರಭಾವಶಾಲಿಯಾಗಿ ಬೆಳಗಾವಿ ಜಿಲ್ಲೆಯಲ್ಲಿ ಗಣ್ಯವಾಗಿದ್ದಿತು. ರಟ್ಟವಂಶಜ ನೃಪರೂ ರಾಣಿಯರೂ ಮೈಳಾಪತೀರ್ಥ ಪರಂಪರೆಯ ಗುರುಗಳಿಗೆ, ದೈವಕ್ಕೆ ನಿಷ್ಠೆಯಿಂದ ನಡೆದುಕೊಂಡರು. (ಸೌ. ಇ. ಇ. ೨೦, ೫೦.೧೦೭೦ ಪು. ೬೧; ಅದೇ, ೬೨. ೧೦೯೮ ಸೌದತ್ತಿ. ಪು. ೭೬; ಅದೇ, ೧೩. ೮೭೫-೭೬. ಪು. ೧೨).

ಬೆಳಗಾವಿ ಜಿಲ್ಲೆ ಬೈಲ ಹೊಂಗಲ ತಾಲೂಕು ಕಲಭಾವಿ(ಕುಮ್ಮದ ವಾಡ) ಜೈನ ಪೀಠವಿದ್ದ ಸ್ಥಳ. ಯಾಪನೀಯ ಸಂಘದ ಮೈಳಾಪಾನ್ವಯದ ಶುಭಕೀರ್ತಿದೇವರ ಶಿಷ್ಯರಾದ ದೇವಕೀರ್ತಿ ಪಂಡಿತದೇವ ಕಾರೇಯ ಗಣದ ಚೂಡಾಮಣಿಯಾಗಿದ್ದರು. ಈ ವಾದೀಭಕಂಠೀರವ ದೇವಕೀರ್ತಿ ಪಂಡಿತದೇವರ ಕಾಲಂ ಕರ್ಚಿ ಗಂಗರ ಸೈಗೊಟ್ಟ ಇಮ್ಮಡಿ ಶಿವಮಾರನು (ಕ್ರಿ.ಶ. ೯ನೆಯ ಶ.) ಕಾದ್ರೊಳ್ಳಿ ಕಂಪಣದ ಕುಮ್ಮದವಾಡ (ಕಲಭಾವಿ) ಭೂಮಿ ದಾನ ಮಾಡಿದನು. [IA. Vol. II p. 215]

(ಬೆಳಗಾವಿಜಿ, ಹುಕ್ಕೇರಿತಾ) ಬೆನಿವಾಡ ಗ್ರಾಮದ ಅಪ್ರಕಟಿತ ಶಾಸನ ಪಾಠ :

೧ ....
೨ ರಾಜ್ಯಂಗೆಯ್ಯು........ ಲು ಸಾಮನ್ತ ನಾರಾಯಣ...
೩ ಡಿಸಿದ... (ಮೈ) ಳಾಪಾನ್ವಯ ಸಕಾರೆಯಗಣದ

೪ ಶ್ರೀಧರ ತ್ರೈವಿ(ದ್ಯ) ದೇವರ ಕಾಲಂ ಕರ್ಚ್ಚಿ ಧಾರಾಪೂರ್ವ್ವಕವಾಗಿ
೫ ಯ ರೂಪಗು.. ಸರ‍ಗಾ.. ಬರಿ ಎಂಟು ಹಿಟ್ಟು ಸಾವಿ
೬ ಕ ವಾಗುದರ ಬಸದಿಯ ಜೀರ್ಣ್ನೋಧಾರಕ್ಕಂ ರಿಷಿಯರಾ
೭ (ಹಾರ) ಕ್ಕಂ ಸರ್ವ್ವಬಾಧಾಪರಿಹಾರವಾಗಿ ಬಿಟ್ಟು ಭೂಮಿ ಕಮ್ಮ ೩೦
೮ ಗಮುಡ ಹೆಮಸತರದಿಂ ಪ್ರತಿಪಾಳಸುವರು।।

(ಹಂದೂರ, ಬಿ. ಆರ್ : **ಜೈನ ಪರಂಪರೆಗೆ ಬೆಳಗಾವಿ ಪ್ರಾದೇಶಿಕ ಕೊಡುಗೆ,** ೨೦೦೨)

ಮೈಳಾಪತೀರ್ಥದ ಕಾರೆಯಗಣದ ಪ್ರಸ್ತಾಪ ಇನ್ನೊಂದು ಅಪ್ರಕಟಿತ ಶಾಸನ (ಕ್ರಿ.ಶ. ೧೦೨೬): ಬೆಳಗಾವಿ ಜಿಲ್ಲೆ, ಬೈಲ ಹೊಂಗಲ ತಾಲೂಕು ಬೆಳವಡಿಯಲ್ಲಿ ಸಿಕ್ಕಿದೆ. ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲೂಕು ಹಾವಗಿ ಗ್ರಾಮವು ಮೈಳಾಪಾನ್ವಯದ ಪ್ರಭಾವದಿಂದ ಪಾರ್ಶ್ವ ಜಿನಾಲಯವನ್ನು ಹೊಂದಿ ಹೆಸರುಗಳಿಸಿತ್ತು. ಯಾಪನೀಯ ಸಂಘದ ಮೈಳಾಪ ಅನ್ವಯದ ಕಾರೇಯಗಣದ ಮಾಘನಂದಿ ಮುನಿಯ ಶಿಷ್ಯನಾದ ಕೋಟರ ಕಲ್ಲಗೌಂಡನು ಪಾರ್ಶ್ವಜಿನಬಿಂಬವನ್ನು ಮಾಡಿಸಿದ್ದಾಗಿ ಅದರ ಪಾದ ಪೀಠದ ಶಾಸನದಿಂದ ತಿಳಿದು ಬರುತ್ತದೆ. ಈ ಬಿಂಬವನ್ನು ಅಣೆಲಪುರದ (ಅಳ್ನಾವರ) ನಕರ ಜಿನಾಲಯಕ್ಕಾಗಿ ಮಾಡಿಸಲಾಯಿತೆಂದೂ ಅದೇ ಶಾಸನದಲ್ಲಿ ಹೇಳಿದೆ. ಇದರ ಕಾಲ ಕ್ರಿ.ಶ. ಹನ್ನೆರಡನೆಯ ಶತಮಾನ.

೧೫

ವಸುಧೈಕ ಬಾಂಧವ ರೇಚಣದಂಡನಾಥ

ಹತ್ತನೆಯ ಶತಮಾನದಲ್ಲಿ, ಕರ್ನಾಟಕ ಸಾಂಸ್ಕೃತಿಕ ರಂಗದಲ್ಲಿ, ಉಜ್ವಲವಾಗಿ ಬೆಳಗಿದ ಬಹುಮುಖ ಪ್ರತಿಭೆಯ ದಾನಚಿಂತಾಮಣಿ ಅತ್ತಿಮಬ್ಬೆಯನ್ನು ಕುರಿತು, ಒಂದು ಸಾವಿರ ವರ್ಷದ ಚರಿತ್ರೆಯುದ್ದಕ್ಕೂ ಮಾಹಿತಿಗಳು ಉಪಲಬ್ಧವಾಗಿವೆ. ಕರ್ನಾಟಕವನ್ನು ಆಳಿದ ಕಲ್ಯಾಣ ಚಾಳುಕ್ಯ ಸಾಮ್ರಾಜ್ಯಕ್ಕಾಗಿ ಒಂದು ಇಡೀ ಕುಟುಂಬ ಬಲಿದಾನವಾಯಿತು. ಅದೇ ಅತ್ತಿಮಬ್ಬೆಯ ಮನೆತನ. ಆಕೆಯ ತಂದೆ ಮಲ್ಲಪಯ್ಯ, ಚಿಕ್ಕಪ್ಪ ಪುನ್ನಮಯ್ಯ, ಸೋದರರಾದ ಗುಂಡಮಯ್ಯ ಎಳಮಯ್ಯ ಪೊನ್ನಮಯ್ಯ ಆಹವಮಲ್ಲ, ವಲ್ಲ ಎಂಬ ಐವರು, ಮಾವನಾದ ದಲ್ಲಪಯ್ಯ, ಗಂಡನಾದ ನಾಗದೇವ, ಮಗನಾದ ಅಣ್ಣಿಗದೇವ-ಇವರೆಲ್ಲರೂ ಚಾಳುಕ್ಯ ಸೈನ್ಯದ ಚಮೂಪತಿಗಳಾಗಿ ಹೋರಾಡಿದರು.

ಅತ್ತಿಮಬ್ಬೆಯ ಚಿಕ್ಕಪ್ಪ ಪುನ್ನಮಯ್ಯನು ಕಾವೇರಿ ನದಿಯ ತೀರದಲ್ಲಿ ಶತ್ರುಗಳಿಂದ ಹತನಾದನು, ಮಣ್ಮುಟಿಗೊಂಡನು. ಅತ್ತಿಮಬ್ಬೆಯ ಗಂಡನಾದ ನಾಗದೇವನೂ ಹಗೆಗಳ ಕೊಲೆಗೆ ಈಡಾಗಿ ರಣರಂಗದಲ್ಲೇ ಮುಮ್ಮುಳಿಗೊಂಡನು. ಇಷ್ಟಾಗಿಯೂ ಅವರ ಸಂಸಾರ ರಾಷ್ಟ್ರ ಪ್ರೇಮವನ್ನು ಜೀವಂತವಾಗಿ ಇರಿಸಿತ್ತು. ದೇಶಕ್ಕಾಗಿ ಹೋರಾಡುವ ರಾಷ್ಟ್ರಕಾಯಕ ಆ ಕುಟುಂಬದ ನೋಂಪಿಯಾಗಿತ್ತು. ಸ್ವಯಂ ಅತ್ತಿಮಬ್ಬೆಯೇ ರಣದಲ್ಲಿ ಎದುರಾದ ಉದ್ವೃತ್ತ ಶತ್ರುವನ್ನು ಸೈನ್ಯದೊಂದಿಗೆ ತಡೆದು ತನ್ನ ತಾಯ್ನಾಡಿನ ಗೌರವವನ್ನು ಕಾಪಾಡಿದಳು. ಹೀಗೆ ಯುದ್ಧಭೂಮಿಯಲ್ಲಿ ಶತ್ರು ಸೈನ್ಯವನ್ನು ಎದುರಿಸಿ ಗೆದ್ದ ಪ್ರಥಮ ಮಹಿಳೆ ಅತ್ತಿಮಬ್ಬೆ ಎಂಬುದು ಕನ್ನಡಿಗರು ಹೆಮ್ಮೆ ಪಡುವಂಥ ವಿಚಾರ. ಅದರೊಂದಿಗೇನೆ ಅತ್ತಿಮಬ್ಬೆಯು ಕನ್ನಡ ಭಾಷೆ ಸಾಹಿತ್ಯವನ್ನೂ ಪೋಷಿಸಿ, ಮಾತೃಭಾಷೆಯನ್ನು ರಕ್ಷಿಸಿದ ರಕ್ಷಾಮಣಿಯೂ ಆಗಿದ್ದಾಳೆ.

ಅತ್ತಿಮಬ್ಬೆಯ ತರುವಾಯ ಅವರ ವಂಶದವರು ಯಾರು ಬಂದರು, ಏನಾದರು ಎಂಬ ಪ್ರಶ್ನೆಗಳಿಗೆ ಅವಕಾಶವಿದೆ : ಆ ದಿಕ್ಕಿನಲ್ಲಿ ಉತ್ತರಿಸುವ ಪ್ರಯತ್ನದ ಫಲ ಈ ಸಂಪ್ರಬಂಧ.

ಅತ್ತಿಮಬ್ಬೆಯ ತೌರುಮನೆ ಮತ್ತು ಮಾವನ ಮನೆಯವರ ವಿವರಗಳು ವಿಫುಲವಾಗಿ ದೊರೆತಿವೆ. ಆಕೆಯದು ಕೌಂಡಿನ್ಯ ಗೋತ್ರದ ವಾಜಿವಂಶ. ಈ ವಾಜಿ ವಂಶದಲ್ಲಿ ಹಲವು ಮಹಾಪುರುಷರು ಆಗಿಹೋಗಿದ್ದಾರೆ. ವಾಜಿಕುಲದ ಜೈನ ಶಾಖೆಯವರಲ್ಲಿ ದಲ್ಲಪಯ್ಯ, ಅವನ ಮಗ ನಾಗದೇವ (ಅತ್ತಿಮಬ್ಬೆಯ ಗಂಡ), ಅವನ ಮಗನಾದ ಅಣ್ಣಿಗದೇವ (ಅತ್ತಿಮಬ್ಬೆಯ ಮಗ)- ಮೊದಲಾದವರು ಪ್ರಸಿದ್ಧರಿದ್ದಾರೆ. ಅತ್ತಿಮಬ್ಬೆ ನಾಗದೇವ ದಂಪತಿಗಳ ಹಿರಿಯ ಮಗ ಅಣ್ಣಿಗದೇವ. ಈತನ ವೈವಾಹಿಕ ವಿವರಗಳು ತಿಳಿಯವು. ಅಣ್ಣಿಗದೇವನ ಜೀವಿತ ವಿವರಗಳು ಇರುವ ರನ್ನನ ಅಜಿತಪುರಾಣ ಮತ್ತು ಲಕ್ಕುಂಡಿಯ ಶಾಸನಗಳಲ್ಲಿ ಸೂಕ್ಷ್ಮವಾಗಿ ಪರಿಶೀಲಿಸಿದರೆ, ಅಣ್ಣಿಗದೇವನು ಅಪುತ್ರಕ ಆಗಿದ್ದಂತೆ ತೋರುತ್ತದೆ.

ನಾಗದೇವನ ಕಿರಿಯ ಮಕ್ಕಳ ವಿಚಾರವಾಗಿ ಕಾವ್ಯ ಮತ್ತು ಶಾಸನಗಳು ವಹಿಸಿರುವ ಮೌನವನ್ನು ಸ್ಫೋಟಿಸಲು ಸಾಧ್ಯವಾಗಿಲ್ಲ. ಹಾಗೆಯೇ ನಾಗದೇವನ ತಮ್ಮಂದಿರ ವಿಚಾರಗಳೂ ದಾಖಲಾದಂತಿಲ್ಲ. ಲಕ್ಕುಂಡಿಯ ಶಾಸನದಲ್ಲಿ ನಾಗದೇವನನ್ನು ದಲ್ಲಪನ ಹಿರಿಯ ಮಗನೆಂದು ಸ್ಪಷ್ಟವಾಗಿ ಹೇಳಿದೆ. ಅಂದಮೇಲೆ ಕಿರಿಯ ಮಕ್ಕಳು ಇರಲೇಬೇಕು. ದಲ್ಲಪ, ನಾಗದೇವ, ಅಣ್ಣಿಗದೇವ ಲಕ್ಕುಂಡಿಯ ಮೂಲ ನಿವಾಸಿಗಳು. ಅಣ್ಣಿಗದೇವನಂತೂ ಲಕ್ಕುಂಡಿಯಲ್ಲೇ ನೆಲಸಿದ್ದು, ಲಕ್ಕುಂಡಿಯನ್ನು ಒಳಗೊಂಡ ಮಾಸವಾಡಿ - ೧೪೦ ಕಂಪಣ ಪ್ರದೇಶಕ್ಕೆ ಒಡೆಯನಾಗಿ ಬೀಳವೃತ್ತಿಯಿಂದ ಆಳುತ್ತಿದ್ದನು (ಸೌಇಇ. ೧೧-೧ ೫೨. ೧೦೦೭ : ಬಾ. ಕ. ಇ. ೨೮, ೧೯೨೬-೨೭).

ಅತ್ತಿಮಬ್ಬೆ ರನ್ನಕವಿಗೆ ಆಶ್ರಯನೀಡಿ ಅಜಿತ ಪುರಾಣ ಕಾವ್ಯವನ್ನು ಬರೆಸಿದ್ದೂ ೧೫೦೧ನೆಯ ಮತ್ತು ಕಟ್ಟಕಡೆಯ ಬಸದಿಯನ್ನು ಕಟ್ಟಿಸಿದ್ದೂ ಲಕ್ಕುಂಡಿಯಲ್ಲಿಯೇ. ಅತ್ತಿಮಬ್ಬೆಯು ಸಮಾಧಿ ವಿಧಿಯಿಂದ ಲಕ್ಕುಂಡಿಯಲ್ಲಿಯೇ ಮುಡಿಪಿರಬಹುದು. ಮತ್ತು ಕ್ರಿ.ಶ. ೧೦೧೮-೨೦ರ ಸುಮಾರಿನಲ್ಲಿ ಅತ್ತಿಮಬ್ಬೆ ಮುಡಿಪಿದ ಒಂದೆರಡು ವರ್ಷಗಳಲ್ಲಿ, ಪ್ರಾಯಃ ೧೦೨೨ರ ವೇಳೆಗೆ ಅಣ್ಣಿಗದೇವನೂ ಮುಡಿಪಿದಂತೆ ತೋರುತ್ತದೆ. ಏಕೆಂದರೆ ಚಾಳುಕ್ಯರ ಜಗದೇಕಮಲ್ಲ ಇಮ್ಮಡಿ ಜಯಸಿಂಹನ ಮಹಾಸಾಮಂತನಾದ ದಸರಸನು ಕ್ರಿ.ಶ. ೧೦೨೨ ರಿಂದ ಮಾಸವಾಡಿಯನ್ನು ಆಳುತ್ತಿದ್ದುದಕ್ಕೆ ಶಾಸನಗಳ ಆಧಾರವಿದೆ. [ಸೌ. ಇ.ಇ. ೧೧-೧.೫೮.೧೦೨೨, ನಾಗರಹಳ್ಳಿ (ಧಾರವಾಡ ಜಿ/ ಮುಂಡರಗಿತಾ.)]

ಅಣ್ಣಿಗದೇವನ ತರುವಾಯ ಆತನ ಚಿಕ್ಕಪ್ಪ ಮತ್ತು ಆತನ ತಮ್ಮಂದಿರ ಪರಂಪರೆ ಮುಂದುವರಿಯಿತು. ಆ ಪರಂಪರೆಯಲ್ಲಿ ಬಂದವರು ಹುಳ್ಳಮಯ್ಯ ಮತ್ತು ರೇಚಣ ದಂಡಾಧೀಶರು. ಚಾಳುಕ್ಯರ ಆಸರೆಯಲ್ಲಿಯೇ ಬೆಳೆದುಬಂದ ಈ ಕುಟುಂಬಗಳು ಲಕ್ಕುಂಡಿಯನ್ನು ಬಿಟ್ಟು, ಚಾಳುಕ್ಯರನ್ನು ತೊರೆದು, ದೂರದ ಊರುಗಳಿಗೆ ಬೇರೆ ಕಡೆಗೆ ಹೋಗಬೇಕಾದ ಅನಿವಾರ್ಯ ಬರಲು ಚರಿತ್ರೆಯಲ್ಲಿ ಸಂಭವಿಸಿದ ಘಟನಾವಳಿಯೇ ಕಾರಣ. ಆರನೆಯ ವಿಕ್ರಮಾದಿತ್ಯ ಚಕ್ರವರ್ತಿಯ ತರುವಾಯ ಬಂದ ಚಾಳುಕ್ಯ ಮಹಾರಾಜರು ಜೈನಪರವಾದ ಧೋರಣೆಯಿಂದ ಸರಿದು ಶೈವಪರವಾದ ನಿಲುಮೆಗೆ ಒಲವು ತೋರಿದರು. ಇದರ ಸೂಕ್ಷ್ಮ ಪರಿಣಾಮಗಳನ್ನು ಗ್ರಹಿಸಿದ ಯಕ್ಷರಾಜನು ಲಕ್ಕುಂಡಿಗೆ ವಿದಾಯ ಹೇಳಿದ ಮೊದಲಿಗನು [ಎ.ಕ. ೨, ೭೧(೬೪). ೧೧೬೩ ಪು. ೩೦ : ಅದೇ, ೪೭೬(೩೪೫)]. ವಾಜಿವಂಶದ ಯಕ್ಷರಾಜನು ಪ್ರಾಯಃ ದಲ್ಲಪನ ಕಿರಿಯ ಮಗನ, ಅಂದರೆ

ನಾಗದೇವನ ತಮ್ಮನ ಸಂತಾನಕ್ಕೆ ಸೇರಿದವನು. ಯಕ್ಷರಾಜನು ವಿಕ್ರಮಾದಿತ್ಯನ ಆಳ್ವಿಕೆಯ ಅಂತ್ಯದ ಅವಧಿಯಲ್ಲಿ ಲಕ್ಕುಂಡಿಯನ್ನು ಬಿಟ್ಟು ಹೊಯ್ಸಳರನ್ನೂ ದ್ವಾರಸಮುದ್ರವನ್ನೂ ಸೇರಿದನು. ಅವನ ಮಗನೇ ಹುಳ್ಳಭಂಡಾರಿ [(ಎಕ. ೭ (೧೯೭೯) ೬೩ (೪ ನಾಮಂ ೩೦) ೧೧೬೫. ಲಾಲನಕೆರೆ (ಮಂಡ್ಯ ಜಿ-ಜಿ/ನಾಮಂ. ತಾ) ಪು. ೪೩. ಸಾಲು : ೩೦-೩೧)]

ಯಕ್ಷರಾಜನೂ ಅವನ ಕುಟುಂಬವೂ ಲಕ್ಕುಂಡಿಯನ್ನು ತೊರೆದ ಮೇಲೂ ಆತನ ದಾಯಾದಿ ಕುಟುಂಬದವರಾದ ಅಣ್ಣಿಗದೇವನ ತಮ್ಮನ ಮನೆಯವರು ಲಕ್ಕುಂಡಿಯನ್ನು ಬಿಡಲಿಲ್ಲ. ಆ ಮನೆಯ ಮಗನಾಗಿ ಚಿಗುರಿದವನು ರೇಚಣ ದಂಡಾಧಿಪತಿ. ಅಣ್ಣಿಗದೇವನು ಆದಮೇಲೂ ವಾಜಿವಂಶದ ಬೇರುಗಳು ಲಕ್ಕುಂಡಿಯಲ್ಲಿದ್ದುವು. ತನ್ನ ಕುಲದವರ ಜಿನಧರ್ಮನಿಷ್ಠೆಯನ್ನು ಯಶಸ್ವಿಯಾಗಿ ಮುಂದುವರಿಸಿದವನು 'ವಸುಧೈಕ ಬಾಂಧವನಾದ ರೇಚಣನು. ಈತನು ಲಕ್ಕುಂಡಿಯಲ್ಲಿ 'ವಸುಧೈಕ ಬಾನ್ಧವ ಜಿನಾಲಯ'ವನ್ನು ಸುಮಾರು ಕ್ರಿ.ಶ. ೧೧೭೫ ರಲ್ಲಿ ಕಟ್ಟಿಸಿದನು. ಆ ವಸುಧೈಕ ಬಾನ್ಧವ ಜಿನಾಲಯದಲ್ಲಿ ತ್ರಿಭುವನ ತಿಲಕ ಶಾನ್ತಿನಾಥ ತೀರ್ಥಂಕರ ಸ್ವಾಮಿಯ ಬಿಂಬವು ಮೂಲನಾಯಕ ಪ್ರತಿಮೆಯಾಗಿತ್ತೆಂದು ಶಾಸನದಿಂದ ತಿಳಿದುಬರುತ್ತದೆ. ರೇಚಣನ ವಿಚಾರವಾಗಿ ಕೆಲವು ಮಾಹಿತಿಗಳು ಶಾಸನೋಕ್ತ ವಾಗಿವೆ. [ಎ.ಕ. ೭-೧, ೧೯೭, ೧೧೮೦, ಚಿಕ್ಕಮಾಗಡಿ (ಶಿವಮೊಗ್ಗ ಜಿಲ್ಲೆ/ ಶಿಕಾರಿಪುರ. ತಾ) ಪು. ೨೮೫-೯೧]

ಶ್ರೀವತ್ಸಂ ಸಿರಿಯಿಂ ಸಮೃದ್ಧನೆಸೆವಾ ನಾಗಾಂಬಿಕಾ ಸೂನು ಬೋ
ಗಾವಾಸಂ ವಸುಧೈಕ ಬಾನ್ಧವನುದಾರಂ ಸ್ತುತ್ಯ ಗೌರೀಸುಖ
ಶ್ರೀ ವಿಷ್ಣಂ ವೃಷಭಧ್ವಜ ಪ್ರಿಯತಮಂ ನಾರಾಯಣಾತ್ಮೋದ್ಭವಂ
ಭಾವಂ ಬೆತ್ತಿರೆ ಚೆಲ್ವನೆಂದೆನಿಸಿದಂ ಶ್ರೀರೇಚಿದಣ್ಡಾಧಿಪಂ॥

(ಸಾಲು ೩೬-೩೮)

ನಡೆದನೆಲಂ ರಣೋರ್ವ್ವರೆಯೊಳಂತನಿತುಂ ತನಗಜ್ಜಪಜ್ಜರಿಂ
ಪಡೆದ ನೆಲಂ ದಲೆಂಬಿನಸಿಗನ್ಯ ನೃಪಾಳರನಿಕ್ಕುದಂತೆ ಕಿ
ಟ್ಟಿಡೆ ಕಡುದೋಸವೆಂಬನ ಸಪಂ ಮಿಗೆ ದೇಗುಡೆ ಪತ್ತೆ ತಾನೆಬೆಂ
ಗುಡುವ ಪೊಲೆಂಬನೇನದಟನೋ ಕಲಿ ರೇಚಣ ದಣ್ಡನಾಯಕಂ॥

(ಸಾಲು ೩೨-೩೩)

ರೇಚಣನು ನಾಗಾಂಬಿಕೆಯ ಮಗ, ತಂದೆಯ ಹೆಸರು ನಾರಾಯಣ, ಮಡದಿಯ ಹೆಸರು ಗೌರಿ. ಹಗೆಗಳನ್ನು ಲೆಕ್ಕಿಸದೆ ಹೋರಾಡುವ ಯುದ್ಧೋತ್ಸಾಹ ಮತ್ತು ಯುದ್ಧ ಕಲೆಯನ್ನು ತನ್ನ ಅಜ್ಜ ಪಜ್ಜರ ಪರಂಪರೆಯಿಂದ ಪಡೆದಿದ್ದನು. ಅದರಿಂದ ರೇಚಣನು ತನ್ನ ತಾತ ಮುತ್ತಾತರ ಮನೆಯನ್ನು ಬಿಟ್ಟು ಹೋಗದೆ ವಾಜಿ ವಂಶದ ವಾಂಛೆಯಿಂದ ಲಕ್ಕುಂಡಿಯಲ್ಲಿ ನೆಲಸಿದ್ದನು. ಆದರೆ ಮಾರ್ಪಾಟಾಗುತ್ತಿರುವ ರಾಜಕೀಯ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡನು. ರೇಚಣನು ವಾಜಿ ವಂಶೋದ್ಭವನೆಂಬುದು ಶಾಸನ ಬದ್ಧವಾಗಿದೆ : (ಎ.ಕ. ೫, ಅರಸೀಕೆರೆ ೬೯. ೧೧೭೪)

ಕುಲಮಂ ಪೇಟಿಪೊಡೆ ವಾಜಿ ವಂಶ ತಿಲಕಂ ಸನ್ಮಂತ್ರ ಮಂತ್ರಿತ್ವದೊಳ್
ಪಲರುಂ ಜೀಯೆನೆ ದೇವಮಂತ್ರಿಯೊಲವಂ ಸಲ್ಲೀಲೆಯಿಂ ತೋಱುವಂ
ಚಲದಿಂದಾಂತರನಿಕ್ಕಿಮೆಟ್ಟಿ ಪಡೆವಂ ಸತ್ಕೀರ್ತಿಯಂ ಧಾತ್ರಿಯೊಳ್
ನಲವಿಂ ರೇಚಣ ಮಂತ್ರಿಯಾರ್ಗ್ಗಮಧಿಕಂ ಸಾಹಿತ್ಯ ವಿದ್ಯಾಧರಂ॥

ತನ್ನ ವಾಜಿವಂಶದ ಅಜ್ಜ ಮುತ್ತಜ್ಜರು ನೆತ್ತರು ಹರಿಸಿ ತಳಪಾಯವಾಗಿ ನಿಂತು ಕಟ್ಟಿದ ಚಾಳುಕ್ಯ ಸಾಮ್ರಾಜ್ಯವು ಸ್ವಧರ್ಮವಾದ ಜಿನಧರ್ಮಕ್ಕೆ ಮೊದಲಿನ ಅಕ್ಕರೆ, ಆದ್ಯತೆ, ಪ್ರಭುಶಕ್ತಿಯನ್ನು ಧಾರೆಯೆರೆಯುತ್ತಿಲ್ಲವೆಂಬುದನ್ನು ರೇಚಣನು ಸೂಕ್ಷ್ಮವಾಗಿ ಗ್ರಹಿಸಿದನು.

ರೇಚಣನು ಯಕ್ಷರಾಜನಂತೆ ತೌರೂರಿನ ಸೀಮೆಯನ್ನು ತೊರೆಯಲಿಲ್ಲ. ಅದರ ಬದಲಿಗೆ ತನ್ನ ಹಿರಿಯರು ದಲ್ಲಪಾದಿಗಳು ಉಪಯೋಗಿಸಿದ ರಾಜಕೀಯ ಕೌಶಲವನ್ನು ಬತ್ತಳಿಕೆಯಿಂದ ಹೊರತೆಗೆದನು. ದಲ್ಲಪನು ತೈಲಪನಿಗೆ ಹುರುದುಂಬಿಸಿ ರಾಷ್ಟ್ರಕೂಟರಿಗೆ ಪ್ರತಿಸ್ಪರ್ಧಿಯಾಗಿ ನಿಲ್ಲಿಸಿ ಗೆಲ್ಲಿಸಿದನು. ಚಾಳುಕ್ಯ ಸಾಮ್ರಾಜ್ಯದ ಉದಯಕ್ಕೆ ಕಾರಣನಾದನು. ಅದೇ ತೆರನಾಗಿ ಈಗ ದಲ್ಲಪನ ಅನಂತರ ಆರನೆಯ ತಲೆಮಾರಿಗೆ ಸೇರಿದ ರೇಚಣನು ರಾಜಕೀಯದ ದಾಳಗಳನ್ನು ಉರುಳಿಸಿದನು. ಮಹತ್ವಾಕಾಂಕ್ಷಿಯಾಗಿದ್ದು ಚಾಳುಕ್ಯ ಸಿಂಹಾಸನದ ಮೇಲೆ ಹದ್ದುಗಣ್ಣು ಬೀರುತ್ತಿದ ಬಿಜ್ಜಣವನ್ನು ಹುರಿದುಂಬಿಸಿದನು. ರೇಚಣ್ಣನ ಸಾಮರ್ಥ್ಯ ತನ್ನ ಬೆಂಬಲಕ್ಕೆ ದಕ್ಕಿದೊಡನೆ ಬಿಜ್ಜಳನು ಕಾರ್ಯೋನ್ಮುಖನಾಗಿ ರಾಜ ಗದ್ದುಗೆ ಹತ್ತಿ ಕುಳಿತನು (ಎ.ಕ. ೭-೧, ಶಿಕಾರಿಪುರ ೧೯೭, ೧೧೮೦, ಚಿಕ್ಕಮಾಗಡಿ):

> ಕ್ರಮದಿಂದಾ **ಬಿಜ್ಜಲೋರ್ವ್ವೀ ಪತಿಗೆ ಪಡೆದು ಸಪ್ತಾಂಗ ಸಂಪತ್ತಿಯಂ** ಮ
> ತ್ತಮದಂ ತಚ್ಚಕ್ರಿಯಿಂದತ್ತಲುಮೊದವಿದ ರಾಜಾವಳೀ ಲೀಲೆಗಂ ತಂ
> ದುಮಿದೇ ಸಪ್ತಾಂಗಮಂ ಕಾಣಿಸಿದನೆನೆ ಜಗಂ ಮಂತ್ರದಿಂದ ತಂತ್ರದಿಂವಿ
> ಕ್ರಮದಿಂ ಶ್ರೀಯಿಂ ಸದಾಚಾರದಿನೊಸೆದಂ ರೇಚಿದಣ್ಣಾಧಿನಾಥಂ॥
>
> **ಕಳಚುರ್ಯ್ಯ ಕ್ಷಿತಿಪಾಳ ರಾಜ್ಯಲತೆ ಪರ್ವ್ವಲ್ತನ್ನ ದೋಃಶಾಖೆಯಂ**
> ವಿಳಸನ್ಮಂದರ ಸಾನುಗಂ ವಿಬುಧ ಸೇವ್ಯಂ ವಿಸ್ತ್ರತ ಚ್ಛಾಯನ
> ಸ್ಖಳಿತೌದಾರ್ಯ್ಯ ವಿಳಾಸಭಾಸಿ ಸುಮನಸ್ಸಂಪೂರ್ಣ್ಣನುದ್ಯದ್ಯಸ:
> ಫಳದಿಂ ರೇಚಣ ದಣ್ಣನಾಥನೆಸೆದಂ ಲೋಕೈಕ ಕಲ್ಪದ್ರುಮಂ॥

ರೇಚಣನು (ರೇಚರಸ, ರೇಚವಿಭು, ರೇಚಿದಂಡನಾಥ) ಕಳಚುರ್ಯ್ಯರ ಅಹವಮಲ್ಲನ (೧೧೮೦-೮೩) ಮಹಾಪ್ರಧಾನನೂ ಬಾಹತ್ತರ ನಿಯೋಗಾಧಿಪತಿಯೂ ದಂಡಾಧಿನಾಥನೂ ಆಗಿದ್ದನೆಂಬುದನ್ನು ಮಾತ್ರ ವಿದ್ವಾಂಸರು ಗಮನಿಸಿದ್ದಾರೆ. ಆದರೆ ರೇಚಣು ಅದಕ್ಕೂ ಎರಡು ದಶಕಗಳಷ್ಟು ಮುಂಚಿನಿಂದಲೂ ಕಲಚುರಿ ಕುಲದ ಸಂವರ್ಧನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದನು. ಇಮ್ಮಡಿ ಬಿಜ್ಜಳನಿಗೆ (೧೧೬೦-೬೭) ಸಪ್ತಾಂಗ (ಸ್ವಾಮಿ, ಅಮಾತ್ಯ, ಜನಪದ, ದುರ್ಗ, ಕೋಶ, ಸೈನ್ಯ, ಮಿತ್ರ) ಸಂಪತ್ತಿಯನ್ನು (ಪರಾ) ಕ್ರಮದಿಂದ ಪಡೆದುಕೊಟ್ಟವನೇ ರೇಚಣ ದಂಡನಾಯಕ.

ರೇಚಣನು ಬಿಜ್ಜಳನನ್ನು ಕಲಚುರಿವಂಶ ಚಕ್ರವರ್ತಿಯೆನಿಸಿ ಸಿಂಹಾಸನದಲ್ಲಿ ಕೂಡಿಸಿದನು; ದಲ್ಲಪನು ತೈಲಪನನ್ನು ಕುಳ್ಳಿರಿಸಿದಂತೆ. ಚಾಳುಕ್ಯರ ರಾಜಧಾನಿಯಾದ ಕಲ್ಯಾಣವನ್ನೇ ತಮ್ಮ ರಾಜಧಾನಿಯಾಗಿ ಮುಂದುವರಿಸಲು ಬಿಜ್ಜಳನಿಗೆ ರೇಚಣನು ಸೂಚಿಸಿದನು; ತೈಲಪನಿಗೆ ರಾಷ್ಟ್ರಕೂಟರ ರಾಜಧಾನಿಯಾದ ಮಳಖೇಡವನ್ನೇ ಮುಂದುವರಿಸಲು ವಿವೇಕ ಬೃಹಸ್ಪತಿ ದಲ್ಲಪನು ಸೂಚಿಸಿದಂತೆ. ಬಿಜ್ಜಳನಾದಮೇಲೂ ಆ ಕಲಚುರ್ಯ ರಾಜ್ಯವನ್ನು (ಮತ್ತಂ ಅದಂ ತತ್ ಚಕ್ರಿಯಿಂದತ್ತಲುಂ) ಅನಂತರ

ಬಂದ ರಾಜರುಗಳ ಆಡಳಿತ ನಿರ್ವಹಣೆಗೂ (ಒದವಿದ ರಾಜಾವಳೀ ಲೀಲೆಗಂ) ರಾಜಾಡಳಿತದ ಏಳು ಅಂಗಗಳು ದೊರೆಯುವಂತೆ (ಸಪ್ತಾಂಗಮಂ ಕಾಣಿಸಿದನೆನೆ) ರೇಚಣನು ಶ್ರಮಿಸಿದನು; ಮತ್ತು ರಾಜರಿಗೆ ಇರಬೇಕಾದ ರಹಸ್ಯಾಲೋಚನೆ, ಉಪಾಯ, ಮತ್ತು ಪರಾಕ್ರಮ ಎಂಬ ಮೂರು ಬಗೆಯ ಶಕ್ತಿಗಳಿಂದ, ಸಂಪತ್ತು ಮತ್ತು ಸನ್ನಡತೆಯಿಂದ ರೇಚಣನೂ ಶೋಭಿಸಿದನು.

ಕಳಚುರ್ಯಕುಲದ ರಾಜರ ರಾಜ್ಯವೆಂಬ ಬಳ್ಳಿಯು (ಕ್ಷಿತಿಪಾಳ ರಾಜ್ಯ ಲತೆ) ಹಬ್ಬುವುದಕ್ಕೆ ರೇಚರಸನು ತನ್ನ ತೋಳುಗಳೆಂಬ ಕೊಂಬೆಗಳನ್ನು ಚಾಚಿದನು (ದೋಃ ಶಾಖೆಯಂ) - ಎಂಬ ಮಹತ್ವದ ಹೇಳಿಕೆಯನ್ನು ಶಾಸನ ಸುಂದರವಾಗಿ ದಾಖಲಿಸಿದೆ.

ಬಿಜ್ಜಳರಾಜನ ಮಗಂದಿರಾದ ವಜ್ರದೇವ, ಸೋವಿ(ಯಿ) ದೇವ (೧೧೬೭-೭೬), ಮೈಲುಗಿ - ದೇವ -ಮಲ್ಲಿಕಾರ್ಜುನ (೧೧೭೬), ಸಂಕ(ಗ) ಮ (೧೧೭೬-೮೦) ಮತ್ತು ಅಹವಮಲ್ಲ (೧೧೮೦-೮೩) ಸಿಂಘಣ (೧೧೮೪)-ಇವರೆಲ್ಲರ ರಾಜ್ಯಾಡಳಿತಕ್ಕೆ ರೇಚಣನು ಸಹಾಯಕ ಸೇನಾಪತಿಯಾಗಿದ್ದನು. ಸಂಕಮದೇವನಿಗೆ ಪ್ರಧಾನ ಚಕ್ರವರ್ತಿಯಪ್ಪ ಸಂಕಮದೇವನುಮಂ ತತ್ ಪ್ರಧಾನಪ್ಪ ವಸುಧೈಕಬಾಂಧವ ರೇಚಿದೇವನುಮಂ-ಎಂದು ಒಂದು ಶಾಸನದಲ್ಲಿದೆ [ದೇಸಾಯಿ, ಪಿ. ಬಿ. (ಸಂ), ಶಾಸನ ಪರಿಚಯ (ಕೊಪ್ಪಳ ಜಿಲ್ಲೆಯ ಶಾಸನಗಳು); ೧೯೫೪ : ನಂ. ೨೨, ೧೧೭೭. ಪು. ೨೨-೨೬]. ರೇಚವಿಭುವೇ ಪರೋಕ್ಷ ಪ್ರಭು ಎಂಬಂತೆ ಪ್ರಮುಖನಾಗಿದ್ದು ಕಳಚುರ್ಯ ಕ್ಷಿತಿಪಾಳರ ರಾಜ್ಯಲತೆ ದಾಂಗುಡಿಯಿಟ್ಟು ಪರ್ವಲು ಪ್ರೇರಕ ಶಕ್ತಿಯಾದನು. ಬಿಜ್ಜಳನ ಕಡೆಯ ಮಗನಾದ ಸಿಂಘಣನ ಕಾಲ ಮುಗಿದೊಡನೆ (೧೧೮೪) ರೇಚಣನು ಕಲಚುರಿಗಳ ಆಸ್ಥಾನ ತೊರೆಯಬೇಕಾಯಿತು.

ಕಳಚುರ್ಯರನ್ನು ಹೊಯ್ಸಳ ವೀರಬಲ್ಲಾಳನು (೧೧೭೩-೧೨೨೦) ಕ್ರಿ.ಶ. ೧೧೮೪ ರ ವೇಳೆಗೆ ಸಂಪೂರ್ಣವಾಗಿ ಸೋಲಿಸಿದನು. ರೇಚಣನು ಕೆಲವು ವರ್ಷಗಳವರೆಗೆ ಲೌಕಿಕ ಅಧಿಕಾರ ರಹಿತನಾಗಿದ್ದನು. ರಣರಂಗ ದರ್ಶನ ಬಿಟ್ಟು ಧರ್ಮ ಕ್ಷೇತ್ರಕ್ಕೆ ಅಭಿಮುಖನಾದನು. ಆದರೆ ರೇಚಣನ ಅನುಭವ ಭಂಡಾರದ ಸದುಪಯೋಗ ಆಗಬೇಕೆಂಬ ಕಾಂಕ್ಷೆಯಿಂದ, ಪ್ರಾಯ : ಈತನ ಬಂಧುವಾದ ಹುಳ್ಳ ಭಂಡಾರಿಯ ಸೂಚನೆಯನ್ನು ಅನುಸರಿಸಿ, ರೇಚಣನನ್ನು ಹೊಯ್ಸಳ ಸಾಮ್ರಾಜ್ಯದಲ್ಲಿ ಮಂತ್ರಿಯಾಗಿ ಶ್ರೀಕರಣಾಧಿಕಾರಿಯಾಗಿ ನೇಮಿಸಲಾಯಿತು. ಯಾವ ಹೊಯ್ಸಳರೊಡನೆ ಐದಾರು ವರ್ಷದ ಹಿಂದೆಯಷ್ಟೇ ಎದುರಾಳಿಯ ಪಡೆಯನಾಯಕನಾಗಿ ನಿಂತು ಹೋರಾಟ ಮಾಡಿದ್ದನೊ ಅದೇ ಹೊಯ್ಸಳರಲ್ಲಿಯೇ ಓಲಗಿಸಿ ಬಾಳುವಂತಾಯಿತು; ಇದರಿಂದ ರೇಚಣನಿಗೆ ತೇಜೋವಧೆ ಯೇನೂ ಆಗಲಿಲ್ಲ, ತಕ್ಕ ಸ್ಥಾನಮಾನಗಳು ಲಭ್ಯವಾದುವು. ಹೊಯ್ಸಳ ವೀರಬಲ್ಲಾಳನಲ್ಲಿ, ರೇಚಣನು ತನ್ನ ಆಯಸ್ಸಿನ ಉತ್ತರಾರ್ಧವನ್ನು ಕಳೆದನು. ಸು. ೧೧೮೮ರಿಂದ ೧೨೨೦ ರವರೆಗೆ, ವೀರ ಬಲ್ಲಾಳನ ಆಳ್ವಿಕೆ ಮುಗಿಯುವವರೆಗೆ ಹೊಯ್ಸಳ ರಾಜ್ಯಕ್ಕೆ ದುಡಿದನು.

ಕಳಚುರ್ಯರು ಸು. ೧೧೫೮ರಿಂದ ೧೧೮೪ರವರೆಗೆ, ಸುಮಾರು ೨೬ ವರ್ಷ ಆಳಿದರು. ಇಷ್ಟೂ ವರ್ಷ ಸಾದ್ಯಂತವಾಗಿ ಅದರ ಭಾಗವಾಗಿದ್ದವನು ರೇಚಣದಂಡಾಧಿಪತಿ. ಈ ಸಂಗತಿಯು ಅನುಮಾನಕ್ಕೆ ಎಡೆಯಿಲ್ಲದಷ್ಟು ಸುಸ್ಪಷ್ಟವಾಗಿ ಶಾಸನದಲ್ಲಿದೆ. ರೇಚಣನು ಕಳಚುರ್ಯರ, ಕಡೆಯ

ಬಲಿಷ್ಠ ರಾಜನಾದ, ಆಹವಮಲ್ಲನ ಕಾಲದಲ್ಲಿ ಮೂರು ಅಧಿಕಾರಗಳನ್ನು ಹೊಂದಿದ್ದನು. ಅಹವಮಲ್ಲನ ಮಹಾಪ್ರಧಾನನೂ ಬಾಹತ್ತರ ನಿಯೋಗಾಧಿಪತಿಯೂ ದಂಡಾಧಿನಾಥನೂ ಆಗಿದ್ದ ರೇಚಣನು ಅದೇ ಅವಧಿಯಲ್ಲಿ ನಾಗರಖಂಡಕ್ಕೆ ಅಧಿಪತಿಯಾಗಿ ಆಳುತ್ತಿದ್ದನು : (ಎ.ಕ. ೭-೧, ೧೯೭, ೧೧೮೦)

> ತರದಿಂ ದೇಶಂಗಳುಂ ಶ್ರೀ ಕಳಚುರಿಕುಳ ಚಕ್ರೇಶರಿಂ ಪೆತ್ತುದೀ ನಾ
> ಗರ ಖಣ್ಡಕ್ಕರ್ತ್ತಿವಲಟ್ಟಾ ನೃಪರೊಳ್ಪಡೆದಿಂಬಿಂದವಾಳ್ದಿರ್ಪ್ಪನಾ ರೇ
> ಚರಸಂ ತಾನೆಂದೊಡೇ ವಣ್ಣಿಪುದೊ ನಿಸದವೀದೇಶದೊಂದೊಳ್ಮೆಯಂ ಬಿ
> ತ್ತರದಿಂ ಪಂಕೇಜರೂಪಂ ಬನವಸೆಯದಱೊಳ್ ಶ್ರೀಯವೋಲಿರ್ಪ್ಪುದೆಂಬೆಂ॥
>
> (ಸಾಲು ೩೮-೩೯)

ಬನವಾಸಿ ದೇಶವು ವಿಸ್ತಾರವಾದ ತಾವರೆಹೂವಿನಂತಿದ್ದರೆ, ಅದರೊಳಗೆ ನಾಗರಖಂಡವು ಲಕ್ಷ್ಮಿಯ ಹಾಗಿದ್ದಿತು. ಈ ನಾಗರ ಖಂಡವನ್ನು ಕಳಚುರಿಕುಳದ ಚಕ್ರೇಶರು ವಶ ಪಡಿಸಿಕೊಂಡಿದ್ದ ಅವಧಿಯಲ್ಲಿ ಆ ಪ್ರದೇಶದ ಮೇಲ್ವಿಚಾರಣೆಯ ಹೊಣೆಯನ್ನು ಕಲಿ ರೇಚಣ ದಂಡನಾಯಕನಿಗೆ ವಹಿಸಲಾಗಿತ್ತು. ವಸುಧೈಕಬಾಂಧವ ಎಂಬ ಬಿರುದನ್ನು ರೇಚಣನಿಗೆ ಇತ್ತವರು ಕಳಚುರಿ ಚಕ್ರವರ್ತಿಗಳು ; ಕಳಚುರ್ಯ ಸಾಮ್ರಾಜ್ಯವೆಂಬ ವಸುಧೆಗೆ ಒಬ್ಬನೇ ಮಹಾವೀರನಾದ ಬಾಂಧವನೆನಿಸಿ ನೆಗಳುತ್ತಿದ್ದದರಿಂದಾಗಿ ಸಹಜವಾಗಿಯೇ ಈ ಪ್ರಶಸ್ತಿ ಪ್ರಾಪ್ತವಾಗಿದೆ. 'ವಸುಧೈಕ ಬಾಂಧವ' ಬಿರುದಾಂಕಿತನಾದ ರೇಚಣ ದಂಡಾಧೀಶ್ವರನಿಗೆ ನಾಗರ ಖಂಡಾಧಿಪತಿಯಾಗಿ ನೇಮಿಸಲು ಇದ್ದ ಇನ್ನೊಂದು ಪ್ರಬಲವಾದ ಕಾರಣ ಅದು ಆತನ ಜನ್ಮ ಸ್ಥಳವಾದ ಲಕ್ಕುಂಡಿಗೆ ಸಮೀಪದಲ್ಲಿ ಇದ್ದುದು.

ರೇಚಣನಿಗೆ ಆಪ್ತಮಂತ್ರಿಯಾಗಿದ್ದವನು ಬೊಪ್ಪ ಭೂಪ. ನಾಗರ ಖಂಡದ ಪರಿಸರವಷ್ಟೂ ಪ್ರಧಾನವಾಗಿ ಸವಣರ ಶಿಷ್ಯ ಸಂಪತ್ತಿನಿಂದ ಕೂಡಿತ್ತು. ನಾಳ್ಗಾವುಂಡ ನಾಗಾರ್ಜುನ, ನಾಳ್ಗಾವುಂಡಿ ಜಕ್ಕಿಯಬ್ಬೆ ಮೊದಲಾದವರು ಇಲ್ಲಿ ಸವಣರ ಅಹಿಂಸಾ ಸಂದೇಶದ ಕಾಳುಗಳನ್ನು ಬಿತ್ತಿ ಬೆಳೆ ತೆಗೆದಿದ್ದರು (ಎ.ಕ. ೮, ಸೊರಬ ೨೩೪, ೧೦೦೦, ಹಿರೇಚವುಟ ಶಿಜಿ/ಸೊರಬ ತಾ.)

ಅದರ ಕೊಂಡಿ ಹಿಡಿದು ಹೊರಟ ರೇಚಣನೂ ಬೊಪ್ಪನೂ ನಿಷ್ಠಾವಂತ ಜೈನರಾಗಿದ್ದರು. ಆಡಳಿತಾತ್ಮಕ ಗಂಟಿನೊಂದಿಗೆ ಧಾರ್ಮಿಕ ನಂಟೂ ಇತ್ತು. ಅಂಡುವರ ವಂಶದ ಬೊಪ್ಪನು ಚಿಕ್ಕಮಾಗಡಿ ಸಾಮಂತರ ಕುಟುಂಬದವನು; ಶಾಸನೋಕ್ತ ಆಧಾರಗಳಿವೆ.

ರೇಚಣನ ಆಪ್ತ ಮಂತ್ರಿಯಾದ ಬೊಪ್ಪನು ದಾನಿ, ವೀರ ಮತ್ತು ಉದಾತ್ತ ಜಿನಭಕ್ತ. ಬೊಪ್ಪನ ರಾಜಧಾನಿ ಬಾಂಧವಪುರ : ಅಲ್ಲಿ ಶಾಂತಿನಾಥ ಚೈತ್ಯಾಳಯವಿತ್ತು. ಅದರ ಸ್ಥಾನಾಚಾರ್ಯರು ಭಾನುಕೀರ್ತಿ ಸಿದ್ಧಾಂತರು ಮತ್ತು ಅವರ ಶಿಷ್ಯರಾದ ನಯಕೀರ್ತಿ ಬ್ರತಿನಾಯಕರು. ಸಾಮಂತ ಶಂಕರನು ಕ್ರಿ.ಶ. ೧೧೭೮ರಲ್ಲಿ ಮಾಗುಡಿಯಲ್ಲೊಂದು ಜಿನಗೃಹವನ್ನು ಮಾಡಿಸಿದನು. ಭುವನೈಕ ಮಂಡನವೆನಿಸಿದ ಆ ಜಿನಾಲಯಕ್ಕೆ ಮುನಿವರನಾದ ಪ್ರಸಿದ್ಧ ಭಾನುಕೀರ್ತಿಸಿದ್ಧಾಂತಿಯು ಉತ್ತಮ ತಳವೃತ್ತಿಯನ್ನಿತ್ತನು. ಅದೇ ವೇಳೆಗೆ ಸರಿಯಾಗಿ ಕಳಚುರ್ಯ ಚಕ್ರವರ್ತಿಯಾದ ಸಂಕಮದೇವ ಚಕ್ರಿಯು

(೧೧೭೬-೮೦) ಹೊಯ್ಸಳರ ಬಲ್ಲಾಳ ಭೂಪಾಳನನ್ನು ತನ್ನ ಪದಾಬ್ಜ ಸೇವೆಗೆ ತರಬೇಕೆಂದು ಶೌರ್ಯಾವಷ್ಟಂಬಂದಿಂದ ತನ್ನ ಸೈನ್ಯ ಮತ್ತು ದಂಡನಾಯಕರ ಸಮೇತ ನಡೆತಂದು ತಾಳಗುಂದ ನೆಲೆವೀಡಿನಲ್ಲಿ ಹಲವು ದಿವಸಗಳ ವರೆಗೆ ಬೀಡು ಬಿಟ್ಟಿದ್ದನು.

ಕಳಚುರ್ಯರ ಸಂಕಮದೇವನ ದಂಡಾಧಿಪತಿಗಳಲ್ಲಿಯೇ ಪ್ರಧಾನನಾದ ರೇಚಣ ದಂಡಾಧೀಶ್ವರನು ಸಹ ತನ್ನ ಚಕ್ರವರ್ತಿಯೊಂದಿಗೆ ತಾಳಗುಂದದಲ್ಲಿದ್ದನು. ಆ ಸಮಯದಲ್ಲಿ ಚಿಕ್ಕಮಾಗಡಿಯಲ್ಲಿ ಕಟ್ಟಿಸಲಾದ ಹೊಸಬಸದಿಯ ಜಿನೇಶ್ವರನ ಪದಾಭಿವಂದನೆಗೆಂದು ತಾಳಗುಂದದಿಂದ ರೇಚಣನೂ ಆಗಮಿಸಿದನು:

ಬನ್ದು ಜಿನೇಶ್ವರ ಪದಮಂ
ಬನ್ದಿಸಿ ಜಿನಮುನಿ ಪದಾಂಬುಜಕ್ಕೆಱಗಿ ಜಿನೋ
ನ್ಮನ್ದಿರಮಂ ನೋಡಿ ದೃಥಾ
ನನ್ದಂ ವಸುಧೈಕ ಬಾನ್ಧವಂ ಬಣ್ಣಿಸಿದಂ।। (ಅದೇ : ಸಾಲು ೯೪)

ಅಂತು ಪೊಗಳ್ದು ತ್ರಿಭೋಗಾ
ಭ್ಯಂತರವಾಗಿರ್ದ್ದ ತಳವೆಯಂ ಸರ್ವ್ವನಮ
ಶ್ಯಂ ತೇಜೋ ಸಾಮ್ಯ ಸಮೇ
ತಂ ತಜ್ಜಿನ ಪೂಜೆಗೆನ್ದು ಪರಿಕಲ್ಪಿಸಿದಂ।।

ರೇಚಣನೊಂದಿಗೆ ಬೊಪ್ಪಭೂಪನೂ, ಶಂಕರ ಸಾಮಂತನೂ ಬಂದರು. ಮಾಗುಡಿಯ ಬಸದಿಯಲ್ಲಿ ರೇಚಣನು ಪೂಜೆ, ಮುನಿವಂದನೆ ಮಾಡಿ, ನೂತನ ಜಿನಗೃಹವನ್ನು ಶ್ಲಾಘಿಸಿ, ಹೊನ್ನು ಮನೆ ಸಹಿತ ತೆರಿಗೆಗಳನ್ನು ಬಿಟ್ಟುಕೊಟ್ಟನು. ತಳವೆ ಎಂಬ ಗ್ರಾಮವನ್ನಿತ್ತನು.

ಮುಂದೆ ಮತ್ತೆ ಕ್ರಿ.ಶ. ೧೧೮೦ರಲ್ಲಿ, ಆಗ ಕಳಚುರ್ಯ ಮಹಾರಾಜನಾಗಿದ್ದ ಅಹವಮಲ್ಲನು ದಕ್ಷಿಣಕ್ಕೆ ಬಂದು, ಮೊದೆಗನೂರು ನೆಲೆವೀಡಿನಲ್ಲಿ ಬೀಡು ಬಿಟ್ಟಿದ್ದನು. ಆಹವಮಲ್ಲನಿಗೆ ಲಕ್ಷ್ಮಣ ಚಂದಣ ರೇಚಣ ಸೋವಣ ಚಾವಣ ಎಂಬ ಐವರ ಸಚಿವ ಸಂಪುಟವಿದ್ದಿತು. ಇವರಲ್ಲಿ ರೇಚಣನು ಮಹಾಪ್ರಧಾನನೂ ಬಾಹತ್ತರ ನಿಯೋಗಾಧಿಪತಿಯೂ ಆಗಿದ್ದನು (ಸಂಸ್ಕೃತ : ದ್ವಿಸಪ್ತತಿ, ಪ್ರಾಕೃತ : ಬಾಹತ್ತರ). ಬಾಹತ್ತರ ನಿಯೋಗವೆಂದರೆ ಅರಮನೆಯ ರಾಜರಾಣಿಯರಿಗೆ ಎಪ್ಪತ್ತೆರಡು ಬಗೆಯ ಸೇವೆ ಮಾಡುವವರ ಸಮೂಹ ; ಈ ಸೇನಾ ಸಮೂಹಕ್ಕೆ ಮುಖ್ಯಸ್ಥನಾಗಿ ನಿಯಮಿತನಾದ ಅಧಿಕಾರಿಯನ್ನು 'ಬಾಹತ್ತರ ನಿಯೋಗಾಧಿಪತಿ' ಎಂದು ಕರೆಯುತ್ತಾರೆ [ಎ.ಇ. ೧೫, ೮೦.೧೦೬೦ : ಸೌ.ಇ.. ೯-೧, ೩೧೭.೧೨೨೩, ಕೋಗಳಿ (ಬಳ್ಳಾರಿ ಜಿ/ಹಡಗಲಿ) ಪು. ೩೩೨]. ಮಹಾ ಪ್ರಚಣ್ಡ ದಣ್ಡ ನಾಯಕನಾದ ಈ ರೇಚಿದೇವರಸನು ಮಾಗುಂಡಿಯಲ್ಲಿನ ರತ್ನತ್ರಯ ಬಸದಿಯ ಆಚಾರ್ಯರಾದ ಭಾನುಕೀರ್ತಿ ಸಿದ್ಧಾಂತಿ ದೇವರನ್ನು ಮೊದೆಗನೂರಿಗೆ ಬರಮಾಡಿಕೊಂಡನು. ಸಮಧಿಗತ ಪಂಚಮಹಾಶಬ್ದನೂ ಮಹಾಮಂಡಳೇಶ್ವರನೂ ಬನವಾಸಿ ಪುರವರಾಧೀಶ್ವರನೂ ಪದ್ಮಾವತೀ ದೇವೀ ಲಬ್ಧವರ ಪ್ರಸಾದನೂ ಆದ ಬೊಪ್ಪದೇವನು ತ್ರಿಭೋಗಾಭ್ಯಂತರ ವಿಶುದ್ಧಿಯಿಂದ ಸರ್ವಬಾಧಾ ಪರಿಹಾರವಾಗಿ ಸರ್ವನಮಶ್ಯವಾಗಿ ಹಳ್ಳಿಯನ್ನೂ ತಳವೃತ್ತಿಯನ್ನೂ (ಬಾಡಂ ತಳವೆಯಂ)

ಈ ಮೊದಲೇ ಏರ್ಪಾಟು ಮಾಡಿದ್ದನು. ಅದನ್ನು ರೇಚಣನು ಕ್ರಿ.ಶ. ೧೧೮೦ರಲ್ಲಿ ಶುದ್ಧ ಪಂಚಮಿ ಬುಧವಾರದ ದಿವಸ, ರತ್ನತ್ರಯದೇವರ ಅಭಿಷೇಕಾದಿ ಅಂಗರಂಗ ಭೋಗಕ್ಕೂ ಋಷಿಯರ ಆಹಾರ ದಾನಕ್ಕೂ ವಿದ್ಯಾರ್ಥಿಗಳ ಸೌಕರ್ಯಕ್ಕೂ ಖಣ್ಡಸ್ಫುಟಿತ ಜೀರ್ಣೋದ್ಧಾರಕ್ಕೂ ಕೊಟ್ಟನು.

ಮೂಲಸಂಘ ಕ್ರಾನೂರ್ಗಣದ ತಿಂತ್ರಿಣ ಗಚ್ಛದ, ನುನ್ನವಂಶದ ಭಾನುಕೀರ್ತಿ ಸಿದ್ಧಾಂತದೇವರ ಪಾದ ತೊಳೆದು ರೇಚಣ ಮಹಾಪ್ರಧಾನನು ದಾನವನ್ನು ಪ್ರದಾನ ಮಾಡಿದನು ಮತ್ತು ಕಾವ್ಯ ಕಳಾದರ ಎನಿಪ ಮುರಾರಿ ಕೇಶವದೇವನಿಗೆ ಈ ಧರ್ಮ ಪ್ರತಿ ಪಾಲನೆಯ ಹೊಣೆಯನ್ನು ವಹಿಸಿದನು. ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನಲ್ಲಿ ಇರುವ ಚಿಕ್ಕಮಾಗಡಿ ಗ್ರಾಮದ ಚನ್ನಬಸವಣ್ಣನ ಗುಡಿಯು ಹಿಂದೆ ಜೈನರ ಬಸದಿಯಾಗಿತ್ತು. ಈ ದೇವಸ್ಥಾನದ ಮುಂದೆ ನೆಟ್ಟಿರುವ ದೊಡ್ಡ ಕಲ್ಲಿನ ಮೇಲೆ ಕೆತ್ತಲಾಗಿರುವ ಸುದೀರ್ಘವಾದ ಶಾಸನವು ಚಾರಿತ್ರಿಕ ಮಹತ್ತ್ವದ ಸಂಗತಿಗಳನ್ನು ಒಳಗೊಂಡಿದೆ. ಈ ಶಾಸನದ ಕೆಲವು ಮಹತ್ವಾಂಶಗಳನ್ನು ಹೀಗೆ ಕ್ರೋಢೀಕರಿಸಬಹುದು :

೧. ರೇಚಣನ ಬಗೆಗೆ ಸಿಗುವ ಅಪರೂಪದ ವಿವರಗಳು
೨. ಚಾಳುಕ್ಯ ಚಕ್ರವರ್ತಿಗಳ ರಾಜಾವಳಿ
೩. ಕಳಚುರ್ಯ ಚಕ್ರಿಗಳ ರಾಜಾವಳಿ; ಬಿಜ್ಜಳನ ತಮ್ಮ ಮೈಳುಗಿ ದೇವನ ವಿಚಾರ
೪. ಕಳಚುರ್ಯಕುಲ ಸ್ಥಾಪನೆಯಲ್ಲಿ ರೇಚಣ ದಂಡಾಧೀಶನ ವಿಶಿಷ್ಟ ಪಾತ್ರ
೫. ಸಂಕಮದೇವನು ಹೊಯ್ಸಳ ಬಲ್ಲಾಳನ ಮೇಲೆ ದಂಡೆತ್ತಿ ಬಂದು ತಾಳಗುಂದದಲ್ಲಿ ಹಲವು ಕಾಲ ತಂಗಿದ್ದುದು.
೬. ಕಲಚುರಿ ಕುಲದ ಸಂಕದೇವ ಚಕ್ರಿಯ ದಂಡಾಧೀಶ್ವರನಾದ ರೇಚಣನು ಮಾಗುಂಡಿ (ಮಾಗುಡಿ-ಮಾಗಡಿ-ಚಿಕ್ಕ ಮಾಗಡಿ)ಗೆ ಬಂದುದು
೭. ಚಿಕ್ಕ ಮಾಗಡಿ ಸಾಮಂತರ ವಂಶಾವಳಿ
೮. ಮಹಾಮಂಡಲೇಶ್ವರ ಬನವಾಸಿ ಪುರವರಾಧೀಶ್ವರ ಬೊಪ್ಪದೇವನ ವಿಚಾರ
೯. ಶಾನ್ತಿನಾಥ ಬಸದಿ ಮತ್ತು ರತ್ನತ್ರಯ ಜಿನಾಲಯ
೧೦. ಭಾನು ಕೀರ್ತಿ ಸಿದ್ಧಾಂತದೇವನ ಪರಿಚಯ; ನುನ್ನ ವಂಶದ ಉಲ್ಲೇಖ
೧೧. ಕ್ರಾನೂರ್ಗಣ ಗುರುಗಳು
೧೨. ವೃತ್ತ, ಕಂದ, ಗದ್ಯ ಮಿಶ್ರಿತ ಪುಟ್ಟ ಚಂಪೂ ಕಾವ್ಯವಾದ ಈ ಶಾಸನ ಕವಿಯ ಸೃಜನಶಕ್ತಿ ಮತ್ತು ಭಾಷಾಪ್ರೌಢಿಮೆಯ ಪರಿಚಯ. ಕನ್ನಡ ನಿಘಂಟಿನಲ್ಲಿ ಮುಖ್ಯ ಉಲ್ಲೇಖವಾಗಿ ಇನ್ನು ಮುಂದೆ ಹೊಸದಾಗಿ ಸೇರ್ಪಡೆಯಾಗಬೇಕಾದ ಅಪೂರ್ವ ಶಬ್ದಗಳ ಬಳಕೆಯಿದೆ. ನಡೆವೀಡು (ಪು. ೨೯೦. ಸಾಲು. ೯೩) ತೇಜೋಸಾಮ್ಯ (ಸಾಲು ೯೫) ತಳವೆ (ಸಾಲು ೧೦೨) ಎಂಬ ಶಬ್ದಗಳು ಈಗ ಅಚ್ಚಾಗಿರುವ ನಿಘಂಟಿನಲ್ಲಿ ಇಲ್ಲ. ಈ ಮೂರೂ ಶಬ್ದಗಳಿಗೆ ಕ್ರಮವಾಗಿ ಅರ್ಥ : **ನಡೆವೀಡು**= ರಾಜ ಸೈನ್ಯದ ಪ್ರಯಾಣ ಕಾಲದಲ್ಲಿ ಬಿಟ್ಟ ಬಿಡಾರ = ಉಪ್ಪಯಣ. **ತೇಜೋಸಾಮ್ಯ** = ಹೊನ್ನು ಮತ್ತು ಮನೆ ಸಹಿತವಾಗಿ ಕೊಟ್ಟದಾನ. **ತಳವೆ** = ತಳವೃತ್ತಿ.

ಮೇಲ್ಕಂಡ ಶಾಸನದಲ್ಲಿ ಎರಡು ಭಾಗಗಳಿವೆ ಎಂಬುದನ್ನೂ ಚರಿತ್ರಕಾರರು ಗಮನಿಸಿಲ್ಲ. ರೇಚಣನು ಕಳಚುರ್ಯರ ಆಹವಮಲ್ಲನಿಗೆ ಮಹಾಪ್ರಧಾನನೂ ಬಾಹತ್ತರ ನಿಯೋಗಾಧಿಪತಿಯೂ ಆಗಿದ್ದನೆಂಬುದು ಶಾಸನದ ಉತ್ತರಾರ್ಧ. ರೇಚಣನು ಸಹ ತನ್ನ ಪೂರ್ವಜರಂತೆ ಮಹಾಸಾಹಸಿ,

ಯುದ್ಧವೀರ ಮತ್ತು ನಿಷ್ಠಾವಂತನಾದ ಜಿನಭಕ್ತ. ಅವನ ರಣಶೌರ್ಯವನ್ನೂ ಔದಾರ್ಯ್ಯದ ಅಧಿಕ್ಯವನ್ನೂ ಶಾಸನಗಳು ಕೊಂಡಾಡಿವೆ:

ಅನುಪಮದಾನ ಶೌರ್ಯ ರಣಶೌರ್ಯ್ಯಮನೇವೊಗಳ್ವೆಪ್ಪೆ ನಾಂ ದ್ವಿಪ
ಜ್ಜನಪರೊಳೊಂದುವಚ್ಚರಸಿಯರ್ಗ್ಗೆ ಸಯಂಬರವಾಗೆ ಸಗ್ಗದೊಳ್
ಜನಿಯಿಸಿತಿಂದ್ರ ಭೂರುಹಕ್ಕೆ ತೋರಣದಿಂ ತವಿಲ್ಗೆಂಬುದೆಯ್ದೆ ಮೇ
ದಿನಿ ವಸುಧೈಕಬಾಂಧವಚಮೂಪತಿ ರೇಚಣನೇಂ ಕೃತಾರ್ತ್ಥನೋ॥ (ಸಾಲು ೩೩-೩೫)

ಪೆಡೆವಣೆ ಶೇಷನೊಳ್ಸರಸಿಜೋದರನಂಬುಧಿಯೊಳ್ ಮೃಗಾಂಕವಂ
ದುಡುಪನೊಳದ್ರಿ ಜಾರ್ದ್ದವಭವಾಂಗದೊಳಾ ಮದಲುಬ್ಧ ಭೃಂಗ ವಿ
ರ್ಪ್ಪಡೆ ದಿಗಿಭಂಗಳೊಲು ಕುಜುಪು ದೋರ್ಪ್ಪಿನೆಗಂ ಜಗಮಂಮುಸುಂಕಿತಿಂ
ಗಡಲೆನೆ ಕೀರ್ತ್ತಿ ರೇಚನೆಸೆದಂ ಜಸದಿಂ ವಸುಧೈಕ ಬಾಂಧವಂ॥ (ಸಾಲು ೩೫-೩೬)

ಕ್ರಿ.ಶ. ೧೧೮೦ ರ ವೇಳೆಗೆ ಆಗಲೇ ರೇಚಣನ ಧರ್ಮ ಪರಾಯಣತೆ, ಸಾಹಿತ್ಯಾಸಕ್ತಿ, ಲೇಖಕರನ್ನು ಪ್ರೋತ್ಸಾಹಿಸುವ ಗುಣ-ಇವು ಕೀರ್ತಿಸಲ್ಪಟ್ಟಿದುವು:

ಜಿನನಂ ತಂನ ಮನಂ ಮನಃ ಪ್ರಕೃತಿಯಂ ಸದ್ವಿದ್ಯೆಯ್ಯೆ ವಿದ್ಯೆಯಂ
ತನುವಂತಾತನುವಂ ವಿಳಾಸವದನುದ್ಯಲ್ಲಕ್ಷ್ಮಿಯಾ ಲಕ್ಷ್ಮಿಯಂ
ವಿನುತೌದಾರ್ಯವದಂ ಜಗಂ ಜಗಮನಿಂಬೀ ಕೀರ್ತ್ತಿಯಾಲಿಂಗಿಸ
ಲ್ಜನ ವಂದ್ಯಂ ವಿಭು ರೇಚಿರಾಜನೆಸೆದಂ ಚಾರಿತ್ರ ರತ್ನಾಕರಂ॥ (ಸಾಲು ೩೦-೩೧)

ಕವಿಸತಿ ಬಲ್ಮೆಗೋಲಗಿಸೆ ಕಾಮಿನಿಯರ್ಸ್ಸೊಬಗಿಂಗೆ ಸೋಲೆ ಬೇ
ಳ್ಪವರ್ಗ್ಗಳುದಾರ ವೃತ್ತಿಗೊಲವಿಂ ನರಶಾಸನವಾಗೆ ರಾಜ್ಯಮು
ದ್ಭವದಿನೊಡರ್ಚ್ಚೆ ಜೈನ ಸಮಯಾಂಬುಧಿ ಕೀರ್ತ್ತಿ ಸುಧಾಂಶುವಿಂ ಪೊದ
ಳ್ಕೆವಡೆಯೆ ರೇಚಿರಾಜನೆಸೆದಂ ಜಸದಿಂ ವಸುಧೈಕ ಬಾನ್ಧವಂ॥ (ಸಾಲು ೩೧-೩೨)

ಜೈನಶಾಸನಗಳನ್ನು ಜಿನಸ್ತುತಿಯಿಂದ ಆರಂಭ ಮಾಡುವುದು ವಾಡಿಕೆ. ಆದರೆ ಒಂದು ಸರ್ವಾಂಗ ಜೈನ ಶಾಸನವನ್ನು ಆರಂಭಿಸುವುದಕ್ಕೆ ಮೊದಲು, ರೇಚಣನನ್ನು ಒಂದು ವೃತ್ತ ಪದ್ಯದಲ್ಲಿ ಸ್ತುತಿ ಮಾಡಿ ಅನಂತರ 'ಶ್ರೀಮತ್ ಪರಮಗಂಭೀರ...' ಎಂಬ ವಾಡಿಕೆಯ ಶ್ಲೋಕದಿಂದ ಮುಂದುವರಿಸಲಾಗಿದೆ. ಇದು ರೇಚಣನು ತನ್ನ ಸಮಕಾಲೀನ ಸಮಾಜದ ಮೇಲೆ ಬೀರಿದ್ದ ಗಾಢವಾದ ಪ್ರಭಾವವನ್ನು ಪ್ರತಿಫಲಿಸುತ್ತದೆ. ಆ ಚಂಪಕಮಾಲೆಯ ವೃತ್ತ ಪದ್ಯ ಹೀಗಿದೆ : (ಎಕ. ೭-೧, ಶಿಕಾರಿಪುರ ೨೨೫, ೧೨೦೩-೦೪, ಚಿಕ್ಕಮಾಗಡಿ, ಪು. ೩೦೧)

ಕವಿನಿವಹ ಸ್ತುತಂ ನೆಗಳ್ದ ರೇಚ ಚಮೂಪತಿಯಿಂ ಬಳಿಕ್ಕಮಾ
ಭುವನದೊಳಿಂತನಂತ ಜಿನಧರ್ಮ್ಮವನುದ್ಧರಿಪರ್ದ್ಧರೇಚನಂ
ಸುವಿದಿತಮಾಗೆ ಬಾಂಧವ ಪುರಾಧಿಪ ಶಾನ್ತಿ ಜಿನೇಶ ತೀರ್ತ್ಥಮಂ
ಕವಡೆಯ ಬೊಪ್ಪನುದ್ಧರಿಸಿದಂ ಯದುವಲ್ಲಭ ರಾಜ್ಯ ಭೂಷಣಂ॥ (ಸಾಲು ೧-೧೪)

ಈ ಪದ್ಯದಲ್ಲಿರುವ ಮತ್ತೊಂದು ಸ್ವಾರಸ್ಯವೆಂದರೆ, ರೇಚಣ ಚಮೂಪತಿಯ ತರುವಾಯ ಜಿನಧರ್ಮವನ್ನು ಉದ್ಧರಿಸಿದ ಕವಡೆಯ ಬೊಪ್ಪನನ್ನು 'ಅರ್ಧರೇಚ'ನೆಂದು ಕರೆಯಲಾಗಿದೆ. ರನ್ನಕವಿ, ಅಜಿತಪುರಾಣದಲ್ಲಿ ಒಂದು ಪದ್ಯದಲ್ಲಿ, ತನ್ನ ಕಾಲದವರೆಗೆ ಜಿನಧರ್ಮವನ್ನು ಪ್ರಭಾವಶಾಲಿಯನ್ನಾಗಿ

ಮಾಡಿದ ಬೂತುಗ, ಮರುಳ, ಮಾರಸಿಂಹ, ಶಂಕರಗಂಡ, ಚಾವುಂಡರಾಯ ಮತ್ತು ಎಲ್ಲರಿಗೂ ಮಿಗಿಲಾಗಿ ಅತ್ತಿ ಮಬ್ಬೆ-ಇವರನ್ನು ಸ್ಮರಿಸಿದ್ದಾನೆ. ಅದೇ ಮಾದರಿಯಲ್ಲಿ ಅತ್ತಿಮಬ್ಬೆಯ ಮನೆತನದ ಕುಡಿಯಾದ ರೇಚಣನೂ ಕೂಡ ಧರ್ಮ ಪರಾಯಣನಾಗಿದ್ದು ಅನ್ಯರಿಗೆ ಆದರ್ಶ ಪ್ರಾಯನಾಗಿದ್ದನು.

ತನ್ನ ಮನೆತನವು ದೇವಾಲಯಗಳ ನಿರ್ಮಾಣಕ್ಕೆ ಸಹಾಯಮಾಡಿದಂತೆ ಸಾಹಿತ್ಯ ಸೃಷ್ಟಿಗೂ ನೆರವಾಗಿತ್ತೆಂಬುದನ್ನು ಅರಿತ ರೇಚಣನು, ಈ ಎರಡೂ ಕ್ಷೇತ್ರಗಳಲ್ಲಿ ತಾನೂ ಕ್ರಿಯಾಶೀಲನಾದನು. ಆಚಣ್ಣನೆಂಬ ಕವಿಗೆ ಆಶ್ರಯ ನೀಡಿದನು. ಆ ವೇಳೆಗಾಗಲೆ ಇಬ್ಬರು ಪ್ರಯತ್ನಿಸಿದರೂ ಮುಗಿಯದೆ, ಮುಂದುವರಿಯದೆ, ಅರೆಬರೆಯಾಗಿಯೇ ಉಳಿದಿದ್ದ ವರ್ಧಮಾನಪುರಾಣವನ್ನು ಸಮಗ್ರವಾಗಿ ಪುನರ್ ರಚಿಸಿ ಪೂರೈಸುವಂತೆ ಆಚಣ್ಣ ಕವಿಗೆ ರೇಚಣನು ಆದೇಶಿಸಿದನು. ತನ್ನ ಆಶ್ರಯದಾತನ ಅಪೇಕ್ಷೆಯಂತೆ ರೇಚಣನು ವರ್ಧಮಾನ ಪುರಾಣವನ್ನು ಬರೆದು ಪೂರೈಸಿದನು. ಹದಿನಾರು ಆಶ್ವಾಸಗಳ ಈ ಚಂಪೂ ಕಾವ್ಯದಲ್ಲಿ ಆಚಣ್ಣ ಕವಿಯು ರೇಚಣ್ಣನನ್ನು, ಕಾವ್ಯದ ಆರಂಭ ಹಾಗೂ ಅಂತ್ಯದ ಆಶ್ವಾಸಗಳಲ್ಲಿ, ಮುಕ್ತ ಕಂಠದಿಂದ ಶ್ಲಾಘಿಸಿದ್ದಾನೆ. ಅಲ್ಲದೆ ವರ್ಧಮಾನ ಜಿನರನ್ನೂ ರೇಚರಸನನ್ನೂ ಅಭೇದಗೊಳಿಸಿ ಸ್ತುತಿಸಿದ್ದಾನೆ ; ಪ್ರತಿ ಆಶ್ವಾಸಾಂತ ಗದ್ಯದಲ್ಲಿಯೂ ಈ ಸೂಚನೆ ಸ್ಪಷ್ಟವಾಗಿ ವ್ಯಕ್ತ ಪಟ್ಟಿದೆ. ಕಾವ್ಯವನ್ನು- "ವಸುಧೈಕ ಬಾಂಧವ ಶ್ರೀ ವರ್ಧಮಾನ ಪುರಾಣ" ಎಂದು ಆಚಣ್ಣ ಕವಿ ನಾಮಕರಣ ಮಾಡಿದ್ದಾನೆ.

ಅಚಣ್ಣ ಕವಿ ರೇಚಣ-ದಂಡೇಶನನ್ನು ಪರಿಚಯಿಸಿದ್ದರೂ, ರೇಚಣನು ಈ ಕಾವ್ಯರಚನೆಯ ಅವಧಿಯಲ್ಲಿ ಯಾವ ರಾಜನ ಆಸರೆಯಲ್ಲಿ ಇದ್ದನೆಂಬುದನ್ನು ಸ್ಪಷ್ಟವಾಗಿ ನಮೂದಿಸಿಲ್ಲ. ವಸುಧೈಕ ಬಾಂಧವನಾದ ದಂಡನಾಥ ರೇಚರಸನ ಬಂಧುರ ಭಕ್ತಿಗೆ ಮೆಚ್ಚಿ, ಈ ಹಿಂದೆ ತನ್ನ (ಆಚಣ್ಣ ಕವಿಯ) ತಂದೆ ಕೇಶಿರಾಜನೂ (ಕೇಶಿಮಯ್ಯ ದಂಡ ನಾಯಕ) ಮತ್ತು ತೆಕ್ಕಣ-ಚಾಮಣರೂ ಸೇರಿ ಆರಂಭಿಸಿದ್ದ, ವರ್ಧಮಾನ ಪುರಾಣವನ್ನು ತಾನು (ಆಚಿವಿಭು) ಪೂರೈಸಿದುದಾಗಿ ಅಚಣ್ಣನು ನಿವೇದಿಸಿಕೊಂಡಿದ್ದಾನೆ. ಕಾವ್ಯದ ಒಳಹೊರಗಿನ ಸುಳಿವು ಸೂಚನೆಗಳ ಎಳೆಗಳನ್ನು ಹಿಡಿದು ಕೂಡಿಸುವುದರ ಮೂಲಕ, ಇದರ ರಚನೆಯ ಕಾಲವನ್ನು ಈಗಾಗಲೇ ವಿದ್ವಾಂಸರು ಸರಿಯಾಗಿಯೇ ಗುರುತಿಸಿರುತ್ತಾರೆ. ಆಚಣ್ಣನು ಕ್ರಿ.ಶ. ೧೧೯೦ರಲ್ಲಿ ವರ್ಧಮಾನ ಪುರಾಣವನ್ನು ಬರೆದು ಪೂರೈಸಿದ ಎಂಬುದನ್ನು ಅನುಮೋದಿಸಲು ಆತನು ರೇಚಣನನ್ನು ಪರಿಚಯಿಸಿರುವ ಕೆಳಕಂಡ ಪದ್ಯ ಸಹಾಯಕವಾಗಿದೆ:

ಶ್ರೀಕರಣಾಗ್ರಗಣ್ಯನಭಿಮಾನಿ ಜಿನೇಂದ್ರ ಮತಾಬ್ದ ಭಾನು ವು
ಣ್ಯಾಕರನರ್ಥಿ ಕಲ್ಪತರು ಭೋಗ ಪುರಂದರನಂಗಜೋಪಮಂ
ಭೀಕರ ವೈರಿ ವಾರಣ ವಿದಾಯರಣ ಕೇಸರಿ ಸತ್ಕಳಾಘ್ಯನ
ಸ್ತೋಕ ಯಶೋರ್ಥಿ ರೇಚವಿಭು ರಂಜಿಸಿದಂ ವಸುಧೈಕಬಾಂಧವಂ।। (೧-೨೨)

ಕಳಚುರಿ ಚಕ್ರವರ್ತಿಗಳಲ್ಲಿ ರೇಚಣನು ಸೇನಾನಿ, ಮಹಾಪ್ರಧಾನಿ, ಬಾಹತ್ತರ ನಿಯೋಗಿ ಆಗಿದ್ದನು. ಕಳಚುರಿಗಳ ಆಳ್ವಿಕೆಯು ೧೧೮೪-೮೫ರಲ್ಲಿ ಅಂತ್ಯವಾಯಿತು. ಅದಾದ ಕೆಲವು ವರ್ಷ ರೇಚಣನು ನಿರಧಿಕಾರಿಯಾಗಿದ್ದನು. ಕ್ರಿ.ಶ. ೧೧೮೮ರ ವೇಳೆಗೆ ರೇಚಣನು ಹೊಯ್ಸಳ ಬಲ್ಲಾಳನಲ್ಲಿ ಶ್ರೀಕರಣನಾಗಿಯೂ ಮಂತ್ರಿಯಾಗಿಯೂ ಸೇರಿದ್ದನು. ಅದರಿಂದ ಈ ಕಾವ್ಯ ರಚನೆಯ ಕಾಲವು ೧೧೯೦ ಎಂಬುದು ಸಮಂಜಸವಾಗಿದೆ.

ವರ್ಧಮಾನಪುರಾಣವನ್ನೇ ಬರೆಸಲು ಒಂದು ವಿಶಿಷ್ಟವಾದ ಐತಿಹಾಸಿಕ ಕಾರಣವಿದೆ. ಈ ಕಾವ್ಯ ರಚನೆ ಆರಂಭವಾದದ್ದು ಕೇಶಿಮಯ್ಯನಿಂದ. ಕೇಶಿಮಯ್ಯನು ರೇಚಣನ ಆಪ್ತನೂ, ಧರ್ಮಬಂಧುವೂ ಆಗಿದ್ದುದಲ್ಲದೆ, ರೇಚಣನೊಂದಿಗೆ ಕಳಚುರ್ಯ್ಯ ಆಹವಮಲ್ಲನಲ್ಲಿ ದಂಡನಾಯಕನಾಗಿದ್ದನು, ಬನವಸೆನಾಡಿನ ಒಡೆಯ ನಾಗಿದ್ದನು. (ಎ.ಕ. ೭-೧. ಶಿಕಾರಿಪುರ ೧೧೯) ಕೇಶವರಾಜ (ಕೇಶಿಮಯ್ಯ)ನ ಹಿರಿಯ ಮಗನೇ ಕವಿ ಆಚಣ; ಕಿರಿಯಮಗನಾದ ಶಂಖನು ಪುಲಿಗೆಜೆಗೆ ಒಡೆಯಲಾಗಿದ್ದನು. ಕೇಶಿಮಯ್ಯ (ಕೇಶಿರಾಜ)ನು ಬನವಾಸಿಯನ್ನು ಆಳುತ್ತಿದ್ದಾಗ ನರಸಿಂಹ ನಾಯಕ, ತಿಕ್ಕರಾಜ, ಚಾಮಯ್ಯ, ಬಾಚಯ್ಯ, ಸೋವಿದೇವ, ದಾಸಿರಾಜ ಎಂಬುವರು ಸಚಿವರಾಗಿದ್ದರು. ಕೇಶವರಾಜನು (ಕೇಶಿಮಯ್ಯ) ತನ್ನ ಸಚಿವರಲ್ಲಿ ಇಬ್ಬರಾದ ತಿಕ್ಕಣ (ತಿಕ್ಕರಾಜ), ಚಾವಣ (ಚಾಮಯ್ಯ) ಇವರ ಸಹಾಯದಿಂದ ವರ್ಧಮಾನ ಪುರಾಣವನ್ನು ಆರಂಭಿಸಿದ್ದನು. ತನ್ನ ಸಹೋದ್ಯೋಗಿ ಕೇಶವರಾಜನು ಆರಂಭಿಸಿ, ನಿಂತು ಹೋಗಿದ್ದ ಕಾವ್ಯವನ್ನು ಆತನ ಮಗನಿಂದಲೇ ಪೂರೈಸಿಸಿದ ರೇಚಣನ ಮುನ್ನೋಟ ಮತ್ತು ಔಚಿತ್ಯ ಪ್ರಜ್ಞೆ ಶ್ಲಾಘ್ಯವಾದ್ದು (ಅದೇ. ಶಿಕಾರಿಪುರ. ೧೨೩).

ಹೊಯ್ಸಳ ವೀರಬಲ್ಲಾಳನಲ್ಲಿ ಮಹಾಮಂತ್ರಿಯಾಗಿ, ರಾಜ್ಯದ ಆಯವ್ಯಯವನ್ನು ನೋಡಿಕೊಳ್ಳುವ ಶ್ರೀಕರಣಾಧಿಕಾರಿಯಾಗಿ ಸೇರಿದ ರೇಚಣನು ಅರಸೀಕೆರೆಯಲ್ಲಿ ಸಹಸ್ರಕೂಟ ಜಿನಾಲಯವನ್ನು ಕಟ್ಟಿಸಿದನು [ಎಕ. ೫. ೬೯. ಅರಸೀಕೆರೆ (ಹಾಸನ ಜಿ)]. ಆ ಬಸದಿಗೆ ಬಲ್ಲಾಳ ರಾಯನ ಅನುಮತಿಯ ಮೇರೆಗೆ ದಾನಗಳನ್ನು ನೀಡಿದನು. ಈ ಸಹಸ್ರಕೂಟ ಗೃಹ ನಿರ್ಮಾಣ ಹನ್ನೆರಡು ವರ್ಷಗಳ ವರೆಗೆ ನಡೆಯಿತು. ಕೊಲ್ಲಾಪುರದ ಮಾಘಣಂದಿ ಸಿದ್ಧಾಂತಿಯ ಶಿಷ್ಯ ಶುಭಚಂದ್ರ ತ್ರೈವಿದ್ಯರ ಶಿಷ್ಯರಾದ ಸಾಗರಣಂದಿ ಸಿದ್ಧಾಂತಿ ದೇವರು ರೇಚಣನ ಗುರುಗಳು. ಅವರು ಸಹಸ್ರಕೂಟ ಜಿನಾಲಯ ನಿರ್ಮಾಣ ಕಾರ್ಯವು ಪೂರೈಸುವವರೆಗೆ ಜೋಳದಕೂಳು ಮತ್ತು ಎಣ್ಣೆಯ ಹೊರತಾಗಿ ಬೇರೆ ಆಹಾರವನ್ನು ತೆಗೆದುಕೊಳ್ಳಲಿಲ್ಲ. ಸಾಗರಣಂದಿ ಸಿದ್ಧಾಂತಿಯು ಆಸ್ಥೆಯಿಂದ ಮುಂದೆ ನಿಂತು ರೇಚಣದಂಡೇಶನಿಂದ ಸಹಸ್ರರೂಟ ಜಿನಾಲಯವನ್ನು ಮಾಡಿಸಿದರು, ಪರಿಪೂರ್ಣ ವ್ರತರಾದರು. (ಅದೇ : ಸಾಲು ೧-೪) ವಸುಧೈಕ ಬಾಂಧವ ರೇಚಣನೂ, ಆತನ ಮಡದಿ ಗೌರಾದೇವಿಯೂ ತಮ್ಮ ನೋಂಪಿಯ ಉದ್ಯಾಪನೆ ನಿಮಿತ್ತವಾಗಿ ಸಹಸ್ರಕೂಟ ಜಿನಾಲಯದ ಪ್ರತಿಷ್ಠಾಪನೆ ಕಾರ್ಯವನ್ನು ಧಾರಾ ಪೂರ್ವಕವಾಗಿ ಮಾಡಿಸಿಕೊಟ್ಟರು. [ಎ.ಕ. ೧೫, ಅರಸೀಕೆರೆ ೧೯೭. ಅತೇದಿ. ಶಾಸನ. ಪು. ೨೨]

ಕೊಲ್ಲಾಪುರದ ಮಾಘಣಂದಿ ಸಿದ್ಧಾಂತಿಯ ಕಾಲ ತಿಳಿದಿದೆ. ಅವರು ಇದ್ದ ಕಾಲದ ನಡುಗಾಲ ಕ್ರಿ.ಶ. ೧೧೦೦ [ಎ.ಕ. ೨, ೭೧(೬೪) ೧೧೬೩. ಪು. ೨೬-೨೮]. ಅವರು ತೇರದಾಳದ ಗೊಂಕ-ಜಿನಾಲಯದ ಪ್ರತಿಷ್ಠಾಪನೆಗೆ ೧೧೨೫ ರಲ್ಲಿ ಆಗಮಿಸಿದ್ದರು. [ಇ.ಆ.೧೪, ಪು. ೧೪ ೧೧೨೫ ತೇರದಾಳ (ಬಿಜಾಪುರ ಜಿ./ ಜಮಖಂಡಿ ತಾ.) : ಎ.ಇ. ೧೯, ಪುಟ 3 l5, ೧೧೩೫] ಮಾಘಣಂದಿ ಸಿದ್ಧಾಂತಿಯ ಶಿಷ್ಯ ಶುಭಚಂದ್ರ ತ್ರೈವಿದ್ಯರ ಕಾಲವೂ ೧೧೨೫ ರಿಂದ ೧೧೫೦ ಎಂದು ಗೊತ್ತಿದೆ. ಎ.ಕ. ೨. ಆರೇಳು ಶಾಸನಗಳಲ್ಲಿ ಇದರ ಪರಿಚಯವಿದೆ). ಶುಭಚಂದ್ರ ತ್ರೈವಿದ್ಯರ ಶಿಷ್ಯರಾದ ಈ ಸಾಗರಣಂದಿ ಸಿದ್ಧಾಂತಿ ದೇವರ ಕಾಲವನ್ನು ಕ್ರಿ.ಶ. ೧೧೮೦ ಎಂದು ಪರಿಗಣಿಸಬಹುದು. ಇವರನ್ನು ಇಮ್ಮಡಿ ಸಾಗರಣಂದಿ ಸಿದ್ಧಾಂತಿ ಮುನಿಯೆನ್ನ ಬೇಕಾಗುತ್ತದೆ. ಏಕೆಂದರೆ ಇವರಿಗಿಂತ ನೂರು ವರ್ಷದ ಹಿಂದೆ ಇನ್ನೊಬ್ಬ ಸಾಗರನಂದಿ ಸಿದ್ಧಾಂತಿ ಮುನಿಯೂ

ಶಾಸನೋಕ್ತರಾಗಿದ್ದಾರೆ. [ಎ.ಕ. ೭ (೧೯೭೯) ನಾಮಂ ೬೪. ೧೧೪೫ ಯಲ್ಲಾದಹಳ್ಳಿ (ಮಂಡ್ಯ ಜಿ./ ನಾಮಂ. ತಾ] ವಸುಧೈಕಬಾಂಧವ ರೇಚಣನು ಶ್ರವಣಬೆಳಗೊಳದ ಚಿಕ್ಕಬೆಟ್ಟದ ಪಕ್ಕದಲ್ಲಿರುವ ಜಿನನಾಥಪುರದಲ್ಲಿಯೂ ಜಿನಾಗಾರವನ್ನು ಮಾಡಿಸಿದ ವಿಚಾರವನ್ನು ಒಂದು ಶಾಸನ ದಾಖಲಿಸಿದೆ : ಶ್ರೀ ರೇಚಣಾ ಧಂಣಾಯಕಾ ಮಾಡಿಸಿವಾ ಬಸದಿ (ಎ.ಕ. ೨., ೫೨೮.೧೨ ಶ.ಕು. ೩೨೫) ಆ ಬಸದಿಯು ಕೊಲ್ಲಾಪುರದ ಸಾವನ್ತನ ಬಸದಿಯ ಪ್ರತಿಬದ್ಧವಾಗಿದ್ದಿತು. ಇಲ್ಲಿ ಶಾಂತಿನಾಥ ದೇವರ ಪ್ರತಿಷ್ಠೆಯನ್ನು ಮಾಡಿ, ಶ್ರೀಕರಣದ ರೇಚಿಮಯ್ಯ ದಣ್ಡನಾಯಕನು, ಅದನ್ನು ಸಾಗರಣಂದಿ ಸಿದ್ಧಾಂತಿ ದೇವರಿಗೆ ಕೊಟ್ಟನು. [ಎ.ಕ. ೨, ೫೨೬ (೩೮೦) ೧೩ನೆಯ ಶತಮಾನ ಜಿನನಾಥಪುರ. ಪು. ೩೨೫].

ರೇಚಣನ ಜೀವಿತದ ಅವಧಿಯನ್ನು ಸ್ಥೂಲವಾಗಿ ಹೀಗೆ ಸೂಚಿಸಬಹುದು : ಜನನ ಕ್ರಿ. ಶ. ೧೧೩೫ ; ಬಿಜ್ಜಳನ ಸೈನ್ಯಕ್ಕೆ ಸೇರ್ಪಡೆ ೧೧೫೭ ; ರಾಯಮುರಾರಿ ಸೋವಿದೇವನ ದಂಡಾಧೀಶ ೧೧೬೮; ಮೈಲುಗಿದೇವ ಮಲ್ಲಿಕಾರ್ಜುನನ ದಂಡಾಧಿಪತಿ ೧೧೭೬; ಸಂಕಮನ ಸೇನಾಪತಿ ೧೧೭೭-೮೦; ಅಹವಮಲ್ಲನ ಮಹಾಪ್ರಧಾನಿ-ಚಮೂಪತಿ-ಬಾಹತ್ತರ ನಿಯೋಗಾಧಿಪತಿ ೧೧೮೦-೮೩; ಸಿಂಘಣನಲ್ಲಿ ಇದ್ದುದು ಖಚಿತವಾಗಿ ತಿಳಿಯದು; ಹೊಯ್ಸಳರ ಬಲ್ಲಾಳನಲ್ಲಿ ೧೧೮೮-೧೨೧೮. ದೀರ್ಘಕಾಲ ಬದುಕಿದ ರೇಚಮನು ಸುಮಾರು ೧೨೨೫ರಲ್ಲಿ ನಿಧನನಾದಂತೆ ತೋರುತ್ತದೆ. ರೇಚಣನಿಗೆ ಇದ್ದ ಪ್ರಶಸ್ತಿಗಳು : ಅಂಗಜೋಪಮ, ಆರ್ಥಿಕ ಕಲ್ಪತರು, ಜಿನಮತಾಬ್ಜಭಾನು, ಭೀಕರ ವೈರಿ ವಿದಾರಣ ಕೇಸರಿ, ಚಾರಿತ್ರ ರತ್ನಾಕರ, ಲೋಕೈಕ ಕಳ್ಪದ್ರುಮ, ಭೋಗ ಪುರಂದರ, ಮಿಕ್ಕಸುದಾನಿ, ವಸುಧೈಕ ಬಾಂಧವ, ಸತ್ಕಳಾಢ್ಯ ಮುಂತಾದ ಬಿರುದು ಬಾವಲಿಗಳಿಂದ ಪುರಸ್ಕೃತನಾಗಿದ್ದನು.

ರೇಚಣನ ಜೀವನದ ಸಾಧನೆಯಿರುವುದು ಹನ್ನೆರಡನೆಯ ಶತಮಾನದ ಉತ್ತರಾರ್ಧ ಮತ್ತು ಹದಿಮೂರನೆಯ ಶತಮಾನದ ಆರಂಭದ ಎರಡು ದಶಕಗಳಲ್ಲಿ. ಲಕ್ಕುಂಡಿ ಮತ್ತು ಅರಸೀಕೆರೆಯಲ್ಲಿ ದೇವಾಲಯಗಳನ್ನು ಕಟ್ಟಿಸಿದ್ದು, ಆಚಣ್ಣಕವಿಗೆ ಆಸರೆಯಾಗಿ ನಿಂತು ಚಂಪೂಕಾವ್ಯವನ್ನು ಬರೆಸಿದ್ದು - ಇವು ರೇಚಣನು ಎಸಗಿದ ಮುಖ್ಯ ಸಾಂಸ್ಕೃತಿಕ ಸಾಧನೆಗಳು. ಇವು ಆತನ ಧಾರ್ಮಿಕ ಪ್ರವೃತ್ತಿ ಮತ್ತು ಸಾಹಿತ್ಯದಲ್ಲಿ ಇದ್ದ ಆಸಕ್ತಿಯನ್ನು ಬಿಂಬಿಸುತ್ತವೆ. ಆದರೆ ರೇಚಣನು ಕಳಚುರ್ಯ ಸಾಮ್ರಾಜ್ಯದ ಉಗಮ-ಸಂವರ್ಧನೆಗೂ ಕಾರಣ ಪುರುಷನೆಂಬುದು ಚರಿತ್ರಕಾರರಿಗೆ ಮಹತ್ವದ ಸಾಧನೆ. ತನ್ನ ವಂಶ ಪಾರಂಪರ್ಯವಾಗಿ ದಲ್ಲಪನ ಕಾಲದಿಂದಲೂ ಸಂಚಿತವಾಗಿ ಬಂದಿದ್ದ ರಾಜ್ಯ ಶಾಸ್ತ್ರ ಪ್ರವೀಣತೆ, ಯುದ್ಧ ನೈಪುಣ್ಯಗಳನ್ನು ಧಾರೆಯೆರೆದು ಕಳಚುರ್ಯ ರಾಜ್ಯಲಕ್ಷ್ಮಿಯನ್ನು ಎರಡು ದಶಕಗಳ ವರೆಗೆ ಪೊರೆದನು. ಹೀಗಾಗಿ ಕರ್ನಾಟಕದ ರಾಜಕೀಯ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ರೇಚಣ ಚಮೂಪನು ಘನತರವಾದ ವ್ಯಕ್ತಿತ್ವದಿಂದ ಎದ್ದು ಕಾಣುತ್ತಾನೆ.

[KI. VI. 27 ಹಿರೇಕೆರೂರು. ಚಿನ್ನ ಮುಳುಗುಂದ ಕ್ರಿ.ಶ. ೧೧೪೨: ಒಬ್ಬ ರೇಚಣನುಚಾಳುಕ್ಯ ಜಗದೇಕಮಲ್ಲನ ಮಹಾಪ್ರಧಾನ, ಕರಿಯರಸ ಪಟ್ಟ ಸಾಹಣಿ ಸಭಾಧ್ಯಕ್ಷ ದಂಡನಾಯಕನೂ ಆಗಿದ್ದು ೧೧೪೩ರಲ್ಲಿ ಬನವಾಸಿಯನ್ನು ಆಳಿದನು.]

೧೬

ಗಂಗರ ಪ್ರಾಚೀನ ಬಸದಿಗಳು : ಅವಲೋಕನ

[ಜಿನಾಲಯಂ+ಅವು+ಇಲ್ಲದವು+ಎಲ್ಲಿಯುಂ+ಇಲ್ಲ
ಊರೆನಲ್ ನಾಡೆ ವಿರಾಜಿಸಲು [ಎಕ. ೭-೧ (ರೈಸ್)
ಶಿಕಾರಿಪುರ ೩೧೭. ಸುಮಾರು ಕ್ರಿ.ಶ. ೧೨೦೫. ಗೊಗ್ಗ ಗ್ರಾಮ.
ಪು. ೩೫೭, ಸಾಲು : ೨೨-೨೩]

೧. ಪಶ್ಚಿಮ ಗಂಗರು ತಮ್ಮ ರಾಜಧರ್ಮವನ್ನಾಗಿ ಜೈನಧರ್ಮವನ್ನು ಬಹುವಾಗಿ ಪಾಲಿಸಿದರು; ಎಲ್ಲ ರಾಜರಂತೆ ಅನ್ಯಧರ್ಮಗಳನ್ನೂ ಗೌರವಿಸಿದರು. ಗಂಗರು ದಾನಧರ್ಮ ಮಾಡಿದ ಪ್ರಮಾಣವನ್ನು, ಉಪಲಬ್ಧ ತಾಮ್ರಪಟ ಮತ್ತು ಶಿಲಾಶಾಸನಗಳ ಆಧಾರದಿಂದ ನೋಡಿದರೆ ಉದ್ದಕ್ಕೂ ಬ್ರಾಹ್ಮಣರಿಗೆ ಅಧಿಕಲಾಭ ದೊರೆತಿರುವುದು ಕಂಡು ಬರುತ್ತದೆ. ವೈಯಕ್ತಿಕ ದಾನಗಳನ್ನು, ರಾಜರು ಸಾಮಂತರು ಮಾಂಡಲಿಕ-ಶ್ರೀಮಂತರು, ಕೊಟ್ಟಿರುವುದು ಬ್ರಾಹ್ಮಣರಿಗೇನೆ. ಇದು ಸಹಜ ಹಾಗೂ ನಿರೀಕ್ಷಿತ. ದಾನಗಳನ್ನು ಸ್ವೀಕರಿಸುವವರು ಬ್ರಾಹ್ಮಣರು ಹಾಗೂ ಅವರಿಗೆ ದಾನಕೊಡುವುದು ಕ್ಷತ್ರಿಯರು. ಇದು ಒಂದು ಶಿಷ್ಟ ವಿಶಿಷ್ಟ ಪದ್ಧತಿಯಾಗಿ ಪೂರ್ವಕಾಲ ದಿಂದಲೂ ವಾಡಿಕೆಯಲ್ಲಿದೆ. ಗಂಗರ ಆಳ್ವಿಕೆಯೂ ಈ ನಿಯಮಕ್ಕೆ ಅಪವಾದವಾಗಿಲ್ಲ.

೧.೧. ಬ್ರಾಹ್ಮಣರಿಗೆ (ಶೈವ, ವೈಷ್ಣವ) ವ್ಯಕ್ತಿಗತ ದಾನಗಳನ್ನು ಅಧಿಕ ಪ್ರಮಾಣದಲ್ಲಿ ಗಂಗರು ಕೊಟ್ಟಿದ್ದರೂ ಅವರು ಕಟ್ಟಿಸಿದ ದೇವಾಲಯಗಳ ಪ್ರಮಾಣವನ್ನು ತೌಲನಿಕವಾಗಿ ಪರಾಮರ್ಶಿಸಬೇಕು. ಅಲ್ಲದೆ ಅವರ ಒಟ್ಟು ಧೋರಣೆ, ತಲ್ಲೀನತೆಯ ಮನೋಧರ್ಮ ಇವನ್ನೂ ಪರಿಶೀಲಿಸಬೇಕು. ಈ ಹಿನ್ನೆಲೆಯಿಂದ ಅಧ್ಯಯನ ಸಾಮಗ್ರಿಯನ್ನು ಒಂದೆಡೆಗೆ ಸಂಚಯಿಸಿಯೇ ವಿಶ್ಲೇಷಿಸಬೇಕಾಗುತ್ತದೆ. ಪ್ರಸ್ತುತ ಸಂಲೇಖನದಲ್ಲಿ ಗಂಗರ ಶಾಸನಗಳಲ್ಲಿ

ಜೈನ ಬಸದಿಗಳ ಸಂಬಂಧವಾದ ಸಾಮಗ್ರಿಯತ್ತ ಒಂದು ಸ್ಥೂಲ ಪಕ್ಷಿನೋಟ ಹರಿಸಿದ್ದೇನೆ.

೧.೧.೧. ಜೈನ ದೇವಾಲಯಗಳನ್ನು ಗಂಗರ ಶಾಸನಗಳಲ್ಲಿ ಅರ್ಹದಾಯತನ, ಚೇದಿಯ, ಚೈತ್ಯ, ಚೈತ್ಯಾಲಯ, ಜಿನಭವನ, ಜಿನಾಲಯ, (ತೀರ್ಥದ) ಬಸದಿ, ವಸದಿ-ಎಂಬ ಹೆಸರುಗಳಿಂದ ನಿರ್ದೇಶಿಸಲಾಗಿದೆ. ಗಂಗರ ಶಾಸನಗಳಲ್ಲಿ ಬರುವ ಬಸದಿಗಳು, ಜೈನಗುರುಗಳು, ಗಣ-ಗಚ್ಛಗಳು, ದಾನಿಗಳು, ಬಸದಿಗಳು ಇದ್ದ ಊರುಗಳು, ಬಸದಿಗಳಿಗೆ ದತ್ತಿಯಿತ್ತ ಹೊಲ-ನೆಲ, ಊರು, ಎಡೆಗಳು-ಇವೆಲ್ಲದರ ಅಧ್ಯಯನ ಪಿಎಚ್.ಡಿ ಅಥವಾ ಎಂ. ಫಿಲ್ ಪ್ರಬಂಧಕ್ಕೆ ತಕ್ಕವಸ್ತು. ಈ ಸಂಲೇಖನದಲ್ಲಿ ಅಂತಹ ವಿಸ್ತಾರವಾದ ಅಧ್ಯಯನಕ್ಕೆ ದಾರಿ ತೆರೆಯುವ ಒಂದು ಹಾಸು ಇದೆ; ಉಪಲಬ್ಧ ಶಾಸನ ಸಾಮಗ್ರಿಯನ್ನು ಸಂಕ್ಷೇಪಿಸಿ ಹರಳುಗೊಳಿಸಲಾಗಿದೆ.

೧.೨.೧. ಈ ಸಂಲೇಖನದಲ್ಲಿ ಜೈನ ಆಚಾರ್ಯರು, ಗಣ-ಗಚ್ಛ ಇತ್ಯಾದಿಗಳ ವಿವರಕ್ಕೆ ತೊಡಗಿಲ್ಲ; ಕೇವಲ ಬಸದಿಗಳ ಉಲ್ಲೇಖಗಳನ್ನು ಪ್ರಸ್ತಾಪಿಸಿ ಶಾಸನಗಳ ಆಕರವನ್ನು ಸೂಚಿಸಲಾಗುವುದು.

೨. ಗಂಗರು ಬಸದಿಗಳನ್ನು ಮೊದಲು ಮರದಲ್ಲಿಯೂ [ತಮ್ಮ ಗಂಗಾನ್ವಯದವರ್ಪ್ಪಡಿಸಲಿಸುತ್ತ ಮರವೆಸನಾಗಿ ಮಾಡಿಸಿ MAR. 1923. 113. 10 ನೆಯ ಶತಮಾನ. ಪುಟ. 114-15; IWG : 1984 : No. 150: 10 ಶ. : p. 469 ಸಾಲು : ೨೩] ಆಮೇಲೆ ಇಟ್ಟಿಗೆಯಲ್ಲೂ, ಅನಂತರ ಕಲ್ಲಿನಲ್ಲೂ ಕಟ್ಟಿಸಿದರು. ಮರದಲ್ಲಿ ಮಾಡಿಸಿದ ಬಸದಿಗಳಲ್ಲಿ ಕೆಲವನ್ನು ಮತ್ತೆ ಕಲ್ಲಿನಲ್ಲಿ ಕಟ್ಟಿಸಿದ ಉಲ್ಲೇಖವೂ ಶಾಸನದಲ್ಲಿದೆ (ಎಕ. ೭-೧. ಶಿವಮೊಗ್ಗ ೪. ೧೧೧೨). ಗಂಗರು ೪-೫ ನೆಯ ಶತಮಾನದಿಂದ ಮೊದಲುಗೊಂಡು ಕಟ್ಟಿಸಿದ ಬಸದಿಗಳು ಶಾಸನೋಕ್ತವಾಗಿವೆ; ಆದರೆ ಆ ಪ್ರಾಚೀನ ಬಸದಿಗಳೊಂದೂ ಉಳಿದುಬಂದಿಲ್ಲ.

೨.೧. (ಅರೆ)ತಿಪ್ಪೂರು, ನೊಣಮಂಗಲ, ವಿಜಯಮಂಗಲಂ (ತಮಿಳುನಾಡು/ ಪೆರಿಯಾರ್‌ಜಿ.) ಶ್ರವಣಬೆಳಗೊಳ, ತಲಕಾಡು ಮುಂತಾದ ಸ್ಥಳಗಳಲ್ಲಿ ಗಂಗರು ಕಟ್ಟಿಸಿದ್ದು ಇಟ್ಟಿಗೆಯ ಬಸದಿಗಳೆಂದು ಖಚಿತವಾಗಿ ತಿಳಿದು ಬಂದಿದೆ. (Sharma, I.K. : Brick Temples of Western Gangas, *'Srinidhi* - Perspectives in Indian Archaeology, Art and culture : 1983 : 67-83]. ಆದರೆ ಆ ಇಟ್ಟಿಗೆ ಬಸದಿಗಳೂ ನಾಶವಾಗಿವೆ.

ಗಂಗರು ತಮ್ಮ ಕುಲಗುರು ಸಿಂಹಣಂದಿ ಆಚಾರ್ಯರ ಆದೇಶಾನುಸಾರ ರಾಜ್ಯಕಟ್ಟಿದರು. ವಿಜಯಮಂಗಲವು ಜೈನ ವೈಯಾಕರಣಿ ಪವನಂದಿ, ನನ್ನೂಲ್ ಲೇಖಕ, ಹುಟ್ಟಿದ ಊರು. ಕೊಂಗುಣಿವರ್ಮನು (ಸು. ೩೫೦-೭೦) ಶಿವಮೊಗ್ಗ ಸಮೀಪ ಮಂಡಲಿಸಾಸಿರ ರಾಜ್ಯವನ್ನು ಸ್ಥಾಪಿಸಿದನು, ಮಂಡಲಿಯ ಗುಡ್ಡದ ಮೇಲೆ ಮರದ ಚೈತ್ಯಾಲಯವನ್ನು ಮಾಡಿಸಿದನು. ಇದೇ ಅತ್ಯಂತ ಪ್ರಾಚೀನತಮ ಹಾಗೂ ಪ್ರಥಮ ಗಂಗರ ಬಸದಿ (ಮೈ.ಆ.ರಿ. ೧೯೧೨. ಪು. ೩೦, ಪ್ಯಾರಾ ೭೦;ರೈಸ್ ಬಿ. ಎಲ್: ಮೈಸೂರು ಗ್ಯಾಸಿಟಿಯರ್, ಸಂ.

೧, ೧೮೯೭, ಪು. ೩೧೧; ಎ.ಕ. ೭-೧ (೧೯೦೨) ಶಿವಮೊಗ್ಗ. ೪. ೧೧೨೨ ಪು. ೧೦-೧೫). ಇದನ್ನು ಉತ್ತರೋತ್ತರವಾಗಿ ೧೦-೧೧-೧೨ ನೆಯ ಶತಮಾನಗಳಲ್ಲಿ ಕಲ್ಲಿನಲ್ಲಿ ಕಟ್ಟಿಸಿ ಪುನರ್ಭರಣಗೊಳಿಸಲಾಯಿತು.

೪. ಮುಮ್ಮಡಿ ಮಾಧವವರ್ಮನು (೪೮೦-೯೫) ತನ್ನ ರಾಜಗುರು ವೀರದೇವನ ಉಪದೇಶಾನುಸಾರ, ಮುದುಕೊತ್ತೂರ ವಿಷಯದ ಪೆರ್ಬೊಟಿಲಲ್ಲಿದ್ದ ಮೂಲಸಂಘದ ಅರ್ಹದಾಯತನಕ್ಕೆ ಮಹಾತಟಾಕ (ದೊಡ್ಡಕೆರೆಯ) ಕೆಳಗೆ ಹನ್ನೆರಡು ಖಂಡುಗ ಬೀಜ ಬಿತ್ತುವಷ್ಟು ಹೊಲ ತೋಟ, ಕುಮಾರಪುರ ಗ್ರಾಮ- ಇವನ್ನು ದತ್ತಿಯಾಗಿತ್ತನು [ಎಕ. ೧೦ (ಬಿ. ಎಲ್. ಆರ್) ಮಾಲೂರು. ೭೩, ೫ ಶ.ಪು. ೨೦೮; IWG : ೧೯೮೪ : ನಂ. ೧೦: ೩೪-೩೬]. ಪೆರ್ಬೊಟಿಲು (ದೊಡ್ಡಪಟ್ಟಣ) ಹೆಬ್ಬಾಳ ಊರಲ್ಲಿದ್ದ ಈ ಬಸದಿಯನ್ನು ನಾಲ್ಕನೆಯ ಶತಮಾನದಲ್ಲಿಯೇ ಕಟ್ಟಿರಬಹುದು.

೫. ಅವಿನೀತನು (ಸು. ಕ್ರಿ.ಶ. ೪೬೯-೫೨೯) ತನ್ನ ಶ್ರೇಯೋಭಿವೃದ್ಧಿಗಾಗಿ ಉರನೂರ ಅರ್ಹದಾಯತನಕ್ಕೆ ಕೊರಿಕುನ್ದ ವಿಷಯದ ವೆನ್ನೆಲ್ಕರನಿ ಹಳ್ಳಿಯನ್ನಿತ್ತನು. ನೊಣಮಂಗಲ ಉರನೂರು ಹತ್ತಿರದ ಹಳ್ಳಿಗಳು. ಉರನೂರ ಬಸದಿಯನ್ನು ಮೂಲಸಂಘದ ಚಂದ್ರನಂದಿ ಎಂಬ ಆಚಾರ್ಯನ ಶಿಷ್ಯರು, ನಾಲ್ಕನೆಯ ಶತಮಾನದ ಸುಮಾರಿಗೆ ಮಾಡಿಸಿದ್ದರು. ಅಲ್ಲದೆ ಇದೇ ಉರನೂರಲ್ಲಿ ಚನ್ದಿಅಡಿಗಳು ಕಟ್ಟಿಸಿದ ಇನ್ನೊಂದು ಜಿನಾಲಯವಿತ್ತು, ಅದಕ್ಕೆ ಅವನೀತನು ೧/೪ ಕರ್ಷಪಣ ಭಾಗದ ದಾನಕೊಟ್ಟನು. ಇಲ್ಲಿ (ನೊಣಮಂಗಲ) ಅಯ್ದು ಲೋಹದ ಜೈನ ಮೂರ್ತಿಗಳೂ ಗಂಟೆಗಳೂ ದೀಪಕಂಬಗಳೂ ಒಂದು ಹರಿವಾಣ ಮತ್ತು ಒಂದು ಶಿಖರಾಲಂಕಾರ ಕಳಶ,-ಇಷ್ಟಲ್ಲದೆ, 'ಪೆಟ್ಮುಡಿ' ಎಂದು ಬಿಡಿಸಿರುವ ಒಂದು ಶಂಖ ಸಿಕ್ಕಿವೆ. ಈ ಬಸದಿಯು ಮುಮ್ಮಡಿ ಮಾಧವನ (೪೩೦-೬೬) ಬಸದಿಯಾಗಿದ್ದು, ಅವನೀತನೂ ಈ ಬಸದಿಗೆ ನಡೆದುಕೊಂಡನು. [ಎ.ಕ. ೧೦ (೧೯೦೫) ಮಾಲೂರು ೭೨-೭೩ ೫-೬ಶ. ನೊಣಮಂಗಲ (ಕೋಲಾರಜಿ/ಮಾಲೂರು ತಾ) ಪು. ೨೦೭-೦೮; IWG / : ನಂ. ೧೨: ೪೦-೪೩) ಎಕ. . X (BLR), Intro. VIII- IX. f.n. 4] ತಮಿಳುನಾಡಿನ ದಕ್ಷಿಣ ಆರ್ಕಾಟು, ಜಿಲ್ಲೆಗೆ ಸೇರಿದ ತಿರುನಾಥರಱ ಕುನ್ರಿ ಎಂಬಲ್ಲಿ ಈ ಚಂದಿನಂದಿ ಅಡಿಗಳು (ಚಂದ್ರ ನಂದಿಆಶಿರಿಯಾರ್) ೫೭ ದಿವಸ ಉಪವಾಸ ಗೈದುಮುಡಿಪಿದರು. ಕ್ರಿ.ಶ. ಆರನೆಯ ಶತಮಾನಕ್ಕೆ ಸೇರಿದ ಅವರ ನಿಶಿಧಿಯೂ ಇಲ್ಲಿ ದೊರೆತಿದೆ.

೬. ಮಾಧವನ ಮಗ ಕೊಂಗಣ್ಯಾಧಿರಾಜನು ಅರ್ಹದೇವಾಯತನಕ್ಕೆ ಪುಲಿಯೂರು ಕೆರೆಕೆಳಗಿನ ಹಲವು ಹೊಲ, ತರಿಜಮೀನು, ತೋಟ, ನಿವೇಶನಗಳನ್ನು ಬಿಟ್ಟುಕೊಟ್ಟನು. ಐದನೆಯ ಶತಮಾನದ ಈ ಬಸದಿಯನ್ನು [Sastry, KAN : 1958 (AHSI) : 164] ಪಲ್ಲವಾಧಿರಾಜ ಸಿಂಹವಿಷ್ಣುವಿನ (೫೭೪-೬೦೦) ತಾಯಿಯಪ ತನ್ನ ಪತಿಯ ಕುಟುಂಬದ ಕೀರ್ತಿಗಾಗಿ ಕಟ್ಟಿಸಿದಳು. ಇದು ಯವನಿಕ (ಯಾಪನೀಯ) ಸಂಘದ ಬಸದಿ. ಆದಿಕದಂಬರಂತೆಯೇ ಪ್ರಾಚೀನ ಗಂಗರೂ ಯಾಪನೀಯ ಸಂಘಕ್ಕೆ ಪ್ರೋತ್ಸಾಹ ಮತ್ತು ಪುರಸ್ಕಾರ ನೀಡಿದ್ದರು.

ಅವಿನೀತನು ತನ್ನ ಗುರು ವಿಜಯಕೀರ್ತಿಯ ಉಪದೇಶದಂತೆ ಈ ದತ್ತಿಯಿತ್ತಿನು [ಮೈ. ಆ.ರಿ. ೧೯೩೮, ಪು. ೮೦-೯೦, ೫-೬ ಶ. ಹೊಸಕೋಟೆ (ಬೆಂಗಳೂರು ಜಿಲ್ಲೆ); ೧೯೮೪ : ನಂ. ೧೪ : ೪೮-೫೧].

೭. ಕೆಲ್ಲಿಪುಸೂರು ಚೇದಿಯ (ಚೈತ್ಯ)ವು ಕೊಡುಗೂರು ನಾಡಿನಲ್ಲಿತ್ತು ; ಈ ಬಸದಿಯೊಡೆಯರು ಚಂದ್ರಸೇನಾಚಾರ್ಯರು. ಪಲ್ಲವ ಎಳಅರಸನು (ಯುವರಾಜ), ಶಿವಮಾರ ರಾಜನ (ಮುತ್ತರಸ-ವೃದ್ಧರಾಜ ೬೭೯-೭೨೫) ಒಪ್ಪಿಗೆ ಪಡೆದು ಈ ಚೇದಿಯಕ್ಕೆ ವಸದಿಗಾಲು ಗ್ರಾಮವನ್ನೂ ಎರಡು ಭತ್ತದ ಗದ್ದೆಯನ್ನೂ ತೋಟವನ್ನೂ ಮನೆಯನ್ನೂ ನಿವೇಶನವನ್ನೂ ದತ್ತಿಯಾಗಿ ಇತ್ತನು. ಗಂಜೆನಾಡಿನ ಕಣ್ಣಮ್ಮನು ಮೇಲ್ಬಾಟು, ಜಾದಿಗಾಲು, ಕೂಲಿಗಂಕೆಜಿಕ್ಕಾಲು ಎಂಬ ಮೂರು ಹಳ್ಳಿಗಳನ್ನೂ ತೋಟಗದ್ದೆ ಹೊಲಗಳನ್ನೂ ಬಿಟ್ಟುಕೊಟ್ಟನು. ಮಾರಗೊಟ್ಟೆಬಿರ್ ಎಂಬಾತನು ಇನ್ನೊಂದು ತೋಟವನ್ನು ವಹಿಸಿಕೊಟ್ಟನು. ಬಸದಿಯ ದೇವರಿಗೆ ಸೇರಿದ ದನಗಳನ್ನು ಮಾರಿ ಮತ್ತೊಂದು ತೋಟವನ್ನು ಕೊಳ್ಳಲಾಯಿತು.

[ಮೈ. ಆ.ರಿ. ೧೯೨೫, ಪು. ೯೦-೯೨: ೭-೮ಶ. ಕುಲಗಾಣ (ಜಿಲ್ಲೆ ಚಾಮರಾಜನಗರ); IWG ನಂ. ೩೫:೩೯; ಎ.ಕ. ೪(ಪ) ಚಾಮರಾಜನಗರ. ೩೪೭. ೭-೮ಶತಮಾನ. ಕುಲಗಾಣ ಪು. ೨೨೦-೨]

೯. ಶಿವಮಾರನು೧ (ಸು. ೬೭೯-೭೨೬) ಗಂಗವಾಡಿ, ಪಾಣಾಟ, ಪುನ್ನಾಟಗಳನ್ನು ಆಳುತ್ತಿದ್ದನು. ಕೆಲ್ಲಿಪುಸುಗೂರು ಜಿನಾಲಯಕ್ಕೆಂದು ಚಂದ್ರಸೇನಾಚಾರ್ಯರಿಗೆ ವಸದಿಕಾಲು [ವಸದಿಗಾಲು-ಬಸದಿಹಳ್ಳಿ), ಜಾತಿಕಾಲು, ಮೇಲ್ಪಾಟಿ, ಕೋಲಿಗಂಕೆಜಿಕ್ಕಾಲು-ಎಂಬ ನಾಲ್ಕು ಹಳ್ಳಿಗಳನ್ನೂ ಹೊಲಗದ್ದೆ ತೋಟಮನೆ ನಿವೇಶವನ್ನೂ ಒಪ್ಪಿಸಲಾಯಿತು. (ಮೈಆರಿ. ೧೯೨೫, ಪು. ೯೧. ೭-೮ ಶ. ಕುಲಗಾಣ (ಚಾಮರಾಜನಗರ); IWG : ನಂ. ೩೬: ೧೪೦-೪೧: ಎ.ಕ. ೪(ಪ) ಚಾಮರಾ, ೩೪೭. ೭-೮ ಶ. ಕುಲಗಾಣ. ಪು. ೨೨೨]

೧೦. ಮೂಲಗಣ ನಂದಿ ಸಂಘ ಎರೆಗಿತ್ತೂರ್ಗಣ ಪುಲಿಕಲ್ಲಗ್ಗದ ಚಂದ್ರಣಂದಿಯ [ಎಕ. X. (ರೈಸ್) ಮಾಲೂರು ೭೨. ೬ಶ) ಶಿಷ್ಯ ಕುಮಾರಣಂದಿಯ ಶಿಷ್ಯ ಕೀರ್ತ್ತನಂದಿ ಆಚಾರ್ಯನ ಪ್ರಿಯಾಗ್ರಶಿಷ್ಯ ವಿಮಳಚಂದ್ರ ಆಚಾರ್ಯನ ಕಾಲದಲ್ಲಿ ಶ್ರೀಪುರದಲ್ಲಿ ಕುಂದಾಚ್ಚೆಯು ಲೋಕತಿಲಕ ಎಂಬ ಹೆಸರಿನ ಜಿನಾಲಯವನ್ನು ಮಾಡಿಸಿದಳು. ಈಕೆ ನಿರ್ಗುಂದದ ಪರಮಗೂಳರಾಜನ ಮಡದಿ, ಸಗರಕುಲದ ಮರುವರ್ಮ ರಾಜನ ಮಗಳು. ಕುಂದಾಚ್ಚಿ ಕಟ್ಟಿಸಿದ ಈ ಬಸದಿಗೆ ಶ್ರೀಪುರುಷನು (೭೨೬-೮೭) ನಿರ್ಗುಂದ ವಿಷಯದ ಪೊನ್ನಳ್ಳಿಯನ್ನು ಒಪ್ಪಿಸಿದನು. ಅಲ್ಲದೆ ಸುತ್ತಮುತ್ತಲಿನ ಹಲವು ಹಳ್ಳಿಗಳ ಹೊಲ ತೋಟ ಮನೆ ನಿವೇಶನಗಳನ್ನು ಕೊಡಲಾಯಿತು. [ಎ.ಕ. VII. (ಪ). ನಾಮಂ. ೧೪೯ (೪. ನಾಮಂ. ೮೫) ಕ್ರಿ.ಶ. ೭೭೬-೭೭, ದೇವರಹಳ್ಳಿ (ಮಂಡ್ಯ ಜಿ/ ನಾಮಂ ತಾ) ಪು. ೧೪೪-೪೫, IWG: ನಂ ೪೮;೧೮೨-೮೯] ಕುಂದಾಚ್ಚಿಯು ಮಾಡಿಸಿದ ಬಸದಿಯನ್ನು ಖಣ್ಡ ಸ್ಫುಟಿತ ಜೀರ್ಣೋದ್ಧರಿಸಿದ್ದು ತಿಳಿದು ಬಂದಿದೆ.

೧೧. ಲೋಕತ್ರಿಣೇತ್ರ ಮಾರಸಿಂಹನ ಸೇನಾಧಿಪತಿ ಶ್ರೀವಿಜಯನು ಜಿನಭಕ್ತ. ಈತ ಹಳ್ಳಿ, ಪಟ್ಟಣ, ತೊರೆಯದಂಡೆ, ಬೆಟ್ಟಗಳ ಮೇಲೆ, ದ್ವೀಪಗಳಲ್ಲಿ ಹಾಗೂ ಕೆರೆಗಳ ಹತ್ತಿರ ಬಸದಿಗಳನ್ನು ಕಟ್ಟಿಸಿದನು. ಇವಲ್ಲದೆ ಮಣ್ಣೆಯಲ್ಲಿ (ಮಾನ್ಯನಗರ) ತುಂಗನಿರ್ಮಳ ಜಿನಭವನವನ್ನು ಮಾಡಿಸಿದನು; ಈ ಬಸದಿಗೆ ಮಾರಸಿಂಹರಾಜನು ಕಿಱುವಕ್ಕೂರು ಗ್ರಾಮವನ್ನು ದತ್ತಿಯಾಗಿ ಬಿಟ್ಟನು.

ಶಾಲ್ಮಲೀ ವಿಷಯದ ಶಾಲ್ಮಲೀ ಗ್ರಾಮದಲ್ಲಿ ಕೊಂಡಕುಂದ ಅನ್ವಯದ ತೋರಣಾಚಾರ್ಯನ ಶಿಷ್ಯ ಪುಷ್ಪನಂದಿಯ ಶಿಷ್ಯನಾದ ಪ್ರಭಾಚಂದ್ರನಿಗಾಗಿ ಸೇನಾನಿ ಶ್ರೀವಿಜಯನು ಈ ಮಾನ್ಯಪುರ ಜಿನಭವನವನ್ನು ನಿರ್ಮಿಸಿದನು. ಈ ಬಸದಿಗೆ ಬೇರೆ ಬೇರೆ ಕೆರೆಗಳ ಕೆಳಗೆ ಫಲವತ್ತಾದ ಜಮೀನನ್ನು ದತ್ತಿ ಬಿಡಲಾಯಿತು.

[ಎ.ಕ. ೯, (ರೈಸ್) ನೆಮಂ. ೬೦. ೭೯೮ ಮಣ್ಣೆ (ಬೆಂ ಜಿ/ನೆಮಂ ತಾ) ಪು. ೪೮-೪೯; IWG : ನಂ ೪೯. ಪುಟ ೧೯೦-೨೦೫]

೧೨. ಶ್ರೀಪುರುಷನು ಆಳುತ್ತಿರುವಾಗ, ಪಸಿಂಡಿ ಎಂಬ ಗಂಗವಂಶದ ನಾಗವರ್ಮನು ಗಂಗರಾಜನೆಂದು ಅಭಿಷಿಕ್ತನಾಗಿದ್ದನು. ಈತನೂ, ಈತನ ಸಹೋದರಿಯ ಗಂಡನೂ ಮತ್ತು ಕದಂಬ ಕುಲದವನೂ ಆದ ತುಳುಗ-ಆಡಿಯೂ ಸೇರಿ, ತಗರೆ ಜನಪದದಲ್ಲಿದ್ದ ಮಲ್ಲವಳ್ಳಿ ಎಂಬ ಊರನ್ನು ತೊಳ್ಳಗ್ರಾಮದ ಚೈತ್ಯಾಲಯಕ್ಕೆ ದತ್ತಿಯಾಗಿ ಒಪ್ಪಿಸಿದರು. ನಿರ್ಮಲ ಕೋಶಿಕವಂಶದ ಸಮ್ಯಗ್ದರ್ಶನ ವಿಶುದ್ಧನಾದ ಮಣಲಿಮನೆ ಒಡೆಯೋನ್ ಎಂಬಾತನೂ ಈ ಚೈತ್ಯಾಲಯಕ್ಕೆ ಉಂಬಳಿ ನೀಡಿದನು. ಇದು ಶಾಂತಿಸೇನ ಅಬ್ಬೆಗಳು ಇತ್ತುದು ಮತ್ತು ಪೆರ್ಬ್ಬಾಲಿಯ ಉಂಬಳಿ-ನಮೋ ಜಿನೇಭ್ಯ: ಎಂದು ಶಾಸನದಲ್ಲಿದೆ.

[ಮೈಆರಿ. ೧೯೨೦, ಪು. ೨೩. ೮ನೆಯ ಶ. ನರಸಿಂಹರಾಜಪುರ; IWG : ನಂ. ೭೧: ೨೫೩-೫೫]

೧೩. ಶಿವಮಾರನII (೭೮೮-೮೧೬) ಆಳಿಕೆಯಲ್ಲಿ ವಿಟ್ಟರಸ (ವಿಷ್ಣುರಾಜ)ನು ಸಿಂದನಾಡು ಎಣ್ಭಾಸಿರಕ್ಕೆ ಎಱೆ (ಒಡೆಯ) ತನದಿಂದ ತಗರೆನಾಡು ಎಪ್ಪತ್ತನ್ನು ಆಳುತ್ತಿದ್ದನು. ವಿಟ್ಟರಸನು ತೊಳ್ಳರ್ ಊರಿನ ಚೇದಿಯಕ್ಕೆ (ಬಸದಿ) ಕರಿಮಣ್ಣಿನ ಹೊಲವನ್ನು ದತ್ತಿ ನೀಡಿದನು. ವಿಟ್ಟರಸನು ಕಾದಂಬ ರಾಜಾರ್ಹ ಮಾಧವೇಂದ್ರನ ಮಗ. [ಮೈ. ಆ. ರಿ. ೧೯೨೦, ಪು. ೨೪. ೯ನೆಯ ಶ. ಸಿಂಹನಗದ್ದೆ-ನರಸಿಂಹರಾಜಪುರ; IWG: ನಂ. ೮೫ ; ಪುಟ ೨೭೪-೭೫].

೧೪. ಅವರಾ-ಶಿವಮಾರನ ಮಾಮಗಳಾದ ವಿಜಯಶಕ್ತಿ ಅರಸನು ದೇವಿಗೆಜಿ಼ಯಾ ಕೆಳಗೆ ಅರು ಗಂಡುಗ ವೆದೆ ಮಣ್ಣುಮ್ (ಬಿತ್ತನೆಹೊಲ), ಕೊಳನುಂಶಿಯಲ್ಲಿ ಒಂದು ಪಾಳಿಯುಮ್ ಮುದಮೀರಿಯ ಉಂಚಮುಂ (ಧಾನ್ಯಸಂಗ್ರಹ) ಮೂಳಿವಳ್ಳಿಯ ಚೇದಿಯ (ಚೈತ್ಯ)ಕ್ಕೆ ಬಿಟ್ಟು ಕೊಟ್ಟರ್ [IWG : ನಂ. ೮೬, ೯ನೆಯ ಪುಟ ಶ. ೨೭೬-೭೭].

೧೫. ಶ್ರವಣಬೆಳಗೊಳದ ಚಿಕ್ಕಬೆಟ್ಟದ ಮೇಲೆ ಚಂದ್ರನಾಥ ತೀರ್ಥಂಕರ ಬಸದಿಯ ವಾಯವ್ಯದ ಕಡೆ ತೋರಣಾಚಾರ್ಯರ ಶಿಷ್ಯನಾದ ಇಮ್ಮಡಿ ಶಿವಮಾರನು ಬಸದಿಯನ್ನು ಕಟ್ಟಿಸಿದನು [ಮೈ. ಆ. ರಿ. ೧೯೧೧, ಪು. ೩೩, ೯ನೆಯ ಶತಮಾನ; IWG: ನಂ. ೮೮: ೨೭೯; ಎ.ಕ. ೨ (ಪ) ೧೪೦ (೪೧೫) ಪು. ೮೬] ಅಲ್ಲದೆ ಶಿವಮಾರನು ಒಂದು ಬಸದಿಯನ್ನು [Rice, B.L : Mysore and Coorg from Inscriptions : p. 41] ಕುಮ್ಮಡವಾಡದಲ್ಲೂ (ಬೆಳಗಾವಿ ಜಿ) ಒಂದು ದುಗ್ಗಮಾರ ಕೊಯಿಲ್ ಬಸದಿಯನ್ನು ಹೆಬ್ಬಲಗುಪ್ಪೆಯಲ್ಲೂ (ಮೈಜಿ) [ಎಕ. EC. III (ಪ) HG 63. ಪು. ४६८] ಒಂದು ಚೇದಿಯವನ್ನು ಮುಳಿವಳ್ಳಿಯಲ್ಲೂ ಕಟ್ಟಿಸಿದನು. [ಎಂ.ಎ.ಆರ್. 1920 ಪು. ೨೪]

೧೬. ಸತ್ಯವಾಕ್ಯ ಕೊಂಗುಣಿವರ್ಮ ಪೆರ್ಮಾನಡಿ ಇಮ್ಮಡಿ ರಾಚಮಲ್ಲನು (೮೭೭-೯೦೭) ಫಾಲ್ಗುಣ ಮಾಸದ ಶ್ರೀ ಪಂಚಮಿ ಹಬ್ಬದಂದು ಪೆಣ್ಣೆಗಡಂಗದ ಸತ್ಯವಾಕ್ಯ ಎಂಬ ಹೆಸರಿನ ಜಿನಾಲಯಕ್ಕೆ ಬಿಳಿಯೂರು, ಬೆದ್ದೊಜಿಗೆರೆಯ ಪನ್ನಿರ್ಪ್ಪಳ್ಳಿ- ಎಂಬೆರಡು ಹಳ್ಳಿಗಳನ್ನು ದತ್ತಿ ಬಿಟ್ಟನು. ಶಿವನಂದಿ ಸಿದ್ಧಾಂತಿದೇವನ ಶಿಷ್ಯ ಸರ್ವಣಂದಿ ದೇವನು ಈ ಕೊಡುಗೆಗಳನ್ನು ಪಡೆದನು. [ಎಕ. I (ಪ) 96 (2) ಕ್ರಿ.ಶ. 888. p. 59]

[ಎ.ಕ. ೧, ಕ್ರಿ.ಶ. ೨.೮೮೮. ಬಿಳಿಯೂರು (ಕೊಡುಗು ಜಿಲ್ಲೆ, ವಿರಾಜಪೇಟೆ ತಾ) ಎ.ಕ. ೧ (ಪ). ೯೬; IWG : ನಂ. ೧೦೬ : ೩೨೫-೨೬] ಈ ರಾಚಮಲ್ಲನಿಮ್ಮಡಿಯು ರಣವಿಕ್ರಮನ ಮಗ, ಶ್ರೀ ಪುರುಷನ ಮೊಮ್ಮಗ, ಮತ್ತು ಶಿಮಾರನ ಮರಿಮಗ.

೧೭. ಪೊಳ್ಮದ ತೇನಂದಾಕ ಗಳೆಯರ್ ಕಣ್ಣಮಂಗಳದಲ್ಲಿ ಒಂದು (ವ) ಬಸದಿಯನ್ನು ಕ್ರಿ.ಶ. ೯೦೨ರಲ್ಲಿ ಮಾಡಿಸಿ ಹೊಸ ತೋಟಗಳನ್ನೂ ಭತ್ತದ ಗದ್ದೆಯನ್ನೂ ದತ್ತಿ ಬಿಟ್ಟರು. ಉತ್ತನಿಂದಿಪುರಿಯ ಕಡಹುರ ಭಟಾರನ ಶಿಷ್ಯ ಮಂಡಲಭಟಾರನ ಶಿಷಿಂತಿ ಕಮುಂಗಜಿ ಕಂತಿಯರಿಗೆ ಈ ಕೊಡುಗೆಗಳನ್ನು ವಹಿಸಲಾಯಿತು.

ಸೊತ್ತಿಯೂರ ಪ್ರಮುಖ ಮದಮ್ಮಯ್ಯನ ಮಗ ಶ್ರೀವಮ್ಮಯ್ಯನು ಕೊಣ್ಣ ಮಂಗಲದಲ್ಲಿ ಇನ್ನೊಂದು ಬಸದಿ ಕಟ್ಟಿಸಿದನು; ಅದಕ್ಕೆ ಆ ಬಸದಿಯ ಹಿತ್ತಲ ಹಿಂಭಾಗದ ತೋಟವನ್ನೂ, ತೊಂಬೊಲದಲ್ಲಿ ಎಂಟು ಕೊಳಗ ಬೀಜವರಿ ಹೊಲವನ್ನೂ ಒಪ್ಪಿಸಿದನು. ಈ ಕೊಣ್ಣಮಂಗಲದ ಬಸದಿಗೆ ಎಳನೊಮ್ಮಡಿವ್ವೆಯ ಮಗನಾದ ಅಯ್ಯಪ್ಪ ನೊಮ್ಮಯ್ಯನು ತುಂಬೊಲದಲ್ಲಿ ಪಡುವಣದ ತೆಂಗಿನ ತೋಟವನ್ನೂ ನಾಲ್ಕು ಕೊಳಗ ಭತ್ತದ ಹೊಲವನ್ನೂ ದಾನಮಾಡಿದನು.

[ಎ.ಕ. ೧೦, ಕೋಲಾರ. ೯೦. ಕ್ರಿ.ಶ. ೯೦೨-೦೩ ನರ್ಸಾಪುರ (ಕೋಜಿ/ತಾ) ಪು. ೨೪-೨೫ IWG : ನಂ. ೧೦೭, ಪು. ೩೨೭-೩೩]

೧೮. ತನ್ನ ತಾಯಿ ಕಲ್ಲಬ್ಬಾಳು ಮಾಡಿಸಿದ ಬಸದಿಗೆ ಪೂಜಾದಿಗಳಿಗಾಗಿ ಮಾರಸಿಂಹನು (೯೬೨-೭೪) ಕೊಂಗಲ್ ನಾಡಿನ ಕಾದಲೂರನ್ನು ಸೂರಸ್ತಗಣದ ಏಳಾಚಾರ್ಯರಿಗೆ ಒಪ್ಪಿಸಿದನು. ಕಲ್ಲಬ್ಬೆಯು ಚಾಳುಕ್ಯರ ಸಿಂಹವರ್ಮ ಅರಸನ ಮಗಳು, ಜಯದುತ್ತರಂಗ

ಬೂತುಗII ಅರಸನ ರಾಣಿ. ಕಲ್ಲಬ್ಬಾಳು ಮಾಡಿಸಿದ ಬಸದಿಯಲ್ಲಿ ಚಿತ್ರಗಳೂ ಇದ್ದುವು: ಸುಧಾಚಿತ್ರ ಚಿತ್ರಾದಿ ಪುಜಾರ್ಥಂ (ಸಾಲು.: ೧೫) ಎಂದು ಶಾಸನದಲ್ಲಿದೆ.

[ಎ.ಇ. ೩೬, ಪು. ೯೭-೧೧೦. ೯೬೨. ಕಾದಲೂರು (ಧಾಜಿ/ತಾ); ಎ.ಆರ್.ಐ.ಎಸ್.ಇ. ೧೯೩೪-೩೫ ಎ-೨೩. ಕ್ರಿ.ಶ. ೯೬೨; IWG ನಂ. ೧೩೯: ೪೩೩-೪೮]

೧೯. ಆಷಾಢ-ಕಾರ್ತಿಕ-ಫಾಲ್ಗುಣ ಮಾಸದ ನಂದೀಶ್ವರ ಹಬ್ಬದಲ್ಲಿ ಪೆಗ್ಗದೂರಿನ ಬಸದಿಗೆ, ಪೆಗ್ಗದೂರು ಮತ್ತು ಪೊಸವಾಡಗ ಹಳ್ಳಿಗಳನ್ನು ಅನಂತವೀರ್ಯ ಗುರುಗಳಿಗೆ ವಹಿಸಿ ಕೊಡಲಾಯಿತು. ಅಭ್ಯಂತರ ಸಿದ್ಧಿಯಾಗಿತ್ತ ಈ ಪೆಗ್ಗದೂರು ಬಸದಿಯ ಶಾಸನ ದಾಖಲೆಯನ್ನು ಚಂದನಂದಿಯಯ್ಯನು ರಚಿಸಿದನು. ಇದು ರಾಚಮಲ್ಲ IV (೯೭೪-೯೯) ರಾಜನ ಆಳಿಕೆಯ ಶಾಸನ [ಎಕ. ೧ ಸಂಖ್ಯೆ ೪. ಕ್ರಿ.ಶ. ೯೭೮, ಪೆಗ್ಗೂರು (ಕೊಡಗು ಜಿ/ ವಿರಾಜಪೇಟೆ ತಾ); ಎ.ಕ. ೧ (ಪ) ಸಂಖ್ಯೆ ೯೮; IWG : ನಂ. ೧೪೮: ೪೬೫-೬೬]

೨೦. ನನ್ನಿಯಗಂಗ ಬೂತುಗ ಪೆರ್ಮಾಡಿಯು ತನ್ನ ಆಳಿಕೆಯಲ್ಲಿನ ತಟ್ಟೆಕೆಱೆ ಬಸದಿಗೆ ಊರಿನ ಕೆರೆಯ ಕೆಳಗಿನ ತರಿಜಮೀನನ್ನು ದಾನಮಾಡಿದನು; ಆತನ ಪಟ್ಟ ಮಹಾದೇವಿಯೂ ಈ ತೀರ್ತ್ಥದ ಬಸದಿಗೆ ಕಾಣಿಕೆಯನ್ನೂ 'ನಾಡೂರ್ಗಳಳು ಪಣವಂ ಕೊಟ್ಟರ್'. ಈ ಶಾಸನದಲ್ಲಿ ಕಾಣೂರುಗಣದ ಆಚಾರ್ಯ ಪರಂಪರೆಯನ್ನು ಗುರುತಿಸಿ ದಾಖಲಿಸಿದೆ. ಮುಮ್ಮಡಿ ರಾಚಮಲ್ಲನು (೯೩೩-೩೮) ತಮ್ಮ ಗಂಗಾನ್ವಯದವರ್ಪ್ಪಡಿಸಲಿಸುತ್ತುಂ ಮರವೆಸನಾಗಿ ಮಾಡಿಸಿ ದತ್ತಿಯಿತ್ತುದನ್ನೂ ಹೇಳಿದೆ.

[ಮೈ. ಆ.ರಿ. ೧೯೨೩. ಸಂಖ್ಯೆ ೧೧೩. ೧೦ನೆಯ ಶ. ಈಚವಾಡಿ (ಶಿವಮೊಗ್ಗ/ತಾ)ಪು. ೧೧೪-೧೫: IWG ನಂ. ೧೫೦: ಪು. ೪೬೮-೭೦]

೨೧. ಮಾಧವ ಮಹಾಧಿರಾಜನ (ಸು. ೪೦೦-೪೦) ಮತ್ತು ಕೃಷ್ಣವರ್ಮನ ಮಗ ಸಿಂಹವರ್ಮ (ಹರಿವರ್ಮ ಸು. ೪೪೦-೬೦) ಆಳಿಕೆಯ ಶಾಸನ ವಿವರ: ಸಿಂಹವರ್ಮನ ರಾಜಪ್ರಿಯಾ ನರ್ತಕಿಯಾದ ನಂದವ್ವಾಳು ಸಮ್ಯಗ್ ದರ್ಶನ ಯುಕ್ತಳಾಗಿದ್ದಳು. ಈಕೆ ಒಂದು ಅರ್ಹದಾಯತನವನ್ನು ಮಾಡಿಸಿದಳು (ಸ್ವಕೃತಾಯ); ಇದು ಮೂಲ ಸಂಘಕ್ಕೆ ಸೇರಿದ ಬಸದಿಯಾಗಿತ್ತು. ಅರಸನ ಅನುಮತಿಯಿಂದ ಈ ಬಸದಿಗೆ ಒಂದು ತೋಟವನ್ನು ನೀಡಿದಳು; ಈ ತೋಟವನ್ನು ಐನೂರು ಕಾರ್ಷಪಣವನ್ನು ಕೊಟ್ಟು ಕಾಕರಾಲಾಧಿಪತಿಯಿಂದ ಕೊಂಡಿದ್ದಳು. ನಂದವ್ವಾ ಕಲಾವಿದೆಯ ಕಾದಲನಾದ ಸಿಂಹರಾಜನೂ, ತನ್ನ ಎಂಟನೆಯ ವರ್ಷದ ಆಳಿಕೆಯಂದು, ಪೇರೂರಿನ ರಕ್ತತಡಾಕದ ನೀರಿಂದ ಉಳುಮೆಯಾಗುತ್ತಿದ್ದ ನೀರಾವರಿ ಭೂಮಿಯಲ್ಲಿ, ನಾಲ್ಕು ಕಂಡುಕ ಬೀಜವರಿ ಭೂಮಿಯನ್ನು ಬಿಟ್ಟುಕೊಟ್ಟನು. ಇದು ಒಂದೂವರೆ ಸಾವಿರ ವರ್ಷದಷ್ಟು ಹಿಂದಿನ ಬಸದಿ. 'ರಕ್ತ ತಟಾಕ' ಎಂಬುದು ಕನ್ನಡದ, 'ಕೆಂಪುಕೆರೆ' ಎಂಬುದರ ಸಂಸ್ಕೃತ ರೂಪ. [ARIE, 1895, B-6; ಕ್ರಿ.ಶ. 830; IWG ; ನಂ ೧೫೫.೫ ನೆಯ ಶ: ೪೭೯-೮೨ ಪೇರೂರು (ತಮಿಳುನಾಡು ಕೊಯಮತ್ತೂರು ಜಿ/ತಾ)].

೨೨. ನೊಳಂಬವಾಡಿ ೩೨,೦೦೦ ದ ಭಾಗವಾಗಿದ್ದ ಕೋಗಳಿ-೫೦೦ ನಾಡಿನಲ್ಲಿ ಮುಖ್ಯ

ಪಟ್ಟಣವಾದ ಕೋಗಳಿಯು ಜೈನ ಕೇಂದ್ರವಾಗಿ ಕೋಗಳಿಯತೀರ್ಥ ಎನಿಸಿತ್ತು. ಇಲ್ಲಿ ಗಂಗರ ದುರ್ವಿನೀತನು (೫೫೫-೬೦೫) ಒಂದು ಬಸದಿಯನ್ನು ಆರನೆಯ ಶತಮಾನದಲ್ಲಿಯೇ ಕಟ್ಟಿಸಿದನು;

ಇದು ದುರ್ವ್ವಿನೀತನಿಂದಂ
ಮೊದಲೊಳ್ ಬಸದಿಯಿದ ನಾಡ ಮತ್ತರಘಳೆಯಂ
ವಿದಿತಯಶರಿಂದ್ರ ಕೀರ್ತ್ತಿಗ
ಳುದಿತೋದಿತಮಾಗೆ ಮಾಡಿದರ್ ಕೋಗಳಿಯೊಳ್॥

ಕರ್ನಾಟಕದಲ್ಲಿಯೇ ಪ್ರಾಯಃ ಮೊತ್ತಮೊದಲ ಹಾಗೂ ಪ್ರಾಚೀನತಮ ಸರ್ವತೋಭದ್ರ ಜಿನಾಲಯ ಇದಾಗಿದೆ. ಜೀರ್ಣೋದ್ಧರಿಸಿದ ಇಂದ್ರಕೀರ್ತಿ ಮುನೀಂದ್ರನು ಈ ಬಸದಿಯ ಮಾಣಿಗಳ ಓದಿಗಾಗಿ ಒಂದು ದತ್ತಿಯನ್ನು ಇತ್ತನು. ಕೋಗಳಿಯು ಜೈನ ಘಟಿಕಾ ಸ್ಥಾನವಾಗಿತ್ತು.

[ಸೌ.ಇ.ಇ. ೯-೧, ಶಾಸನ ನಂ. ೧೮೯-೧೯೬; ಸೌ.ಇ.ಇ. ೯-೧, ಶಾಸನ ಸಂಖ್ಯೆ ೩೪೬, ೩೪೭, ಕ್ರಿ.ಶ. ೧೧೭೩, ೧೨೨೦; ಅದೇ, ೧೧೭, ೧೦೫೫. ಕೋಗಳಿ (ಬಳ್ಳಾರಿ ಜಿ/ಹಡಗಲಿ ತಾ) ಕ್ಯು. ಜೆ. ಎಂ. ಎಸ್. ಸಂಪುಟ. ३६ ಪು. ೧೨೬-೩೩]

೨೩. ಗಂಗರ ರಾಜನಾದ ಮೊಕ್ಕರನು (ಮುಷ್ಕರನು) (೫೭೯-೬೦೪) ಬಳ್ಳಾರಿ ಜಿಲ್ಲೆಯಲ್ಲಿ ಬಸದಿಯನ್ನು ಮಾಡಿಸಿದನು (ಇ. ಆ. ಸಂಪುಟ, ೭, ಶಾಸನ ಸಂಖ್ಯೆ ೩೮ ಪು. ೧೦೧-೧೭]

೨೪. ಎಱೆಗಂಗ ನೀತಿಮಾರ್ಗ ಪೆರ್ಮಾನಡಿಯು (೯೦೭-೨೧) ಅರೆತಿಪ್ಪೂರು ತೀರ್ಥ (ಕನಕಗಿರಿತೀರ್ಥ)ದಲ್ಲಿ ಬಸದಿಗಳನ್ನು ಮಾಡಿಸಿದನು ಮತ್ತು ಮಾಡಿಸಿದವರಿಗೆ ಸಹಾಯ ಮಾಡಿದನು.

[ಎ.ಕ. ೭ (ಪ) ಮದ್ದೂರು. ಸಂಖ್ಯೆ ೧೦೦. ಪು. ೩೧೨]

೨೫. ತಮಿಳುನಾಡಿನ ಪೆರಿಯಾರ್ ಜಿಲ್ಲೆಯ ವಿಜಯಮಂಗಲಂ ಎಂಬ ನಗರದಲ್ಲಿ ಗಂಗರು ಮಾಡಿಸಿದ ಚಂದ್ರಪ್ರಭ ಬಸದಿಯಿದೆ. ವಿಜಯಮಂಗಲವು ಜೈನ ವೈಯಾಕರಣಿ ಪವಣಂದಿ (ನನ್ನೂಲ್ ಕರ್ತೃ) ಹುಟ್ಟಿದೂರು. ಇಲ್ಲಿನ ಈ ಚಂದ್ರಪ್ರಭ ಬಸದಿಯಲ್ಲಿ, ಸುವಿಖ್ಯಾತ ಗೊಮ್ಮಟಮೂರ್ತಿಯನ್ನು ಮಾಡಿಸಿದ ಚಾಮುಣ್ಡರಾಯನ ತಂಗಿ, ಪುಲ್ಲಬ್ಬೆಯು ಸಲ್ಲೇಖನದಿಂದ ಮುಡುಪಿದಳು; ಇಲ್ಲಿಯ ಶಿಲ್ಪದಲ್ಲಿ ಪುಲ್ಲಬ್ಬೆಯು ಪದ್ಮಾಸನಹಾಕಿ ಕೈ ಮುಗಿದು ಕುಳಿತಿರುವ ಭಂಗಿಯ ಮೂರ್ತಿಯಿದೆ.

೨೬. ಧಾರವಾಡ ಜಿಲ್ಲೆಯ ನವಿಲ್ಗುಂದ ತಾಲ್ಲೂಕಿನ ಅಣ್ಣಿಗೇರಿ (Sharma : Brick Temples of Western Gangas, *Srinidhi*-1983, pp - 793-98] ಅಣ್ಣಿಗೇರಿ (ಅಣ್ಣಿಗೆಱೆ)ಯಲ್ಲಿ ಗಂಗರ ಬೂತುಗನಿಮ್ಮಡಿ (೯೩೮-೬೨) ಮಹಾಮಂಡಲೇಶನು ಜಿನೇಂದ್ರಮಂದಿರವನ್ನು ಕಟ್ಟಿಸಿದನು. ಬೂತುಗನು ರಾಷ್ಟ್ರಕೂಟರ ಮುಮ್ಮಡಿ ಕೃಷ್ಣನ ಭಾವನಾಗಿದ್ದನು:

ಕಂ।। ಪೆರ್ಮ್ಮಾನಡಿ ಮಾಡಿಸಿ
ದೀ ಪರಮಜಿನಾಲಯಗಳಂ ಪೊಲೆವಟ್ಟಿ
ದ್ರ್ದಾಪಾಣ್ಡ್ಯ ಚೋಳನೆಂಬ ಮ
ಹಾಪಾತಕ ತಿವುಳನಳಿದಧೋಗತಿಗಿಳಿದಂ।।
ಶ್ರೀವಸುಧೇಶನ ಬಾವಂ
ರೇವಕನಿರ್ಮ್ಮಡಿಯ ವಲ್ಲಭಂ ಬೂತಗನಾ
ತ್ಮಾವಗತ ಸಕಳ ಶಾಸ್ತ್ರನಿ
ಳಾವಿಶ್ರುತಕೀರ್ತ್ತಿ ಗಂಗಮಣ್ಡಲನಾಥಂ।।

ರೂಡಿಗೆ ರೂಡಿವೆತ್ತೆಸೆದೆ ಬೆಳ್ವಲದೇಶಮನಾಳ್ದ ಗಂಗಪೆ
ರ್ಮ್ಮಾಡಿಗಳಿಂದಮಣ್ಣಿಗೆಱೆ ನಾಳ್ಕೆಱೆವಟ್ಟೆನಿಸಿತ್ತು ನಾಡನಾ
ಡಾಡಿಗಳುಂಬಮೆಂಬಿನೆಗಮಾ ಪುರದೊಳು ಜಯದುತ್ತರಂಗ ಪೆ
ರ್ಮಾಡಿಯಿನಾಯ್ತು ಬೂತುಗ ನರೇನ್ದ್ರನಿನಲ್ಲಿ ಜಿನೇಂದ್ರಮಂದಿರಂ।।
ಸಂಗಮಾಗೆ ಮಾಡಿ ತಳವೃತ್ತಿಯನಲ್ಲಿಗೆ ಮೂಡಗೇರಿ ಗು
ಮ್ಮುಂಗೊಳನಾದಿಯಾಗೆ ನೆಗಳ್ದಿಟ್ಟಗೆ ಗಾವರಿವಾಡಮೆಂಬ ಬಾ
ಡಂಗಳ ಶಾಸನಂ ಬೆರಸು ಸರ್ವ್ವ ನಮಸ್ಯಮಿವೆಂದು ಬಿಟ್ಟುಕೊ
ಟ್ಟಂ ಗುಣಕೀರ್ತ್ತಿ ಪಣ್ಡಿತರ್ಗ್ಗೆ ಭಕ್ತಿಯಿನುತ್ತಮ ದಾನಶಕ್ತಿಯಿಂ।।
[ಎ.ಇ. ೧೫, ೨೩. ೧೦೭೧-೭೨ ಗಾವರವಾಡ (ಗದಗ ಜಿಲ್ಲೆ, ತಾ) ಪು. ೩೩೭-೪೬.
ಸಾಲು: ೧೫-೨೦]

ಅಣ್ಣಿಗೆರೆಯು ಬೆಳ್ವಲ - ೩೦೦ ರ ರಾಜಧಾನಿ; ಇಲ್ಲಿ ಗಂಗಪೆರ್ಮಾಡಿ ಬಸದಿ, ಆದಿನಾಥ ಸ್ವಾಮಿ ಬಸದಿ, ಸೇನಗಣದ ಬಸದಿ - ಇದ್ದುದನ್ನು ಇದೇ ಗಾವರವಾಡ ಶಾಸನ ತಿಳಿಸಿದೆ.

೨೭. ಶ್ರೀಪುರುಷನ ಮೊಮ್ಮಗ ಹಾಗೂ ರಣವಿಕ್ರಮನ ಮಗನಾದ ರಾಚಮಲ್ಲ ಸತ್ಯವಾಕ್ಯನು ತಮಿಳುನಾಡಿನ ವಳ್ಳಿಮಲೈನಲ್ಲಿ ಒಂದು ಬಸದಿಯನ್ನು ಕಟ್ಟಿಸಿದನು. [ARSIE. 1895 No. 10. A.D. 820]. ಚಟುವಟಿಕೆಗಳ ಕೇಂದ್ರ ಬಿಂದುಗಳು ಬಸದಿಗಳು. ಜೈನಾಚಾರ್ಯರು ಮತ್ತು ಜಿನಾಲಯಗಳು ಜೈನಧರ್ಮ ಎಂಬ ನಾಣ್ಯದ ಎರಡು ಮುಖಗಳು. ಪರಸ್ಪರಾವಲಂಬಿಗಳಾಗಿ ಬಸದಿಗಳೂ ಬಸದಿಯೊಡೆಯರೂ ಪೂರಕ, ಪ್ರೇರಕ, ಪೋಷಕ ಆಗಿದ್ದುದನ್ನು ಗಂಗರ ಪ್ರಾಚೀನ ಶಾಸನಗಳು ಶ್ರುತಪಡಿಸಿವೆ. ಅವಿನಾಭಾವ ಸಂಬಂಧ ಇರುವ ಕಾರಣಕ್ಕಾಗಿ ಬಸದಿ ಮತ್ತು ಜೈನಾಚಾರ್ಯರನ್ನು ಒಟ್ಟಿಗೆ ಪರಿಗಣಿಸುವ ಪದ್ಧತಿ ರೂಢಿಗೆ ಬಂದಿದೆ. ನಿರ್ಗ್ರಂಥ ಆಚಾರ್ಯರ ನೇತೃತ್ವದಲ್ಲಿ ವಿಹಾರ ಮಾಡುವ ಶ್ರಮಣ ಶ್ರಮಣೆಯರ ಸಂಘವು ಮಳೆಗಾಲದಲ್ಲಿ ಚಾತುರ್ಮಾಸಕ್ಕಾಗಿ ನಾಡಿನ ನಾನಾ ಬಸದಿಗಳಲ್ಲಿ ನೆಲೆ ನಿಂತಾಗಲಂತೂ ಜಿನಾಲಯಗಳು ಚಟುವಟಿಕೆಯ ಜನಾಲಯಗಳಾಗುತ್ತಿದ್ದುವು. ಪೂಜಾಸಂಪ್ರದಾಯದ ಉಗಮಕ್ಕೂ ಇವೇ ಜನ್ಮಸ್ಥಳ. ದಾನದತ್ತಿಗಳಿಂದ ಬಸದಿಗಳು ಬೆಳೆದುವು, ಬಾಳಿದುವು, ಬೆಳಗಿದುವು, ರಕ್ಷಿತರ ರಕ್ಷಣೆ ಇಲ್ಲದಾಗ ಸೊರಗಿದುವು, ಪಾಳು ದೇಗುಲಗಳಾಗಿ ಸೊರಗಿದುವು.

Rācamall's (A.D. 820) charter found in the Vallimalai rock-cut cave states that Ajjanandi ācārya caused the carving of the figures of his preceptors [ARSIE. 1895. No. 10. A.D. 820]. Ācarya Ajjanandi is notable for reviving the activities of Nirgrantha fath in the 9th century.A.D. in Tamilnadu. He has authoured several sculptures of Arhats at Karungalakkudi (Madurai dt), Tiruvayiri (Madurai), Ānamali (Madurai), Kurandi (Ramanathapuram), Alagarmalai (Madurai), Vallimalai (North Arcot) [ARSIE 1911, No. 562; SII. Vol. XIV, No. 22 and 107 to 119; ARSIE 1910, Nos. 61-69; EI. Vol IV. pp. 140 ff].

ಗಂಗ ಸಾಮ್ರಾಜ್ಯವನ್ನು ಹರಸಿ ದಾರಿ ತೋರಿದ ಕ್ರಾಣೂರ್ಗಣ- ಯಾಪನೀಯ ಸಂಘದ ಮಹಾನ್ ಆಚಾರ್ಯ ಸಿಂಹಣಂದಿ ಮುನಿಯ ಉಪದೇಶದಂತೆ, ದಡಿಗ ಮಾಧವರ ಕಾಲದಿಂದ ಗಂಗಮನೆತನ ಉದ್ದಕ್ಕೂ ಆದ್ಯತೆಯ ಮೇರೆಗೆ, ಜೈನಧರ್ಮವನ್ನು ತಮ್ಮ ರಾಷ್ಟ್ರಧರ್ಮವಾಗಿ ಸ್ವೀಕರಿಸಿ ಪುರಸ್ಕರಿಸಿದರು. ಅವಿನೀತ, ದುರ್ವಿನೀತ, ಶಿವಮಾರ, ಶ್ರೀಪುರುಷ ಮುತ್ತರಸ, ಸೈಗೊಟ್ಟ ಶಿವಮಾರ, ದುಗ್ಗಮಾರ ಎರೆಯಪ್ಪ, ನೀತಿಮಾರ್ಗ, ಬೂತುಗ, ಮರುಳ, ಮಾರಸಿಂಹ, ರಾಚಮಲ್ಲ, ರಕ್ಕಸಗಂಗ ಪೆರ್ಮಾನಡಿ ಎಲ್ಲರೂ ನಿರಂತರವಾಗಿ ಬಸದಿಗಳನ್ನು ಕಟ್ಟಿಸಿದರು, ಮಾನಸ್ತಂಭಗಳನ್ನು ನಿಲ್ಲಿಸಿದರು. ಜೈನಾಚಾರ್ಯರಿಗೆ ಪೊಡೆಮಟ್ಟು ಪೊರೆದರು ಎಂಬುದಕ್ಕೆ ಶಾಸನಗಳ ಆಧಾರಗಳೂ ಸಾಹಿತ್ಯ ಕೃತಿಗಳ ಹೇಳಿಕೆಗಳೂ ಪರಸ್ಪರ ಪೂರಕವಾಗಿ ವಿಪುಲವಾದ ಮಾಹಿತಿಗಳನ್ನು ಒದಗಿಸಿವೆ. ಜೈನಸಾಹಿತ್ಯಕ್ಕೆ, ಜೈನವಾಸ್ತು ಶಿಲ್ಪಕ್ಕೆ, ಒಟ್ಟಾರೆಯಾಗಿ ಜೈನ ಪರಂಪರೆಯ ಮುಂದುವರಿಕೆಗೆ ಗಂಗರ ಕೊಡುಗೆ ಬಹಳ ದೊಡ್ಡದು.

೨೮. [EC. V (R) ಕೃನ. ೨೫. ೧೧-೧೨ ಶ. ಚಿಕ್ಕಹನಸೋಗೆ, ಪು. ೧೭]
ದೇಸಿಗಗಣದ ಬಸದಿಯಲ್ಲಿ ೬೪
ರಾಮಮ್ರ್ಮಾಡೆ ಗಂಗಪ್ರ್ವಡಿಸಲಿಸೆ ಬಂದ
ತೀರ್ತ್ಥದ ಬಸದಿಯಂ

೨೯. ದುರ್ವಿನೀತನ (ಸು. ೫೫೫-೬೦೫) ಮಗನಾದ ಮೊಕ್ಕರ (ಮುಷ್ಕರ) ನು (೫೭೯-೬೦೪) ಪುಲಿಗೆಱೆಗೆ ನಿಷ್ಠನಾಗಿದ್ದವನು. ಮೊಕ್ಕರನ ನೆನಪಿಗಾಗಿ ಪುಲಿಗೆಱೆಯಲ್ಲೊಂದು ಮೊಕ್ಕರ ಬಸದಿಯನ್ನು ಕಟ್ಟಲಾಗಿದೆ. ಬಳ್ಳಾರಿಜಿಲ್ಲೆಯ ಮಕ್ಕರ ಬಸದಿಯನ್ನು ಕಟ್ಟಲಾಗಿದೆ. ಬಳ್ಳಾರಿ ಜಿಲ್ಲೆಯ ಮಕ್ಕರ ಬಸದಿ [IA, VII. No. 38. pp. 101-17] ಮತ್ತು ಈ ಪುಲಿಗೆಱೆಯ ಬಸದಿಗಳಲ್ಲಿರುವ ನಾಮ ಸಾದೃಶ್ಯವನ್ನು ಗಮನಿಸಬೇಕು.

೩೦. ಸ್ಥಿರ ಜಿನಶಾಸನೋದ್ಧರಣರಾದಿಯೊಳಾರೆನೆ ರಾಚಮಲ್ಲ ಭೂವ
ರ ವರ ಮಂತ್ರಿ ರಾಯನೆ ಬಳಿಕ್ಕೆ ಬುಧಸ್ತುತನಪ್ಪ ವಿಷ್ಣು ಭೂ
ವರ ವರಮಂತ್ರಿ ಗಂಗಣನೆ ಮತ್ತೆ ಬಳಿಕ್ಕೆ ನೃಸಿಂಹದೇವ ಭೂ
ವರ ವರಮಂತ್ರಿ ಹುಳ್ಳನೆ ಪೆಱಂಗಿನಿತುಳ್ಳಡೆ ಪೇಳಲಾಗದೇ॥
[ಎಕ. II (ಪ) ಸಂಖ್ಯೆ 476 (345) ಕ್ರಿ.ಶ. 1159. ಪು. ೨೮೯]
ಈ ರಾಚಮಲ್ಲನು (೯೭೪-೮೪) ಅಜಿತಸೇನಾಚಾರ್ಯನ ಶಿಷ್ಯನು. ಈತನಿಗೆ ಗಂಗ

ಕುಲಾಬ್ಧಿಚಂದ್ರ ಗಂಗಕುಲ ಚೂಡಾಮಣಿ ಜಗದೇಕವೀರ ಧರ್ಮಾವತಾರ ನೊಳಂಬ ಕುಲಾಂತಕದೇವ ಎಂಬ ಬಿರುದುಗಳಿವೆ.

೩೧. ಪಿರಿಯಂ ಬೂತುಗನಾತನಿಂ ಮರುಳನಾತಂಗಂ ನೊಳಂಬಾಂತಕಂ
ಪಿರಿಯಂ ನೆಟ್ಟನೆ ದಾನಧರ್ಮದೆಡೆಯೊಳ್ ಚಾವುಂಡರಾಯಂ ಕರಂ
ಪಿರಿಯಂ ಶಂಕರ ಗಂಡನಲ್ತೆ ಪಿರಿಯಂ ತ್ಯಾರಮಂ ಪೊತ್ತು
ನಿತ್ತರಿಸುತ್ತಿರ್ಪುದರಿಂದೆ ನೀನೆ ಪಿರಿಯೈ ಶ್ರೀ ದಾನಚಿಂತಾಮಣೀ॥

- ರನ್ನ ಕವಿ (ಕ್ರಿ.ಶ. ೯೮೩), ಅಜಿತ ಪುರಾಣಂ, ೧೨-೯

ಜಿನಧರ್ಮದ ಪ್ರಭಾವನೆಯನ್ನು ವೆಗ್ಗಳಿಸುತ್ತ ನಾಡಿನ ಉದ್ದಗಲಗಳಲ್ಲಿ ಬಸದಿಗಳನ್ನು ಕಟ್ಟಿಸಿ, ಮಾನಸ್ತಂಭಗಳನ್ನು ನಿಲ್ಲಿಸಿ, ಜಿನ ಮಂದಿರಗಳಲ್ಲಿ ಪೂಜಾದಿಗಳಿಗೂ ಖಂಡ ಸ್ಫುಟಿತ ಜೀರ್ಣೋದ್ಧಾರಕ್ಕೂ ರಿಷಿಮುನಿ ಕಂತಿಯರ ಆಹಾರ ದಾನಕ್ಕೂ ದಾನ ದತ್ತಿಗಳನ್ನಿತ್ತು ಎಲ್ಲ ಅನುಕೂಲಗಳನ್ನು ಕಲ್ಪಿಸಿದ ಏಳು ಜನರನ್ನು ರನ್ನ ಕವಿ ಈ ವೃತ್ತ ಪದ್ಯದಲ್ಲಿ ಹೆಸರಿಸಿದ್ದಾನೆ. ಇವರಲ್ಲಿ ಮೊದಲನೆಯ ನಾಲ್ಕು ಜನರು ಗಂಗರು. ಬೂತುಗನೂ ಆತನ ಮೊದಲನೆಯ ಮಗ ಮರುಳನೂ ಎರಡನೆಯ ಮಗ ಮಾರಸಿಂಹನೂ, ಮಂತ್ರಿ ಮತ್ತು ಸೇನಾನಿ ಚಾವುಂಡರಾಯನೂ ಗಂಗರ ಆಳಿಕೆಯ ಉತ್ತರಾರ್ಧದ ಅವಧಿಗೆ ಸೇರಿದವರು.

ಗಂಗರು ಜಿನಧರ್ಮವನ್ನು ಪೊರೆಯಲೆಂದೇ ಹುಟ್ಟಿ ಬಂದವರೆಂದು ಒಂದು ಶಾಸನ ಸಾರಿದೆ (ಎಕ. ೭-೧, ಶಿವಮೊಗ್ಗ ೧೦, ಕ್ರಿ.ಶ. ೧೦೮೫, ಪು. ೧೯) ಗಂಗರ ಹಲವಾರು ಶಾಸನಗಳಲ್ಲಿ ಮತ್ತೆ ಮತ್ತೆ ಸುಳಿದು ಸುತ್ತುವ ಮಾತಿದು : ಆಪ್ತನನಿಂದ್ಯ ಜಿನೇಂದ್ರಂ, ಜಿನಮತಂ ಮತಮಾಗಿರೆ ಸಂತತಂ ನಿಜೋದಾತ್ತತೆಯಿಂದಂ ಆಳ್ದರ್ ಉರ್ವ್ವಿಯಂ. ಗಂಗರಾಜ ಪರಂಪರೆಯನ್ನು ಆರಂಭಿಸಿದ ಆದ್ಯನನ್ನು "ಶ್ರವಣಸಂಘ ಸ್ಯಾದ್ವಾದಾಧಾರ ಭೂತರಪ್ಪ ಶ್ರೀಮತ್ ಸ್ವಸ್ತಿ ಸತ್ಯ ವಾಕ್ಯ ಕೊಂಗುಣಿ ವರ್ಮ ಧರ್ಮ್ಮ ಮಹಾರಾಜಾಧಿರಾಜ" (ಎಕ. ೬ (ಪ) ಪಾಂಡವಪರ ೧೬, ಕ್ರಿ.ಶ. ೯ನೆಯ ಶತಮಾನ, ಪು. ೧೧೪) ಎಂದು ಪರಿಚಯಿಸಿದೆ. ಗೋಪಣಂದಿ ಮುನಿಯು ಜಿನ ಧರ್ಮಮಂ ಗಂಗನ್ರಿಪಾಳರಂದಿನ ವಿಭೂತಿಯ ರೂಢಿಯನೆಯ್ದೆ ಮಾಡಿದಂ" ಎಂದು ಶಾಸನ ನಮೂದಿಸಿದೆ (ಎಕ. ೫ (ಪ) ಚನ್ನರಾಯಪಟ್ಣ, ಸಂಖ್ಯೆ ೧೪೮ ಕ್ರಿ.ಶ. ೧೦೯೪)

ಉದಿತೋದಿತಮೆನೆ ವಿಭವಾ
ಸ್ಪದಮೆನೆ ಭುವನಯ್ಕವಂದ್ಯಯೆನೆ ಸಂಚಳಮಾ
ಗದೆ ಗಂಗಾನ್ವಯಮುಳ್ಳಿನ
ಮಿದು ಸರ್ವ್ವನಮಸ್ಯವಾಗಿ ನಡೆಯುತ್ತಮಿರಲ್॥

ಜೈನಧರ್ಮ ನಿಷ್ಠೆಯಿಂದ ಗಂಗ ರಾಜಮನೆತನದವರು ಕೈಗೊಂಡ ಚಟುವಟಿಕೆಗಳ ಹೆಚ್ಚಿನ ಅಧಿಕೃತ ಮಾಹಿತಿಗಾಗಿ ಗಮನಿಸಬೇಕಾದ ನನ್ನ ಇತರ ಗ್ರಂಥಗಳು:

೧. *ಚಂದ್ರಕೊಡೆ*, ಹಂಪಿ, ೧೯೯೭
೨. *A History of the Early Gaṅga Monarchy and Jainism*, Bangalore, 1999.

೩. *Later Gaṅgas : Maṇḍali Thousand,* Bangalore, 1999.

೪. *Jaina Corpus of Koppaḷa Inscriptions Xrayed*, Bangalore, 1999.

೫. *A History of the Rāṣṭrakūṭas of Maḷkheḍ and Jainism*, Bangalore, 2000.

೬. ಕೊಪ್ಪಳ ಶಾಸನಗಳು, ಮೈಸೂರು, ೧೯೯೮.

೧೭

ಜ್ವಾಲಾಮಾಲಿನಿದೇವಿ : ಚರಿತ್ರೆಯ ಹಾಸಿನಲ್ಲಿ

ಕ್ರಿಸ್ತಶಕ ಒಂದು ಮತ್ತು ಎರಡನೆಯ ಶತಮಾನದ ವೇಳೆಗೆ ಯಕ್ಷ ಯಕ್ಷಿಯರು ಜೈನಧರ್ಮ ಪೂಜಿಸುವ ದೇವತೆಗಳ ಪರಿವಾರವಾಗಿ ರೂಪಗೊಂಡರು. ಅವರನ್ನು ಜಿನಶಾಸನ ದೇವತೆಗಳೆಂದು ಪರಿಗಣಿಸಲಾಯಿತು. ವಿದ್ಯಾದೇವಿಯರು, ಕ್ಷೇತ್ರಪಾಲರು, ಶಾಸನ ದೇವತೆಗಳು ಎಂಬ ಪರಿಕಲ್ಪನೆಗೆ ಕರ್ನಾಟಕದ ಸಂದರ್ಭದಲ್ಲಿ ಜೀವ ತುಂಬಿದವರು ಯಾಪನೀಯ ಪಂಥದವರು. ಕರ್ನಾಟಕದ ಹಲವು ರಾಜಮನೆತನಗಳು ಜೈನ ಆಚಾರ್ಯರ ಅನುಗ್ರಹದಿಂದ ಸ್ಥಾಪನೆಗೊಂಡಿರುವ ವಿಚಾರವನ್ನು ಶಿಲಾಶಾಸನಗಳ ಆಧಾರದಿಂದ ಅರಿಯಬಹುದು. ಕದಂಬರು, ಗಂಗರು, ರಾಷ್ಟ್ರಕೂಟರು, ಚಾಲುಕ್ಯರು, ಹೊಯ್ಸಳರು, ಶಿಲಾಹಾರರು, ಚೆಂಗಾಳ್ವರು, ಕೊಂಗಾಳ್ವರು, ಚೌಟರು, ಅಜಿಲರು, ಬಂಗರು, ಸೇವುಣರು, ಬಿಳಿಗಿಯರಸರು, ತೆವರ ತೆಪ್ಪದ ಸಾಮಂತರು, ಬಾರಂಗಿ ಸಾಮಂತರು, ಚಿಕ್ಕಮಾಗಡಿ ಸಾಮಂತರು, ಸಾಂತರರು, ಸಾಳುವರು, ನಗಿರೆಯವರು, ಸೇನವಾರರು, ಚಲ್ಲಕೇತನರು, ಸಗರ-ಮಣಲೆಯರು, ಸಿಂದರು, ಸೌದತ್ತಿಯ ರಟ್ಟರು - ಹೀಗೆ ಹಲವು ದೊಡ್ಡ ಹಾಗೂ ಸಣ್ಣ ರಾಜವಂಶಗಳು ಜೈನ ಕೊಡೆಯ ಅಡಿಯಲ್ಲಿ ಹುಟ್ಟಿ ಬೆಳೆದುವು.

ಜೈನ ಆಚಾರ್ಯರ ಮತ್ತು ಜಿನಶಾಸನ ದೇವತೆಗಳ ಕೃಪೆ, ಆಶೀರ್ವಾದವನ್ನು ಹೊತ್ತು ಹುಟ್ಟಿದ ರಾಜಮನೆತನಗಳಲ್ಲಿ ಯಕ್ಷಿಯರನ್ನು ಪೂಜಿಸುವ ಪದ್ಧತಿಯೊಂದು ಗಾಢ ಪ್ರಭಾವ ಬೀರಿರುವುದು ಕಂಡು ಬರುತ್ತದೆ. ಅದರಲ್ಲಿಯೂ ವಿಶೇಷವಾಗಿ ಅಂಬಿಕಾ, ಪದ್ಮಾವತಿ, ಚಾಮುಂಡಾ ಮತ್ತು ಜ್ವಾಲಾಮಾಲಿನಿ ಯಕ್ಷಿಯರ ಪ್ರಭಾವ ಹಲವು ರಾಜಕುಲಗಳಲ್ಲಿ ಇದ್ದುದಾಗಿ ಶಾಸನಗಳಿಂದ ತಿಳಿದು ಬರುತ್ತದೆ. ಪದ್ಮಾವತೀದೇವಿಯು ೨೩ನೆಯ ತೀರ್ಥಂಕರರಾದ ಪಾರ್ಶ್ವನಾಥರ ಸೇವೆಗೆ ಮುಡಿಪಾಗಿ ನಿಂತ ಯಕ್ಷಿ. ಅಂಬಿಕಾದೇವಿಯು (ಈಕೆಗೆ ಆಮ್ರಾ, ಕೂಷ್ಮಾಂಡಿನೀ ಎಂಬ ಹೆಸರುಗಳುಂಟು) ೨೨ನೆಯ ತೀರ್ಥಂಕರರಾದ ನೇಮಿನಾಥರ ಯಕ್ಷಿ.

ಚಾಮುಂಡಾದೇವಿಯು ೨೧ ತೀರ್ಥಂಕರರಾದ ನಮಿನಾಥ ಜಿನರ ಯಕ್ಷಿ. ಜ್ವಾಲಾಮಾಲಿನಿ ದೇವಿಯು ಎಂಟನೆಯ ತೀರ್ಥಂಕರರಾದ ಚಂದ್ರಪ್ರಭನಾಥರ ಶಾಸನದೇವಿ.

ಆದಿ ಕದಂಬರು ಬನವಾಸಿ (ವೈಜಯಂತಿಪುರ) ಪ್ರದೇಶವನ್ನು ಆಳಿದ ಪ್ರಾಚೀನರು. ಅವರ ಮನೆದೇವತೆಯಾದ ಪದ್ಮಾವತಿಯ ಗುಡಿಯನ್ನು (ಆಲಯ) ತಮ್ಮ ಅರಮನೆಯ ಸಮೀಪದಲ್ಲಿ, ಕಲ್ಲೀಲಿ ಎಂಬಲ್ಲಿ ಕಟ್ಟಿಸಿದ್ದುದಾಗಿ ಕ್ರಿ.ಶ. ೫-೬ನೆಯ ಶತಮಾನದ ಶಾಸನದಿಂದ ತಿಳಿದು ಬರುತ್ತದೆ. ಗಂಗರು ಮತ್ತು ಹೊಯ್ಸಳರು ಸಹ ತಮ್ಮ ಸಾಮ್ರಾಜ್ಯವು ಪದ್ಮಾವತೀ ದೇವಿಯಿಂದ ಬಂದ ಹಸಾದವೆಂದು ಹೇಳಿಕೊಂಡಿದ್ದಾರೆ. ಅದರಂತೆಯೇ ಇನ್ನೂ ಕೆಲವು ಅರಸು ಕುಲಗಳೂ ಮಹಾಮಂಡಲೇಶ್ವರರೂ ಮಹಾಸಾಮಂತರೂ ಯಕ್ಷಿ ಪದ್ಮಾವತೀ ದೇವಿಯು ಕರುಣಿಸಿದ ವರಪ್ರಸಾದದಿಂದ ತಾವು ಸುಖ ಪರಂಪರೆಯನ್ನು ಪಡೆದುದಾಗಿ ಹೆಮ್ಮೆಯಿಂದ ಹೇಳಿಕೊಂಡಿವೆ. ಅಂತಹ ಸುಮಾರು ಐವತ್ತಕ್ಕೂ ಹೆಚ್ಚು ಉಲ್ಲೇಖಗಳಲ್ಲಿ ಕೇವಲ ನಾಲ್ಕು ನಿದರ್ಶನಗಳನ್ನು ಶಾಸನಗಳಿಂದ ಇಲ್ಲಿ ಉದಾಹರಿಸಲಾಗಿದೆ:

೧. ಪದ್ಮಾವತೀ ದೇವಿಲಬ್ಧವರ ಪ್ರಸಾದಂ ಸಮ್ಯಕ್ತ್ವರತ್ನಾಕರಮಪ್ಪ ದಡಿಗ ಮಾಧವ (ಎಪಿಗ್ರಾಫಿಯ ಕರ್ನಾಟಿಕ, ಸಂಪುಟ ೭, ಶಿವಮೊಗ್ಗ ಶಾಸನ ಸಂಖ್ಯೆ ೫).

೨. ನನ್ನಿಯ ಗಂಗದೇವನುಂ ಪಟ್ಟ ಮಹಾದೇವಿ ಕಂಚಲದೇವಿಯರುಂ ಪದ್ಮಾವತೀ ದೇವಿಗೆ ಹರಸಿ ಹೆಮ್ಮಾರ್ಡಿದೇವನಂ ಹಡೆದು ಕಾಣಿಕೆಯಂ ಕೊಟ್ಟರ್ (ಅದೇ: ಶಿವಮೊಗ್ಗ ೪. ಕ್ರಿ.ಶ. ೧೧೨೨).

೩. ಮಹಾಮಣ್ಡಳೇಶ್ವರ ಬನವಾಸೀ ಪುರವರಾಧೀಶ್ವರ ಪದ್ಮಾವತೀಲಬ್ಧ ವರಪ್ರಸಾದ ಕಾದಂಬಕುಳ ಕಮಳ ಮಾರ್ತಣ್ಡನೆನಿಸಿದ ಕೀರ್ತಿದೇವಂ (ಎಪಿಗ್ರಾಫಿಯ ಕರ್ನಾಟಿಕ, ಸಂಪುಟ-೮, ಸೊರಬ ಶಾಸನ ಸಂಖ್ಯೆ. ೨೬೨. ಕ್ರಿ.ಶ. ೧೦೭೫). ಈ ಕೀರ್ತಿದೇವನ ಪಟ್ಟಮಹಿಷಿಯಾದ ಮಾಳಲದೇವಿಯು ಕುಪ್ಪಟೂರಿನಲ್ಲಿ ಪಾರ್ಶ್ವನಾಥರ ಚೈತ್ಯಾಲಯವನ್ನು ಕಟ್ಟಿಸಿದಳು.

೪. ಏಕಾಂಗವೀರನ್ ಅಸಹಾಯ ಶೌರ್ಯಂ ಸಾಹಸೋತ್ತುಂಗನಯ್ಯನ ಸಿಂಗಂ ಗೇಣಿಕಾರರ ದೇವನೊಂದಿರಿವಾತಂ ಲೋಕವಿಖ್ಯಾತಂ ಸಮ್ಯಕ್ತ್ವರತ್ನಾಕರಂ ಪದ್ಮಾವತೀ ಲಬ್ಧವರ ಪ್ರಸಾದಂ ನಾಮಾದಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮನ್ ಮಹಾಸಾಮಂತಂ ಮಾರ್ತಣ್ಡಯ್ಯ ತಮ್ಮ ಮುತ್ತಯ್ಯಂ ಮಾಡಿಸಿದ ಬಸದಿಯಂ ಪಡಿಸಲಿಸಿ ನಾಟಕ ಶಾಲೆಯಂ ಮಾಡಿಸಿ ತನ್ನ ಕೀರ್ತಿ ಶಿಳಾಸ್ತಂಭಮಂ ಆಚಂದ್ರಾರ್ಕ ತಾರಂಬರಂ ನಿಲಿಸಿದಂ (ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್, ಸಂಪುಟ XI ಭಾಗ- I ಸಂಖ್ಯೆ ೭೮ ಕ್ರಿ.ಶ. ೧೦೪೫. ಧಾರವಾಡ ಜಿಲ್ಲೆ ಮತ್ತು ತಾಲ್ಲೂಕಿಗೆ ಸೇರಿದ ಮುಗದ ಊರಿನ ಕೆರೆಯ ಏರಿಯ ಕಲ್ಲು ಶಾಸನ).

ಈ ರೀತಿಯಾಗಿ ಅನೇಕ ಶಾಸನಗಳಲ್ಲಿ ಪದ್ಮಾವತೀದೇವಿಯ ಮಹಿಮೆಗೆ ಪಾತ್ರರಾದ ರಾಜರಾಣಿಯರ, ಪ್ರಜೆ ಪರಿವಾರದವರ, ಮನೆತನಗಳ ಪ್ರಸ್ತಾಪಗಳು ಸಿಗುತ್ತವೆ. ಜಿನಶಾಸನ ದೇವಿಯಾದ ಅಂಬಿಕಾದೇವಿಯು ಬಾದಾಮಿ ಚಲುಕ್ಯರ ಮತ್ತು ರಾಷ್ಟ್ರಕೂಟರ ಕುಲದೇವತೆ ಯಾಗಿದ್ದಳು. ಗಂಗರ ರಾಜನಾದ ಇಮ್ಮಡಿ ಶಿವಮಾರನು ಕ್ರಿ.ಶ. ೮೧೦ರ ಸುಮಾರಿಗೆ ಶ್ರವಣ

ಬೆಳಗೊಳದ ಚಂದ್ರಗಿರಿಯ ಮೇಲೆ ಚಂದ್ರನಾಥ ಸ್ವಾಮಿಯ ಬಸದಿಯನ್ನು ಕಟ್ಟಿಸಿದನು. ಆ ಬಸದಿಗೆ ರಾಜನ ಹೆಸರಿನಿಂದ 'ಶಿವಮಾರನ ಬಸದಿ' ಎಂದು ನಾಮಕರಣವಾಗಿದೆ. ಗೊಮ್ಮಟೇಶ್ವರನ ವಿಗ್ರಹವನ್ನು ಮಾಡಿಸಿದ ಚಾವುಂಡರಾಯ ತಂಗಿಯಾದ ಪುಲ್ಲವ್ವಳು ವಿಜಯಮಂಗಲದ ಚಂದ್ರನಾಥ ಸ್ವಾಮಿಯ ಬಸದಿಯಲ್ಲಿ ಕ್ರಿ.ಶ. ೯೮೨ರಲ್ಲಿ ಸಲ್ಲೇಖನ ವ್ರತವನ್ನು ಪಡೆದು ಸಮಾಧಿ ಮರಣದಿಂದ ಮುಡಿಪಿದಳು. ಕೊಪ್ಪಳವು ಆದಿ ಮಹಾತೀರ್ಥವೆನಿಸಿದ ಕ್ಷೇತ್ರವಾಗಿದ್ದು, ಅಲ್ಲಿನ ಚಂದ್ರನಾಥ ಬಸದಿ ಕ್ರಿ. ಶ. ೧೦-೧೧ನೆ ಶತಮಾನದಿಂದ ಪ್ರಸಿದ್ಧವಾಗಿದೆ. ಮೈಸೂರು ಜಿಲ್ಲೆ ಹುಣಸೂರು ತಾಲೂಕು ಬೂವನಹಳ್ಳಿಯಲ್ಲಿ ಜೈನ ಮುನಿಯೊಬ್ಬರು ಕ್ರಿ.ಶ. ೯೫೦ರಲ್ಲಿ ಚಂದ್ರನಾಥ ಬಸದಿಯನ್ನು ನಿರ್ಮಿಸಿದರು.

ಕೊಡಗು ಜಿಲ್ಲೆಯ ಮುಳ್ಳೂರಿನ ಚಂದ್ರನಾಥ ಬಸದಿಯು ತುಂಬಾ ಪ್ರಾಚೀನವಾಗಿದ್ದು ಅದನ್ನು ಕ್ರಿ.ಶ. ೧೩೯೦ರಲ್ಲಿ ಆಗಿನ ಕೊಂಗಾಳ್ವ ರಾಜನು ಜೀರ್ಣೋದ್ಧಾರ ಮಾಡಿದನು. ಆರ್ಯ ಶುಭೇಂದುಮುನಿಯ ಶಿಷ್ಯರಾದ ವಿಜಯಕೀರ್ತಿದೇವ ಯತಿಯ ಶಿಷ್ಯಳಾದ ಮಹಾರಾಣಿ ಸುಗಣೇ ದೇವಿಯ ಮತ್ತೊಂದು ಚಂದ್ರನಾಥ ಜಿನರ ಬಿಂಬವನ್ನು ನೂತನವಾಗಿ ಪ್ರತಿಷ್ಠಾಪಿಸಿ ದಾನದತ್ತಿ ಗಳನ್ನಿತ್ತಳು. ಕನಕಗಿರಿತೀರ್ಥವೆಂದು ವಿಖ್ಯಾತವಾದ ಮಲೆಯೂರಲ್ಲಿ ವಿಜಯನಾಥ ಹಾಗೂ ಚಂದ್ರಪ್ರಭನಾಥರ ಬಸದಿಗಳು ಪುರಾತನ ಕಾಲದಿಂದ ಹೆಸರುವಾಸಿಯಾಗಿವೆ. ತುಳುನಾಡಿನಲ್ಲಿ ಕೆಲವು ಚಂದ್ರಪ್ರಭ ಜಿನರ ಬಸದಿಗಳಿದ್ದು, ವೈಶ್ಯ ಶೆಟ್ಟಿಗಳು ಕಟ್ಟಿಸಿ ಬೆಳೆಸಿದ ಬಸರೂರು ಚಂದ್ರಪ್ರಭ ಬಸದಿಯು ೧೪-೧೫ನೆ ಶತಮಾನದಲ್ಲಿ ಕೀರ್ತಿಯಿಂದ ವಿರಾಜಮಾನವಾಗಿತ್ತು. ಭದ್ರಾ ನದಿಯಲ್ಲಿದ್ದು ತಡಸದ ಬಳಿ ತೊರೆಯಲ್ಲಿ ದೊರೆತ ಚಂದ್ರನಾಥರ ಜಿನಬಿಂಬವು ಬಿಳಿಯ ಸ್ವಚ್ಛ ಅಮೃತಶಿಲೆಯಿಂದ ಮಾಡಿದ ಎರಡೂವರೆ ಅಡಿಯ ಸುಂದರ ಮೂರ್ತಿ ಇದೀಗ ಜೈನ ಯಾತ್ರಾಸ್ಥಳವಾದ ನರಸಿಂಹರಾಜಪುರದಲ್ಲಿದೆ.

ಕೆಲಸೂರು ಬಹಳ ಹಿಂದಿನಿಂದಲೂ ಜೈನ ತೀರ್ಥಕ್ಷೇತ್ರ. ಏಳನೆಯ ಶತಮಾನದ ವೇಳೆಗೆ ಗಂಗರು ಇಲ್ಲಿ ಜಿನ ಚೈತ್ಯಾಲಯವನ್ನು ಮಾಡಿಸಿದ್ದರು. ಕೆಲಸೂರಿಗೆ ಛತ್ರತ್ರಯಪುರವೆಂಬ ಇನ್ನೊಂದು ಹೆಸರಿದೆ. ಇಲ್ಲಿ ಚುಂದ್ರನಾಥ ಬಸದಿಯು ಪುರಾತನ ಜಿನಾಲಯ. ಪದ್ಮರಸನೆಂಬವನು ಈ ಬಸದಿಯಲ್ಲಿ ಕುಳಿತು ಕಾವ್ಯ ರಚಿಸಿದ್ದಾಗಿ ಹೇಳಿದ್ದಾನೆ. ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನ ಜಾವಗಲ್ ಊರಿನ ಚಂದ್ರನಾಥ ಬಸದಿ ಸಹ ಪುರಾತನ ದೇವಾಲಯವಾಗಿದ್ದು, ಇತ್ತೀಚೆಗೆ ಅದರ ಜೀರ್ಣೋದ್ಧಾರ ಕಾರ್ಯ ನಡೆದಿದೆ. ಬನವಾಸಿಯಲ್ಲಿಯೂ ಪ್ರಾಚೀನವಾದ ಚಂದ್ರಪ್ರಭ ಜಿನಾಲಯವಿದೆ. ಇವುಗಳ ಪರಂಪರೆಗೆ ಸೇರಿದ್ದು ಧರ್ಮಸ್ಥಳದ ಸುಂದರ ಚಂದ್ರಪ್ರಭ ಬಸದಿ. ಅದನ್ನು ಶಾಸ್ತ್ರ ಪ್ರಣೀತ ವಿಧಿ ವಿಧಾನಗಳಿಂದ ಪುನರ್ಭರಣಗೊಳಿಸಿ, ನವೀನ ರೀತಿಯ ವಿನ್ಯಾಸದಿಂದ ಜೀರ್ಣೋದ್ಧಾರಗೊಳಿಸಿದ ಶ್ರೇಯಸ್ಸು ಮಾತೃಶ್ರೀ ರತ್ನಮ್ಮ ರತ್ನವರ್ಮ ಹೆಗ್ಗಡೆಯವರ ಚಿರಂಜೀವಿಗಳಾದ ಪದ್ಮಭೂಷಣ ರಾಜರ್ಷಿ ಡಾ. ವೀರೇಂದ್ರ ಹೆಗ್ಗಡೆ ಅವರಿಗೂ ಅವರ ಸೌಭಾಗ್ಯವತಿ ಶ್ರೀಮತಿ ಹೇಮಾವತಿ ವೀರೇಂದ್ರ ಹೆಗ್ಗಡೆಯವರಿಗೂ ಸಲ್ಲುತ್ತದೆ.

ಚಂದ್ರಪ್ರಭ ತೀರ್ಥಂಕರರ ಶಾಸನ ದೇವತೆಯಾದ ಜ್ವಾಲಾಮಾಲಿನೀದೇವಿಯ ಮಹಿಮೆಯೂ

ಅಗಾಧವಾಗಿ ಪ್ರಕಟವಾಗಿದೆ. ಹತ್ತು ಹನ್ನೊಂದನೆಯ ಶತಮಾನದ ವೇಳೆಗೆ ಜ್ವಾಲಾಮಾಲಿನಿಯನ್ನು ಅರಮನೆಗಳಲ್ಲೂ ಮನೆದೇವರ ಗುಡಿಗಳಲ್ಲೂ ಪೂಜಿಸುತ್ತಿದ್ದ ರಾಜಮನ್ನೆಯರ ಉಲ್ಲೇಖಗಳು ಶಾಸನಗಳಲ್ಲಿ ಸಿಗುತ್ತವೆ. ಈಗಿನ ಧಾರವಾಡ ಜಿಲ್ಲೆಯಲ್ಲಿ ದೊರೆತ ಎರಡು ಶಾಸನಗಳ ಪ್ರಯೋಗಗಳನ್ನು ದೃಷ್ಟಾಂತ ರೂಪದಲ್ಲಿ ಇಲ್ಲಿ ಕೊಡುತ್ತಿದ್ದೇನೆ.

೧. ಧಾರವಾಡ ಜಿಲ್ಲೆಯ ಗಾವರವಾಡ ಶಾಸನವು ಅತ್ಯಂತ ಮಹತ್ವದ್ದಾಗಿದೆ. ಅದರಲ್ಲಿ ಕೆಲವು ಚಾರಿತ್ರಿಕ ದಾಖಲೆಗಳೂ ಸೇರಿಕೊಂಡಿದೆ. ಇದೊಂದು ಸುದೀರ್ಘವಾದ ಶಾಸನ. ಇದು ಕಲ್ಯಾಣ ಚಾಳುಕ್ಯರ ಭುವನೈಕಮಲ್ಲ ಇಮ್ಮಡಿ ಸೋಮೇಶ್ವರ ಚಕ್ರವರ್ತಿಯ ಆಳ್ವಿಕೆಗೆ ಸೇರಿದ ಶಾಸನ. ಇದರಲ್ಲಿ ಮಯೂರಾವತೀಪುರದ ಒಡೆಯನೂ ಕತ್ತಲೆಕುಲಕ್ಕೆ ಸೇರಿದವನೂ ಆದ ಒಬ್ಬ ಕಾಟರಸನನ್ನು ವರ್ಣಿಸಲಾಗಿದೆ. ಶ್ರವಣಬೆಳಗೊಳದ ಚಿಕ್ಕ ಬೆಟ್ಟದ ಮೇಲೆ ಇರುವ ಕತ್ತಲೆ ಬಸದಿಯನ್ನು ಈ ಕತ್ತಲೆ ಕುಲದ ಕಾಟರಸನು ಅಥವಾ ಅವನ ವಂಶಸ್ಥರು ಕಟ್ಟಿಸಿರಬೇಕು. ಶಾಸನ ದೊಡ್ಡದಿರುವುದರಿಂದ ಕೇವಲ ಕೆಲವು ಸಾಲುಗಳನ್ನು ಉದಾಹರಿಸುತ್ತೇನೆ:

ಸ್ವಸ್ತಿ ಸಮಧಿಗತ ಪಂಚಮಹಾಬ್ದ ಮಹಾಸಾಮನ್ತ ಭುಜಬಳೋಪಾರ್ಜ್ಜಿತ ವಿಜಯ ಲಕ್ಷ್ಮೀಕಾಂತಂ ಸಮಸ್ತಾರಿ ವಿಜಯದಕ್ಷ ದಕ್ಷಿಣ ದೋರ್ದ್ದಣ್ಡಂ ಕತ್ತಲೆಕುಲ ಕಮಳ ಮಾರ್ತ್ತಣ್ಡಂ ಮಯೂರಾವತೀ ಪುರವರಾಧೀಶ್ವರಂ **ಜ್ವಾಲಿನೀಲಬ್ಧವರ** ಪ್ರಸಾದ ಕರ್ಪ್ಪೂರ ವರ್ಷಂ ಜಿನಧರ್ಮ್ಮ ನಿರ್ಮ್ಮಳಂ ನೆರೆ ಕಾಟಿಯಂಕಕಾರ ನಾಮಾದಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮನ್ ಮಹಾಸಾಮಂತ ಬೆಳ್ವಲಾಧಿಪತಿ ಭುಜಬಳ ಕಾಟರಸರುಂ॥ (ಎಪಿಗ್ರಾಫಿಯ ಇಂಡಿಕ, ಸಂಪುಟ XV. ನಂ. ೨೩ ಗಾವರವಾಡ - ಅಣ್ಣಿಗೇರಿ, ಕ್ರಿ.ಶ. ೧೦೭೧ - ೭೨; ಸಾಲು ೪೪-೪೭)

ಈ ಶಾಸನದ ಮಹತ್ವವೆಂದರೆ ಶಾಂತಿನಾಥನೆಂಬ ಜೈನ ಕವಿಯು ಇದನ್ನು ಬರೆದಿದ್ದಾನೆಂಬುದು. ಶಾಂತಿನಾಥನು ಸುಕುಮಾರ ಚರಿತೆಯೆಂಬ ಚಂಪೂ ಕಾವ್ಯವನ್ನೂ ಶಿಕಾರಿಪುರದ ೧೩೬ನೆಯ ಶಾಸನವನ್ನೂ ರಚಿಸಿ ಪ್ರಸಿದ್ಧನಾಗಿದ್ದಾನೆ.

೨. ಇನ್ನೊಂದು ಶಾಸನ ಹನ್ನೆರಡನೆಯ ಶತಮಾನಕ್ಕೆ ಸೇರಿದ್ದಾಗಿದೆ. ಇದು ಸಹ ಹಿಂದೆ ಧಾರವಾಡ ಜಿಲ್ಲೆಗೆ ಸೇರಿದ್ದು ಈಗ ಜಿಲ್ಲಾ ಕೇಂದ್ರವಾಗಿರುವ ಗದಗದಲ್ಲಿ ದೊರೆತಿದೆ. ಶಾಸನದ ಪಾಠದಿಂದ ಈಗ ಪ್ರಸ್ತುತಕ್ಕೆ ಉಚಿತವಾಗುವಷ್ಟನ್ನು ಮಾತ್ರ ಎತ್ತಿ ಕೊಡಲಾಗುತ್ತಿದೆ; ಸ್ವಸ್ತಿ ಸಮಧಿಗತ ಪಂಚಮಹಾಶಬ್ದಂ ಮಹಾಮಂಡಲೇಶ್ವರ ಆಸಂದಿ ಮಯೂರ ಪುರವರಾಧೀಶ್ವರ ವಿರೋಧಿ ಮಂಡಳಿಕ ನಗ ವಜ್ರದಂಡಂ ಸುಭಟ ಚೂಡಾಮಣಿ ವೈರಿಗಜ ಶೇಖರಿ ಸಹಜ ಮುರಾರಿ ಶ್ರೀಮಜ್ಜಿನ ಗಂಧೋದಕ **ಪವಿತ್ರೀಕೃತೋತ್ತಮಾಂಗನೇ** ಕಾಂಗವೀರ ಪರನಾರೀ ದೂರ ವಿಬುಧ ಜನಸ್ತುತ್ಯ ಬೆಳ್ವೊಲಾಧಿತ್ಯ **ಜ್ವಾಳಿನೀ ದೇವಿಲಬ್ಧ ವರ ಪ್ರಸಾದಾಸಾದಿತ** ಕಲಿಗಳಂ ಕಾವ ಮಹಾಮಂಡಳೇಶ್ವರಂ ರಾಯ ದೇವರಸರು. [ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್, ಸಂಪುಟ XV. ನಂ. ೨೧೪, ಕ್ರಿ.ಶ. ೧೧೯೯, ಗದಗ, ಪುಟ ೨೫೬-೨೫೭]

ಇವೆರಡು ಉದಾಹೃತ ಶಾಸನಗಳಿಂದ ತಿಳಿದು ಬರುವ ವಿಚಾರಗಳೆಂದರೆ ಯಕ್ಷಿ ಜ್ವಾಳಾಮಾಳಿನೀ ದೇವಿಯು ಬೆಳ್ವೊಲ ನಾಡಿನೊಳಗೆ ಪ್ರಸಿದ್ಧಳಾದ ದೇವತೆಯಾಗಿದ್ದಳು. ಆಕೆಯ

ಅನುಗ್ರಹದಿಂದ ಕೆಲವರು ಮಹಾಮಂಡಳೇಶ್ವರರಾಗಿದ್ದರು. ಅವರಲ್ಲಿ ಕತ್ತಲೆ ಕುಲದ ಕಾಟರಸನು ಹನ್ನೊಂದನೆಯ ಶತಮಾನದಲ್ಲಿಯೂ ದೇವರಸನು ಹನ್ನೆರಡನೆಯ ಶತಮಾನದಲ್ಲಿಯೂ ಪ್ರಸಿದ್ಧರಾಗಿದ್ದರು.

ಬೆಳ್ವೊಲವೆಂಬ ಪ್ರದೇಶದ ವ್ಯಾಪ್ತಿ ವಿಶಾಲವಾದುದು. ಬಹು ಧರ್ಮಧೇನು ನಿವಹಕ್ಕೆ ಆಡುಂಬೊಲಂ ಬೆಳ್ವಲಂ (ಎಇಂ. XIII, ೪ ಎ. ಕ್ರಿ.ಶ. ೧೧೧೨, ಗದಗ ಜಿಲ್ಲೆ ಮತ್ತು ತಾಲೂಕು ಇಟ್ಟಗಿಯ ಶಾಸನ) ಎಂದೆನಿಸಿತ್ತು; ಇದು ಆ ಖ್ಯಾತ ಕುಂತಳ ದೇಶದಲ್ಲಿ ಒಂದು ಗಣ್ಯನಾಡು. ಬೆಳ್ವಲ ವಿಷಯಕ್ಕೆ ರಾಜಧಾನಿಯಾಗಿದ್ದುದು ಅಣ್ಣಿಗೆರೆ.

ಬೆಳ್ವೊಲ ಮುನ್ನೂರು ಮತ್ತು ಪುಲಿಗೆರೆ ಮುನ್ನೂರು ಸೇರಿ ಆದ ಎರಡರುನೂರರ ಪ್ರದೇಶ ಚರಿತ್ರೆಯಲ್ಲಿ ಹೆಸರಾಗಿದೆ. ಗಂಗರು, ರಟ್ಟರು, ಚಾಲುಕ್ಯರು ಈ ಭಾಗವನ್ನು ಆಳುತ್ತಿದ್ದ ಅವಧಿಯ ಉದ್ದಕ್ಕೂ ಸುಮಾರು ಆರುನೂರು ವರ್ಷಗಳವರೆಗೆ ಸತತವಾಗಿ ಈ ಪ್ರದೇಶವಷ್ಟೂ ಜೈನ ಕೇಂದ್ರವಾಗಿ ವಿಜೃಂಭಿಸಿತು. ಬೆಳ್ವಲ ಮುನ್ನೂರರಲ್ಲಿ ರಾಜಧಾನಿ ಪಟ್ಟಣ ಅಣ್ಣಿಗೇರಿಯು ಬಾದಾಮಿ ಚಾಲುಕ್ಯರ ಕಾಲಕ್ಕಾಗಲೇ ಪ್ರಸಿದ್ಧ ಜೈನ ಕ್ಷೇತ್ರವಾಗಿತ್ತು (ಸೌಇಇ. XI-I ನಂ. ೫. ಕ್ರಿ.ಶ. ೭೫೧-೭೫೨ ಅಣ್ಣಿಗೆರೆ ಶಾಸನ). ಅನಂತರ ರಾಷ್ಟ್ರಕೂಟರ, ಕಲ್ಯಾಣಿ ಚಾಳುಕ್ಯರ, ಹೊಯ್ಸಳರ ಕಾಲದಲ್ಲಿಯೂ ಅಣ್ಣಿಗೆರೆಯು ಬೆಳ್ವೊಲದ ರಾಜಧಾನಿ ಮಹಾನಗರವಾಗಿ ಮುಂದುವರೆಯಿತು. ಗಂಗರ ಪೆರ್ಮಾಡಿ ಬೂತುಗನು ಇಲ್ಲಿ ಪೆರ್ಮಾಡಿ ಬಸದಿಯನ್ನು ಕಟ್ಟಿಸಿದನು. ಅದನ್ನು ಭುವನೈಕಮಲ್ಲನು ಧವಳಿತ ಉತ್ತುಂಗ ತಳತರಂಗವಾಗಿ ಮಾಡಿಸಿದನು (ಸೌಇಇ. XI-I ನಂ. ೧೦೩ ನಂದವಾಡಿಗೆ ಕ್ರಿ.ಶ. ಸು. ೧೦೬೫).

ಬೆಳ್ವಲ ನಾಡಿನಲ್ಲಿ ಅಣ್ಣಿಗೆರೆಯಲ್ಲದೆ ಇಟಗಿ, ಕುಕನೂರು ಮೂವತ್ತು, ಕುಂದಗೋಳ, ಚಿಂಚಲಿ, ಗದಗ, ನರಗುಂದ, ನರೇಗಲ್ಲ ಹನ್ನೆರಡು, ಮುಳಗುಂದ ಹನ್ನೆರಡು, ರೋಣ, ಲಕ್ಕುಂಡಿ, ಶಿರೂರು, ಹುನಗುಂದ ಮೂವತ್ತು (ಪೊನ್ನುಗುಂದ) ಮೊದಲಾದ ಸ್ಥಳಗಳು ಜೈನತ್ವಕ್ಕೆ ಆಧಾರ ಸ್ತಂಭವೆನಿಸಿದ್ದುವು. ಧಾರವಾಡ ಜಿಲ್ಲೆ, ಬೆಳಗಾವಿ (ರಾಮದುರ್ಗ ಮತ್ತು ಸೌದತ್ತಿ) ಬಿಜಾಪುರ, ರಾಯಚೂರು (ಯಲಬುರ್ಗಿ) - ಈ ನಾಲ್ಕು ಜಿಲ್ಲೆಯ ಬಹುಮಟ್ಟಿನ ಮುಖ್ಯ ಹಳ್ಳಿಗಳನ್ನು ಒಳಗೊಂಡ ಹರಹಿನ ನೆಲವೆಲ್ಲವು ಬೆಳ್ವಲ ಸೀಮೆಯಾಗಿ ಸೇರಿತ್ತು. ದಾನಚಿಂತಾಮಣಿ ಅತ್ತಿಮಬ್ಬೆಯು ಈ ಬೆಳ್ವಲನಾಡಿನ ಮಹಾನ್ ಸ್ತ್ರೀರತ್ನವೆಂಬುದನ್ನು ಇಲ್ಲಿ ನೆನೆಯಬಹುದು. ಆದಿಕವಿ ಪಂಪನು ಅಣ್ಣಿಗೆರೆಯುವನು; ಒಂದನೆಯ ನಾಗವರ್ಮ, ಶ್ರೀಧರ, ನಯಸೇನ, ವಿಜಯಣ್ಣ ಮೊದಲಾದ ಸರಸ್ವತಿಯ ವರಪುತ್ರರು ಬೆಳ್ವಲದವರು. ಇದರಿಂದ ಸ್ಪಷ್ಟವಾಗುವಂತೆ ಬೆಳ್ವೊಲವು ಬಸದಿಗಳ ಬೀಡು ಎನಿಸಿ, ಜೈನಧರ್ಮದ ಪ್ರಸರಣಕ್ಕೆ ಇಂಬಾಗಿತ್ತು.

ಗದಗ ಮತ್ತು ಗಾವರವಾಡದ ಶಾಸನಗಳ ಆಧಾರದಿಂದ ಗ್ರಹಿಸಬಹುದಾದ ಅರ್ಥ ಪ್ರತೀತಿಗೆ ಈ ಭೌಗೋಳಿಕ ಚಾರಿತ್ರಿಕ ಹಿನ್ನೆಲೆಯನ್ನೂ ಅವಶ್ಯ ಅಳವಡಿಸಿಕೊಂಡೇ ತೀರ್ಮಾನವನ್ನು ಕೈಗೊಳ್ಳಬೇಕು. ಅಣ್ಣಿಗೆರೆ, ಮುಳುಗುಂದ, ಲಕ್ಕುಂಡಿ ಮೊದಲಾದ ಸ್ಥಳಗಳು ಜೈನ ಕೇಂದ್ರಗಳಾಗಿದ್ದು ಅನೇಕ ಜಿನಗೃಹಗಳನ್ನು ಒಳಗೊಂಡಿದ್ದವು. ಈ ಚೈತ್ಯ ಮಂದಿರಗಳಲ್ಲಿ ಯಕ್ಷಿಯರ ಮೂರ್ತಿಗಳು

ಪ್ರಭಾವಶಾಲಿಯಾಗಿ ಪೂಜೆಗೊಳ್ಳುತ್ತಿದ್ದವು. ಲಕ್ಕುಂಡಿಯ ಬ್ರಹ್ಮಜಿನಾಲಯದ ಆವರಣ ದೊಳಗಿದ್ದ ಪದ್ಮಾವತಿ ದೇವಿಯ ಗುಡಿಯು ಪ್ರಸಿದ್ಧವಾಗಿತ್ತು. (ಸೌಇಇ. XI. ೫೨, ೧೦೦೭ ಗದಗ ತಾಲೂಕ ಲಕ್ಕುಂಡಿಯ ಶಾಸನ). ಅದರಂತೆಯೇ ಅಣ್ಣಿಗೇರಿ ಮತ್ತು ಮುಳ್ಗುಂದಗಳಲ್ಲಿ ಇದ್ದ ಬಸದಿಗಳಲ್ಲಿ ಜ್ವಾಳಾಮಾಳಿನೀದೇವಿ ಯಕ್ಷಿಯ ಗುಡಿಗಳೂ, ಮೂರ್ತಿಗಳೂ ಇದ್ದಿರಬೇಕು. ಈ ಯಕ್ಷಿಯ ಮಹಿಮೆಯು ಮನೆ ಮಾತಾಗಿ ರಾಜ ಪ್ರಜೆಗಳೆಲ್ಲರ ಮೇಲೆ ತನ್ನ ಪ್ರಭಾವ ಬೀರಿದ್ದಿರಬೇಕು. ಈಗಿನ ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ (ಸಿಂಹನಗದ್ದೆ) ಕ್ಷೇತ್ರವು ಜ್ವಾಳಾಮಾಳಿನೀ ದೇವಿಯ ಗುಡಿಯಿಂದ ವಿರಾಜಮಾನಗೊಂಡು ಪ್ರಸಿದ್ಧಿಯನ್ನು ಪಡೆಯುವುದಕ್ಕೂ ಪೂರ್ವದಲ್ಲಿ ಬೆಳ್ವಲ ನಾಡಿನಲ್ಲಿ ಈ ಯಕ್ಷಿಯ ಮಹಿಮೆಯು ಮನ್ನಣೆ ಹೊಂದಿತ್ತು ಎಂಬುದಕ್ಕೆ ಈ ಲೇಖನದಲ್ಲಿ ಉದಾಹರಿಸಿರುವ ಎರಡು ಶಾಸನ ಭಾಗಗಳು ಸ್ಪಷ್ಟ ದಾಖಲೆಗಳಾಗಿವೆ. ಈ ವಿಚಾರವಾಗಿ ಇನ್ನೂ ಆಳವಾದ ಅಧ್ಯಯನ ಕೈಗೊಳ್ಳಲು ಅವಕಾಶವಿದೆ.

ಮೇಲ್ಕಂಡ ಎರಡು ಶಾಸನಗಳಲ್ಲಿ ಪ್ರಸ್ತಾಪಗೊಂಡಿರುವ ಮಯೂರಪುರವು ಯಾವುದೆಂಬ ಬಗ್ಗೆ ಇದುವರೆಗೆ ಚರ್ಚೆಯಾಗಿಲ್ಲ. ಇದೇ ಮೊದಲನೆಯ ಬಾರಿಗೆ ನಾನಿಲ್ಲಿ ಇದರ ಸಂಬಂಧ ಕೆಲವು ಹೊಸ ಮಾಹಿತಿಗಳನ್ನು ಕೊಡುತ್ತಿದ್ದೇನೆ. ಈ ಮಯೂರಪುರವೆಂಬುದು ಕನ್ನಡದ ಸ್ಥಳ ನಾಮವಾಚಕ ಸಂಸ್ಕೃತೀಕರಣಗೊಂಡಿರುವ ರೂಪ.

ಕನ್ನಡ ಶಾಸನಗಳ ಅಧ್ಯಯನಕಾರರಿಗೆ ನವಿಲು ಸಂಬಂಧದ ಊರಿನ ಹೆಸರುಗಳು ಚಿರಪರಿಚಿತ. ಶಿವಮೊಗ್ಗ ಜಿಲ್ಲೆಯಲ್ಲಿ ಶಿಕಾರಿಪುರ ತಾಲೂಕಿಗೆ ಸೇರಿದ ನವಿಲೆಯಿದೆ (ಎಕ. VII. ಶಿಕಾರಿಪುರ ೨೦ ಕ್ರಿ.ಶ. ೧೦೩೨). ಆದರೆ ಪ್ರಸ್ತುತ ಮಯೂರಪುರವು ಬೆಳ್ವಲ ನಾಡಿಗೆ ಸೇರಿದ್ದು, ಅದರಿಂದ ಶಿವಮೊಗ್ಗ ಜಿಲ್ಲೆಯ ನವಿಲೆಗೆ ಸಂಬಂಧಿಸಿದ್ದಲ್ಲ. ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲೂಕಿನಲ್ಲಿ ನವಿಲೆ ಇದೆ (ಸೌಇಇ. XI-I ಸಂಖ್ಯೆ ೧೦೩ ಕ್ರಿ.ಶ. ೧೦೬೮). ಆದರೆ ರಾಯಚೂರು ಜಿಲ್ಲೆಯ ಯಲಬುರ್ಗಿ ತಾಲೂಕು ಮಾತ್ರ ಬೆಳ್ವಲ ಪ್ರದೇಶಕ್ಕೆ ಒಳಪಟ್ಟಿತ್ತು. ಅದರಿಂದ ಅದೂ ಇಲ್ಲಿಗೆ ಅನ್ವಯಿಸದು. ಮೈಸೂರು ಜಿಲ್ಲೆಯ ಹೆಗ್ಗಡೆದೇವನಕೋಟೆ ಸುತ್ತಮುತ್ತಲ ಪ್ರದೇಶಕ್ಕೆ ೧೧ನೆಯ ಶತಮಾನದಲ್ಲಿ ನವಿ(ವ)ಲೆನಾಡು ಪ್ರಾಂತವೆಂದು ಕರೆಯಲಾಗಿದೆ. (ಎಕ. ಸಂಖ್ಯೆ ೬೦: ೧೦೫೭; ಎಇ. VI, ಸಂಖ್ಯೆ ೨೧೬. ೧೦೫೭; ಎಕ VI ಸಂಖ್ಯೆ ೧೦೩ ಸು. ೯೧೦). ಈ ಭಾಗವು ಪ್ರಾಚೀನ ಪುನ್ನಾಡು ದೇಶವಾಗಿದ್ದು ಜೈನರ ಕೇಂದ್ರವಾಗಿತ್ತು ಮತ್ತು ಕೀರ್ತಿಪುರ (ಕಿತ್ತೂರು) ಅದರ ರಾಜಧಾನಿ ಆಗಿತ್ತು. ಆದರೆ ಅದು ಕೂಡ ಬೆಳ್ವಲ ಪ್ರದೇಶವಲ್ಲವಾದ್ದರಿಂದ ಪ್ರಸ್ತುತ ವಿವೇಚನೆಯ ಕಕ್ಷೆಗೆ ಅಳವಡುವುದಿಲ್ಲ.

ಧಾರವಾಡ ಜಿಲ್ಲೆಯ ನವಿಲುಗುಂದವು ಬೆಳ್ವಲನಾಡಿಗೆ ಒಳಪಟ್ಟಿತ್ತು. 'ನವಿಲುಗುಂದ ನಾಲ್ವತ್ತು' ಪ್ರದೇಶವನ್ನು ಶಾಸನ ಉಲ್ಲೇಖಿಸಿದೆ (ಇಆ. XII. ಸಂಖ್ಯೆ ೯೭. ೧೧೮೭). ಅಲ್ಲದೆ ನವಿಲ್ಗುಂದ ಪುರಂ- ಎಂಬ ಸ್ಥಳನಾಮಪೂರವೂ ಶಾಸನದಲ್ಲಿದೆ. (ಸೌಇಇ XI-ಸಂಖ್ಯೆ ೪೫, ೯೮೦). ನವಿಲ್ಗುಂದದ ಪರಿಸರದ ಅಳತೆಯ ಕೋಲನ್ನು 'ನವಿಲ್ಗುಂದಗೋಲು' ಎಂದು ಶಾಸನ ನಮೂದಿಸಿದೆ. (ಸೌಇಇ XX. ಸಂಖ್ಯೆ-೨೪೮ ಕ್ರಿ.ಶ. ೧೨೨೮) ಇದೇ ಧಾರವಾಡ ಜಿಲ್ಲೆಯ ನವಿಲೂರು ಬಾದಾಮಿ ಚಾಳುಕ್ಯರ ಕಾಲದಿಂದಲೂ ಏಳು-ಎಂಟನೆಯ ಶತಮಾನದಿಂದಲೂ, ಜೈನ ಕ್ಷೇತ್ರವೆಂದು

ಪ್ರಸಿದ್ಧವಾಗಿದೆ; ೧೨೯೦ ವರ್ಷಗಳಿಂದಲೂ ಈ ನವಿಲೂರು ಜೈನಕೇಂದ್ರವಾಗಿ ಬೆಳೆದು ಬಂದಿದೆಯೆಂದು ಶಾಸನಗಳಿಂದ ತಿಳಿದು ಬರುತ್ತದೆ.

೧. ನವಿಲೂರ ನಾಟ್ಗಾಮುಣ್ಡರು ಬೆಳ್ಗೊಳದ ಗೋವಿಂದಪಾಡಿಉ(ಎಕ. ೨ಸಂಖ್ಯೆ-೩೮ (೩೫) ಕ್ರಿ.ಶ. ೮೦೦)

೨. ನವಿಲೂರು ಗಣದ ಬಾಳಂಬಾಕನ್ತಿಯರ ಮಗಳ್ ವಿಜಕ್ಕಂ (ಎಕ. VI ಕಡೂರು ಸಂಖ್ಯೆ ೧೫೯,) ಕ್ರಿ.ಶ. ೯೯೧

೩. ಸ್ವಸ್ತಿ ಶ್ರೀಮತ್ ನವಿಲೂರ್ಸಂಘದ ಪುಷ್ಪಸೇನಾಚಾರಿಯ ನಿಸಿಧಿಗೆ (ಎಕ. ೨ (ಪ) ಸಂಖ್ಯೆ ೧೧೮ ಅತೇದಿ ಶಾಸನ)

೪. ನವಿಲೂರಾ ಸಿರಿಸಂಘದಾಜಿಗಣದಾ ರಾಜ್ಞೀಮತಿ ಗನ್ತಿಯಾರ್ (ಎಕ. ೨. ಸಂಖ್ಯೆ ೧೧೨ (೯೭) ೭ನೆಯ ಶತಮಾನ)

೫. ನವಿಲೂರ ಸಂಘದ ಮಹಾನನ್ದಾಮತೀಗನ್ತಿಯಾರ್ (ಅದೇ : ೧೭೭ (೧೦೨) ೭ ಶ.)

ಈ ಶಾಸನ ಪ್ರಯೋಗಗಳಿಂದ ಸಾಬೀತು ಆಗುವಂತೆ ನವಿಲೂರು ಜೈನ ಕೇಂದ್ರವಾಗಿತ್ತು. ಅಲ್ಲದೆ ಆ ಊರಿನ ಹೆಸರಿನಿಂದ ಒಂದು ಜೈನ ಗಣವೂ, ಜೈನ ಸಂಘವೂ ಪ್ರಚಾರ ಪಡೆದವು. ಈ ಕಾರಣಗಳಿಂದ ಧಾರವಾಡ ಜಿಲ್ಲೆ-ತಾಲ್ಲೂಕಿಗೆ ಸೇರಿದ ಈ ನವಿಲೂರು ಬೆಳ್ವಲ ಪ್ರದೇಶದ ಕಂಪಣ ಕೇಂದ್ರವಾಗಿದ್ದು ಅದರ ಹೆಸರನ್ನು 'ಮಯೂರಪುರ' ಎಂದು ಸಂಸ್ಕೃತೀಕರಣ ಗೊಳಿಸಿದೆಯೆಂದು ಸಂಭಾವ್ಯ ಊಹೆ ಮಾಡಬಹುದು. ಈ ಪ್ರಮೇಯವನ್ನು ಬೆಂಬಲಿಸಲು ಶ್ರವಣಬೆಳ್ಗೊಳದ ಎರಡು ಶಾಸನಗಳು ಸಿದ್ಧವಾಗಿವೆ. ಆ ಎರಡೂ ಶಾಸನಗಳ ಸ್ವಾರಸ್ಯ ಮತ್ತು ಸಹಾಯವೆಂದರೆ ಅವು ಸಂಸ್ಕೃತ ಕನ್ನಡ ಎರಡೂ ಭಾಷೆಗಳಲ್ಲಿವೆ; ಪೂರ್ವಾರ್ಧ ಕನ್ನಡದಲ್ಲೂ, ಉತ್ತರಾರ್ಧ ಸಂಸ್ಕೃತದಲ್ಲೂ ರಚಿತವಾಗಿವೆ. ಕನ್ನಡದಲ್ಲಿರುವ ಪೂರ್ವಾರ್ಧದಲ್ಲಿ ನವಿಲೂರು ಸಂಘ ಎಂದೂ, ಸಂಸ್ಕೃತ ರಚನೆಯಿರುವ ಉತ್ತರಾರ್ಧದಲ್ಲಿ ಮಯೂರ ಸಂಘವೆಂದೂ ಸ್ಪಷ್ಟವಾಗಿದೆ. [ಎಕ.೨. ಶ್ರಬೆ.೧೩೨ (೧೧೪) ಮತ್ತು ೧೨೩ (೧೦೮).] ಅಲ್ಲದೆ ಇದರಲ್ಲಿ 'ಮಯೂರ ಗ್ರಾಮ ಸಂಘಸ್ಯ' ಎಂದು ಕನ್ನಡ ಅಂಕಿತ ನಾಮವನ್ನು ಸಂಸ್ಕೃತಕ್ಕೆ ಪರಿವರ್ತಿಸಿರುವುದು ನಿಚ್ಚಳವಾಗಿದೆ. ಆದ್ದರಿಂದ ಮಯೂರಪುರ ಎಂಬುದು ನವಿಲೂರು ಎಂಬ ಕನ್ನಡ ಸ್ಥಳವಾಚಿ ಮೂಲದ್ದೆಂದು ತೀರ್ಮಾನಿಸಬಹುದು.

ಆದರೆ, ಈ ತೀರ್ಮಾನವನ್ನು ಅಖೈರಾಗಿ ಒಪ್ಪಲಾಗುವುದಿಲ್ಲ. ಏಕೆಂದರೆ ನವಿಲೂರು ಬೆಳ್ವಲದಲ್ಲೇ ಇದ್ದರೂ ಜೈನ ಕೇಂದ್ರವೂ ಆಗಿದ್ದರೂ ಮಯೂರ ಗ್ರಾಮವೇ ಆಗಿದ್ದರೂ ಮಹಾಸಾಮಂತ ರಾಯದೇವರಸನೂ ಮಹಾಮಂಡಲೇಶ್ವರ ಕಾಟರಸನೂ ಇದ್ದ ಮಯೂರಪುರ ನವಿಲೂರು ಅಲ್ಲ; ಆ ಅಧಿಕಾರಿಗಳು ಆಳಿದ್ದು ಈಗಿನ ನವಿಲ್ಗುಂದದಿಂದ. ನವಿಲ್ಗುಂದವೂ ಚಾಳುಕ್ಯರ ಮತ್ತು ಗಂಗ ರಾಷ್ಟ್ರಕೂಟರ ಆಳ್ವಿಕೆಯ ಅವಧಿಯಲ್ಲಿ ಜೈನ ಕೇಂದ್ರವಾಗಿತ್ತು. ಗದಗದ (ಬಿ.ಕೆ. ೧೯೨೬-೨೭, ನಂ. ೬. ಕ್ರಿ.ಶ. ೧೧೯೯) ಶಾಸನವು ಈ ನವಿಲ್ಗುಂದವು ಹೇಗೆ ದೊಡ್ಡ ಜೈನ ಕ್ಷೇತ್ರವಾಗಿತ್ತೆಂಬುದನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿದೆ. ನವಿಲ್ಗುಂದವು ಜಿನಭವನಗಳಿಂದ ಕೂಡಿತ್ತು; ತೀರ್ಥಂಕರ ನಿವಾಸದೆ ಶೋಭಾಕರ ಯಕ್ಷ ಯಕ್ಷಿಣೀ ಗೃಹ ಪರಿಕರದೆ ಜಿನಾಗಮ.

ಜ್ವಾಳನೀ ಸಮಗ್ರ ಗುಣಮಣಿ
ಮಾಳೀನೀ ಸಾಧಕ ವಿನಯ ಸುಬ್ರತಿಜನತಾ
ಪಾಳಿನೀ ದುರಿತಮಳಪ್ರ
ಕ್ಷಾಳಿನೀ ಸಂವಿದಿದೆಯೆನಿಪ್ಪಳಂತಾ ಪುರದೊಳ್॥

ಕತ್ತಲೆ ಕುಲಕ್ಕೆ ಸೇರಿದ (ಕಳ್ತಲೆಗ ಎಂಬುದು ಸರಿಯಾದ ರೂಪ) ಕೆಂಚಮನೆಂಬಾತನು ಅಂತಾ ಜ್ವಾಳಿನಿ ದೇವಿಯಲ್ಲಿಗೆ ಆರಾಧಿಸಲೆಂದೆ ಬಂದು ತನ್ನ ಭಕ್ತಿ ನಿರ್ಭರ ಪೂಜೆಯನ್ನು ಸಲ್ಲಿಸಿದನು; ನಿನ್ನಂ ಬಲಿಗೊಂಡೆನ್ ಎಂದರೆ ನಿನ್ನನ್ನು ಪೂಜಿಸಿ ಆರಾಧಿಸಿದ್ದೇನೆ (ಅರ್ಚಾ, ಪೂಜಾ, ಸಪರ್ಯಾ, ಉಪಹಾರ ಬಲಿಃ - ಈ ೫ ಪೂಜೆ - ಇಮ್ಮಡಿ ನಾಗವರ್ಮಕೃತ ಅಭಿದಾನ ರತ್ನಮಾಲ ಕರ್ನಾಟಕ ಟೀಕೆ); ಆವಗವೆನ್ನಿಷ್ಟಮನೀವುದೆಂದು ಕರುಣಾಕ್ಕಾ ನಮ್ನನಾಗಿರ್ಪ್ಪದುಂ (ಶಾಸನ ಪಾಠ, ಸಾಲು ೫ರಿಂದ ೧೦). ಜ್ವಾಳಾಮಾಳಿನೀ ದೇವಿಯು ಆತನಿಗೆ ಪ್ರಸನ್ನಳಾಗಿ ವರವನ್ನಿತ್ತು ಅನುಗ್ರಹಿಸಿದಳು. ಆ ವರದಿಂದ ದೇಹಬಲವೂ, ಆತ್ಮಬಲವೂ ಹೆಚ್ಚಿ ಕೆಂಚನೃಪನು ಎದುರಾಳಿಗಳನ್ನು ಸದೆ ಬಡಿದನು., ನವಿಲ್ಗುಂದ ಹೆಸರಾಯಿತು. ಶೌರ್ಯನಿಧಿ ಕೆಂಚನು ಬೆಳ್ವೊಲ ನಾಡೆಲ್ಲವನಾಳ್ದ ಮಂಡಲಿಕನಾದನು.

ಇನ್ತಿವಗಿದು ಸಂಪದಮಂ
ತನಗಿತ್ತಾ ಜ್ವಾಳಿನೀ ಮಹಾದೇವಿಗೆ ಚೆ
ಲ್ವೆನಿಪಾವಾಸಮನೆತ್ತಿಸಿ
ಯನೇಕ ವೃತ್ತಿಗಳನಿತ್ತನಾ ಕೆಂಚರಸಂ॥

ಕಳ್ತಲೆ ಕುಲಕ್ಕೆ ಸೇರಿದ ಪ್ರಚಣ್ಡ ಮಣ್ಡಲಿಕ ಕೆಂಚನೃಪನು ಜ್ವಾಲಿನೀದೇವಿಯ ಪರಮ ಭಕ್ತನು. ತನ್ನ ಕುಲದೇವತೆಯಾದ ಜ್ವಾಳಿನೀ ಮಹಾದೇವಿಗೆ ಆತನು ಒಂದು ದೇವಸ್ಥಾನವನ್ನು (ಪ್ರಾಯಃ ಹತ್ತನೆಯ ಶತಮಾನದಲ್ಲಿ) ನವಿಲ್ಗುಂದದಲ್ಲಿ ಕಟ್ಟಿಸಿದನು. ಈಗ ನನ್ನ ಸಂಶೋಧನೆಯ ಪ್ರಕಾರ ಕರ್ನಾಟಕದಲ್ಲಿ ಮತ್ತು ಇಡೀ ಭಾರತದಲ್ಲಿಯೇ ಜ್ವಾಳಾಮಾಳಿನೀ ಯಕ್ಷಿಗೆ ಕಟ್ಟಿಸಿದ ಮೊಟ್ಟ ಮೊದಲನೆಯ ಮತ್ತು ಸ್ವತಂತ್ರ ದೇವಸ್ಥಾನ ಇದೇ ಆಗಿದೆ. ಆದ್ದರಿಂದ ಕೆಂಚ ನೃಪನು ಜ್ವಾಳಿನೀ ಮಹಾದೇವಿಯ ಗುಡಿಗೆ ಅನೇಕ ವೃತ್ತಿ (ದಾನಗಳನ್ನು) ಇತ್ತನೆಂಬುದನ್ನೂ ಗಮನಿಸಬೇಕು. ಈ ಕೆಂಚರಸನ ವಂಶದವನೇ ಆದ ಕಾಟರಸನು ನವಿಲ್ಗುಂದದಲ್ಲಿ 'ತ್ರಿಭುವನ ತಿಳಕಮೆನಿತಪ್ಪ ಪೆಸರ ಜಿನಮಂದಿರಂ' ಮಾಡಿಸಿದನು. ಗಾವರವಾಡದ ಶಾಸನೋಕ್ತ ಕಾಟರಸನೂ, ಗದಗ ಶಾಸನೋಕ್ತ ಕೆಂಚರಸಾದ್ಯರೂ ಒಂದೇ ವಂಶಸ್ಥರೆಂಬುದನ್ನು ನಾನು ಸಂಶೋಧನೆಯಿಂದ ಗುರುತಿ ಸಿದ್ದೇನೆ. [ಹಂಪನಾ : ಚಂದ್ರ ಕೊಡೆ : ೧೯೯೭ : ೭೧-೮೦] ಇದೇ ಕುಲಕ್ಕೆ ಸೇರಿದ ಇಮ್ಮಡಿರಾಯ ದೇವರಸನು ಜ್ವಾಳಿನೀದೇವೀ ಲಬ್ಧವರ ಪ್ರಸಾದಾಸಾದಿತ ಕಲಿಗಳಂ ಕಾವ ಮಹಾಮಣ್ಡಳೇಶ್ವರನಾಗಿದ್ದನೆಂದು ಗದಗ ಶಾಸನದಲ್ಲಿದೆ. [ಸೌಇಇ. ಸಂಟುಪ ೧೫. ಸಂಖ್ಯೆ ೨೧೪. ಕ್ರಿ.ಶ. ೧೧೯೯] (ಸಾಲು ೨೮)

ಇದುವರೆಗಿನ ವಿವರಣೆಯಿಂದ ಸಮಸ್ಯೆ ಸಂಪೂರ್ಣವಾಗಿ ನಿವಾರಣೆಯಾದಂತಾಗಿದೆ. ನವಿಲ್ಗುಂದವು (ಮಯೂರಪುರ) ಜೈನ ಬಸದಿ ಮತ್ತು ಜ್ವಾಳಾಮಾಲಿನೀ ದೇವಿಯ ದೇವಾಲಯವನ್ನು ಒಳಗೊಂಡಿತ್ತು. ಈ ಪ್ರಾಚೀನ ಜ್ವಾಲಾಮಾಲಿನೀ ದೇವಿಯು ತುಂಬ ಪ್ರಸಿದ್ಧಳೂ ಪ್ರಭಾವ ಶಾಲಿಯೂ ಪೂಜನೀಯಳೂ ಆಗಿದ್ದಳು. ರಾಜರೂ, ಸಾಮಂತರೂ ಮಹಾಮಂಡಳೇಶ್ವರರೂ ಈ ಜೈನ ಯಕ್ಷಿಯ ಭಕ್ತರಾಗಿದ್ದರು. ಹತ್ತನೆಯ ಶತಮಾನದ ವೇಳೆಗಾಗಲೇ, ಇಂದಿಗೆ ಒಂದು ಸಾವಿರ ವರ್ಷದ ಹಿಂದೆಯೇ ಈ ಜ್ವಾಳಾಮಾಳಿನೀದೇವಿಯು ಮಹಿಮಾನ್ವಿತಳೆಂದು ಖ್ಯಾತ ನಾಮಳಾಗಿದ್ದಳೆಂಬುದು ಸಂಶೋಧನೆಯಿಂದಲೂ ಶಾಸನಗಳ ಆಧಾರದಿಂದಲೂ ತಿಳಿದು ಬರುತ್ತದೆ.

೧೮
ಮುಳುಗುಂದದ ಮೂರು ಅಪ್ರಕಟಿತ ಶಾಸನಗಳು

೧೯೯೯ರ ಮೇ ತಿಂಗಳು ನಾನು ಎರಡನೆಯ ಸಲ ಕೈಗೊಂಡ ಕ್ಷೇತ್ರ ಕಾರ್ಯದಿಂದಾಗಿ ಕೆಲವು ಹೊಸ ಶಾಸನಗಳು ಮುಳುಗುಂದದ (ಗದಗ ಜಿಲ್ಲೆ/ ತಾಲ್ಲೂಕು) ಜಿನಾಲಯ ಸಮುಚ್ಚಯ ಆವರಣದಲ್ಲಿ ದೊರೆತವು. ಅವುಗಳ ಪಾಠವನ್ನು ಇಲ್ಲಿ ಮೊದಲ ಸಲ ಪ್ರಕಟಿಸುತ್ತಿದ್ದೇನೆ.

೧. ಎಪಿಗ್ರಾಫಿಯ ಇಂಡಿಕ, ಸಂಪುಟ XIII ಸಂಖ್ಯೆ. ೧೫, ಕ್ರಿ.ಶ. ೯೦೨-೦೩, ಪು. ೧೯೦-೯೪ರಲ್ಲಿ ಪ್ರಕಟವಾಗಿದ್ದ ಅಪೂರ್ಣ ಶಾಸನದಲ್ಲಿ ೧೪ ಸಾಲುಗಳ ಪಾಠ ಮಾತ್ರ ಲಭ್ಯವಾಗಿತ್ತು. ೧೯೯೯ರ ಆದಿಭಾಗದಲ್ಲಿ ಕೈಗೊಂಡ ಕ್ಷೇತ್ರಕಾರ್ಯದ ಸಂದರ್ಭದಲ್ಲಿ, ಈ ಅಪೂರ್ಣ ಸಂಸ್ಕೃತ ಶಾಸನದ ಕಲ್ಲುಚಪ್ಪಡಿಯನ್ನು ಗೋಡೆಯಿಂದ ಹೊರಗಡೆಗೆ ತೆಗೆಸಿದಾಗ, ಅದೇ ಚಪ್ಪಡಿಯ ಇನ್ನೊಂದು ಮುಖದಲ್ಲಿ ಪಾರ್ಶ್ವನಾಥ ತೀರ್ಥಂಕರರ ಕಮಠೋಪಸರ್ಗದ ಅಪೂರ್ವ ಶಿಲ್ಪ ಪತ್ತೆ ಆಯಿತು. ಇದನ್ನು ಈಗಾಗಲೇ ಪ್ರಚುರ ಪಡಿಸಿದ್ದೇನೆ. (ಅರವಂಟಿಗೆ ೧-೧, ಮೇ ೧೯೯೯) ಮತ್ತು ಇದೀಗ ಅದೇ ಜಿನಾಲಯದ ನೆಲಮಾಳಿಗೆ ಇರುವುದು ಬೆಳಕಿಗೆ ಬಂದಿದೆ. ನಿರ್ಗ್ರಂಥ ರಿಷಿಮುನಿಗಳ ತಪಸ್ಸಿನ ತಾಣವಾಗಿದ್ದ ಈ ನೆಲಮಾಳಿಗೆಯು ಮಣ್ಣಿನಿಂದ ಮುಚ್ಚಿಹೋಗಿತ್ತು. ಮಣ್ಣನ್ನು ಮೇಲೆತ್ತಿ ಗುಹೆಯಂತಿರುವ ನೆಲಮಾಳಿಗೆಯನ್ನು ಸ್ವಚ್ಛ ಮಾಡುತ್ತಿದ್ದಾಗ ಕ್ರಿ.ಶ. ೯೦೨-೦೩ರ ಸಂಸ್ಕೃತ ಶಾಸನದ ಮತ್ತು ಅದರ ಹಿಂಬದಿಯ ಕಮಠೋಪಸರ್ಗ ಪಾರ್ಶ್ವಜಿನ ಮುಕ್ಕಾಗಿದ್ದ ಕೆಳಭಾಗವು ಪತ್ತೆಯಾಗಿದೆ. ಇದರಿಂದಾಗಿ ರಾಷ್ಟ್ರಕೂಟರ ಕಾಲದ ಸಂಸ್ಕೃತ ಜೈನಶಾಸನವೂ ಜೈನಶಿಲ್ಪವೂ ಪೂರ್ತಿಯಾಗಿ ದೊರೆತಂತಾಗಿದೆ. ಪ್ರಕಟಿತವಾಗಿದ್ದ (EI. XIII. 15, C.E. 902-03. pp. 190-94) ಶಾಸನದಲ್ಲಿ ಒಟ್ಟು ೧೪ ಸಾಲುಗಳಿದ್ದವು. ಇದೀಗ ಸಿಕ್ಕಿರುವ ಮುಕ್ಕಾಗಿದ್ದ

ಭಾಗದಲ್ಲಿ ಸಾಲು ೧೫ರಿಂದ ೨೧ರವರೆಗೆ, ಅಂದರೆ ಇನ್ನೂ ಏಳು ಸಾಲುಗಳಿವೆ. ಈ ಏಳು ಪಂಕ್ತಿಗಳಲ್ಲಿ ಐದು ಸಾಲುಗಳು ಶಾಪಾಶಯದ ವಿಷಯವನ್ನು ಒಳಗೊಂಡಿದೆ. ಕಡೆಯ ಇನ್ನೆರಡು ಸಾಲುಗಳಲ್ಲಿ ಈ ಶಾಸನವನ್ನು ಬರೆದವನು ಬಾಹುಬಲಿದೇವ ಎಂಬುದಾಗಿ ತಿಳಿದುಬರುತ್ತದೆ. ಶಾಸನಾಭ್ಯಾಸಿಗಳಾದ ಚರಿತ್ರಕಾರರಿಗೆ ಏಕತ್ರ ಪೂರ್ತಿ ಶಾಸನ ಪಾಠ ಲಭ್ಯವಾಗಲೆಂಬ ಭಾವನೆಯಿಂದ ಈಗ ದೊರೆತ ಉತ್ತರಾರ್ಧದ ಏಳು ಪಂಕ್ತಿಗಳ ಜತೆಗೆ ಹಿಂದೆ ದೊರೆತಿದ್ದ ಪೂರ್ವಾರ್ಧದ ೧೪ ಪಂಕ್ತಿಗಳ ಪಾಠವನ್ನೂ ಒಟ್ಟಿಗೆ ಸೇರಿಸಿ ಇಲ್ಲಿ ಪ್ರಕಟಿಸಿದ್ದೇನೆ.

ಸಂಖ್ಯೆ-೧ : ಶಾಸನ ಪಾಠ (ಸಂಸ್ಕೃತ)

೧ ಶ್ರೀಮತೇ ಮಹತೇಶಾನ್ತ್ಯೈ ಶ್ರೇಯಸೇ ವಿಶ್ವವೇದಿನೇ ನಮಶ್ಚನ್ದ್ರ ಪ್ರಭಾಖ್ಯಾಯ ಜೈನಶಾಸನ

೨ ವೃದ್ಧಯೇ ಶಕನೃಪಕಾಳೇಷ್ಠಶತೇ ಚತುರುತ್ತರ ವಿಂಶದುತ್ತರೇ ಸಂಪ್ರಗತೇ ದುನ್ದುಭಿನಾಮನಿವರ್ಷೇಪ್ರವ

೩ ರ್ತ್ತಮಾನೇ ಜನಾನುರಾಗೋತ್ಕರ್ಷೇ ಶ್ರೀ ಕೃಷ್ಣವಲ್ಲಭನೃಪೇ ಪಾತಿ ಮಹೀಂ ವಿತತಯಶಸಿ ಸಕಳಾಂ ತಸ್ಮಾತ್

೪ ಪಾಳಯತಿ ಮಹಾಶ್ರೀಮತಿ ವಿನಯಾಂಬುಧಿನಾಮ್ನಿ ಧವಳ ವಿಷಯ ಸರ್ವ್ವಂ ತಸ್ಮಿನ್ ಮುಳ್ಗುನ್ದಾಖ್ಯೇ

೫ ನಗರೇ ವರವೈಶ್ಯಜಾತಿಜಾತ (ಃ) ಖ್ಯಾತಃ ಚನ್ದ್ರಾರ್ಯ್ಯಃ ತತ್ಪುತ್ರ ಶ್ರೀಕಾರ್ಯಾ ಚೀಕರಂ ಜಿನೋನ್ನತಭವನ (೦)

೬ ತತ್ತನಯೋ ನಾಗಾರ್ಯ್ಯಾ ನಾಮ್ನಾ ತಸ್ಯಾನುಜೋ ನಯಾಗಮಕುಶಳಃ ಅರಸರ್ಯ್ಯಾ ದಾನಾದಿ ಪ್ರೋದ್ಯುಕ್ತ

೭ ಸ್ಸಮ್ಯಕ್ತ್ವಸಕ್ತಚಿತ್ತವ್ಯಕ್ತಃ ತೇನಸದರ್ಶನಾಭರಣ ಭೂಷಿತೇನ ಪಿತೃಕಾರಿತ ಜಿನಾಲಯಾಯ ಚನ್ದ್ರಿಕವಾಟ

೮ ಶೇನಾನ್ವಯಾನುಗಾಯ ನರನರಪತಿಯತಿಪತಿ ಪೂಜ್ಯಪಾದ ಕುಮಾರಶೇನಾಚಾರ್ಯ್ಯ ಮೌಖ ವೀರಶೇನ

೯ ಮುನಿಪತಿ ಶಿಷ್ಯಕನಕಶೇನ ಸೂರಿಮುಖ್ಯಾಯ ಕನ್ದವರ್ಮ್ಮಮಾಳಕ್ಷೇತ್ರೇ ಏಜಿ‌ಕ ಮಾಣವಕ ನಕುಳಾರ್ಯ್ಯ

೧೦ ಕ(ಲಿ) ಯುಮ್ಮಾನಾ(೦) ಹಸ್ತಾತ್ಸಹಸ್ರವಲ್ಲಿ ಮಾತ್ರಕ್ಷೇತ್ರ ದ್ರವ್ಯಸಿನ್ದನಾ ಗೃಹಿತ್ವಾ ನಗರಮಹಾಜನನಿದೇಶೇ

೧೧ ದತ್ತಂ ತಜ್ಜಿನಾಲಯಾಯ ತ್ರಿಶತಷಷ್ಠಿನಗರ್ಯೈಃ ಚತುರ್ಭಿ ಶ್ರೇಷ್ಠಿಭಿಃ ಬಳ್ಳಗೆಜಿ ಕ್ಷೇತ್ರೇ ಸಹಸ್ರವಲ್ಲೀ

೧೨ ಮಾತ್ರಕ್ಷೇತ್ರಂ ದತ್ತಂ ತಜ್ಜಿನಭವನಾಯ ವಿಂಶತಿಶತ ಮಹಾಜನಾನುಮತಾದ್ಬೆಳ್ವಾಟಿಕುಲ ಬ್ರಾಹ್ಮಣೈಶ್ಚತ

೧೩ (ತ್ಕನ್ದವರ್ಮ್ಮಮಾಟಿ) ಕ್ಷೇತ್ರೇ ಸಹಸ್ರವಲ್ಲಿ ಮಾತ್ರಕ್ಷೇತ್ರಂ ದತ್ತಂ ಏವಂ ತ್ರಿಣ್ಯಪಿ ನಾಗವಲ್ಲೀ ಕ್ಷೇತ್ರಾಣಿ ಸರ್ವ್ವಪಾದ

೧೪ .... ಯಃ ಕಶ್ಚಿತ್

೧೫ (ತ್ರ) .... ಹಗ್ರಹಗ್ರಸ್ತಬುದ್ಧೇರಾಚ್ಛಿನ್ನ್ಯದಾಚ್ಛೇದ್ಯಮಾನಂ ವಾಕಾಳ ಚೇಷು ಮೋದತಿ....

೧೬ ರ್ಮ್ಮಹಾಪಾತಕೋರುಪಪಾತಕೋ ಆಪ್ಯೇತ।। ಉಕ್ತಂ ವ್ಯಾಸೇನ ಷಷ್ಟಿರ್ವ್ವರ್ಷ ಸಹಸ್ರಾಣಿ ಸ್ವರ್ಗ್ಗೇ ಮೋದತಿ ಭೂಮಿದಃ

೧೭ ಆಚ್ಛೇತ್ತಚ್ಛಾನುಮನ್ತಾಚ ತಾನ್ಯೇವ ನರಕಂ ವಶೇತ್। ಸ್ವದತ್ತಮ್ಪರದತ್ತಾಂ ವಾ ಯೋ ಹರೇತ ವಸುನ್ಧರಾ (೦) ಷ

೧೮ ಷ್ಟಿರ್ವ್ವರ್ಷಸಹಸ್ರಾಣಿ ವಿಷ್ಟಾಯಾಂ ಜಾಯತೇ ಕೃಮಿಃ। ಸಾಮಾನ್ಯೋಯಂ ಧರ್ಮ್ಮಸೇತುರ್ನ್ನೃ ಪಾಣಾಂ ಕಾಳೇ ಕಾಳೇ ಪಾಳ

೧೯ ನೀಯೋ ಭವದ್ಭಿಃ ಸರ್ವ್ವಾನೇತಾಂ ಭಾವಿನಃ ಪಾರ್ತ್ಥಿವೇನ್ದ್ರಾಂ ಭೂಯೋ ಭೂಯೋ ಯಾಚತೇ ರಾಮಭದ್ರಃ।।

೨೦ ಬಾಹುಬಲಿದೇವ ನಿಗದಿತ ಶಾಸನಮೇತಜ್ಜಿನೇನ್ದ್ರಶಾಸನ ವೃದ್ಧ್ಯೋ ಸ್ಥೇಯಾದಾ

೨೧ ಚನ್ದ್ರಾರ್ಕ್ಕಂ ಜಗಜ್ಜನ ಪ್ರಾಜ್ಯ ಪೂಜ್ಯ ಕೀರ್ತ್ತಿ ಶ್ರೀಮತ್।।

೨. ಇದೇ ಮುಳುಗುಂದದ ಬಸದಿಯಲ್ಲಿ ದೊರೆತಿರುವ ಎರಡನೆಯ ಹೊಸ ಶಾಸನದ ಭಾಷೆ ಕನ್ನಡ. ಈ ಶಾಸನದ ಪ್ರಥಮ ಪಂಕ್ತಿ ಸಂಪೂರ್ಣವಾಗಿ ತ್ರುಟಿತಗೊಂಡು ನಷ್ಟವಾಗಿದೆ. ಎರಡನೆಯ, ಮೂರನೆಯ ಮತ್ತು ೧೩ನೆಯ ಪಂಕ್ತಿಗಳಲ್ಲಿ ಕಡೆಯ ನಾಲ್ಕು ಅಕ್ಷರಗಳು ಮುಕ್ಕಾಗಿವೆ. ಅದರಂತೆ ೧೪ನೆಯ ಪಂಕ್ತಿಯಲ್ಲಿ ಎರಡು ಆದ್ಯಕ್ಷರಗಳು ಮುರಿದುಹೋಗಿವೆ.

ಈ ಶಾಸನದಲ್ಲಿ ಒಟ್ಟು ೧೪ ಸಾಲುಗಳಿವೆ. ಸಾದ್ಯಂತವಾಗಿ ಇದು ಜೈನ ಶಾಸನ ಮತ್ತು ದಾನಶಾಸನ. ಪಂಕ್ತಿ ಸಂಖ್ಯೆ ೧೦ ರಿಂದ ೧೨ರವರೆಗಿನ ಮೂರು ಸಾಲುಗಳಲ್ಲಿ ಶಾಪಾಶಯವಿದೆ. ಮೊದಲು ಕನ್ನಡದಲ್ಲಿ ಈ ಶಾಸನವನ್ನು ಪಾಲಿಸಿದವರಿಗೆ ಸಿಗುವ ಫಲವನ್ನು ಹೇಳಿದೆ (ಪಂಕ್ತಿ-೧೦), ಅನಂತರ ಇದನ್ನು ಅಪಹರಿಸಿದವರಿಗೆ ಸಿಗುವ ದೀರ್ಘ ಕಷ್ಟವನ್ನು ಸಂಸ್ಕೃತದಲ್ಲಿ ಹೇಳಿದೆ. ಪಂಕ್ತಿ ೩ರಿಂದ ೫ರವರೆಗೆ ಸಂಸ್ಕೃತ ಭಾಷೆಯ ಒಕ್ಕಣೆಯಿದೆ.

ನರೇಂದ್ರಸೇನ ಪಂಡಿತರ ಶಿಷ್ಯರು ನಯಸೇನ ಪಂಡಿತರು, ಅವರ ಶಿಷ್ಯರು ಸಿದ್ಧಸೇನ ಪಂಡಿತರು. ಇವರು ಸಮಸ್ತರಾಜರ ಕಿರೀಟ ಶೋಭಿತ ಅಡಿದಾವರೆಯುಳ್ಳವರು. ಇವರ ಕಾಲುಗಳನ್ನು ತೊಳೆದು, ಮುಳ್ಗುಂದ ತೀರ್ಥದ ಬಸದಿಯ ಕೆಳಗಡೆ ಇರುವ ಚಿಂಚಿಲದ ಬೆಟ್ಟದಿಂದ ಮೂಡಣದ ಕಡೆ ೨೪ ಮತ್ತರು ಗದ್ದೆಯನ್ನು ದತ್ತಿ ಇತ್ತರು. ಚಂದ್ರಪ್ರಭದೇವರ ಪೂಜೆಗೆ ತೆರಿಗೆಗಳಿಲ್ಲದೆ ಈ ದಾನವನ್ನು ಕೊಡಲಾಗಿದೆ. ಮುಳ್ಗುಂದದ ನಗರೇಶ್ವರ ಗಡಿಂಬದ ಅಳತೆ ಕೋಲಿನಿಂದ ಅಳೆದು ೨೪ ಮತ್ತರು ಗದ್ದೆಯನ್ನು ಬಿಟ್ಟುಕೊಟ್ಟಿದೆ. ಬಿಬ್ಬದ ಶಂಕಿಮಯ್ಯ ಸೆಟ್ಟಿಯು ತಾನಿರುವ ಮನೆಯನ್ನು ಸಹ ದಾನವಾಗಿ ಬಿಟ್ಟುಕೊಟ್ಟನು.

ಇದು **ಅತೇದಿ ಶಾಸನ**. ಅಂತರಬಾಹ್ಯ ಪ್ರಮಾಣಗಳಿಂದ ಇದರ ಕಾಲವನ್ನು ನಿರ್ಧರಿಸಬಹುದು. ಈ ಶಾಸನದಲ್ಲಿ ಹೇಳಿರುವ ಗುರು ನರೇಂದ್ರಸೇನ ಪಂಡಿತ ಮುನಿಯ ಮತ್ತು ಅವರ ಶಿಷ್ಯ ನಯಸೇನ ಪಂಡಿತ ಮುನಿಯ ವಿಚಾರ ಶಾಸನಗಳಿಂದ ತಿಳಿದುಬರುತ್ತದೆ. ಇದೇ ಮುಳ್ಗುಂದ

ಕ್ರಿ.ಶ. ೧೦೫೩ರ ಶಾಸನವು ನರೇಂದ್ರಸೇನ ಮತ್ತು ನಯಸೇನ ಸವಣರ ಮಾಹಿತಿಯನ್ನು ಒಳಗೊಂಡಿದೆ. [EI. Vol. XVI. No. 9, C.E. 1053, pp. 53-57] ಅಲ್ಲದೆ ಹನ್ನೊಂದನೆಯ ಶತಮಾನದ ಅನ್ಯಾನ್ಯ ಶಾಸನಗಳಲ್ಲೂ ಪೂರಕ ಮಾಹಿತಿ ಉಪಲಬ್ಧವಿದೆ [SII. XVII. 71. C.E. 1066] ಮೋಟೆಬೆನ್ನೂರು; BKI-ii No. 111 ಮತ್ತು SII. XI-i. No. III. C.E. 1071. ಸೊರಟೂರು SII.XV.No. 623 C.E. 1081; EI. XVI. No. 9-B. C.E 1081, ಲಕ್ಷ್ಮೇಶ್ವರ, ಪು. ೫೮-೬೬ ಇತ್ಯಾದಿ]. ಈ ಆಧಾರಗಳನ್ನು ಅವಲಂಬಿಸಿ ಪ್ರಸ್ತುತ ಶಾಸನದ ತೇದಿಯನ್ನು ಕ್ರಿ.ಶ. ೧೦೫೦ ಎಂದು ಭಾವಿಸಬಹುದು. ಕಲ್ಯಾಣ ಚಾಲುಕ್ಯರ ತ್ರೈಲೋಕ್ಯಮಲ್ಲ ಅಹವಮಲ್ಲ ಒಂದನೆಯ ಸೋಮೇಶ್ವರನ (೧೦೪೨-೬೮) ಆಳ್ವಿಕೆಗೆ ಸೇರಿದ್ದು ಈ ಶಾಸನ.

ಸಂಖ್ಯೆ-೨; ಶಾಸನ ಪಾಠ

೧ .....

೨ ಮಣಿನಾಮಿವ ಸಾಚ್ಛಿಪಂ ಮಹಾಪುರುಷರ್ತ್ತಾನಾಸ್ಥಾನ...

೩ ಅಜನಿ ಜಗದುದಗ್ರಸ್ಸೂಕ್ತಿ ಸಿ(೦) ನ್ದ ಪ್ರಸೂತೇಜ್ಜಿನಸಮಯ......

೪ ವಾದಿವಂಶಃ (ಸ್ಥ)ಳ ಚಿರಚರಿತಾನಾಂ ಯದ್ದುಗ್ಗೇ. ಣಿಮುಕ್ತಾಮಣಿವಿತತವ

೫ ಭೂದದ್ಭುತಂ ಕರ್ಣ್ಣಪೂರಃ।। ತತ್ಸನ್ತತಿಯೊಳ್ ನರೇನ್ದ್ರಸೇನಪಣ್ಡಿತರ ಶಿಷ್ಯರ್ನ್ನಯ

೬ ಸೇನಪಣ್ಡಿತರ್ತ್ತದೀಯ ಶಿಷ್ಯರ್ಸ್ಸಕಳ ನೃಪಮೌಳಿ ಲಾಳಿತ ಚರಣಾರವಿನ್ದರಪ್ಪ ಸಿ

೭ ದ್ಧಸೇನಪಣ್ಡಿತರ ಪಾದಪ್ರಕ್ಷಾಳನಂ ಗೆಯ್ದಾ ಮುಳ್ಗುನ್ದದ ತೀರ್ತ್ಥದ ಬಸದಿಯ ತಳ

೮ ದೊಳಗೆ ಚಿಂಚಿಲದ ಬೆಟ್ಟದಿಂ ಮೂಡ ಸರ್ವ್ವಬಾಧ ಪರಿಹಾರಮಾಗೆ ಚನ್ದ್ರಪ್ರಭದೇವ

೯ ರ ಚರುಗಿಂಗೆ ನಗರೇಶ್ವರದ ಗಡಿಂಬ ಕೋಲೊಳಳೆದು ಕೊಟ್ಟ ಕೆಯ್ಮತ್ತರಿರ್ಪ್ಪತ್ತ ನಾಲ್ಕು.,

೧೦ ಇದಂ ಪ್ರತಿಪಾಳಿಸಿದೊಂಗೆ ವಾರಣಾಸಿಕುರುಕ್ಷೇತ್ರದೊಳು ಸಾಸಿರ್ವ್ವಬ್ರಾ (೦) ಹ್ಮಣರ್ಗ್ಗೆ

೧೧ ಹಾರದಾನಮನಿಕ್ಕಿದ ಫಲ।। ಸ್ವದತ್ತಾಂ ಪರದತ್ತಾ ವಾಯೋ ಹರೇತ ವಸುನ್ಧರಾಂ

೧೨ ಪಷ್ಟಿರ್ವ್ವರ್ಷಸಹಸ್ರಾಣೆ ವಿಷ್ಠಾಯಾಂಜಾಯತೇ ಕೃಮಿಃ।।

೧೩ ಶ್ರೀಮಬಿಬ್ಬದ ಶಂಕಿಮಯ್ಯಸೆಟ್ಟಿ ತನ್ನಿಪ್ಪ (ರ್ಪ್ಪ) ಮನೆಯುಮಂ ತ...

೧೪ .... ದಿಕ್ಕೆ ಕೊಟ್ಟರು ಮಂಗಳ.

೩. ಅದೇ ಮುಳುಗುಂದದ ಅರ್ಹದಾಯತನದಲ್ಲಿ ಸಿಕ್ಕಿರುವ ಮತ್ತೊಂದು ಶಾಸನ ಕನ್ನಡದಲ್ಲಿದೆ. ಇದರ ಆರಂಭದ ಸಾಲು ಪೂರ್ತಿ ಹೋಗಿದೆ. ಇದೊಂದು ಅಪೂರ್ಣ ಶಾಸನ. ಒಟ್ಟು ೧೩ ಸಾಲುಗಳಿವೆ. ೨,೩,೪,೬,೭,೯ರಿಂದ ೧೩ ಈ ಸಾಲುಗಳಲ್ಲಿ ಕಡೆಯ ಅಕ್ಷರಗಳು ತ್ರುಟಿತ. ೧೨ ಮತ್ತು ೧೩ನೆಯ ಪಂಕ್ತಿಯು ತುಂಬ ಶಿಥಿಲವಾಗಿದ್ದು ನಡುವೆ ಕೆಲವು ಅಕ್ಷರಗಳು ಚಕ್ಕೆಯೆದ್ದು ಮುರಿದು ಹೋಗಿವೆ.

ಇದು ಸತೇದಿ ಶಾಸನವಾಗಿದೆ. ಕ್ರಿ.ಶ. ೧೦೫೩ರಲ್ಲಿ ಈ ಶಾಸನ ರಚಿತವಾಗಿದೆ. ಕಲ್ಯಾಣ ಚಾಲುಕ್ಯರ ಚಕ್ರವರ್ತಿ ತ್ರೈಲೋಕ್ಯಮಲ್ಲ ಅಹವಮಲ್ಲ ಒಂದನೆಯ ಸೋಮೇಶ್ವರನ (೧೦೪೨-೬೮) ಹಿರಿಯ ಮಗ ಹಾಗೂ ಯುವರಾಜನಾದ ಭುವನೈಕಮಲ್ಲ ಇಮ್ಮಡಿ ಸೋಮೇಶ್ವರದೇವನು (೧೦೬೮-೭೬) ಇನ್ನೂ ಮಹಾ ಮಾಂಡಲಿಕನಾಗಿ ಬೆಳ್ವೊಲ-೩೦೦ ಮತ್ತು ಪುರಿಗೆಱೆ-೩೦೦ ಸೇರಿ ಆದ ಎರಡಱುನೂಱು ಕಂಪಣ ಪ್ರದೇಶವನ್ನು ಆಳುತ್ತಿರುವಾಗ ಈ ಶಾಸನವನ್ನು ಬರೆಯಲಾಗಿದೆ. ಪ್ರಾಯಃ ಮುಳ್ಗುಂದದ ಬಸದಿಗೆ ಆತನು ನೀಡಿದ ದಾನವನ್ನು ತಿಳಿಸುವ ಶಾಸನವೆಂದು ತೋರುತ್ತದೆ. ಇದೇ ಅವಧಿಯಲ್ಲಿ ಭುವನೈಕಮಲ್ಲ ಇಮ್ಮಡಿ ಸೋಮೇಶ್ವರನು ಈ ಪ್ರದೇಶದಲ್ಲಿ ಜಿನಾಲಯ ಮತ್ತು ಇತರ ದೇವಾಲಯಗಳನ್ನು ಖಣ್ಡ ಸ್ಫುಟಿತ ಜೀರ್ಣೋದ್ಧಾರ ಮಾಡಿಸಿ ದಾನಗಳಿಂದ ಪುನರ್ಭರಣಗೊಳಿಸಿದ ಸಂಗತಿ ನಂದವಾಡಿಗೆಯ ಶಾಸನದಲ್ಲಿ ನಮೂದಾಗಿದೆ (ಹಂಪ. ನಾಗರಾಜಯ್ಯ: ನಂದವಾಡಿಗೆ ಶಾಸನ, *'ಚಂದ್ರಕೊಡೆ'* : ೧೯೯೭).

ಸಂಖ್ಯೆ-೩, ಶಾಸನ ಪಾಠ

೧ ....

೨ ಭಟ್ಟಾರಕ ಸತ್ಯಾಶ್ರ ....

೩ ಜಯರಾಜ್ಯಮುತ್ತರೋತ್ತರಾಭಿವೃದ್ಧಿ (ಪ್ರ)....

೪ ತ್ತನಯ ಸಮಧಿಗತ ಪಞ್ಚಮಹಾಶಬ್ದ ಮಹಾಮಣ್ಡಳೇ....

೫ ಸಮರಪ್ರಚಣ್ಡಂ ಕಮಠ ಮಾರ್ತ್ತಣ್ಡಂ ಪರಕರಿಮದ ನಿವಾರಣ

೬ ಪರಿವಾರನಿಧಾನಂ ದಾನಕಾನೀನಂ ಹಯವತ್ಸರಾಜಂ ರೂಪಮನೋಜಂ ರಿಪು(ಹೃ)

೭ ದಯಸೆಲ್ಲಂ ಭುವನಯ್ಕಮಲ್ಲಂ ಮಣ್ಡಲಿಕಶಿಖಾಮಣಿ ಚಾಳುಕ್ಯ ಚೂಳಾಮ...

೮ ಸಂಹಾರಂ ಕಟಕಪ್ರಾಕಾರಂ ಶ್ರೀಮತ್ತ್ರೈಳೋಕ್ಯಮಲ್ಲದೇವ ಪಾದಪಂಕಜಂ

೯ ಶ್ರೀ ಸೋಮೇಶ್ವರದೇವರ್ ಬೆಳ್ವೊಲಮೂನೂಱು ಪುರಿಗೆಱೆ ಮೂನೂಱುಮ....

೧೦ ಕಥಾ ವಿನೋದದಿನಾಳುತ್ತಮಿರೆ ಸಕವರ್ಷಮೊಂಬಯ್ನೂಱೆಪ್ಪತ್ತಯ್ದ....

೧೧ ಯ ಸಂವತ್ಸರದ ಮಾರ್ಗ್ಗಶಿರದಮಾವಾಸ್ಯೆಯು....

೧೨ ಹಣ.. ಅಣ್ನೆ(ಗೆ) ಜ಼ಿಯ....... ಶ್ರೀಮತು.....

೧೩ ಮಣಿ ..... ಮಿವಸಾಚ್ಚಿ. ಮಹಾಪುರುಷರತ್ನ....

೧೯
ಕರ್ನಾಟಕದಲ್ಲಿ ಜೈನಧರ್ಮ
ಹೊಸ ಶೋಧಗಳು

ಕರ್ನಾಟಕಕ್ಕೂ ಜೈನಧರ್ಮಕ್ಕೂ ಇರುವ ಎರಡು ಸಾವಿರ ವರ್ಷಗಳ ದೀರ್ಘಕಾಲಿಕವೂ ನಿಕಟವೂ ಆದ ಸಂಬಂಧದ ಸ್ವರೂಪವನ್ನು ಚರಿತ್ರಕಾರರು ಪ್ರಸ್ತಾಪಿಸಿದ್ದಾರೆ. ಈ ಬಾಂಧವ್ಯದ ಬೆಸುಗೆ ಎಷ್ಟು ಆಳವಾದದ್ದು ಮತ್ತು ಗಟ್ಟಿಯಾದುದು ಎಂಬುದನ್ನು ದೃಢವಾಗಿ ಸ್ಥಾಪಿಸುವ ಪೂರಕಸ್ಮಾರಕ ಮತ್ತು ಅವಶೇಷಗಳು ಆಗಾಗ ನಾಡಿನ ಉದ್ದಗಲಗಳಲ್ಲಿ ಸಿಗುತ್ತಿರುತ್ತವೆ, ಪತ್ರಿಕೆಗಳಲ್ಲಿ ವರದಿಯಾಗುತ್ತಿರುತ್ತವೆ. ಈ ಹಿನ್ನೆಲೆಯಲ್ಲಿ ತೀರ ಇತ್ತೀಚೆಗಷ್ಟೆ ಬೆಳಕಿಗೆ ಬಂದ ಮಹತ್ವದ ಕೆಲವು ಶೋಧಗಳನ್ನು ಕುರಿತು ಈ ಲೇಖನ.

ಗದಗ ಜಿಲ್ಲೆಯು ಹಲವು ಪ್ರಾಚೀನ ಹಾಗೂ ಪ್ರಮುಖ ಜೈನ ಕೇಂದ್ರಗಳ ತೂಗು ತೊಟ್ಟಿಲು. ಜಿಲ್ಲೆ ಹೊಸದಾದರೂ ಅದರ ಇತಿಹಾಸ ಪುರಾತನವಾದುದು. ಈ ವರ್ಷ ಕೈಗೊಂಡ ಕ್ಷೇತ್ರಕಾರ್ಯ ಸಂದರ್ಭದಲ್ಲಿ ನನಗೆ ಹಲವು ಹಳೆಯ ಅವಶೇಷಗಳು ಕಂಡು ಬಂದವು. ಮೊದಲಿನಿಂದಲೂ ನನ್ನ ಅಧ್ಯಯನದ ಬಹ್ವಂಶ ಪ್ರಾಕ್ತನಶಾಸ್ತ್ರಕ್ಕೆ ಸಂಬಂಧ ಪಟ್ಟಿರುವ ಕಾರಣ ಪ್ರಾಚ್ಯವಸ್ತುಗಳೆಂದರೆ ನನಗೆ ಸಂಭ್ರಮ. ಗದಗ ಜಿಲ್ಲೆಯಲ್ಲಿ ಪ್ರಾಗ್ವೈಭವ ತಾಂಡವವಾಡುತ್ತಿರುವುದು ನನ್ನ ಬಗೆಗಣ್ಣಿಗೆ ನಿಚ್ಚಳವಾಯಿತು. ಮುಖ್ಯವಾಗಿ ಮೂರು ಸ್ಥಳಗಳಲ್ಲಿನ ಪ್ರಾಕ್ತನ ಶೋಧನೆಯನ್ನು ಸಂಗ್ರಹವಾಗಿ ನಿರೂಪಿಸುತ್ತೇನೆ.

೧. ಮಲ್ಲಸಮುದ್ರ

ಜಿಲ್ಲಾಕೇಂದ್ರದಿಂದ ಇತಿಹಾಸ ಪ್ರಸಿದ್ಧ ಮುಳ್ಗುಂದ ಪಟ್ಟಣ ಮಾರ್ಗದಲ್ಲಿ, ಎಂಟು ಕಿ.ಮೀ ಅಂತರದಲ್ಲಿ ಸಿಗುವ ಊರು ಮಲ್ಲಸಮುದ್ರ. ಮುಖ್ಯರಸ್ತೆಯಿಂದ ಬಲಕ್ಕೆ ಹೊರಳಿ ಒಂದು ಕಿಮೀ ಕ್ರಮಿಸುವಷ್ಟರಲ್ಲಿ ಊರು ಸಿಗುತ್ತದೆ. ಊರಿನ ನಟ್ಟನಡುವೆ ಇರುವುದು ಹನುಮಂತದೇವರ ಗುಡಿ. ಇದು ಹೊಸದಾಗಿ ಕಟ್ಟಿರುವ

ಕಟ್ಟಡ. ಇದರ ಮುಂದುಗಡೆ ಬಲಬದಿಗೆ ನಿಲ್ಲಿಸಿರುವ ಕಲ್ಲಿನ ಶಾಸನವಿದೆ. ಶಾಸನದ ಅಕ್ಷರಗಳು ಪೂರ್ತಿಯಾಗಿ ಅಳಿಸಿ ಹೋಗಿವೆ. ಆದರೆ ಶಾಸನದ ಮೇಲ್ಭಾಗದ ಶಿಲ್ಪವು ಸ್ಪಷ್ಟವಾಗಿ ಕಾಣುತ್ತದೆ. ಈ ಚಿತ್ರ ಪಟ್ಟಿಕೆಯಲ್ಲಿ ಮೂರು ಅಂಕಣಗಳಿವೆ. ಮೊದಲನೆಯ (ಬಲತುದಿಯ) ಅಂಕಣದಲ್ಲಿ ಚಂದ್ರ, ಸೂರ್ಯ, ಶಂಖ, ಶ್ರೀವತ್ಸ(?) ಮೇಲಿನ ಸಾಲಿನಲ್ಲೂ, ಸ್ವಸ್ತಿಕ ಮತ್ತು ಮೂರು ಕೊಡೆಗಳೂ (ಛತ್ರತ್ರಯ) ಇವೆ. ಎರಡನೆಯ ಹಾಗೂ ನಡುವಣ ಚೌಕಟ್ಟಿನೊಳಗೆ ಪದ್ಮಾಸನದಲ್ಲಿ ಕುಳಿತ ತೀರ್ಥಂಕರರು ಇದ್ದಾರೆ; ಅವರ ಹಿಂದುಗಡೆ ಎಡಬಲಗಳಲ್ಲಿ ಚಾಮರಧಾರಿಗಳಿದ್ದಾರೆ. ತೀರ್ಥಂಕರರ ತಲೆಯ ಸುತ್ತ ಮತ್ತು ಮೇಲೆ ಇರುವುದು ಅಸ್ಪಷ್ಟವಾಗಿದ್ದರೂ ಪ್ರಾಯಃ ನಾಗರಹೆಡೆ ಮತ್ತು ಮುಕ್ಕೊಡೆಯೆಂದು ತೋರುತ್ತದೆ; ಹಾಗಿದ್ದಲ್ಲಿ, ಇದು ಸುಪಾರ್ಶ್ವ ಅಥವಾ ಪಾರ್ಶ್ವನಾಥರ ಮೂರ್ತಿಯೆನ್ನಬಹುದು. ಮೂರನೆಯ ಹಾಗೂ ಎಡತುದಿಯ ಚೌಕಟ್ಟಿನೊಳಗೆ ಹಸು ಮತ್ತು ಕರು ಇದೆ; ಹಸುವಿನ ಮುಂದಣ ಭಾಗ ಮಸುಕಾಗಿದೆ. ಈ ಶಿಲ್ಪದ ಮೇಲ್ಭಾಗದ ಶಿಲೆಯ ತುದಿಯು ಜೋಡಿ ಗೋಪುರಾಕಾರದಲ್ಲಿದೆ. ಇದು ಜೈನ ಶಾಸನವೆಂಬುದರಲ್ಲಿ ಸಂಶಯವಿಲ್ಲ ಶಾಸನದ ಪಾಠ ಏನಿತ್ತೆಂಬುದು ತಿಳಿಯುವುದಿಲ್ಲ. ಹಾಲಿ ಶಾಸನಕಲ್ಲು ಇರುವ ಜಾಗದಲ್ಲಿ ಬಸದಿ ಇದ್ದಿತೆಂದು ಧಾರಾಳವಾಗಿ ಹೇಳಬಹುದು. ಇದಕ್ಕೆ ಪೂರಕ ಆಧಾರಗಳೂ ಸಿಗುತ್ತವೆ.

ಮಲ್ಲಸಮುದ್ರ ಗ್ರಾಮದ ಇನ್ನೊಂದು ತುದಿಗೆ, ಹನುಮಂತನ ಗುಡಿಯ ಮುಂದಿರುವ ಹಾದಿಯಲ್ಲೇ ಬಲಕ್ಕೆ ನೂರು ಅಡಿ ಹೋದರೆ, ಅಲ್ಲಿ ಎರಡು ಜೈನರ ಮನೆಗಳಿವೆ. ಮನೆಗಳ ಪಕ್ಕದ ಓಣಿಯಲ್ಲಿ ಹತ್ತು ಹೆಜ್ಜೆ ಹಾಕಿದರೆ ಅಲ್ಲೊಂದು ಪುಟ್ಟ ಬಸದಿ. ಒಂದಂಕಣದ ಆ ಗುಡಿಯೊಳಗೆ ಮೂರು ಸುಂದರ ಜಿನಬಿಂಬಗಳಿವೆ. ಸುಮಾರು ಅರವತ್ತು ವರ್ಷದಷ್ಟು ಹಳೆಯದಾದ ಈ ಗುಡಿಯು ೧೦x೧೦ ಅಡಿಯಷ್ಟಿದೆ. ಒಂದಡಿ ಎತ್ತರದ ವೇದಿಕೆಯ ಮೇಲೆ ಈ ಮೂರು ಜಿನಬಿಂಬಗಳನ್ನು ಪ್ರತಿಷ್ಠಾಪಿಸಿ ಅವುಗಳ ನಡುವೆ ಎರಡು ಬ್ರಹ್ಮಗುಂಡುಕಲ್ಲುಗಳನ್ನು ಇಟ್ಟಿದ್ದಾರೆ. ಇವನ್ನು ಬೇರೆ ಸ್ಥಳದಿಂದ, ಪ್ರಾಯಃ ಈಗ ಹಾಲಿ ಇರುವ ಹಣುಮಂತದೇವರ ಗುಡಿಯ ಬಳಿ ಇದ್ದ ಜಿನಾಲಯದಿಂದ, ಇಲ್ಲಿಗೆ ಸಾಗಿಸಿದಂತೆ ಕಾಣುತ್ತದೆ.

ಜಿನರ ಮೂರ್ತಿಗಳು ವೈಶಿಷ್ಟ್ಯ ಪೂರ್ಣವಾದುವು. ಇವುಗಳಲ್ಲಿ ಎರಡು ಜಿನಬಿಂಬಗಳಿಗೆ, ಕರ್ನಾಟಕದ ಜೈನ ಶಿಲ್ಪಗಳ ಚರಿತ್ರೆಯಲ್ಲಿ, ವಿಶಿಷ್ಟ ಸ್ಥಾನವಿದೆ. ಈ ಮೂರು ಮೂರ್ತಿಗಳೂ ಪ್ರಾಚೀನವೇ ಆದರೂ ಇವುಗಳಲ್ಲಿ ಪ್ರಾಚೀನತಮ, ಪ್ರಾಚೀನತರ ಮತ್ತು ಪ್ರಾಚೀನ ಎಂದು ತರತಮವಾರು ವಿಂಗಡಿಸಬಹುದು. ಅತ್ಯಂತ ಪ್ರಾಚೀನತಮವಾದುದು ಅಯ್ದು ಹೆಡೆಗಳ ಪಾರ್ಶ್ವನಾಥ ವಿಗ್ರಹ. ಸಾಮಾನ್ಯವಾಗಿ ಅಯ್ದು ಹೆಡೆಗಳಿದ್ದರೆ ಅದು ಸುಪಾರ್ಶ್ವ ತೀರ್ಥಂಕರರ ಮೂರ್ತಿಯಾಗಿರುತ್ತದೆ, ಏಳು ಹೆಡೆಗಳಿದ್ದರೆ ಪಾರ್ಶ್ವನಾಥರ ಮೂರ್ತಿಯಾಗಿರುತ್ತದೆ. ಆದರೆ ಕೆಲವೊಮ್ಮೆ ಇದೊಂದೇ ಸಂಪೂರ್ಣ ಅಥವಾ ಏಕೈಕ ಆಧಾರವಾಗಲಾರದು. ಆಯಾ ಜಿನರ ಲಾಂಛನವನ್ನು ಅವಶ್ಯ ನೋಡಬೇಕಾಗುತ್ತದೆ. ಕ್ರಿ.ಶ. ಆರನೆಯ ಶತಮಾನದ ಅಂತ್ಯಭಾಗಕ್ಕೆ ಸೇರಿದ ಐಹೊಳೆ ಮತ್ತು ಬಾದಾಮಿಯ ಜೈನ ಗುಹೆಗಳಲ್ಲಿರುವ ಪಾರ್ಶ್ವನಾಥರ ತಲೆಯ ಹಿಂದುಗಡೆ ಅಯ್ದು ಹೆಡೆಯ ಸರ್ಪವಿದೆ., ಅನ್ಯತ್ರ ಇಂತಹ ಮೂರ್ತಿಗಳೂ ಉಂಟು. ಈಗ ತಿಳಿದು ಬರುವಂತೆ

ಈಡೀ ಕರ್ನಾಟಕದಲ್ಲಿ ಅಯ್ದು ಹೆಡೆಗಳ ಪ್ರಾಚೀನತಮ ಪಾರ್ಶ್ವನಾಥ ಜಿನಬಿಂಬವೆಂದರೆ ಮಲ್ಲಸಮುದ್ರದಲ್ಲಿರುವ ಈ ವಿಗ್ರಹವೆಂಬುದು ಇದರ ಅನನ್ಯತೆಯಾಗಿದೆ.

ಜಿನಬಿಂಬದ ಮೈಕಟ್ಟು, ಶಿಲ್ಪದ ಶೈಲಿ ಲಕ್ಷಣವನ್ನು ಆಧರಿಸಿ ಇದರ ಕಾಲ ಎಂಟನೆಯ ಶತಮಾನದ ಅಂತ್ಯವೆಂದು ಹೇಳಬಹುದು. ಪ್ರಾಯಃ ರಾಷ್ಟ್ರಕೂಟರ ಧ್ರುವ ಅಥವಾ ಮುಮ್ಮಡಿ ಗೋವಿಂದನ ಕಾಲಕ್ಕೆ ಸೇರಿದ್ದೆಂದು ತೋರುತ್ತದೆ. ಈ ಜಿನಬಿಂಬದ ಪೀಠದಲ್ಲಿ ಲಾಂಛನವಿಲ್ಲ. ಕಾಯೋತ್ಸರ್ಗ ಧ್ಯಾನಮುದ್ರೆಯಲ್ಲಿ ನಿಂತಿರುವ ಮೂರ್ತಿಯ ಪಾದಗಳ ಅಕ್ಕಪಕ್ಕದಲ್ಲಿ ಸಾಕಷ್ಟು ಜಾಗವಿದ್ದರೂ ಜಿನಶಾಸನ ದೇವದೇವಿಯರ ಶಿಲ್ಪವಿಲ್ಲ. ಚಾಮರಗಳಾಗಲಿ, ಚಾಮರಧಾರಿಗಳಾಗಲಿ ಇಲ್ಲ. ಬಲಗಡೆಯ ಕಾಲಿನ ಪತ್ತಿರದಿಂದ ಪ್ರಾರಂಭವಾಗಿರುವ ಹಾವಿನ ಬಾಲದ ಮೈ ಏಳು ಸುತ್ತು ಬಳಸಿ, ಜಿನರ ಕುತ್ತಿಗೆಯ ಬಳಿಯಿಂದ ಹೆಡೆಯನ್ನು ಬಿಚ್ಚಿದೆ. ಅಯ್ದು ಹೆಡೆಗಳಲ್ಲಿ ನಡುವಣ ಹೆಡೆ ಅಗಲವಾಗಿದೆ. ಜಿನರ ಕೋಲು ಮುಖ, ಉದ್ದನೆಯ ಕಿವಿಗಳು, ಅಂತರ್ಮುಖತೆಯನ್ನು ತೋರಿಸುವ ಕಣ್ಣುಗಳು, ನೀಳ ಮೂಗು, ನಸುಬಿರಿದ ತುಟಿ, ನವಿರುಕಪೋಲ, ನುಣುಪುಗಲ್ಲ, ದಷ್ಟಪುಷ್ಟ ವಕ್ಷ ಮತ್ತು ತೊಡೆಗಳು, ತೆಳುಸೊಂಟ, ನೇರ ಇಳಿಬಿಟ್ಟ ಕೈಗಳ ಅಂಗೈಬಾಗು - ಎಲ್ಲವೂ ಈ ವಿಗ್ರಹದ ಹಳಮೆಯನ್ನು ಹೇಳುತ್ತವೆ.

ಮೂರು ಜಿನಬಿಂಬಗಳಲ್ಲಿ ಕಾಲದ ದೃಷ್ಟಿಯಿಂದಲೂ, ಗುಡಿಯಲ್ಲಿ ಪ್ರತಿಷ್ಠಾಪಿಸಿರುವ ಕ್ರಮದಲ್ಲಿಯೂ ಎರಡನೆಯದು ನಟ್ಟನಡುವಣ ಮೂರ್ತಿ. ಇದು ಪದ್ಮಾಸನದಲ್ಲಿ ಯೋಗ ಮುದ್ರೆಯಲ್ಲಿ ಕುಳಿತಿರುವ ಮಹಾವೀರ ಜಿನರ ಬಿಂಬ. ಸಿಂಹಪೀಠದ ಮೇಲೆ ಪರ್ಯಂಕಾಸನದಲ್ಲಿ ವಿರಾಜಮಾನರಾಗಿರುವ ಮಹಾವೀರರು ಮಡಚಿದ ಎಡಗಾಲಿನ ಮೇಲೆ ಬಲಗಾಲನ್ನು ಅಂಗಾಲು ಮೇಲಾಗಿಸಿ ಇರಿಸಿದ್ದಾರೆ. ಅದರ ಮೇಲೆ, ಎಡ ಅಂಗೈ ಮೊದಲಿಟ್ಟು ಅದರ ಮೇಲೆ ಬಲ ಅಂಗೈ ಇಟ್ಟಿದ್ದಾರೆ: ಎರಡೂ ಅಂಗೈ ಬೆರಳುಗಳನ್ನು ನೀಳವಾಗಿ ಚಾಚಲಾಗಿದೆ. ಯೋಗ ಮುದ್ರೆಯ ಗಾಂಭೀರ್ಯ ಮನಂಬುಗುವಂತಿದೆ. ನೇರವಾಗಿ ಸೆಟೆದು ಸ್ಥಿರವಾಗಿರುವ ಸೊಂಟ, ಬೆನ್ನು ಎದೆ, ಭುಜಗಳಿಗೆ ಸಾವಯವ ಸೌಷ್ಠವವಿದೆ. ದುಂಡು ಮುಖ, ದೀರ್ಘಕರ್ಣ, ಗುಂಗುರುಗೂದಲು, ತನ್ಮಯ ಮುಖದ ಮಾಟ ಗಮನಾರ್ಹವಾಗಿವೆ. ತಲೆಯ ಹಿಂದೆ ಲಾಳಾಕಾರದ ಪ್ರಭಾವಳಿಯಿದೆ. ಅದರ ಮೇಲ್ಗಡೆ ಒಂದರ ಮೇಲೊಂದರ ಪ್ರಕಾರ ಮುಕ್ಕೊಡೆಯಿದೆ, ಪ್ರತಿಯೊಂದು ಕೊಡೆಗೂ ಮಾಡಿರುವ ಮಾಲಾಲಂಕಾರ ನಿಚ್ಚಳವಾಗಿದೆ. ಮೊದಲನೆಯ ಕೊಡೆಯ ನಡುವೆ ಕೆಳಗಡೆಗೆ ಇಳಿದಿರುವ ದಿಂಡುಕೂಡ ಎದ್ದು ಕಾಣುತ್ತದೆ.

ಮಹಾವೀರರ ಬೆನ್ನ ಹಿಂದೆ ಎರಡು ಮಕರಗಳಿವೆ. ಅವುಗಳ ಮೇಲೆ ಎಡಕ್ಕೊಬ್ಬ ಬಲಕ್ಕೊಬ್ಬ ಚಾಮರಧಾರಿಗಳಿದ್ದಾರೆ. ಅವರು ಒಂದು ಕೈಯಲ್ಲಿ ಚೌರಿಯನ್ನೂ, ಇನ್ನೊಂದು ಕೈಯಲ್ಲಿ ಬೀಜಪೂರ ಫಲವನ್ನೂ ಹಿಡಿದು ನಿಂತಿದ್ದಾರೆ. ಚಾಮರಧರರ ಸೊಂಟ, ಕುತ್ತಿಗೆ, ಕಿವಿಗಳು ಸಾಲಂಕೃತವಾಗಿದ್ದು ತಲೆಯ ಮೇಲೆ ಕಿರೀಟವಿದೆ, ಮುಖದಲ್ಲಿ ಮಂದಸ್ಮಿತವಿದೆ. ಇನ್ನೂ ಮೇಲಕ್ಕೆ, ಮುಕ್ಕೊಡೆಯ ಹಿಂದಕ್ಕೆ, ಚೈತ್ಯವಿದೆ, ಮುಖದಲ್ಲಿ ಮಂದಸ್ಮಿತವಿದೆ. ಚೈತ್ಯ ವೃಕ್ಷದ ಸಂಕೇತ ಸೂಚಕ ಗರಿಗಳಿವೆ. ತೀರ್ಥಂಕರರ ತೊಡೆಗಳ ಎಡಬಲಗಳಲ್ಲಿ ಸುಖಾಸನದಲ್ಲಿ ಕುಳಿತಿರುವ ದ್ವಿಭುಜರಾದ ಜಿನಶಾಸನ

ದೇವ ದೇವಿಯರಿದ್ದಾರೆ. ಜಿನರ ಬಲಗಡೆ ಮಾತಂಗಯಕ್ಷನೂ ಎಡಗಡೆ ಸಿದ್ಧಾಯಿನೀ ಯಕ್ಷಿಯೂ ಕಾಣುತ್ತಾರೆ. ಡೊಳ್ಳು ಹೊಟ್ಟೆಯ ಮಾತಂಗನ ಬಲದ ಕೈಯಲ್ಲಿ ಮಾತುಲಿಂಗ ಫಲವಿದೆ, ಎಡದ ಕೈ ವರದ ಹಸ್ತವಾಗಿದೆ. (ನಾಗರಾಜಯ್ಯ, ಹಂಪ : ಯಕ್ಷ ಯಕ್ಷಿಯರು : ೧೯೭೬ : ೧೧೬, ೧೪೨). ಸಿದ್ಧಾಯಿಣಿ ಭದ್ರಾಸನೆಯಾಗಿದ್ದು ಬಲದ ಕೈಯಲ್ಲಿ ವರದ ಮುದ್ರೆಯೂ ಎಡಗಡೆಯ ಕೈಯಲ್ಲಿ ಪುಸ್ತಕವೂ ಇರುವಂತೆ ತೋರುತ್ತದೆ. ಈ ಎಲ್ಲ ಶಿಲ್ಪಶಾಸ್ತ್ರ ಲಕ್ಷಣ ಮತ್ತು ಶೈಲಿಯನ್ನು ಅವಲಂಬಿಸಿ ಪ್ರಸ್ತುತ ಮಹಾವೀರ ಜಿನರ ವಿಗ್ರಹವು ಕ್ರಿ.ಶ. ಒಂಬತ್ತನೆಯ ಶತಮಾನದ ಅಂತ್ಯಭಾಗಕ್ಕೆ, ರಾಷ್ಟ್ರಕೂಟರ ಆಳ್ವಿಕೆಗೆ ಸೇರಿದ್ದೆನ್ನಬಹುದು.

ಸಿಂಹಪೀಠದ ಮೇಲುಗಡೆ ಫಲಕದಂತಿರುವ ಭಾಗದಲ್ಲಿ "ಶ್ರೀಶಂಖ ಜಿನಾಲಯದ ಪ್ರತಿಬದ್ಧ ಕಮ್ಮದವಟ್ಟೆಯ ದೇಹಾರ ಕನ್ತಿಯರ ಬಲ್ಲಿಮಯ್ಯ ಮಾಡಿಸಿದ ಶ್ರೀ' ಎಂಬ ಒಂದು ಸಾಲಿನ ಶಾಸನವಿದೆ. ಇದೊಂದು ಅಪ್ರಕಟಿತ ಶಾಸನವಾಗಿದ್ದು ಈ ಒಕ್ಕಣೆಗೆ ಹೆಚ್ಚಿನ ಚಾರಿತ್ರಿಕ ಮಹತ್ವವಿದೆ. ಇಲ್ಲಿ ಹೇಳಿರುವ ಶಂಖಜಿನಾಲಯವು ನಿಸ್ಸಂದೇಹವಾಗಿ ಪುಲಿಗೆಱೆಯ ಸುಪ್ರಸಿದ್ಧ ಶಂಖಜಿನಾಲಯವೇ ಆಗಿದೆ. (SII. Vol XX. No. 3. . 630 C.E.; IA. Vol VII p. 106). ಈ ಶಂಖ ಜಿನಾಲಯಕ್ಕೆ ಏಳು-ಎಂಟನೆಯ ಶತಮಾನದಿಂದಲೂ ಅನೇಕ ದಾನದತ್ತಿಗಳು ಪ್ರಾಪ್ತವಾಗಿದ್ದುವಲ್ಲದೆ ಇದು ಬಾದಾಮಿ ಚಾಲುಕ್ಯರ ಪಟ್ಟಜಿನಾಲಯವೂ ಆಗಿತ್ತು [SII. XX. No. 4 and 5 . 683 C.E. : ibid, No. 6 C.E. 730 ; ibid, No. 7, C.E. 735; IA. VII p. 110 C.E. 723; ಹಂಪ ನಾಗರಾಜಯ್ಯ: *ಶಾಸನಗಳಲ್ಲಿ ಜೈನ ತೀರ್ಥಗಳು* : ೧೯೯೮:೪೨] ಗಂಗರ ಇಮ್ಮಡಿ ಮಾರಸಿಂಹನು ಈ ಬಸದಿಗೆ ಮೊಳಗೆರೆ ಮತ್ತು ಸಿಗ್ಗಲಗ್ರಾಮಗಳನ್ನು ಬಿಟ್ಟುಕೊಟ್ಟಿದ್ದನು (SII. XX. No 244, C.E. 968 ; Nagarajaiah, Hampa: *A History of the Early Ganga Monarchy and Jainism:* 1999). ಅಲ್ಲದೆ ಶಂಖಜಿನಾಲಯವು ಖ್ಯಾತಿಯ ಜತೆಗೆ ಮಲ್ಲಸಮುದ್ರಕ್ಕೆ ಸಮೀಪವಾಗಿತ್ತು, ಸುಮಾರು ಅರವತ್ತು ಕಿಮೀ ಅಂತರದಲ್ಲಿತ್ತು. ಕೇವಲ ಹತ್ತು ಕಿಮೀ ಹತ್ತಿರದಲ್ಲಿದ್ದ ಮುಳ್ಗುಂದದ ಬಸದಿಗೆ ಪ್ರತಿಬದ್ಧವಾಗದೆ, ಅರವತ್ತು ಕಿಮೀ ದೂರದ ಪುಲಿಗೆಱೆಯ ಶಂಖಜಿನಾಲಯಕ್ಕೆ ಪ್ರತಿಬದ್ಧವಾಗಿರುವುದಕ್ಕೆ ಕಾರಣವೆಂದರೆ ಶಂಖ ಜಿನಾಲಯವು ರಾಜ ಮಹಾರಾಜ ಮಹಾರಾಣಿಯರಿಂದ ಪ್ರತಿಷ್ಠಾಪನೆಗೊಂಡು ಬಹುಮಾನ್ಯ ವಾಗಿದ್ದುದು.

ಒಂದೇ ಒಂದು ಸಾಲಿನ ಈ ಶಾಸನೋಕ್ತಿಯಲ್ಲಿ ಇನ್ನೂ ಕೆಲವು ಸ್ವಾರಸ್ಯಗಳಿವೆ. 'ಪ್ರತಿಬದ್ಧ' ಎಂಬ ಶಬ್ದವು ಚರ್ಚಿಸತಕ್ಕದ್ದು. ಪ್ರತಿಬದ್ಧವೆಂಬುದನ್ನು ಇಲ್ಲಿ 'ಅಧೀನ ವ್ಯಾಪ್ತಿಗೆ ಆಡಳಿತಕ್ಕೆ ಒಳಪಟ್ಟಿದ್ದು' ಎಂಬರ್ಥದಲ್ಲಿ ಬಳಸಲಾಗಿದೆ. ಶಾಸನಗಳಲ್ಲಿ ಪ್ರತಿಬದ್ಧ ಜಿನಾಲಯಗಳ ಪ್ರಸ್ತಾಪಗಳಿವೆ. (SII. Vol. XI-i. No. 52. C.E. 1007; EC. VIII (BLR) Sorab, 233. C.E. 1139, pp. 97-98 etc). ಆದರೆ ಅತ್ಯಂತ ಪ್ರಾಚೀನವಾದ ಪ್ರಯೋಗವೆಂದರೆ ಮಲ್ಲಸಮುದ್ರದ ಈ ಒಂದು ಸಾಲಿನ ಶಾಸನವೇ ಆಗಿದೆ. ಎರಡನೆಯದಾಗಿ 'ದೇಹಾರ' ಎಂಬ ಮಾತು. ಇದೂ ಸಹ, ಪ್ರತಿಬದ್ಧ ಶಬ್ದದಂತೆ, ಸಂಸ್ಕೃತ ಭಾಷೆಯದು; ಭಟಾರಾ ನಿಮ್ಮನೊಂದಂ ಬೇಡಿದಪ್ಪೆನೀ ವರ್ಷಾಕಾಲಮನೆನ್ನ ದೇಹಾರದೊಳಿರ್ದ್ದಂತಃಪುರದ ಮನೆಗಳೊಳ್ ಚರ್ಯಾಮಾರ್ಗಂ ಬುಗುವುದನೆನಗೆ ದಯೆಗೆಯ್ಯಲ್

ವೇಟ್ಟುಮೆಂದೊಡೆ" [ವಡ್ಡಾರಾಧನೆ, (ಸಂ) ಹಂಪನಾ, ೧೯೯೩ : ಪು. ೧೪೮]. ದೇವಾಕಾರ ಎಂಬುದೇ ದೇಹಾರ. ಹಾಗೆಂದರೆ ದೇವರ ವಿಗ್ರಹ, ದೇವರ ಪ್ರತಿಮೆ ಎಂದರ್ಥ. ದೇವತಾಮೂರ್ತಿ ಎಂಬ ಶಬ್ದಾರ್ಥದಲ್ಲಿ 'ದೇಹಾರ' ಶಬ್ದವನ್ನು ಎರಡನೆಯ ಗುಣವರ್ಮ (ಪುಷ್ಪದಂತ ಪುರಾಣ), ಬಾಹುಬಲಿ ಪಂಡಿತ (ಧರ್ಮನಾಥ ಪುರಾಣ), ರತ್ನಾಕರವರ್ಣಿ (ರತ್ನಾಕರ ಶತ) ಮೊದಲಾದ ಜೈನಕವಿಗಳೂ ಬಳಸಿದ್ದಾರೆ. ಕಲ್ಲು, ಲೆಪ್ಪ, ಕಂಚು, ಬೆಳ್ಳಿ, ಚಿನ್ನ, ರತ್ನಗಳಿಂದ ದೇಹಾರ (ದೇವರ ಪ್ರತಿಮೆ)ಗಳನ್ನು ಮಾಡಿದರೆ ಸುಂದರವಾಗಿರುತ್ತವೆಂದು ರತ್ನಾಕರವರ್ಣಿ ಹೇಳಿದ್ದಾನೆ: ಶ್ರೀ ಶಿಲೆ ಲೇಪ್ಯ ಕಾಂಸ್ಯ ರಜತಾಷ್ಟಾಪದ ರತ್ನಂಗಳಿಂ ದೇಹಾರಂ ಗೆಯ್ಯಲಂಗ ಸೌಂದರಬಲಂ (ರತ್ನಾಕರ ಶತಕ).

ಒಂದು ಸಾಲಿನ ಪಾದಪೀಠ ಶಾಸನದ ಹೇಳಿಕೆಯ ಪ್ರಕಾರ ಈ ಸುಂದರ ಮಹಾವೀರರ ವಿಗ್ರಹವನ್ನು ಕರಿಯ ಕಲ್ಲಿನಲ್ಲಿ ಮಾಡಿಸಿದವನು ಬಲ್ಲಿಮಯ್ಯ ಎಂಬ ಶ್ರಾವಕ. ಈತನಿಗೆ ಕನ್ತಿಯರ ಬಲ್ಲಿಮಯ್ಯ ಎಂಬುದು ಅಡ್ಡ ಹೆಸರು. ಅಂದರೆ ಈತನು ಕಂತಿಯೊಬ್ಬರ ಶಿಷ್ಯನೊ, ಅಥವಾ ಕಂತಿಯ ದೀಕ್ಷೆಯನ್ನು ಪಡೆದವರೊಬ್ಬರ ಮನೆತನಕ್ಕೆ ಸೇರಿದವನೊ ಆಗಿದ್ದನೆಂದು ಅರ್ಥ ಪ್ರತೀತವಾಗುತ್ತದೆ. ಆದರೆ ಬಲ್ಲಿಮಯ್ಯ ಯಾರು, ಎತ್ತ, ಆರ್ಗೆ ಎಂಬುದು ತಿಳಿಯುವುದಿಲ್ಲ. ಕನ್ತಿಯರ ಬಲ್ಲಿಮಯ್ಯ ಮಾಡಿಸಿದ ಎಂಬ ವಾಕ್ಯವೇಷ್ಟನವು ಅಂದಿನ ಶೈಲಿಗೆ, ವಾಕ್ಯ ರಚನಾ ಕ್ರಮಕ್ಕೆ ಅನುಗುಣವಾಗಿದೆ. ಉದಾಹರಣೆಯಾಗಿ ಈ ಶಾಸನ ಪ್ರಯೋಗವನ್ನು ನೋಡಬಹುದು - ಪೊಲೆಕೇಸಿ ಅರಸರ... ಮಾಡಿಸಿದ ದೇಗುಲ [ಎಕ ೭-೧, ಶಿಕಾರಿಪುರ ೧೦, ಕ್ರಿ.ಶ. ೭ನೆಯ ಶತಮಾನ] ಈ ದೇವತಾ ವಿಗ್ರಹ (ದೇಹಾರ)ವು ಮೂಲತಃ 'ಕಮ್ಮದವಟ್ಟಿ' ಎಂಬ ಸ್ಥಳಕ್ಕೆ ಸೇರಿದ್ದಾಗಿತ್ತು; ಕಮ್ಮದವಟ್ಟಿಯ ದೇಹಾರ. ಈ ಕಮ್ಮದವಟ್ಟಿಯು ಈಗ ಹಾಲಿ ಮಹಾವೀರಮೂರ್ತಿ ಇರುವ ಮಲ್ಲಸಮುದ್ರಕ್ಕೆ ಇದ್ದ ಇನ್ನೊಂದು ಹೆಸರೊ ಅಥವಾ ಬೇರೆ ಊರೊ ಎಂಬುದು ಚಿಂತನೀಯ.

ಈಗಿನ ಮಲ್ಲಸಮುದ್ರ ಗ್ರಾಮವು ಸಮೀಪದ ಮುಳ್ಗುಂದದಷ್ಟೇ ಪ್ರಾಚೀನ ಜೈನ ಕೇಂದ್ರ. ಬೆಳ್ವೊಲ-೩೦೦ (ಸಂ. ಧವಳ ವಿಷಯ)ಕ್ಕೆ ಸೇರಿದ ಮುಳ್ಗುಂದವು ಏಳನೆಯ ಶತಮಾನದ ವೇಳೆಗೆ ಹೆಸರುವಾಸಿಯಾಗಿತ್ತು. (IA. VII. No. 220 C.E. 658). ಮುಳ್ಗುಂದ ೧೨ ಎಂಬ ದ್ವಾದಶ ಗ್ರಾಮಘಟಕವು ರಾಷ್ಟ್ರಕೂಟರ ಆಡಳಿತದಲ್ಲಿ ಸಮಾವೇಶವಾಗಿತ್ತು. (EI. XXVI. No. 4. C.E. 906). ಹತ್ತನೆಯ ಶತಮಾನದಲ್ಲಿ ಇದನ್ನು ಸಿಂದರು ಆಳುತ್ತಿದ್ದರು. (EC. XI (BLR) Davangere. No. 114, C.E. 992; SII. XI-I No. 47 C.E. 994 Hosur (Gadag Dt) P. 33) ಮುಳ್ಗುಂದ ಪಟ್ಟಣದ ಶಾಸನಗಳಲ್ಲಿ ಒಂದು ಶಾಸನದಲ್ಲಿ ಬರುವ ಊರುಗಳ ಹೆಸರುಗಳಲ್ಲಿ 'ಬಳ್ಳಗೆಱೆ' ಎಂಬ ಗ್ರಾಮನಾಮವೂ ಸೇರಿದೆ. (EI. vol. XIII. No. 15 C.E. 902-03. pp. 190-94)

ಚಂದ್ರಾರ್ಯ ಎಂಬ ವಣಿಜಪುತ್ರನಾದ ಚೀಕಾರ್ಯ ಎಂಬಾತನು ಮುಳ್ಗುಂದದಲ್ಲಿ ಪಾರ್ಶ್ವನಾಥ ಜಿನಾಲಯವನ್ನು, ಪ್ರಾಯಃ ಕ್ರಿ.ಶ. ಒಂಬತ್ತನೆಯ ಶತಮಾನದ ನಡುಗಾಲದಲ್ಲಿ ಮಾಡಿಸಿದನು. ಮುಂದೆ ಈ ಚೀಕಾರ್ಯನ ಮಗನಾದ ಅರಸಾರ್ಯನು ಕ್ರಿ.ಶ. ೯೦೨-೦೩ರಲ್ಲಿ ಬಸದಿಗೆ ಒಂದು

ಸಾವಿರ ಎಲೆ ಬಳ್ಳಿಯ ತೋಟವನ್ನೂ ಇತರರು ಬೇರೆ ಹೊಲಗಳನ್ನೂ ದತ್ತಿಯೆಂದು ಬಿಟ್ಟುಕೊಟ್ಟರು. ಮೂರು ಹೊಲಗಳಲ್ಲಿ ಒಂದು 'ಬಳ್ಳಗೆಱೆ ಕ್ಷೇತ್ರ'ಕ್ಕೆ ಸೇರಿತ್ತೆಂದು ಶಾಸನೋಕ್ತವಾಗಿದೆ. (EI. Vol. XIII. No. 15 C.E. 902-03 p. 193. lines : 11-12). ಬಳ್ಳಗೆಱೆ ಎಂಬುದು ಜಲಮೂಲವನ್ನು ಆಧರಿಸಿರುವ ಸ್ಥಳವಾಚಿ. ಬಳ್ಳಗೆಱೆ ಎಂಬುದು ಊರಿನ ಕೆರೆಯನ್ನು ಸೂಚಿಸುತ್ತದೆ. ಕೆಱೆ ಎಂಬ ಮುಕ್ತ ಆಕೃತಿಯ ಆದಿಯಲ್ಲಿರುವ ಅಘೋಷ 'ಕ'ಕಾರವು ಸಮಾಸದಲ್ಲಿ ಘೋಷಸ್ವನ 'ಗ'ಕಾರವಾಗಿದೆ.

ಬಳ್ಳಗೆಱೆ ಎಂಬ ಊರಿನ ಹೆಸರಿನಲ್ಲಿರುವ ಉತ್ತರಾರ್ಧವು ಕೆಱೆ ಎಂದು ಸ್ಪಷ್ಟವಾದ ಮೇಲೆ, ಪೂರ್ವಾರ್ಧವಾದ 'ಬಳ್ಳ' - ಎಂಬುದು ಏನನ್ನು ಹೇಳುತ್ತದೆಂಬ ಆಲೋಚನೆ ಬರುವುದು ಸಹಜ. ಈ ಶಬ್ದ ಪ್ರಯೋಗವಾಗಿರುವ ಶಾಸನದಲ್ಲಿಯೇ ಮತ್ತು ಇದರ ಮುಂದಿನ ಸಾಲಿನಲ್ಲಿಯೇ 'ಬೆಳ್ಳಾವಿಕುಲ' ಎಂಬ ಬ್ರಾಹ್ಮಣ ವಂಶದ ಉಲ್ಲೇಖವಿದೆ. (ISRD, p. 193 lines 12-13) ಬಹುಶಃ ಬೆಳ್ಳಾವಿಕೆಱೆ ಎಂಬುದು ಬೆಳ್ಳಗೆಱೆ - ಬಳ್ಳಗೆಱೆ ಎಂದಾಗಿರಲೂಬಹುದು; ಇದು ಒಂದು ಸಂಭಾವ್ಯವೇ ಹೊರತು ಐತೀರ್ಪಲ್ಲ. ಆದರೆ ಬಳ್ಳಗೆಱೆ ಎಂಬ ದೇಶ್ಯ ಶಬ್ದವು ಸಂಸ್ಕೃತೀಕರಣಗೊಂಡು ಮಲ್ಲಸಮುದ್ರ ಎಂದಾಗಿರುವುದು ನಿಶ್ಚಯ. ಶಬ್ದರೂಪ ಮತ್ತು ಅರ್ಥಾನುಸಂಧಾನವನ್ನು ಗಮನಿಸಿದರೆ ಇದರ ಹುರುಳು ಬಯಲಾಗುತ್ತದೆ. ಕೆಱೆ ಎಂದು ಅಂತ್ಯವಾಗುವ ಹಾಗೂ - ಸಮುದ್ರ ಎಂದು ಅಂತ್ಯವಾಗುವ ಊರಿನ ಹೆಸರುಗಳು ನೂರಾರು. ಇವೆರಡೂ ಸಮಾನಾರ್ಥಕವಾದ ಕನ್ನಡ (ಕೆಱೆ), ಸಂಸ್ಕೃತ, (ಸಮುದ್ರ) ಶಬ್ದಗಳು. ಇಲ್ಲಿ ಸಮುದ್ರವೆಂದರೆ ವಿಸ್ತಾರವಾದ ಸಾಗರ, ಕಡಲು ಎಂದರ್ಥವಲ ಪ್ರತಿಯೊಂದು ಹಳ್ಳಿಯ ಪಾಲಿಗೂ ಆ ಊರಿನ ಕೆರೆಯೇ ಸಮುದ್ರವಿದ್ದ ಹಾಗೆ. ಸಮುದ್ರ ಎಂಬುದರ ಸವೆದ-ಸಣ್ಣಿಸಿದ ರೂಪವೇ 'ಸಂದ್ರ', ರಾಮಸಮುದ್ರ, ಭೀಮಸಮುದ್ರ ಎಂಬ ಸ್ಥಳವಾಚಿಯು ರಾಮಸಂದ್ರ ಎಂದಾಗಿರುವುದು ಸಹಜ. ಬಕಾರವೂ ಮಕಾರವೂ ಏಕಸ್ಥಾನೀಯವಾದ ಉಭಯೋಷ್ಠ್ಯ ವರ್ಣಗಳೆಂಬುದು ಈ ತೀರ್ಪಿಗೆ ಪುಷ್ಟಿಕೊಡುವ ಸ್ವನಶಾಸ್ತ್ರ ವಿವರಣೆ. ಳಕಾರ ಲಕಾರವಂತೂ ಲಳಯೋರಭೇದ: ಎಂಬ ಸೂಚನೆಗೆ ಅನುಗುಣವಾಗಿ ಅದಲುಬದಲು ಆಗುತ್ತವೆ.

ಮೇಲಿನ ಚರ್ಚೆಯ ಸಾರಾಂಶವೆಂದರೆ ಅಡಕೆ ತೋಟಗಳಿಂದ ಕೂಡಿದ್ದ ಅಂದಿನ ಬಳ್ಳಗೆಱೆ ಅರ್ಥಾತ್ ಇಂದಿನ ಮಲ್ಲಸಮುದ್ರವು ಬೆಳ್ವೊಲ - ೩೦೦ರ ಕಂಪಣಕ್ಕೆ ಒಳಪಟ್ಟು ಒಂಬತ್ತನೆಯ ಶತಮಾನದ ವೇಳೆಗೆ ಗಣ್ಯವಾಗಿತ್ತು. ಆದ್ದರಿಂದ ಒಂದು ಸಾಲಿನ ಶಾಸನೋಕ್ತ ಕಮ್ಮದವಟ್ಟಿಯು ಇಂದಿನ ಮಲ್ಲಸಮುದ್ರವಲ್ಲ. ಅದು ಬೇರೆ ಊರಾಗಿತ್ತು. ಪ್ರತ್ಯೇಕ ಗ್ರಾಮವಾದ ಕಮ್ಮದವಟ್ಟಿಯಿಂದ ಮಹಾವೀರರ ದೇಹಾರ (ವಿಗ್ರಹ)ವನ್ನು ಮಲ್ಲಸಮುದ್ರಕ್ಕೆ ತಂದಿಡಬೇಕಾದ ಪ್ರಮೇಯ ಏನಿತ್ತೆಂಬುದು ಖಚಿತವಾಗಿ ತಿಳಿಯದು, ಆದರೆ ಕೇವಲ ಊಹಿಸಬಹುದಾದ ಸಂಗತಿ.

ಮಲ್ಲಸಮುದ್ರದ ಜೈನಗುಡಿಯೊಳಗಿರುವ ಮೂರನೆಯ ಮೂರ್ತಿ ಪಾರ್ಶ್ವನಾಥ ತೀರ್ಥಂಕರರದು. ಕಾಯೋತ್ಸರ್ಗ (ಖಡ್ಗಾಸನ - ಸಮಭಂಗ)ದಲ್ಲಿ ಧ್ಯಾನಮಗ್ನರಾಗಿರುವ ಪಾರ್ಶ್ವಜಿನರು ಪದ್ಮಪೀಠದ ಮೇಲೆ ನಿಂತಿದ್ದಾರೆ. ಕಾಲಿನ ಎಡಕ್ಕೆ ಚತುರ್ಭುಜೆ ಪದ್ಮಾವತೀ ದೇವಿಯೂ ಬಲಕ್ಕೆ ಚತುರ್ಭುಜ ಧರಣೇಂದ್ರನೂ ಸುಖಾಸನದಲ್ಲಿ ಕುಳಿತಿದ್ದಾರೆ. ಜಿನಶಾಸನ

ದೇವ-ದೇವಿಯರ ತಲೆಯ ಮೇಲೆ ಮೂರು ಹೆಡೆಗಳ ಸರ್ಪದ ಹೆಡೆಯಿದೆ. ಪದ್ಮಾವತಿಯು ಪಾಶ, ಅಂಕುಶ, ಪದ್ಮ ಮತ್ತು ಫಲವನ್ನು ಹಿಡಿದ್ದಾಳೆ. ಧರಣೇಂದ್ರನೂ ಸಹ ಪಾಶ, ಅಂಕುಶ, ಪದ್ಮ ಮತ್ತು ಫಲ (?) ವನ್ನು ಹಿಡಿದಿದ್ದಾನೆ.

ಪಾರ್ಶ್ವನಾಥ ಜಿನರ ಬಲಗಾಲು ಪಕ್ಕದಲ್ಲಿ ಸರ್ಪದ ಬಾಲ ಪ್ರಾರಂಭವಾಗಿ ಜಿನ ಬಿಂಬದ ಹಿಂಬದಿಯಲ್ಲಿ ಆರುಸುತ್ತು ಬಳಸಿ ತಲೆಯ ಹತ್ತಿರ ಏಳು ಹೆಡೆಗಳನ್ನು ಬಿಚ್ಚಿ ಹಿಡಿದಿದೆ. ಹೆಡೆಯ ಅಕ್ಕಪಕ್ಕಗಳಲ್ಲಿ ಹಿಡಿಯಿರುವ ಎರಡು ಚಾಮರಗಳಿವೆ. ಹೆಡೆಯ ಮೇಲುಗಡೆ ಒಂದರ ಮೇಲೊಂದು ಪೋಣಿಸಿದಂತೆ ಮುಕ್ಕೊಡೆಯಿದ್ದು ಅದು ಕ್ರಮೇಣ ಒಂದರಿಂದೊಂದು ಚಿಕ್ಕದಾಗಿವೆ. ಪರಿಸರದಲ್ಲಿ ಎಡಕ್ಕೊಂದು ಬಲಕ್ಕೊಂದು ಮಕರಗಳ ಬಾಯಿಂದ ಹೊರಟು ಬಳ್ಳಿಯು ಅಲಂಕಾರಮಯವಾಗಿ ಉಂಗುರಾಕೃತಿಯಲ್ಲಿದೆ. ತಿರುವಾಚಿ (ಪ್ರಭಾವಳಿ)ಯ ನಟ್ಟನಡುವೆ ಕೀರ್ತಿ ಮುಖವಿದೆ. ಮಕರ ತೋರಣಾಲಂಕಾರರವು ಪಾರ್ಶ್ವಜಿನರ ಭುಜಗಳ ಪಕ್ಕದ ಮಟ್ಟದಿಂದ ಪ್ರಾರಂಭವಾಗಿದ್ದು, ಸ್ತಂಭಗಳ ಕೆಳಭಾಗವು ಯಕ್ಷರವರೆಗೂ ನಿರಲಂಕೃತವಾಗಿದೆ. ಈ ವಿಗ್ರಹವು ಕಲ್ಯಾಣ ಚಾಲುಕ್ಯರ ಕಾಲಕ್ಕೆ, ಕ್ರಿ.ಶ. ಹನ್ನೊಂದನೆಯ ಶತಮಾನಕ್ಕೆ ಸೇರಿದ್ದಾಗಿದೆ. ತೀರ್ಥಂಕರ ವಿಗ್ರಹದ ಪಕ್ಕದಲ್ಲಿ ಇಟ್ಟಿರುವ ದುಂಡಾದ ಗುಂಡಕಲ್ಲನ್ನು ಬ್ರಹ್ಮಗುಂಡು ಎಂದು ಕರೆದು ಅದಕ್ಕೆ ಚಂದ್ರಬಣ್ಣವನ್ನು ಬಳಿಯಲಾಗಿದೆ. ಅದು ಯಾವ ಕಾಲಕ್ಕೆ ಸೇರಿದ್ದೊ ತಿಳಿಯದು.

ಈ ಮೂರು ಪ್ರಾಚೀನ ವಿಗ್ರಹಗಳು ಮೊದಲಿನಿಂದಲು ಅವು ಈಗ ಇರುವ ಕಡೆಯೇ ಇದ್ದು, ಅಲ್ಲಿ ಹಿಂದೆ ಇದ್ದ ಬಸದಿಯು ಹಾಳಾಯಿತೆಂದು ತಿಳಿಯಬಹುದೆ ಎಂಬ ಪ್ರಶ್ನೆ ಎದುರಾಗುತ್ತದೆ. ತೃಪ್ತಿಕರವಾಗಿ ಉತ್ತರಿಸುವುದು ಕಷ್ಟ. ಆದರೂ ಬಹುಮಟ್ಟಿನ ಸಾಧ್ಯತೆ ಇರುವುದು ಅವನ್ನು ಬೇರೆ ಕಡೆಯಿಂದ ತಂದಿರಿಸಲಾಗಿದೆ ಎಂದು ತಿಳಿಯಲು ಕೆಲವು ಸೂಚನೆಗಳು ಸಿಗುತ್ತವೆ. ಮುಖ್ಯವಾಗಿ ಅಲ್ಲಿರುವ ಮೂರು ಮೂರ್ತಿಗಳು ಒಂದು ಕಾಲಘಟ್ಟಕ್ಕೆ ಸೇರಿಲ್ಲ. ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ ಹಾಗೂ ಕಲ್ಯಾಣ ಚಾಲುಕ್ಯ - ಹೀಗೆ ಮೂರು ರಾಜವಂಶಗಳ ಆಳ್ವಿಕೆಯ ಅವಧಿಗೆ ಈ ವಿಗ್ರಹಗಳು ಸೇರಿವೆ. ಈಗ ಮೂರ್ತಿಗಳಿರುವ ಕಟ್ಟಡ ಕೇವಲ ೫೦-೬೦ ವರ್ಷದಷ್ಟು ಹಳೆಯದು. ಅಲ್ಲದೆ ಅದು ಪ್ರಾಚೀನ ಬಸದಿಯ ಅವಶೇಷ ಲಕ್ಷಣಗಳನ್ನು ಒಳಗೊಂಡಿಲ್ಲ. ಊರಿನ ಮಧ್ಯೆ ಇರುವ ಹಣುಮಂತ ದೇವರ ಗುಡಿಯ ಮುಂದಿರುವ ಜೈನಶಾಸನ ಶಿಲೆಯು ಪ್ರಾಚೀನ ಅವಶೇಷವಾಗಿದೆ. ಅಲ್ಲಿದ್ದ ಜಿನಮಂದಿರ ಹೋಗಿ ಕಾಲಾಂತರದಲ್ಲಿ ಈಗಿರುವ ಅಜೈನ ದೇವಾಲಯ ಬಂದಿರಬೇಕು. ಮಲ್ಲಸಮುದ್ರದಲ್ಲಿ ಮೂರು ಬೇರೆ ಬೇರೆ ಜಿನಾಲಯಗಳಿದ್ದಿರುವ ಸಾಧ್ಯತೆಯನ್ನೂ ಪರಿಭಾವಿಸಬೇಕು. ಲಭ್ಯವಾಗಿರುವ ಮೂರೂ ಮೂರ್ತಿಗಳನ್ನು ಇಟ್ಟ ತ್ರಿಕೂಟ ಬಸದಿಯೂ ಇದ್ದಿರಬಹುದು. ಈ ವಿಚಾರದಲ್ಲಿ ಹೆಚ್ಚು ಊಹೆಯನ್ನು ಮಾಡುವುದಕ್ಕಿಂತ ದೊರೆತಿರುವ ವಿಗ್ರಹಗಳನ್ನು ಶಿಲ್ಪ-ಶೈಲಿ ವೈಶಿಷ್ಟ್ಯವನ್ನು ಪ್ರಸ್ತಾಪಿಸುವಷ್ಟು ಸಾಕು. ಆದರೆ, ಚೋಳರು ಈ ಭಾಗದ ದೇವಾಲಯಗಳನ್ನು ಹಾಳು ಮಾಡಿದ್ದು ಚಾರಿತ್ರಿಕವಾಗಿ ತಿಳಿದಿರುವುದರಿಂದ, ಮಲ್ಲಸಮುದ್ರದ ಬಸದಿಗಳೂ ಅವರಿಂದ ನಾಶವಾಗಿರಬಹುದೆನಿಸುತ್ತದೆ. ಅದೇನೇ ಇದ್ದರೂ, ಮಲ್ಲಸಮುದ್ರ ಗ್ರಾಮದ ರತ್ನಭಂಡಾರದಂತಿರುವ ಈ ಮೂರು ವಿಗ್ರಹಗಳು ಊರಿನ ಭವ್ಯ ಗತ ಇತಿಹಾಸ ಸಾರುತ್ತವೆ. ಕರ್ನಾಟಕ ಜೈನ ಶಿಲ್ಪಪರಪಂರೆಯ ಚರಿತ್ರೆಯಲ್ಲಿ ಈ ವಿಗ್ರಹಗಳಿಗೆ ವಿಶಿಷ್ಟಸ್ಥಾನವಿದೆ. ಇವುಗಳನ್ನು ಶಾಶ್ವತವಾಗಿ ಸಂರಕ್ಷಿಸುವುದು ತುರ್ತಾಗಿ ಆಗಬೇಕಾದ ಕೆಲಸ.

೨. ಕಳಸಾಪುರ

ಗದಗ ಶಹರದಿಂದ ಐದಾರು ಕಿಮೀಯೊಳಗೆ ಇರುವ ಇನ್ನೊಂದು ಪ್ರಾಚೀನ ಜೈನ ಕ್ಷೇತ್ರ ಕಳಸಾಪುರ. ಇಲ್ಲಿ ಪ್ರಾಚ್ಯವಸ್ತು ಇಲಾಖೆಯವರು ಕಾಪಾಡಲು ಪ್ರಯತ್ನಿಸಿರುವ ಜೈನ ಅವಶೇಷಗಳು ಮಹತ್ವದ್ದಾಗಿವೆಯೆಂಬುದು ಕ್ಷೇತ್ರಕಾರ್ಯವನ್ನು ನಡೆಸುವಾಗ ನನಗೆ ಮನವರಿಕೆ ಆಯಿತು. ಊರಿನ ಪಕ್ಕದಲ್ಲಿ ಚಿಕ್ಕದೂ ಹರಹಿನದೂ ಆದ ಗುಡ್ಡವಿದೆ. ಅದು ಸವಣಗುಡ್ಡವಾಗಿತ್ತೆಂದು ಊರಿನವರ ಅಂಬೋಣ. ಅಲ್ಲಿ ಅಳಿದುಳಿದ ಜೈನ ವಿಗ್ರಹಗಳೇ ಈಗ ಊರೊಳಗೆ ತಂದಿಟ್ಟಿರುವ ಮೂರ್ತಿಗಳೆನ್ನುತ್ತಾರೆ. ಹಾಲಿ ಒಂದು ವೇದಿಕೆಯನ್ನು ಕಟ್ಟಿ ಅದರ ನಡುವೆ ಸುಮಾರು ಎಂಟು ಅಡಿಯ ಜಿನ ಬಿಂಬವನ್ನು ನಿಲ್ಲಿಸಿದ್ದಾರೆ. ಇಡೀ ಉತ್ತರ ಕರ್ನಾಟಕದಲ್ಲಿ ದೊರೆತಿರುವ ಜೈನ ವಿಗ್ರಹಗಳಿಗೆಲ್ಲ ಬಳಿದಿರುವಂತೆ ಈ ವಿಗ್ರಹಕ್ಕೂ ವಿಭೂತಿ ಪಟ್ಟೆಯನ್ನು ಮೂರು ಬೆರಳಿನಗಲ ಪ್ರಮಾಣದ್ದನ್ನು ಎಂಟು ಹತ್ತು ಕಡೆ ಹಚ್ಚಿದ್ದಾರೆ.

ಕಾಯೋತ್ಸರ್ಗದಲ್ಲಿ ನಿಂತಿರುವ ಈ ನಗ್ನಜಿನ ಮೂರ್ತಿಯನ್ನು ಜನರು ಬಾಹುಬಲಿ ಗೋಮಟೇಶ್ವರ ಎಂದು ಕರೆಯುತ್ತಾರೆ. ಬೃಹತ್ಕಾಯವನ್ನು ನೋಡಿ ಗೊಮ್ಮಟನೇ ಇರಬೇಕೆಂದು ಭಾವಿಸಿರಬಹುದು. ಇದು ಬಾಹುಬಲಿಯ ಮೂರ್ತಿಯೆಂದು ಖಚಿತವಾಗಿ ಗುರುತಿಸಿ ಹೇಳಲು, ಈಗಿರುವ ಸ್ಥಿತಿಯಲ್ಲಿ, ಯಾವ ಕುರುಹುಗಳೂ ಇಲ್ಲ. ಪಾದಗಳ ಅಕ್ಕಪಕ್ಕಗಳಲ್ಲಿ ಹುತ್ತದ, ಹಾವಿನ, ಕಾಲುಕೈಗೆ ಬಳಸಿದ ಮಾಧವೀಲತೆ - ಈ ಯಾವ ಸೂಚನೆಗಳೂ ಇಲ್ಲ. ದೇಹದ ಎತ್ತರಕ್ಕೆ ಅನುಗುಣವಾಗಿ ಒಟ್ಟು ಪ್ರಮಾಣ ಸೌಷ್ಠವಕ್ಕೆ ತಕ್ಕ ಕಾಲು, ಕೈ, ಸೊಂಟ, ಹೊಟ್ಟೆ, ಎದೆ ಕಂಡುಬರುತ್ತದೆ. ದುಂಡು ಮುಖ, ಗುಂಗುರು ಕೂದಲು, ಮುಗುಳುನಗೆಯಲ್ಲಿ ತುಸುಬಿರಿದ ತುಟಿ, ಯೋಗ ಮುದ್ರೆ ಒಪ್ಪವಾಗಿದೆ. ಕಾಲಿನ ಆ ಕಡೆ ಈ ಕಡೆ ಜಿನಶಾಸನ ದೇವ ದೇವಿಯರಿಲ್ಲ. ಪ್ರಭಾವಳಿಯಿಲ್ಲ, ಚಾಮರ ಧಾರಿಗಳಾಗಲಿ ಚಾಮರಗಳಾಗಲಿ ಇಲ್ಲ. ಮುಕ್ಕೊಡೆಯೂ ಇಲ್ಲ. ಹೀಗಾಗಿ ಇದು ತೀರ್ಥಂಕರರ ವಿಗ್ರಹ ಹೌದೊ ಅಲ್ಲವೊ ಎಂಬ ಸಂಶಯಕ್ಕೆಡೆಯಾಗಿದೆ. ಒಂದು ವೇಳೆ ಭರತ ಚಕ್ರವರ್ತಿಯ ಮೂರ್ತಿಯಾಗಿದ್ದು. ಇದರ ಜತೆಯಾಗಿ ಕಡೆದಿದ್ದ ಬಾಹುಬಲಿ ಶಿಲ್ಪವು ಹಾಳಾಗಿದ್ದಿರಲೂ ಬಹುದು. ಊರಿನ ಬಳಿಯಿರುವ ಗುಡ್ಡದ ಸಂಬಂಧವನ್ನು ಹೊಂದಿರುವುದರಿಂದ ಬಾಹುಬಲಿ (ಗೊಮ್ಮಟ) ಶಿಲ್ಪದ ಸಾಧ್ಯತೆಗೆ ಒತ್ತು ಬೀಳುತ್ತದೆ. ಅಥವಾ ಮಾಧವೀ ಬಳ್ಳಿ ಮತ್ತು ಹಾವುಗಳನ್ನು ಇದೇ ಶಿಲ್ಪದಲ್ಲಿ ಇನ್ನೂ ಬಿಡಿಸುವುದಿದ್ದು ಇದು ಅಪೂರ್ಣ ಶಿಲ್ಪವೊ ಎಂಬ ಅನುಮಾನ ಉಂಟಾಗುತ್ತದೆ. ಹಳೆಯಬೀಡಿನ ವಸ್ತು ಸಂಗ್ರಹಾಲಯದಲ್ಲಿರುವ ಬೃಹತ್ ಜಿನ ಬಿಂಬವನ್ನು ಇಲ್ಲಿ ಉಲ್ಲೇಖಿಸಬಹುದು.

ಈ ಕಾರ್ಯೋತ್ಸರ್ಗದ ದೊಡ್ಡ ವಿಗ್ರಹದ ಕಾಲುಗಳ ಹತ್ತಿರ ಒರಗಿಸಿರುವ ಆರೇಳು ಚಿಕ್ಕಪುಟ್ಟ ಶಿಲ್ಪಗಳಿವೆ. ಅವುಗಳಲ್ಲಿ ಎರಡು ಚೊಕ್ಕ ನಿಶಿಧಿಗಳು. ಒಂದರಲ್ಲಿ ಪದ್ಮಾಸನದಲ್ಲಿ ಸಿಂಹಪೀಠದ ಮೇಲೆ ಕುಳಿತಿರುವ ಜಿನರ ಬಲಗಡೆಗೆ ಕೈ ಮುಗಿದು ಕುಳಿತಿರುವ ಸಲ್ಲೇಖನೆಯ ವ್ರತಧಾರಿ ಹೆಂಗಸಿದ್ದಾಳೆ. ಎರಡು ಹಂತದ ಚಿತ್ರಗಳಿವೆ. ಜಿನರ ಪಾದಗಳ ಎಡಗಡೆಯೂ ಇಂತಹುದೇ ಸಮಪ್ರಮಾಣದ ಇನ್ನೊಂದು ನಿಶಿಧಿಕಲ್ಲು ಇದೆ. ಎರಡೂ ನಿಶಿಧಿಗಳಲ್ಲಿ ಶಿಲ್ಪದ ಹೊರತು ಶಾಸನಗಳಿಲ್ಲ, ಇದ್ದ

ಶಾಸನ ಪಂಕ್ತಿಗಳು ಪೂರ್ಣವಾಗಿ ಆಳಿಸಿಹೋಗಿವೆ. ಎರಡು ನಾಗ-ನಾಗಿಣಿಯರ ಕಲ್ಲುಗಳಿವೆ. ಇನ್ನಿತರ ನಾಲ್ಕು ಕಲ್ಲುಗಳು ಮುಕ್ಕಾಗಿರುವ ಶಿಲ್ಪದ ಅವಶೇಷಗಳು.

ಕಾಯೋತ್ಸರ್ಗದಲ್ಲಿರುವ ದೊಡ್ಡ ವಿಗ್ರಹದ ಬಲಗಡೆಗೆ ನಾಲ್ಕಡಿ ಅಂತರದಲ್ಲಿ ಇನ್ನೊಂದು ಪ್ರಾಚೀನ ವಿಗ್ರಹವಿದೆ. ಪರ್ಯಂಕಾಸನ (ವೀರಾಸನ, ಪದ್ಮಾಸನ)ದಲ್ಲಿ ವಿಶ್ವಪದ್ಮ ಪೀಠದ ಮೇಲೆ ಕುಳಿತಿರುವ ತೀರ್ಥಂಕರರು ಯಾರೆಂಬುದು, ಲಾಂಛನ ನಶಿಸಿರುವ ಕಾರಣ, ತಿಳಿಯುವುದಿಲ್ಲ. ನೆತ್ತಿಯ ಹತ್ತಿರ ಸುರಿದಿರುವ ಎಣ್ಣೆಯು ಹಣೆ, ಎಡಭಾಗದ ಮುಖ, ಕುತ್ತಿಗೆಯಿಂದ ಇಳಿದು ಹೊಕ್ಕಳವರೆಗೆ ಕಪ್ಪು ಪಟ್ಟೆ ಬಳಿದಂತೆ ಕಲೆ ಬಿದ್ದಿದೆ. ಕಾಲು, ಮೊಳಕಾಲು, ತೊಡೆ, ತೋಳು, ಹೊಟ್ಟೆ, ಎದೆ, ಭುಜ ಮತ್ತು ಹಣೆಯ ಹತ್ತಿರ ವಿಭೂತಿ ಪಟ್ಟೆಯನ್ನು ಎಳೆದಿದ್ದಾರೆ. ಜಿನರ ಬೆನ್ನಿಗೆ ತೋರಣ, ಕಂಭಗಳಿವೆ. ಮಕರಗಳ ಮುಖಭಾಗ ತೀರ ಸವೆದಿದೆ. ಜಿನರ ಮತ್ತು ಇಡೀಶಿಲ್ಪದ ಮುಂಭಾಗ ಅಥವಾ ಮೇಲು ಪದರ ಸವೆದಿದೆ. ಹೀಗಾಗಿ ಜಿನರ ಮುಖದ ಮಾಟ ಮಸುಕಾಗಿದೆ. ತಲೆಯ ಹಿಂಬದಿಗೆ ಲಾಳಾಕಾರದ ಪ್ರಭಾವಳಿಯಿದೆ. ಅದರ ಮೇಲಕ್ಕೆ ದೊಡ್ಡ ಪ್ರಮಾಣದ ಮುಕ್ಕೊಡೆಯು ಗೋಪುರಾಕಾರದಲ್ಲಿ ಆರೋಹಣದತ್ತ ಕಿರಿದಾಗುತ್ತದೆ, ತುದಿಯಿಂದ ಬಂದರೆ ಅವರೋಹಣದತ್ತ ಹಿರಿದಾಗುತ್ತದೆ. ಮೂರೂ ಕೊಡೆಗಳ ಹಂತ ಮತ್ತು ಅಂತರವನ್ನು ಬಿಡಿಯಾಗಿ ಚೆನ್ನಾಗಿ ತೋರಿಸಲಾಗಿದೆ. ಕೊಡೆಗಳ ಮುಮ್ಮೊಗದ ಮಾಲಾಲಂಕರವು ಬಹುವಾಗಿ ಅಳಿಸಿದ್ದರೂ ಅದು ಭವ್ಯವಾಗಿದ್ದಿತೆಂಬುದು ಕಾಣುತ್ತದೆ. ಜಿನರ ಭುಜಗಳ ಹತ್ತಿರದಿಂದ ತೊಡಗಿ ಮುಕ್ಕೊಡೆಯ ಮೊದಲನೆಯ ಘಟ್ಟದವರೆಗೆ ಎರಡೂ ಕಡೆ ಚಾಮರಧಾರಿಗಳಿದ್ದಾರೆ. ಆಭರಣಗಳನ್ನು ಸಮೃದ್ಧವಾಗಿ ಸೊಂಟ, ಕುತ್ತಿಗೆ, ಕಿವಿಗೆ ತೊಟ್ಟು, ಯಜ್ಞೋಪವೀತ ಮತ್ತು ನೀಳ ಮುಕುಟಧರಿಸಿರುವ ಚಾಮರಧಾರಿಗಳ ಹಣೆಗೆ ಯಥೇಚ್ಛವಾಗಿ ವಿಭೂತಿ ಬಳಿದಿರುವುದು ಈಗಿನವರ ಕಾಣಿಕೆ. ಬಿಸಿಲು ಮಳೆ ಗಾಳಿಗಳ ಹೊಡೆತದಿಂದ ಜರ್ಝರಿತವಾಗಿರುವ ಮುಕ್ಕೊಡೆಯ ಸುತ್ತ ಬಿಡಿಸಲಾಗಿದ್ದ ತಿರುವಾಚಿಯ ಸೊಗಸು ಕಾಣದಂತಾಗಿದೆ. ಒಟ್ಟು ಶಿಲ್ಪದ ಶೈಲಿಯ ಲಕ್ಷಣವನ್ನು ಹಿಡಿದು ಈ ಜಿನಬಿಂಬವು ಕ್ರಿ.ಶ. ಹತ್ತನೆಯ ಶತಮಾನದ ಆದಿಭಾಗಕ್ಕೆ ಸೇರಿದ್ದೆಂದು ಹೇಳಬಹುದು. ಅಂತೂ ಇದು ಎರಡನೆಯ ಹಂತದ ರಾಷ್ಟ್ರಕೂಟರ ಆಡಳಿತಕಾಲದ ವಿಗ್ರಹವೆಂಬುದು ಖಚಿತ.

ಇದೇ ಕಳಸಾಪುರದ ಊರೊಳಗಡೆ ಪುನರ್ಭರಣಗೊಳ್ಳುತ್ತಿರುವ ಪ್ರಾಚೀನ ಶಿವಾಲಯದ ಮುಂದುಗಡೆ ರಸ್ತೆಯ ಮೇಲೆ ಮುಕ್ಕಾಗಿರುವ ಕೆಲವು ಶಿಲ್ಪಗಳ ಅವಶೇಷಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ಈ ರಾಶಿಯಲ್ಲಿ ಜೈನ ಮೂರ್ತಿಗಳೂ ಸೇರಿವೆ. ಅವುಗಳಲ್ಲಿ ಪದ್ಮಾಸನದಲ್ಲಿ ಕುಳಿತ ಪರಿಕರ ರಹಿತ ಜಿನರ ವಿಗ್ರಹ, ರುಂಡಮುಂಡಗಳು ಮಾತ್ರ ಅಂದರೆ ಸೊಂಟದಿಂದ ಮೇಲಿನ ಭಾಗ ಮಾತ್ರ ಇರುವ ಜಿನಶಾಸನದೇವಿಯ ಸುಂದರ ಶಿಲ್ಪ ಮತ್ತು ಬಸದಿಯೊಂದರ ಮುಂದಣ ಮಾನಸ್ತಂಭದ ತುದಿಯಲ್ಲಿದ್ದ ಚತುರ್ಮುಖ ಜಿನರ ಶಿಲ್ಪ ಪ್ರಮುಖವಾಗಿವೆ. ಇವು ೧೦-೧೧ನೆಯ ಶತಮಾನಕ್ಕೆ ಸೇರಿದ ಶಿಲ್ಪಗಳೆಂದು ತೋರುತ್ತವೆ.

ಉಪಲಬ್ಧ ಜೈನ ಶಿಲ್ಪಗಳ ಅವಶೇಷವನ್ನು ಪರಿಶೀಲಿಸಿದ್ದರಿಂದ ತಳೆಯಬಹುದಾದ ತೀರ್ಮಾನಗಳು ೧) ಕಳಸಾಪುರವು ಪ್ರಮುಖ ಜೈನ ತೀರ್ಥಸ್ಥಳವಾಗಿತ್ತು. ೨) ಕ್ರಿ.ಶ. ಒಂಬತ್ತನೆಯ ಶತಮಾನದ ವೇಳೆಗೆ ಇದು ಜೈನಕೇಂದ್ರವಾಗಿತ್ತು ೩) ಇಲ್ಲಿ ಕಡಮೆ ಎಂದರೂ ಮೂರು ಬೇರೆ

ಬೇರೆ ಜಿನಗೃಹಗಳಿದ್ದುವು ೪) ಮಾನಸ್ತಂಭವೊಂದರ ಮೇಲೆ ಚತುರ್ಮುಖ ಜಿನಬಿಂಬವನ್ನು ಸ್ಥಾಪಿಸಲಾಗಿತ್ತು ೫) ಊರಬದಿಯ ಗುಡ್ಡವು ಸವಣಪ್ಪನ ಬೆಟ್ಟವಾಗಿತ್ತು.

ಲಕ್ಷ್ಮೇಶ್ವರ

ಐಹೊಳೆ, ಬಾದಾಮಿ (ಸಂಸ್ಕೃತ: ವಾತಾಪಿ), ಪಟ್ಟದಕಲ್ಲು - ಇವುಗಳಷ್ಟೇ ಪ್ರಾಚೀನತಮವಾದ ಜೈನ ತೀರ್ಥಸ್ಥಳ ಪುಲಿಗೆಱೆ. ಕ್ರಿ.ಶ. ಏಳನೆಯ ಶತಮಾನದ ಪ್ರಾರಂಭದಿಂದಲೂ ಜೈನ ಶಾಸನಗಳು ಇಲ್ಲಿ ಸಿಕ್ಕಿವೆ. ಅಣ್ಣಿಗೆಱೆಯು ಬೆಳ್ವೊಲ - ೩೦೦ಕ್ಕೆ ರಾಜಧಾನಿಯಾದರೆ, ಹತ್ತಿರದ ಪುಲಿಗೆಱೆಯು ಪುಲಿಗೆಱು - ೩೦೦ಕ್ಕೆ ನೆಲೆವೀಡು. ಆನೆ ಸೆಜ್ಜೆಯ ಬಸದಿ, ಗಂಗ ಕಂದರ್ಪ ಜಿನಾಲಯ, ಗೊಗ್ಗಿಯ ಬಸದಿ, ಚತುರ್ಮುಖ ಚೈತ್ಯಾಲಯ, ಜಿನ್ನೋಜನ ಬಸದಿ, ಧವಳ ಜಿನಾಲಯ, ಪಂಚಬಸ್ತಿ, ಮಲ್ಲಿಸೆಟ್ಟಿಯ ಬಸದಿ, ಗಾವುಣ್ಡನವಸದಿ, ಪೆರ್ಮಾಡಿಯ ಬಸದಿ - ಮೊದಲಾದ ಬಸದಿಗಳ ಬೀಡಾಗಿತ್ತು ಪುಲಿಗೆಱೆನಾಡು. ಕ್ರಿ.ಶ. ಹನ್ನೊಂದನೆಯ ಶತಮಾನದಲ್ಲಿಯೇ ಚಾಳುಕ್ಯ ಚಕ್ರವರ್ತಿ ಭುವನೈಕಮಲ್ಲ ಸೋಮೇಶ್ವರನ (೧೦೬೮-೭೬) ಮಹಾಮಂಡಲೇಶ್ವರ ಲಕ್ಷ್ಮರಸನ ಹೆಸರಿನಿಂದಾಗಿ ಪುಲಿಗೆಱೆಯು ಲಕ್ಷ್ಮೇಶ್ವರವಾಯಿತು. ಪುಲಿಗೆಱೆ-ಬೆಳ್ವೊಲ ಆರುನೂರರ ಪ್ರದೇಶದ ನೂರಾರು ದೇವಾಲಯಗಳು ಪ್ರತೀಕಾರ ಪ್ರೇರಿತರಾಗಿ ಆಕ್ರಮಣ ಮಾಡಿದ ಚೋಳರ ಉಪಟಳ ಉಪಸರ್ಗದಿಂದ ಬೆಂದು ಕರಿಕಾದುವೆಂದು ಶಾಸನಗಳು ದಾಖಲಿಸಿದೆ. ಕಾಳಾಮುಖ ಶೈವರು ಅನಂತರ ಆಳಿದುಳಿದ ಜಿನಾಲಯಗಳನ್ನು ಧ್ವಂಸಮಾಡಿದರು. ಈ ಬಗೆಯ ಧಾಳಾಧೂಳಿಯಲ್ಲಿ ಪುಲಿಗೆಱೆಯ ಬಸದಿಗಳು ಕೆಲವು ನೆಲಸಮವಾದುವು.

ಆಪತ್ಕಾಲದ ರಕ್ಷೆಗಾಗಿ ದೈವಭಕ್ತರು ತಮ್ಮ ಆರಾಧ್ಯವಿಗ್ರಹಗಳನ್ನು ಉಳಿಸಿಕೊಳ್ಳಲು ನೆಲಮಾಳಿಗೆ ತೋಡಿ ವಿಗ್ರಹಗಳನ್ನು ಇರಿಸಿ, ಅದರ ಮೇಲೆ ಮರಳು ಮಣ್ಣು ತುಂಬಿ ಮುಚ್ಚಿಡುತ್ತಿದ್ದರು. ಲಕ್ಷ್ಮೇಶ್ವರದಲ್ಲಿ ಹಾಗೆ ಬಚ್ಚಿಟ್ಟಿದ ಎರಡು ಪ್ರಾಚೀನ ಜಿನ ಬಿಂಬಗಳನ್ನು ಈಚೆಗೆ ತೆಗೆಯಲಾಗಿದ್ದು ಅವನ್ನು ಪ್ರಾಚ್ಯವಸ್ತು ಇಲಾಖೆಯವರು ಗದಗ ಮ್ಯೂಸಿಯಮ್ಮಿಗೆ ತಂದಿರಿಸಿದ್ದಾರೆ. ಇಲ್ಲಿನ ಕ್ಯುರೇಟರರಾದ ಡಾ. ಸುಲೋಚನಾ ಕೆ. ಪೊತ್ನೀಸರು ಪತ್ರಿಕಾ ಹೇಳಿಕೆಯ ಮೂಲಕ ಸಾರ್ವಜನಿಕರ ಗಮನ ಸೆಳೆದು ಉಪಕರಿಸಿದ್ದಾರೆ.

ಈ ಎರಡು ಜಿನಬಿಂಬಗಳು ಶಿಲ್ಪದ ದೃಷ್ಟಿಯಿಂದ ಪ್ರಾಮುಖ್ಯ ಪಡೆದಿವೆ. ಇವುಗಳಲ್ಲಿ ಒಂದು ೧೦೩ ಸೆಂಟಿಮೀಟರು ಎತ್ತರ, ೬೨ ಸೆಂಮೀ ಅಗಲ ಇದೆ. ಸಿಂಹಪೀಠದ ಮೇಲೆ ಪರ್ಯಂಕಾಸನದಲ್ಲಿ ಕುಳಿತಿರುವ ಜಿನರು ಮಹಾವೀರರೆಂದು ಕೆಳಗಿರುವ ಸಿಂಹಲಾಂಛನದಿಂದ ತಿಳಿದುಬರುತ್ತದೆ. ಜಿನರ ಬೆನ್ನಿಗೆ ಒರಗುಲೋಡು (ದಿಂಬು) ಇದೆ. ತುಸು ಕೋಲುಮುಖ, ಉದ್ದನೆಯ ಕಿವಿಗಳು (ಮಹಾಪುರುಷ ಲಕ್ಷಣ), ಸ್ಮಿತವದನ, ಗುಂಗುರುಗೂದಲು ತುದಿಯಲ್ಲಿ ಉಬ್ಬಿರುವ ರೀತಿ, ಲಾಳಾಕಾರದ ಪ್ರಭಾವಳಿ, ಅದರ ಮೇಲೆ ಮುಕ್ಕೊಡೆ, ಮುಕ್ಕೊಡೆಯ ಹಿಂದೆ ಚೈತ್ಯವೃಕ್ಷದ ಸಂಕೇತ, ಎರಡು ಪಕ್ಕದಲ್ಲಿ ಅಲಂಕರಣಗೊಂಡ ಚಾಮರಧಾರಿಗಳು - ಇವು ಯಥಾಕ್ರಮದಲ್ಲಿವೆ. ಆದರೆ ಈ ಶಿಲ್ಪದ ಶೈಲಿ ಮಾತ್ರ ತುಂಬ ಪ್ರಾಚೀನವಾದುದು, ರಾಷ್ಟ್ರಕೂಟರ ಆರಂಭಕಾಲದ್ದು. ಮುಕ್ಕೊಡೆಯ ಶಿಲ್ಪವೂ, ಚೈತ್ಯಸಂಕೇತವೂ, ಜಿನರ ತಲೆಗೂದಲು ಉಬ್ಬು - ಇವು ಶಿಲ್ಪದ

ಹಳಮೆಯ ಪಳೆಯುಳಿಕೆಗಳು. ಕುಂಕುಮದೇವಿ ಮಾಡಿಸಿದ ಆನೆಸೆಜ್ಜೆ ಬಸದಿಯ ಮೂಲನಾಯಕ ಇದಾಗಿರಲೂಬಹುದೆಂಬ ಪರಿಭಾವನೆಗೆ ಅವಕಾಶವಿದೆ. ಒಂಬತ್ತನೆಯ ಶತಮಾನಕ್ಕೂ ಹಿಂದಿನದಾಗಿರ ಬಹುದಾದ ಈ ಜಿನಬಿಂಬದ ಪೀಠದ ಪಟ್ಟಿಯಲ್ಲಿ 'ಶ್ರೀ ಮೂಲಸಂಘ ದೇವಗಣ' ಎಂಬ ಒಕ್ಕಣೆಯಿದೆ; ಇದನ್ನು ನಿಶ್ಚವಾಗಿಯೂ ಹನ್ನೊಂದನೆಯ ಶತಮಾನದಲ್ಲಿ ಹೊಸದಾಗಿ ಸೇರಿಸಲಾಗಿದೆ. ಬೇರೆ ಸಮಾನ ಜಿನಮೂರ್ತಿಗಳಿಂದ ವಿಶಿಷ್ಟವೆಂದು ಗುರುತಿಸಲು ಹೀಗೆ ಮಾಡಿರಬಹುದು.

ಲಕ್ಷ್ಮೇಶ್ವರದಲ್ಲಿ ಹೊಸದಾಗಿ ಸಿಕ್ಕಿರುವ ಇನ್ನೊಂದು ಜಿನಬಿಂಬವು ಮೇಲಿನಷ್ಟು ಪ್ರಾಚೀನವಲ್ಲದಿದ್ದರೂ ಮೇಲಿನದಕ್ಕಿಂತ ಜಿನರ ಮುಖ ಮುಕ್ಕಾಗಿದೆ (ಚಿತ್ರ : ಹತ್ತು). ತೀರ್ಥಂಕರರ ದೇಹಭಾಗ, ಮುಖ ಮತ್ತು ಚಾಮರಧಾರಿಯರ ಮುಖಗಳು ತುಂಬ ಕಚ್ಚು ಬಿದ್ದು ವಿವರಗಳು ಸರಿಯಾಗಿ ಗುರುತು ಸಿಗದಂತಾಗಿದೆ. ಸಿಂಹಪೀಠದಲ್ಲಿ ಪದ್ಮಾಸನದಲ್ಲಿರುವ ಜಿನರು ಯಾರೆಂಬುದನ್ನು ಗುರುತಿಸಲು ಲಾಂಛನಾದಿ ಆಧಾರಗಳು ಕಾಣುವುದಿಲ್ಲ. ೧೦೦ ಸೆಂಮೀ ಎತ್ತರ ಹಾಗೂ ೭೨ ಸೆಂ.ಮೀ ಅಗಲ ಇರುವ ಈ ಜೈನ ವಿಗ್ರಹದ ಇತರ ಕೆಲವು ಲಕ್ಷಣಗಳು ಚೆನ್ನಾಗಿ ಕಾಣುತ್ತವೆ. ಜಿನರ ಹಿಂದಕ್ಕಿರುವ ಒರಗುದಿಂಬು, ಅದರ ಹಿಂಬದಿಯ ಆಸನ ಪಟ್ಟಿಕೆಯ ಕುಸುರಿಕೆಲಸದ ಕೆತ್ತನೆಯ ಸೊಗಸು, ಎಡಬಲಗಳ ತುದಿಗೆ ಮುಂಗಾಲು ಮೇಲೆತ್ತಿನಿಂತಿರುವ ಸಿಂಹದ ಮೈಮಾಟ, ಅದರ ಮೇಲೆ ಬಾಯಿ ಅಗಲಿಸಿದ ಮಕರ, ತೊಡೆಯಿಂದ ಮೇಲಕ್ಕೆ ತಲೆಯ ಕಿರೀಟದವರೆಗೆ ಕಂಡರಿಸಿದ ಬಹು ಅಲಂಕಾರ ಧರಿಸಿರುವ ಚಾಮರಧರರು, ಅರ್ಧ ಚಂದ್ರಾಕೃತಿಯ ಸರಳ ಪ್ರಭಾವಳಿಯ ಮೇಲಿರುವ ಅಲಂಕೃತ ಛತ್ರತ್ರಯ, ಮುಕ್ಕೊಡೆಯ ಕೆಳಗಡೆ ನಡುವೆ ಇಳಿಬಿದ್ದಿರುವ ತಾವರೆಯ ಮೊಗ್ಗಿನಾಕಾರ, ಮುಕ್ಕೊಡೆಯ ಪಕ್ಕಗಳಿಂದ ತೂಗಿ ಕೊನೆಯುವ ಚೈತ್ಯವೃಕ್ಷದ ಗೊಂಚಲು - ಇವಿಷ್ಟೂ ನಿಚ್ಚಳವಾಗಿವೆ. ಈ ಜಿನಬಿಂಬವು ಹನ್ನೊಂದನೆಯ ಶತಮಾನದ ಆರಂಭ ಕಾಲಕ್ಕೆ ಸೇರಿದ್ದಾಗಿದೆ.

ಮೇಲಿನ ಎರಡೂ ಜಿನಬಿಂಬಗಳನ್ನು ಕ್ರಿ.ಶ. ೧೦೪೬-೫೦ರ ಅವಧಿಯಲ್ಲಿ ಚೋಳರು ಮಾಡಿದ ಆಕ್ರಮಣ ಕಾಲದಲ್ಲಿ ಜಿನಾಲಯಗಳನ್ನು ಕೆಡವಿ, ಸುಟ್ಟು ಹಾಳು ಮಾಡತೊಡಗಿದಾಗ ಅವರ ಮುತ್ತಿಗೆಯಿಂದ ಕಾಪಾಡಲು ನೆಲದೊಳಗೆ ಅವಿತಿಡಲಾಗಿತ್ತೆಂದು ತೋರುತ್ತದೆ. ಲಕ್ಷ್ಮೇಶ್ವರದ ನೆಲದ ಮರೆಯ ಈ ಬಗೆಯ ನಿಧಿ ನಿದಾನನಿಕ್ಷಿಪ್ತವನ್ನು ಇನ್ನೂ ಹೊರಕ್ಕೆ ತೆಗೆಯಬೇಕಾಗಿದೆ.

ನ್ಯಾಮತಿ (ನೆಲ್ಲವತ್ತಿ)

ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲೂಕಿನಲ್ಲಿರುವ ನ್ಯಾಮತಿ ಪಟ್ಟಣವು ನೆಲ್ಲವತ್ತಿ ಎಂಬ ಹೆಸರಿನಿಂದ ೧೨೦೦ ವರ್ಷಗಳಿಂದ ಪ್ರಸಿದ್ಧಿ ಪಡೆದಿದೆ. ಭ್ರಾಜಿಷ್ಣು ಕವಿಯ (ಸು.೮೦೦) 'ವಡ್ಡಾರಾಧನೆ' ಕಥಾಸಂಕಲದಲ್ಲಿ (ಸಂಪಾದಕ : ಹಂಪ. ನಾಗರಾಜಯ್ಯ : ೧೯೯೩) ಈ ಊರಿನ ಅಡಕೆ ಶ್ರೇಷ್ಠವೆಂದು ಹೇಳಲಾಗಿದೆ. ಮಂಡಲಿಸಾಸಿರ ಗಂಗರ ಮಹಾಮಂಡಲೇಶ್ವರನಾದ ತ್ರಿಭುವನಮಲ್ಲ ನನ್ನಿಯಗಂಗ ಪೆರ್ಮ್ಮಾಡಿದೇವ - ೧ (೧೦೭೦-೮೬) ಆಳುತ್ತಿರುವಾಗ ಆತನ ಮಹಾಮಂತ್ರಿ ಪೆರ್ಗ್ಗಡೆ ನೊಕ್ಕಯ್ಯನು ತನ್ನ ಮಗನ ಪರೋಕ್ಷ ವಿನಯಾರ್ಥವಾಗಿ ನೆಲ್ಲವತ್ತಿ (ನ್ಯಾಮತಿ)ಯಲ್ಲಿ ಭವ್ಯವಾದ ಬಸದಿಯನ್ನು ಕಟ್ಟಿಸಿದನು. (EC/ Vol.VII-I (BLR) Simoga.

10. C.E. 1085; pp. 19-21; Nagarajaiah, Hampa: *The Later Gangas-Mandali Thousand :* 1999: 55-57). ಗಂಗಮಂಡಲೇಶ್ವರ ನನ್ನಿಯ ಗಂಗ ಪೆರ್ಮ್ಮಾಡಿದೇವನೂ ಪೆರ್ಗಡೆ ನೊಕ್ಕಯ್ಯನೂ ಕಲ್ಯಾಣ ಚಾಳುಕ್ಯರ ಚಕ್ರವರ್ತಿ ತ್ರಿಭುವನಮಲ್ಲ ವಿಕ್ರಮಾದಿತ್ಯ - ಆಳುತ್ತಿದ್ದಾಗ ಆತನ ಅಧೀನದಲ್ಲಿ ಆಡಳಿತ ನಡೆಸಿ ಜೈನಧರ್ಮದ ಪ್ರಭಾವನೆಗೆ ಕಾರಣರಾದವರು. ನೊಕ್ಕಯ್ಯನು ಋತುವಿಮಾನದಂತೆ ಕಂಗೊಳಿಸುವ ರೀತಿಯಲ್ಲಿ ನೆಲ್ಲವತ್ತಿ (ನ್ಯಾಮತಿ) ಊರೊಳಗೆ ಮಾಡಿಸಿದ ಬಸದಿಯು ಕಾಲಾಂತರದಲ್ಲಿ ಮತಾಂತರಗೊಂಡು ವೀರಶೈವರ ಮಡಿಲು ಸೇರಿ ಈಗ ಕಲ್ಮಠ ಎಂಬ ಹೆಸರಿನಿಂದ ಪೂಜೆಗೊಳ್ಳುತ್ತಿದೆ. ಜೈನಲಾಂಛನಗಳು ಸ್ಪಷ್ಟವಾಗಿ ಉಳಿದುಬಂದಿದ್ದರೂ ತ್ರಿಕೂಟ ಬಸದಿಯ ಮೂರು ಗರ್ಭಗುಡಿಗಳಲ್ಲಿ ಯಾವುದರಲ್ಲೂ ಜಿನಬಿಂಬಗಳಿಲ್ಲ, ಬದಲಾಗಿ ಶಿವಲಿಂಗಗಳನ್ನು ಇರಿಸಲಾಗಿದೆ.

ಕಳೆದವರ್ಷ ಹೊನ್ನಾಳಿ, ಭದ್ರಾವತಿ, ಶಿವಮೊಗ್ಗ, ಚನ್ನಗಿರಿ ತಾಲ್ಲೂಕುಗಳಲ್ಲಿ ಕೈಗೊಂಡ ದೀರ್ಘ ಹಾಗೂ ವ್ಯಾಪಕ ಕ್ಷೇತ್ರಕಾರ್ಯದ ವೇಳೆ ನ್ಯಾಮತಿಯ ಕಲ್ಮಠವನ್ನು ಸಂದರ್ಶಿಸಿದೆ. ಆಗ ಕಲ್ಮಠದೊಳಗಿರುವ ಎಡಗಡೆ ಆಲಯದ ದ್ವಾರ ಸಂಭಗಳ ಮೇಲೆ ಇರುವ ಶಾಸನವು ಹೊಸದು ಹಾಗೂ ಅಪ್ರಕಟಿತವೆಂದು ಗುರುತಿಸಿದೆ. ಈ ಶಾಸನ ಪಾಠದಲ್ಲಿನ ವಿಶೇಷವೆಂದರೆ ಗದ್ಯವನ್ನು ಬಳಸದಿರುವುದು. ಬಾಗಿಲುವಾಡದ ಕೆಳಗಡೆ ಎಡಗಡೆ - ಬಲಗಡೆ ಈ ಶಾಸನವಿದೆ. ಒಂದು ಕಡೆಯಲ್ಲಿ ಇಪ್ಪತ್ತು (೨) ಸಾಲುಗಳೂ, ಇನ್ನೊಂದು ಕಡೆ ಹದಿನಾಲ್ಕು (೧೪) ಸಾಲುಗಳೂ ಇವೆ ಸರಾಸರಿ ಸಾಲಿಗೆ ನಾಲ್ಕರಿಂದ ಎಂಟರವರೆಗೆ ಅಕ್ಷರಗಳಿವೆ, ಒಟ್ಟು ೩೪ ಪುಟ್ಟ ಪಂಕ್ತಿಗಳಿವೆ. ಇದು ಅತೇದಿ ಶಾಸನ, ಶಾಸನದಲ್ಲಿ ತೇದಿ ನಮೂದಾಗಿಲ್ಲ, ಲಿಪಿ ಸ್ವರೂಪದ ಆಧಾರದಿಂದ ಇದು ಹನ್ನೆರಡನೆಯ ಶತಮಾನದ ಆರಂಭಕಾಲಕ್ಕೆ ಸೇರಿದ್ದೆಂದು ಹೇಳಬಹುದಾಗಿದೆ. ಇದುವರೆಗೂ ಅಪ್ರಕಟಿತವಾಗಿರುವ ಈ ಜೈನ ಶಾಸನದ ಪಾಠವನ್ನು ಇದೇ ಮೊದಲ ಸಲ ಇಲ್ಲಿ ಕೊಡುತ್ತಿದ್ದೇನೆ.

(ನ್ಯಾಮತಿ ಕಲ್ಮಠದ ಎಡಗಡೆ ಆಲಯದ ದ್ವಾರಸ್ತಂಭಗಳ ಮೇಲೆ)

೧. **ಎಡಗಡೆ**

೧ ಪತಿಹಿತೆ ಸೀತೆಯಂ

೨ ತೆ ಜಿನಪಾ(ದಾ)ರ್ಚ್ಚಕಿ ದೇವಕಿ

೩ ಯಂತೆ ಭರ್ತ್ರು ಸಂ

೪ ಯುತೆ ಗಿರಿಜಾತೆಯಂ

೫ ತೆ ವಿಭವೋಂನತೆ ಸ್ವಸ್ಥಿ

೬ ರ ಲಕ್ಷ್ಮಿಯಂತೆ ಸು

೭ ಬ್ರತೆ ನೆಗಳ್ದತ್ತಿಮ

೮ ಬ್ಬರಸಿಯಂತೆ ಕಳಾಂ

೯ ನ್ವಿತೆ ವಾಣಿಯಂತೆ

೧೦ ತಾನತಿಸಯಸಿರ್ದ್ದಳೀಚರ

೧೧ ಸನಂಗನೆ ಸೋವಲದೇ

೧೨ ವಿ ಧಾತ್ರಿಯೊಳು
೧೩ ನಗೆನಗೆ ಮೊಗವಂ
೧೪ ಬುಜಮುಂ ಮ್ರಿಗಮ್ರಿ
೧೫ ಗವೀಕ್ಷಣಮನೀಕ್ಷ
೧೬ ಣಂ ಮ್ರಿಗಧರನಂ
೧೭ ತೆಗಳೆ ಮುಖಕಾಂ
೧೮ ತಿಚೆಲ್ವಂ ತ್ರಿಗುಣಿಸಿ
೧೯ ದುದು ನಿನ್ನ ರೂಪು
೨೦ ಸೋವಲದೇವಿ

೨. ಬಲಗಡೆ

೧ ಊರೂರು ದಪ್ಪದೆ
೨ ಬಸದಿಯನೋರಂತಿ
೩ ರೆ ಮಾಡಿ ಬೆಳಗವತ್ತಿ
೪ ಯನಾಡಂ ಧಾರ್‍ರಿಣೆ
೫ (ಎ)ನೆಗಳ್ದ ಕೊಪಣಕ್ಕೋ
೬ (ರ) ಗೆ ಮಾಡಿದನುದಾ
೭ (ರ) ನಿಧಿ ಈಚರಸನು
೮ (ಈ) ಚರಸನ ದಾನಗು
೯ (ಣ) ಕೆ ಈಚರಸನ ದಾ
೧೦ ನಗುಣಮೆ ಪಾಸಟಿ
೧೧ ಪೆಱತಂನಿಚ್ಚಕೆನೆ ವೆಸ
೧೨ ವಾಜ್ಞಾನಂ ಈಚರಸಂ ಪ
೧೩ ರಮಜೈನ ಸಮೆಯಾ
೧೪ ಧಾರನು॥

(ಈ ಶಾಸನ ಪಡಿಯಚ್ಚನ್ನು ಸಿದ್ಧಪಡಿಸುವುದಕ್ಕೆ ನೆರವಾದ ಡಾ. ಎಚ್. ಎಂ. ನಾಗರಾಜರಾವ್ ಅವರ ಸಹಾಯವನ್ನು ಕೃತಜ್ಞತಾಪೂರ್ವಕ ಸ್ಮರಿಸುತ್ತೇನೆ).

ಈ ಶಾಸನದಲ್ಲಿ ಒಂದು ಚಂಪಕಮಾಲೆ ವೃತ್ತವೂ ಮೂರು ಕಂದ ಪದ್ಯಗಳೂ ಬಳಕೆಯಾಗಿವೆ. ಶಾಸನವು ಈಚರಸ ಮತ್ತು ಸೋವಲದೇವಿ ಎಂಬ ದಂಪತಿಗಳ ಧಾರ್ಮಿಕ ಪ್ರವೃತ್ತಿ ಮತ್ತು ಅವರ ಜಿನಧರ್ಮ ನಿಷ್ಠೆಯನ್ನು ದಾಖಲಿಸಿದೆ.

ವೃತ್ತ ಪದ್ಯದ ಸಾರಾಂಶ : ಏಚರಸನ ಹೆಂಡತಿ ಸೋವಲದೇವಿ. ಈಕೆ ಸೀತೆಯ ಹಾಗೆ ಪತಿಹಿತೆ, ದೇವಕಿಯ ಹಾಗೆ ಜನರ ಕಾಲುಗಳನ್ನು ಪೂಜಿಸುವವಳು. ಪಾರ್ವತಿಯ ಹಾಗೆ ಪತಿಯ

ಜತೆಯಲ್ಲೇ (ಅರ್ಧನಾರೀಶ್ವರ ರೀತಿಯಲ್ಲಿ) ಇರುವವಳು, ಲಕ್ಷ್ಮಿಯ ಆಗ ವೈಭವಶಾಲಿನಿ, ಹೆಸರಾಂತ ಅತ್ತಿಮಬ್ಬೆಯ ಹಾಗೆ ಒಳ್ಳೆಯ ವ್ರತಗಳನ್ನು ಪಾಲಿಸಿದವಳು, ಸರಸ್ವತಿಯ ಹಾಗೆ (ಚತುಷಷ್ಟಿ) ಕಲೆಗಳಿಂದ ಕೂಡಿದವಳು - ಎಂದು ಲೋಕದಲ್ಲಿ ಕೀರ್ತಿವಂತಳು.

ಕಂದ ಪದ್ಯ ೧: ಸೋವಲದೇವಿಯ ರೂಪವು ಅಪರೂಪವಾದದ್ದು. ಈಕೆಯ ನಗೆಯು ನಗುವನ್ನೂ, ಮುಖವು ತಾವರೆಯನ್ನೂ, ಕಣ್ಣಿನ ನೋಟವು ಹರಿಣವನ್ನೂ ಮುಖದ ಬೆಳಕು ಚಂದ್ರನನ್ನೂ ತಿರಸ್ಕರಿಸಲು ಸೋವಲದೇವಿಯ ಚೆಲವು ಮೂರುಪಟ್ಟು ಹೆಚ್ಚಾಯಿತು.

ಕಂದ ಪದ್ಯ ೨ : ಉದಾರತೆಗೆ ಆಧಾರವಾಗಿರುವ ಈಚರಸನು, ಯಾವ ಊರನ್ನೂ ಬಿಡದೆ, ಒಂದೇ ಸಮನೆ ಬಸದಿಗಳನ್ನು ಮಾಡಿಸಿದನು. ಇದರಿಂದ ಬೆಳಗವತ್ತಿಯ ನಾಡು ಭೂಮಿಯಲ್ಲಿ ಹೆಸರಾಂತ ಕೊಪಣಕ್ಕೆ ಹೊಂದಿಕೊಳ್ಳುವಂತೆ ಮಾಡಿದನು.

ಕಂದ ಪದ್ಯ ೩ : ಈಚರಸನ ದಾನಗುಣಕ್ಕೆ ಈಚರಸನ ದಾನಗುಣವೇ ಸಮಾನ. ಇಂತಹ ಈಚರಸನು ಶ್ರೇಷ್ಠ ಜೈನಧರ್ಮಕ್ಕೆ ಆಧಾರ ಸ್ವರೂಪನಾಗಿದ್ದನು.

ಈ ಈಚರಸನು ಯಾರು, ಯಾವ (ರಾಜ) ವಂಶಕ್ಕೆ ಸೇರಿದವನು, ಯಾವ ಕಾಲದವನು ಎಂಬ ವಿವರಗಳು ಪ್ರಸ್ತುತ ಶಾಸನದಲ್ಲಿ ಹೇಳಿಲ್ಲ. ತಿಳಿದುಬರುವ ಚಾರಿತ್ರಿಕ ಅಂಶಗಳಿಷ್ಟು :

೧. ಸೋವಲದೇವಿಯನ್ನು ದಾನಚಿಂತಾಮಣಿ ಅತ್ತಿಮಬ್ಬೆಗೆ ಹೋಲಿಸಿರುವುದು. ಇದುವರೆಗೆ ಸುಮಾರು ೩೮ ಶಾಸನಗಳಲ್ಲಿ ಅತ್ತಿಮಬ್ಬೆಯ ಪ್ರಸ್ತಾಪವನ್ನು ಗುರುತಿಸಲಾಗಿತ್ತು. Kamala Hampana : *Attimabbe and Chalukyas* : 1995; 51-52; ನಾಗರಾಜಯ್ಯ. ಹಂಪ : ಕವಿವರ ಕಾಮಧೇನು : ೧೯೯೬ : ೬೧-೭೩). ಈ ಹೊಸ ಶಾಸನದಿಂದ ಮತ್ತೊಂದು ಉಲ್ಲೇಖ ದೊರೆತಂತಾಗಿದೆ.

೨. ಈ ಜಿನಭಕ್ತ ದಂಪತಿಗಳು ಬೆಳಗವತ್ತಿ ನಾಡಿಗೆ ಸೇರಿದವರು.

೩. ಈಚರಸನು ಬೆಳಗವತ್ತಿ ನಾಡಿನ ಅನೇಕ ಊರುಗಳಲ್ಲಿ ಬಸದಿಗಳನ್ನು ನಿರ್ಮಿಸಿದ್ದನು.

೪. ಅಪಾರ ಬಸದಿಗಳಿಂದ ತನ್ನ ಬೆಳಗವತ್ತಿ ನಾಡನ್ನು, ಪ್ರಸಿದ್ಧ ಜೈನಕೇಂದ್ರವಾದ ಕೊಪಣಕ್ಕೆ ಓರಿಗೆಯಾಗುವಂತೆ ಮಾಡಿದನು. ಕೊಪಣವೆಂದರೆ ಈಗಿನ ಹೊಸಜಿಲ್ಲಾ ಕೇಂದ್ರವಾದ ಕೊಪ್ಪಳ. ಇದು ಒಂದೂವರೆ ಸಾವಿರ ವರ್ಷಗಳಿಂದ ಜೈನರ ಆದಿತೀರ್ಥ, ಮಹಾತೀರ್ಥ, ಕೊಪಣತೀರ್ಥ ಎಂದು ಪ್ರಸಿದ್ಧವಾಗಿದೆ. [EC. II (R) . SB 476 (345) C.E. 1159, p. 289; ibid, S.B. 532 (384) C. 12th cent. p. 328; EC. VII-i (BLR) Sh 64. C.E. 1112; EC.IX (R) BL. No. 389 C.E. 1133. p. 355 etc., Nagarajaiah, Hampa : *Jaina Corpus of Koppala Inscriptions* - X - Rayed : 1999 : 11-12]

ಬೆಳಗುತ್ತಿಯು ಹೊನ್ನಾಳಿ ತಾಲೂಕನ್ನು ಒಳಗೊಂಡ ಸಿಂದವಾಡಿ ರಾಜ್ಯದ ನೆಲವೀಡು.

ಈಚರಸನು ಬೆಳಗವತ್ತಿ ನಾಡಿನ ಪ್ರಾಚೀನ ಅಧಿಕಾರಿ. ಬೆಳಗುತ್ತಿಯು ಈಗಿನ ಹೊನ್ನಾಳಿ ತಾಲೂಕಿನಲ್ಲಿ, ನ್ಯಾಮತಿಗೆ ೧೫ ಕಿ.ಮೀ. ದೂರದಲ್ಲಿರುವ, ಒಂದು ಗ್ರಾಮವಾದರೂ ಹಿಂದೆ ಅದು ರಾಜಧಾನಿಯಾಗಿತ್ತು. ಹೊಯ್ಸಳ ವೀರಬಲ್ಲಾಳನ ಕಾಲದಿಂದ ಬೆಳಗವತ್ತಿ (ಬೆಳಗುತ್ತಿ, ಬೆಲಗಾವರ್ತಿ) ನಾಡಿನ ಪ್ರಸ್ತಾಪವಿದೆ. ವೀರಬಲ್ಲಾಳನು ಕ್ರಿ.ಶ. ೧೧೭೫ರಲ್ಲಿ ಬೆಳಗುತ್ತಿ ನಾಡಿಗೆ ದಂಡನಾಯಕ ತೋಡಪಿಳ್ಳೆಯನ್ನು ಸಾಮಂತನನ್ನಾಗಿ ನೇಮಿಸಿದನು. ಮಲ್ಲಿದೇವರಸ (೧೧೯೬), ಈಶ್ವರ ದೇವರಸ (೧೨೧೬), ಸಿಂಹಳದೇವರಸ (೧೨೩೨), ಬೀರದೇವರಸ (೧೨೪೯) - ಮೊದಲಾದವರು ಬೆಳಗುತ್ತಿ ನಾಡನ್ನು ಆಳಿದರು. ೧೪ನೆಯ ಶತಮಾನದಿಂದ, ವಿಜಯನಗರ ಕಾಲದಲ್ಲಿ, ಒಂದು ಪಾಳೆಯಪಟ್ಟು ಇಲ್ಲಿನ ಒಡೆತನ ಪಡೆಯಿತು.

ಈಗ ನಾನು ಶೋಧಿಸಿರುವ ಹೊಸ ಶಾಸನದಿಂದ ಹೊರಪಡುವ ಚರಿತ್ರಾರ್ಹ ಸಂಗತಿಗಳು; ಬೆಳಗವತ್ತಿಯ ಚರಿತ್ರೆಗೆ ದೊರೆತ ಹೊಸ ಆಯಾಮವಾಗಿದೆ. ಇದುವರೆಗೆ ತಿಳಿಯದಿದ್ದ ಒಬ್ಬ ರಾಜ ಮತ್ತು ರಾಣಿಯ ಹೆಸರುಗಳು, ಸಾಧನೆಗಳು, ಧಾರ್ಮಿಕ ವಿಚಾರ ಬಯಲಾಗಿದೆ. ಹೊಯ್ಸಳ ಇಮ್ಮಡಿ ವೀರಬಲ್ಲಾಳನ ಕಾಲದಲ್ಲಿ ಈ ಬೆಳಗುತ್ತಿ ಅಥವಾ ಸಿಂದವಾಡಿ ನಾಡಿಗೆ ದಂಡನಾಯಕ ತೋಡಪಿಳ್ಳೆಯನ್ನು ರಾಜ್ಯಪಾಲನನ್ನಾಗಿ ಕ್ರಿ.ಶ. ೧೧೭೫ರಲ್ಲಿ ನೇಮಿಸಿದನೆಂಬುದೇ ಪ್ರಾಚೀನ ಉಲ್ಲೇಖವಾಗಿತ್ತು. ಆದರೆ ಈ ಶಾಸನದ ಉಪಲಬ್ದಿಯಿಂದ ತೋಡಪಿಳ್ಳೆಗಿಂತಲೂ ಮೊದಲು ಸಿಂದವಾಡಿಯ ನೆಲೆವೀಡು ಆಗಿದ್ದ ಬೆಳಗವತ್ತಿಯಿಂದ ಆಳುತ್ತಿದ್ದವನು ಈಚರಸನೆಂದು ತಿಳಿದು ಬರುತ್ತದೆ. ಈಚರಸನೂ ಈತನ ಮಡದಿ ಸೋವಲದೇವಿಯೂ ಜೈನ ಧರ್ಮದವರೆಂದೂ ನ್ಯಾಮತಿ (ನೆಲವತ್ತಿ) ಯಲ್ಲಿದ್ದ ತ್ರಿಕೂಟ ಜಿನಾಲಯದ ಒಂದು ಭಾಗವನ್ನು ವಿಸ್ತರಿಸಿ ಕಟ್ಟಿಸಿದರೆಂದೂ ಗೊತ್ತಾಗುತ್ತದೆ.

ಈ ಬಸದಿಯು ಮೂಲಭೂತವಾಗಿ ಗಂಗಮಂಡಲಿ ಸಹಸ್ರ ಸೀಮೆಯನ್ನಾಳಿದ ಭುಜಬಲಿಗಂಗ ಪೆರ್ಮ್ಮಾಡಿ ಮತ್ತು ತ್ರಿಭುವನಮಲ್ಲ ಗಂಗ ಪೆರ್ಮ್ಮಾಡಿ ಮಾಂಡಲಿಕರ ಮಹಾಪ್ರಧಾನ ಪೆರ್ಗ್ಗಡೆನೊಕ್ಕಯ್ಯನು ತನ್ನ ಮಗನ ನೆನಪಿಗೆ ಕಟ್ಟಿಸಿದ ಬಸದಿಯಿರಬೇಕು. ನೊಕ್ಕಯ್ಯನು ಕಟ್ಟಿಸಿದ ಬಸದಿಯು ಇದಾಗಿರದೆ ಪ್ರತ್ಯೇಕವೇ ಆಗಿದ್ದು, ಅದಕ್ಕೂ ಈ ಈಚರಸ - ಸೋವಲದೇವಿ ಮಾಡಿಸಿದ ಬಸದಿಗೂ ಸಂಬಂಧ ಕಲ್ಪಿಸುವುದು ಅಸಮಂಜಸವಲ್ಲವೆ ಎಂಬ ಸಂಶಯಕ್ಕೂ ಅವಕಾಶವಿದೆ. ಆದರೆ ಇಡೀ ದೊಡ್ಡ ಬಸದಿಯ ನಿರ್ಮಾಣ ಈಚರಸ ದಂಪತಿಗಳಿಂದ ಆಗಿದ್ದಲ್ಲಿ ಈ ಶಾಸನ ಇಷ್ಟು ಅಪ್ರಧಾನವಾಗಿ ಬಾಗಿಲ್ವಾಡದ ಕೆಳಭಾಗಕ್ಕೆ ಸೇರುತ್ತಿರಲಿಲ್ಲ. ಅದು ಒಂದು ಪಕ್ಕಾ ಸವಿವರಯುಕ್ತ ವಿಧ್ಯುಕ್ತ ಶಾಸನವಾಗಿ ರಾರಾಜಿಸುತ್ತಿತ್ತು. ಅಲ್ಲದೆ ಹಾಲಿ ಬಸದಿಯ ಈ ವಿಸ್ತರಿಸಿದ ಬಲಗಡೆ ಭಾಗಕ್ಕೂ ಉಳಿದ ಭಾಗಕ್ಕೂ ಹೋಲಿಸಿದರೆ ವಾಸ್ತುವಿನಲ್ಲಿ ವ್ಯತ್ಯಾಸ ಕಾಣುತ್ತದೆ. ಹೀಗಾಗಿ ಈ ವಿಚಾರದಲ್ಲಿ ಇನ್ನಷ್ಟು ಸಂಶೋಧನೆಗೆ ಇನ್ನೂ ಅವಕಾಶವಿದೆ.

ಸಿಂದವಾಡಿಯು ಮಂಡಲಿಗಂಗರ ಆಳ್ವಿಕೆಗೆ ಒಳಪಟ್ಟಿತ್ತೆ ಮತ್ತು ಈಚರಸನು ಮಂಡಲಿನಾಡಿನ ಸಾಮಂತನಾಗಿದ್ದನೆ ಎಂಬುದು ವಿಚಾರಣಯೋಗ್ಯ ಸಂಗತಿ. ಬಹುಮಟ್ಟಿಗೆ ಇದು ಮಂಡಲಿಸಾಸಿರದ ಆಡಳಿತ ವಿಭಾಗದಲ್ಲಿ ಸೇರಿತ್ತೆಂದು ಹೇಳಲು ಆಂತರಿಕ ಆಧಾರಗಳಿರುವಂತೆ ತೋರುತ್ತದೆ. ಆ ಚರ್ಚೆಯನ್ನು ನನ್ನ ಆಂಗ್ಲಪುಸ್ತಕದಲ್ಲಿ ಮಾಡಿದ್ದೇನೆ; ಆ ವಿವರಗಳು ಇಲ್ಲಿಗೆ ಅಗತ್ಯವಿಲ್ಲ. (Nagarajaiah, Hampa : *The Later Gangas - Mandali Thousand* : 1996 : 72.)

ತಿದ್ದುಪಡಿ ಮತ್ತು ಹೆಚ್ಚಿನ ಮಾಹಿತಿ

ಮೇಲ್ಕಂಡ ಬರೆಹ ಅರವಂಟಿಗೆ (೧-೧-೨೦೦೦) ಪತ್ರಿಕೆಯಲ್ಲಿ ಅಚ್ಚಾದ ಮೇಲೆ ಮತ್ತಷ್ಟು ಹೆಚ್ಚಿನ ಮಾಹಿತಿ ನನ್ನ ಮುಂದುವರಿದ ಶಾಸನ ವ್ಯಾಸಂಗದಿಂದ ದೊರೆಯಿತು ಹಾಗೂ ಮೊದಲಿನ ಈ ವಿವರಣೆಯಲ್ಲಿ ನುಸುಳಿರುವ ಪ್ರಮಾದವೂ ತಿಳಿಯಿತು.

ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲೂಕು ಹೊಸೂರು ಹೋಬಳಿ ಗೊಗ್ಗ ಗ್ರಾಮದಲ್ಲಿಯೂ ಏಚಣ-ಸೋಮಲದೇವಿದಂಪತಿಗಳು ಕ್ರಿ.ಶ. ೧೨೦೫ರಲ್ಲಿ ಜಿನಾಲಯವನ್ನು ನಿರ್ಮಿಸಿ ಅದರ ನಿರ್ವಹಣೆಗೆ ಹಲವು ದತ್ತಿಗಳನ್ನಿತ್ತು ಬಸದಿಯನ್ನು ಚಂದ್ರಪ್ರಭಾಚಾರ್ಯರಿಗೆ ವಹಿಸಿದರು. ಬೆಳಗವತ್ತಿಯ ಮಹಾಮಂಡಲೇಶ್ವರ ಮಲ್ಲಿದೇವರಸನಲ್ಲಿ ಏಚಣ (ಏಚರಸ) ನು ಸಂಧಿವಿಗ್ರಹಿ ಸಚಿವನಾಗಿದ್ದನು. ಈಚರಸನು ಸೋಮಲದೇವಿಯ ಒಡಹುಟ್ಟಿದ ತಮ್ಮನಾಗಿದ್ದನು. ಈಚರಸನು ಕ್ರಿ.ಶ. ೧೨೦೭ರಲ್ಲಿ ನಿಧನನಾದನು. ತನ್ನ ತಮ್ಮ ಈಚರಸನ ನೆನಪಿಗೆ ಅಕ್ಕಳಾದ ಸೋಮಲದೇವಿಯು ಕ್ರಿ.ಶ. ೧೨೦೭ರಲ್ಲಿ ಅದೇ ಗೊಗ್ಗ ಗ್ರಾಮದಲ್ಲಿ ಇನ್ನೊಂದು ಬಸದಿಯನ್ನು ಕಟ್ಟಿಸಿದಳು. ಹೀಗೆ ಪರೋಕ್ಷ ವಿನಯಾರ್ಥವಾಗಿ ಶಾಂತಿನಾಥ ಜಿನಾಲಯವನ್ನು ಮಾಡಿಸಿದ್ದಲ್ಲದೆ ಅಲ್ಲಿ ಅಷ್ಟ ವಿಧಾರ್ಚನೆಗೂ ಜೀರ್ಣೋದ್ಧಾರಕ್ಕೂ ಭೂಮಿದಾನ ಮಾಡಿದಳು. ಅಲ್ಲದೆ ಅದೇ ವರ್ಷ (೧೨೦೭) ಬಸದಿಯ ಆಚಾರ್ಯರಾದ ವಾಸುಪೂಜ್ಯರ ಕಾಲು ತೊಳೆದು ಸೋಮಲದೇವಿಯು ದವಸಧಾನ್ಯ ನೀಡಿದಳು, ವಿರೂಪಯ್ಯನು ಭೂಮಿದಾನ ಮಾಡಿದನು. ಈ ದಾನಗಳನ್ನು ತನ್ನ ಕಣ್ಣಿನ ಬೆಳಕಿನಂತೆ ನಾಗಗೌಡನು ಕಾಪಾಡಬೇಕೆಂದು ಒಡಂಬಡಿಕೆ ಆಯಿತು.

ಹೀಗಾಗಿ ಗೊಗ್ಗ ಗ್ರಾಮದಲ್ಲಿ ಎರಡು ಬಸದಿಗಳಿದ್ದುವು. ಕಾಲಾಂತರದಲ್ಲಿ ಅವುಗಳಲ್ಲಿ ಒಂದು ಸಿದ್ಧೇಶ್ವರ ಗುಡಿಯಾಗಿ ಪರಿವರ್ತನೆಗೊಂಡರೆ ಇನ್ನೊಂದು ಸಂಪೂರ್ಣವಾಗಿ ನಾಶವಾಯಿತು. ನ್ಯಾಮತಿಯ ಶಾಸನದಲ್ಲಿರುವ ಮತ್ತು ಮೇಲೆ ಉದಾಹರಿಸಿದ ಈಚರಸನ ಶಾಸನದ ಪೂರ್ಣಪಾಠ, ಕೆಲವು ವ್ಯತ್ಯಾಸಗಳೊಂದಿಗೆ ಗೊಗ್ಗ ಗ್ರಾಮದ ಸಿದ್ಧೇಶ್ವರ ದೇವಸ್ಥಾನದಲ್ಲಿ ಮೂಡಣದೆಡೆಯಲ್ಲಿ ನಟ್ಟ ಕಲ್ಲಿನಮೇಲೆ ಕೆತ್ತಲಾಗಿದ್ದು ಅದೇ ಮೊದಲ ಪಾಠವಾಗಿದೆ ಮತ್ತು ನ್ಯಾಮತಿ ಅನಂತರದ್ದಾಗಿದೆ. ಈಚರಸನ ನೆನಪಿಗೆ ಅಕ್ಕ ಸೋಮಲದೇವಿ ಗೊಗ್ಗ ಗ್ರಾಮದಲ್ಲಿ ಪರೋಕ್ಷ ವಿನಯವೆಂದು ಶಾಂತಿನಾಥ ಬಸದಿಯನ್ನು ಕಟ್ಟಿಸಿದ್ದಾದ ಮೇಲೆ ನ್ಯಾಮತಿಯಲ್ಲಿಯೂ ಪೆರ್ಗ್ಗಡೆ ನೊಕ್ಕಯ್ಯನು ಕ್ರಿ.ಶ. ೧೦೮೫ರಲ್ಲಿ ಮಾಡಿಸಿದ್ದ ಬಸದಿಯ ಒಂದು ಭಾಗದಲ್ಲಿ ವಿಸ್ತರಿಸಿ ಪೂಜಾಗೃಹವನ್ನು ಪುನರ್ಭರಣಗೊಳಿಸಲಾಗಿದೆ. ಅದರ ಸಂಬಂಧ ಬಾಗಿಲುವಾಡದ ಕೆಳಗೆ ಎಡ-ಬಲಗಳಲ್ಲಿ ೩೪ ಪಂಕ್ತಿಗಳ ಶಾಸನವನ್ನು ಬರೆಸಲಾಗಿದೆ. ಈ ಕೆಲಸ ೧೨೦೭-೦೮ರಲ್ಲಿ ಆಗಿರುವ ನಿರ್ಮಾಣವೆಂದು ತಿಳಿಯಲು ಅಡ್ಡಿಯಿಲ್ಲ.

ಈಚರಸನು ಸೋಮಲದೇವಿಯ ತಮ್ಮನೆಂದೂ ಸೋಮಲದೇವಿಯು ಏಚರಸನ ಮಡದಿಯೆಂದೂ ಗೊಗ್ಗ ಗ್ರಾಮದ ಶಾಸನದಿಂದ ಈಗ ಖಚಿತವಾಗಿ ತಿಳಿದುಬರುತ್ತದೆ. ಈ ಸಮಕಾಲಿಕ ಗೊಗ್ಗದ ಶಾಸನ ಮಾಹಿತಿ ನನಗೆ ಮೇಲ್ಕಂಡ ಲೇಖನ ಬರೆದಾಗ ಲಭ್ಯವಾಗಿರಲಿಲ್ಲ. ಗೊಗ್ಗ ಗ್ರಾಮದ ಶಾಸನಗಳ ಈ ಮಾಹಿತಿಯನ್ನು ಅರಿಯದೆ ನಾನು ಈಚರಸ-ಸೋಮದೇವಿಯರು ಸತಿ-ಪತಿಯರೆಂದು ತಿಳಿದು ತಪ್ಪು ಮಾಡಿದ್ದೇನೆಂಬುದು ಈಗ ಮನವರಿಕೆಯಾಗಿದೆ. ನ್ಯಾಮತಿ

ಶಾಸನದಲ್ಲಿ ಇರುವುದು ಅಕ್ಕ ಸೋಮಲದೇವಿಯ ಹಾಗೂ ತಮ್ಮ ಈಚರಸನ ಮಾಹಿತಿಯೆಂದು ಈ ತಿದ್ದುಪಡಿಯನ್ನು ಓದುಗರು ದಯವಿಟ್ಟು ಗಮನಿಸಬೇಕಾಗಿ ಅರಿಕೆ.

ಬೆಳಗವತ್ತಿ (ಬೆಳಗುತ್ತಿ) ನಾಡಿನ ಮಹಾಮಾಂಡಲಿಕ ಮಲ್ಲಿದೇವರಸನು ೧೧೯೬ರ ವರೆಗೆ ಆಳಿದನೆಂದು ಇತಿಹಾಸದಲ್ಲಿ ಹೇಳಿದೆ. ಆದರೆ ಗೊಗ್ಗ ಗ್ರಾಮದ ಶಾಸನಗಳು ಬಿಟ್ಟುಕೊಡುವ ಸಾಮಗ್ರಿಯನ್ನು ನೋಡಿದರೆ ಆತನು ೧೨೦೭ರ ಅವಧಿಯಲ್ಲಿ ಕೂಡ ಮಹಾಮಂಡಲೇಶನಾಗಿದ್ದುದು ನಿಚ್ಚಳವಾಗುತ್ತದೆ. ಪ್ರಾಯಃ ೧೨೧೬ರಿಂದ ಆಳಿದ ಈಶ್ವರದೇವರಸನ ಆಳಿಕೆ ಆರಂಭವಾಗುವವರೆಗೂ, ಅಂದರೆ ೧೧೯೬ರಿಂದ ೧೨೧೬ರ ವರೆಗೂ ಮಲ್ಲಿದೇವರಸನು ಬೆಳಗವತ್ತಿ ನಾಡಿನ ಮಾಂಡಲಿಕನಾಗಿದ್ದಿರಬೇಕು. ಆ ಅವಧಿಯಲ್ಲಿ ಈ ಪ್ರದೇಶವೆಲ್ಲ ಹೊಯ್ಸಳರ ಅಧೀನದಲ್ಲಿತ್ತು ಮತ್ತು ಕಲ್ಯಾಣ ಚಾಲುಕ್ಯ ಸಾಮ್ರಾಜ್ಯ ಅಸ್ತಂಗತವಾಗಿತ್ತು. [ಎಕ. ೭-೧, ಶಿಕಾರಿಪುರ ೩೧೭, ಕ್ರಿ.ಶ. ೧೨೦೫ ಗೊಗ್ಗ; ಅದೇ, ಸಂಖ್ಯೆ ೩೨೦ ಮತ್ತು ೩೨೧, ಕ್ರಿ.ಶ. ೧೨೦೭ ಗೊಗ್ಗ, ಪುಟ ೩೫೭-೫೮]

೫. ಮುಳುಗುಂದ

ಮುಳುಗುಂದವು ಬೆಳ್ವೊಲ-೩೦೦ರಲ್ಲಿ ಅಳವಟ್ಟ ಮುಳ್ಗುಂದ-೧೨ರ ಒಂದು ಪುಟ್ಟ ಆಡಳಿತ ವಿಭಾಗದ ಮುಖ್ಯಕೇಂದ್ರ ಪಟ್ಟಣ. ಜೈನರಿಗೆ ಚಂದ್ರಿಕಾವಾಟ ಸೇನಗಣದ ಗುರುಪರಂಪರೆಯಲ್ಲಿ ಅಜಿತಸೇನ, ಕನಕಸೇನ, ನರೇಂದ್ರಸೇನ, ನಯಸೇನ ಮೊದಲಾದ ಮುನಿಗಳ ತಪೋಭೂಮಿ ಯಾಗಿತ್ತು. ಹಲವು ಕನ್ನಡ-ಸಂಸ್ಕೃತ ಕೃತಿಗಳ ಮಲ್ಲಿಷೇಣ (೧೦೫೦), ಧರ್ಮಾಮೃತ ಕಾವ್ಯದ ನಯಸೇನ (೧೧೧೨) ಇಲ್ಲಿನ ಪ್ರತಿಭೆಗಳು. ಇಲ್ಲಿನ ತೀರ್ಥದ ಬಸದಿ (EI. Vol. XVI. pp. 52-66, C.E. 1053) ಮತ್ತು ಜಿನಪಾರ್ಶ್ವನಾಥ ಚೈತ್ಯಾಲಯ (EI. Vol. XIII. No. 15 C.E. 902-03 pp. 190-94) ಪ್ರಸಿದ್ಧಿ ಪಡೆದಿವೆ. ಹತ್ತಾರು ಜೈನ ಶಾಸನಗಳು ದೊರೆತಿವೆ, ನಿಸಿದಿ ಶಾಸನಗಳೂ ಸಿಕ್ಕಿವೆ.

ನೂರಾರು ವರ್ಷಗಳಿಂದ ಅಜ್ಞಾತವಾಗಿದ್ದ ಕಮಠೋಪಸರ್ಗ ಪಾರ್ಶ್ವನಾಥರ ಶಿಲ್ಪ (ಮತ್ತು ಶಾಸನ)ವನ್ನು ಇತ್ತೀಚೆಗೆ ನನ್ನ ಕ್ಷೇತ್ರಕಾರ್ಯದ ಅವಧಿಯಲ್ಲಿ ಇಲ್ಲಿನ ಗುಡ್ಡದ ಮೇಲೆ ಬಲಗಡೆ ಇರುವ ಪ್ರಾಚೀನ ಬಸದಿಯಲ್ಲಿ ಪತ್ತೆ ಆಯಿತು. ಈ ಬಗ್ಗೆ ಈಗಾಗಲೇ ಪತ್ರಿಕೆಗಳಲ್ಲಿ ವಿವರ ಮತ್ತು ಚಿತ್ರ ಪ್ರಕಟವಾಗಿರುವುದರಿಂದಲೂ, ಈ ಶಿಲ್ಪದ ಸಮಗ್ರ ವಿಸ್ತಾರ ಚರ್ಚೆಯನ್ನು ನನ್ನ ಇಂಗ್ಲಿಷ್ ಪುಸ್ತಕದಲ್ಲಿ ಮಾಡಿರುವುದರಿಂದಲೂ (Nagarajaiah, Hampa : *Jina Pārśva Temples in Karnataka:* 1999) ಇಲ್ಲಿ ಸಂಕ್ಷೇಪಿಸಿ ಮಾಹಿತಿಯನ್ನು ಪ್ರಸ್ತಾಪಿಸುತ್ತೇನೆ.

ಇಲ್ಲಿನ ಜಿನಾಲಯದ ಗೋಡೆಯಲ್ಲಿ ಒಳಮುಖಿಯಾಗಿ ಸೇರಿಸಲಾಗಿದ್ದ ಪಾರ್ಶ್ವನಾಥ ಮೂರ್ತಿಯು, ಅಣ್ಣಪ್ಪ ನೆಲವಿಗಿಯವರ ಮೇಲಾಳಿಕೆಯಲ್ಲಿ ನಡೆಯುತ್ತಿರುವ ಖಣ್ಡಸ್ಫುಟಿತ ಜೀರ್ಣೋದ್ಧಾರ ಕಾರ್ಯದಿಂದಾಗಿ ಪತ್ತೆಯಾಗಿದೆ. ಇದು ಒಂದು ಕಡೆ ಮೂರ್ತಿಯ ಶಿಲ್ಪವೂ ಇನ್ನೊಂದು ಮುಖದಲ್ಲಿ (ಸಂಸ್ಕೃತ) ಶಾಸನವೂ ಇರುವ ಅಪರೂಪದ ಕಲ್ಲುಚಪ್ಪಡಿ. ಬೆಂಗಳೂರು ಜಿಲ್ಲೆ ಮಾಗಡಿ ತಾಲೂಕು ಶಂಕಿಘಟ್ಟ ಜಿನಾಲಯದ ವರ್ಧಮಾನ ಜಿನರ ಶಿಲ್ಪದ ಹಿಂಭಾಗದಲ್ಲಿ

ಶಾಸನವಿದೆ ; ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕು ಕರಡಿಕಲ್ ಗ್ರಾಮದ ವೀರಭದ್ರಗುಡಿಯ (ಹಿಂದೆ ಜೈನ ಬಸದಿಯ) ವೀರಭದ್ರಸ್ವಾಮಿ ವಿಗ್ರಹದ ಇನ್ನೊಂದು ಬದಿಯಲ್ಲಿ ಕಲಚುರಿಯರ ಕಾಲದ ಜೈನಶಾಸನವಿದೆ. ಇಂತಹ ಮೂರು ನಾಲ್ಕು ಅಪವಾದಗಳನ್ನು ಬಿಟ್ಟರೆ, ಒಂದೇ ಕಲ್ಲಿನ ಎರಡು ಬದಿಯಲ್ಲಿ ಮೂರ್ತಿಶಿಲ್ಪ ಮತ್ತು ಶಾಸನ ಇರುವುದು ಅಪರೂಪ. ಅಂತಹ ಪ್ರಾಚೀನ ದೃಷ್ಟಾಂತ ಮುಳ್ಗುಂದ ಬಸದಿಯಲ್ಲಿ ಈಗ ಸಿಕ್ಕಂತಾಗಿದೆ.

ಇದರಲ್ಲಿರುವ ಸಂಸ್ಕೃತ ಶಾಸನವು ಈ ಹಿಂದೆಯೇ ಅಚ್ಚಾಗಿದೆ. (EI.XIII. 15. 902-03 pp. 190-94). ಮುಳ್ಗುಂದದ ವರ್ತಕ ಚಂದ್ರಾರ್ಯನ ಮಗ ಚೀಕಾರ್ಯನು ಸುಮಾರು. ಕ್ರಿ.ಶ. ೮೫೦ರಲ್ಲಿ ಕಟ್ಟಿಸಿದ ಬಸದಿಗೆ, ಚೀಕಾರ್ಯನ ಮಗ ಅರಸಾರ್ಯನೂ ಇತರರೂ ಕ್ರಿ.ಶ. ೯೦೨-೦೩ರಲ್ಲಿ ದತ್ತಿಗಳನ್ನಿತ್ತುದು ಈ ಶಾಸನದ ವಸ್ತು. ಶಾಸನದ ಕಡೆಯ ಕೆಲವು ಸಾಲುಗಳೂ ಮೂರ್ತಿಯ ಕೆಳಭಾಗವೂ, ಕಲ್ಲಿನ ಒಂದು ತುಂಡು ಮುರಿದು, ಮುಕ್ಕಾಗಿದೆ. ಪಾರ್ಶ್ವ ಜಿನರ ಶಿಲ್ಪವು ಕೂಡ ಮುಖದ ಭಾಗ ಮುಕ್ಕಾಗಿದ್ದರೂ ಒಟ್ಟಂದದಿಂದ ಅದ್ಭುತವಾಗಿದೆ. ಎಲ್ಲೋರ, ಹೊಂಬುಜ ಮುಂತಾದ ಕಡೆಗಳಲ್ಲಿ ಇರುವ ಕಮಠನ ಉಪಸರ್ಗಸಹಿತ ಬಿಡಿಸಿರುವ ಈ ರಾಷ್ಟ್ರಕೂಟರ ಕಾಲದ ಶಿಲ್ಪದ ಅಪೂರ್ವತೆಯನ್ನು ತೌಲನಿಕ ವಿವೇಚನೆಯಿಂದ ಗುರುತಿಸಬೇಕು. ಮೂರ್ತಿಯ ಪ್ರಭಾವಳಿಯಲ್ಲಿ ಪಾರ್ಶ್ವಜಿನರ ತಪಸ್ಸಿನ ಏಕಾಗ್ರತೆಗೆ, ಪೂರ್ವಭವದ ಸೇಡಿನಿಂದ ಕಮಠನು ಕಲ್ಪಿಸಿದ ನಾನಾ ಉಪಸರ್ಗ ಅಟ್ಟುಳಿಯನ್ನು ಸೊಗಸಾಗಿ ಕೆತ್ತಲಾಗಿದೆ. ಉಳಿದ ಸದೃಶ ಶಿಲ್ಪಗಳಲ್ಲಿ ಉಪಸರ್ಗ ಸ್ವರೂಪವು ಪಾರ್ಶ್ವನಾಥ ಶಿಲ್ಪದ ಎಡಬಲಗಳಲ್ಲಿ ಸುತ್ತಲೂ ತೋರಿಸಿದ್ದರೆ, ಇಲ್ಲಿ ಜಿನರ ಎಡಭಾಗದಲ್ಲಿ ಮಾತ್ರ ತೋರಿಸಿದೆ. ಬಲಭಾಗದಲ್ಲಿ ಶಾಸನದೇವಿಯ ಅನುಗ್ರಹ ಮೈದೋರುವಿಕೆಯಿದೆ.

ಇನ್ನೂ ಸ್ವಾರಸ್ಯವೆಂದರೆ, ನನ್ನ ತೀರ ಇತ್ತೀಚಿಗಿನ ಮೂರನೆಯ ಬಾರಿ ಕೈಗೊಂಡ ಕ್ಷೇತ್ರಕಾರ್ಯದ ಅವಧಿಯಲ್ಲಿ, ಈ ಶಾಸನ - ಶಿಲ್ಪದ ಮುಕ್ಕಾಗಿರುವ ಕೆಳಗಿನ ತುಂಡನ್ನೂ ಅದೇ ಬಸದಿಯಲ್ಲಿ ಪತ್ತೆ ಮಾಡಲು ಸಾಧ್ಯವಾಗಿರುವುದು!

೬. ಕೊಪ್ಪಳ

ಕೊಪ್ಪಳದಲ್ಲಿ ನನಗೆ ದೊರೆತ ೬೮ ಅಪ್ರಕಟಿತ ಶಾಸನಗಳು ಇದುವರೆಗೆ ಅಲಭ್ಯವಾಗಿದ್ದ ಅನೇಕ ಹೊಸ ಸಂಗತಿಗಳನ್ನು ಒದಗಿಸಿರುವುದನ್ನು ಈಗಾಗಲೇ ಪ್ರಕಟವಾಗಿರುವ ಇಂಗ್ಲಿಷ್ ಮತ್ತು ಕನ್ನಡ ಪುಸ್ತಕಗಳಲ್ಲಿ ಸವಿವರವಾಗಿ ನಿರೂಪಿಸಿದ್ದೇನೆ. (Nagarajaiah, Hampa : *Jaina Corpus of Koppala Inscriptions* : X-Rayed : 1999, ಹಂಪನಾ; ಕೊಪ್ಪಳ ಶಾಸನಗಳು : ೧೯೯೮) ಕೊಪ್ಪಳವು ಆದಿತೀರ್ಥವೂ ಮಹಾತೀರ್ಥವೂ ಆಗಿದ್ದತೆಂಬುದನ್ನೂ, ಗಂಗರ ಮನೆತನದೊಂದಿಗೆ ಕೊಪಣತೀರ್ಥವು ನಿಕಟ ಸಂಬಂಧ ಹೊಂದಿದ್ದುದನ್ನೂ ಈ ಹೊಸ ಶಾಸನಗಳು ಸ್ಥಾಪಿಸಿವೆ. ಕರ್ನಾಟಕದ ಚರಿತ್ರೆಯ ಪುನಾರಚನೆಗೆ ಪೂರಕ ಸಾಮಗ್ರಿಯೂ ಈಗ ಲಭ್ಯವಾದಂತಾಗಿದೆ.

೭. ಗುತ್ತಲು

ಮಂಡ್ಯ ಜಿಲ್ಲೆ ಮತ್ತು ತಾಲ್ಲೂಕಿಗೆ ಸೇರಿದ ಗುತ್ತಲು ಗ್ರಾಮದಲ್ಲಿ ಅಲ್ಲಿನ ಅರ್ಕೇಶ್ವರ

ದೇವಾಲಯದ ನವೀಕರಣ ಹಂತದಲ್ಲಿ ಹೊರಬಿದ್ದ ಒಂದು ಹೊಸ (ಜೈನ) ನಿಶಿಧಿ ಶಾಸನವು ಗಂಗರ ಬೂತುಗರಸನ ಮೊಮ್ಮಗ ಅರುಮೊಳಿದೇವ - ಗಾವಬ್ಬರಸಿ ದಂಪತಿಗಳ ಮಗನಾದ ರಾಜ ವಿದ್ಯಾಧರ (ಲೋಕವಿದ್ಯಾಧರ, ರಾಜಾದಿತ್ಯ)ನ ಕಡೆಯ ದಿನಗಳನ್ನು ಕುರಿತು ಒದಗಿಸಿರುವ ಅಪರೂಪದ ಮಾಹಿತಿಯಿಂದ ಕೂಡಿರುವುದನ್ನು ಸುದೀರ್ಘವಾಗಿ ಚರ್ಚಿಸಿ ಶಾಸನಪಾಠವನ್ನೂ ಪ್ರಕಟಿಸಿದ್ದೇನೆ (ಸಾಧನೆ, ೨೫-೧,ಸ ೨: ೧೯೯೬). ನನ್ನ *'ಚಂದ್ರಕೊಡೆ'* ಪುಸ್ತಕದಲ್ಲಿಯೂ ಈ ಸಂಶೋಧನ ಲೇಖನ ಸೇರಿದೆ (ಪುಟ. ೧೭೦-೮೦)

೮. ಚಿನ್ನಾಪುರ, ಎಸ್. ಟಿ.

ಬಿಜಾಪುರ ಜಿಲ್ಲೆಯ ಹುನಗುಂದ ತಾಲ್ಲೂಕಿಗೆ ಸೇರಿದ ಇಲಕಲ್ ಸಮೀಪದ ಚಿನ್ನಾಪುರ ಹಳ್ಳಿಯಲ್ಲಿ ಕಟ್ಟಡಕ್ಕಾಗಿ ಪಾಯ ತೋಡುತ್ತಿರುವಾಗ ದೊರೆತ ಪಾರ್ಶ್ವನಾಥ ಪಾದಪೀಠದಲ್ಲಿದ್ದ ಏಳು ಸಾಲುಗಳ ಹೊಸಶಾಸನವನ್ನು ಕುರಿತೂ ನಾನು ಅನ್ಯತ್ರ ಬರೆದಿರುವುದರಿಂದ ಪುನರುಕ್ತಿ ಮಾಡುವ ಅಗತ್ಯವಿಲ್ಲ [ನಾಗರಾಜಯ್ಯ, ಹಂಪ : ***ಚಂದ್ರಕೊಡೆ*** : ೧೯೯೭ : ೧೯೫-೯೮]

೨೦

ಶಾಸನಗಳಲ್ಲಿ ನುನ್ನವಂಶ

ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕು ಶಾಸನಗಳಲ್ಲಿ ೨೮ನೆಯ ಸಂಖ್ಯೆಯದು ಕೆಲವು ದೃಷ್ಟಿಗಳಿಂದ ಪ್ರಾಮುಖ್ಯ ಪಡೆದಿದೆ; ಈ ಶಾಸನದ ಕಾಲ ಕ್ರಿ.ಶ. ೧೨೦೮. ಈ ಶಾಸನವು ಸಾದ್ಯಂತವಾಗಿ ಜೈನ ಶಾಸನ. ಇದರ ಸಾರಾಂಶವಿಷ್ಟು : ಭರತಕ್ಷೇತ್ರದ ಕುಂತಳ ದೇಶದಲ್ಲಿ ಬನವಾಸಿ ದೇಶವು ಕಂಗೊಳಿಸುತ್ತಿತ್ತು. ಯದುಕುಲದ ಸಳನು ಸುದತ್ತ ಮುನಿಪರ ಬಳಿ ಇರುವಾಗ ಒಮ್ಮೆ ಪದ್ಮಾವತಿ ಯಕ್ಷಿಯು ಹುಲಿಯ ರೂಪದಲ್ಲಿ ಕಾಣಿಸಿಕೊಂಡಳು. ಸುದತ್ತ ಮುನಿಯು 'ಪೊಯ್ ಸಳ' ಎಂದು ಅಪ್ಪಣೆ ಮಾಡಿದರು. ಅಂದಿನಿಂದ ಹೊಯ್ಸಳವಂಶ ಆರಂಭವಾಯಿತು. ಸಳನಾದ ಮೇಲೆ ಹಲವರು ದ್ವಾರಸಮುದ್ರದಿಂದ ಆಳಿದರು. ಬಲ್ಲಾಳದೇವನು ಆಳುತ್ತಿರುವಾಗ ಆತನ ಆಳ್ವಿಕೆಗೆ ಸೇರಿದ ಎಡೆನಾಡಿನ ಜಿಡ್ಡವಳಿಗೆ (ಜಿಡ್ಡುಳಿಗೆ - ೭೦) ನಾಡಿನಲ್ಲಿದ್ದ ಕೊಡಕಣಿ ಗ್ರಾಮದಲ್ಲಿ ಶಾಂತಿನಾಥ ಜಿನಾಲಯ ನಿರ್ಮಾಣವಾಯಿತು.

ಕೊಡಕಣಿ ಗ್ರಾಮದ ಗಾವುಂಡನಾಗಿದ್ದವನು ಮಸನನೆಂಬುವನು. ಈತನ ಮಗ ಕೀರ್ತಿಗಾವುಂಡ. ಇವನಿಗೆ ಸೋಮ, ಮಸನ, ಮಹಾದೇವ, ರಾಮ - ಎಂಬ ನಾಲ್ವರು ಮಗಂದಿರು. ಕೀರ್ತಿಗಾವುಂಡನ ಅಳಿಯ ಮಹಾದೇವ ದಂಡನಾಯಕ. ಈ ದಂಡನಾಯಕನ ಕಾಲದಲ್ಲಿ ಕೊಡಕಣಿಯಲ್ಲಿ ಒಂದು ಪ್ರತಿಷ್ಠಿತ ಜೈನ ವಂಶವಿದ್ದಿತು. ಆ ಊರಿನ ಮಲ್ಲಸೆಟ್ಟಿ ಮತ್ತು ಮಾಚಾಂಬಿಕೆಯರ ಮಗನಾದ ನೇಮನಿಗೆ ಮೂಲ ಸಂಘ ಕಾಣೂರುಗಣದ ಗುಣಚಂದ್ರರು ಗುರು. ನೇಮಿಸೆಟ್ಟಿಯು (ನೇಮ) ನುನ್ನ ವಂಶಜನು. ನೇಮಿಸೆಟ್ಟಿಯು ನಿಷ್ಠಾವಂತನಾದ ಜಿನಭಕ್ತ. ಆತನ ಸ್ವಭಾವ, ಸಂಸ್ಕಾರ, ಮನೋಧರ್ಮ ಪರಿಪಾಕದ ವ್ಯಕ್ತಿತ್ವವನ್ನು ಎರಕ ಹಾಕಿ ತೆಗೆದು ವೃತ್ತ ಪದ್ಯ :

ಪರಹಿತ ಮೂರ್ತ್ತಿ ಭಬ್ಯ ಜನ ಕಲ್ಪಕುಜಂ ವಿಭುನೇಮಿಸೆಟ್ಟಿ ಬಿ
ತ್ತರದೊಳೆ ಕೂಡೆ ಜಿಡ್ಡಳಿಗೆ ನಾಡೆಡೆನಾಡೆನಿಸಿರ್ಪ್ಪ ನಾಳಳೊ

ಳ್ಪರಮ ಜಿನೇಂದ್ರಗೇಹಮನನೇಕಮನುದ್ಧರಿಸುತ್ತಮಿತ್ತಲು
ದ್ಧರಿಸಿದನುತ್ತರೋತ್ತರಮೆನಲು ನಿಜಕೀರ್ತ್ತಿಲತಾ ವಿತಾನಮಂ॥

ಎಡೆನಾಡಿನ ಜಿಡ್ಡಳಿಗೆ ಕಂಪಣದಲ್ಲಿ ನೇಮಿಸೆಟ್ಟಿಯು ಹಲವು ಬಸದಿಗಳನ್ನು ಮಾಡಿಸಿದನು. ಅವುಗಳಲ್ಲಿ ಕೊಡಕಣಿಯಲ್ಲಿ ಕಟ್ಟಿಸಿದ ಶಾಂತಿನಾಥ ಜಿನಗೃಹದ ದಾಖಲೆ ಮಾತ್ರ ದೊರೆತಿದೆ. ಈ ದಾಖಲೆಯ ಶಾಸನದಿಂದ ಪ್ರಸ್ತುತ ಸಂಪ್ರಬಂಧದ ಎಲ್ಲೆಗೆ ಒಳಪಡುವ ಮೂರು ಪದ್ಯಗಳನ್ನು ಉದಾಹರಿಸುತ್ತೇನೆ:

ಸಲ್ಲಲಿತ ಗುಣಗಣಂ ಶ್ರೀ
ವಲ್ಲಭನಭಿಮಾನ ಮೂರ್ತ್ತಿ ಕೀರ್ತ್ತಿವಧೂಧ
ಮ್ಮಿಲ್ಲ ವಿರಾಜಿತ ಮಲ್ಲಿ
ಫುಲ್ಲಂ ಶ್ರೇಷ್ಠಿ ಪ್ರತಾನ ಮಣ್ಡನ ಮಲ್ಲಂ॥

ಎನೆ ನೆಗಳ್ದ ಮಲ್ಲಿಸೆಟ್ಟಿಗ
ಮನುಪಮ ಚಾರಿತ್ರೆ ಸೀತೆ ಮಾಚಾಂಬಿಕೆಗಂ
ಜನಿಯಿಸಿದಂ ಸುಕ್ರಿತಂ ಸಂ
ಜನಿಯಿಸೆ ನಿಜಕುಲಕೆ ನೇಮನಖಿಳ ಲಲಾಮಂ॥

ನೆಗಳ್ದಗ್ಗುರುಗಳ್ಗುಣ ಚಂ
ದ್ರಗಣಿವರಮ್ಮೂಲ ಸಂಘ ಕಾಣೂರ್ಗ್ಗಣದೊ
ಳ್ಸೊಗಯಿಸುವ **ನುನ್ನವಂಶ** ದೊ
ಳಗೆಸೆವರ ರಾಗಂ ನೇಮನಭಿಜನಮಂ॥

(ಎಕ VIII. ಶಾಸನ ಸಂಖ್ಯೆ ೨೮. ಕ್ರಿ.ಶ. ೧೨೦೮. ಪು. ೧೧-೧೩)

ಮೂಲಸಂಘ ಕಾಣೂರುಗಣದೊಳಗೆ ಸೊಗಯಿಸುವ **ನುನ್ನವಂಶಕ್ಕೆ** ಸೇರಿದ ಗುಣಚಂದ್ರ ಗಣಿವರರು ಪ್ರಸಿದ್ಧರಾಗಿದ್ದರು : ಅವರ ಶಿಷ್ಯನೂ ಅಭಿಜನ ರಾಮನೂ ನುನ್ನ ವಂಶದೊಳಗೆ ಶೋಭಿಸುವವರ ಪ್ರೀತಿಗೆ ಪಾತ್ರನೂ ಆದ ನೇಮನು (ನೇಮಿಸೆಟ್ಟಿ) ಗುಣಚಂದ್ರಗಣಿವರರ ಶಿಷ್ಯನಾಗಿದ್ದನು.

ಈ 'ನುನ್ನ ವಂಶ' ಎಂಬುದು ಯಾವುದು? ಈ ವಂಶವು ಶ್ರಾವಕ (ಗೃಹಸ್ಥ)ರಿಗೆ ಸೇರಿದ್ದೊ ಅಥವಾ ಸವಣರಿಗೆ (ಜೈನ ಸನ್ಯಾಸಿ) ಸೇರಿದ್ದೊ? ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ. ಇದುವರೆಗೆ 'ನುನ್ನ ವಂಶ' ಕುರಿತು ಎಲ್ಲೂ ಒಂದು ಸಣ್ಣ ಟಿಪ್ಪಣಿ ಕೂಡ ಪ್ರಕಟವಾಗಿಲ್ಲ. ಶಾಸನಗಳ ಅಧ್ಯಯನ ಕಾಲದಲ್ಲಿ ನಾನು ಅರೆಬರೆಯಾಗಿ ಗುರುತು ಹಾಕಿಕೊಂಡಿರುವ ಹಳೆಯ ಸಾಮಗ್ರಿಯ ಆಧಾರಗಳನ್ನು ಮರು ಪರಿಶೀಲಿಸುವಾಗ ಮೇಲ್ಕಂಡ ಶಾಸನದ ಜತೆಗೆ ಇನ್ನೆರಡು ಶಾಸನಗಳಲ್ಲೂ ನುನ್ನ ವಂಶದ ಪ್ರಸ್ತಾಪವಿರುವುದುಕಂಡುಬಂದಿದೆ.

ಹನ್ನೆರಡನೆಯ ಶತಮಾನದ ಕರ್ನಾಟಕದಲ್ಲಿ ಆಗಿ ಹೋದ ಪ್ರಖ್ಯಾತ ಮತ್ತು ಪ್ರಭಾವೀ ವ್ಯಕ್ತಿತ್ವದ ಜೈನಾಚಾರ್ಯರಲ್ಲಿ ಭಾನುಕೀರ್ತಿ ಸಿದ್ಧಾಂತಿದೇವರು ಮೂರ್ಧನ್ಯರಾಗಿದ್ದಾರೆ. ಅವರ ಮತ್ತು ಅವರ ಗುರುಶಿಷ್ಯ ಪರಂಪರೆಯನ್ನು ಪರಿಚಯಿಸುವ ಕೆಲವು ಶಾಸನಗಳು ಪ್ರಕಟವಾಗಿವೆ. ಅವುಗಳಲ್ಲಿ ತೀರ ಮುಖ್ಯವಾದ ಶಾಸನಗಳು.

ಎಕ. II(೧೯೭೩) ೫೬೫ (ಎಕ V ಚಪ ೧೪೬) ೧೧೭೩, ಪು. ೩೪೭

ಎಕ. VIII-ii ಸೊರಬ ೨೩೩, ೧೧೩೯ ಉದ್ಧರೆ (ಉದ್ರಿ)

ಅದೇ : ಸಾಗರ ೧೫೯. ೧೧೫೯ ಹೆರಕೆರೆ

ಅದೇ ಸೊರಬ ೩೪೫. ೧೧೭೧ ತೆವರತೆಪ್ಪ

ಅದೇ : ಸೊರಬ ೧೪೦. ೧೧೯೮

ARSIE ೧೯೨೭-೨೮ APP. E. No. ೫೧.೧೨ ಶ.

ಎಕ. VII. ಶಿಕಾರಿಪುರ ೧೯೭. ೧೧೮೦. ಪು. ೨೮೮-೯೦ ಸಾಲು ೬೩-೬೪

ಎಕ. VIII. ೩೮೪. ೧೧೭೭-೭೮

ಸೌಇಇ. XV. ೫೬೮.೧೨ ಶ. ಕಲಕೇರಿ (ಧಾರವಾಡ ಜಿ./ಮುಂಡರಗಿ ತಾ.) ಪು. ೩೭೮

ಎಕ. VII. (೧೯೭೯) ೧೬೯ (IV ನಾಮಂ ೯೪) ೧೧೪೨. ಕಸಲಗೆರೆ (ಮಂಡ್ಯ ಜಿ/ ನಾಮಂ. ತಾ.) ಪು. ೧೬೯

ಎಕ. VII. ಶಿಕಾರಿಪುರ ೨೨೫. ೧೨೦೪ ಪು. ೩೦೨ ಸಾಲು. : ೫೫

ಭಾನುಕೀರ್ತಿ ಸಿದ್ಧಾಂತದೇವರು ಮಹಾಮಂಡಳಾಚಾರ್ಯರು. ಇವರು ಶ್ರೀ ಮೂಲಸಂಘ ಕುಂದಕುಂದಾನ್ವಯ ಕಾಣೂರುಗುಣ ತಿಂತ್ರಿಣೀಗಚ್ಛದವರು. ಇವರು ಸುಮಾರು ೮೫ರಿಂದ ೯೦ ವರ್ಷದವರೆಗೆ ಜೀವಿಸಿದ್ದ ದೀರ್ಘಾಯು. ವರ್ಚಸ್ವೀ ತಪಸ್ವಿಯೂ ವಕ್ತ್ಯವೂ ಆದ ಭಾನುಕೀರ್ತಿಸಿದ್ಧಾಂತಿಯ ಪ್ರಭಾವ ಚಾಳುಕ್ಯ ಸಾಮ್ರಾಜ್ಯದಲ್ಲಿ ಗಾಢವಾಗಿದ್ದಿತು. ಪೆರ್ಮಜಗದೇಕಮಲ್ಲ (೧೧೩೭-೪೯), ನೂರ್ಮಡಿ ತೈಲಪ (೧೧೪೯-೧೧೬೨) ಮತ್ತು ನಾಲ್ಮಡಿ ಜಗದೇಕಮಲ್ಲ (೧೧೬೩-೧೧೮೩) - ಈ ಮೂವರು ಚಾಳುಕ್ಯ ರಾಜರ ಕಾಲದಲ್ಲಿ ಧಾರ್ಮಿಕ ಕ್ಷೇತ್ರದ ನಾಯಕರೆನಿಸಿದ್ದವರು ಭಾನುಕೀರ್ತಿ ಸಿದ್ಧಾಂತಿಕದೇವರು. ರಾಮಣಂದಿ (೧೦೫೦) ವ್ರತಿಪತಿಯ ಶಿಷ್ಯ ಪದ್ಮನಂದಿ ಬ್ರತಿಪತಿಯ (೧೦೭೭ ಎಕ. VIII ಸೊರಬ ೨೬೨) ಶಿಷ್ಯ ಮುನಿಚಂದ್ರ ಸಿದ್ಧಾಂತಿ ದೇವ ಯಮಿನರು (೧೧೦೦). ಈ ಸಿದ್ಧಾಂತ ಚಕ್ರೇಶ ಮುನಿಚುಂದ್ರರ ಶಿಷ್ಯರೇ ಭಾನುಕೀರ್ತಿ ಸಿದ್ಧಾಂತಿ. ಇವರಿಗೆ ಅಪಾರವಾದ ಶಿಷ್ಯ ಸಂಪತ್ತು. ರಾಜ ರಾಣಿಯರೂ ಮಂತ್ರಿ ಮಹಾ ಮಂಡಲೇಶ್ವರೂ ಮಹಾ ದಂಡಾಧೀಶರೂ ಇವರ ಆಜ್ಞಾನುವರ್ತಿಗಳು. ಇವರ ಗುರುಗಳ ಗುರುಗಳಾದ ಪದ್ಮನಂದಿ ಸಿದ್ಧಾಂತಿದೇವರು 'ಆ ಬನ್ದಣಿಕಾ ತೀರ್ತ್ಥಾದಿ ಸಕಳ ಚೈತ್ಯಾಯಕ್ಕೆ ಆಚಾರ್ಯರುಂ ಮಂಡಳಾಚಾರ್ಯರುಮೆನಿಸಿ'ದ್ದರು [ಎಕ. VIII ಸೊರಬ ೨೬೨.೧೦೭೫) ಅವರ ಪ್ರಶಿಷ್ಯರಾದ ಭಾನುಕೀರ್ತಿ ಸಿದ್ಧಾಂತಿಯೂ ಮಂಡಳಾಚಾರ್ಯರೆನಿಸಿ ಅನೇಕ ಜಿನಮಂದಿರಗಳ ರಚನೆಗೆ ಕಾರಣರಾದರು. ಕಮಲಭವ ಕವಿ (೧೨೩೫) ಶಾಂತೀಶ್ವರ ಪುರಾಣ ಕಾವ್ಯದಲ್ಲಿಯೂ, ಮಂಗರಾಜ ಕವಿಯು (೧೩೬೦) ಖಗೇಂದ್ರಮಣಿ ದರ್ಪಣದಲ್ಲಿಯೂ ಭಾನುಕೀರ್ತಿ ಮುನಿಯನ್ನು ನುತಿಸಿದ್ದಾರೆ.

ಕಲಚುರ್ಯ ಮಹಾರಾಜನಾದ ಅಹವಮಲ್ಲನ ಮಹಾಪ್ರಧಾನನೂ ಬಾಹತ್ತರ ನಿಯೋಗಾಧಿಪತಿಯೂ ಆದ ರೇಚಣ ದಂಡಾಧೀಶನಿಗೆ ಆಪ್ತಮಂತ್ರಿಯಾದ ಚಿಕ್ಕಮಾಗಡಿ (ಮಾಗುಣ್ಡಿ) ಬೊಪ್ಪನು ಕಟ್ಟಿಸಿದ 'ರತ್ನತ್ರಯ ಬಸದಿ'ಗೆ ಸ್ಥಾನಾಚಾರ್ಯರು ಈ ಭಾನುಕೀರ್ತಿ ಸಿದ್ಧಾಂತ ಮುನಿ. ಈ ವಿಚಾರವನ್ನು ತಿಳಿಸಿರುವ ಶಾಸನದಲ್ಲಿ ಇವರನ್ನು ಹೀಗೆ ಪರಿಚಯಿಸಿದೆ : 'ಶ್ರೀಮನ್ಮೂಲ

ಸಂಘದ ಕ್ರಾನೂರ್ಗ್ಗಣದ ತಿಂತ್ರಿಕ ಗಚ್ಛದ ನುನ್ನವಂಶದ ಶ್ರೀ ಮದ್ಭಾನುಕೀರ್ತಿ ಸಿದ್ಧಾನ್ತದೇವರ್' ಎಕ. VII ಶಿಕಾರಿಪುರ ೧೯೭.೧೧೮೦. ಪು. ೨೯೦ ಚಿಕ್ಕಮಾಗಡಿ ಸಾಲು : ೧೦೪] ಮೇಲ್ಕಂಡ ಚಿಕ್ಕಮಾಗಡಿ (ಶಿವಮೊಗ್ಗ ಜಿ / ಶಿಕಾರಿಪುರ ತಾ) ಶಾಸನದಲ್ಲಿಯೇ ಇನ್ನೊಂದು ಕಡೆ ಸಂಸ್ಕೃತದಲ್ಲಿ ಹೀಗಿದೆ : (ಮುನಿಚಂದ್ರರ) ತಚ್ಛಿಷ್ಯಂ ಪ್ರಕಟೀಕೃತಕೀರ್ತ್ತಿಚ್ಛತ್ರಂ ಭಾನುಕೀರ್ತ್ತಿ ಕ್ರಾಣೂರ್ಗ್ಗಣ ಭೂಮಿಚ್ಛಂನ ತಿಂತ್ರಿಣೀಕ ಸುಗಚ್ಛಂ ಶ್ರೀ ನುನ್ನವಂಶನೆಸೆದಂ ಜಗದೊಳ್॥ (ಸಾಲು : ೬೧-೬೨)

ಈ '**ನುನ್ನ ವಂಶ**' ವೆಂಬುದು ಜೈನ ಮುನಿ ಸಂಘಕ್ಕೆ ಸೇರಿದ ಒಂದು ಕುಲ. ಅನ್ವಯ, ಬಳಿ, ಕುಲ ಎಂಬುವು ಇದೇ ಅರ್ಥದ ಇತರ ಸಮಾನಾರ್ಥಕ ಸಂವಾದಿ ಶಬ್ದಗಳು. ಕುಂದಕುಂದಾನ್ವಯ, ಆರುಂಗಳಾನ್ವಯ, ಇಂಗುಳೇಶ್ವರ ಬಳಿ, ಪನಸೋಗೆ ಬಳಿ ಇದ್ದ ಹಾಗೆ ನುನ್ನ ವಂಶವೂ ಏರ್ಪಟ್ಟಿದೆಯೆಂದು ಅರ್ಥೈಸಬಹುದು. ನುನ್ನ ವಂಶವು ಯಾಪನೀಯ ಸಂಘಕ್ಕೆ ಸೇರಿದ ಕಾಣೂರುಗಣ ಮತ್ತು ತ್ರಿಂತ್ರಿಣಿ ಗಚ್ಛದಲ್ಲಿ ಅಳವಟ್ಟಿತ್ತು. ಯಾಪನೀಯ ಶಾಖೆಯು ಚಾಳುಕ್ಯರ ಆಳ್ವಿಕೆಯಲ್ಲಿ ತನ್ನ ಪ್ರಸಿದ್ಧಿಯ ಪರಾಕಾಷ್ಠ ಸ್ಥಿತಿಯನ್ನು ಮುಟ್ಟಿತ್ತು. ಕೊಪಣವು ಈ ಯಾಪನೀಯರಿಗೆ ಬಹುದೊಡ್ಡ ಮುಖ್ಯ ಕೇಂದ್ರವಾಗಿತ್ತು ಮತ್ತು ಇಡೀ ಕಲ್ಯಾಣ ಚಾಳುಕ್ಯರ ಸಾಮ್ರಾಜ್ಯದ ಉದ್ದಗಲಗಳಲ್ಲಿ ಯಾಪನೀಯ ಸಂಘಕ್ಕೆ ಸೇರಿದ ನಾನಾ ಗಣ - ಗಚ್ಛಗಳು ಚಟುವಟಿಕೆಯಿಂದ ವಿಜೃಂಭಿಸಿದುವು. ಸೂರಸ್ತಗಣ, ಕಾಣೂರು ಗಣ, ಕಾರೇಯಗಣ, ಕುಮುದಿಗಣ, ಬಲಾತ್ಕಾರ (ವಳಗಾಱ) ಗಣ, ಸೇನಗಣ, ಮೈಳಾಪಾನ್ವಯ, ತಿಂತ್ರಿಣೀ ಗಚ್ಛ, ಪೊಗರಿಗಚ್ಛ - ಮೊದಲಾದವು ಈ ಕಾಲದ ಶಾಸನಗಳಲ್ಲಿ ವಿಫುಲವಾಗಿ ಕಂಡುಬರುತ್ತವೆ. ನುನ್ನವಂಶ ಮಾತ್ರ, ಈ ಯಾಪನೀಯದ ತೆಕ್ಕೆಯಲ್ಲಿ ಒಂದು ಸಣ್ಣ ಎಸಳಾಗಿ ಕಾಣುತ್ತದೆ.

ನುನ್ನ ವಂಶದ ನಿಷ್ಪತ್ತಿಯ ಜಿಜ್ಞಾಸೆ ತೊಡಕಿನದಾಗಿದೆ. ನನಗೆ ತಿಳಿದಂತೆ 'ನುನ್ನ' ಎಂಬ ಶಬ್ದವು 'ನುತ್ತ' ಎಂಬ ಶಬ್ದಕ್ಕೆ ಸೇರುವಂತಿದೆ. ನಾಗವರ್ಮ ವಿರಚಿತ ಅಭಿಧಾನ ರತ್ನಮಾಲಾ ಕರ್ಣಾಟಕ ಟೀಕೆಯಲ್ಲಿ - "ನುನ್ನಂ ಕ್ಷಿಪ್ತಂ - ಈ ಎರಡು ನೂಕಲ್ಪಟ್ಟುದು" ಎಂದಿದೆ (ಪು. ೧೨೬: ೭೬೭-೮೨) ನುತ್ತ, ನುನ್ನ ಎಂದರೆ ಹೊರದೂಡಿದುದು ಎಂಬರ್ಥ. ನುನ್ನ ವಂಶವು ಒಂದು ಹೊರದೂಡಲ್ಪಟ್ಟ ವಂಶ (ಬಳಿ, ಅನ್ವಯ) ವೆಂದು ಪರಿಗಣಿಸುವುದು ಹೇಗೆ, ಅದಕ್ಕೆ ಬೇರೆ ಪೂರಕ ಆಧಾರಗಳು ಏನು - ಎಂಬ ಪ್ರಶ್ನೆ ಎದುರಾಗುತ್ತದೆ. ಹೀಗಾಗಿ 'ನುನ್ನ' ಎಂಬ ಶಬ್ದದ ನಿಷ್ಪತ್ತಿ ಸರಿಯಾಗಿ ತಿಳಿಯದು : ಈ ವಿಚಾರದಲ್ಲಿ ಚಿಂತನ ಮಂಥನಕ್ಕೆ ಇನ್ನೂ ಅವಕಾಶವಿದೆ.

ಲೇಖನಗಳು ಪ್ರಕಟಗೊಂಡ ವಿವರ

೧. ಮೂರ್ತಿರಾಯರ ವಿಮರ್ಶೆಯ ಅನನ್ಯತೆ
(ಅಪ್ರಕಟಿತ, ೨೦೦೪)

೨. ಭಾವ : ಸೋಪಜ್ಞತೆ
(ಶ್ರೀನಿವಾಸ, ಬೆಂಗಳೂರು, ೧೯೭೨)

೩. ಕೆ. ಜಿ. ಕುಂದಣಗಾರರು
(*ಸಾಲು ದೀಪಗಳು*, ದ್ವಿತೀಯ ಮುದ್ರಣ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೧)

೪. ದುರ್ಗಾಸ್ತಮಾನ
(ತರಾಸು ಸಂಭಾವನೆ ಗ್ರಂಥ)

೫. ಜನ್ನನ ಅನನ್ಯತೆಯ ವಿನ್ಯಾಸ
(ಕರ್ನಾಟಕ ಸಾಹಿತ್ಯ ಅಕಾಡೆಮಿಯ ವಿಚಾರ ಸಂಕಿರಣ, ಮಂಗಳೂರು, ೨೦೦೧)

೬. ಜೈನ ಸಮಾಜ ಮತ್ತು ಮತಾಂತರ
(*ಜೈನ ಸಂಸ್ಕೃತಿ ಮತ್ತು ಸಿದ್ಧಾಂತಗಳು*, (ಸಂ) ಪಿ. ಕೆ., ಖಂಡೋಬಾ, ಗುಲಬರ್ಗಾ ೧೯೯೬)

೭. ಪ್ರಾಚೀನ ಕನ್ನಡ ಪರಂಪರೆ ಮತ್ತು ಜೈನ ಸಾಹಿತ್ಯ
(*'ಸೌಜನ್ಯ'*, (ಸಂ) ಶ್ರೀನಿವಾಸ ಕುಲಕರ್ಣಿ, ಬೆಳಗಾವಿ, ೨೦೦೦)

೮. ರವಿದೇವಿಯಕ್ಕಳ ಶಾಸ್ತ್ರದಾನದ ಅನನ್ಯತೆ
(*ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ*, ೮೦-೨, ೨೦೦೨)

೯. ಬಸದಿಗಳು - ಸಾಂಸ್ಕೃತಿಕ ತವನಿಧಿ
(ರತ್ನಶ್ರೀ (ಸಂ) ವಿಮಲ ಸುಮತಿಕುಮಾರ್, ತುಮಕೂರು, ೧೯೯೯)

೧೦. ಬಾಬಾನಗರ ಶಾಸನದ ಅನನ್ಯತೆ ಮತ್ತು ಬಿಜ್ಜಳನ ಮತ ವಿಚಾರ (ಕ.ಸಾ.ಪ. ಪತ್ರಿಕೆ ೭೯-೧ ರಿಂದ ೪, ೨೦೦೧)

೧೧. ವಡ್ಡಾರಾಧನೆಯಲ್ಲಿ ಸಾಂಸ್ಕೃತಿಕ ಮುಲುಕುಗಳು
(ವಡ್ಡಾರಾಧನೆ, (ಸಂ) ಬಿ ಎಂ. ಪುಟ್ಟಯ್ಯ, ಹಂಪಿ, ೨೦೦೧)

೧೨. ರಾಷ್ಟ್ರಕೂಟರ ಕಾಲದ ಪ್ರಾಚೀನ ಜಿನಾಲಯ ಶೋಧನೆ
(*ಮಾನತುಂಗ*, (ಸಂ) ಎಸ್. ಡಿ. ಶೆಟ್ಟಿ, ವೇಣೂರು, ೨೦೦೦)

೧೩. ರಾಯ ಝುಗಝುಂಪ
(ಪ್ರೊ. ಸಿ. ಎಸ್. ಪಾಟೀಲ ಸ್ಮಾರಕ ಗ್ರಂಥ, ಹಂಪಿ-ಅಪ್ರಕಟಿತ)

೧೪. ಮೈಳಾಪತೀರ್ಥ
(ಚಂದ್ರಕೊಡೆ, ಹಂಪಿ, ೧೯೯೭)

೧೫. ರೇಚಣ : ಕಲಚುರಿ ಸಾಮ್ರಾಜ್ಯದ ಸ್ಫೂರ್ತಿ ಸೇನಾನಿ
(*ಚಂದ್ರಕೊಡೆ*, ಹಂಪಿ, ೧೯೯೭)

೧೬. ಗಂಗರ ಬಸದಿಗಳು
(*ಚಂದ್ರಕೊಡೆ* : ಹಂಪಿ, ೧೯೯೭)

೧೭. ಜ್ವಾಲಾಮಾಲಿನೀದೇವಿ : ಚರಿತ್ರೆಯ ಹಾಸಿನಲ್ಲಿ
(*ಚಂದ್ರಪ್ರಭ* (ಸಂ) ಎಸ್. ಪ್ರಭಾಕರ, ಧರ್ಮಸ್ಥಳ, ೨೦೦೧)

೧೮. ಕರ್ನಾಟಕದಲ್ಲಿ ಜೈನಧರ್ಮ : ಹೊಸ ಶೋಧಗಳು
(*ಅರವಂಟಿಗೆ*, ೧-೧, ೨೦೦೦)

೧೯. ಮುಳಗುಂದದ ಮೂರು ಅಪ್ರಕಟಿತ ಶಾಸನಗಳು
(*ಅರವಂಟಿಗೆ*, ೧-೨, ೨೦೦೧)

೨೦. ಶಾಸನಗಳಲ್ಲಿ ನುನ್ನವಂಶ
(ಅಭಿಜ್ಞ, ಬೆಂಗಳೂರು, ೨೦೦೦)

ಅನನ್ಯ

‘ಅನನ್ಯ’ ಗ್ರಂಥವು ಸಾಹಿತ್ಯ-ಸಂಸ್ಕೃತಿಗೆ ಸಂಬಂಧಿಸಿದ ಲೇಖನಗಳನ್ನು ಒಳಗೊಂಡಿದೆ. ಆಧುನಿಕ ಸಾಹಿತ್ಯವನ್ನು ಕುರಿತು ಮೂರು ಲೇಖನಗಳನ್ನು ಹೊರತುಪಡಿಸಿದರೆ ಉಳಿದೆಲ್ಲವೂ ಜೈನಸಮಾಜ ಮತ್ತು ಸಂಸ್ಕೃತಿಗೆ ಸೇರಿದ ಬರೆಹಗಳೇ ಆಗಿವೆ. ಈ ಬರೆಹಗಳು ಭೂತಕಾಲದ ವಿವರಗಳಲ್ಲಿ ಮಾತ್ರ ಮುಳುಗುವುದಿಲ್ಲ, ಅವುಗಳಲ್ಲಿ ವರ್ತಮಾನದ ವಿವರಗಳೂ ಸಂಗತಿಗಳೂ ಉಂಟು. ಕಾವ್ಯ, ಬಸದಿ, ಜೈನಾಲಯ, ಶಾಸನ, ಚರಿತ್ರೆ, ಮುಂತಾದುವು ಹಂಪನಾ ಅವರ ಬರೆಹಕ್ಕೆ ಆಹಾರವನ್ನು ಒದಗಿಸಿವೆ. ಇವೆಲ್ಲವೂ ಅವರಿಗೆ ಪ್ರಿಯವಾದ ವಿಷಯಗಳೇ ಆಗಿವೆ. ಇಲ್ಲಿಯ ಬರೆಹಗಳು ಹೊಸ ಬೆಳಕನ್ನು, ಹೊಸ ಶೋಧವನ್ನು ತಿಳಿಸಿಕೊಡುತ್ತವೆ.

ಅನನ್ಯ ಎಂಬ ಮಾತು ಇಲ್ಲಿಯ ಎಲ್ಲ ಲೇಖನಗಳಿಗೆ ಅನ್ವಯಿಸುತ್ತದೆ. ಅನ್ಯವಲ್ಲದ್ದು ಅನನ್ಯ. ಅದು ಬೆಡಗು, ಬಣ್ಣ, ಭಾಷೆ, ಎಲ್ಲ ವಿಚಾರಗಳಲ್ಲೂ ಬೇರೆಯದೇ. ಅನನ್ಯವು ಒಂದು ಸಮಾಜ-ಸಂಸ್ಕೃತಿಯ ತಾಯಿಬೇರು. ಅದು ತನ್ನ ಅಸ್ಮಿತೆಯನ್ನು ಉಳಿಸಿಕೊಂಡೇ ಕಾಲಕಾಲದ ಪ್ರವಾಹದಲ್ಲಿ ನುಗ್ಗುತ್ತದೆ. ‘ಅನನ್ಯ’ ಆಗುವುದೇ ಒಂದು ದೊಡ್ಡ ಸಮಾಜದ, ಒಂದು ದೊಡ್ಡ ಸಂಸ್ಕೃತಿಯ, ಒಂದು ದೊಡ್ಡ ಭಾಷೆಯ ಮುಖ್ಯಗುರಿ. ಹಿರಿಯ ವಿದ್ವಾಂಸರಾದ ಪ್ರೊ. ಹಂಪನಾ ಅವರು ಈ ಲೇಖನಗಳ ಮೂಲಕ ಅನನ್ಯರಾಗಿದ್ದಾರೆ. ಇವರು ಹಳತು - ಹೊಸತು; ಕಾವ್ಯ-ಶಾಸ್ತ್ರ; ಪ್ರಾಚೀನ-ಅರ್ವಾಚೀನ; ಸಂಪ್ರದಾಯ- ಆಧುನಿಕತೆ-ಹೀಗೆ ಹಲವು ಮುಖಗಳಲ್ಲಿ ತಮ್ಮ ತಿಳಿವಳಿಕೆಯನ್ನು ಮಸೆದುಕೊಂಡವರು. ಪ್ರೊ. ಹಂಪನಾ ಅವರ ಹಿರಿಮೆ ಇರುವುದು ಇಂಥ ಕಡೆಗಳಲ್ಲೇ.

ಪ್ರೊ. ಹಂಪನಾ ಅವರು ತಮ್ಮ ಬರೆಹದಲ್ಲಿ ತೋರಿಸುವ ಶಾಸ್ತ್ರ ಲಾಲಿತ್ಯ, ಶಾಸ್ತ್ರ ಪಾಂಡಿತ್ಯ, ಅಪರೂಪದ್ದು. ಇದು ಎಲ್ಲರಿಗೂ ದಕ್ಕುವಂಥದ್ದಲ್ಲ. ಪ್ರೊ. ಡಿ. ಎಲ್. ಎನ್. ಅವರಂಥ ಹಿರಿಯ ಪಂಡಿತ ಶ್ರೇಷ್ಠರ ಶಿಷ್ಯರಾಗಿದ್ದು ಅವರ ಸೂಕ್ಷ್ಮ ಪಾಂಡಿತ್ಯವನ್ನು, ರಸಿಕ ಹೃದಯವನ್ನು ತಮ್ಮ ಬರೆಹಕ್ಕೆ ಧಾತುವಾಗಿ ಪ್ರೊ. ಹಂಪನಾ ಬಳಸಿಕೊಂಡಿರುವುದು ನನ್ನ ಮಾತಿಗೆ ಸಾಕ್ಷಿ!

ಇಲ್ಲಿಯ ಲೇಖನಗಳು ನಮಗೆ ಹೊಸ ಮಾರ್ಗಗಳನ್ನು ಹಾಕಿಕೊಡುತ್ತವೆ, ಹೊಸ ವಿಶ್ಲೇಷಣೆಗೆ ದಾರಿತೋರಿಸಿಕೊಡುತ್ತವೆ. ಹಳೆಯ ಸ್ಮೃತಿಗಳ ಜತೆ ವರ್ತಮಾನದ ಸ್ಮೃತಿಗಳೂ ಸೇರಬೇಕಾಗಿದೆಯಷ್ಟೆ. ಪ್ರೊ. ಹಂಪನಾ ಅವರ ‘ಅನನ್ಯ’ವುಈ ದಿಕ್ಕಿನಲ್ಲಿ ನಮಗೆ ಹೊಸ ಹೊಸ ‘ಮಾರ್ಗ’ಗಳನ್ನು ತೆರೆಯಲು ಅನುವು ಮಾಡಿಕೊಡುತ್ತದೆಂಬ ನಂಬುಗೆ ನನ್ನದು!

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಅಧ್ಯಕ್ಷರು

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ISBN 81-7713-127-3

ಬೆಲೆ : ರೂ 150/-